
ಸಮಗ್ರ ದಾಸ ಸಾಹಿತ್ಯ

ಸಂಪುಟ : ೯ - ಭಾಗ ೨



ಶ್ರೀ ವಿಜಯದಾಸರ ಕೀರ್ತನೆಗಳು ಹಾಗು ಉಗಾಭೋಗಗಳು

ಸಮಗ್ರ ದಾಸ ಸಾಹಿತ್ಯ
ಸಂಪುಟ : ೯ – ಭಾಗ ೨

ಶ್ರೀ ವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು

ಸಂಪಾದಕರು
ಪ್ರೊ. ಜಿ. ಅಶ್ವತ್ಥನಾರಾಯಣ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು

SAMAGRA DASA SAHITYA VOLUME - 9 Part 2 :
Shri Vijayadasara Keerthanegalu Mattu Ugabhogagalu, Edited by Prof. G. Aswathanarayana and published by Sri. Y. K. Muddukrishna, Director, Directorate of Kannada and Culture, Kannada Bhavana, J.C. Road, Bangalore - 560 002.

ಪುಟಗಳು : 81+ ೪೦೪

ಪ್ರಥಮ ಮುದ್ರಣ : ೨೦೦೩
ಪ್ರತಿ : ೧೨೫೦.

ಬಿಡಿ ಪ್ರತಿ ಬೆಲೆ : ರೂ. ೬೦=೦೦
ಸಮಗ್ರ ಸಂಪುಟಗಳ ಬೆಲೆ : ರೂ. ೨೪೦೦=೦೦

ಮುದ್ರಣ ನಿರ್ವಹಣೆ :
ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
೩೬, ಕನ್ನಿಂಗ್‌ಹ್ಯಾಮ್ ರಸ್ತೆ
ಬೆಂಗಳೂರು – ೫೬೦ ೦೫೨.

ಮುದ್ರಕರು :
ಮೆ. ಡಾಟ್ಸ್
೧೨೪, ಸುಲ್ತಾನ್‌ಪೇಟೆ
ಬೆಂಗಳೂರು – ೫೬೦ ೦೫೩.

ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆ

ಸಂಪಾದಕ ಮಂಡಳಿ

ಕಾರ್ಯನಿರ್ವಾಹಕ ಸಂಪಾದಕರು

ಡಾ. ಶ್ರೀನಿವಾಸ ಹಾವನೂರ
ಡಾ. ಟಿ. ಎನ್. ನಾಗರತ್ನ
ಪ್ರೊ. ವಸಂತ ಕುಷ್ಟಗಿ

ಸದಸ್ಯರು

ಡಾ. ಎಂ. ಎಂ. ಕಲಬುರ್ಗಿ
ಪ್ರೊ. ಎಂ. ರಾಜಗೋಪಾಲಾಚಾರ್ಯ (ಫೆಬ್ರವರಿ '೯೮ ರವರೆಗೆ)
ಡಾ. ಕೃಷ್ಣ ಕೊಲ್ಹಾರಕುಲಕರ್ಣಿ
ಡಾ. ಮಂದಾಕಿನಿ
ಪ್ರೊ. ಸುಧಾಕರ
ಡಾ. ಬಸವರಾಜ ಸಬರದ

ಸದಸ್ಯ ಕಾರ್ಯದರ್ಶಿ

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುನ್ನುಡಿ

ಹರಿದಾಸ ಸಾಹಿತ್ಯ ಕನ್ನಡ ಸಂಸ್ಕೃತಿ ಪರಂಪರೆಯ ಮಹತ್ವಪೂರ್ಣ ಭಾಗವಾಗಿದೆ. ದೇಶೀಯತೆ ಹಾಗೂ ಗೇಯತೆಗಳೆರಡನ್ನೂ ಮೇಳವಿಸಿಕೊಂಡು, ಕನ್ನಡ ಸಾಹಿತ್ಯವಾಹಿನಿಗೆ ಇದು ಹೊಸತನವನ್ನು ನೀಡಿದೆ. ಮನುಜಮತ, ಸಾಹಿತ್ಯಪಥ ಹಾಗೂ ಭಕ್ತಿಸಿದ್ಧಾಂತದ ತ್ರಿವೇಣಿಯಾಗಿರುವ ಈ ಪ್ರಜಾಸಾಹಿತ್ಯವನ್ನು ಪ್ರಜೆಗಳಿಗೆ ಮುಟ್ಟಿಸುವುದು ಪ್ರಜಾಸತ್ತಾತ್ಮಕ ಸರಕಾರದ ಆದ್ಯ ಕರ್ತವ್ಯವಾಗಿದೆ.

ಕನ್ನಡ ಭಾಷಿಕಶಕ್ತಿಯ ವಿವಿಧ ಆಯಾಮಗಳನ್ನು ಸೆಳೆದು ತೋರಿರುವ, ಸಾಹಿತ್ಯ–ಸಂಗೀತಗಳ ಸಾಮರಸ್ಯವನ್ನು ಮೆರೆದಿರುವ ಈ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮಹತ್ವವನ್ನು ತಂದುಕೊಟ್ಟಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಮಾನವಾನುಕಂಪ, ಸಮಾಜಸುಧಾರಣೆ, ಲೋಕದ ಡೊಂಕುಗಳನ್ನು ನಗೆ ವಿಡಂಬನೆಗಳ ಮೂಲಕ ತಿದ್ದುವ ಕೌಶಲ ದಾಸಸಾಹಿತ್ಯದ ಪ್ರಮುಖ ಲಕ್ಷಣವಾಗಿದೆ.

ಆಧ್ಯಾತ್ಮಿಕ ಸಾಧನೆ, ಅನುಭವ – ಅನುಭಾವಗಳು ದಾಸಸಾಹಿತ್ಯದ ಪ್ರಮುಖ ಅಂಶವಾದರೂ, ಸುತ್ತಮುತ್ತಲಿರುವ ಜೀವನದ ಕಡೆಗೆ, ಮಾನವ ಸ್ವಭಾವದ ಕಡೆಗೆ ಕಣ್ಣು ಹರಿಸಿದ ಹರಿದಾಸರು ಸಾತ್ತ್ವಿಕ ಜೀವನ ನಿರ್ವಹಣೆಗೆ, ಮಾನವನ ಮೇಲ್ಮೆಗೆ, ನೈತಿಕ ಆಚರಣೆಗೆ ಒತ್ತು ನೀಡಿದವರು.

ಹರಿದಾಸ ಸಾಹಿತ್ಯ ಅಪಾರವಾದುದು ಹಾಗೂ ವೈವಿಧ್ಯವಾದುದು. ಈ ವಿಪುಲ ಸಾಹಿತ್ಯರಾಶಿಯನ್ನು ಒಂದೆಡೆ ಕ್ರೋಡೀಕರಿಸಿ, ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಕನ್ನಡ ಜನತೆಗೆ ನೀಡುತ್ತಿದೆ.

ಈ ಯೋಜನೆಗೆ ದುಡಿದ ಸಂಪಾದಕ ಮಂಡಳಿಯ ಶ್ರದ್ಧೆ ಹಾಗೂ ಮಾರ್ಗದರ್ಶನವನ್ನು, ವಿವಿಧ ಸಂಪುಟಗಳ ಸಂಪಾದಕರಾಗಿ ನಾಡಿನ ಅನೇಕ ವಿದ್ವಾಂಸರು ತೋರಿರುವ ಆಸಕ್ತಿ ಹಾಗೂ ನೆರವನ್ನು ಮತ್ತು ಈ ಸಂಪುಟದ ಸಂಪಾದಕರ ಶ್ರಮವನ್ನು ಸ್ಮರಿಸುತ್ತ ಕನ್ನಡ ಜನತೆಯ ಕೈಗೆ ಈ ಮೌಲಿಕ ಪ್ರಕಟಣೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

ಎಸ್. ಎಂ. ಕೃಷ್ಣ
ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಎರಡು ಮಾತು

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕರ್ನಾಟಕದ ಸಾಹಿತ್ಯ, ಸಂಗೀತ, ಸಂಸ್ಕೃತಿಗಳನ್ನು ಪ್ರಭಾವಪೂರ್ಣವಾಗಿ ಸಮೃದ್ಧಿಗೊಳಿಸಿದವರು ಹರಿದಾಸರು. ಬದುಕಿನಲ್ಲಿ ನಿಷ್ಠೆ, ಸಾಹಿತ್ಯದಲ್ಲಿ ಬದುಕಿನ ತತ್ತ್ವಗಳನ್ನು ಅಡಗಿಸಿ ಜನಸಾಮಾನ್ಯರನ್ನು ಉನ್ನತ ಜೀವನದತ್ತ ಉದ್ದೀಪಿಸುವ ಮಹಾಕಾಯಕದಲ್ಲಿ ತೊಡಗಿದವರು ಹರಿದಾಸರು. ಕನ್ನಡ ಸಾಹಿತ್ಯಕ್ಕೆ ಅಪೂರ್ವ ಕೊಡುಗೆಯಾಗಿರುವ ಹರಿದಾಸ ಸಾಹಿತ್ಯ ಸಮಾಜದ ಮೌಢ್ಯವನ್ನು ಬಯಲಿಗೆಳೆದು, ಜಾತಿ, ಮತ, ಪಂಥಗಳನ್ನು ಮೀರಿ ನಿಂತ ಮಾನವೀಯ ಮೌಲ್ಯಗಳನ್ನು ಸಾಹಿತ್ಯದ ಮೂಲಕ ಅಭಿವ್ಯಕ್ತಿಸಿತು.

ಹರಿದಾಸ ಸಾಹಿತ್ಯಕ್ಕೆ ಪ್ರೇರಣೆ ಭಕ್ತಿಯಾದರೂ, ಕರ್ನಾಟಕ ಸಂಗೀತಕ್ಕೆ ಸಮೃದ್ಧಿಯನ್ನು ನೀಡಿದವರು ಹರಿದಾಸರು. ಗ್ರಾಮ್ಯ ಮತ್ತು ದೇಶ್ಯ ಶಬ್ದಗಳಿಗೆ ಸಾಹಿತ್ಯದ ಮುದ್ರೆಯನ್ನು ಒತ್ತಿ, ಭಾಷೆಗೊಂದು ಪರಿಪಕ್ವತೆಯನ್ನೂ ತಂದುಕೊಟ್ಟರು. ಇಂಥ ಸಾಹಿತ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಪ್ರಸಾರ ಮಾಡುವುದು ನಮ್ಮ ಕರ್ತವ್ಯ. ಈ ದೃಷ್ಟಿಯಿಂದ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯ ಪ್ರಕಟಣ ಯೋಜನೆಗೆ ಸಮಿತಿಯೊಂದನ್ನು ರಚಿಸಿದ್ದು, ಇದರಲ್ಲಿ ನಾಡಿನ ಅನೇಕ ವಿದ್ವಾಂಸರು ಸಂಪುಟ ಸಂಪಾದಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಪುಟಗಳು ಹೊರಬರಲು ಕಾರಣರಾದ ಸಂಪಾದಕ ಮಂಡಳಿಯ ಸದಸ್ಯರಿಗೆ ಹಾಗೂ ಈ ಸಂಪುಟದ ಸಂಪಾದಕರಿಗೆ ನನ್ನ ಕೃತಜ್ಞತೆಗಳು.

ದಾಸರು ತಮ್ಮ ಸಾಹಿತ್ಯದಲ್ಲಿ ಸಾರ್ವಕಾಲಿಕ ಮೌಲ್ಯಗಳನ್ನು ಉಳಿಸಿ ಹೋಗಿದ್ದಾರೆ. ನಮ್ಮ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಈ ಕೀರ್ತನೆಗಳು ಮೌಲಿಕವಾದುವು. ಕನ್ನಡ ಜನತೆ ಈ ಕೃತಿಯ ಪ್ರಯೋಜನವನ್ನು ಪಡೆದರೆ ಪಟ್ಟ ಶ್ರಮ ಸಾರ್ಥಕವಾಗುತ್ತದೆ.

ರಾಣಿ ಸತೀಶ್

ಕನ್ನಡ ಮತ್ತು ಸಂಸ್ಕೃತಿ ಸಚಿವರು

ಯೋಜನೆಯನ್ನು ಕುರಿತು

ಕನ್ನಡ ಸಾಹಿತ್ಯ ಚರಿತ್ರೆಯ ಸಿರಿವಂತಿಕೆಯಲ್ಲಿ ಕೀರ್ತನ ಸಾಹಿತ್ಯದ ಕೊಡುಗೆ ವಿಪುಲವಾದುದು; ವೈಶಿಷ್ಟ್ಯಪೂರ್ಣವಾದುದು. ಈ ಸಮಗ್ರ ಸಾಹಿತ್ಯದ ಸಂಗ್ರಹ ಮತ್ತು ಪ್ರಕಾಶನದ ಕಾರ್ಯ ಪೂರ್ಣವಾಗಿ ಆಗಿರಲಿಲ್ಲ. ಇದನ್ನು ಮನಗಂಡ ಸರ್ಕಾರ ಸಮಗ್ರ ದಾಸ ಸಾಹಿತ್ಯ ಪ್ರಕಟಣೆಯ ಕಾರ್ಯವನ್ನು ಕೈಗೆತ್ತಿಕೊಂಡಿತು.

ಸುಮಾರು ಒಂದು ನೂರ ಮೂವತ್ತೊಂಬತ್ತು ಜನ ದಾಸರ ಸುಮಾರು ಹದಿನಾರು ಸಾವಿರ ಕೀರ್ತನೆಗಳ ಬೃಹತ್ ಸಾಹಿತ್ಯ ಸಾಮಗ್ರಿ ದೊರಕಿತು. ಹೀಗೆ ಸಾಂಪ್ರದಾಯಿಕ ರೀತಿಯಲ್ಲಿ ಸಂಗ್ರಹಿಸಿ, ಸಂಪಾದಿಸಿದ ಕೀರ್ತನ ಸಾಹಿತ್ಯವನ್ನು ಸಂಪುಟಗಳಲ್ಲಿ ಮುದ್ರಿಸುವುದು ಕಷ್ಟವೇನಾಗಿರಲಿಲ್ಲ. ಆದರೆ, ಅದನ್ನು ಮಾಹಿತಿ ತಂತ್ರಜ್ಞಾನದ ಇವತ್ತಿನ ಸಂದರ್ಭದಲ್ಲಿ ಬಹು ಉಪಯೋಗಿ ನೆಲೆಯಲ್ಲಿ ಬಹುಮಾಧ್ಯಮದಲ್ಲಿ ಹೊರತರಬೇಕೆಂಬ ಕನಸು ರೋಮಾಂಚಕಾರಿ ಅನುಭವವೇ ಸರಿ. ಇದನ್ನು ಕೃತಿ ರೂಪಕ್ಕಿಳಿಸುವ ಹಾದಿಯಲ್ಲಿ ಎದುರಾದ ತಾಂತ್ರಿಕ ಸವಾಲು ಬಹು ಕ್ಲಿಷ್ಟಕರವಾಗಿಯೇ ಕಂಡಿತು.

ದಿಟ, ಈ ಸಮಗ್ರ ಸಾಹಿತ್ಯವನ್ನು ಕೇವಲ ಮುದ್ರಣದಲ್ಲಷ್ಟೇ ಅಲ್ಲ, ಆಯ್ದ ಕೀರ್ತನೆಗಳನ್ನು ಗಾಯನಕ್ಕೆ ಅಳವಡಿಸಿ, ಸಿ.ಡಿ. ಮತ್ತು ಅಂತರ್ಜಾಲದಲ್ಲಿ ಹೊರತರ ಬೇಕೆಂದಾಗ ಬಳಕೆದಾರರ ಆವಶ್ಯಕತೆಯನ್ನು ಆಧರಿಸಿ ತಯಾರಿಸುವ ಅಗತ್ಯ ಇತ್ತು. ಆದರೆ ಇವುಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳಲ್ಲಿ ಸರ್ಚ್ ಎಂಜಿನ್ (ಹುಡುಕುವಿಕೆ) ಇಲ್ಲದಿರುವುದು ಒಂದು ತಾಂತ್ರಿಕ ಸಮಸ್ಯೆಯೇ ಆಯಿತು.

ಈ ರೀತಿಯ ಪ್ರಯತ್ನ ಕನ್ನಡ ಭಾಷೆಯಲ್ಲಿ ಹಿಂದೆಂದೂ ಆಗದಿದ್ದುದರಿಂದ ತಂತ್ರಾಂಶವನ್ನು ಹೊಸದಾಗಿಯೇ ಅಭಿವೃದ್ಧಿ ಪಡಿಸಬೇಕಾದ ಸವಾಲನ್ನು ಕೈಗೆತ್ತಿ ಕೊಳ್ಳಲಾಯಿತು. ಇದಕ್ಕಾಗಿ ಕನ್ನಡ ಗಣಕ ಪರಿಷತ್ತು, ರಾಷ್ಟ್ರೀಯ ಮಾಹಿತಿ ಕೇಂದ್ರ (ಎನ್‌ಐಸಿ), ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆ, ಮಹಾಭಾರತ ಸಂಶೋಧನಾ ಪ್ರತಿಷ್ಠಾನ ಮುಂತಾದ ಹಲವಾರು ತಂತ್ರಾಂಶ ಸಂಸ್ಥೆಗಳೊಂದಿಗೆ ನಿರಂತರ ಸಮಾಲೋಚನೆ, ಚಿಂತನೆಗಳನ್ನು ನಡೆಸಲಾಯಿತು.

ಹೀಗೆ ಸಾಹಿತ್ಯ ಸಂಗ್ರಹ, ಸಂಪಾದನೆ, ಸಂಗೀತ ಸಂಯೋಜನೆ, ಧ್ವನಿಮುದ್ರಣ, ಬಹುಮಾಧ್ಯಮಕ್ಕೆ ಅಳವಡಿಸುವ ತಾಂತ್ರಿಕ ಕುಶಲತೆಯ ನಿರಂತರ ಕಾರ್ಯಾನುಷ್ಠಾನಕ್ಕೆ ಸಂಪಾದಕ ಮಂಡಳಿ ಸದಸ್ಯರು, ಸಂಪುಟ ಸಂಪಾದಕರು, ಇಲಾಖಾ ಅಧಿಕಾರಿಗಳು, ತಂತ್ರಜ್ಞರು, ಕೋರ್ ಸಮಿತಿ ಸದಸ್ಯರು, ಸಂಗೀತ ನಿರ್ದೇಶಕರು, ಗಾಯಕರು – ಈ ಎಲ್ಲರ ಪರಿಶ್ರಮ ಅಗಾಧವಾಗಿ ದೊರಕಿದೆ. ಈ ಶ್ರಮದ ಫಲವಾಗಿ ಬಹುಮಾಧ್ಯಮದಲ್ಲಿ ಸಮಗ್ರ ದಾಸ ಸಾಹಿತ್ಯ ಯೋಜನೆಯ ಬೃಹತ್ ಕಾರ್ಯ ಸಾಕಾರಗೊಂಡಿದೆ.

ಈ ವಿಪುಲ ಸಾಹಿತ್ಯವನ್ನು ಕನ್ನಡ ಅಕ್ಷರಜ್ಞಾನಿಗಳು ಪುಸ್ತಕ ರೂಪದಲ್ಲಿಯೂ ಬಹುಗಾತ್ರದ ಸಾಹಿತ್ಯವನ್ನು ಕೈ ಅಳತೆಯ ಸಿ.ಡಿ. ರೂಪದಲ್ಲಿಯೂ ಈಗ ಪಡೆಯಬಹುದಾಗಿದೆ. ಅಲ್ಲದೆ, ಅಂತರ್ಜಾಲದ ಮೂಲಕ ವಿಶ್ವದ ಯಾವುದೇ ಮೂಲೆಯಲ್ಲಿರುವ ಆಸಕ್ತ ಜನತೆ ಕುಳಿತಲ್ಲಿಯೇ ಆರಾಮವಾಗಿ ವೀಕ್ಷಿಸುವ, ಕೇಳುವ ಹಾಗೂ ಕನ್ನಡ ಅಕ್ಷರ ಜ್ಞಾನವಿರದ ಭಾಷಿಕರು ಸಹಿತ ಸಂಗೀತವನ್ನು ಕೇಳಿ ಆಸ್ವಾದಿಸುವ ಅವಕಾಶವನ್ನು ಏಕಕಾಲದಲ್ಲಿ ಕಲ್ಪಿಸಲಾಗಿದೆ. ಪ್ರಕಾಶನದ ಇತಿಹಾಸದಲ್ಲಿಯೇ ದಾಖಲನೀಯವಾದ ಈ ಕಾರ್ಯ ಮುಂದೆ ಸರ್ಕಾರಿ ಸಂಸ್ಥೆಗಳಿಗಾಗಲಿ, ಖಾಸಗಿ ಸಂಸ್ಥೆಗಳಿಗಾಗಲಿ ಮಾದರಿಯಾಗಬಹುದೆಂದು ನಂಬಲಾಗಿದೆ.

ನಮ್ಮ ಸಂಸ್ಕೃತಿಯನ್ನು ಬಿತ್ತರಿಸಲು ನಾಲ್ಕು ಗೋಡೆಗಳೊಳಗಿನ ರಂಗ ಮಂದಿರಗಳು, ವೇದಿಕೆಗಳು ಅಗತ್ಯವಿದೆ ದಿಟ. ಆದರೆ ಭವಿತವ್ಯದಲ್ಲಿ ವಿಶ್ವದ ಜನರನ್ನು ತಲಪಲು ಮತ್ತು ಮುಖ್ಯವಾಗಿ ಯುವಜನಾಂಗಕ್ಕೆ ನಮ್ಮ ಸಾಂಸ್ಕೃತಿಕ ಕ್ಷಿತಿಜದ ವಿಸ್ತಾರವನ್ನು ಪರಿಚಯಿಸಲು ಸೂಕ್ಷ್ಮ ಸಂವೇದನಾಶೀಲವಾದ ಸಾಹಿತ್ಯವನ್ನು ಬಹುಮಾಧ್ಯಮದಲ್ಲಿ ಅಳವಡಿಸುವುದು ಅತ್ಯಾವಶ್ಯಕ. ಈ ನಿಟ್ಟಿನಲ್ಲಿ ಇದೊಂದು ವಿನೂತನ ಪ್ರಯೋಗ; ಈ ಪ್ರಯೋಗದ ಫಲ ಎಲ್ಲರಿಗೂ ಲಭ್ಯವಾಗಲೆಂಬುದು ನಮ್ಮ ಆಶಯ.

ಸಿ. ಎಸ್. ಕೇದಾರ್

ಸರ್ಕಾರದ ಕಾರ್ಯದರ್ಶಿ

ಪ್ರಕಾಶಕರ ಮಾತು

ಕರ್ನಾಟಕದ ಧಾರ್ಮಿಕ, ಸಾಂಸ್ಕೃತಿಕ ಇತಿಹಾಸದಲ್ಲಿ ಹರಿದಾಸರ ಸ್ಥಾನ ವಿಶಿಷ್ಟವಾದದ್ದು. ಸಾವಿರಾರು ವರ್ಷಗಳಿಂದ ಭಾರತದಲ್ಲಿ ಅವಿರತವಾಗಿ ಹರಿದುಬಂದ ಜೀವನಮೌಲ್ಯಗಳನ್ನು ಜನಸಾಮಾನ್ಯರ ಆಡುಭಾಷೆಯಲ್ಲಿ ಮುಟ್ಟಿಸಿ, ಲೌಕಿಕ ವಿಡಂಬನೆಯ ಮೂಲಕ ಅವರ ಮಾನಸಿಕ ವಿಕಾಸವನ್ನು ಯಶಸ್ವಿಯಾಗಿ ಸಾಧಿಸಿದವರು ಹರಿದಾಸರು. ಪಾಂಡಿತ್ಯ, ಲೋಕಾನುಭವಗಳ ಹಿನ್ನೆಲೆಯಿಂದಾಗಿ, ಆಡುಭಾಷೆಯ ಸೊಗಡಿನಿಂದಾಗಿ ಇವರು ಹಾಡಿದ್ದೆಲ್ಲ ಸಾಹಿತ್ಯವಾಯಿತು, ಕಾವ್ಯವಾಯಿತು, ಕೇಳುಗರನ್ನು ಸೆರೆಹಿಡಿಯಿತು. ಗೇಯಗುಣವುಳ್ಳ, ನೃತ್ಯಕ್ಕೆ ಅಳವಡುವ, ಛಂದೋಬದ್ಧವಾದ, ಜನತೆಯ ಮಧ್ಯದಲ್ಲಿಯೇ ಸಂದರ್ಭಾನುಸಾರ ಹುಟ್ಟಿದ ಹರಿದಾಸ ಸಾಹಿತ್ಯ ವೈಶಿಷ್ಟ್ಯಪೂರ್ಣವೆನಿಸಿತು. ಕನ್ನಡ ವಾಙ್ಮಯದಲ್ಲಿ ದಾಸಸಾಹಿತ್ಯ ಒಂದು ವಿಶೇಷ ಸ್ಥಾನ ಪಡೆಯಿತು. ಹೀಗೆ ಸಾಹಿತ್ಯ, ಸಂಗೀತ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ದಾಸಸಾಹಿತ್ಯದ ಕೊಡುಗೆ ಗಣನೀಯವಾದುದು.

ಸುಮಾರು ನೂರಮೂವತ್ತೊಂಬತ್ತು ಜನ ದಾಸರು ಆಗಿಹೋಗಿದ್ದು, ಅವರ ಕೀರ್ತನೆಗಳ ಸಂಖ್ಯೆ ಸುಮಾರು ಹದಿನಾರು ಸಾವಿರಕ್ಕೂ ಅಧಿಕ. ಈವರೆಗೆ ಕೆಲವು ದಾಸರ ಕೀರ್ತನೆಗಳು ಬಿಡಿ ಬಿಡಿಯಾಗಿ ಪ್ರಕಟವಾಗಿವೆಯಾದರೂ, ಇನ್ನೂ ಅನೇಕ ದಾಸವರೇಣ್ಯರ ಕೀರ್ತನೆಗಳು ಹಸ್ತಪ್ರತಿ ರೂಪದಲ್ಲಿಯೇ ಉಳಿದುಕೊಂಡಿವೆ. ಅವುಗಳನ್ನು ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿ, ಸಮಗ್ರ ದಾಸಸಾಹಿತ್ಯವು ಕನ್ನಡಿಗರಿಗೆ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಸಮಗ್ರ ದಾಸಸಾಹಿತ್ಯ ಪ್ರಕಟಣೆಯ ಬೃಹತ್ ಯೋಜನೆಯನ್ನು ಹಾಕಿಕೊಂಡಿದೆ. ಈ ಉದ್ದೇಶಕ್ಕಾಗಿ ಕಾರ್ಯನಿರ್ವಾಹಕ ಸಂಪಾದಕರಾದ ಡಾ. ಶ್ರೀನಿವಾಸ ಹಾವನೂರ, ಡಾ. ಟಿ. ಎನ್. ನಾಗರತ್ನ, ಪ್ರೊ. ವಸಂತ ಕುಷ್ಟಗಿ, ಸದಸ್ಯರಾದ ಡಾ. ಎಂ. ಎಂ. ಕಲಬುರ್ಗಿ, ಡಾ. ಬಸವರಾಜ ಸಬರದ, ಪ್ರೊ. ಸುಧಾಕರ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ಡಾ. ಮಂದಾಕಿನಿ (ಈಗ ದಿವಂಗತರು) ಹಾಗೂ ಪ್ರೊ. ಎಂ. ರಾಜಗೋಪಾಲಾಚಾರ್ಯ (ಈಗ ದಿವಂಗತರು) ಅವರನ್ನೊಳಗೊಂಡಂತೆ ಸಂಪಾದಕ ಸಮಿತಿಯನ್ನು ರಚಿಸಲಾಯಿತು. ಇಲಾಖಾ ನಿರ್ದೇಶಕರು ಸಮಿತಿಯ ಸದಸ್ಯ–ಕಾರ್ಯದರ್ಶಿಗಳಾಗಿರುತ್ತಾರೆ. ಇದರಲ್ಲಿ ನಾಡಿನ ಅನೇಕ ವಿದ್ವಾಂಸರ ನೆರವನ್ನು ಬಳಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ 'ಸಮಗ್ರ'ವಾಗಿ ದಾಸರ ಕೀರ್ತನೆಗಳನ್ನು ಸಂಗ್ರಹಿಸಿ ಪ್ರಕಟಿಸುವುದಿದ್ದರೂ ಕೆಲವು ಹರಿದಾಸರ ರಚನೆಗಳು ಬಿಟ್ಟು ಹೋಗಿರುವ ಸಾಧ್ಯತೆ ಇರುತ್ತದೆ. ಅಂಥ ಹರಿದಾಸರ ಕೀರ್ತನೆಗಳು ದೊರೆತಲ್ಲಿ ಮುಂದೆ ಪರಿಷ್ಕರಣ ಸಂದರ್ಭದಲ್ಲಿ ಪ್ರಕಟಿಸಲು ಕ್ರಮಕೈಗೊಳ್ಳಲಾಗುವುದು.

ಸಮಗ್ರ ದಾಸಸಾಹಿತ್ಯ ಯೋಜನೆಯಡಿ ಪ್ರಕಟವಾಗುತ್ತಿರುವ ಆಯಾ ಸಂಪುಟಗಳ ಸಂಪಾದಕರಿಗೆ ಹಾಗೂ ಈ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಸಂಪಾದಕ ಮಂಡಳಿಯವರಿಗೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರಾದ ಶ್ರೀ ಕೆ. ಸಿ. ರಾಮಮೂರ್ತಿ, ಶ್ರೀ ಸಿ. ಸೋಮಶೇಖರ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ ಅವರಿಗೆ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ. ಎಸ್. ವಿಜಯಲಕ್ಷ್ಮಿ ಹಾಗೂ ಡಾ. ಮಂಜುಳ ಅವರಿಗೆ ಕೃತಜ್ಞತೆಗಳು.

ಹರಿದಾಸರ ಕೀರ್ತನೆಗಳನ್ನು ಆಯ್ದು ಸಂಗೀತಕ್ಕೆ ಆಯ್ಕೆ ಮಾಡಲು ನೆರವಾದ ಶ್ರೀ ವಿನಾಯಕ ತೊರವಿ, ಶ್ರೀ ಮೈಸೂರು ವಿ. ಸುಬ್ರಹ್ಮಣ್ಯ, ಶ್ರೀ ಆರ್. ಕೆ. ಪದ್ಮನಾಭ, ಶ್ರೀ ಬಾನಂದೂರು ಕೆಂಪಯ್ಯ ಹಾಗು ಶ್ರೀಮತಿ ಮಾಲತಿ ಶರ್ಮರವರಿಗೆ, ಮತ್ತು ಈ ಯೋಜನೆಯಲ್ಲಿ ಪಾಲ್ಗೊಂಡ ಎಲ್ಲ ಸಂಗೀತ ನಿರ್ದೇಶಕರಿಗೆ ಹಾಗೂ ಗಾಯಕರಿಗೆ ಕೃತಜ್ಞತೆಗಳು.

ಸಂಪುಟಗಳನ್ನು ಮುದ್ರಣಕ್ಕೆ ಅನುಗೊಳಿಸುವ ಕಾರ್ಯ ನಿರ್ವಹಿಸಿದ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಅನಂತ ಪದ್ಮನಾಭರಾವ್ ಮತ್ತು ಪ್ರೊ. ನಾ. ಗೀತಾಚಾರ್ಯ ಇವರಿಗೂ ಸಹ ಕೃತಜ್ಞತೆಗಳು.

ಈ ಸಮಗ್ರ ದಾಸಸಾಹಿತ್ಯ ಸಂಪುಟಗಳ ಮುದ್ರಣ ಕಾರ್ಯವನ್ನು ನಿರ್ವಹಿಸಿದ ಎಂ.ಎಸ್.ಐ.ಎಲ್. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅಶೋಕ್ ವಿ. ಡೇವಿಡ್ ಹಾಗೂ ವಿಶೇಷಾಧಿಕಾರಿಗಳಾದ ಶ್ರೀ ಎಂ. ರವಿಶಂಕರ್ ಅವರಿಗೆ ನನ್ನ ಕೃತಜ್ಞತೆಗಳು. ಸಮಗ್ರ ದಾಸಸಾಹಿತ್ಯವನ್ನು ಪ್ರಕಟಿಸುವುದು ಹರಿದಾಸರಿಗೂ ಕನ್ನಡ ಜನತೆಗೂ ನಾವು ಸಲ್ಲಿಸಬೇಕಾದ ಸೇವೆಯೆಂದು ಭಾವಿಸಿದ್ದೇನೆ. ಪಂಡಿತ–ಪಾಮರರನ್ನು ಏಕಕಾಲಕ್ಕೆ ಆಕರ್ಷಿಸಬಲ್ಲ ವಿಶಿಷ್ಟ ಸಾಮರ್ಥ್ಯ ದಾಸಸಾಹಿತ್ಯದ್ದು ಎಂದರೆ ತಪ್ಪಾಗಲಾರದು. ಕನ್ನಡ ಜನತೆಯು ಈ ಪ್ರಕಟಣೆಯ ಸದುಪಯೋಗ ಪಡೆದುಕೊಂಡೀತು ಎಂದು ಆಶಿಸಿದ್ದೇನೆ.

ವೈ. ಕೆ. ಮುದ್ದುಕೃಷ್ಣ

ನಿರ್ದೇಶಕರು

ಸಂಪಾದಕ ಮಂಡಳಿಯ ನುಡಿ

ಕನ್ನಡ ಸಾಹಿತ್ಯದ ತವನಿಧಿಗಳಲ್ಲಿ ದಾಸಸಾಹಿತ್ಯವೂ ಒಂದು. ಕನ್ನಡಜನಕ್ಕೆ ಪಂಪನಂತಹ ಪ್ರೌಢಕವಿಗಳು ಗೊತ್ತಿರಲಿ ಬಿಡಲಿ, ದಾಸರ ಹಾಡುಗಳು ಗೊತ್ತಿಲ್ಲದವರು ಮಾತ್ರ ಅಪರೂಪ. ಜನರ ಮೇಲೆ ನಿರಂತರ ಪ್ರಭಾವವನ್ನು ಬೀರುವ ಜನಸಮ್ಮುಖತೆ ದಾಸಸಾಹಿತ್ಯದ ಪ್ರಮುಖ ಲಕ್ಷಣಗಳಲ್ಲಿ ಒಂದು. ಇಂತಹ ದಾಸರ ಹಾಡುಗಳು ಜ್ಞಾನಸಂಪದ ಹಾಗೂ ಭಕ್ತಿಸಂಪದಗಳ ಸಾರ್ವತ್ರಿಕ ಹಬ್ಬುಗೆಗೆ ಸಾಧನವಾಗಿ ಪರಿಣಮಿಸಿವೆ.

ಕನ್ನಡ ನಾಡಿನಾದ್ಯಂತ ಎಲ್ಲ ಸ್ತರಗಳಲ್ಲಿ ವರ್ಗ-ವರ್ಣಗಳ ಭೇದವಿಲ್ಲದೆ, ಜನರ ಬಾಯಲ್ಲಿ ಉಳಿದುಕೊಂಡು ಬಂದ ಈ ಸಾಹಿತ್ಯವನ್ನು ಮೊಟ್ಟಮೊದಲಿಗೆ ಪ್ರಕಟಿಸಿದ ಶ್ರೇಯಸ್ಸು ಬಾಸೆಲ್ ಮಿಶನ್ನಿನ ರೆ. ಹರ್ಮನ್ ಮೊಗ್ಲಿಂಗ್‌ರಿಗೆ ಸೇರುತ್ತದೆ. ಇವರು ತಮ್ಮ ಇಲ್ಲಿಯ ವಾಸ್ತವ್ಯದಲ್ಲಿ (೧೮೩೬ರಿಂದ) ನಾಲ್ಕುನೂರಕ್ಕೂ ಮೀರಿದ ದಾಸರಪದಗಳನ್ನು ಸಂಗ್ರಹಿಸಿದ್ದರು. ಅವುಗಳಲ್ಲಿಯ ಒಂದು ನೂರು ಪದಗಳ ಸಂಗ್ರಹವನ್ನು 'ದಾಸರ ಪದಗಳು' ಎಂಬ ಹೆಸರಿನಿಂದ ಕ್ರಿ. ಶ. ೧೮೫೦ರಲ್ಲಿ, ಮತ್ತೆ ಕ್ರಿ.ಶ. ೧೮೫೨ರಲ್ಲಿ ೧೭೪ ಪದಗಳುಳ್ಳ ಸಂಕಲನವನ್ನು ಮಂಗಳೂರಿನಲ್ಲಿ ಕಲ್ಲಚ್ಚಿನಲ್ಲಿ ಛಾಪಿಸಿ ಪ್ರಕಟಿಸಿದರು. ಈ ವಿಷಯವನ್ನು ೧೮೭೩ರಲ್ಲಿ ಪ್ರಕಟವಾದ ಇಂಡಿಯನ್ ಎಂಟಿಕ್ವೆರಿಯ 'On the Karnataka Vaishnava Dasas' - ಎಂಬ ತಮ್ಮ ಲೇಖನದಲ್ಲಿ ರೆ. ಕಿಟೆಲ್ಲರು ಕಾಣಿಸಿದ್ದಾರೆ. ಇದರಿಂದ ಕಿಟೆಲ್‌ರಂಥವರು ಕೂಡ ದಾಸರ ಪದಗಳ ಮಹತ್ವವನ್ನು ಮತ್ತು ಜನಪ್ರಿಯತೆಯನ್ನು ಗುರುತಿಸಿದ್ದರು ಎಂಬುದು ಗೊತ್ತಾಗುತ್ತದೆ. ಪ್ರಾಸಂಗಿಕವಾಗಿ ಇದುವೇ ದಾಸಸಾಹಿತ್ಯದ ಕುರಿತಾದ ಮೊದಲ ಲೇಖನವೂ ಆಗಿದೆ.

ಆ ನಂತರದ ದಿನಗಳಲ್ಲಿ ಈ ಕ್ಷೇತ್ರದಲ್ಲಿ ಹಲವಾರು ಜನರು ಕೆಲಸವನ್ನು ಮುಂದುವರಿಸಿದರು. ರೆ. ಮೊಗ್ಲಿಂಗರ 'ದಾಸರ ಪದಗಳು' ಇದರ ದ್ವಿತೀಯ ಆವೃತ್ತಿಯನ್ನು ೧೮೭೧ರಲ್ಲಿ ಜಾನ್ ಗ್ಯಾರೆಟರ ಸೂಚನೆಯ ಮೇರೆಗೆ ಹೊಳಕಲ್ಲು ನರಸಿಂಹಯ್ಯನವರು ಬೆಂಗಳೂರಿನಿಂದ ಪ್ರಕಟಿಸಿದರು. ೧೮೭೩ರಲ್ಲಿ ಹಿಂದೂ ಭಾಷಾ ಸಂಜೀವಿನೀ ಮುದ್ರಣ ಶಾಲೆಯಲ್ಲಿ 'ಹರಿಭಜನೆ, ಕೀರ್ತನೆ' ಎಂಬ ಸಂಗ್ರಹ ಪ್ರಕಟವಾಯಿತು. ೧೮೯೦ನೆಯ ದಶಕದಲ್ಲಿ ಬೆಳಗಾವಿಯ ಆಬಾಜಿ ರಾಮಚಂದ್ರ ಸಾವಂತ ಇವರು ದೇವನಾಗರಿ ಲಿಪಿಯಲ್ಲಿ "ದಾಸರ ಪದಗಳ ಸಂಗ್ರಹವು" ಎಂಬುದಾಗಿ ಎರಡು ಭಾಗಗಳಲ್ಲಿ ಪ್ರಕಟಿಸಿದರು. ಆ ದಶಕದಲ್ಲಿಯೇ ಮಡಕಶಿರಾದ ಬಾಲಕೃಷ್ಣರಾಯರು ೧೮೯೪ರಲ್ಲಿ 'ಪುರಂದರ ದಾಸರು ಮೊದಲಾದ ಅಪರೋಕ್ಷ ಜ್ಞಾನಿಗಳ ಪದಗಳು' ಎಂಬ ಪುಸ್ತಕವನ್ನು ತೆಲುಗು ಲಿಪಿಯಲ್ಲಿ ಮುದ್ರಿಸಿದ್ದು ಗಮನಾರ್ಹವಾಗಿದೆ. ಮತ್ತೆ ೧೯೦೮ರಲ್ಲಿ ಅವರೇ ಇನ್ನೊಂದು ಸಂಕಲನವನ್ನೂ ಪ್ರಕಟಿಸಿದ್ದಾರೆ.

ಹೀಗೆ ೧೮೫೦ರಷ್ಟು ಹಿಂದೆಯೇ ಪ್ರಾರಂಭವಾದ ದಾಸರ ಪದಗಳ ಸಂಗ್ರಹ ಹಾಗೂ ಪ್ರಕಟಣೆಯ ಕಾರ್ಯಕ್ಕೆ ಒಂದು ವ್ಯವಸ್ಥಿತ ರೂಪವನ್ನು ಕೊಟ್ಟು, ನಾಡಿನಾದ್ಯಂತ ಹರಿದು ಹಂಚಿಹೋದ, ಜನರ ಬಾಯಲ್ಲಿ ಉಳಿದುಕೊಂಡು ಬಂದ ವಿವಿಧ ದಾಸರ ಪದಗಳನ್ನು ಸಂಗ್ರಹಿಸಿ ಪ್ರಕಟಿಸಲು ಪ್ರಾರಂಭಿಸಿದವರು ಉಡುಪಿಯ ಪಾವಂಜೆ ಗುರುರಾಯರು. ಅವರು ೧೯೧೪ರಲ್ಲಿ ಪ್ರಕಟಿಸಿದ ಮೊದಲ ಸಂಕಲನದ ಹೆಸರು 'ಉದಯರಾಗವು' ಎಂಬುದು. ಅನಂತರದ ದಿನಗಳಲ್ಲಿ ಪುರಂದರದಾಸರ ಕೀರ್ತನೆಗಳನ್ನು ಐದು ಸಂಪುಟಗಳಲ್ಲಿ ಮತ್ತು ಉಳಿದ ದಾಸರ ಕೃತಿಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದರು. ಹೀಗೆ ನಾಡಿನ ದಕ್ಷಿಣದ ಅಂಚಿನ ಉಡುಪಿಯಲ್ಲಿ ಪ್ರಾರಂಭವಾದ ಕೆಲಸವನ್ನು ಉತ್ತರದ ಅಂಚಿನ ಲಿಂಗಸುಗೂರಿನಲ್ಲಿ ಗೊರಾಬಾಳ ಹಣಮಂತರಾಯರು 'ವರದೇಂದ್ರ ಸಾಹಿತ್ಯ ಮಾಲೆ'ಯನ್ನು ಪ್ರಾರಂಭಿಸಿ ತಮ್ಮ ಇಡೀ ಜೀವನವನ್ನೇ ಹರಿದಾಸ ಸಾಹಿತ್ಯದ ಸಂಗ್ರಹ ಮತ್ತು ಪ್ರಕಟಣೆಗೆ ಮೀಸಲಾಗಿರಿಸಿದರು. ಇತ್ತ ಮೈಸೂರು ಭಾಗದಲ್ಲಿ ಸುಪ್ರಸಿದ್ಧ ದಾಸರ ಹಾಡುಗಳನ್ನು ತಕ್ಕಮಟ್ಟಿಗೆ ಶಾಸ್ತ್ರಶುದ್ಧವಾಗಿ ಪ್ರಕಟಿಸಲು

ಸುಬೋಧ ರಾಮರಾಯರು ಮುಂದಾದರು. ಇದೇ ಬಗೆಯ ಕೆಲಸವನ್ನು ಧಾರವಾಡ ಪ್ರದೇಶದಲ್ಲಿ ನಾರಾಯಣರಾವ ಕಲಮದಾನಿ, ಹುಚ್ಚರಾವ ಬೆಂಗೇರಿ ಹಾಗೂ ಬೆಟಗೇರಿ ಕೃಷ್ಣಶರ್ಮರು ಮಾಡಿದರು. ಇದರೊಂದಿಗೆ, ಭಜನೆಯ ದೃಷ್ಟಿಯಿಂದ ಅನುಕೂಲವಾಗುವಂತೆ ನಾಡಿನ ವಿವಿಧ ಭಾಗಗಳಲ್ಲಿ ದಾಸಸಾಹಿತ್ಯಾಸಕ್ತರು ತಮತಮಗೆ ಬೇಕಾದ ಪದಗಳ ಸಂಗ್ರಹವನ್ನು ಪ್ರಕಟಿಸತೊಡಗಿದರು. ಇದರಿಂದಾಗಿ ನಾಡಿನ ಬಹುತೇಕ ಭಾಗಗಳಲ್ಲಿ ಬೇರೆ ಬೇರೆ ದಾಸರು ಇದ್ದುದು ಮತ್ತು ಅವರು ಹಾಡುಗಳನ್ನು ಬರೆದಿದ್ದಾರೆ ಎಂಬುದು ಗಮನಕ್ಕೆ ಬಂದಿತು. ಅದು 'ದಾಸ–ಪೀಳಿಗೆ'ಯನ್ನು ಗುರುತಿಸಲು ಸಹಾಯವಾಯಿತು.

ಶ್ರೀಪಾದರಾಜರಿಂದ ಪ್ರಾರಂಭವಾದ ಕೀರ್ತನೆಗಳ ರಚನೆಯ ಸಂಪ್ರದಾಯದಲ್ಲಿ ಈ ಐದುನೂರು ವರ್ಷಗಳಲ್ಲಿ ಸುಮಾರು ಮುನ್ನೂರು ಜನ ಹರಿದಾಸರು ಹುಟ್ಟಿ ಮೂವತ್ತು ಸಾವಿರಕ್ಕೂ ಮಿಕ್ಕ ಕೀರ್ತನೆಗಳನ್ನು ರಚಿಸಿದ್ದಾರೆಂದರೆ ಅವುಗಳ ಮಹತ್ವ ಗೊತ್ತಾಗದೇ ಇರದು.

ಇಡಿಯಾಗಿ–ಬಿಡಿಬಿಡಿಯಾಗಿ ವ್ಯಕ್ತಿಗಳಿಂದ, ಸಂಘ ಸಂಸ್ಥೆಗಳಿಂದ ದಾಸರ ಪದಗಳು ಪ್ರಕಟವಾಗುತ್ತ ಬರುತ್ತಿರುವಾಗಲೇ ಪುರಂದರ ಕನಕದಾಸರ ಚತುಃಶತಮಾನೋತ್ಸವ ಸಂದರ್ಭಗಳಲ್ಲಿ ಅವರ ಸಮಗ್ರ ಕೃತಿಗಳು ಸರ್ಕಾರದಿಂದ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಪ್ರಕಟವಾದವು. ಆದರೆ ಸಮಗ್ರ ದಾಸಸಾಹಿತ್ಯದ ಪ್ರಕಟಣೆ ಈವರೆಗೆ ಆಗಲೇ ಇಲ್ಲವೆಂದು ಹೇಳಬಹುದು. ಇಂಥದೊಂದು ಪ್ರಯತ್ನವನ್ನು ಮೂರು ದಶಕಗಳ ಹಿಂದೆ ಮೈಸೂರು ವಿಶ್ವವಿದ್ಯಾನಿಲಯವು ಕೈಗೊಂಡಿತು. ವೈಜ್ಞಾನಿಕ ರೀತಿಯಲ್ಲಿ ಶಾಸ್ತ್ರಶುದ್ಧವಾಗಿ ದಾಸಸಾಹಿತ್ಯವನ್ನು ಪ್ರಕಟಿಸುವುದರ ಅಡಿಗಲ್ಲನ್ನು ಹಾಕಿದ ಶ್ರೇಯಸ್ಸು ಆ ಮಾಲೆಯ ಸಂಪಾದಕರಾಗಿದ್ದ ಡಾ. ಜಿ. ವರದರಾಜರಾವ್ ಅವರಿಗೆ ಸಲ್ಲಬೇಕು. ಇದುವರೆಗೆ ಕೆಲವು ಸಂಪುಟಗಳು ಮಾತ್ರ ಬಂದಿವೆ. ಆದರೆ ಹಸ್ತಪ್ರತಿಗಳಲ್ಲಿ ವಿಪುಲ ದಾಸಸಾಹಿತ್ಯವನ್ನು ಸಂಗ್ರಹಿಸಲಾಗಿದೆ. ಅದೇ ರೀತಿಯಲ್ಲಿ ಲಿಂಗಸುಗೂರಿನಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹಾಗೂ ತಿರುಪತಿಯ ದಾಸಸಾಹಿತ್ಯ ಪ್ರೊಜೆಕ್ಟದಲ್ಲಿ ಕೂಡ ವಿಪುಲ ಹಸ್ತಪ್ರತಿಗಳ ಸಂಗ್ರಹವಿದೆ. ಇವರೆಲ್ಲರ ಸಹಕಾರದಿಂದ ಈಗ ಕರ್ನಾಟಕ ಸರ್ಕಾರವು ಸಮಗ್ರ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಪ್ರಕಟಿಸುವ ಸಾಹಸದ ಕಾರ್ಯವನ್ನು ಮಾಡುತ್ತಿದೆ.

ಸಂಪುಟ ಯೋಜನೆ

ದಾಸಸಾಹಿತ್ಯದ ಪರಿಷ್ಕರಣ ಕಾರ್ಯ ತುಂಬ ಜಟಿಲವಾದುದೆಂಬುದು ಸಂಪಾದಕ ಮಂಡಳಿಯ ಪ್ರಥಮ ಸಭೆಯಲ್ಲಿಯೇ ಅನುಭವಕ್ಕೆ ಬಂದಿತು. ಕಳೆದ ಐದು ಶತಮಾನಗಳಿಂದ ನಿರಂತರ ಹರಿದುಬಂದ ದಾಸಸಾಹಿತ್ಯ ರಚನೆಯಲ್ಲಿಯ ದಾಸರ ಹಾಗೂ ದಾಸರ ಪದಗಳ ಸಂಖ್ಯಾಬಾಹುಳ್ಯವನ್ನು ಗಮನಿಸಿ ಅದಕ್ಕೊಂದು ಕಾಲಮಿತಿಯನ್ನು ಹಾಕಿಕೊಳ್ಳುವುದು ಅನಿವಾರ್ಯ ವಾಯಿತು. ಹಾಗೆ ದಾಸಸಾಹಿತ್ಯದ ಪ್ರಾರಂಭ ಕಾಲದಿಂದ ೧೯ನೆಯ ಶತಮಾನದ ಅಂತ್ಯದವರೆಗೆ ರಚಿತಗೊಂಡ ವೈದಿಕ ಪರಂಪರೆಯ ದಾಸರ ಪದಗಳನ್ನು ಸಂಗ್ರಹಿಸುವುದೆಂದೂ, ಅದರಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಪರಂಪರೆಯ ಲಭ್ಯವಿದ್ದ ಹಾಡುಗಳನ್ನು ಸೇರಿಸಿಕೊಂಡು ೩೫ ಸಂಪುಟಗಳಲ್ಲಿ ಪ್ರಕಟಿಸುವುದೆಂದೂ ನಿರ್ಧರಿಸಲಾಯಿತು.

ಈ ೩೫ ಸಂಪುಟಗಳನ್ನು* ಸಂಪಾದಕ ಮಂಡಳಿಯ ಸದಸ್ಯರಲ್ಲದೆ ನಾಡಿನ ಹಲವಾರು ವಿದ್ವಾಂಸರನ್ನು ಸಂಪಾದಿಸಿಕೊಡಲು ಕೇಳಿಕೊಳ್ಳಲಾಯಿತು.

ಇಂಥದೊಂದು ಬೃಹತ್ ಕಾರ್ಯವನ್ನು ಕೈಗೊಂಡಾಗ ಕೆಲವು ಮಾರ್ಗದರ್ಶಿ ಸೂತ್ರಗಳನ್ನು ಅನುಸರಿಸುವುದು ಅನಿವಾರ್ಯವಾಗುತ್ತದೆ. ಅನ್ಯ ಮತ–ಪಂಥಗಳ ಟೀಕೆಗಳು ಬಂದಿದ್ದರೆ ಅಂಥ ಹಾಡುಗಳನ್ನು ಕೈಬಿಡಬೇಕು. ಒಂದೇ ಹಾಡು ಇಬ್ಬರು ದಾಸರ ಅಂಕಿತದಲ್ಲಿ ಪ್ರಚಲಿತದಲ್ಲಿದ್ದರೆ, ಎರಡೂ ಕಡೆಗೆ ಅವುಗಳನ್ನು ಕೊಟ್ಟು, ಕೆಳಗೆ 'ಈ ಕೀರ್ತನೆ . . . . ದಾಸರ ಅಂಕಿತದಲ್ಲೂ ಇದೆ' ಎಂದೂ ಸೂಚಿಸಬೇಕು. ದ್ವೈತ ಸಂಪ್ರದಾಯದ ಕೀರ್ತನೆಗಳನ್ನು ಪ್ರಕಟಿಸುವಾಗ ದೇವ–ಗುರು ತಾರತಮ್ಯವನ್ನು ಪಾಲಿಸಬೇಕು ; ಉಳಿದೆಡೆ ಗಣೇಶ ಪ್ರಾರ್ಥನೆ, ಭಗವಂತನ ನಾಮಸಂಕೀರ್ತನೆ, ಆತ್ಮನಿವೇದನೆ, ಲೋಕನೀತಿ, ತಾತ್ವಿಕ, ಕಥನಾತ್ಮಕ, ಸಂಪ್ರದಾಯ ಹಾಗೂ ವಿಶೇಷ ಹಾಡುಗಳೆಂದು ಮುಂತಾಗಿ ವಿಂಗಡಿಸಿಕೊಡಬೇಕು– ಎಂಬುದಾಗಿ ನಿರ್ಧರಿಸಲಾಯಿತು.

---

*ಇವುಗಳಲ್ಲಿ ಕೆಲವುಗಳಿಗೆ ಎರಡು ಮೂರು ಭಾಗಗಳಿವೆ.

ಪ್ರತಿಯೊಂದು ಸಂಪುಟದ ಪ್ರಾರಂಭದಲ್ಲಿ ಹಾಡುಗಳ ಪರಿವಿಡಿಯನ್ನು ಕೊಟ್ಟು ಪ್ರಸ್ತಾವನೆಯಲ್ಲಿ ಆಯಾ ದಾಸರ ಸಂಕ್ಷಿಪ್ತ ಜೀವನ ಚರಿತ್ರೆ, ಕೃತಿಗಳ ಸಮೀಕ್ಷೆ, ಶೈಲಿ ಇತ್ಯಾದಿಗಳನ್ನು ವಿವರಿಸಿ, ಗ್ರಂಥಸಂಪಾದನೆಯ ಆಕರಗಳನ್ನೂ ಕೊಡಲು ಪ್ರಯತ್ನಿಸಲಾಗಿದೆ. ಕೊನೆಯಲ್ಲಿ ಬರುವ ಅನುಬಂಧಗಳಲ್ಲಿ ಕಠಿಣ ಶಬ್ದಗಳ ಅರ್ಥ, ಟಿಪ್ಪಣಿ ಮತ್ತು ವಿಶಿಷ್ಟ ಅಂಕಿತನಾಮಗಳ ಸೂಚಿ ಹಾಗೂ ಹಾಡುಗಳ ಅಕಾರಾದಿಯನ್ನು ಕೊಡಲಾಗಿದೆ.

ಈ ಸಂಪುಟಗಳು ಜನಪ್ರಿಯ ಆವೃತ್ತಿಗಳಾಗಿರುವುದರಿಂದ ಲಭ್ಯವಿರುವ ಪಾಠಾಂತರಗಳಲ್ಲಿ ಯೋಗ್ಯವಾದುದನ್ನು ಸ್ವೀಕರಿಸಿದೆ. ಅನ್ಯ ಪಾಠಗಳನ್ನು ಅಡಿಯಲ್ಲಿ ನಮೂದಿಸಿಲ್ಲ. ಆದರೂ ಇವು ವಿದ್ವಜ್ಜನಪ್ರಿಯ ಆವೃತ್ತಿಗಳೂ ಆಗಬೇಕೆಂಬ ರೀತಿಯಲ್ಲಿ ಈ ಸಂಪುಟಗಳನ್ನು ರೂಪಿಸಲು ಪ್ರಯತ್ನಿಸಿದ್ದೇವೆ.

ಕೃತಜ್ಞತೆಗಳು

ಕಳೆದ ನೂರೈವತ್ತು ವರ್ಷಗಳಿಂದ ಪಾಶ್ಚಾತ್ಯ ಮಿಶನರಿಗಳಿಂದ ಹಿಡಿದು ಈ ಮೊದಲು ಉಲ್ಲೇಖಿಸಿದ ನಾಡಿನ ಅನೇಕ ವಿದ್ವಜ್ಜನರು, ಸಂಘ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ದಾಸಸಾಹಿತ್ಯ ಕುರಿತು ನಿರಂತರ ದುಡಿದು ವಿಪುಲ ಸಾಮಗ್ರಿಯನ್ನು ಪ್ರಕಟಿಸಿದ್ದಾರೆ. ಈ ಎಲ್ಲ ವ್ಯಕ್ತಿಗಳಿಗೂ, ಸಂಘ ಸಂಸ್ಥೆಗಳಿಗೂ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು ಸಲ್ಲುತ್ತವೆ.

ಈ ಯೋಜನೆ ಅಸ್ತಿತ್ವಕ್ಕೆ ಬಂದುದೂ ಒಂದು ವಿಶಿಷ್ಟ ಸಂದರ್ಭದಲ್ಲಿ ಎಂಬುದನ್ನು ಇಲ್ಲಿ ನಮೂದಿಸಬೇಕು. ಕರ್ನಾಟಕ ಸರ್ಕಾರವು ನಾಡಿನ ಖ್ಯಾತ ಸಂಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಸಮಗ್ರ ವಚನಸಾಹಿತ್ಯವನ್ನು ಪ್ರಕಟಿಸಿತಷ್ಟೇ. ಅವರೇ 'ದಾಸಸಾಹಿತ್ಯ' ಯೋಜನೆಯನ್ನು ರೂಪಿಸಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥರ ಮೂಲಕ ಈ ಯೋಜನೆಯತ್ತ ಸರ್ಕಾರದ ಗಮನ ಸೆಳೆದರು. ಇದನ್ನು ಅರಿತ ಅಂದಿನ ಮುಖ್ಯಮಂತ್ರಿಗಳೂ, ಅನಂತರ ಭಾರತದ ಪ್ರಧಾನಮಂತ್ರಿಗಳೂ ಆಗಿದ್ದ ಸನ್ಮಾನ್ಯ ಶ್ರೀ ಹೆಚ್. ಡಿ. ದೇವೇಗೌಡರು ಮುಧೋಳದಲ್ಲಿ (೧೯೯೫) ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ, "ಸರ್ಕಾರವು ಸಮಗ್ರ

ದಾಸಸಾಹಿತ್ಯವನ್ನು ಪ್ರಕಟಿಸಲು ಒಪ್ಪಿಕೊಂಡಿದೆ" ಎಂದು ಘೋಷಿಸಿದರು. ಅದರಂತೆ, ಸರ್ಕಾರವು ಒಂಬತ್ತು ಜನರ ಸಂಪಾದಕ ಮಂಡಳಿಯನ್ನು ರಚಿಸಿತು. ಅದರಲ್ಲಿ ಡಾ. ಶ್ರೀನಿವಾಸ ಹಾವನೂರ, ಡಾ. ಟಿ.ಎನ್. ನಾಗರತ್ನ ಮತ್ತು ಪ್ರೊ. ವಸಂತ ಕುಷ್ಟಗಿ ಅವರನ್ನು ಸಮಿತಿಯ ಕಾರ್ಯನಿರ್ವಾಹಕ ಸಂಪಾದಕರೆಂದು ನಿಯಮಿಸಿತು. ಜೊತೆಗೆ ಈ ಮೊದಲು ಇಂಥ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ ಅನುಭವಿ ಡಾ. ಎಂ. ಎಂ. ಕಲಬುರ್ಗಿ, ದಾಸಸಾಹಿತ್ಯದಲ್ಲಿ ನುರಿತ ವಿದ್ವಾಂಸರುಗಳಾದ ಪ್ರೊ. ಎಂ. ರಾಜಗೋಪಾಲಾಚಾರ್ಯ, ಡಾ. ಕೃಷ್ಣ ಕೊಲ್ಹಾರ ಕುಲಕರ್ಣಿ, ಡಾ. ಮಂದಾಕಿನಿ, ಪ್ರೊ. ಸುಧಾಕರ ಮತ್ತು ಡಾ. ಬಸವರಾಜ ಸಬರದ ಅವರನ್ನು ಸಂಪಾದಕ ಮಂಡಳಿಯ ಸದಸ್ಯರನ್ನಾಗಿ ನಿಯಮಿಸಿತು. ಅವರುಗಳ ನಿರಂತರ ಪರಿಶ್ರಮದ ಫಲವೇ ಈ ಸಮಗ್ರ ದಾಸಸಾಹಿತ್ಯದ ಪ್ರಕಟಣಾ ಕಾರ್ಯ. ಈ ಪ್ರಕಟಣಾ ಕಾರ್ಯದಲ್ಲಿ ಅವರುಗಳೊಂದಿಗೆ ೩೫ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಸರ್ವಶ್ರೀ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ, ಡಾ. ಡಿ. ಆರ್. ಪಾಂಡುರಂಗ, ಡಾ. ಅನಂತಪದ್ಮನಾಭರಾವ್, ಪ್ರೊ. ಬಿ. ಆರ್. ಕುಲಕರ್ಣಿ, ಡಾ. ಕೆ. ಜಿ. ವೆಂಕಟೇಶ್, ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಕೆ. ಗೋಕುಲನಾಥ, ಡಾ. ಕೆ. ಎಂ. ಕೃಷ್ಣರಾವ್, ಶ್ರೀ ಹಣಮಂತ ತಾಸಗಾಂವಕರ್, ಪ್ರೊ. ನಾ. ಗೀತಾಚಾರ್ಯ, ಡಾ. ಸ್ವಾಮಿರಾವ್ ಕುಲಕರ್ಣಿ, ಶ್ರೀ ಹನುಮನಗೌಡ, ಶ್ರೀ ಎ. ಎನ್. ಅನಂತಸ್ವಾಮಿರಾವ್, ಡಾ. ನಾರಾಯಣಾಚಾರ್ಯ ಧೂಳಖೇಡ, ಶ್ರೀ ಶಾಶ್ವತಸ್ವಾಮಿ ಮುಕ್ಕುಂದಿಮಠ, ಶ್ರೀ ಕೆ. ಎಸ್. ವೆಂಕಟೇಶ್ ಮತ್ತು ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ ಅವರುಗಳು ಹಾಗೂ ಶ್ರೀಮತಿಯರಾದ ನಳಿನಿ ವೆಂಕಟೇಶ್, ಮೀನಾರಾವ್, ಲೀಲಾವತಿ ಎಸ್. ರಾವ್, ಡಾ. ಜಯಲಕ್ಷ್ಮಿ ಮಂಗಳಮೂರ್ತಿ, ಡಾ. ಅಕ್ಕಮಹಾದೇವಿ, ಶೀಲಾ ದಾಸ್, ಡಾ. ರಮಾ ಕಲ್ಲೂರಕರ, ಡಾ. ಸೀತಾ ಗುಡೂರ ಕುಲಕರ್ಣಿ, ಹೆಚ್. ಎಸ್. ಪದ್ಮಾ ಮೂರ್ತಿ, ಮತ್ತು ರುಕ್ಮಿಣಿ ಗಿರಿಮಾಜಿ ಅವರುಗಳು ತುಂಬ ಶ್ರಮವಹಿಸಿ ಸಂಪುಟಗಳನ್ನು ಸಿದ್ಧಪಡಿಸಿಕೊಟ್ಟಿದ್ದಾರೆ. ಅವರುಗಳಿಗೆ ಸಂಪಾದಕ ಮಂಡಳಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಈ ಮಧ್ಯೆ ಸಂಪಾದಕ ಸಮಿತಿಯ ಸದಸ್ಯರಲ್ಲೊಬ್ಬರಾದ ಪ್ರೊ. ಎಂ. ರಾಜಗೋಪಾಲಾಚಾರ್ಯರು ಮತ್ತು ಡಾ. ಮಂದಾಕಿನಿ ಹಾಗೂ ಸಂಪುಟ ಸಂಪಾದಕರಲ್ಲಿ ಒಬ್ಬರಾದ ಶ್ರೀ ಎಚ್. ಎಸ್. ಶ್ರೀನಿವಾಸಮೂರ್ತಿ, ಡಾ. ಕೆ.ಎಂ. ಕೃಷ್ಣರಾವ್, ಶ್ರೀಮತಿ ಪದ್ಮಾ ಮೂರ್ತಿ ಹಾಗೂ ಶ್ರೀ ಹನುಮನಗೌಡ ಮಾನ್ವಿ ಅವರು ನಮ್ಮನ್ನು ಅಗಲಿದ್ದು ದುಃಖದ ವಿಷಯವಾಗಿದೆ.

ಆಯಾ ಕಾಲದಲ್ಲಿ ಈ ಯೋಜನೆಗೆ ಸಹಕರಿಸಿದ ಹಾಗೂ ಈ ಯೋಜನೆಯ ಪರಿಕಲ್ಪನೆ ಯಶಸ್ವಿಯಾಗಿ ಕಾರ್ಯಾನುಷ್ಠಾನಕ್ಕೆ ಬರುವ ದಿಸೆಯಲ್ಲಿ ಸಹಕರಿಸಿದ ಈ ಹಿಂದಿನ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ವಿಶೇಷವಾಗಿ ಇಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಎಸ್. ಎಂ. ಕೃಷ್ಣ ಅವರಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಶ್ರೀಮತಿ ರಾಣಿ ಸತೀಶ್ ಅವರಿಗೆ, ಇಲಾಖೆಯ ಹಿಂದಿನ ಕಾರ್ಯದರ್ಶಿಗಳಾದ ಶ್ರೀ ಚಂದ್ರಹಾಸ ಗುಪ್ತ ಮತ್ತು ಈಗಿನ ಕಾರ್ಯದರ್ಶಿಗಳಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನಮ್ಮ ನಮನಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ಈ ಯೋಜನೆಗೆ ನೆರವಾದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಹಿಂದಿನ ನಿರ್ದೇಶಕರುಗಳು ಹಾಗೂ ಈಗಿನ ನಿರ್ದೇಶಕರಾದ ಶ್ರೀ ವೈ. ಕೆ. ಮುದ್ದುಕೃಷ್ಣ, ಜಂಟಿ ನಿರ್ದೇಶಕರಾದ ಶ್ರೀ ಕಾ. ತ. ಚಿಕ್ಕಣ್ಣ, ಸಹಾಯಕ ನಿರ್ದೇಶಕರಾದ ಶ್ರೀಮತಿ ವೈ.ಎಸ್. ವಿಜಯಲಕ್ಷ್ಮಿ ಮತ್ತು ಡಾ. ಮಂಜುಳಾ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ. ಈ ಕಾರ್ಯದಲ್ಲಿ ನೆರವಾದ ಎಂ. ಎಸ್. ಐ. ಎಲ್. ಸಂಸ್ಥೆಯ ಅಧಿಕಾರಿ ಹಾಗೂ ಸಿಬ್ಬಂದಿವರ್ಗಕ್ಕೆ, ವಿಶೇಷವಾಗಿ ಶ್ರೀ ಎಂ. ರವಿಶಂಕರ್, ವಿಶೇಷಾಧಿಕಾರಿ, ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಇದು ಒಂದು ದೊಡ್ಡ ಯೋಜನೆ. ಇದರ ಸಂಪಾದನೆಯ ಸಮಸ್ಯೆಗಳು ದೊಡ್ಡವು. ಪಾಠಾಂತರ, ರೂಪಾಂತರ, ಪ್ರಕ್ಷಿಪ್ತತೆ ಇತ್ಯಾದಿಗಳ ಗೊಂದಲಕ್ಕೆ ಗುರಿಯಾಗುತ್ತ ಬಂದ ವ್ಯಾಪಕ ಪ್ರಮಾಣದ ಈ ದಾಸಸಾಹಿತ್ಯವನ್ನು ಒಂದೆಡೆ ಸಂಗ್ರಹಿಸುವುದು, ಪುನರುಕ್ತಿಗಳನ್ನು ಗುರುತಿಸುವುದು, ಅಂಕಿತ ಪಲ್ಲಟಗಳನ್ನು ಸರಿಪಡಿಸುವುದು, ಪ್ರಕ್ಷಿಪ್ತಗಳನ್ನು ದೂರೀಕರಿಸುವುದು, ಕೊನೆಯದಾಗಿ ಕೀರ್ತನೆಗಳನ್ನು ಶುದ್ಧೀಕರಿಸುವುದು ಎಂಥವರನ್ನೂ ಧೈರ್ಯಗೆಡಿಸುವ ಕೆಲಸ. ಹೀಗಿದ್ದೂ ದಾಸಸಾಹಿತ್ಯದ ಮೇಲಿನ ಗೌರವ ಪ್ರೀತಿಗಳು ನಮ್ಮಿಂದ ಈ ಕೆಲಸ ಮಾಡಿಸಿವೆ. ನಮ್ಮ ಶಕ್ತಿಗೆ ಮೀರಿ ಉಳಿದಿರಬಹುದಾದ ದೋಷಗಳನ್ನು ಮನ್ನಿಸಬೇಕೆಂದು ಕೋರುತ್ತೇವೆ. ಈ ಮೂವತ್ತೈದು ಸಂಪುಟಗಳನ್ನು ಸಹೃದಯ ಲೋಕಕ್ಕೆ ಅರ್ಪಿಸುತ್ತಿದ್ದೇವೆ. ಸಮಗ್ರ ದಾಸಸಾಹಿತ್ಯವು ಸುಲಭ ಬೆಲೆಯಲ್ಲಿ ಕನ್ನಡಿಗರ ಮನೆ–ಮನಗಳಲ್ಲಿ ಬೆಳಗಲೆಂದು ಹಾರೈಸುತ್ತೇವೆ.

ಸಂಪಾದಕ ಮಂಡಳಿ

ಪರಿವಿಡಿ

ಪ್ರಸ್ತಾವನೆ

ಶ್ರೀ ವಿಜಯದಾಸರ ಜೀವನ ವೃತ್ತಾಂತ

ಕನ್ನಡ ಸಾಹಿತ್ಯ ಚರಿತ್ರೆಯನ್ನು ಸಮಗ್ರವಾಗಿ ಅವಲೋಕಿಸಿದಾಗ ವಿಶ್ವಸಾಹಿತ್ಯಕ್ಕೆ ಕನ್ನಡದ್ದೇ ಆದ ಕೊಡುಗೆ ಎಂದರೆ ವಚನಸಾಹಿತ್ಯ ಮತ್ತು ದಾಸಸಾಹಿತ್ಯ ಎನ್ನಬಹುದು. ಇವು ಕನ್ನಡ ಸಾಹಿತ್ಯ ಶಾರದೆಯ ಎರಡು ಕಣ್ಣುಗಳಿದ್ದಂತೆ. ಈ ಪೈಕಿ ದಾಸಸಾಹಿತ್ಯವು ಭಕ್ತಿಮಾರ್ಗದ ಪ್ರತಿಪಾದನೆಯ ಜತೆಗೆ ಕನ್ನಡದ ಭಾಷಿಕ ಶಕ್ತಿಯ ಬಹು ಆಯಾಮಗಳನ್ನು ತೆರೆದು ತೋರಿರುವುದಲ್ಲದೆ ಭಾರತೀಯ ಸಂಗೀತಶಾಸ್ತ್ರದಲ್ಲಿ ಅಮರವಾದ ಕರ್ನಾಟಕ ಸಂಗೀತದ ಸಿದ್ಧಿ ಪ್ರಸಿದ್ಧಿಗೆ ಸಾಕ್ಷಿಯಾಗಿದೆ. ಈ ದೃಷ್ಟಿಯಿಂದ ಸಾಹಿತ್ಯ ಮತ್ತು ಸಂಗೀತ ಸಾಮರಸ್ಯ ಹೊಂದಿರುವ ಹರಿದಾಸ ಸಾಹಿತ್ಯ ವಿಶ್ವಸಾಹಿತ್ಯಕ್ಕೆ ಕನ್ನಡನಾಡು ನೀಡಿರುವ ವಿಶಿಷ್ಟ ಕೊಡುಗೆ ಎಂದರೆ ತಪ್ಪಾಗದು.

ವಚನ ಮತ್ತು ದಾಸ ಸಾಹಿತ್ಯಗಳು ಅಂಕಿತ ಬದಲಿಸಿದರೂ ಅಂತಃಕರಣ ಒಂದೇ ಎಂಬಂತೆ ಹಲವಾರು ವಿಷಯಗಳಲ್ಲಿ ಸಾದೃಶ್ಯ ಹೊಂದಿದೆ. ನಡುಗನ್ನಡ ಬಳಕೆ, ಆಡುಮಾತಿನ ಸೊಗಸಾದ ಅಳವಡಿಕೆ, ಜನಬಳಕೆಯ ಶಬ್ದಸಂಪತ್ತು, ತತ್ತ್ವಪ್ರತಿಪಾದನೆ, ಭಕ್ತಿಪ್ರತಿಪಾದನೆ ಮೊದಲಾದ ವಿಷಯಗಳಲ್ಲಿ ದಾಸ – ವಚನ ಸಾಹಿತ್ಯಗಳ ಹೂರಣ ಒಂದೇ, ತೋರಣ ಬೇರೆ. ಆದರೆ ಸಂಗೀತ – ನೃತ್ಯ ಅಂಶಗಳ ಅಳವಡಿಕೆ, ವಿಶಿಷ್ಟ ಛಂದೋಬದ್ಧ ರಚನೆಗಳು, ತನ್ನದೇ ಆದ ಸಿದ್ಧಾಂತ, ಆಚಾರ ಪ್ರತಿಪಾದನೆ, ಸಂಸ್ಕೃತ ಕನ್ನಡ ಎರಡರಲ್ಲೂ ಒಬ್ಬರೇ ಸಾಹಿತ್ಯ – ಶಾಸ್ತ್ರ ರಚನೆ ಮಾಡುವುದು ಇವೇ ಮೊದಲಾದ ಹಿರಿಮೆಗಳನ್ನು ದಾಸಸಾಹಿತ್ಯ ಹೊಂದಿದೆ.

ಹತ್ತಾರು ವಿಷಯಗಳಲ್ಲಿ ವಚನ ಸಾಹಿತ್ಯದಂತೆ ಕನ್ನಡತನ, ಕನ್ನಡ ಸಂಸ್ಕೃತಿಯನ್ನು ದಾಸಸಾಹಿತ್ಯ ಒಳಗೊಂಡಿದೆ. ಹರಿದಾಸ ಸಾಹಿತ್ಯದ ಉಗಮ ವಿಕಾಸ ಪ್ರಗತಿಯ ಹಂತಗಳೆಲ್ಲ ಕರ್ನಾಟಕದಲ್ಲೇ ಆಗಿದೆ. ಪ್ರಾಚೀನ ಭಾಗವತ ಪಂಥ ಮತ್ತು ಮಧ್ವಮತ ತತ್ತ್ವಗಳನ್ನು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅಚ್ಚುಕಟ್ಟಾಗಿ ಅಭಿವ್ಯಕ್ತಗೊಳಿಸಿದ್ದು ದಾಸಸಾಹಿತ್ಯ. ಮಧ್ವಮತ ಸಿದ್ಧಾಂತ ಪ್ರತಿಪಾದಕರಾದ ಆಚಾರ್ಯ ಮಧ್ವರು ಕನ್ನಡಿಗರು. ಹೀಗೆ ದೇಶ, ಭಾಷೆ, ಸಿದ್ಧಾಂತ, ಸಾಹಿತ್ಯ, ಆಚಾರ್ಯ ಪುರುಷರುಗಳೆಲ್ಲ ಕರ್ನಾಟಕದ್ದು ಕನ್ನಡದ್ದು. ಇದರ ಪ್ರತಿಫಲನವೇ ಹರಿದಾಸ ಸಾಹಿತ್ಯ.

ಹರಿದಾಸ ಸಾಹಿತ್ಯವನ್ನು ಅಧ್ಯಯನಾನುಕೂಲಕ್ಕಾಗಿ ವಿದ್ವಾಂಸರು ನಾನಾ ರೀತಿ ವರ್ಗೀಕರಿಸಿದ್ದಾರೆ. ಕಾಲಮಾನದ ದೃಷ್ಟಿಯಿಂದ ಶ್ರೀಪಾದರಾಜ ಪೂರ್ವ ಯುಗ (ಕ್ರಿ. ಶ. ೮೭೯–೧೪೫೦) ಶ್ರೀಪಾದರಾಜ ಯುಗ (ಕ್ರಿ. ಶ. ೧೪೫೧–೧೫೬೫) ವಿಜಯದಾಸ ಯುಗ (ಕ್ರಿ. ಶ. ೧೫೬೬–೧೮೮೯) ವಿಜಯದಾಸರ ಶಿಷ್ಯಪ್ರಶಿಷ್ಯ ಯುಗ (ಕ್ರಿ. ಶ. ೧೮೧೦ ರಿಂದ) ಎಂದು ವರ್ಗೀಕರಿಸಿದ್ದಾರೆ.

ಸಾಧನೆಯ ಘಟ್ಟಗಳ ಹಿನ್ನೆಲೆಯಲ್ಲಿ ಪುರಂದರದಾಸರ ಯುಗವನ್ನು ಪ್ರಥಮ ಘಟ್ಟವೆಂತಲೂ ವಿಜಯದಾಸರ ಯುಗವನ್ನು ದ್ವಿತೀಯ ಘಟ್ಟ ಎಂತಲೂ ಅನಂತರದ ಪ್ರಾಣೇಶದಾಸರ ಯುಗವನ್ನು ತೃತೀಯ ಘಟ್ಟವೆಂದೂ ವರ್ಗೀಕರಿಸುತ್ತಾರೆ.

ಕೆಲವರು ದಾಸಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಹನ್ನೆರಡನೆಯ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ ಬೆಳೆದು ಬಂದ ಸಾಹಿತ್ಯವನ್ನು ನರಹರಿತೀರ್ಥರಿಂದ ಪುರಂದರ, ಕನಕದಾಸರ ಜೀವಿತ ಕಾಲದವರೆಗಿನ ಅವಧಿಯನ್ನು ಒಂದು ಘಟ್ಟವೆಂದೂ ? ಮುಂದೆ ವಿಜಯದಾಸರು ಹಾಗೂ ತರುವಾಯದ ಅವಧಿಯನ್ನು ಇನ್ನೊಂದು ಘಟ್ಟವೆಂದೂ ಪರಿಗಣಿಸುತ್ತಾರೆ. ಹೀಗೆ ಎರಡೇ ಪ್ರಧಾನ ಘಟ್ಟಗಳಾಗಿ ಎಣಿಸುವುದರಲ್ಲಿ ಸೌಲಭ್ಯವೂ ಚಾತುರ್ಯವೂ ಇದೆ. ಈ ಅವಧಿಗಳು ನರಹರಿತೀರ್ಥರ ಮತ್ತು ಶ್ರೀಪಾದರಾಯರ ನಡುವಣ ಹಾಗು ಪುರಂದರ ಮತ್ತು ವಿಜಯದಾಸರ ನಡುವಿನ ಅಜ್ಞಾತ ಕಾಲಗಳೆರಡನ್ನೂ ಒಳಗೊಳ್ಳುತ್ತದೆ ಎಂದು ವರ್ಗೀಕರಿಸಿದ್ದಾರೆ. ಹರಿದಾಸ ಸಾಹಿತ್ಯವನ್ನು

ಆರ್.ಎಸ್. ಪಂಚಮುಖಿಯವರು ನಾಲ್ಕು ಮೆಟ್ಟಿಲುಗಳಾಗಿ ವರ್ಗೀಕರಿಸಿರುವುದನ್ನು ಪುನರ್ ವಿಮರ್ಶಿಸುತ್ತಾ ಡಾ॥ ಜಿ. ವರದರಾಜರಾವ್ ಅವರು 'ಶ್ರೀಪಾದರಾಜರ ಪರಂಪರೆಯಲ್ಲಿ ನೆರವೇರಿದ ಮಹತ್ಕಾರ್ಯ ಹರಿದಾಸ ಸಾಹಿತ್ಯದ ಪರ್ವಯುಗ ಮಾತ್ರವಲ್ಲದೆ ಸುವರ್ಣಯುಗವೂ ಆಗಿರುವುದು ಆ ಕಾಲದಲ್ಲಿ ರಚಿತವಾದ ಕೃತಿಗಳ ಮೂಲಕ ವೇದ್ಯವಾಗುತ್ತದೆ. ಆದಕಾರಣ ಈ ಅವಧಿಯನ್ನು ಹರಿದಾಸರ ಸಾಹಿತ್ಯ ಸುವರ್ಣಯುಗವೆಂದು ಕರೆಯಬಹುದು. ವಿಜಯನಗರದ ಉನ್ನತಿ ಅವನತಿಗಳಿಂದ ಹರಿದಾಸ ಸಾಹಿತ್ಯವೂ ಉನ್ನತವಾಗಿ ಬೆಳಗಿ ಅನಂತರ ಇಳಿಮುಖವಾದಂತೆ ವ್ಯಕ್ತವಾಗುತ್ತದೆ. ಕೆಲಕಾಲದವರೆಗೆ ಗುಪ್ತಗಾಮಿನಿಯಾಗಿದ್ದ ಈ ಹರಿದಾಸ ಸಾಹಿತ್ಯವಾಹಿನಿ ವಿಜಯದಾಸರ ಪ್ರವೇಶದಿಂದ ಪುನಃ ಚೇತರಿಸಿಕೊಂಡು ಪರಿಪುಷ್ಟವಾಗಿ ಪ್ರಕಾಶಿಸುವುದನ್ನು ನಾವು ಸ್ಪಷ್ಟವಾಗಿ ಕಾಣಬಹುದು' ಎಂದಿದ್ದಾರೆ. ಆದ್ದರಿಂದ ಈ ಉತ್ತರಾವಧಿಯನ್ನು ಹರಿದಾಸಸಾಹಿತ್ಯದ ಪುನರುಜ್ಜೀವನ ಯುಗವೆಂದು ಪರಿಗಣಿಸುವುದು ಸೂಕ್ತವೆನ್ನಿಸುತ್ತದೆ. ಹೀಗೆ ದಾಸಸಾಹಿತ್ಯದ ಪ್ರಥಮ ದ್ವಿತೀಯ ಘಟ್ಟಗಳನ್ನೇ ವರದರಾಜರಾವ್ ಅವರು ಸುವರ್ಣಯುಗ, ಪುನರುಜ್ಜೀವನಯುಗಗಳೆಂದು ಕರೆದಿರುವುದು ಅರ್ಥಪೂರ್ಣವಾಗಿದೆ.

ಯಾವುದೇ ರೀತಿಯ ವರ್ಗೀಕರಣವಾದರೂ ವಿಜಯದಾಸರ ಯುಗವೆಂದು ಪ್ರತ್ಯೇಕವಾಗಿ ಕಂಡುಬರುತ್ತದೆ ಎಂಬುದು ಗಮನಾರ್ಹ. ಎರಡನೇ ಘಟ್ಟ, ಪುನರುಜ್ಜೀವನಯುಗ, ಮೂರನೇ ಮೆಟ್ಟಿಲು ಹೀಗೆ ಏನೇ ಹೆಸರಿನಲ್ಲಿ ಕರೆಯಲಿ ವಿಜಯದಾಸರದೇ ಒಂದು ಮಾರ್ಗ, ಹಂತ, ಘಟ್ಟವಾಗಿದೆ ಎಂಬುದನ್ನು ಗಮನಿಸಬಹುದು.

ಇನ್ನೊಂದು ದೃಷ್ಟಿಯಿಂದಲೂ ಶ್ರೀ ವಿಜಯದಾಸರಿಗೆ ಮಹತ್ವವಿದೆ.

ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ.
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ ॥

ಇದು ದಾಸಸಾಹಿತ್ಯದ ಸಾಧನೆಗಳ ಹಿನ್ನೆಲೆಗಳ ಹಂತಗಳನ್ನು ಹೇಳುತ್ತವೆ.

ಶ್ರೀಪಾದರಾಜರು ದಾಸಸಾಹಿತ್ಯದ ಹಿರಿಮೆಗೆ ಕನ್ನಡಕ್ಕೆ ಖಚಿತ ಸ್ಥಾನ ದೊರಕಿಸಿ ಕೊಟ್ಟರೆ ವ್ಯಾಸರಾಯರು ಸಂಸ್ಕೃತಕ್ಕೂ ಕನ್ನಡಕ್ಕೂ ಉನ್ನತಿ ತಂದುಕೊಟ್ಟರು. ಪುರಂದರದಾಸರು ಇವನ್ನು ಜನರ ಪಾಲಿಗೆ ಜನಪ್ರಿಯಗೊಳಿಸಿಕೊಟ್ಟರು. ತಾವೇ ದೇವರನಾಮಗಳ ಮೂಲಕ ಕರ್ನಾಟಕ ಸಂಗೀತ ಪದ್ಧತಿಗೆ ಬುನಾದಿ ಹಾಕಿ ದಾಸಸಾಹಿತ್ಯ ಗಂಗೆಯ ಭಗೀರಥರಾದರು. ಇವರೆಲ್ಲರ ಸಾಧನೆ ಕಾಲಗರ್ಭದಲ್ಲಿ ಸೇರುತ್ತಿದ್ದಾಗ ಅದನ್ನು ಪುನರುತ್ಥಾನಗೊಳಿಸಿದವರು ಶ್ರೀ ವಿಜಯದಾಸರು. ಆದ ಕಾರಣ ಈ ನಾಲ್ವರನ್ನು ಕ್ರಮವಾಗಿ ಸ್ಮರಿಸುವ ಪರಂಪರೆಯನ್ನು ಕಾಣುತ್ತೇವೆ.

ವಿಜಯದಾಸರ ವಿಶೇಷ ಕೊಡುಗೆ ಎಂದರೆ ಮೊದಲ ಘಟ್ಟದ ದಾಸವರೇಣ್ಯರನ್ನು, ದಾಸ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿ ಪರಂಪರೆಯನ್ನು ಶಿಷ್ಯವೃಂದದ ಮೂಲಕ ಮುಂದುವರೆಸಿದುದು. ಇಂದು ಕರ್ನಾಟಕದಲ್ಲಿ ಕಾಣುವ ನೂರಾರುಜನ ಹರಿದಾಸರು ಮೂಲತಃ ವಿಜಯದಾಸರ ಮತ್ತು ಶಿಷ್ಯರ ಪರಂಪರೆಗೆ ಸೇರಿದವರು ಎಂಬುದನ್ನು ನೆನಪಿನಲ್ಲಿಡಬೇಕು ೧೯ ಮತ್ತು ೨೦ನೇ ಶತಮಾನದಲ್ಲಿ ಕಂಡುಬರುವ ದಾಸರೆಲ್ಲರೂ ವಿಜಯದಾಸರ ಶಿಷ್ಯಪ್ರಶಿಷ್ಯ ಪರಂಪರೆಯವರೇ ಆಗಿದ್ದಾರೆ. ಇವರಲ್ಲಿ ಹರಿದಾಸಿಯರೂ ಸೇರಿದ್ದಾರೆ.

ಹೀಗೆ ವಿಜಯದಾಸರ ಯುಗ ಹರಿದಾಸ ಸಾಹಿತ್ಯದಲ್ಲಿ ಅವಿಸ್ಮರಣೀಯ ವಾಗಿದ್ದು ವಿಜಯದಾಸರು ಉತ್ತರಕಾಲೀನ ಹರಿದಾಸ ಸಾಹಿತ್ಯದ ಆದ್ಯ ಮಾರ್ಗದರ್ಶಕರಾಗಿದ್ದಾರೆ.

ವಿಜಯದಾಸರು ಪುರಂದರದಾಸರ ಜೀವನವನ್ನು ಕುರಿತು ಹೇಳಿದಂತೆ ವಿಜಯದಾಸರ ಜೀವನವನ್ನು ಶಿಷ್ಯ ಪ್ರಶಿಷ್ಯ ದಾಸರು ಹಾಡಿದ್ದಾರೆ. ಹಾಗಾಗಿ ಸಾಕಷ್ಟು ಮಾಹಿತಿ ಅವರ ಜೀವನದ ಬಗ್ಗೆ ದೊರೆಯುತ್ತದೆ. ಐತಿಹಾಸಿಕ ಸಂಗತಿಗಳ ಜತೆಗೆ ಪರಂಪರಾಗತವಾಗಿ ಬಂದ ನಂಬಿಕೆ ಐತಿಹ್ಯಗಳೂ ಇಲ್ಲಿ ಸೇರಿರುವುದನ್ನು ಮರೆಯಲಾಗದು. ಕೀರ್ತನೆ, ಸುಳಾದಿಗಳಲ್ಲಿ ಸಿಗುವ ವಿಷಯಗಳನ್ನು ಆಧರಿಸಿ ಇತರ ಆಕರಗಳನ್ನು ಗಮನಿಸಿ ಸ್ಥೂಲವಾಗಿ ಶ್ರೀ ವಿಜಯದಾಸರ ಜೀವನವನ್ನು ಇಲ್ಲಿ ನಿರೂಪಿಸಿದೆ.

ಕರ್ನಾಟಕದ ರಾಯಚೂರು ಜಿಲ್ಲೆಯ ಮಾನವಿ ಬಳಿಯಲ್ಲಿ ಚೀಕಲ ಪರವಿ ಗ್ರಾಮ ಐತಿಹಾಸಿಕ ಮಹತ್ವ ಪಡೆದ ಸ್ಥಳವಾಗಿದೆ. ಶ್ರೀಪಾದರಾಜರು ದೇಶಸಂಚಾರದ ಕಾಲದಲ್ಲಿ ಈ ಗ್ರಾಮಕ್ಕೆ ಬಂದವರು ಅಶ್ವತ್ಥವೃಕ್ಷ ಬೆಳಸಿ ಕಟ್ಟೆ ಕಟ್ಟಿ ಆ ವೃಕ್ಷದಡಿಯಲ್ಲಿ ಲಕ್ಷ್ಮೀನರಸಿಂಹದೇವರನ್ನು ಪ್ರತಿಷ್ಠಾಪಿಸಿ ಪುಣ್ಯಕ್ಷೇತ್ರವಾಗಿಸಿದರು. ಈ ಗ್ರಾಮದಲ್ಲಿ ಭಾರದ್ವಾಜ ಗೋತ್ರದ ಋಕ್‌ಶಾಖೆಗೆ ಸೇರಿದ ಬ್ರಾಹ್ಮಣ ಮನೆತನದ ಬಡ ದಂಪತಿಗಳು ಕಷ್ಟದಿಂದ ಬಾಳುವೆ ಮಾಡುತ್ತಿದ್ದರು. ಶ್ರೀನಿವಾಸಪ್ಪ–ಕೂಸಮ್ಮ ಆ ದಂಪತಿಗಳ ಹೆಸರು. ದೈವಭಕ್ತರಾದ ಇವರು ಶ್ರೀಪಾದರಾಜರಿಂದ ಸ್ಥಾಪಿತವಾದ ಲಕ್ಷ್ಮೀನರಸಿಂಹನನ್ನು ಆರಾಧಿಸುತ್ತಿದ್ದರು. ಇವರಿಗೆ ಮೂರು ಜನ ಮಕ್ಕಳಾದರು. ಇದರಲ್ಲಿ ಹಿರಿಯವನೇ ದಾಸಪ್ಪ. ಇವರೇ ಮುಂದೆ ವಿಜಯದಾಸರೆಂದು ಪ್ರಸಿದ್ಧರಾದವರು. ದಾಸಪ್ಪ ಜನಿಸಿದ್ದು ಶಾಲಿವಾಹನ ಶಕ ೧೬೦೪ (ಕ್ರಿ. ಶ. ೧೬೮೨) ದುಂದುಭಿ ಸಂವತ್ಸರದಲ್ಲಿ. ಮಕ್ಕಳ ಸಂಪತ್ತು ದೊರೆತರೂ ಧನಧಾನ್ಯ ಸಂಪತ್ತು ದೊರೆಯಲಿಲ್ಲ. ಬಡತನದಲ್ಲೇ ಬಾಳ್ವೆ ಸಾಗಿತು. ಬುದ್ಧಿವಂತ ಬಾಲಕನಾಗಿ ಬೆಳೆದರೂ ದಾಸಪ್ಪನನ್ನು ಊರಿನವರು ಕೂಸೀಮಗ ದಾಸನೆಂದು ತಿರಸ್ಕಾರದಿಂದ ಕಾಣುತ್ತಿದ್ದರು. ಬಾಲ್ಯದಲ್ಲಿ ವಿಜಯದಾಸರು ದಾಸಪ್ಪನಾಗಿದ್ದಾಗ ಇದ್ದ ಬಡತನವನ್ನು ಜ್ಞಾಪಿಸಿಕೊಳ್ಳುತ್ತಾ 'ಸಂಜೆತನಕ ಇದ್ದು ಸಣ್ಣ ಸವುಟು ತುಂಬ ಗಂಜಿ ಕಾಣದಲೆ ಬಳಲಿದೆನೊ' ಎಂದಿದ್ದಾರೆ.

ಬಡತನದಲ್ಲಿದ್ದರೂ ಕಾಲಕಾಲಕ್ಕೆ ನಡೆಯಬೇಕಾದ್ದ ಅಕ್ಷರಾಭ್ಯಾಸ ಉಪನಯನ, ವಿವಾಹಗಳನ್ನು ತಂದೆ ತಾಯಿಯರು ನಿಲ್ಲಿಸಲಿಲ್ಲ. ಆ ಕಾಲದ ಸಂಪ್ರದಾಯಾನುಸಾರ ಅರಳಮ್ಮ ಎಂಬ ಕನ್ಯೆಯನ್ನು ತಂದು ದಾಸಪ್ಪನಿಗೆ ಮದುವೆಮಾಡಿ ಗೃಹಸ್ಥಪಟ್ಟ ಕಟ್ಟಿದರು. ಕೆಲವು ಕಾಲಾನಂತರ ಸಂಸಾರದ ತಾಪತ್ರಯವನ್ನು ತಾಳಲಾರದೆಯೊ, ಬಂಧುವರ್ಗದವರಿಂದ ಆಗುತ್ತಿದ್ದ ತಿರಸ್ಕಾರವನ್ನು ಸಹಿಸಲಾಗದೆಯೋ, ತನ್ನಿಂದ ಕುಟುಂಬ ರಕ್ಷಣೆ ಮಾಡಲಾಗದ ವ್ಯಥೆಯ ಕಾರಣದಿಂದಲೋ, ಬೇಸರ ಹೊಂದಿ ಯಾರಿಗೂ ತಿಳಿಸದೆ ದಾಸಪ್ಪನು ತನ್ನ ಹದಿನಾರನೆಯ ವಯಸ್ಸಿನಲ್ಲಿ ಮನೆಬಿಟ್ಟು ಹೊರಟನು. ಸಂಚಾರದ ಕಾಲದಲ್ಲಿ ಹತ್ತಿರವಿದ್ದ ಬಟ್ಟೆ ಬರೆ, ಬುತ್ತಿ ಎಲ್ಲವನ್ನು ಕಳ್ಳರು ಅಪಹರಿಸಿದರು. ಇದರಿಂದ ಇನ್ನಷ್ಟು ವೈರಾಗ್ಯ ತಾಳಿ ಸಂಚಾರವನ್ನು ಮುಂದುವರೆಸಿದಾಗ ಮಾರ್ಗಮಧ್ಯದಲ್ಲಿ

ಬಾವಾಜಿ ಸಂನ್ಯಾಸಿಗಳ ಗುಂಪನ್ನು ಸೇರಿ ಅವರಂತೆಯೆ ಆಚಾರ ವ್ಯವಹಾರಗಳನ್ನು ಅನುಸರಿಸುತ್ತಾ ಅನೇಕ ಯಾತ್ರಾ ಕ್ಷೇತ್ರಗಳನ್ನು ದರ್ಶಿಸುತ್ತಾ ಕಾಶೀಯಾತ್ರೆ ಮುಗಿಸಿ ರಾಮೇಶ್ವರ ಯಾತ್ರೆಗಾಗಿ ದಕ್ಷಿಣದತ್ತ ಬರುವಾಗ ಸುಮಾರು ನಾಲ್ಕು ವರ್ಷಗಳನಂತರ ತನ್ನ ೨೦ನೆಯ ವಯಸ್ಸಿನಲ್ಲಿ ಚೀಕಲಪರಿವಿಗೆ ಬಂದಾಗ ಅವನನ್ನು ಕುಟುಂಬದವರು ಗುರುತಿಸಿದರು ಮತ್ತೆ 'ಕಟ್ಟೆಕಲ್ಲು ಕಟ್ಟೆಗೆ ಕೂತಿತು' ಎಂಬಂತೆ ದಾಸಪ್ಪ ಗೃಹಸ್ಥಜೀವನಕ್ಕೆ ಮರಳಿದನು.

ದೇಶಸಂಚಾರ ಮಾಡಿ ಬಂದುದರಿಂದ ಸಾಕಷ್ಟು ಲೋಕಾನುಭವ ಉಂಟಾಗಿತ್ತು. ಜೀವನದಲ್ಲಿ ಕಷ್ಟ ಎಲ್ಲರಿಗೂ ಇದ್ದದ್ದೇ. ಅದನ್ನು ದಿಟ್ಟವಾಗಿ ಎದುರಿಸಬೇಕೇ ಹೊರತು ಅಂಜಿ ಹಿಂಜರಿಯಬಾರದು ಎಂಬ ಪಾಠ ಕಲಿತಿದ್ದನು. ಮತ್ತೆ ಧರ್ಮಿಷ್ಠನಾಗಿ ಬಾಳುವೆಗೆ ತೊಡಗಿದನು. ದೈವಕೃಪೆಯಿಂದ ಹದಿನೆಂಟು ಗ್ರಾಮಗಳ ಶಾನುಭೋಗಿಕೆ ದೊರೆತಿದ್ದರಿಂದ ಸ್ವಲ್ಪ ಮಟ್ಟಿಗೆ ಅನ್ನ ಬಟ್ಟೆಗೆ ನೆರವು ಸಿಕ್ಕಿ ಸಂಸಾರದಲ್ಲಿ ಸ್ವಲ್ಪ ನೆಮ್ಮದಿ ಸಿಗುವಂತಾಯಿತು. ಚಕ್ರದ ಅರೆಗಳ ಏಳುಬೀಳಿನ ಹಾಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು ಎನ್ನುವ ವೇಳೆಗೆ ಮತ್ತೆ ಬಿಗಡಾಯಿಸುವ ಸ್ಥಿತಿ ಬಂದಿತು. ತಂದೆ ನಿಧನರಾಗಿ ಜವಾಬ್ದಾರಿ ಹೆಚ್ಚಿ ಯಾವುದೋ ಕಾರಣದಿಂದ ಹಣದ ಲೆಕ್ಕ ತಪ್ಪಿ ಸರ್ಕಾರಕ್ಕೆ ಹಣ ಕೊಡಬೇಕಾದ ಪರಿಸ್ಥಿತಿ ಬಂದಿತು. ಹಣವಿಲ್ಲದೆ ಮನಸ್ಸು ಅಶಾಂತವಾಯಿತು. ಅಪವಾದ, ಅವಮಾನ, ಆರ್ಥಿಕಸಂಕಷ್ಟ ಮತ್ತೆ ಉಂಟಾಗಿ ಜೀವನದಲ್ಲಿ ತಂದುಕೊಂಡಿದ್ದ ಧೈರ್ಯ ಸ್ಥೈರ್ಯ ಕುಂಟಿತು. ಕಂಗಾಲಾದ ದಾಸಪ್ಪ ಸಂಸಾರ ತೊರೆದು ಮತ್ತೆ ಕಾಶಿಯತ್ತ ಹೊರಟನು.

ಕ್ರಿ. ಶ. ೧೭೧೪ರಲ್ಲಿ ದಾಸಪ್ಪ ತನ್ನ ೩೨ನೆಯ ವಯಸ್ಸಿನಲ್ಲಿ ಕಾಶಿಯಾತ್ರೆ ಹೊರಟಾಗ ಯಥಾಪ್ರಕಾರ ಇದ್ದಬದ್ದುದನ್ನೆಲ್ಲ ಕಳೆದುಕೊಂಡು ಕಾಶಿ ಸೇರಿ ಗಂಗೆಯಲ್ಲಿ ಮುಳುಗಿದನು. ಗಯೆಯಲ್ಲಿ ಪಿಂಡವನಿತ್ತು ಮರಳಿದನು. ಗಂಗಾನದಿಯ ದಡದಲ್ಲಿ ದಿನವೂ ಸ್ನಾನ, ವಿಶ್ವೇಶ್ವರನ ಧ್ಯಾನದಲ್ಲಿ ಕಾಲ ಕಳೆಯತೊಡಗಿದನು. ಈಗ ಸಾಕಷ್ಟು ಭಕ್ತನ ಲಕ್ಷಣಗಳನ್ನು ಹೊಂದಿದ್ದನು. ಸಜ್ಜನಸಂಗ, ಸದಾಚಾರ, ವಿಷಯ ವಿರಕ್ತಿ, ಗುರುಹಿರಿಯರಲ್ಲಿ ಭಕ್ತಿ, ಭಗವಂತನಲ್ಲಿ

ಅನುರಕ್ತಿ ಇಂಥ ಗುಣಗಳಿರುವ ಭಕ್ತರಿಗೆ ತತ್ತ್ವಾಭಿಮಾನಿ ದೇವತೆಗಳು ಪ್ರಸನ್ನರಾಗುತ್ತಾರಂತೆ. ಪ್ರಾಣದೇವರು ಕೃಪೆದೋರಿ ಶ್ರೀ ಹರಿಯ ಒಲುಮೆ ದೊರೆಯುವ ಪಕ್ವತೆಗೆ ಭಕ್ತ ಬಂದಿರುತ್ತಾನೆ. ದಾಸಪ್ಪ ಅಂತಹ ಸ್ಥಿತಿಯನ್ನು ತಲುಪಿದ್ದನು.

ಒಂದು ದಿನ ಕಾಶಿಯಲ್ಲಿ ಗಂಗಾನದಿ ತೀರದ ಮಣಿಕರ್ಣಿಕಾ ಘಾಟಿನಲ್ಲಿ ಮಲಗಿದ್ದಾಗ ಅದ್ಭುತ ಸ್ವಪ್ನವೊಂದು ದಾಸಪ್ಪನಿಗೆ ಕಾಣಿಸಿತು. ಸ್ವಪ್ನದಲ್ಲಿ ಪುರಂದರದಾಸರೇ ಸಾಕ್ಷಾತ್ತಾಗಿ ಬಂದು ದಾಸಪ್ಪನ ಕೈಹಿಡಿದುಕೊಂಡು ಏಳಿಸಿ ವ್ಯಾಸಕಾಶಿಗೆ ಕರೆದೊಯ್ದು ಅಲ್ಲಿ ವೇದವ್ಯಾಸರ ದರ್ಶನ ಮಾಡಿಸಿ, ಮಧ್ವಶಾಸ್ತ್ರದ ತತ್ತ್ವೋಪದೇಶ ಕೇಳಿಸಿದಾಗ ವೇದವ್ಯಾಸರ ಅನುಗ್ರಹ ಆದಮೇಲೆ ಪುರಂದರದಾಸರು ದಾಸಪ್ಪನ ಬಾಯಿ ತೆಗೆಸಿ ನಾಲಿಗೆ ಮೇಲೆ ವಿಜಯವಿಠ್ಠಲ ಬೀಜಾಕ್ಷರಗಳನ್ನು ಬರೆದು ಅಂಕಿತ ಪ್ರದಾನ ಮಾಡಿದರು. ತಂಬೂರಿ, ತಾಳ ಗೆಜ್ಜೆಗಳನ್ನು ನೀಡಿ ಆಶೀರ್ವದಿಸಿದರು. ದಾಸಪ್ಪನ ಮನಸ್ಸಿನಲ್ಲಿದ್ದ ಅಶಾಂತಿ, ಆತಂಕ, ಚಿಂತೆ, ಕಳವಳಗಳೆಲ್ಲ ತೊಲಗಿ ಉತ್ಸಾಹ ತುಂಬಿತು, ಸ್ಫೂರ್ತಿ ಉಕ್ಕಿತು. ಭಕ್ತಿ ಜ್ಞಾನ ವೈರಾಗ್ಯಗಳು ಮೈಗೂಡಿದವು. ಕಾಲಲ್ಲಿ ಗೆಜ್ಜೆಯನಾದ ಹೊಮ್ಮಿ, ಕೈಯಲ್ಲಿ ತಾಳ ತಟ್ಟಿ ಬೆರಳಲ್ಲಿ ತಂಬೂರಿ ಮೀಟಿ ಬಾಯಲ್ಲಿ ಶ್ರೀಹರಿಗಾನ ಚಿಮ್ಮಿ ದಾಸಪ್ಪ ವಿಜಯದಾಸರಾದರು. "ಅಂತರಂಗದ ಕದವು ತೆರೆಯಿತಿಂದು ಎಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ" ಎಂದು ಹಾಡುತ್ತಾ ಕಮಲಜಾದಿಗಳಿಂದ ತುತಿಸಿಕೊಳ್ಳುತ ಹೃದಯಕಮಲದೊಳಗಿರುವ ಶ್ರೀ ವಿಜಯವಿಠ್ಠಲನ ಕಂಡೆ ಎಂದು ನಲಿದಾಡಿದರು.

ಪುರಂದರದಾಸರಿಗೂ ವಿಜಯದಾಸರಿಗೂ ಜನ್ಮಾಂತರದ ಬಾಂಧವ್ಯ-ತಂದೆ ಮಕ್ಕಳ ಸಂಬಂಧವಿದೆಯೆಂಬ ನಂಬಿಕೆ ಬೆಳೆದು ಬಂದಿದೆ. ವಿಜಯದಾಸರನ್ನು ಅವತಾರಪುರುಷರೆಂದೇ ಭಕ್ತರು ಭಾವಿಸುತ್ತಾರೆ. ವಿಜಯದಾಸರ ಮತ್ತು ಅವರ ಶಿಷ್ಯಪ್ರಶಿಷ್ಯರ ಸುಳಾದಿ ಕೀರ್ತನೆಗಳಲ್ಲಿ ಈ ಬಗೆಗೆ ಉಲ್ಲೇಖಗಳು ಸಿಗುತ್ತವೆ. ಇದರ ಪ್ರಕಾರ ತ್ರೇತಾಯುಗದಲ್ಲಿ ಸುರಲೀಲ

ಎಂಬ ವಾನರಜನ್ಮ ಕಳೆದು ಯಾದವನಾಗಿ ಜನಿಸಿ ಶ್ರೀ ಕೃಷ್ಣನ ಸೇವೆಮಾಡಿ ಕಲಿಯುಗದಲ್ಲಿ ಪುರಂದರದಾಸರ ಮನೆಯಲ್ಲಿ ತುರುಕರುವಾಗಿ ಅನಂತರ ಮಧ್ವಪತಿದಾಸರಾಗಿ ಆಮೇಲೆ ವಿಜಯದಾಸರಾದರೆಂದು ಹೇಳಲಾಗಿದೆ. ಅಲ್ಲದೆ ಬ್ರಹ್ಮಪುತ್ರರಾದ ಶ್ರೀ ಭೃಗುಮಹರ್ಷಿ ಅವತಾರವೇ ವಿಜಯದಾಸರೆಂದು ನಾರದರ ಅವತಾರವೇ ಪುರಂದರದಾಸರೆಂದು ದಾಸಶ್ರೇಷ್ಠರೆಲ್ಲ ತಮ್ಮ ಕೀರ್ತನೆಗಳಲ್ಲಿ ಪದಪದ್ಯಗಳಲ್ಲಿ ಕೀರ್ತಿಸಿದ್ದಾರೆ. ವಿಜಯದಾಸರು ಶ್ರೀಶಾಪರೋಕ್ಷಿದಾಸರೆಂದು ಸಾರಿದ್ದಾರೆ.

ವಿಜಯದಾಸರಿಗೆ ಗುರುಕರುಣ ದೊರೆತ ಮೇಲೆ ಬೇಡ ಬೇಡವೆಂದರೂ ಅಪಾರ ಐಶ್ವರ್ಯ, ಮೇಣೆ, ಆನೆ, ಕುದುರೆ, ತುರು, ಕರು, ಪರಿಚಾರಕವರ್ಗ ಎಲ್ಲವೂ ದಾಸರಲ್ಲಿ ಮೇಳವಿಸಿತು. ತಮಗೆ ಬಂದುದ್ದನ್ನೆಲ್ಲ ಭಕ್ತರ ಕಷ್ಟ ನಿವಾರಣಕ್ಕೆ ಇಷ್ಟಪೂರಣಕ್ಕೆ ಕೃಷ್ಣಾರ್ಪಣವೆನ್ನುತ್ತ ಕೆರೆಯ ನೀರನ್ನು ಕೆರೆಗೆ ಚೆಲ್ಲಿದರು. ದಾಸರು ದಾಸರಾಗಿ ಉಳಿದರು, ಮುಂದಕ್ಕೆ ಹೊರಟರು. ವಿಜಯಯಾತ್ರೆ ಸಾಗಿತು, ಹೋದಲ್ಲೆಲ್ಲ ಜನ ದಾಸರ ಭಕ್ತಿಗಾಯನಕ್ಕೆ ದಿವ್ಯತೇಜಕ್ಕೆ ಅದ್ಭುತಾನುಗ್ರಹಕ್ಕೆ ಒಲಿದು ಬೆರಗಾದರು ಶರಣಾದರು. ದಾಸರ ದಾಸರಾದರು. ದಾಸರ ಶಿಷ್ಯವೃಂದ ಹೆಚ್ಚತೊಡಗಿತು. ದಾಸರ ಶಿಷ್ಯರೆಷ್ಟು ಎಂಬುದು ಖಚಿತವಿಲ್ಲ. ಗೋಪಾಲದಾಸರು 'ಪ್ರತ್ಯಕ್ಷವಾಗಿ ಹತ್ತಿಪ್ಪತ್ತು ಜನರಿಗೆ ತತ್ತ್ವೋಪದೇಶ ಮಾಡಿ ವಿಜಯರಾಯ'.......... ಎನ್ನುತ್ತಾರೆ. ಹತ್ತಿಪ್ಪತ್ತು ಎಂಬ ಪದವನ್ನು ಕೆಲವರು ೩೦ ಜನರೆಂದು ಅರ್ಥೈಸಿದ್ದರೆ ಮತ್ತೆ ಕೆಲವರು ೨೦ಜನರೆಂದು ಅರ್ಥೈಸಿದ್ದಾರೆ. ಹೊನ್ನಾಳಿ ವೆಂಕಟದಾಸರು ಆರುಮೂರೆರಡೊಂದು ಜನರು ಎಂದರೆ ೩೭ ಜನವೆಂದು ತಮ್ಮ ಪದವೊಂದರಲ್ಲಿ ಹೇಳಿದ್ದಾರೆ. ಒಟ್ಟಿನಲ್ಲಿ ಸಾಕಷ್ಟು ಶಿಷ್ಯವರ್ಗ ದಾಸರಿಗಿತ್ತು ಎಂದು ತಿಳಿಯುತ್ತದೆ. ಇವರಲ್ಲಿ ಪ್ರಸಿದ್ಧರಾಗಿ ವಿಜಯದಾಸರಿಗೆ ತಕ್ಕ ಶಿಷ್ಯರೆನ್ನಿಸಿಕೊಂಡವರು ಕೆಲವರೇ. ಆ ಪೈಕಿ ಗೋಪಾಲದಾಸರು (ಭಾಗಣ್ಣ), ವೇಣುಗೋಪಾಲದಾಸರು (ಪಂಗನಾಮ ತಿಮ್ಮಣ್ಣದಾಸರು), ಮೋಹನದಾಸರು ಪ್ರಸಿದ್ಧರು.

ರಾಯಚೂರು ಜಿಲ್ಲೆಯ ಮೊಸರುಕಲ್ ಎಂಬಲ್ಲಿ ಜನಿಸಿದ ಭಾಗಣ್ಣ ಬಾಲ್ಯದಲ್ಲಿ ಬಡತನವನ್ನೇ ಹಾಸಿ ಹೊದ್ದು ಬೆಳೆದನು. ಉಪನಯನವಾದಾಗ ಉಪದೇಶ ಮಾಡಿದ ಗಾಯತ್ರಿಯ ಮಂತ್ರವನ್ನು ಎರಡು ವರ್ಷ ಅಖಂಡವಾಗಿ ಪುನಶ್ಚರಣ ಮಾಡಿ ಸಿದ್ಧಿ ಪಡೆದನು. ಇದರ ಪರಿಣಾಮವಾಗಿ ನುಡಿದಿದ್ದೆಲ್ಲ ಸತ್ಯ, ಉಪದೇಶಿಸಿದ್ದೆಲ್ಲ ಪಥ್ಯ ಎಂಬಂತೆ ವಾಕ್ಸಿದ್ಧಿ ಉಂಟಾಗಿ ಜನರಿಗೆ ತ್ರಿಕಾಲ ಸಂಗತಿಗಳನ್ನು ಭವಿಷ್ಯ ಹೇಳತೊಡಗಿದನು. ಪರಿಣಾಮವಾಗಿ ಜನಜಾತ್ರೆ ಸೇರಿ ಧನಕನಕರಾಶಿ ಸುರಿಯಿತು. ಕೀರ್ತಿ ಹಬ್ಬಿತು. ತಾಯಿ ತಮ್ಮಂದಿರೊಡನೆ ಜೀವನ ಸಾಗಿಸುತ್ತಾ ಈ ಮಧ್ಯೆ 'ವೆಂಕಟಕೃಷ್ಣ'ಮುದ್ರಿಕೆಯಿಂದ ಅನೇಕ ದೇವರನಾಮಗಳನ್ನು ರಚಿಸುತ್ತಾ ಇರಲಾಗಿ ಸುದ್ದಿ ವಿಜಯದಾಸರ ಕಿವಿಗೆ ಬಿತ್ತು. ಭಾಗಣ್ಣ ತನ್ನ ಪೂರ್ವಜನ್ಮದ ಮತ್ತು ಈ ಜನ್ಮದ ಸುಕೃತವನ್ನು ಲೌಕಿಕ ಧನಕ್ಕೆ ಮಾರುತ್ತಿದ್ದಾನೆಂದು ಅರಿತರು.

ಭಾಗಣ್ಣನ ಬಳಿ ಬಂದ ವಿಜಯದಾಸರು ಇದೇನು ಅಂಗಡಿ ಇಟ್ಟುಕೊಂಡು ಪುಣ್ಯದ ಮಾರಾಟ ಮಾಡುತ್ತಿರುವೆ ಸಾಕುಮಾಡು ಎಂದರು. ಆ ಮಾತು ಕೇಳಿ ಭಾಗಣ್ಣನಿಗೆ ಜ್ಞಾನೋದಯವಾಯಿತು. 'ಕ್ಷಮಿಸಿ ಅಪರಾಧವಾಯಿತು. ಇದೀಗ ನನ್ನ ಕಣ್ಣು ತೆರೆಯಿತು. ಮುಂದಿನ ದಾರಿ ತೋರಿಸಿ' ಎಂದು ಶರಣಾದನು. ಆಗ ಭಾಗಣ್ಣನಿಗೆ ಗೋಪಾಲವಿಠ್ಠಲನೆಂದು ಅಂಕಿತನೀಡಿ ಉಪದೇಶ ಮಾಡಿ ಶಿಷ್ಯನಾಗಿ ಸ್ವೀಕರಿಸಿದರು. ಗೋಪಾಲದಾಸರೇ ವಿಜಯದಾಸರ ಮೊದಲ ಶಿಷ್ಯರಾದರು. ಗೋಪಾಲದಾಸರಿಗೆ ನೀಡಿದ ಅಂಕಿತಪದದಲ್ಲಿ "ಇವನನ್ನು ನಿನ್ನ ಅಚ್ಚಿನ್ನದಾಸರಲ್ಲಿರಿಸು ಗೋಪಾಲವಿಠ್ಠಲ ನಿನ್ನ ಪೂಜೆ ಮಾಡುವೆನೊ ಕಾಪಾಡು ಈ ಮಾತನು ನೀ ಪ್ರೀತಿಯನು ಮಾಡಿ ನಿಜದಾಸರೊಳಗಿಡು" ಎಂದು ವಿಜಯದಾಸರು ಬೇಡಿಕೊಂಡಿದ್ದಾರೆ. "ಅಂಕಿತವ ನಾನಿತ್ತೆ ನಿನ್ನ ಪ್ರೇರಣೆಯಿಂದ" ಎಂದು ಹೇಳಿ ಭಾಗಣ್ಣನಿಗಾಗಿ "ಕಿಂಕರರಿಗೆ ಲೌಕಿಕದ ಡೊಂಕನಡತಿಯ ಬಿಡಿಸಿ, ಜನುಮ ಜನುಮದಲ್ಲಿ ಪಂಕನಿಕರವ ತೊಲಗಿಸಿ ಶಂಕೆ ಪುಟ್ಟದಂತೆ ಕಾವ್ಯಗಳ ಪೇಳಿಪುದು" ಎಂದಿದ್ದಾರೆ. ವೆಂಕಟಕೃಷ್ಣ ಅಂಕಿತದಲ್ಲಿ ಪದ ರಚನೆ ಮಾಡುತ್ತಿದ್ದ

ಭಾಗಣ್ಣನ ಕಾವ್ಯ ಶಕ್ತಿಯನ್ನು ನೆನೆದು ಕಾವ್ಯಗಳ ಪೇಳಿಪುದು ಎಂದಿದ್ದಾರೆ. ದಾಸರ ಸಹೃದಯತೆ ಎಷ್ಟು ಅಮೋಘವಾದುದು!

ವಿಜಯದಾಸರ ಮತ್ತೊಬ್ಬ ಪ್ರಸಿದ್ಧ ಶಿಷ್ಯರು ದಿವಾನ್ ತಿಮ್ಮಣ್ಣನವರು. ಆದವಾನಿಯ ನವಾಬ ಬಸಾಲತ್ ಜಂಗ್ ಎಂಬ ಸರದಾರನಲ್ಲಿ ದಿವಾನ ರಾಗಿದ್ದವರು ತಿಮ್ಮಣ್ಣನವರು. ಭಾಗಣ್ಣನವರು ಭವಿಷ್ಯ ಹೇಳಿ ಪ್ರಸಿದ್ಧರಾದಾಗ ಅವರ ಬಳಿ ಕೈಂಕರ್ಯಗೊಂಡು ಇದ್ದರು. ವಿಜಯದಾಸರ ಮಹಿಮೆಯನ್ನು ಕಂಡು ಬೆರಗಾದ ತಿಮ್ಮಣ್ಣನವರು ವಿಜಯದಾಸರ ಅನುಗ್ರಹಕ್ಕಾಗಿ ಕಾತರಿಸುತ್ತಿದ್ದರು. ಹೀಗಿರಲು ಒಮ್ಮೆ ವಿಜಯದಾಸರ ದರುಶನವಾದಾಗ ದಾಸರು ಏನು ಪಂಗನಾಮದ ತಿಮ್ಮಣ್ಣನವರೆ ಕ್ಷೇಮವೇ ಎಂದಾಗ ತಿಮ್ಮಣ್ಣನವರಿಗೆ ಜನ್ಮಾಂತರದ ಸ್ಮೃತಿ ಉದ್ಬೋಧಗೊಂಡು ಹಿಂದಿನ ಜನ್ಮದಲ್ಲಿ ಶ್ರೀವೈಷ್ಣವಕುಲದ ಬೇಲೂರು ವೈಕುಂಠದಾಸರಾಗಿದ್ದುದು ಸ್ಮರಣೆಗೆ ಬಂತು. ಕಾಲಕ್ರಮೇಣ ವೇಣುಗೋಪಾಲವಿಠ್ಠಲ ಎಂಬ ಅಂಕಿತವನ್ನು ದಾಸರು ಅವರಿಗೆ ಅನುಗ್ರಹಿಸಿದರು. ಪೂರ್ವಜನ್ಮದ ಹೆಸರಿನಿಂದ ವಿಜಯದಾಸರು ಗುರುತಿಸಿದ್ದರಿಂದ ಅವರು ಪಂಗನಾಮ ತಿಮ್ಮಣ್ಣದಾಸರೆಂದೇ ಪ್ರಖ್ಯಾತಗೊಂಡರು.

ವಿಜಯದಾಸರ ಕೃಪಾಕಟಾಕ್ಷಕ್ಕೆ ಪಾತ್ರರಾದವರಲ್ಲಿ ಇನ್ನೊಬ್ಬ ಪ್ರಸಿದ್ಧ ಶಿಷ್ಯರೆಂದರೆ ಮೋಹನದಾಸರು. ಮೋಹನವಿಠಲ ಅಂಕಿತ ಹೊಂದಿದವರು. ಶ್ರೀ ವಿಜಯದಾಸರು ಪ್ರತಿವರ್ಷವೂ ಹಂಪೆಗೆ ಹೋಗಿ ಪುರಂದರದಾಸರ ಆರಾಧನೆಯನ್ನು ನಡೆಸುತ್ತಿದ್ದರು. ಜ್ಞಾನದಾನ, ಅನ್ನದಾನ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರು. ಆ ಜ್ಞಾನಸತ್ರಕ್ಕೆ ಆನೆಗೊಂದಿಯ ಭೀಮಣ್ಣನಾಯಕನ ಹೆಂಡತಿ ತನ್ನ ಪತಿಯ ಅಣ್ಣತಮ್ಮಂದಿರು ತನ್ನ ಮೇಲೆ ಅಪಕೀರ್ತಿ ಹೊರಿಸಿ ಹೊರಹಾಕಿದ ಫಲವಾಗಿ ದಿಕ್ಕಿಲ್ಲದವಳಾಗಿ ಮೈತುಂಬ ಕಜ್ಜಿ, ಹುರುಕು ತುಂಬಿದ ಮಗುವಿನೊಂದಿಗೆ ಬಂದಿದ್ದಳು. ಜನರಿಂದ ದೂರೀಕರಿಸಿಕೊಂಡ ಅವಳನ್ನು ಅವಳ ಮಗುವನ್ನು ಕರುಣೆಯಿಂದ ನೋಡಿ ಹತ್ತಿರ ಬಂದು ಆಶೀರ್ವದಿಸಿ ವಿಜಯದಾಸರು ಅನುಗ್ರಹ ಮಾಡಿದರು. 'ಚಿರಂಜೀವಿಯಾಗೆಲವೊ ಚಿಣ್ಣ ನೀನು ಹರಿದಾಸ ದಾಸರ

ಪಾದಧೂಳಾಗಿ' ಎಂದು ಹರಸಿದರು. ಆ ಮಗುವನ್ನು ತಾವೇ ಸಾಕಿ ದೊಡ್ಡವನನ್ನಾಗಿ ಮಾಡಿ 'ಮೋಹನವಿಠ್ಠಲ' ಎಂದು ಅಂಕಿತದಾನಮಾಡಿದರು ಆ ಸಾಕುಮಗನೇ ಮೋಹನದಾಸರೆಂದು ಪ್ರಸಿದ್ಧರಾಗಿ ವಿಜಯದಾಸರ ಪರಂಪರೆಯನ್ನು ಮುಂದುವರೆಸಿದವರಲ್ಲಿ ಅಗ್ರಗಣ್ಯರೆನಿಸಿದರು.

ಹೀಗೆ 'ಭಕ್ತಿಯಲ್ಲಿ ಭಾಗಣ್ಣ, ಯುಕ್ತಿಯಲಿ ಮೋಹನ್ನ, ಶಕ್ತಿಯಲ್ಲಿ ತಿಮ್ಮಣ್ಣ' ಎಂಬಂತೆ ಮೂವರು ಪ್ರಸಿದ್ಧ ಶಿಷ್ಯರು ವಿಜಯದಾಸರ ಅನುಗ್ರಹಕ್ಕೆ ಪಾತ್ರರಾಗಿ ಶಿಷ್ಯ ಪರಂಪರೆ ಬೆಳೆಸಿ ಇಂದೂ ದಾಸಸಾಹಿತ್ಯ ಉಳಿಯಲು ಬೆಳೆಯಲು ಕಾರಣಕರ್ತರಾಗಿದ್ದಾರೆ. ಇವರಲ್ಲದೆ ಇನ್ನೂ ಅನೇಕ ಶಿಷ್ಯರು ಇದ್ದು ಅವರಲ್ಲಿ ಇಬ್ಬರು ಶಿಷ್ಯರ ಸಂಗತಿ ಜಗಜ್ಜನಿತವಾಗಿದೆ. ಕಲ್ಲೂರು ಸುಬ್ಬಣ್ಣಾಚಾರ್ಯರು ಆ ಪೈಕಿ ಒಬ್ಬರು. ಇವರು ಪಂಡಿತರಾಗಿದ್ದು ಸುಧಾಪಾಠ ಹೇಳುವಲ್ಲಿ ಸುಧೀರರೆಂದು ತಿಳಿದಿದ್ದರು. ವಿಜಯದಾಸರ ವಿಜಯವೈಭವದ ಬಗ್ಗೆ ಸಹನೆ ಇಲ್ಲದೆ ಕೂಸೀಮಗ ದಾಸನೆಂದು ದಾಸರನ್ನು ಹಂಗಿಸುತ್ತಿದ್ದರು. ಸುಧಾಮಂಗಳಕ್ಕೆ ಅಪೇಕ್ಷೆಪಟ್ಟಾಗ ನಿಮ್ಮಂಥ ದಾಸರಿಗೆ ಸುಧಾ ತಿಳಿಯಲು ಸಾಧ್ಯವೇ, ಇದೇನು ಕನ್ನಡದ ಪದ ಪದ್ಯವೇ ಎಂದು ಹೀಗಳೆದರು. ಆಗ ಅಲ್ಲಿದ್ದ ಪರಿಚಾರಕನೊಬ್ಬನಿಂದ ವಿಜಯದಾಸರು ಸುಧಾವ್ಯಾಖ್ಯಾನ ಮಾಡಿಸಿದಾಗ ಸುಬ್ಬಣ್ಣನವರ ಅಹಂ ಕರಗಿ ಜ್ಞಾನೋದಯವಾಗಿ ದಾಸರಿಗೆ ಶರಣಾದರು. ಆಗ ವಿಜಯದಾಸರು ತಮ್ಮ ಶಿಷ್ಯರಾದ ಪಂಗನಾಮ ತಿಮ್ಮಣ್ಣದಾಸರಿಂದ ಸುಬ್ಬಣ್ಣಾಚಾರ್ಯರಿಗೆ 'ವ್ಯಾಸವಿಠ್ಠಲ' ಎಂಬ ಅಂಕಿತವನ್ನು ಕರುಣಿಸಿದರು. ಇವರು ರಚಿಸಿದ ದೇವರನಾಮಗಳ ಪೈಕಿ 'ವಿಜಯಕವಚ'ವೆಂದು ಪ್ರಸಿದ್ಧವಾದ ಕೀರ್ತನೆ ತುಂಬಾ ಜನಪ್ರಿಯ ಸ್ತೋತ್ರವಾಗಿದೆ. ಈ ಸ್ತೋತ್ರದಲ್ಲಿ ವಿಜಯದಾಸರನ್ನು ಕುರಿತು :

ಸ್ಮರಿಸಿ ಬದುಕಿರೊ ದಿವ್ಯ ಚರಣಕೆರಗಿರೊ
ದುರಿತ ತರಿದು ಪೊರೆವ ವಿಜಯ ಗುರುಗಳೆಂಬರ

ಎಂದು ವ್ಯಾಸವಿಠ್ಠಲರು ಸಾರಿದ್ದಾರೆ.

ಶ್ರೀ ವಿಜಯದಾಸರು ಕಾಶಿಯಿಂದ ರಾಮೇಶ್ವರದವರೆಗಿನ ಎಲ್ಲಾ ತೀರ್ಥಕ್ಷೇತ್ರಗಳನ್ನು ಅನೇಕ ಬಾರಿ ಸಂದರ್ಶಿಸಿದ್ದಾರೆ. ಹೋದ ಕಡೆಗಳಲ್ಲೆಲ್ಲಾ ಶ್ರೀಹರಿಯ ದರ್ಶನ ಪಡೆದು ಪುನೀತರಾಗಿದ್ದಾರೆ. ಸ್ತೋತ್ರಗೈದು ಧನ್ಯರಾಗಿದ್ದಾರೆ. ಎಷ್ಟೋ ಕಡೆ ಪವಾಡಗಳೆನ್ನಬಹುದಾದ ಘಟನೆಗಳು ಸಂಭವಿಸಿವೆ. ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ. ತಿರುಪತಿ ತಿಮ್ಮಪ್ಪನಲ್ಲಿ ಅಪಾರ ಭಕ್ತಿ ದಾಸರಿಗೆ. ಅಲ್ಲಿಗೆ ಅದೆಷ್ಟೋ ಸಲ ಹೋಗಿ ಬಂದಿದ್ದಾರೆ ಲೆಕ್ಕವಿಲ್ಲ. ಒಮ್ಮೆ ತಿರುಪತಿಗೆ ಬಂದು ದೇವರ ದರ್ಶನಕ್ಕೆ ಪ್ರಯತ್ನಿಸಿದಾಗ ಅಂದು ರಥೋತ್ಸವದ ಪ್ರಯುಕ್ತ ನೂಕುನುಗ್ಗಲು ಹೆಚ್ಚಾಗಿತ್ತು. ಪರಿಚಾರಕರಿಂದ ಬೆನ್ನಿಗೆ ಪೆಟ್ಟು ತಿಂದು ಹಿಂದಕ್ಕೆ ಸರಿಯಬೇಕಾಯಿತು. ಆಗ ಹಾಡಿದ ಕೀರ್ತನೆ ಶ್ರೇಷ್ಠ ನಿಂದಾಸ್ತುತಿಯಾಗಿದೆ. ಭಕ್ತನ ಮೊರೆ ಜತೆಗೆ ಸಾಹಿತ್ಯದ ಸೊಗಸು ಈ ಕೀರ್ತನೆಯಲ್ಲಿ ಅಡಗಿದೆ. ಪ್ರಾರಂಭದ ಪಲ್ಲವಿಯೇ ಚೇತೋಹಾರಿಯಾಗಿದೆ.

ನಿನ್ನ ದರುಶನಕೆ ಬಂದವನಲ್ಲವೊ ಓ ದೇವಾ
ಪುಣ್ಯವಂತರ ದಿವ್ಯ ಚರಣ ನೋಡಲಿ ಬಂದೆ
ಏಕೆಂದರೆ ನೀನು ಭಕ್ತ ಪರಾಧೀನ ಭಕ್ತನೇ ಹೆಚ್ಚು

ಆದ್ದರಿಂದ ಅವರೇ ಪುಣ್ಯವಂತರು ಅವರ ದರ್ಶನಕ್ಕೆ ಬಂದೆ ಎಂದರು. "ಸೊಲ್ಲಿಗೆ ಸ್ತಂಭದಲಿ ತೋರಿದ ಮಹಾಮಹಿಮ ಎಲ್ಲಿಲ್ಲವೊ ನೀನು ! ಬಲ್ಲ ಭಕ್ತರಿಗೆ?"ಎಂದು ಸವಾಲು ಹಾಕಿದ್ದಾರೆ. ಹೀಗೆ ನೇರವಾಗಿ ಭಗವಂತನನ್ನೇ ಉದ್ದೇಶಿಸಿ ಮಾತನಾಡುವಂತೆ ಇರುವ ಈ ಕೀರ್ತನೆ ಎಲ್ಲರ ಮನಸೆಳೆಯುತ್ತದೆ. ವಿಜಯದಾಸರ ಪ್ರತಿಭೆ ಭಕ್ತಿ ಪಾಂಡಿತ್ಯಗಳಿಗೆ ನಿದರ್ಶನವಾಗಿದೆ.

ಬಹುಶಃ ದಾಸರು ತಿರುಪತಿಗೆ ಹೋದಾಗಲೆಲ್ಲ ಒಂದೊಂದು ಘಟನೆ ಸಂಭವಿಸಿರಬೇಕು. ಅವರ ಕೀರ್ತನೆಗಳಲ್ಲಿ ಕೆಲವು ಘಟನೆಗಳ ಉಲ್ಲೇಖವಷ್ಟೆ ಕಂಡುಬರುತ್ತದೆ. ಇನ್ನೊಮ್ಮೆ ರಥೋತ್ಸವದಂದು ಉತ್ಸವ ಹೊರಟಾಗ ಎಲ್ಲರೂ ಹೊರಬಂದು ದೇವಸ್ಥಾನದಲ್ಲಿದ್ದ ಧ್ಯಾನಸ್ಥ ವಿಜಯದಾಸರನ್ನು ಯಾರೂ

ಗಮನಿಸಲೇ ಇಲ್ಲ. ರಥ ಮುಂದೆ ಸಾಗದೇ ಇದ್ದಾಗ ಕೊನೆಗೆ ದಾಸರು ಗುಡಿಯಲ್ಲಿರುವುದನ್ನು ಅರಿತು ಗುಡಿಯ ಅರ್ಚಕರು ಅವರಲ್ಲಿ ಕ್ಷಮೆಯಾಚನೆ ಮಾಡಿದ ಮೇಲೆ ರಥ ಮುಂದಕ್ಕೆ ಸಾಗಿತಂತೆ. ಆಗ ದಾಸರ ಬಾಯಿಂದ, ಅಲ್ಲ ಹೃದಯದಿಂದ ಹೊರಟ ವಾಣಿ ಇದು :

ಸಾಗಿ ಬಾರಯ್ಯ ಭವರೋಗದ ವೈದ್ಯನೆ
ಬಾಗುವೆ ನಿನಗೆ ಚೆನ್ನಾಗಿ ಸ್ತುತಿಸಿ ಇಂದು
ಭಾಗೀರಥಿಪಿತ ಭಾಗವತರ ಸಂ
ಯೋಗ ರಂಗ ಉರಗಗಿರಿ ವೆಂಕಟ ಸಾಗಿ ಬಾರಯ್ಯ

ದಾಸರು ಪ್ರಾರ್ಥಿಸಿದ ಕೂಡಲೇ ರಥಮುಂದಕ್ಕೆ ಚಲಿಸಿತು ! ಇನ್ನೊಮ್ಮೆ ಪ್ರತ್ಯಕ್ಷ ದರ್ಶನ ಕೊಟ್ಟು ವರದ ಹಸ್ತವನ್ನು ಮಸ್ತಕದ ಮೇಲಿಟ್ಟು ಹರಸಿದಾಗ "... ಮಸ್ತಕದಲಿ ಅಭಯಹಸ್ತವನಿಟ್ಟು ಬಲು ಅಸ್ತಮಾನ ಉದಯಾವಸ್ಥೆಯನು ಹರುಸುತ್ತಾ ...." ಎಂದು ಹಾಡಿದ್ದಾರೆ.

ಜಯಮಂಗಳಂ ನಿತ್ಯ ಶುಭ ಮಂಗಳಂ
ತೊಳಸದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ.......

ಎಂಬ ಕೀರ್ತನೆಯು ವ್ಯಾಜಸ್ತುತಿ ಅಲಂಕಾರದಿಂದ ಕೂಡಿದ್ದು ಮತ್ತೊಂದು ಪ್ರಸಂಗವೊಂದನ್ನು ನೆನಪಿಸುತ್ತದೆ.

ದೇಗುಲಗಳ ಪುಣ್ಯಕ್ಷೇತ್ರಗಳ ದರ್ಶನ ಮಾಡಲು ಹೊರಟ ದಾಸರಿಗೆ ಆದ ಅನುಭವಗಳು ಅನೇಕಾನೇಕ. ಒಂದೊಂದು ಕಡೆ ಆದ ಅನುಭವ – ಘಟನೆಯು ಒಂದೊಂದು ತೆರ.

ಮನ್ನಾರ್ ಗುಡಿ ಕ್ಷೇತ್ರದಲ್ಲಿ ನದಿಯಲ್ಲಿ ಸ್ನಾನ ಮಾಡಲು ಹೊರಟಾಗ ಭಗವಂತ ಗೋಪಾಲ ವೇಷದಲ್ಲಿ ಬಂದು ದಾಸರೊಡನೆ ನೀರನ್ನು ಸಿಂಪಡಿಸಿ

ಚೆಲ್ಲಾಟವಾಡಿ ಕೋಪ ಬರಿಸಿ ಜ್ಞಾನೋದಯ ಉಂಟು ಮಾಡಿದ ಸಂದರ್ಭದಲ್ಲಿ ದಾಸರು "ಮಾತನಾಡೈ ಮನ್ನಾರಿ ಕೃಷ್ಣ ಮಾತನಾಡೈ" ಎಂಬ ಕೀರ್ತನೆಯನ್ನು ರಚಿಸಿ ಕೃಷ್ಣನನ್ನು ಸ್ತುತಿಸಿದ್ದಾರೆ.

ಪಂಡರಾಪುರಕ್ಕೆ ಹೋದಾಗ ದಾಸರಿಗಾಗಿದ್ದು ಇನ್ನೊಂದು ತೆರನಾದ ಅನುಭವ. ಮಾರುವೇಷದಲ್ಲಿ ಬಂದಾಗ ಗುರುತಿಸಿ ಹಾಡಿದರು: " ಚಲ್ಲಣ ಬಿಗಿವಿನಿಂದುಟ್ಟಾನೆ । ಮಾಸಿದ ವಸ್ತ್ರ ತೊಟ್ಟಾನೆ । ಕಾಲಲಿ ದಿಪ್ಪನ ಕೆರಹು ಮೆಟ್ಟಾನೇ" ಎಂದು ಕೊಂಡಾಡಿದಾಗ "ಅಂಗದ ಮುಸುಕು ತೆಗೆದನೊ ಕ್ಷೇತ್ರದಿ ಪಾಂಡುರಂಗ ವಿಜಯರಾಯ" ಎಂದಿದ್ದಾರೆ. ಹೀಗೆ ದಾಸರು ಹೋದೆಡೆಗಳಲ್ಲೆಲ್ಲಾ ವಿಚಿತ್ರ ಘಟನೆಗಳು ನಡೆದು ಶ್ರೀಹರಿ ದಾಸರಿಗೆ ಕಾಣಿಸಿಕೊಂಡಿದ್ದಾನೆ. ಅವುಗಳ ಹಿನ್ನೆಲೆಯಲ್ಲಿ ದಾಸರು ಎಷ್ಟೋ ಕೀರ್ತನೆಗಳನ್ನು ರಚಿಸಿದ್ದಾರೆ. ದಾಸರು ಮೂರನೆಯ ಬಾರಿ ಕಾಶಿಯಾತ್ರೆ ನಡೆಸಿದಾಗ, ತುಂಗೆ ಉಕ್ಕಿ ಹರಿದಾಗ, ಮಂಡಗದ್ದೆ ಭೀಮನಿಂದ ಗೋಪಾಲದಾಸರಿಗೆ ರಕ್ಷಣೆ ನೀಡಲು ಉಗಾಭೋಗ ರಚಿಸಿದಾಗ, ಈ ಎಲ್ಲ ಸಂದರ್ಭಗಳಲ್ಲೂ ಪವಾಡಸದೃಶ ಘಟನೆಗಳು ನಡೆದಿವೆ. ಆಗೆಲ್ಲಾ ದಾಸರು ಹಾಡುಗಳನ್ನು ರಚಿಸಿದ್ದಾರೆ. ಹೀಗಾಗಿ ಅವರ ಎಷ್ಟೋ ಕೀರ್ತನೆಗಳು ಅವರ ಕ್ಷೇತ್ರಸಂಚಾರ ಮತ್ತು ಸಂಭವಿಸಿದ ಘಟನೆಗಳ ಹಿನ್ನೆಲೆಗಳನ್ನು ಒಳಗೊಂಡಿವೆ ಎನ್ನಬಹುದು.

ಶ್ರೀ ವಿಜಯದಾಸರಿಗಿದ್ದ ತಪೋಶಕ್ತಿ, ಶ್ರೀ ಹರಿಯ ಕೃಪಾಕಟಾಕ್ಷ, ಭಕ್ತರನ್ನು, ಮೊರೆಹೊಕ್ಕವರನ್ನು, ದೀನದಲಿತರನ್ನು ಉದಾರ ಹೃದಯದಿಂದ ಕರುಣಾಂತ–ರಂಗದಿಂದ ಉದ್ಧರಿಸುವ ಮನೋಭಾವ ಇವೇ ಮೊದಲಾದ ಶಕ್ತಿ– ಗುಣಗಳಿಂದ ಈ ಕಾಲದ ಜನ ನಂಬಲಾಗದ ಆದರೆ ವಿಜಯದಾಸರ ಜೀವಿತ ಕಾಲದಲ್ಲಿ ನಡೆದಿರಬಹುದಾದ ಹಲವಾರು ಅಪಮೃತ್ಯು ನಿವಾರಣಾಪ್ರಸಂಗಗಳು ಅವರ ಕೀರ್ತನೆ, ಸುಳಾದಿಗಳಲ್ಲಿ ಉಲ್ಲೇಖಗೊಂಡಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ವಿಜಯದಾಸರು ತಮ್ಮ ಮಗ ಶೇಷಗಿರಿಗೆ ಕಾಯಿಲೆಯಾಗಿ ಅಪಮೃತ್ಯು ಒದಗಿದಾಗ ಶ್ರೀಹರಿಯನ್ನು ಪ್ರಾರ್ಥಿಸಿ ಎರಡು ವರ್ಷ ಆಯುರ್ದಾನ ಮಾಡಿ ಬದುಕಿಸಿದರು. ಎರಡು ವರ್ಷಗಳ ನಂತರ ಕ್ರಿ. ಶ. ೧೭೫೧ರಲ್ಲಿ ಶೇಷಗಿರಿ ನಿಧನವಾದಾಗ ಹೆಂಡತಿ ಅರಳಮ್ಮನ ಶೋಕ ನಿವಾರಣೆಗಾಗಿ ಹಾಡುಗಳನ್ನು ರಚಿಸಿ, ತತ್ತ್ವೋಪದೇಶ ಮಾಡಿ ಸಮಾಧಾನ ಮಾಡಿದರು. ಸಾಕುಮಗ ಮೋಹನದಾಸನಿಗೆ ಅಪಮೃತ್ಯು ಬಂದು ಅಕಾಲಮರಣ ಹೊಂದಿದಾಗ ಮತ್ತೆ ಜೀವ ಬರಿಸಿದರು. ಪುನರ್ಜನ್ಮವಿತ್ತರು. ತುಂಗಾತೀರದ ಚಾಗಿ ಎಂಬ ಊರಲ್ಲಿ ಶಿಷ್ಯರೊಡನೆ ವಿಜಯದಾಸರು ತಂಗಿರುವಾಗ ಕೇಶವರಾಯನೆಂಬ ವ್ಯಕ್ತಿ ನಿಧನವಾಗಿದ್ದನು. ಅವನ ಪತ್ನಿ ಮಹಾಮಹಿಮರು ವಿಜಯದಾಸರು ಬಂದಿದ್ದಾರೆಂದು ಕೇಳಿ ತಿಳಿದು ಅವರು ಪತಿಯನ್ನು ಬದುಕಿಸಿಯಾರು ಎಂದು ಭಾವಿಸಿ ಅವರಲ್ಲಿ ಶರಣು ಹೋದಳು. ಪಾದಕ್ಕೆ ಅಡ್ಡ ಬಿದ್ದ ಆಕೆಗೆ ಸುಮಂಗಲೀಭವ ಎಂದು ಹರಸಿದಾಗ ಆಕೆ ನಡೆದ ಸಂಗತಿ ಹೇಳಿದಳು. ಹಲವಾರು ಉಗಾಭೋಗಗಳನ್ನು ರಚಿಸಿ ಭಗವಂತನನ್ನು ಪ್ರಾರ್ಥಿಸಿದರು. "ನೀನೆ ನನ್ನ ಬಾಯಿಂದ ಸುಮಂಗಲೀಭವ ಎಂದು ನುಡಿಸಿರುವೆ ನೀನೇ ಈಗ ಕಾಪಾಡಬೇಕು" ಎಂದು ಪರಿಪರಿಯಾಗಿ ಸ್ತುತಿಸಿದರು. ಮೂರು ವರ್ಷಗಳ ಆಯುರ್ದಾನದಿಂದ ಕೇಶವರಾಯ ಬದುಕಿ ಮೇಲೆದ್ದನು.

ಆದವಾನಿ ದಿವಾನರೂ ತಮ್ಮ ಶಿಷ್ಯರೂ ಆಗಿದ್ದ ವೇಣುಗೋಪಾಲದಾಸರಿಗೆ ಅಪಮೃತ್ಯು ಒದಗಿದಾಗ ವಿಜಯದಾಸರು ಮತ್ತು ಜೊತೆಯಲ್ಲಿದ್ದ ಗೋಪಾಲದಾಸರು ಇಬ್ಬರೂ ಶ್ರೀ ಹರಿಯನ್ನು ಪ್ರಾರ್ಥಿಸಿ ಶ್ರೀಹರಿ ಅವರಿಗೆ ಪುನರ್ಜನ್ಮವನ್ನು ಕರುಣಿಸುವಂತೆ ಮಾಡಿದರು.

ಜಗನ್ನಾಥದಾಸರ ಅಪಮೃತ್ಯು ನಿವಾರಣೆ ಮಾಡಿದ ಘಟನೆ ರೋಚಕವಾಗಿದೆ. ಮಾನವಿಯಲ್ಲಿದ್ದ ಶ್ರೀನಿವಾಸಾಚಾರ್ಯರೆಂಬ ಘನಪಂಡಿತರು ಶ್ರೀ ವರದೇಂದ್ರ ತೀರ್ಥರಲ್ಲಿ ವ್ಯಾಸಂಗ ಮಾಡಿದವರಾಗಿದ್ದು ವಿಜಯದಾಸರ ಕೀರ್ತಿ ಪ್ರಸಿದ್ಧಿ ಕೇಳಿ

ನೋಡಿ ಅವರ ಬಗೆಗೆ ಅಸೂಯೆ ಪಡುತ್ತಿದ್ದರು, ತಿರಸ್ಕಾರವನ್ನು ತೋರುತ್ತಿದ್ದರು. ಕೂಸೀಮಗ ದಾಸನಿಗೆ ಕನ್ನಡಪದ ಹಾಡಿದ್ದಕ್ಕೆ ಇಷ್ಟೇಕೆ ಗೌರವ ಎನ್ನುತ್ತಿದ್ದರು. ಹೀಗಿರಲು ಒಮ್ಮೆ ದಾಸರು ಶ್ರೀನಿವಾಸಾಚಾರ್ಯರನ್ನು, ತೀರ್ಥಪ್ರಸಾದಕ್ಕೆ ಆಹ್ವಾನಿಸಿದಾಗ ಉದರಬೇನೆಯ ನೆಪ ಹೇಳಿ ತಪ್ಪಿಸಿಕೊಂಡರು. ಆದರೆ ನಿಜವಾಗಿ ಉದರಬೇನೆ ಉಂಟಾಯಿತು ಆಚಾರ್ಯರಿಗೆ. ಆಗ ಅವರು ಮಾಡಿದ್ದು ತಪ್ಪೆಂದು ಮಂತ್ರಾಲಯದ ರಾಯರು ಹೇಳಿದಾಗ ಆಚಾರ್ಯರಿಗೆ ತಮ್ಮ ತಪ್ಪಿನ ಅರ್ಥವಾಯಿತು. ಕೂಡಲೇ ವಿಜಯದಾಸರಲ್ಲಿ ಕ್ಷಮೆ ಕೋರಿದರು. ಅವರ ಅಪ್ಪಣೆಯಂತೆ ಉತ್ತನೂರಿಗೆ ಹೋಗಿ ಗೋಪಾಲದಾಸರನ್ನು ಶರಣು ಹೋಗಿ ಉದರಬೇನೆ ನಿವಾರಣೆಗಾಗಿ ಪ್ರಾರ್ಥಿಸಿದರು. ವಿಜಯದಾಸರ ಅಪ್ಪಣೆಯನ್ನು ಶಿರಸಾ ಪಾಲಿಸುತ್ತಿದ್ದ ಗೋಪಾಲದಾಸರು "ಎನ್ನ ಬಿನ್ನಪ ಕೇಳೊ ಧನ್ವಂತ್ರಿ ದಯಮಾಡೊ ಸಣ್ಣವನು ಇವ ಕೇವಲ" ಎಂದು ಹೇಳುತ್ತಾ "ಬನ್ನ ಪಡಿಸುವ ರೋಗವನ್ನು ಮೋಚನಮಾಡಿ ಚನ್ನಾಗಿ ಪಾಲಿಸುವುದು ಕರುಣಿ" ಎಂದು ಧನ್ವಂತರಿ ಸ್ತುತಿ ಮಾಡಿ ಮಂತ್ರದಿಂದ ಅಭಿಮಂತ್ರಿಸಿಕೊಟ್ಟ ಎರಡು ಜೋಳದ ರೊಟ್ಟಿ ಭೋಜನದಿಂದ ಆಚಾರ್ಯರ ಉದರವ್ಯಾಧಿ ನಿವಾರಣೆ ಆಯಿತು. ಮುಂದೆ ತಿರುಪತಿಯಲ್ಲಿ ವ್ಯಾಧಿ ಮರುಕಳಿಸಿದಾಗ ಅಲ್ಲೇ ಇದ್ದ ಗೋಪಾಲದಾಸರು ಸೂಕ್ಷ್ಮರೂಪದಲ್ಲಿ ಬಂದು ವಿಜಯದಾಸರು ನೀಡಿದ ಆಜ್ಞಾರೂಪದಲ್ಲಿ ತಮ್ಮ ಆಯುಷ್ಯದಲ್ಲಿನ ನಲವತ್ತು ವರ್ಷಗಳನ್ನು ಆಚಾರ್ಯರಿಗೆ ಧಾರೆ ಎರೆದರು. ಕಾಲಕ್ರಮದಲ್ಲಿ ಶ್ರೀನಿವಾಸಾಚಾರ್ಯರಿಗೆ ಚಂದ್ರಭಾಗಾ ನದಿಯಲ್ಲಿ ಜಗನ್ನಾಥವಿಠ್ಠಲ ಎಂಬ ಶಿಲೆ ದೊರೆತು ದೀಕ್ಷಾಬದ್ಧರಾಗಿ ಜಗನ್ನಾಥದಾಸರೆಂದು ಪ್ರಸಿದ್ಧರಾಗಿ ಜಗನ್ನಾಥವಿಠ್ಠಲ ಅಂಕಿತದಲ್ಲಿ ಹರಿಕಥಾ-ಮೃತಸಾರವೆಂಬ ಕನ್ನಡದ ಶ್ರೇಷ್ಠ ತತ್ವಗ್ರಂಥವನ್ನು ರಚಿಸಿ ಲೋಕವಿಖ್ಯಾತರಾದರು. ಹೀಗೆ ವಿಜಯದಾಸರಿಂದ ಅಪಮೃತ್ಯು ನಿವಾರಣೆ ಆಗಿ ಗೋಪಾಲದಾಸರ ಮೂಲಕ ಕನ್ನಡಕ್ಕೆ ಜಗನ್ನಾಥ ದಾಸರು ಲಭ್ಯವಾದರು.

ವಿಜಯದಾಸರು ತಮ್ಮ ಜೀವಿತ ಕಾಲದಲ್ಲಿ ಸುಮಾರು ೧೮ ವರ್ಷಗಳ ಕಾಲ ಭಾರತಾದ್ಯಂತ ಸಂಚರಿಸಿ ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿದ್ದಾರೆ. ಭಕ್ತರಿಗೆ

ಮಾರ್ಗದರ್ಶನ ಮಾಡಿದ್ದಾರೆ. ಕೊನೆಗಾಲದಲ್ಲಿ ಆಂಧ್ರ ಪ್ರದೇಶದ ಗುಂತಕಲ್ ಬಳಿ ಇರುವ ಚಿಪ್ಪಗಿರಿಗೆ ಬಂದು ನೆಲಸಿದರು. ಈ ಸ್ಥಳ ಭಾಸ್ಕರಕ್ಷೇತ್ರವೆಂದು ಪ್ರಸಿದ್ಧಿ ಹೊಂದಿತ್ತು. ಇಲ್ಲಿ ನೆಲೆಸಲು ಬಂದಾಗ ನಡೆದ ಘಟನೆಯೊಂದು ಗಮನಾರ್ಹವಾಗಿದೆ.

ವಿಜಯದಾಸರು ಚಂದಪ್ಪನೆಂಬ ಕುರುಬನೊಬ್ಬನ ಹೊಲದ ಬಾವಿಯಲ್ಲಿದ್ದ ಶ್ರೀ ವೇಣುಗೋಪಾಲಕೃಷ್ಣ ವಿಗ್ರಹವನ್ನು ತೆಗೆಸಿ, ಅಲ್ಲಿಯೇ ಸಣ್ಣಕಟ್ಟೆ ಕಟ್ಟಿ ವೃಕ್ಷದಡಿ ಪ್ರತಿಷ್ಠಾಪನೆ ಮಾಡಿದರು. ಚಂದಪ್ಪನು ದಾಸರ ಮಹಿಮಾತಿಶಯವನ್ನು ನೋಡಿ ಇಪ್ಪತ್ತು ಕೂರಗಿ ಹೊಲವನ್ನೂ ಒಂದು ಕೊಪ್ಪರಿಗೆ ತುಂಬ ಹಣವನ್ನೂ ಅವರಿಗೆ ದಾನಮಾಡಿದ. ದಾಸರು ಆ ಬಾವಿಯನ್ನು ಜೀರ್ಣೋದ್ಧಾರಗೊಳಿಸಿದರು. ವಿಜಯ ತೀರ್ಥವೆಂದು ಅದು ಪ್ರಸಿದ್ಧವಾಗಿದೆ. ಇವು ಈಗಲೂ ವಿಜಯದಾಸರ ವಂಶಸ್ಥರಿಗೆ ಸೇರಿವೆ. ಚಿಪ್ಪಗಿರಿಯಲ್ಲಿ ನೆಲೆಸಿ ಧಾರ್ಮಿಕ ಕಾರ್ಯಗಳನ್ನು ನಡೆಸುತ್ತಾ ಭಗವಂತನ ಧ್ಯಾನದಲ್ಲಿ ನಿರತರಾಗಿರುತ್ತ ತಮ್ಮ ಎಪ್ಪತ್ತಮೂರನೆಯ ವಯಸ್ಸಿನಲ್ಲಿ ತಿರುಪತಿಯ ಬ್ರಹ್ಮೋತ್ಸವಕ್ಕೆ ಯಾತ್ರೆ ಹೋಗಿ ಬಂದವರು ಕ್ರಿ. ಶ. ೧೩-೧೧-೧೭೫೫ ರಲ್ಲಿ ಯುವ ಸಂವತ್ಸರದ ಶಕ ೧೬೭೭ ರಲ್ಲಿ ಕಾರ್ತೀಕ ಶುದ್ಧ ದಶಮಿ ಗುರುವಾರ ಪ್ರಹರದಲ್ಲಿ ಶ್ರೀ ಹರಿಪಾದವನ್ನು ಸೇರಿದರು. ಭಕ್ತರು ಪ್ರತಿವರ್ಷ ಕಾರ್ತೀಕ ಶುದ್ಧ ನವಮಿ ದಶಮಿ ಏಕಾದಶಿಗಳಂದು ಚಿಪ್ಪಗಿರಿಯಲ್ಲಿ ವಿಜಯದಾಸರ ಆರಾಧನೆಯನ್ನು ನಡೆಸುತ್ತಾರೆ. ವಿಜಯದಾಸರನ್ನು ಅವರ ಮಹಿಮಾತಿಶಯಗಳನ್ನು ಅವರ ಶಿಷ್ಯರು ಪ್ರಶಿಷ್ಯರು ಬಗೆ ಬಗೆಯಾಗಿ ಕೊಂಡಾಡಿದ್ದಾರೆ. ಪಂಡಿತ ಪಂಡರೀನಾಥಾಚಾರ್ಯ ಗಲಗಲಿ ಅವರು ಹೇಳಿದಂತೆ ಶ್ರೀ ಪುರಂದರದಾಸರು ಶ್ರೀ ವಾದಿರಾಜ ಕನಕದಾಸರೊಂದಿಗೆ ದಿವ್ಯ ಭವ್ಯವಾಗಿ ಆ ದಾಸಪರಂಪರೆ ಗುಡಿ ಕಟ್ಟಿಸಿದರೆ ಮುಂದೆ ವಿಜಯದಾಸರು ಅದಕ್ಕೆ ಶಿಖರವಿಟ್ಟರು. ಶ್ರೀ ಗೋಪಾಲದಾಸರು ಕಲಶ ಏರಿಸಿದರು. ಅನಂತರ ಶ್ರೀ ಜಗನ್ನಾಥದಾಸರು ದಾಸಕೂಟದ ಗೌರವ ಘನತೆಗಳನ್ನು ಗಗನದೆತ್ತರಕ್ಕೆ ಎತ್ತಿದರು. ತದನಂತರ ಬಂದ ದಾಸವರೇಣ್ಯರೆಲ್ಲರೂ ಆ ದಾಸಪ್ರಾಸಾದನವನ್ನು ತಮ್ಮ ವಿವಿಧ ವಾಙ್ಮಯ

ಪ್ರಾಕಾರಗಳಿಂದ ಶೃಂಗರಿಸಿ ಅಲಂಕರಿಸುತ್ತಲೇ ಇದ್ದಾರೆ. ಈ ರೀತಿಯಾಗಿ ದಾಸಪಂಥವೆಂಬ ದಿವ್ಯದೇಗುಲ ನಿರ್ಮಾಣದಲ್ಲಿ ಶ್ರೀ ವಿಜಯದಾಸರು ಮಹತ್ವದ ಪಾತ್ರವಹಿಸಿ ಕನ್ನಡ ದಾಸಸಾಹಿತ್ಯದ ರೂವಾರಿಗಳಲ್ಲಿ ಒಬ್ಬರಾಗಿದ್ದಾರೆ.

ವಿಜಯದಾಸರ ಕೀರ್ತನೆಗಳು – ಒಂದುನೋಟ

ದಾಸಸಾಹಿತ್ಯದ ಪುನರುತ್ಥಾನದ ಕಾರ್ಯದಲ್ಲಿ ವಿಜಯದಾಸರು ಅಗ್ರಗಣ್ಯರಾಗಿ ದಾಸಕೂಟದ ಪರಂಪರೆಯನ್ನು ಎರಡನೇ ಘಟ್ಟದಲ್ಲಿ ಮುಂದುವರೆಸಿದ್ದಾರೆ. ವ್ಯಾಸಕೂಟದ ಪರಂಪರೆಯನ್ನು ಶ್ರೀ ರಾಘವೇಂದ್ರಸ್ವಾಮಿಗಳು ಮುಂದುವರೆಸಿದ್ದಾರೆ. ಯತಿಗಳೇ ಇರಲಿ ದಾಸರೇ ಇರಲಿ ಶಾಸ್ತ್ರಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿರಲಿ, ದೇವರನಾಮಗಳನ್ನು ಕನ್ನಡದಲ್ಲಿ ರಚಿಸಿರಲಿ ಇಬ್ಬರ ಗುರಿಯೂ ಒಂದೇ. ಭಕ್ತಿಮಾರ್ಗದ ಅನುಸರಣೆ, ಮಧ್ವಸಿದ್ಧಾಂತದ ಪ್ರಚುರಣೆ. ಫಲಾಪೇಕ್ಷೆಯಿಲ್ಲದೆ ಲೋಕಕಲ್ಯಾಣಕ್ಕಾಗಿ ಭಗವಂತನ ಪ್ರೀತ್ಯರ್ಥವಾಗಿ ಕಾಯಕದ ಆಚರಣೆ. ಒಟ್ಟಿನಲ್ಲಿ ಪೂಜೆ, ಸೇವೆ, ಕೀರ್ತನೆ, ಶಾಸ್ತ್ರಗ್ರಂಥರಚನೆ ಹರಿದಾಸರ ಹರಿಯತಿಗಳ ಮುಖ್ಯ ಗುರಿಯಾಗಿತ್ತು.

ಕೀರ್ತನೆ, ಸುಳಾದಿ, ಉಗಾಭೋಗ ಮೊದಲಾದ ದಾಸಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಶ್ರೀ ವಿಜಯದಾಸರು, ವ್ಯಾಸರಾಜರ ಯತಿ ಪರಂಪರೆಯನ್ನು ಶ್ರೀ ರಾಘವೇಂದ್ರಸ್ವಾಮಿಗಳು ಮುಂದುವರೆಸಿದಂತೆ, ಪುರಂದರದಾಸರ ಕೀರ್ತನೆ ಪರಂಪರೆಯನ್ನು ಅವರ ಉತ್ತರಾಧಿಕಾರಿಗಳೋ ಎಂಬಂತೆ ವರ್ತಿಸಿ ಮುಂದುವರೆಸಿದ್ದಾರೆ. ಪುರಂದರದಾಸರು ರಚಿಸಿದ್ದು ೪ ಲಕ್ಷ ೭೫ ಸಾವಿರ ಪದಗಳೆಂದು ತಾವು ತಿರಿಪಾದೋನ ಪಂಚಲಕ್ಷ ಪೇಳಿಹೆ (ಎಂದರೆ ೭೫ ಸಾವಿರ ಪದಗಳು) ಎಂದಿದ್ದಾರೆ. ಆದ ಕಾರಣ ೫ ಲಕ್ಷ ಪದಗಳ ರಚನೆಯನ್ನು ಪೂರೈಸಬೇಕೆಂಬ ಪುರಂದರದಾಸರ ಆಸೆಯನ್ನು ವಿಜಯದಾಸರು ಪೂರೈಸಿದರು ಎನ್ನುವರು. ಅಭಿನವ ಪುರಂದರದಾಸರೆಂಬ ಅಭಿದಾನಕ್ಕೆ ವಿಜಯದಾಸರು ಪಾತ್ರರಾಗಿದ್ದಾರೆ. ಇನ್ನೊಂದು ದೃಷ್ಟಿಯಿಂದಲೂ

ವಿಜಯದಾಸರು ಪುರಂದರ ಪರಿವಾರಕ್ಕೆ ಸೇರಿದವರು. ಪುರಂದರದಾಸರ ಮಕ್ಕಳಲ್ಲಿ ಒಬ್ಬರಾದ ಮಧ್ವಪತಿವಿಠಲರೇ ಈ ಜನ್ಮದಲ್ಲಿ ವಿಜಯದಾಸರಾಗಿದ್ದಾರೆಂಬ ಪ್ರತೀತಿಯಿದೆ. ಜನಪ್ರಿಯತೆ ದೃಷ್ಟಿಯಿಂದಲೂ ಪುರಂದರರ ಅನಂತರ ವಿಜಯದಾಸರು ಸ್ಥಾನಗಳಿಸಿದ್ದಾರೆ ಎಂದರೂ ತಪ್ಪಾಗಲಾರದು. ಒಟ್ಟಿನಲ್ಲಿ ಕೀರ್ತನ ಸಾಹಿತ್ಯ ಜಗತ್ತಿನಲ್ಲಿ ವಿಜಯದಾಸರು ವಿಶಿಷ್ಟ ಸ್ಥಾನವನ್ನು ಗಳಿಸಿದ್ದಾರೆ ಎಂಬುದರಲ್ಲಿ ಸಂಶಯವಿಲ್ಲ.

ಸಾಮಾನ್ಯವಾಗಿ ಕೀರ್ತನೆಗಳಲ್ಲಿ ರಾಗತಾಳ ಬದ್ಧವಾಗಿ ಪಲ್ಲವಿ, ಅನುಪಲ್ಲವಿ ಮತ್ತು ಚರಣ ಅಥವಾ ನುಡಿಗಳ ಯೋಜನೆ ಇರುತ್ತದೆ. ಕೊನೆಯಲ್ಲಿ ಆಯಾ ದಾಸರ ಅಂಕಿತವಿರುತ್ತದೆ. ಬಹುಮಟ್ಟಿಗೆ ಹರಿದಾಸರೆಲ್ಲರೂ ವಿಠಲನ ಭಕ್ತರು. ತಮ್ಮ ಸ್ವರೂಪ ಗುರುಗಳ ಹೆಸರಿನೊಂದಿಗೆ ವಿಠಲನೆಂಬ ನಾಮವನ್ನು ಸೇರಿಸಿಕೊಂಡು ಅಂಕಿತ ಹೊಂದುತ್ತಾರೆ. ಹರಿದಾಸರನ್ನು ಮೂರು ನಾಮಧಾರಿಗಳೆಂದು ಕರೆಯುವುದುಂಟು ಏಕೆಂದರೆ ಸಂಪ್ರದಾಯದಲ್ಲಿ ದಾಸರಿಗೆ ಇಹಜನ್ಮನಾಮ, ಪೂರ್ವಜನ್ಮನಾಮ, ಉಪದೇಶದ ಅಂಕಿತನಾಮ ಇರುತ್ತದೆ. ವಿಜಯದಾಸರಿಗೆ ಇಹಜನ್ಮನಾಮ ದಾಸಪ್ಪ ಎಂದು ಅಂಕಿತನಾಮ ವಿಜಯವಿಠಲನೆಂಬ ಪೂರ್ವಜನ್ಮನಾಮ ಮಧ್ವಪತಿವಿಠಲನೆಂದೂ ಇತ್ತು.

ವಿಜಯದಾಸರ ಕೀರ್ತನೆಗಳ ವಸ್ತು ವೈವಿಧ್ಯ ವಿಸ್ತಾರವಾದುದು. ಹತ್ತಾರು ಬಾರಿ ಆಸೇತುಹಿಮಾಚಲಪರ್ಯಂತ ಸಂಚರಿಸಿರುವುದರಿಂದ ಅವರ ಲೋಕಾನುಭವ ಅಧಿಕವಾದುದು. ಅಪರೋಕ್ಷ ಲೋಕಜ್ಞಾನಿಗಳೂ ಆಗಿರುವುದರಿಂದ ಜ್ಞಾನವಿಸ್ತಾರ ಅಪಾರ. ಇನ್ನು ಶಾಸ್ತ್ರ, ಸಂಪ್ರದಾಯ, ಆಚರಣೆಗಳ ವಿಚಾರದಲ್ಲಿ ಅವರನ್ನು ಸರಿಗಟ್ಟುವವರೇ ಕಮ್ಮಿ. ದೇವಕಕ್ಷೆಯಲ್ಲಿ ಸುಮಾರು ೨೦ ದೇವಾನುದೇವತೆಗಳನ್ನು ಸ್ತುತಿಸಿದರೆ ಯತಿಕಕ್ಷೆಯಲ್ಲಿ ೧೦ ಮಂದಿ ಯತಿವರೇಣ್ಯರನ್ನು ಸ್ತುತಿಸಿದ್ದಾರೆ. ಆತ್ಮನಿವೇದನೆ, ಲೋಕನೀತಿಗಳ ಬಗ್ಗೆ ಅನೇಕ ಕೀರ್ತನೆಗಳಿವೆ. ಕ್ಷೇತ್ರಗಳ ಬಗ್ಗೆ ನದಿನದಗಳ ಬಗ್ಗೆ ಸಾಕಷ್ಟು ಕೀರ್ತನೆಗಳನ್ನು ರಚಿಸಿದ ಹರಿದಾಸರು ಹೆಚ್ಚು ಜನ ಇಲ್ಲವೆಂದರೆ ತಪ್ಪಾಗದು. ಒಟ್ಟಿನಲ್ಲಿ ಶಾಸ್ತ್ರಜ್ಞಾನ ಸಾಹಿತ್ಯಮಾಧುರ್ಯ ಲೋಕಾನುಭವ ಮುಂತಾದವುಗಳ ಸಂಗಮಕ್ಷೇತ್ರ ವಿಜಯದಾಸರ ಕೀರ್ತನೆಗಳು.

ವಿಜಯದಾಸರು ೭೫೦೦೦ ಪದಗಳನ್ನು ರಚಿಸಿದ್ದರೂ ಈಗ ಉಪಲಬ್ಧವಿರುವ ಅವರ ಕೀರ್ತನೆಗಳು ಎಲ್ಲಾ ಸೇರಿದರೂ ೨೦೦೦ ಸಹ ಆಗುವುದಿಲ್ಲ. ಲಭ್ಯವಿರುವ ಸಾಹಿತ್ಯವೂ ಸಮಗ್ರವಾಗಿ ಒಂದೆಡೆ ಸಿಗುವುದಿಲ್ಲ. ಈ ದೆಸೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರು ಸಮಗ್ರ ದಾಸವಾಙ್ಮಯವನ್ನು ಪ್ರಕಟಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಶ್ಲಾಘನೀಯವೇ ಸರಿ. ದಾಸಸಾಹಿತ್ಯದ ಪ್ರಭಾವ ೨೦ನೇ ಶತಮಾನದಲ್ಲಿ ಆಧುನಿಕ ಕನ್ನಡ ಸಾಹಿತ್ಯದ ಮೇಲೂ ಪ್ರಭಾವ ಬೀರಿ ಹರಿದಾಸೇತರರೂ ಕೀರ್ತನ ಸಾಹಿತ್ಯ ರಚಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಕೀರ್ತನಸಾಹಿತ್ಯದ ಮತ್ತು ಸುಳಾದಿಗಳ ಹಾಗೂ ಸಂಕ್ಷಿಪ್ತ ರಚನೆಗಳಾದ ಉಗಾಭೋಗ ಮತ್ತು ಇತರ ಸಾಹಿತ್ಯ ಪ್ರಕಾರಗಳಲ್ಲಿ ಕಂಡುಬರುವ ಗೇಯಗುಣ, ಸಾಹಿತ್ಯದ ಸೊಗಸು, ಭಾಷಾವೈಖರಿ, ಛಂದೋರಚನೆ, ಲಯವಿನ್ಯಾಸ ಇತ್ಯಾದಿ ಅಂಶಗಳು ಇತರರ ಮನಸೆಳೆದಿವೆ. ಇನ್ನು ವಸ್ತುವಿನ ದೃಷ್ಟಿಯಲ್ಲಿ ಆತ್ಮನಿವೇದನೆ ಲೋಕನೀತಿ, ಹರಿಸ್ತುತಿ ಮೊದಲಾದವು ಸಾರ್ವಕಾಲಿಕ ಅಂಶಗಳನ್ನು ಒಳಗೊಂಡಿವೆ. ಹೊಸಗನ್ನಡ ಕವಿಗಳ ಕವಿತೆಗಳಲ್ಲಿ ಹೊಸವೇಷದಲ್ಲಿ ಕೀರ್ತನ ಸಾಹಿತ್ಯ ಮೂಡಿ ಬಂದಿರುವುದು ಚಿಕಿತ್ಸಕ ಬುದ್ಧಿಗೆ ಥಟ್ಟನೆ ಹೊಳೆಯುತ್ತದೆ. ಡಿವಿಜಿ, ಬೇಂದ್ರೆ, ಕುವೆಂಪು, ಪುತಿನ, ಮಾಸ್ತಿ, ಕೆ ಎಸ್ ನ ವಿಸೀ, ಎಕ್ಕುಂಡಿ ಮೊದಲಾದವರ ಕವಿತಾರಚನೆಗಳು ಇದಕ್ಕೆ ನಿದರ್ಶನಗಳನ್ನು ನೀಡುತ್ತವೆ.

ದಾಸಸಾಹಿತ್ಯದಲ್ಲಿ ಕೀರ್ತನೆ, ಉಗಾಭೋಗ, ಸುಳಾದಿ ದಂಡಕ ಸಾಂಗತ್ಯ ರಗಳೆ ದ್ವಿಪದಿ, ತ್ರಿಪದಿ ಮತ್ತು ಇತರ ಜಾನಪದ ಪ್ರಕಾರಗಳೂ ಸಂಗೀತಕ್ಕೆ ಅಳವಡುವ ಛಂದೋರಚನೆಗಳೂ ಕಂಡು ಬಂದರೂ ಕೀರ್ತನೆಗಳದೇ ಸಂಖ್ಯೆಯಲ್ಲಿ ಮೇಲುಗೈ ಎನ್ನಬಹುದು. ಎಲ್ಲ ಹರಿದಾಸರೂ ಉಳಿದ ಸಾಹಿತ್ಯ ಪ್ರಕಾರಗಳನ್ನು ರಚಿಸಿರಲಿ ಬಿಡಲಿ ಕೀರ್ತನೆಗಳನ್ನು ತಪ್ಪದೆ ರಚಿಸಿದ್ದಾರೆ. ಕೀರ್ತನೆಯ ಪ್ರಭಾವ ಎಷ್ಟೆಂದರೆ ದಾಸಸಾಹಿತ್ಯವೆಂದರೆ ಕೀರ್ತನೆ ಎಂಬಷ್ಟರ ಮಟ್ಟಿಗೆ ಆಗಿದೆ ಮತ್ತು ವಿವಿಧ ಬಗೆಯ ಛಂದೋರಚನಾ ವೈವಿಧ್ಯಗಳನ್ನು ಕೀರ್ತನೆಗಳೆಂದೇ ಕರೆಯುವ ಪರಿಪಾಠವನ್ನು ಇಲ್ಲಿ ಕಾಣಬಹುದಾಗಿದೆ.

ವಿಜಯದಾಸರ ಕೀರ್ತನೆಗಳಲ್ಲಿ ಸಾಮಾನ್ಯವಾಗಿ ೩ ಅಥವಾ ೫ ನುಡಿಗಳನ್ನು ಕಾಣುತ್ತೇವೆ. ಆದರೆ ಕೆಲವು ಕೀರ್ತನೆಗಳು ದೀರ್ಘಕೀರ್ತನೆ ಇಲ್ಲವೆ ನೀಳ್ಗವಿತೆಗಳಂತೆ ಇವೆ. ಇವು ವಾರ್ಧಕ ಷಟ್ಪದಿಯಂತಹ ಛಂದಸ್ಸಿನಲ್ಲಿ ರಚಿತವಾಗಿದ್ದರೂ ಹಾಡಲು ಬರುವ ಉದಯರಾಗದಲ್ಲಿವೆ. ಇಂಥ ಹಲವು ರಚನೆಗಳ ಪೈಕಿ ಶ್ರೀ ತುಳಸೀ ಸ್ತೋತ್ರವೂ ಒಂದು. ಹರಿದಾಸರಲ್ಲಿ ತುಳಸಿಗೆ ಮಹತ್ವವಿದೆ. ಹರಿದಾಸರ ಅಲಂಕಾರಗಳಲ್ಲಿ ತುಳಸಿಯೂ ಒಂದು. ತುಳಸಿಯನ್ನು ಕುರಿತ ರಚನೆಗಳು ದಾಸಸಾಹಿತ್ಯದಲ್ಲಿ ಸಾಕಷ್ಟಿವೆ. ಶ್ರೀ ಜಗನ್ನಾಥದಾಸರ ತತ್ವಸುವ್ವಾಲಿಯಲ್ಲಿಯ ತುಳಸಿ ಸ್ತೋತ್ರ ಪ್ರಕರಣ, ಪ್ರಾಣೇಶವಿಠಲರ ಶ್ರೀ ತುಳಸೀ ಸ್ತೋತ್ರ, ಪುರಂದರದಾಸರ ಕೀರ್ತನೆ (ಎಲ್ಲಿ ತುಳಸಿಯ ವನವು), ಗಳೇ ಅಲ್ಲದೆ ತಂದೆ ವೆಂಕಟೇಶವಿಠಲ ಮೊದಲಾದ ಅನೇಕ ಹರಿದಾಸರು ತುಳಸಿಯನ್ನು ಕುರಿತು ಕೀರ್ತನೆ ರಚಿಸಿದ್ದಾರೆ. ಈ ಪೈಕಿ ವಿಜಯದಾಸರ ಕೀರ್ತನೆ ಪ್ರಸಿದ್ಧವಾದುದು, ದೀರ್ಘವಾದುದು. ಇದರಲ್ಲಿ ತುಳಸೀದೇವಿಯ ಮಹಿಮಾತಿಶಯಗಳ ಜೊತೆಗೆ ತುಳಸಿಯನ್ನು ಹೇಗೆ ಆರಾಧಿಸಬೇಕು, ಸೇವಿಸಬೇಕು ಎಂಬ ವಿಷಯಗಳನ್ನು ಹೇಳಿರುವ ರೀತಿ ಗಮನಿಸುವಂಥದ್ದು. ಇಂದೂ ಅದೇ ಆಚಾರಸಂಹಿತೆ ಬಳಕೆಯಲ್ಲಿರುವುದನ್ನು ಕಾಣಬಹುದು. ಹರಿದಾಸರು ಸದಾಚಾರಕ್ಕೆ ಸಂಪ್ರದಾಯಕ್ಕೆ ಕಟ್ಟುಬಿದ್ದವರು ಎಂಬುದನ್ನು ಇದು ತಿಳಿಸುತ್ತದೆ. ತುಳಸಿಯ ಮಹತ್ವ ಮತ್ತು ಅಗತ್ಯ ಎಷ್ಟೆಂದರೆ ದಳವಿದ್ದರೇ ಒಳಿತು ಇಲ್ಲದಿದ್ದರೆ ಕಾಷ್ಠ, ಎಲೆ, ಮೃತ್ತಿಕೆಗಳಿಂದ ಪೂಜೆ ಮಾಡಲುಬಹುದು. ಅದೂ ಸಾಧ್ಯವಿಲ್ಲದಾಗ ತುಳಸಿ ನಿರ್ಮಾಲ್ಯವಾದರೂ ತ್ರಿವಾರದಲಿ ತೊಳೆತೊಳೆದು ಏರಿಸಲುಬಹುದು ಎನ್ನುತ್ತಾರೆ.

ಹೀಗೆ ಅನೇಕ ಬಗೆಯ ಆಚರಣೆಗಳು ದೇವತಾಸ್ತುತಿಗಳಲ್ಲಿ ಕಂಡುಬರುವುದು ವಿಜಯದಾಸರ ಕೀರ್ತನೆಗಳ ವಿಶೇಷಗಳಲ್ಲಿ ಒಂದಾಗಿದೆ.

ಶ್ರೀ ರಾಘವೇಂದ್ರಸ್ವಾಮಿಗಳು ದ್ವಿತೀಯ ಘಟ್ಟದ ದಾಸ ಸಾಹಿತ್ಯದ ಕೇಂದ್ರ ಬಿಂದು. ವಿಜಯದಾಸರಿಂದ ಮೊದಲ್ಗೊಂಡು ಇಂದಿನವರೆಗೆ ಅವರನ್ನು ಸ್ಮರಿಸದಿರುವ ಹರಿದಾಸರೇ ಇಲ್ಲವೆಂದರೆ ತಪ್ಪಲ್ಲ. ಮಾಧ್ವಯತಿಗಳಲ್ಲಿ ಇವರನ್ನು ಕುರಿತು ೩೫೦ಕ್ಕೂ ಹೆಚ್ಚು ಕೀರ್ತನೆಗಳು ರಚಿತವಾಗಿವೆ. ಹರಿದಾಸರು ಇನ್ನಾವ ಯತಿವರೇಣ್ಯರನ್ನು ಕುರಿತೂ ಇಷ್ಟೊಂದು ಸಂಖ್ಯೆಯಲ್ಲಿ ಕೀರ್ತನೆಗಳನ್ನು ರಚಿಸಿಲ್ಲ.

ವಿಜಯದಾಸರು ರಾಘವೇಂದ್ರಸ್ವಾಮಿಗಳನ್ನು ಕುರಿತು ೬ ಹಾಡುಗಳನ್ನು ಹಾಡಿದ್ದಾರೆ. ಈ ಕೀರ್ತನೆಗಳಲ್ಲಿ ರಾಘವೇಂದ್ರರ ಗುಣಗಾನದ ಜತೆಗೆ ಅವರ ಮಂತ್ರಾಲಯದ ಮಹಿಮೆಯನ್ನೂ ಹೊಗಳಿದ್ದಾರೆ. 'ಯತಿಗಳ ಶಿರೋರನ್ನ ಯೋಗಸಂಪನ್ನ ಕ್ಷಿತಿಯೊಳಗೆ ನಿನಗೆ ಸರಿಗಾಣೆನೋ' ಎಂದಿದ್ದಾರೆ. ಮಂತ್ರಾಲಯವನ್ನು ಕುರಿತು "ಇಲ್ಲಿ ದಿನದಿನಕತಿಶಯವೆ ಆಗುವುದು ಭೂಸುರ ತತಿಗೆ ಭೋಜನ ಕಥಾಶ್ರವಣ ಭಾರತ ಪುಣ್ಯಗಳಿಂದೊಪ್ಪುತ ಕ್ಷಿತಿಯೊಳು ಮಂತ್ರಾಲಯ ಗ್ರಾಮಕೆ ಪ್ರತಿಯು ಇಲ್ಲವೆಂದೆನಿಸಿಕೊಂಬುದು" ಎಂದು ಸಾರಿದ್ದಾರೆ.

ಹರಿದಾಸ ಸಾಹಿತ್ಯದಲ್ಲಿ ನಿಂದಾಸ್ತುತಿ ಒಂದು ವಿಶಿಷ್ಟ ಪ್ರಕಾರ. ನಿಂದಾಸ್ತುತಿ ಎಂದರೆ ನಿಂದಿಸಿರುವ ಮಾತುಗಳನ್ನೊಳಗೊಂಡ ಸ್ತೋತ್ರಸಾಹಿತ್ಯ. ನಿಂದೆ, ಸ್ತೋತ್ರ ಇವೆರಡೂ ವಿರುದ್ಧ ಶಬ್ದಗಳೇ. ಆದರೆ ನಿಂದಿಸಿದರೂ, ಗೌರವಕ್ಕೆ ಕುಂದು ತಾರದಂತೆ ಕಥೆಯಿಂದ, ವ್ಯಾಜದಿಂದ ರಚಿಸಿರುವ ಸಾಹಿತ್ಯವೆಂದು ಗೋಕುಲನಾಥರು ವಿವರಿಸಿದ್ದಾರೆ. ಹೊರನೋಟಕ್ಕೆ ನಿಂದೆಯಾಗಿ ಕಂಡರೂ ಒಳನೋಟಕ್ಕೆ ಸ್ತುತಿಯಾಗಿರುತ್ತದೆ. ಎಲ್ಲ ಹರಿದಾಸರೂ ನಿಂದಾಸ್ತುತಿ ರಚಿಸಿಲ್ಲ, ರಚಿಸಿರುವವರಲ್ಲಿ ಅಗ್ರಸ್ಥಾನ ಪುರಂದರದಾಸರದು. ವಿಜಯದಾಸರ ೮ ನಿಂದಾಸ್ತುತಿಗಳು ದೊರೆತಿವೆ. ಸಾಮಾನ್ಯವಾಗಿ ದಶಾವತಾರದ ಪದ್ಯಗಳು ನಿಂದಾಸ್ತುತಿಯಲ್ಲಿ ಅಳವಟ್ಟಿವೆ. ಅದರಲ್ಲೂ ಕೃಷ್ಣಾವತಾರವನ್ನು ಕುರಿತವು ಹೆಚ್ಚು. ಕನ್ನಡದಲ್ಲಿ ಕೃಷ್ಣಗೀತೆಗಳು ಅಧಿಕವಾಗಿವೆ. ಆದರೆ ತಿರುಪತಿಯ ಶ್ರೀನಿವಾಸನನ್ನು ಕುರಿತ ಕೀರ್ತನೆಗಳು ಅತ್ಯಧಿಕವಾಗಿವೆ.

ವಿಜಯದಾಸರ ನಿಂದಾಸ್ತುತಿಗಳಲ್ಲಿ ಪ್ರಸಿದ್ಧವಾದುದು ತಿರುಪತಿಯ ಯಾತ್ರೆಯಲ್ಲಿ ನೂಕಿಸಿಕೊಂಡ, ದೇವದರುಶನ ದೊರಕದ ಸನ್ನಿವೇಶವೊಂದರಲ್ಲಿ ರಚಿಸಿದ ಕೀರ್ತನೆಯಾಗಿದೆ. ಜಯಮಂಗಳಂ ನಿತ್ಯ ಶುಭಮಂಗಳಂ ಎಂದು ವ್ಯಂಗ್ಯವಾಗಿ ಪ್ರಾರಂಭಿಸಿ ತೊಳಸದಕ್ಕಿಯನು ತಿನ್ನುವವನು ಕಿಲುಬು ತಳಿಗೆ ಯಲಿ ಉಂಬುವವನು .... ಎಲ್ಲವನು ಕಸುಕೊಂಬ ಕಳ್ಳದೊರೆಗೆ ಎಂದು ಸ್ತುತಿಸುತ್ತಾ ತಮ್ಮ ಅನುಭವವನ್ನು ವರ್ಣಿಸಿದ್ದಾರೆ. ಹೊನ್ನು ಹಣಗಳ ಕೊಂಡು

ತನ್ನ ದರುಶನ ಕೊಡದೆ ಬೆನ್ನೊಡೆಯ ಹೊಯಿಸುವ ಅನ್ಯಾಯಕಾರಿಗೆ ಜಯಮಂಗಳಂ ನಿತ್ಯ ಶುಭಮಂಗಳಂ ಎಂದಿದ್ದಾರೆ. ತಿರುಪತಿಯಲ್ಲಾದ ಇನ್ನೊಂದು ಅನುಭವದ ಹಿನ್ನೆಲೆಯಲ್ಲಿ "ನಿನ್ನದರುಶನಕೆ ಬಂದವನಲ್ಲವೊ ಪುಣ್ಯವಂತರ ದಿವ್ಯಚರಣ ನೋಡಲಿಕೆ ಬಂದೆನೊ" ಎಂದಿದ್ದಾರೆ. ಕೇವಲ ದೇವರನ್ನು ಅಲ್ಲ ಹರಿದಾಸರನ್ನೂ ಟೀಕಿಸಿದ್ದಾರೆ. ವಿಜಯದಾಸರು "ಭಕ್ತರನು ನಂಬದಿರು ಭವದೂರನೆ" ಎಂಬ ಕೀರ್ತನೆಯಲ್ಲಿ "ಪಾದ ಇಡುವನಿತರೊಳು ಕುಳಿತು ಆಮೇಲೆ ಸಂಪಾದಿಸುವ ತನ್ನ ತಕ್ಕಷ್ಟು ಧರಣಿಯನ್ನು" ಎಂದು ವಾಮನಾವತಾರವನ್ನು ಹರಿದಾಸರ ಮನೋಭಾವವನ್ನು ಶ್ಲೇಷೆಯಲ್ಲಿ ಚಿತ್ರಿಸಿದ್ದಾರೆ. 'ಪರದೇಶಿ ನೀನು ಸ್ವದೇಶಿ ನಾನು' ಕೀರ್ತನೆಯಲ್ಲಿ ತರ್ಕವನ್ನು ಚೆನ್ನಾಗಿ ತಂದಿದ್ದಾರೆ.

ಹರಿದಾಸರಿಗೆ ಎಲ್ಲ ಪುಣ್ಯಕ್ಷೇತ್ರಗಳು ಆದರಣೀಯವೇ ಆದರೂ ಪಂಚ ಕ್ಷೇತ್ರಗಳು ಮಾತ್ರ ವಿಶೇಷ ಆದರಕ್ಕೆ ಪಾತ್ರವಾಗಿವೆ. ಅವುಗಳೆಂದರೆ ಮಂತ್ರಾಲಯ, ಪಂಡರಾಪುರ, ಉಡುಪಿ, ತಿರುಪತಿ, ಬದರಿ. ಈ ಪೈಕಿ ಉಡುಪಿ ಕೇಂದ್ರಸ್ಥಾನ. ಈ ಕ್ಷೇತ್ರಗಳಲ್ಲಿ ಒಂದೊಂದಕ್ಕೆ ಒಂದೊಂದು ವಿಶೇಷತೆ ಇದೆ. ತಿರುಪತಿ ತಿಮ್ಮಪ್ಪ ಕಾಂಚನ ಬ್ರಹ್ಮ, ಪಂಡರಾಪುರದ ವಿಠಲ ನಾದಬ್ರಹ್ಮ, ಬದರಿನಾಥ ಜ್ಞಾನಬ್ರಹ್ಮ ಮಂತ್ರಾಲಯದ ರಾಘವೇಂದ್ರರು ಯೋಗಿಬ್ರಹ್ಮ ಅಂತೆಯೇ ಉಡುಪಿಯ ಶ್ರೀಕೃಷ್ಣ ಅನ್ನಬ್ರಹ್ಮ ಎಂದು ಭಕ್ತಾದಿಗಳು ಭಾವಿಸುತ್ತಾರೆ.

ಉಡುಪಿ ಎಂದೊಡನೆ ನೆನಪಾಗುವುದು ಆಚಾರ್ಯ ಮಧ್ವರು, ಶ್ರೀ ಕೃಷ್ಣಮಠಪರ್ಯಾಯ, ಕನಕನಕಿಂಡಿ, ಹರಿದಾಸರ ಕೀರ್ತನೆ. ಎಲ್ಲ ಪ್ರಸಿದ್ಧ ಹರಿದಾಸರಿಗೂ ಪೂಜ್ಯವಾದುದು ಪ್ರಿಯವಾದುದು ಉಡುಪಿಕ್ಷೇತ್ರ ಮತ್ತು ಉಡುಪಿ ಕೃಷ್ಣ ಎಂದರೆ ಅತಿಶಯೋಕ್ತಿ ಅಲ್ಲ. ಉಡುಪಿ ಕೃಷ್ಣನನ್ನು ಕುರಿತು ರಚಿತವಾದ ಇವರ ಕೃತಿಗಳು ಸುಮಾರು ೧೦೩ ಇದ್ದು ಅವುಗಳಲ್ಲಿ ಸಿಂಹಪಾಲು ೬೨ ಕೀರ್ತನೆಗಳೇ ಆಗಿವೆ. ಈ ಕೀರ್ತನೆಗಳಲ್ಲಿ ಉಡುಪಿಯ ಕ್ಷೇತ್ರಮಹಿಮೆ ಪರ್ಯಾಯದ ವಿವರ, ಮಧ್ವಸರೋವರ ಮಹಾತ್ಮೆ ಮೊದಲಾದ ಸಂಗತಿಗಳು ವ್ಯಕ್ತವಾಗಿವೆ. ಉಡುಪಿ ಕೃಷ್ಣನನ್ನು ಕುರಿತು ಅತ್ಯಧಿಕ ಕೀರ್ತನೆಗಳನ್ನು ರಚಿಸಿರುವ ಹಿರಿಯ ಹರಿದಾಸರಲ್ಲಿ ವಾದಿರಾಜರು ಅಗ್ರಗಣ್ಯರು.

ವಿಜಯದಾಸರು ೧೮ ಕೀರ್ತನೆಗಳನ್ನು ಕೆಲವು ಸುಳಾದಿಗಳನ್ನು ಉಡುಪಿಯ ಶ್ರೀ ಕೃಷ್ಣನನ್ನು ಕುರಿತು ರಚಿಸಿದ್ದಾರೆ.

ಉಗಾಭೋಗಗಳ ಸಾಮಾನ್ಯ ಸ್ವರೂಪ

ಹರಿದಾಸ ಸಾಹಿತ್ಯವನ್ನು ಸಮಗ್ರವಾಗಿ ಸಮೀಕ್ಷಿಸಿದರೆ ಮುಖ್ಯವಾಗಿ ಕೀರ್ತನೆ, ಸುಳಾದಿ, ಉಗಾಭೋಗಗಳೆಂಬ ಮೂರು ಪ್ರಧಾನ ಪ್ರಭೇದಗಳು ಕಂಡುಬರುತ್ತವೆ. ದಂಡಕ, ವೃತ್ತನಾಮ, ಸುವ್ವಾಲಿ ಮೊದಲಾದ ಇತರ ಪ್ರಕಾರಗಳು ಈ ಪ್ರಮಾಣದಲ್ಲಿಲ್ಲ. ಸಂಖ್ಯಾದೃಷ್ಟಿಯಿಂದ ನೋಡಿದಾಗ ಕೀರ್ತನೆ, ಸುಳಾದಿ, ಉಗಾಭೋಗಗಳು ಕ್ರಮವಾಗಿ ಮೊದಲನೆಯ ಎರಡನೆಯ ಮತ್ತು ಮೂರನೆಯ ಸ್ಥಾನವನ್ನು ಪಡೆಯುತ್ತವೆ ಎನ್ನುತ್ತಾರೆ. ಗೋರಬಾಳ ಹನುಮಂತರಾಯರು "ಸದ್ಯದಲ್ಲಿ ವಿಜಯದಾಸರ ೫೨೫ ಸುಳಾದಿಗಳು ೪೮೦ ಪದಗಳು ಮತ್ತು ೭೨ ಉಗಾಭೋಗಗಳು ಲಭ್ಯವಾಗಿದೆ" ಎನ್ನುತ್ತಾರೆ. ಇನ್ನೊಂದೆಡೆ "ವಿಜಯದಾಸರು ಚಿಪ್ಪಗಿರಿಯಲ್ಲಿ ತೀರಿಕೊಳ್ಳುವ ಮುನ್ನ ದೇಶದಲ್ಲೆಲ್ಲ ತಮ್ಮ ಪ್ರಭಾವವನ್ನು ಬೀರಿ ೮೮೨ ಪದಗಳನ್ನೂ ೫೨೫ ಸುಳಾದಿಗಳನ್ನೂ ರಚಿಸಿದರು. ಇವುಗಳಲ್ಲಿ ಬಹುಭಾಗ ಪ್ರಕಟವಾಗಿದೆ ಎಂದು ಹೇಳಲಾಗಿದೆ." ಸಾಮಾನ್ಯವಾಗಿ ಯಾವೊಬ್ಬ ಹರಿದಾಸರ ಕೃತಿಗಳನ್ನು ಪರಿಗಣಿಸಿದರೂ ಇದೇ ರೀತಿ ಕೀರ್ತನೆಗಿಂತ ಸುಳಾದಿ, ಸುಳಾದಿಗಿಂತ ಉಗಾಭೋಗಗಳ ಸಂಖ್ಯೆ ಕಡಿಮೆ ಇವೆ ಎನ್ನಬಹುದು. ಆದರೆ ಗಾತ್ರದ ದೃಷ್ಟಿಯಿಂದ ಹೇಳುವುದಾದರೆ, ಸುಳಾದಿಗಿಂತ ಕೀರ್ತನೆ ಚಿಕ್ಕದು, ಕೀರ್ತನೆಗಿಂತ ಉಗಾಭೋಗ ಚಿಕ್ಕದು. ಸಾಮಾನ್ಯವಾಗಿ ಒಂದು ಉಗಾಭೋಗದ ವ್ಯಾಪ್ತಿ ಕೇವಲ ಎರಡು ಸಾಲುಗಳಿಂದ ಇಪ್ಪತ್ತಾರು ಸಾಲುಗಳವರೆಗೆ ಕಂಡು ಬಂದಿದೆ." ಸುಮಾರು ೫೦೦ ಉಗಾಭೋಗಗಳು ಕನ್ನಡ ಭಾಷೆಯಲ್ಲಿ ರಚಿತವಾಗಿವೆ ಎಂದು ವಿದ್ವಾಂಸರು ಅಂದಾಜು ಮಾಡಿದ್ದಾರೆ.

ಉಗಾಭೋಗದ ಹಿರಿಮೆಯನ್ನು ಕುರಿತು ಹರಿದಾಸರತ್ನ ಗೋಪಾಲದಾಸರು "ಹರಿದಾಸ ವಾಙ್ಮಯದಲ್ಲಿ ನೂರು ಪದಗಳನ್ನು (ದೇವರನಾಮ) ಪಠಿಸಿದರೆ ಬರುವ ಫಲ ಒಂದು ಸುಳಾದಿಯ ಪಠಣದಿಂದ, ನೂರು ಸುಳಾದಿಯ

ಪತಣದಿಂದ ಬರುವ ಫಲ ಒಂದು ಉಗಾಭೋಗದ ಪತಣದಿಂದ ಬರುತ್ತದೆ" ಎಂದಿದ್ದಾರೆ. ಸತ್ತ್ವದ ಸಾರದೃಷ್ಟಿಯಿಂದ ಹೇಳುವುದಾದರೆ "ಮಿತವಾದ ಮಾತು, ಹಿತವಾದ ಸರಣಿ, ಉತ್ಕಟವಾದ ಅನುಭವ – ಇವು ಮೂರೂ ಕೂಡಿ ಈ ಉಗಾಭೋಗಗಳು ಅನರ್ಘ್ಯ ರತ್ನ ವೈಢೂರ್ಯಗಳಂತಿವೆ" ಎಂಬ ಮಾತು ನಿಜ.

ಸಮಗ್ರ ಹರಿದಾಸ ಸಾಹಿತ್ಯದಲ್ಲಿ ಪ್ರಯೋಗವಾಗಿರುವ ವಿವಿಧ ಪ್ರಕಾರಗಳನ್ನು ಕಂಡರೆ ಅವುಗಳನ್ನು ಗೇಯ ಪ್ರಕಾರಗಳೆಂದೂ ಛಂದೋಬದ್ಧವಾದ ಹಾಡುಗಬ್ಬಗಳ ಪ್ರಕಾರಗಳೆಂದೂ ಎರಡು ವರ್ಗಗಳನ್ನಾಗಿ ವಿಂಗಡಿಸಬಹುದು. ಇವು – ಗಳಲ್ಲಿ ಮೊದಲನೆಯ ವರ್ಗದಲ್ಲಿ ಉಗಾಭೋಗ ಸೇರುತ್ತದೆ ಎಂದು ಜಿ. ವರದರಾಜರಾವ್ ಹೇಳಿದ್ದಾರೆ.

ಕೀರ್ತನೆ ಎಂದರೇನು, ಸುಳಾದಿ ಎಂದರೇನು ಇತ್ಯಾದಿಗಳ ವಿಚಾರದಲ್ಲಿ ಅಷ್ಟಾಗಿ ಚರ್ಚೆ ಕಂಡುಬರುವುದಿಲ್ಲ ಏಕೆಂದರೆ ಅವುಗಳನ್ನು ನಿರ್ದಿಷ್ಟ ಲಕ್ಷಣಗಳಿಂದ ಗುರುತಿಸಿದ್ದಾರೆ ಮತ್ತು ಸಾಮಾನ್ಯವಾಗಿ ಒಂದು ಖಚಿತವಾದ ಚೌಕಟ್ಟಿನಲ್ಲಿ ಅವು ಬರುತ್ತವೆ. ಆದರೆ ಉಗಾಭೋಗ ಹಾಗಲ್ಲ, ಅದರ ವ್ಯಾಖ್ಯೆಯ ಬಗೆಗೆ ಸಾಕಷ್ಟು ಜಿಜ್ಞಾಸೆಗಳು ನಡೆದಿವೆ. ಉಗಾಭೋಗವೆಂದರೇನು ಎಂಬುದಕ್ಕೆ ಸರ್ವಸಮರ್ಪಕ ವ್ಯಾಖ್ಯೆ ನಿರ್ಧಾರಿತವಾಗಿಲ್ಲ ಎನ್ನಬಹುದು. ಇದಕ್ಕೆ ನಿದರ್ಶನವಾಗಿ ಕೆಲವು ವ್ಯಾಖ್ಯೆಗಳನ್ನು ಗಮನಿಸಬಹುದು.

ಡಾ. ಆರ್. ಸತ್ಯನಾರಾಯಣ: "ಉಗಾಭೋಗವೆಂಬ ಪ್ರಬಂಧದ ಸ್ವರೂಪವು ಕನಿಷ್ಠಪಕ್ಷ ಐದು ಶತಮಾನಗಳಷ್ಟು ಹಿಂದಿನ ಇತಿಹಾಸವನ್ನು ಉಳ್ಳದ್ದಾದರೂ ಯಾವ ಸಂಗೀತ ಶಾಸ್ತ್ರಗ್ರಂಥಗಳಲ್ಲಿಯೂ ಉಕ್ತವಾಗಿಲ್ಲ...... ಉಗಾಭೋಗ ಎಂಬ ಶಬ್ದದ ಉತ್ಪತ್ತಿಯೂ ಅದರ ಮೂಲದಂತೆಯೇ ಅಸ್ಪಷ್ಟವಾಗಿದೆ."

ಡಾ. ಕೆ. ಎಂ. ಕೃಷ್ಣರಾವ್ : ಉಕ್+ಆಭೋಗ = ಉಗಾಭೋಗ ಮನುಷ್ಯನ ಅನುಭವಕ್ಕೆ ಬಂದುದೆಲ್ಲಾ ಆಭೋಗ. ಅಂತಹ ಅನುಭವಕ್ಕೆ ಬಂದ

ವಿಷಯಗಳನ್ನು ಸಂಕ್ಷೇಪವಾಗಿ ಮಾತಿನ ರೂಪದಲ್ಲಿ ಹೇಳುವುದೇ ಉಗಾಭೋಗ. ಉಗಾಭೋಗವೆಂದರೆ ಅನುಭವಸಾರ.

ಶ್ರೀ ಹಲಗೂರು ಕೃಷ್ಣಾಚಾರ್ಯರು : "ಉದ್ಗ್ರಾಹ, ಮೇಲಾಪಕ, ಧ್ರುವ, ಅಂತರಾ ಮತ್ತು ಆಭೋಗ ಎಂಬ ಐದು ಧಾತುಗಳು ಈ ರಚನೆಯಲ್ಲಿರು-ವುದರಿಂದ ಮೊದಲ ಮತ್ತು ಕೊನೆಯ ಧಾತುವನ್ನು ಸೇರಿಸಿ ಉದ್ಗ್ರಾಹಾಭೋಗ ಎಂದಿದ್ದು ಆ ಶಬ್ದ ಅನಂತರ ಉಗಾಭೋಗ ಆಗಿರಬೇಕು".

ಡಾ. ಭೀಮರಾವ್ ಚಿಟಗುಪ್ಪಿ : "ಐದು ಧಾತುಗಳಲ್ಲಿ 'ಅಂತರಾ' ಎಂಬುದು ಸಾಲಗ ಅಥವಾ 'ಛಾಯಾಲಗ' ಸೂಡಗಳಲ್ಲಿ ಮಾತ್ರ ಇದ್ದು ಉಳಿದ ನಾಲ್ಕು ಧಾತುಗಳಿಂದುಂಟಾದ ಅಪಭ್ರಂಶ ರೂಪವೇ ಉಗಾಭೋಗ".

ಡಾ. ಆರ್.ಸಿ.ಗುಡಿ : "ಕೀರ್ತನೆ, ಸುಳಾದಿಗಳಲ್ಲಿ ಚಿಗುರಿದಂತಿರುವ ಭಾವವನ್ನು ಒಟ್ಟಾಗಿ ಕಟ್ಟಿಕೊಡುವ ರಸಘಟ್ಟಿಗಳೇ ಉಗಾಭೋಗಗಳೆನ್ನಬಹುದು".

ಡಾ. ಎನ್ಕೆ : "ಉಗಾಭೋಗವು ಸಂಗೀತಯೋಗ್ಯವಾದ ಒಂದು ಸುಂದರ ಸಾಹಿತ್ಯ ರಚನೆ".

ಸುಬೋಧ ಯಂ. ರಾಮರಾಯರು : "ಉ=ಊರ್ಧ್ವಲೋಕಕ್ಕೆ ಗಾ=ಹೋಗತಕ್ಕಂಥಾ ಭಾಗ ಯಾವುದೋ ಅದು ಉಗಾಭೋಗ ಅಥವಾ ಉಗಾಭಾಗ. ಇದು ಸುಳಾದಿಯ ಖಿಲಭಾಗ". ಹೀಗೆ ಹಲವಾರು ಮಂದಿ ವಿದ್ವಾಂಸರು ಉಗಾಭೋಗ ಪದದ ಉತ್ಪತ್ತಿ ಬಗ್ಗೆ ಹಾಗೂ ಅದರ ಲಕ್ಷಣದ ಬಗ್ಗೆ ವಿವರಣೆ ನೀಡಿದ್ದಾರೆ, ಚರ್ಚಿಸಿದ್ದಾರೆ. ಒಬ್ಬರ ವ್ಯಾಖ್ಯೆಯನ್ನು ಇನ್ನೊಬ್ಬರು ವಿಮರ್ಶಿಸಿದ್ದಾರೆ. ಚರ್ಚೆಗೆ ಒಳಗಾಗಿದ್ದಾರೆ.

ಉದಾಹರಣೆಗೆ ಹೇಳುವುದಾದರೆ, ರಾ. ಸತ್ಯನಾರಾಯಣ ಅವರು "ಭಗವಂತ ನಲ್ಲಿ ಐಕ್ಯವಾಗಿ ಆನಂದಿಸುವುದೇ ಯುಗಾಭೋಗ. ಈ ಪದದ ವ್ಯತ್ಯಸ್ತರೂಪ

ಉಗಾಭೋಗ" ಎಂದರೆ ಅದನ್ನು ಕುರಿತು ಡಾ. ಕೆ. ಗೋಕುಲನಾಥರು ಯುಗಾಭೋಗವೆಂದರೆ ಪರಮಾತ್ಮನೊಡನೆ ಒಂದಾಗಿ ಸಂತೋಷಿಸುವುದು ಎಂದರ್ಥ. ರಾ. ಸತ್ಯನಾರಾಯಣರು ಮಾತನ್ನು ಒಪ್ಪುವುದಿಲ್ಲ. ಅದಕ್ಕೆ ಅವರು ನೀಡುವ ಕಾರಣ ಇದು. "ಹರಿದಾಸರಿಗೆ ಪರಮಾತ್ಮನೊಡನೆ ಒಂದಾಗಿ ಸಂತೋಷಿಸುವ ದೃಷ್ಟಿ ಇರಲಿಲ್ಲ. ಅದ್ವೈತ ತತ್ವವನ್ನು ಹರಿದಾಸರು ಒಪ್ಪದಿರುವುದರಿಂದ ಯುಗಾಭೋಗ ಎಂಬ ಶಬ್ದ ಉಗಾಭೋಗ ಆಯಿತು ಎಂಬುದನ್ನು ಒಪ್ಪುವಂತಿಲ್ಲ".

ಈ ರೀತಿ ನಾನಾ ವಿದ್ವಾಂಸರು ನಡೆಸಿದ ಚರ್ಚೆ ನೀಡಿದ ವ್ಯಾಖ್ಯೆಗಳನ್ನೆಲ್ಲ ಸಮೀಕ್ಷಿಸಿ, ಡಾ. ಜಿ. ವರದರಾಜರಾವ್ ಅವರು ತಮ್ಮ ಉದ್ಗ್ರಂಥ ಹರಿದಾಸ ಸಾಹಿತ್ಯಸಾರ (ಪು.೪೦೬)ದಲ್ಲಿ ಉಗಾಭೋಗದ ಲಕ್ಷಣಗಳನ್ನು ಹೀಗೆ ಸಂಗ್ರಹಿಸಿಕೊಟ್ಟಿದ್ದಾರೆ.

(೧) ಸಂಗೀತ ಶಾಸ್ತ್ರ ಗ್ರಂಥಗಳಲ್ಲಿ ಇದನ್ನು ಒಂದು ನಿರ್ದಿಷ್ಟವಾದ ರೂಪಕ್ಕೆ ಸಂಬಂಧಿಸಿದಂತೆ ಪಾರಿಭಾಷಿಕಾರ್ಥದಲ್ಲಿ ಬಳಸದಿದ್ದರೂ ಅದು ಪ್ರಬಂಧದ ಆಧಾರದ ಮೇಲೆ ಈ ಪ್ರಕಾರವು ಅದರ ಖಿಲಭಾಗವೆಂದೂ, ಅದರಿಂದ ಜನ್ಯವಾದ ಒಂದು ಪ್ರಕಾರವೆಂದೂ ಭಾವಿಸಬಹುದಾಗಿದೆ. ಹರಿದಾಸರ ಮೂಲಕ 'ಉಗಾಭೋಗ'ವೆನ್ನುವುದು ಒಂದು ಸ್ವತಂತ್ರವಾದ ಪ್ರಕಾರವಾಗಿ ಪರಿಗಣಿತವಾಗಿ ಆ ಬಳಿಕ ಪುರಂದರದಾಸರು, ವಿಜಯದಾಸರು ಮತ್ತು ಪ್ರಸನ್ನ ವೆಂಕಟದಾಸರ ರಚನೆಗಳಲ್ಲಿ ಪ್ರಯೋಗವಾಗಿರುವುದು ವಿದಿತವಾಗುತ್ತದೆ. ಆದ್ದರಿಂದ ಇದರ ಉಗಮವನ್ನು ಬೆರಳಿಟ್ಟು ತೋರಿಸಲಾಗದಿದ್ದರೂ ಇದು ಒಂದು ಜನ್ಯ ಪ್ರಕಾರವೆಂದು ಹೇಳಬಹುದು.

(೨) ಉಗಾಭೋಗಗಳು ಸಂಸ್ಕೃತದ ಶ್ಲೋಕಕ್ಕೆ ಸಂವಾದಿಯಾದ ಪ್ರಕಾರವೆಂದು ಹೇಳಲು ಹರಿದಾಸರ ರಚನೆಗಳಲ್ಲಿ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ.

(೩) ಉಗಾಭೋಗವು ಸಂಗೀತಗ್ರಂಥಗಳಲ್ಲಿ ಉಕ್ತವಾಗಿರುವ ಪಂಚಧಾತುಗಳನ್ನು ಅವಲಂಬಿಸಿ ಸಂದರ್ಭೋಚಿತವಾಗಿ ಎರಡು ಅಥವಾ ಮೂರು ಧಾತುಗಳನ್ನು ಒಳಗೊಂಡಿರುತ್ತದೆ.

(೪) ಉಗಾಭೋಗವನ್ನು ಇಂದು ಕನ್ನಡದಲ್ಲಿ ಶ್ಲೋಕದಂತೆಯೋ ಇಲ್ಲವೇ ಭಾರತ ವಾಚನದ ಗಮಕ ರೀತಿಯಲ್ಲಿಯೋ ಹಾಡುವುದು ರೂಢಿ.

(೫) ಉಗಾಭೋಗದ ಸಾಹಿತ್ಯದಲ್ಲಿ ವೈವಿಧ್ಯವಿದ್ದರೂ ಅದು ಪ್ರಮುಖವಾಗಿ ಧಾರ್ಮಿಕ, ಸಾಂಪ್ರದಾಯಿಕ ವಿಚಾರ, ಆಧ್ಯಾತ್ಮಿಕ ಮತ್ತು ದೈವಸ್ತುತಿಗಳನ್ನು ಕುರಿತಿದ್ದಾಗಿರುತ್ತದೆ. ಅದರಲ್ಲಿ ಸರಳವೂ ಸಂಕ್ಷಿಪ್ತವೂ ಆದ ವಿಷಯವಿದ್ದು ಒಂದು ಅಥವಾ ಹೆಚ್ಚು ಪಂಕ್ತಿಗಳಿರುತ್ತವೆ.

(೬) ಅದರಲ್ಲಿ ಪ್ರಾಸಂಗಿಕವಾಗಿ ಛಂದೋರೂಪವೂ, ಕಾವ್ಯದ ಲಕ್ಷಣಗಳೂ ಕಂಡುಬಂದರೂ ಅದು ಆಗಿಂದಾಗ್ಗೆ ಗದ್ಯದಂತೆಯೇ ಇರುತ್ತದೆ.

(೭) ಅದು ಯಾವುದಾದರೊಂದು ವಿಧಾಯಕವಾದ ರಾಗ ಅಥವಾ ರಾಗಗಳಿಗೆ ಸಂಬಂಧಿಸಿರುವುದಿಲ್ಲ. ಇಲ್ಲವೇ ಯಾವುದಾದರೂ ನಿರ್ದಿಷ್ಟವಾದ ರೂಪ ಅಥವಾ ಸಂಗೀತ ಸಂವಿಧಾನಕ್ಕೆ ಒಳಪಟ್ಟಿರುವುದಿಲ್ಲ. ಸಾಧಾರಣವಾಗಿ ಅದನ್ನು ಯಾವುದಾದರೊಂದು ರಾಗದಲ್ಲಿ ಹಾಡುವುದು ರೂಢಿ.

ಈ ಸಂದರ್ಭದಲ್ಲಿ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ವಚನಗಳಿಗೂ ಮತ್ತು ಉಗಾಭೋಗಗಳಿಗೂ ಇರುವ ಸಂಬಂಧ ಮತ್ತು ಪ್ರಭಾವ. ಈ ವಿಷಯವಾಗಿ ಹಲವು ವಿದ್ವಾಂಸರು ಈಗಾಗಲೇ ಸಾಕಷ್ಟು ಚರ್ಚಿಸಿದ್ದಾರೆ. ಈ ಪೈಕಿ ಡಾ. ಚಿದಾನಂದಮೂರ್ತಿ ಅವರು ಎತ್ತಿದ ಪ್ರಶ್ನೆಗಳು ಗಮನಾರ್ಹವಾಗಿವೆ.

"ಹರಿದಾಸರು ಶಿವಶರಣರಂತೆ ವಚನಗಳನ್ನು ಬರೆಯಲು ಮಾಡಿದ ಪ್ರಯತ್ನಗಳ ಫಲವಿರಬಹುದೇ ಉಗಾಭೋಗಗಳು? ಅಥವಾ ವಚನಗಳಿಗೂ ಉಗಾಭೋಗಗಳಿಗೂ ಒಂದು ಮೂಲವಿರಬಹುದೇ?" ಎಂಬ ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಇದಕ್ಕೆ ಹಲವರು ಹಲವು ಬಗೆಯ ಉತ್ತರಗಳನ್ನು ನೀಡಿದ್ದಾರೆ: ಡಾ. ಜಿ. ವರದರಾಜರಾವ್ ಅವರ ಅಭಿಪ್ರಾಯ ಹೀಗಿದೆ. "ಈಗಾಗಲೇ ಪ್ರಸ್ತಾಪಿಸಿರುವಂತೆ ಉಗಾಭೋಗಗಳು ಸುಳಾದಿಗಳ ಖಿಲಭಾಗಗಳು. ಅವು ಪ್ರಮುಖವಾಗಿ ಸಂಗೀತಾವಲಂಬಿಯಾದ ಬಂಧಗಳು. ಈ ರೀತಿ ಉಗಮ ಹೊಂದಿದ ಉಗಾಭೋಗ ಪ್ರಕಾರ ಕಾಲಕ್ರಮದಲ್ಲಿ ಸ್ವತಂತ್ರವಾಗಿ ರಾಗ ಪ್ರಧಾನವಾದ ರಚನೆಯಾಗಿ ಬೆಳೆಗುಬಂದಿರಬಹುದು. ಈ ಅವಧಿಯಲ್ಲಿ ವಚನ ಸಾಹಿತ್ಯದ ಪ್ರಭಾವ ಪರೋಕ್ಷವಾಗಿಯೋ ಪ್ರತ್ಯಕ್ಷವಾಗಿಯೋ ಆಗಿರಬಹುದು. ಇವುಗಳಲ್ಲಿ ಕೆಲವು ಇತರರಿಂದ ಅಂಕಿತಪಲ್ಲಟವಾಗಿರಲೂಬಹುದು". ಉಗಾಭೋಗದ ವ್ಯುತ್ಪತ್ತಿಯಂತೆಯೇ ಈ ವಿಚಾರವೂ ಚರ್ಚೆಗೆ ಗ್ರಾಸವಾಗಿದೆ.

ವಿಜಯದಾಸರ ಉಗಾಭೋಗಗಳ ಸ್ವರೂಪ

ಸುಳಾದಿದಾಸರೆಂದು ಪ್ರಸಿದ್ಧರಾಗಿ ದಾಸಸಾಹಿತ್ಯದ ದ್ವಿತೀಯ ಘಟ್ಟದ ಪ್ರಮುಖರಾಗಿ ಮಳೆಗಾಲದ ಪ್ರವಾಹದಂತೆ ಭೋರ್ಗರೆದ ದಾಸ ಸಾಹಿತ್ಯ ಪ್ರವಾಹ ಬೇಸಿಗೆಯ ನದಿಯಂತೆ ಕೃಶವಾಗಿ ಹರಿಯತೊಡಗಿದಾಗ ಶಿಷ್ಯ ಪರಂಪರೆ ಮೂಲಕ ಹಾಗೂ ಸ್ವರಚನೆಗಳಿಂದ ಹಾಗೂ ವ್ಯಕ್ತಿತ್ವದಿಂದ ಪರಂಪರೆಯನ್ನು ಮುಂದುವರೆಸಿದವರು ವಿಜಯದಾಸರು. ಸುಳಾದಿಗಳ ಜತೆಗೆ ಕೀರ್ತನೆಗಳನ್ನೂ, ಉಗಾಭೋಗಗಳನ್ನೂ ರಚಿಸಿದ್ದಾರೆ. ವಿಜಯದಾಸರ ಉಗಾಭೋಗಗಳು ದೊರಕಿರುವುದು ಸಂಖ್ಯೆಯಲ್ಲಿ ಕಡಿಮೆ ಆದರೂ ಸತ್ತ್ವದಲ್ಲಿ ಕಡಿಮೆಯೇನಲ್ಲ. ಸೊಗಸಾದ ಉಗಾಭೋಗಗಳನ್ನು ರಚಿಸಿದವರಲ್ಲಿ ವಿಜಯದಾಸರೂ ಒಬ್ಬರು.

ವಿಜಯದಾಸರ ಉಗಾಭೋಗಗಳು (೬೮) ವಿಷಯ ನಿರೂಪಣೆ ವೈವಿಧ್ಯದಲ್ಲಿ ಸಾಕಷ್ಟು ಗಮನಾರ್ಹವೆನಿಸಿದೆ. ಅವರು ಹಾಡಿದ ಉಗಾಭೋಗಗಳಲ್ಲಿ ಸುಮಾರು ಕಾಲು ಭಾಗದಷ್ಟು ಚಾಗಿ ಕೇಶವರಾಯನ್ನ ಬದುಕಿಸಿದ ಪ್ರಸಂಗಕ್ಕೆ ಸಂಬಂಧಿಸಿದೆ. ೧೨ ರಿಂದ ೧೫ ಉಗಾಭೋಗಗಳು ಈ ಪ್ರಸಂಗದವಾಗಿವೆ.

ವಿಜಯದಾಸರ ಉಗಾಭೋಗಗಳಲ್ಲಿ ಅವರ ಜೀವನದ ಘಟನೆಗಳಿಗೆ ಸಂಬಂಧಿಸಿದವೂ ಇವೆ. ಉದಾಹರಣೆಗೆ "ಒಂದು ಕೈಯಲ್ಲಿ ಖಡ್ಗ, ಒಂದು ಕೈಯಲ್ಲಿ ಹಲಗೆ" ಎಂದು ಪ್ರಾರಂಭವಾಗುವ ಉಗಾಭೋಗವು ದಾಸರ ಶಿಷ್ಯರಾದ ಗೋಪಾಲದಾಸರು ಉಡುಪಿಗೆ ಹೋಗಲು ಅನುಮತಿ ಕೇಳಿದಾಗ ದಾರಿಯಲ್ಲಿ ಸಿಗುವ ಮಂಡಗಡ್ಡೆಯಲ್ಲಿ ಭೀಮ ಎಂಬ ದರೋಡೆಕೋರ ಯಾತ್ರಾರ್ಥಿಗಳನ್ನು ಸತ್ಕರಿಸಿ ಅವರಲ್ಲಿರುವ ವಸ್ತು ಒಡವೆಗಳ ವಿವರ ತಿಳಿದು ಮುಂದಿನ ಊರಿಗೆ ಅವರು ತೆರಳುವಾಗ ದಾರಿಯಲ್ಲಿ ದರೋಡೆ ಮಾಡುತ್ತಿದ್ದಾನೆಂದು ತಿಳಿಸಿ, ಅವನಿಂದ ಪಾರಾಗಲು ಈ ಉಗಾಭೋಗವನ್ನು ಗೋಪಾಲದಾಸರಿಗೆ ರಕ್ಷಾಬಂಧವಾಗಿ ಉಪದೇಶಿಸಿದರು. ಇದನ್ನು ಪಠಿಸಿದ್ದರ ಫಲವಾಗಿ ಹರಿಯೇ ಖಡ್ಗಪಾಣಿಯಾಗಿ ಭೀಮನಿಂದ ರಕ್ಷಿಸಿದನೆಂದು ಹೇಳುತ್ತಾರೆ. ಈ ವಿಚಾರವನ್ನು ತಂದೆ ಗೋಪಾಲವಿಠಲರು ತಮ್ಮ ಸುಳಾದಿಯೊಂದರಲ್ಲಿ ಪ್ರಸ್ತಾಪಿಸಿದ್ದಾರೆ. ತುಂಗಾ ತೀರದಲ್ಲಿರುವ ಆದವಾನಿ ತಾಲ್ಲೂಕಿಗೆ ಸೇರಿದ ಹೀರೆಚಾಗಿ ಹಳ್ಳಿಯಲ್ಲಿ ದೇಸಾಯಿ ಮನೆತನದ ಚಾಗಿ ಕೇಶವರಾಯನನ್ನು ಬದುಕಿಸಿದ ಪ್ರಸಂಗ ಗಮನಾರ್ಹವಾದುದು. ಏಕೆಂದರೆ ಈ ಸಂದರ್ಭದಲ್ಲಿ ವಿಜಯದಾಸರು ರಚಿಸಿದ ಉಗಾಭೋಗಗಳಲ್ಲಿ ಇರುವ ಪ್ರಾರ್ಥನಾ ವೈಖರಿ ಸೊಗಸಾದುದು. ಈ ಪ್ರಸಂಗ ವಿಜಯದಾಸರ ಮಹಿಮಾತಿಶಯವನ್ನು ತಿಳಿಸುವುದರ ಜತೆಗೆ ಅವರ ಹಲವು ಉಗಾಭೋಗಗಳ ರಚನೆಯಾದ ಹಿನ್ನೆಲೆಯನ್ನು ತಿಳಿಸುತ್ತದೆ. ಚಾಗಿ ಕೇಶವರಾಯನಿಗೆ ಬಂದ ಅಪಮೃತ್ಯುವನ್ನು ನಿವಾರಿಸಿದ ಪ್ರಸಂಗವನ್ನು ಬೇಲೂರು ಕೇಶವದಾಸರು ಸ್ವಲ್ಪ ಭಿನ್ನವಾಗಿ ನಿರೂಪಿಸಿದ್ದಾರೆ. ವಿಜಯದಾಸರು ಬದುಕಿಸಿದ್ದು ಚಾಗಿ ಕೇಶವನನ್ನಲ್ಲ ಅವನ ಮಗನನ್ನು ಎಂದಿದ್ದಾನೆ. ಉಳಿದ ಜೀವನ ಚರಿತ್ರಕಾರರು ಚಾಗಿ ಕೇಶವರಾಯನನ್ನೇ ಬದುಕಿಸಿದ್ದು ಎಂದಿದ್ದಾರೆ. ಈ ಪ್ರಸಂಗದಲ್ಲಿ ದಾಸರ ವೈಶಿಷ್ಟ್ಯವೊಂದು ಗಮನಿಸುವಂತಹುದು. ತಮ್ಮ ಮಗ ಶೇಷಗಿರಿದಾಸರಿಗೆ, ದತ್ತುಮಗ ಮೋಹನದಾಸರಿಗೆ, ಶಿಷ್ಯನಾದ ವೇಣುಗೋಪಾಲದಾಸರಿಗೆ ಹಾಗು ಜಗನ್ನಾಥದಾಸರಿಗೆ ಅಪಮೃತ್ಯು ಉಂಟಾದಾಗ ಆ ಎಲ್ಲ ಸಂದರ್ಭಗಳಲ್ಲಿ ಭಗವಂತನಿಗೆ ಮೊರೆಹೊಕ್ಕು ಅವನನ್ನು ಸ್ತುತಿಸಿ ಅವರೆಲ್ಲರನ್ನೂ ಮೃತ್ಯುವಿನಿಂದ ಪಾರು ಮಾಡಿದ್ದಾರೆ. ವಿಜಯದಾಸರ ಸ್ತೋತ್ರಗಳಲ್ಲಿರುವ ಮಂತ್ರಶಕ್ತಿ

ಅಭೂತಪೂರ್ವವಾದುದು, ಅಂತೆಯೇ ಸಾಹಿತ್ಯದ ಸೊಗಸು ಮನನೀಯವಾಗಿದೆ. ಮಂತ್ರಶಕ್ತಿಯ ಮತ್ತು ಸಾಹಿತ್ಯದ ಸವಿಗೆ ಚಾಗಿ ಕೇಶವರಾಯನನ್ನು ಉಳಿಸಲು ಹಾಡಿದ ಉಗಾಭೋಗಗಳು ನಿದರ್ಶನಗಳಾಗಿವೆ. ಈ ಪ್ರಸಂಗ ನಡೆದದ್ದು ಕ್ರಿ.ಶ. ೧೭೫೦ನೇ ಇಸವಿಯಲ್ಲಿ ಪ್ರಮೋದ ಸಂವತ್ಸರದಲ್ಲಿ ಎನ್ನಲು " ಪ್ರಮೋದ ಸಂವತ್ಸರದಲೆನ್ನವರಿಗೆ । ರೋಮಕುಂದದು ಕಾಣೋ ನೀನೊಲಿದಿರಲು ಪ್ರಮೋದವಲ್ಲದೆ ಕ್ಲೇಶ ಲೇಶವಿಲ್ಲ ...." ಎಂಬ ಉಗಾಭೋಗ ನಿದರ್ಶನವಾಗಿದೆ.

ಭಕ್ತನೊಬ್ಬ ಭಗವಂತನಲ್ಲಿ ಆರ್ತನಾಗಿ ಹೇಗೆ ಮೊರೆಯಿಡುತ್ತಾನೆ ಎಂಬುದನ್ನು ಈ ಸಾಲುಗಳು ಚೆನ್ನಾಗಿ ಪ್ರತಿಧ್ವನಿಸುತ್ತವೆ: "ಮಂಗಳಪ್ರದ ನೀನು ನಿನ್ನ ಭಜಿಸಿದ ಜನರ । ಸಂಗದಲಿ ಇದ್ದ ಮಾನವನಿಗೆ ಸತತ । ಮಂಗಳವಲ್ಲದೆ ಕ್ಲೇಶಗಳಿಲ್ಲ । ಮರಿಗುಬ್ಬಿ ಬಾಯಿಬಿಟ್ಟಂತೆ ಬಿಡುತಲಿನಿಂದು । ಸೆರೆಗೊಡ್ಡಿ ಬೇಡಿ ಕೇಳುತಿಹಳೋ ಜೀಯ......... ಬರಿದಾಗಗೊಡದಿರು ಬ್ರಾಹ್ಮಣಗೆ ಬಂದ ದುರಿತ ತರಿದಟ್ಟಿ ರೋಗಗಳ ಕಳೆಯೊ". "ಅಬಲೆಯ ಮಾತಿಗೆ ಮನಸು ಕರಗಿತು ನಿನ್ನ ಅಬುಜ ಪಾದಕೆ ಬಿಡದೆ ಬಿನ್ನೈಸಿದೆ. ದೇವ ನಿನ್ನ ಪಾದದಾಣೆ ಭಕ್ತರಾಣೆ ಈ ವಚನ ಸತ್ಯಮಾಡುವುದು ಎನಗೆ । ಇವನ ಜೀವದಾನ ಕೊಡು ಇದೇ ದೇಹದಲಿ. ಅನ್ನಂತ ಕಲ್ಪಕ್ಕೆ ನಿನ್ನ ಮೊರೆಬಿದ್ದವನಿಗೆ ಖಿನ್ನತೆಯಿಲ್ಲವೆಂಬುದ ಕೇಳಬಲ್ಲೆ ಚಿಣ್ಣಧ್ರುವ ಪ್ರಹ್ಲಾದ ಮೊದಲಾದ ಭಕ್ತರೇ ಘನ್ನತೆ ಏನೆಂಬೆ ಲೋಕದಲ್ಲಿ ಮನ್ನಿಸು ಮಹಾರಾಯ ವಿಜಯವಿಠಲರಾಯ । ಬಿನ್ನಪ ಕೈಗೊಂಡು ಭಕ್ತನ ಪಾಲಿಸೋ....".

ವಿಜಯದಾಸರ ಉಗಾಭೋಗಗಳಲ್ಲಿ, ತಮ್ಮ ಕೀರ್ತನೆಗಳಲ್ಲಿ ಕೊಡುವಂತೆಯೇ ನಾನಾ ಬಗೆಯ ದೃಷ್ಟಾಂತಗಳನ್ನು ಉಲ್ಲೇಖಿಸುತ್ತಾರೆ. ಇವೆಲ್ಲಾ ಬಹು ಮಟ್ಟಿಗೆ ಪೌರಾಣಿಕ ದೃಷ್ಟಾಂತಗಳೇ ಆದರೂ ಕೆಲವು ಐತಿಹಾಸಿಕ, ಸಾಮಾಜಿಕ ದೃಷ್ಟಾಂತಗಳನ್ನು ಔಚಿತ್ಯಪೂರ್ಣವಾಗಿ ಹೇಳಿರುವುದನ್ನು ಗಮನಿಸಬೇಕು. ಅವರು ಹೇಳುವ ಎಷ್ಟೋ ದೃಷ್ಟಾಂತಗಳು ನಮಗೆ ಅಪರಿಚಿತವಾಗಿವೆ. ಪುರಂದರದಾಸರು ವೈಶ್ಯ ಮಾದಮ್ಮನ ವರಕುಮಾರನ ಬದುಕಿಸಿದರು ಗಡ ! ಎಂಬ ಐತಿಹ್ಯವಾಗಲಿ, ಸಿರಿನಾರಾಯಣ ಯೋಗಿ

ವ್ಯಾಸಮುನಿಗೆ ಬಂದ ಉರಗಬಾಧೆ ಕಳೆದು ಪಾಲಿಸಿದರು ಗಡ ! ಎಂಬುದಾಗಲಿ ಅಷ್ಟು ಪರಿಚಿತವೇನಲ್ಲ. ಆದರೆ ಶಬರಿಗೆ ಒಲಿದವನೇ ಸತ್ಯಮೂರ್ತಿ, 'ಕುಬುಜೆಯ ತಿದ್ದಿದ ವಿಜಯವಿಠಲರೇಯ' 'ಶಿವನೇ ದುರ್ವಾಸನನು ಒಮ್ಮೆ ಪರೀಕ್ಷಿಸಿ ಅವನಿಪತಿಯಿಂದ ಖಿನ್ನನಾದ ಕರಿ ಮೃಕಂಡಜ ಮುಖರ ಪೊರೆದ ಕರುಣಿ, ಗುರು ವ್ಯಾಸಮುನಿರಾಯ ಭೂಪತಿಗೆ ಬಂದ ದುಸ್ತರವಾದ ಕುಹುಯೋಗ ಬಿಡಿಸಿದರು' ಮೊದಲಾದವು ಪರಿಚಿತ ದೃಷ್ಟಾಂತಗಳಾಗಿವೆ.

ವಿಜಯದಾಸರ ಶಬ್ದ ಸಂಪತ್ತಿನ ವೈವಿಧ್ಯ ಹೆಗ್ಗಳಿಕೆಯಿಂದ ಕೂಡಿದೆ. ಸಂಸ್ಕೃತ–ಕನ್ನಡ ಪ್ರಾಕೃತ ಶಬ್ದಗಳ ಜೊತೆಗೆ ಪ್ರಾದೇಶಿಕ ನುಡಿಗಳನ್ನು, ಗ್ರಾಮ್ಯವನ್ನೂ ಬಳಸುತ್ತಾರೆ. ಇದೊಂದು ಪ್ರತ್ಯೇಕ ಅಧ್ಯಯನದ ವಿಷಯ.

ಒಂದು ಮೂಲ ಶಬ್ದದ ವಿವಿಧ ಸಮಾಸದಿಂದ ರೂಪಗಳನ್ನು ಬಳಸುವುದು ಅವರ ವೈಶಿಷ್ಟ್ಯಗಳಲ್ಲಿ ಒಂದು. 'ಕಾಲನಾಮಕ ಭಗವಂತನ ನಿನ್ನಯ ಭೀತಿ' ಎಂಬ ಉಗಾಭೋಗದಲ್ಲಿ ಕಾಲ ಶಬ್ದದ ವಿವಿಧ ಸಮಾಸ ಪದಗಳನ್ನು ಬಳಸುತ್ತಾ ಹರಿಯನ್ನು ಮೊರೆಹೊಕ್ಕಿದ್ದಾರೆ. ಕಾಲನಾಮಕ ಕಾಲಾಖ್ಯ, ಕಾಲಯಮ, ಕಾಲಮೃತ್ಯು, ಕಾಲದೂತ, ಕಾಲದೇವತೆ; ಕಾಲನಿಯಾಮಕ, ಕಾಲದೇಶಪೂರ್ಣ, ಕಾಲಕಾಲಕೆ ಎಂಬ ಪದಪುಂಜಗಳನ್ನು ಈ ಉಗಾಭೋಗದಲ್ಲಿ ಬಳಸಿದ್ದಾರೆ.

ಅಂತೆಯೇ ಸಂಖ್ಯಾವಾಚಕ ಶಬ್ದಗಳನ್ನು ಕೀರ್ತನೆ, ಸುಳಾದಿಗಳಲ್ಲಿ ಬಳಸಿರುವಂತೆಯೇ ಉಗಾಭೋಗಗಳಲ್ಲಿ ಸಾಕಷ್ಟು ಬಳಸಿದ್ದಾರೆ. ಒಂದರಿಂದ ಹಿಡಿದು ಹದಿನಾರು ಅಂಕಿಗಳವರೆಗೆ ಸಂಖ್ಯಾವಾಚಕ ಶಬ್ದಗಳನ್ನು ಬಳಸಿದ್ದಾರೆ. ಒಂದು ಬಿನ್ನೈಸುವೆ, ದ್ವಂದ್ವ ಕರವ ಮುಗಿದು, ಎರಡು ಮಹಾ ಪದ್ಮ, ಆರೈವತ್ತು ಪದ್ಮ, ಎರಡು ಮಹಖರ್ವ, ಏಳು ಖರ್ವ, ಒಂದು ನಿರ್ಬುದ, ಇಪ್ಪತ್ನಾಲ್ಕು ಮನೆಯೊಳು ಒಬ್ಬ ಸತಿ, ಹತ್ತಾರು ಸಾವಿರ ಪ್ರಣಾಮ, ಒಂದು ಕೈಯಲಿ ಖಡ್ಗ, ಒಂದೆರಡುಮೂರು ನಾಲ್ಕೈದಾರು, ಏಳು ಒಂದೇಳು ಒಂಬತ್ತು ಹತ್ತುಸಾರಿ ವಂದಿಸಿ ದ್ದಿನಾ ಕೊಡು, ಏಕತ್ರಯಮಾಡಿ, ಹಾಗ, ಕಾಸ, ವೀಸ .... ಇತ್ಯಾದಿ

ಸಂಖ್ಯಾ ಪದಗಳನ್ನು ಗಮನಿಸಬಹುದು. ಎಂಟು ಎನ್ನಲು ಒಂದೇಳು ಎಂದಿರುವುದು. ಖರ್ವ ಮಹಾಖರ್ವ, ಪದ್ಮ ಮಹಾಪದ್ಮ, ನಿರ್ಬುದ ಮೊದಲಾದ ಬೃಹತ್ ಸಂಖ್ಯೆಗಳ ಪದಗಳನ್ನು ಹೇಳಿರುವುದು ವಿಶೇಷವಾಗಿದೆ.

ಸಾಮಾನ್ಯವಾಗಿ ಆದಿಪ್ರಾಸ ದಾಸರ ಪದಗಳಲ್ಲಿ ಇದ್ದೇ ಇರುತ್ತದೆ. ಕೆಲವೊಮ್ಮೆ ಅಪವಾದವಾಗಿ ಇರುವುದಿಲ್ಲ. ಮತ್ತೆ ಕೆಲವೊಮ್ಮೆ ಪಾಠ ಕೆಟ್ಟು ಪ್ರಾಸವಿರುವುದಿಲ್ಲ. ಇಂಥ ಕೆಲವು ನಿದರ್ಶನಗಳು ಈ ಉಗಾಭೋಗಗಳಲ್ಲಿ ಇವೆ. ಉದಾಹರಣೆಗೆ ಅಡಿಗಡಿಗೆ ನಾ ನಿನ್ನ ಅಡಿಗಳನೇ ನಂಬಿದೆ ಎಂಬ ಉಗಾಭೋಗದಲ್ಲಿ, ಬಿಡೌಜಪತಿ .... ಎಂಬ ಸಾಲಿಗೆ ಬರಿಸೋ ಎಂಬುದು ಆದಿಪ್ರಾಸವಾಗಿ ಬಂದಿದೆ. ಇಲ್ಲಿ ಪ್ರಾಸದ ದೃಷ್ಟಿಯಿಂದ ನುಡಿಸೋ ಎಂದು ಊಹಾಪಾಠ ಹಾಕಬೇಕಾಗುತ್ತದೆ. ಏಕೆಂದರೆ ಲಭ್ಯ ಪ್ರತಿಗಳಲ್ಲಿ ಬೇರೆ ಪದವಿಲ್ಲ.

ಸಾಮಾನ್ಯವಾಗಿ ದಾಸ ಸಾಹಿತ್ಯದಲ್ಲಿ ಕೀರ್ತನೆಗಳಲ್ಲಿ ಹೆಚ್ಚಾಗಿ ಮುಂಡಿಗೆಗಳು ಕಂಡುಬರುತ್ತವೆ. ವಿಜಯದಾಸರ ಸುಳಾದಿಗಳಲ್ಲಿ ಹೆಚ್ಚಾಗಿ ಉಗಾಭೋಗಗಳಲ್ಲಿ ಅಲ್ಪಪ್ರಮಾಣದಲ್ಲಿ ಮುಂಡಿಗೆಗಳ ಸ್ವರೂಪ ಕಾಣುತ್ತದೆ. ಮುಂಡಿಗೆಗಳ ಲಕ್ಷಣಗಳುಳ್ಳ ಸಾಲುಗಳು ಕೆಲವು ಉಗಾಭೋಗಗಳಲ್ಲಿ ಕಂಡುಬಂದರೆ, ಒಂದು ಉಗಾಭೋಗ ಪೂರ್ಣ ಮುಂಡಿಗೆಯ ಪದವೇ ಆಗಿದೆ. ೬೮ನೆಯ ಉಗಾಭೋಗ (ಅರಳುಮಲ್ಲಿಗೆ ಪಾರ್ಥಸಾರಥಿಯವರಿಂದ ದೊರೆತದ್ದು) ಗಮನಾರ್ಹವಾಗಿದೆ. ದಾಸಸಾಹಿತ್ಯದಲ್ಲಿ ಮುಂಡಿಗೆ, ಬೆಡಗು, ದ್ವಂದ್ವಾರ್ಥಗಳೆಂಬ ಮಾತುಗಳನ್ನು ಬಳಸಿದ್ದಾರೆ. ಇವು ವಚನ ಸಾಹಿತ್ಯದ ಬೆಡಗಿಗೆ, ಜನಪದ ಸಾಹಿತ್ಯದ ಒಗಟಿಗೆ ಸಮಾನವಾದುದು ಅಥವಾ ಸಮೀಪವಾದುದಾಗಿದೆ. ಮುಂಡಿಗೆಗಳನ್ನು ದಾಸ ಸಾಹಿತ್ಯದಲ್ಲಿ ಅನೇಕ ಹರಿದಾಸರು ರಚಿಸಿದ್ದರೂ, ಕನಕದಾಸರದು ಎತ್ತಿದ ಕೈ. ಡಾ॥ಎಲ್. ಬಸವರಾಜು ಅವರು ಬೆಡಗಿನ ವಚನಗಳ ಲಕ್ಷಣಗಳನ್ನು ಕುರಿತು ಹೇಳಿರುವ ಮಾತುಗಳು ಮುಂಡಿಗೆಗಳಿಗೂ ಅನ್ವಯಿಸಬಹುದು. ಅವರ ವಿವರಣೆ ಹೀಗಿದೆ: ೬೬ ಬೆಡಗಿನ ವಚನಗಳಲ್ಲಿ ಹಲವಾರು ಪ್ರಭೇದಗಳಿವೆ. ವಿರೋಧಾಭಾಸವೇ ಅವೆಲ್ಲಕ್ಕೂ ಜೀವಾಳ. ಪ್ರಕೃತಿಗೆ, ಸಮಾಜಕ್ಕೆ, ಸಂಪ್ರದಾಯಕ್ಕೆ ವಿರುದ್ಧವೆಂಬಂತಹ ಬೇರೊಂದು

ಮುಖ್ಯವಾದ ಅಂತರಾರ್ಥವು ಬರುವಂತಾಗಿಸುವುದೇ ಇವುಗಳ ಮುಖ್ಯ ತಂತ್ರ. ಇಂತಹ ಪದಗಳಿಗಿರುವ ಅಂತರಾರ್ಥವು ಅಥವಾ ಆ ಸಾಂಕೇತಿಕ ಪದಗಳಿಗಿರುವ ಪ್ರತ್ಯೇಕವಾದ ನಿಯತಾರ್ಥವು ಆಕಸ್ಮಿಕವಾದುದಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಯಿಸುವ ಸ್ವಚ್ಛಂದ ರೀತಿಯದಲ್ಲ. ಈ ಬೆಡಗಿನ ಸಂಪ್ರದಾಯವು ಅನೂಚಾನವಾದುದು ಮತ್ತು ಯುಕ್ತಾಯುಕ್ತವು ರೂಪಕ ಮೂಲವೂ ಆದುದು.

ಡಾ. ಕೆ. ಗೋಕುಲನಾಥರು "ಹರಿದಾಸರ ಮುಂಡಿಗೆಗಳು" ಎಂಬ ಲೇಖನದಲ್ಲಿ ಮುಂಡಿಗೆಗಳನ್ನು ಮೂರು ವಿಧವಾಗಿ ವರ್ಗೀಕರಿಸಿದ್ದಾರೆ: ಶಬ್ದಾರ್ಥ ಸಮಸ್ಯೆಯನ್ನು ಉಂಟುಮಾಡುವ ಮುಂಡಿಗೆಗಳು, ವಿರೋಧಾಭಾಸವೆನಿಸುವಂತಹ ಮುಂಡಿಗೆಗಳು, ಸಂಖ್ಯಾಪದಗಳ ಮೂಲಕ ಸಮಸ್ಯೆಯನ್ನುಂಟುಮಾಡುವ ಮುಂಡಿಗೆಗಳು. ವಿಜಯದಾಸರ ಉಗಾಭೋಗಗಳಲ್ಲಿ ಮೂರಕ್ಕೂ ನಿದರ್ಶನಗಳು ದೊರೆಯುತ್ತವೆ. ಉದಾಹರಣೆಗೆ ೬೮ನೆಯ ಉಗಾಭೋಗ "ಹರಿದಾಸನಾಗಿ ಸಂಚರಿಸು ಸಂತೋಷದಲಿ" ಎಂಬ ಉಗಾಭೋಗವು ಮೂರನೆಯ ಬಗೆಯಾದ ಸಂಖ್ಯಾಪದಗಳ ಮೂಲಕ ಸಮಸ್ಯೆಯನ್ನುಂಟುಮಾಡುವ ಮುಂಡಿಗೆಯಾಗಿದೆ. (ವಿವರಣೆಗೆ ಟಿಪ್ಪಣಿ ನೋಡಿ)

ವಿಜಯದಾಸರ ಕೀರ್ತನೆ, ಸುಳಾದಿಗಳಲ್ಲಿ ನವವಿಧ ಭಕ್ತಿಯನ್ನು ಕಾಣಬಹುದಾಗಿದೆ. ಉಗಾಭೋಗಗಳಲ್ಲಿ ನವವಿಧ ಭಕ್ತಿಗಳಲ್ಲಿ ಕೆಲವನ್ನು ಕಾಣಬಹುದಾಗಿದೆ. ಆ ಪೈಕಿ ನಾಮಸ್ಮರಣ ಭಕ್ತಿ ಒಂದು. "ಶ್ರವಣ ಕೀರ್ತನೆಗಳಿಂದ ಸಂಗ್ರಹಿಸಿದ ಭಗವನ್ನಾಮ ರೂಪಗುಣಾದಿಗಳನ್ನು ಸ್ಮರಿಸುವುದು ಸ್ಮರಣ ಭಕ್ತಿ" ಎಂದಿದ್ದಾರೆ ಶ್ರೀ ದಾಸಬೋಧದಲ್ಲಿ.

ಸ್ಮರಣೆ ಭಕ್ತಿ ಹೆಚ್ಚಾಗಿ ವಿಜಯದಾಸರ ಉಗಾಭೋಗದಲ್ಲಿ ಕಾಣಬಹುದು. ನಾಮಸ್ಮರಣೆಯನ್ನು "ಶಬುದ ಮಾತುರವಲ್ಲ ಅಂತರಂಗದ ಸ್ತೋತ್ರ" ಎಂದಿದ್ದಾರೆ. ಆದರೆ ಇಂತಹ ನಾಮಸ್ಮರಣೆಯನ್ನು ಒಂದು ವೇಳೆ ಯಾರಾದರೂ ನಟನೆಯ ಮಾಡುತ್ತಾ ತಿರುಗುತ್ತಾ ಮಾಡಿದರೂ "ಅಟವಿಯಲ್ಲಾದರೂ ಪೂರ್ಣಸುಖವು

ಸಿಗುತ್ತದೆ ಸಟೆಯಲ್ಲ" ಎನ್ನುತ್ತಾರೆ. ಆದರೆ ನಾಮಸ್ಮರಣೆ ಎಂದೋ ಒಂದು ದಿನ ಮಾಡುವಂಥದಲ್ಲ. ಎಲ್ಲಾ ಕ್ಷಣಗಳಲ್ಲೂ ಮಾಡಬೇಕು. ಆದ್ದರಿಂದ ದಾಸರು "ಕಾಲಕಾಲಕ್ಕೆ ನಿನ್ನ ನಾಮಸ್ಮರಣೆಯನು ನನ್ನ ನಾಲಿಗೆಗೆ ಕೊಡು ಕಂಡ್ಯಾ ನಾರಾಯಣನೆ" ಎಂದು ಕೇಳಿಕೊಂಡಿದ್ದಾರೆ. ಇದಕ್ಕಾಗಿ ನನ್ನಲ್ಲಿ "ಕೀಳು ಮತಿಯನು ಬಿಡಿಸೋ ಕೀರ್ತನೆಯನು ಮಾಡಿಸೋ" ಎಂದಿದ್ದಾರೆ. ನಾರಾಯಣನ ನಾಮಸ್ಮರಣೆಯ ಹಿರಿಮೆ ಅಷ್ಟಿಷ್ಟಲ್ಲ. ಅದರಿಂದ ಬರುವ ಪುಣ್ಯಕ್ಕೆ ಪಾರವೇ ಇಲ್ಲ. ಅದಕ್ಕಾಗಿ ಜನರು ಜುಟ್ಟು ಜನಿವಾರ ಕಿತ್ತುಕೊಂಡು ಯತಿಯಾಗಿ ಕಟ್ಟಕಡೆಯಲಿ ಗೃಹಸ್ಥ ಧರ್ಮವ ತೊರೆದು ಹುಟ್ಟುಗ ಇಲ್ಲೆನುತ ಕೃಷ್ಣ ಕೃಷ್ಣಾ। ವಿಜಯವಿಠಲನ ಪಾದಕ್ಕೆ ಮೊರೆಯಿಡುತ್ತಾರೆ. ಸ್ಮರಣೆಯೊಂದೇ ಸಾಲದೇ ಎಂಬ ಮಾತು ನೆನಪಾಗುತ್ತದೆ.

ವಿಜಯದಾಸರ ಉಗಾಭೋಗಗಳಲ್ಲಿ ಸ್ವಲ್ಪಮಟ್ಟಿಗೆ ಲೋಕನೀತಿಯನ್ನೂ ಕುರಿತು ಚಿಂತಿಸಿದ್ದಾರೆ. ಅರ್ಥಪೂರ್ಣ ಆಚರಣೆಗಳಿಗೆ ಪ್ರಾಶಸ್ತ್ಯವಿತ್ತಿದ್ದಾರೆ. ಕೇವಲ ಶುಷ್ಕ ರೀತಿಯ ಬಾಹ್ಯಾಚಾರ ಮುಕುತಿ ಸಾಧನವಲ್ಲ "ಸ್ನಾನ, ಮೌನ, ದಾನ, ಮೊದಲಾದ ಕರ್ಮಗಳಿಗಿಂತ ಜನರಿಗೆ ಮುಖ್ಯವಾದುದು ಶ್ರೀನಾರಾಯಣನೆಂಬೊ ನಾಮ" "ಇದನ್ನು ಭಾನು ಉದಯದಲಿ ನೀನೆದ್ದು ಭಕುತಿಯಲಿ ನೆನೆಯೋ ಮನವೆ" ಎಂದಿದ್ದಾರೆ. ಮಡಿಯೆಂಬುದೊಂದು ಹರಿದಾಸರಲ್ಲಿ ವಿಶಿಷ್ಟ ಆಚರಣೆ. ಅದು ಲೌಕಿಕ ಜಗತ್ತಿನಲ್ಲಿ ಹೇಗಾಗಿದೆ ಎಂಬುದನ್ನು ಚೆನ್ನಾಗಿ ಅರಿತ ವಿಜಯದಾಸರು ಅದರ ಅಂತರಾರ್ಥದ ಕಡೆಗೆ ಜನರ ಮನವನ್ನು ಸೆಳೆದಿದ್ದಾರೆ. "ಮಡಿಯಾಗಲು ಬಳಸುವ ಸ್ನಾನದ ನೀರು ಜಡ, ಮಡಿಯಾಗಲು ಬೇಕಾಗುವ ವಸ್ತುವೂ ಜಡ. ಆದ್ದರಿಂದ ಆಚಾರದ ಮಡಿಗಿಂತ ಅಂತರಂಗದ ವಿಚಾರದ ಮಡಿ ಮಹತ್ವದ್ದು. ಆದಕಾರಣ ಕಡಲಶಯನನ ಅಡಿಗಳ ನೆನೆದವನು ಸರ್ವದಾ ಮಡಿ" ಎನ್ನುತ್ತಾರೆ. ಹೀಗೆ ಭಕ್ತಿಯ ನಾನಾ ಮುಖಗಳನ್ನು ಉಗಾಭೋಗಗಳಲ್ಲಿ ಪ್ರಸ್ತಾಪಿಸುವ ದಾಸರು ಗಂಗಾಜನಕ ವಿಜಯವಿಠಲನ ಅಂಘ್ರಿಧ್ಯಾನವೆ ಸರ್ವಾರಿಷ್ಟ ನಾಶ ಎನ್ನುತ್ತಾರೆ.

ಪುರಂದರದಾಸರನ್ನು ಕುರಿತು ಸುಳಾದಿ ಕೀರ್ತನೆಗಳನ್ನು ರಚಿಸಿರುವ ವಿಜಯದಾಸರು ಅವರ ಬಗ್ಗೆ ಸಾಕಷ್ಟು ವಿವರಗಳನ್ನು ಮೊದಲ ಬಾರಿಗೆ ನಮಗೆ ನೀಡಿದ್ದಾರೆ. ಅಂತೆಯೇ ಎರಡು ಉಗಾಭೋಗಗಳನ್ನು ಪುರಂದರದಾಸರನ್ನು ಕುರಿತು ವಿಜಯದಾಸರು ರಚಿಸಿದ್ದಾರೆ. ಪುರಂದರದಾಸರು ವೈಶ್ಯ ಮಾದಮ್ಮನ ವರಕುಮಾರನ ಬದುಕಿಸಿದರು ಎಂದು ದಾಸರನ್ನು ಕೊಂಡಾಡಿದ್ದಾರೆ. ಈ ಪ್ರಸಂಗ ಎಲ್ಲಿಯದೋ ತಿಳಿದಿಲ್ಲ. ಬೇರೆ ಹರಿದಾಸರು ಈ ಪ್ರಸಂಗವನ್ನು ಉಲ್ಲೇಖಿಸಿದಂತೆ ಕಂಡುಬಂದಿಲ್ಲ. ಇಂತಹ ಚರಿತೆ ಮಾಡಿದವರನ್ನು ಈ ಕಲಿಯುಗದಲ್ಲಿ "ಆವನಾದರೂ ಇನಿತು ಸ್ಮರಣೆಗೈದವಗೆ ಮನಸು ನಿರ್ಮಲ ಕಾಣೋ" ಎಂದಿದ್ದಾರೆ.

ಇನ್ನೊಂದು ಉಗಾಭೋಗದಲ್ಲಿ ಹರಿದಾಸರಾಗುವ ಮುಂಚಿನ ಸ್ಥಿತಿಯನ್ನು ನೆನೆದು ಪುರಂದರರ ಅನುಗ್ರಹದಿಂದ ಅಂಕಿತ ಲಾಭವಾದ ಮೇಲೆ ದೊರೆತ ಭೋಗಭಾಗ್ಯಗಳನ್ನು ನೆನೆದಿದ್ದಾರೆ. ಸಂತೆ ನೋಡ ಬಂದವಗೆ ಶ್ರಮ ಸಾಧ್ಯವಲ್ಲದೆಲೆ ಎಂಬ ಉಗಾಭೋಗದಲ್ಲಿ "ದುಡ್ಡಿಲ್ಲದೆ ಸಂತೆ ವ್ಯಾಪಾರಕ್ಕೆ ಬಂದವನಂತೆ ನಾನಿದ್ದೆ, ನಿಮ್ಮ ಅನುಗ್ರಹ ಚಿಂತಾಮಣಿ ದೊರಕಿದಂತೆ ಆಯಿತು. ಶ್ರಾಂತನಾಗಿ ಹಸಿದು ಅಂಬಲಿಯ ಕೇಳುವಂಥ ಸ್ಥಿತಿಯಿತ್ತು. ಈಗ ಪರಮಾನ್ನ ಗೋಘೃತ ಶರ್ಕರಾ ಮುಂತೆ ಪೊಂಬಡಿವಾಣದೊಳಗೆ ತಂದಿಟ್ಟಂತೆ ಆಗಿದೆ. ಇವೆಲ್ಲಾ ನಿನ್ನ ಅನುಗ್ರಹದಿಂದ, ಸಂತ ಜನರೊಡನೆ ಕಾಂತನ ತುತಿಸುವರ ಕರುಣದಿಂದ ಆಯಿತು. ನಾನು ಪಾಮರ ಮಂತ್ರ ತಂತ್ರಗಳನು ಅರಿಯೆ ಎಂದಿದ್ದವನು" ಎಂದಿದ್ದಾರೆ ವಿಜಯದಾಸರು.

ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು ಕನ್ನಡದಲ್ಲಿ ಶಾಸ್ತ್ರೀಯವಾಗಿ ವಿವರ ವಿವರವಾಗಿ ವಿಜಯದಾಸರು ಕೀರ್ತನೆ ಸುಳಾದಿಗಳಲ್ಲಿ ನಿರೂಪಿಸಿದ್ದಾರೆ. ಎರಡು ಉಗಾಭೋಗಗಳಲ್ಲಿ ಸರಳವಾಗಿ, ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಇದಕ್ಕೆ ಎರಡು ಕಾರಣಗಳು. ಮೊದಲನೆಯದಾಗಿ ಉಗಾಭೋಗದ ಗಾತ್ರ, ಎರಡನೆಯದಾಗಿ

ಕೀರ್ತನೆ ಸುಳಾದಿಗಳಷ್ಟು ಪ್ರಮಾಣದಲ್ಲಿ ಉಗಾಭೋಗಗಳನ್ನು ದಾಸರು ರಚಿಸಿಲ್ಲ ಎಂಬುದು ಇನ್ನೊಂದು ಕಾರಣವಾಗಿದೆ. ಆದರೆ ಕೆಲವೇ ಉಗಾಭೋಗಗಳಲ್ಲಿ ಪರಿಣಾಮಕಾರಿಯಾಗಿ ಮಧ್ವ ಶಾಸ್ತ್ರದ ಸಂಗತಿಗಳನ್ನು ಹೇಳಿದ್ದಾರೆ. "ಪರಮ ರಹಸ್ಯವಿದು ಕೇಳಿರೀ ಸಜ್ಜನರು" ಎಂಬ ಉಗಾಭೋಗದಲ್ಲಿ ಜೀವರ ದೇಹದಲ್ಲಿ ಪರಮಾತ್ಮ ದೇವತೆಗಳ ಮೂಲಕ ಪ್ರೇರಣೆ ನೀಡಿ ಹೇಗೆ ಶುಭಾಶುಭ ಕಾರ್ಯಗಳನ್ನು ಮಾಡಿಸುವನು ಎಂಬುದನ್ನು ಹೇಳಿದರೆ ಬಿಂಬ ಪೊಳೆಯುತಿದೆ ಡಿಂಬ ದಂಡನೆ ಯಾಕೆ ಎಂಬ ಉಗಾಭೋಗದಲ್ಲಿ ಜ್ಞಾನ ಮತ್ತು ಕರ್ಮಗಳ ಸಂಬಂಧವನ್ನು ಕುರಿತು ಹೇಳುತ್ತಾ, "ಜ್ಞಾನಕ್ಕೆ ಸಾಧಕವಾಗದ ಕರ್ಮ ವ್ಯರ್ಥವೆಂದು ಹೇಳಿ ಪ್ರತಿ ಕರ್ಮದ ಆಚರಣೆಯಲ್ಲೂ ಶ್ರೀ ಹರಿಯ ಪ್ರೇರಣೆ ಕರ್ತೃತ್ವವನ್ನು ಚಿಂತಿಸಬೇಕು" ಎಂದಿದ್ದಾರೆ. ನಾರಾಯಣನೆ ಸರ್ವೋತ್ತಮನೆಂದು ಸವಾಲು ಹಾಕಿ ಸಾರುತ್ತಾರೆ ದಾಸರು. "ಸಾರುವೆನು ಕರ ನೆಗಹಿ ಉರಗಹಾರವ ಧರಿಸಿ ಮಾರುತ್ತರವು ಸಲ್ಲದು ದುರುಳರಿಗೆ । ನಾರಯಣನೆಂಬೊ ನಾಮಕ್ಕೆ ನಿರ್ವಚನ ಆರು ಮಾಡಬಲ್ಲರು? ಪ್ರಾಜ್ಞರೊಳು ತೋರಿರೊ ಈ ನುಡಿದ ನುಡಿಯನು ಬಿಚ್ಚಿ" ಎಂದಿದ್ದಾರೆ. 'ಧಾರುಣಿಯೊಳಗೆ ಪರದೈವವಾವುದೆಂದು ಸಾರಿ ಬೆಂಡಾಗದಿರಿ' ಎಂದು ಎಚ್ಚರಿಸಿದ್ದಾರೆ.

ತನ್ನಂತರ್ಯಾಮಿ ಒಳಗಿದ್ದ ಬಿಂಬನ್ನ ಎಂಬ ಉಗಾಭೋಗದಲ್ಲಿ "ಸಕಲ ಜೀವರಲ್ಲಿರುವ ಪರಮಾತ್ಮನ ಅನಂತಾನಂತ ರೂಪಗಳಿಗೂ ತನ್ನ ಬಿಂಬ ಮೂರ್ತಿಯ ರೂಪಕ್ಕೂ ಗುಣಶಕ್ತಿಗಳಲ್ಲಿ ಭಿನ್ನತೆಯಿಲ್ಲವೆಂದೂ ಶ್ರೀ ಹರಿಯೇ ಸಕಲ ಚೇತನಾಚೇತನ ವಸ್ತುಗಳಲ್ಲಿ ಬೇರೆ ಬೇರೆ ರೂಪಗಳಿಂದ ಇರುವನೆಂದು ತಿಳಿಸಿ ಬಿಂಬ ತತ್ವವನ್ನು ವಿವರಿಸಿದ್ದಾರೆ. ಹೀಗೆ ಮಧ್ವ ಸಿದ್ಧಾಂತದ ವಿವರಗಳು ಸರಳವಾಗಿ ನಿರೂಪಿತವಾಗಿದೆ. ಆತ್ಮ ನಿವೇದನೆಯ ನುಡಿಗಳೂ ಸಾಕಷ್ಟಿವೆ ಈ ಉಗಾಭೋಗಗಳಲ್ಲಿ. ಸಾಮಾನ್ಯವಾಗಿ ಸ್ವಮತ ಹಿರಿಮೆಯ ಪ್ರತಿಪಾದನೆ ಮತ್ತು ಅನ್ಯಮತ ಖಂಡನೆ, ದೋಷ ಪ್ರತಿಪಾದನೆ ಎಲ್ಲಾ ಧಾರ್ಮಿಕ ಸಾಹಿತ್ಯದಲ್ಲಿ ಕಂಡುಬರುತ್ತದೆ. ದಾಸ ಸಾಹಿತ್ಯದಲ್ಲೂ ಕಂಡುಬರುತ್ತದೆ. ಇಂತಹ ನಿರೂಪಣೆಗಳಲ್ಲಿ ಕೆಲವೊಮ್ಮೆ ಗಾಂಭೀರ್ಯ, ಸೌಜನ್ಯದ ಮಿತಿಮೀರುವುದುಂಟು. ಆದರೆ

ಬಹುಮಟ್ಟಿಗೆ ಹರಿದಾಸರು ಸ್ವಮತ ಹಿರಿಮೆಯನ್ನು ತಾರ್ಕಿಕವಾಗಿ ಗಂಭೀರವಾಗಿ ಎತ್ತಿ ಹಿಡಿದಿದ್ದಾರೆ ಎನ್ನಬಹುದು. ವಿಜಯದಾಸರ ಈ ಉಗಾಭೋಗ ಅದಕ್ಕೊಂದು ನಿದರ್ಶನ.

"ನತೇ ವಿಷ್ಣೋ ಎಂದೆಂಬೊ ನಿಗಮಾರ್ಥ।
ಹಿತದಿಂದಲಿ ತಿಳಿದು ಹಿರಿದಾಗಿ ಅರಿದು ॥
ಕ್ಷಿತಿಸುರರ ಗರ್ಭದಲಿ ಬಂದು ಮಾ ।
ರುತಿ ಮತದಲಿ ಬಲು ಜ್ಞಾನಿಯಾಗಲೋ
ಇತರ ಮತವ ನಂಬಿ ಓದದಿರು......"

ವಿಜಯದಾಸರ ಉಗಾಭೋಗಗಳಲ್ಲಿ ಯಾವುದೇ ಸಂದರ್ಭಕ್ಕೆ ಅನ್ವಯವಾಗಬಲ್ಲ ತಾತ್ವಿಕ ಹಾಗೂ ಸಾರ್ವತ್ರಿಕ ಸ್ವರೂಪದ ಉಗಾಭೋಗಗಳೂ ಇವೆ. ವೈಯಕ್ತಿಕ ಜೀವನಕ್ಕೆ ನಿರ್ದಿಷ್ಟ ಪ್ರಸಂಗಗಳಿಗೆ ಸಂಬಂಧಿಸಿದ ಸಾಂದರ್ಭಿಕ ಉಗಾಭೋಗಗಳೂ ಇವೆ. ಎರಡನೆಯ ವರ್ಗದ್ದೇ ಹೆಚ್ಚು ಎನ್ನಬಹುದು.

ಒಟ್ಟಿನಲ್ಲಿ ವಿಜಯದಾಸರ ಉಗಾಭೋಗಗಳ ಬಗೆಗೆ ಡಾ.ಟಿ.ಎನ್.ನಾಗರತ್ನ ಅವರು ಉಗಾಭೋಗಗಳನ್ನು ಕುರಿತು ಹೇಳಿದ ಮಾತು ಚೆನ್ನಾಗಿ ಒಪ್ಪುತ್ತದೆ. "ದಾಸರ ಅನುಭವದ ಆಳ ಹೆಚ್ಚಿದಂತೆ ಆರಿಸಿದ ಅಣಿಮುತ್ತುಗಳಂತಹ ಕೆಲವೇ ಮಾತುಗಳಿಂದ ಒಂದೊಂದು ಉಗಾಭೋಗ ಸಿದ್ಧವಾಗಿದೆ. ಆ ಘನೀಭೂತವಾದ ರಸಗಟ್ಟಿಗಳಲ್ಲಿ ದಾಸರ ಜ್ಞಾನಾನುಭವಗಳು ಶೇಖರವಾಗಿವೆ."

ಸುಮಾರು ೫೦೦ ಉಗಾಭೋಗಗಳು ಕನ್ನಡದಲ್ಲಿ ಹರಿದಾಸರಿಂದ ರಚಿತವಾಗಿವೆ ಎಂದು ಅಂದಾಜುಮಾಡಿದ್ದಾರೆ. ಇನ್ನೂ ಹೆಚ್ಚಾಗಿರುವುದರಲ್ಲಿ ಅಚ್ಚರಿಯಿಲ್ಲ. ಈ ಎಲ್ಲ ಉಗಾಭೋಗಗಳನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದರೆ, ವಿಜಯದಾಸರ ಉಗಾಭೋಗಗಳ ಸೊಗಸು ವೈಶಿಷ್ಟ್ಯಗಳನ್ನು ಚೆನ್ನಾಗಿ ಒರೆ ಹಚ್ಚಿ ನೋಡಲು ಶಕ್ಯವಿದೆ ಎಂದರೆ ತಪ್ಪಲ್ಲ. ಅದೇನೇ ಇರಲಿ ಈಗ ದೊರೆತಿರುವ ವಿಜಯದಾಸರ ಉಗಾಭೋಗಗಳಲ್ಲಿ ಕೆಲವಾದರೂ ಕನ್ನಡದ ಶ್ರೇಷ್ಠ ಉಗಾಭೋಗಗಳ ಸಾಲಿಗೆ ಸೇರುತ್ತವೆ ಎಂಬುದರಲ್ಲಿ ಸಂಶಯವಿಲ್ಲ.

ಕೃತಜ್ಞತೆಗಳು

ಪ್ರಕೃತ ಶ್ರೀ ವಿಜಯದಾಸರ ಕೀರ್ತನೆಗಳ ಸಂಪುಟ ಸಾಮಾನ್ಯರಿಗಾಗಿ ಸಿದ್ಧ ಪಡಿಸಿರುವ ಸಂಗ್ರಹ. ಪಂಡಿತ ಆವೃತ್ತಿ ಅಲ್ಲ. ಪ್ರತಿಯೊಬ್ಬ ದಾಸರ ಸಮಗ್ರ ಕೀರ್ತನಸಾಹಿತ್ಯ ಒಂದೆಡೆ ಸಿಗುವ ಆಶಯದಿಂದ ಪ್ರಕಟವಾಗುತ್ತಿರುವ ಸಂಗ್ರಹವಿದು. ಆದಕಾರಣ ಇಲ್ಲಿ ವಾದಗ್ರಸ್ತ ವಿಷಯಗಳನ್ನು ಚರ್ಚಿಸಿಲ್ಲ. ಪಾಠಾಂತರಗಳನ್ನು ಕೊಟ್ಟಿಲ್ಲ. ಇತರ ದಾಸಕೃತಿಗಳೊಡನೆ ಅಥವಾ ಅನ್ಯ ಸ್ತುತಿಸಾಹಿತ್ಯದೊಡನೆ ತೌಲನಿಕ ಸಮೀಕ್ಷೆ ನಡೆಸಿ ಗುಣಾವಗುಣಗಳ ಮೌಲ್ಯನಿರ್ಣಯಕಾರ್ಯಕ್ಕೆ ಕೈಹಾಕಿಲ್ಲ. ಜನಸಾಮಾನ್ಯರಿಗೆ ಓದಲು ಸುಲಭವಾಗಿ ಅಗ್ಗದ ದರದಲ್ಲಿ ಒಂದೆಡೆ ಕೀರ್ತನೆಗಳು ಸಿಗಬೇಕು ಎಂದು ಪ್ರಯತ್ನಿಸಿದೆ. ಅವರಿಗೆ ಅರ್ಥೈಸಿಕೊಳ್ಳಲು ನೆರವಾಗುವಂತೆ ಕಠಿಣಶಬ್ದಾರ್ಥ, ಟಿಪ್ಪಣಿಗಳನ್ನು ಕೊಟ್ಟಿದೆ. ಕೀರ್ತನೆಗಳ ಹಿನ್ನೆಲೆಯನ್ನು ದಾಸರ ಜೀವನ ಪರಿಚಯ ಸಾಧನೆಗಳನ್ನು ಪ್ರಾರಂಭದ ಪ್ರಸ್ತಾವನೆಯಲ್ಲಿ ನೀಡಲಾಗಿದೆ. ಅಂಕಿತಪಲ್ಲಟವಾದ ಕೀರ್ತನೆಗಳನ್ನು ಇತರರ ಹೆಸರಿನಲ್ಲಿ ಸಿಕ್ಕಾಗ ಅದನ್ನು ಉಲ್ಲೇಖಿಸಿದೆ. ಪಾಠಾಂತರಗಳಲ್ಲಿ ಸೂಕ್ತವಾದ ಪಾಠವನ್ನು ಆಯ್ಕೆಮಾಡಿ ಅದನ್ನು ಮಾತ್ರ ಪಠ್ಯಭಾಗದಲ್ಲಿ ಕೊಟ್ಟಿದೆ. ಉಳಿದ ಪಾಠಾಂತರಗಳನ್ನು ಕೊಟ್ಟಿಲ್ಲ ಮತ್ತು ಚರ್ಚಿಸಿಲ್ಲ. ಜನಪ್ರಿಯ ಸಂಪುಟಕ್ಕೆ ಇದು ಅಗತ್ಯವಿಲ್ಲೆಂದು ಭಾವಿಸಿದೆ. ದಾಸಸಾಹಿತ್ಯವು ತನ್ನಕಾಲದ ಬದುಕನ್ನು ಒಳಗೊಂಡ ಸಾಹಿತ್ಯ. ಹೀಗಾಗಿ ಆ ಕಾಲದ ಪದಗಳ ಅರ್ಥ ವಿವರಣೆಗಳು ಎಷ್ಟೋ ಕಡೆ ಬಳಕೆಯಲ್ಲಿ ಇಲ್ಲದೆ ಗ್ರಂಥಸ್ಥವಾಗದೆ ಮರೆಯಾಗಿವೆ. ಹೀಗಾಗಿ ಕೆಲವು ಪದ್ಯಗಳನ್ನು ಅರ್ಥೈಸುವುದೂ ಕೆಲವು ಪದಗಳಿಗೆ ಅರ್ಥ ನೀಡುವುದು ಸಾಧ್ಯವಾಗದೆ ಅವುಗಳನ್ನು ಪ್ರಶ್ನಾರ್ಥಕ ಚಿಹ್ನೆಯಿಂದ ಗುರುತಿಸಿದೆ. ತಿಳಿದವರು ಆ ಬಗ್ಗೆ ಬೆಳಕು ತೋರಿಸಬೇಕು. ವಿಜಯದಾಸರ ಜೀವನ ವೃತ್ತಾಂತದ ಬಗೆಗೆ ವಿಸ್ತಾರವಾಗಿ ಗ್ರಂಥಗಳು ಪ್ರಕಟವಾಗಿವೆ. ಹಲವಾರು ವಿಚಾರಗಳಲ್ಲಿ ವಿವರಣೆಗಳು ಭಿನ್ನವಾಗಿವೆ. ಅವುಗಳನ್ನಲ್ಲಿ ಚರ್ಚಿಸಿಲು ಹೋಗಿಲ್ಲ ಸರ್ವಸಮ್ಮತ ಸಂಗತಿಗಳನ್ನು ಆಧರಿಸಿ ಸರಳವಾದ ರೀತಿಯಲ್ಲಿ ದಾಸರ ಪರಿಚಯ, ಸಾಧನೆಯನ್ನು ನಿರೂಪಿಸಲಾಗಿದೆ.

'ಶ್ರೀವಿಜಯದಾಸರ ಕೀರ್ತನೆಗಳು ಮತ್ತು ಉಗಾಭೋಗಗಳು' ಎಂದು ಎರಡು ಭಾಗಗಳಲ್ಲಿ ಪ್ರಕಟವಾಗುತ್ತಿರುವ ಈ ಸಂಪುಟದಲ್ಲಿ ವಿವಿಧ ಮೂಲಗಳಿಂದ ೫೪೦ ಕೀರ್ತನೆಗಳನ್ನು ಮತ್ತು ೭೭ ಉಗಾಭೋಗಗಳನ್ನು ಸಂಗ್ರಹಿಸಿದೆ. ಬಹುಶಃ ಮೊದಲಬಾರಿಗೆ ಕನ್ನಡದಲ್ಲಿ ಈ ಪ್ರಮಾಣದಲ್ಲಿ ವಿಜಯದಾಸರ ಕೃತಿಗಳು ಒತ್ತಟ್ಟಿಗೆ ಪ್ರಕಟವಾಗುತ್ತಿವೆ. ಮೊದಲ ಬಾರಿಗೆ ಗಣನೀಯ ಪ್ರಮಾಣದಲ್ಲಿ ಸಂಗ್ರಹಿಸಿ ಪ್ರಕಟಿಸಿದವರು ಗೊರಬಾಳರು ಮತ್ತು ಪಾವಂಜೆಯವರು ಎನ್ನಬಹುದು. ಆನಂತರ ಹಲವಾರು ಮಂದಿ ತಂತಮ್ಮ ಅಭಿರುಚಿ ಅಗತ್ಯಗಳಿಗೆ ತಕ್ಕಂತೆ ಸಂಗ್ರಹಗಳನ್ನು ತಂದಿದ್ದಾರೆ. ಶ್ರೀ ವಿಜಯದಾಸರ ಕೀರ್ತನೆಗಳು ಎರಡು ಬಗೆಗಳಲ್ಲಿ ಪ್ರಕಟವಾಗಿವೆ. ಮೊದಲನೆಯದಾಗಿ ವಿಜಯದಾಸರ ಕೀರ್ತನೆಗಳನ್ನೇ ಪ್ರತ್ಯೇಕವಾಗಿ ಪ್ರಕಟಿಸಿರುವ ಪ್ರಕಟನೆಗಳು. ಎರಡನೆಯದು ಇತರ ಹರಿದಾಸರ ಪದಗಳೊಂದಿಗೆ ಪ್ರಕಟಿಸಿರುವ ಸಂಗ್ರಹಗಳು. ಇನ್ನು ವಿಜಯದಾಸರನ್ನು ಕುರಿತ ಪರಿಚಯ ವಿಮರ್ಶಾಗ್ರಂಥಗಳಲ್ಲಿ ಉದಾಹರಿಸಿರುವ ಕೀರ್ತನೆಗಳು ಗಮನಾರ್ಹವಾಗಿವೆ. ಈ ಮೂರು ಬಗೆಗಳಲ್ಲಿ ಅಲ್ಲದೆ ಪ್ರಕಟಿತ ಹಾಗೂ ಅಪ್ರಕಟಿತ ಭಜನೆಸಂಗ್ರಹದ ಪುಸ್ತಕಗಳಲ್ಲಿ ವಿಜಯದಾಸರ ಕೀರ್ತನೆಗಳು ಸಿಗುತ್ತವೆ. ಈ ಎಲ್ಲ ಮೂಲಗಳಿಂದಲೂ ಸಾಧ್ಯವಾದ್ದಷ್ಟು ಕೀರ್ತನೆಗಳನ್ನು ಮತ್ತು ಟಿಪ್ಪಣಿಗಳನ್ನು ಇಲ್ಲಿ ಸಂಗ್ರಹಿಸಿದೆ. ಈ ಎಲ್ಲ ಸಂಗ್ರಹಕಾರರಿಗೂ ನಾನು ಋಣಿಯಾಗಿದ್ದೇನೆ. ಇನ್ನು ಪ್ರಕಟವಾಗದೆ ಕೈಯಲ್ಲಿ ಬರೆದಿಟ್ಟುಕೊಂಡ ಪುಸ್ತಕಗಳಲ್ಲಿ ಮತ್ತು ಕಂಠಸ್ಥಗೊಂಡಿರುವ ಕೀರ್ತನೆಗಳು ಸಾಕಷ್ಟು ಇದೆ ಎನ್ನಿಸುತ್ತದೆ. ಅವುಗಳನ್ನು ಸಂಬಂಧಪಟ್ಟವರು ಉದಾರಮನಸ್ಕರಾಗಿ ಪ್ರಕಟಿಸಲು ಮುಂದೆ ಬರಬೇಕಾಗಿದೆ. ಭಕ್ತಾದಿಗಳು ಈ ರೀತಿ ದಾಸಸಾಹಿತ್ಯ ಪ್ರಕಟಿಸಲು ಅಥವಾ ಪ್ರಕಟಿಸಿರುವವರಿಗೆ ನೀಡಲು ಮುಂದೆ ಬಂದಂತೆ ಮಾಡುವಲ್ಲಿ ಮಠಾಧಿಪತಿಗಳು ಪ್ರಮುಖ ಪಾತ್ರ ವಹಿಸಬೇಕಿದೆ ಎಂದರೆ ತಪ್ಪಾಗದು.

ಈ ಸಂಗ್ರಹವನ್ನು ಸಿದ್ಧಪಡಿಸುವಾಗ ಹಲವರು ಹಲವು ವಿಧಗಳಲ್ಲಿ ನೆರವಾಗಿದ್ದಾರೆ. ಕೀರ್ತನೆಗಳನ್ನು ಅಚ್ಚಿನ ಗ್ರಂಥಗಳಿಂದ ಪ್ರತಿಮಾಡಿಕೊಡುವ ಕಾರ್ಯದಲ್ಲಿ ಡಾ. ಪಿ. ಶಾರದಾ, ಎಂ ಆರ್. ಲಕ್ಷ್ಮೀದೇವಿ, ಹಾ.ಲ. ಮಂಜುನಾಥ್ ನೆರವಾಗಿದ್ದಾರೆ. ಹಲವಾರು ಮಾಹಿತಿಗಳನ್ನು ಪುಸ್ತಕಗಳನ್ನು ಒದಗಿಸುವಲ್ಲಿ ಶ್ರೀ ಎಸ್. ಜಿ. ರಾಮಚಂದ್ರರಾವ್, ಡಾ. ಅನಂತ ಪದ್ಮನಾಭರಾವ್, ಡಾ. ಕೆ.

ಗೋಕುಲನಾಥ್, ಡಾ. ಶ್ರೀನಿವಾಸ ಹಾವನೂರ ಸಹಾಯಮಾಡಿದ್ದಾರೆ. ಡಾ. ಟಿ. ಎನ್. ನಾಗರತ್ನ ಅವರು ಸಂಪುಟವನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡಿರುವರಲ್ಲದೆ ಕಾಲಕಾಲಕ್ಕೆ ಕಾರ್ಯವನ್ನು ಶೀಘ್ರವಾಗಿ ಮುಂದುವರೆಯಲು ಎಚ್ಚರಿಸಿದ್ದಾರೆ. ಅಷ್ಟೇ ಅಲ್ಲದೆ ಮೈಸೂರು ವಿಶ್ವವಿದ್ಯಾನಿಲಯದ ದಾಸಸಾಹಿತ್ಯ ವಿಭಾಗದಿಂದ ಕೆಲವು ಅಪ್ರಕಟಿತ ಕೀರ್ತನೆಗಳನ್ನು ಒದಗಿಸಿದ್ದಾರೆ. ಪಾವಂಜೆ ಅವರ ಅಲಭ್ಯ ಸಂಗ್ರಹವೊಂದನ್ನು ನೆರೆಳಚ್ಚು ಪ್ರತಿ ಮಾಡಿಸಿ ನೀಡಿದ್ದಾರೆ. ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ. ಈ ಸಂಪುಟವನ್ನು ಸಂಪಾದಿಸಲು ಅವಕಾಶ ಮಾಡಿಕೊಟ್ಟ ಸಮಗ್ರ ದಾಸ ವಾಙ್ಮಯ ಪ್ರಕಟನಾ ಸಮಿತಿ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದವರಿಗೂ ನಾನು ಕೃತಜ್ಞನಾಗಿದ್ದೇನೆ. ದಾಸ ಸಾಹಿತ್ಯದ ಬಗ್ಗೆ ಸದಾ ಕಾರ್ಯನಿರತರಾಗಿರುತ್ತಾ, ಆಸಕ್ತರಿಗೆ ತಮ್ಮ ಕೈಲಾದ ಎಲ್ಲ ನೆರವನ್ನು ಬೇಸರ ಮಾಡಿಕೊಳ್ಳದೆ ನೀಡುತ್ತಿರುವ ನಲ್ಮೆಯ ಡಾ. ಶ್ರೀನಿವಾಸ ಹಾವನೂರ ಮತ್ತು ಡಾ. ಟಿ ಎನ್ ನಾಗರತ್ನ, ಡಾ॥ ಅನಂತಪದ್ಮನಾಭ ಅವರನ್ನು ವಿಶೇಷವಾಗಿ ನೆನೆಯುತ್ತೇನೆ.

ವಿಜಯದಾಸರ ಕೀರ್ತನೆಗಳ ಸಂಪುಟ ಹರಿದಾಸಸಾಹಿತ್ಯ ಪ್ರೇಮಿಗಳಿಗೆ ಕೀರ್ತನಪ್ರಿಯರಿಗೆ ಉಪಯುಕ್ತವಾದೀತೆಂದು ನಂಬಿದ್ದೇನೆ. ಸಹೃದಯರು ನೀಡುವ ಎಲ್ಲ ಸಲಹೆ ಸೂಚನೆಗಳಿಗೂ ಸ್ವಾಗತವಿದೆ.

ಶ್ರೀ ವಿಜಯದಾಸರ ಉಗಾಭೋಗಗಳನ್ನು ಸಂಪಾದಿಸುವಲ್ಲಿ ಹಲವರು ಹಲವು ವಿಧಗಳಲ್ಲಿ ನೆರವಾಗಿದ್ದಾರೆ. ಡಾ.ಕೆ.ಗೋಕುಲನಾಥ್ ಅವರು ತಾವು ಸಂಗ್ರಹಿಸಿ ಪ್ರಕಟಿಸಿದ ಶ್ರೀ ವಿಜಯದಾಸರ ಉಗಾಭೋಗಗಳ ಪ್ರತಿ ಕೊಟ್ಟು ಉಪಕರಿಸಿದ್ದಾರೆ. ಮಿತ್ರ ಹೆಚ್.ಎಲ್.ಮಂಜುನಾಥ ಅವರು ಉಗಾಭೋಗಗಳ ಪ್ರತಿಮಾಡುವಲ್ಲಿ ನೆರವಾಗಿದ್ದಾರೆ. ಉಗಾಭೋಗಗಳನ್ನು ಕುರಿತು ಈವರೆಗೆ ಚರ್ಚೆಮಾಡಿದ ವಿದ್ವಾಂಸರ ಲೇಖನಗಳಿಗೆ ನಾನು ಋಣಿಯಾಗಿದ್ದೇನೆ.

ಪ್ರೊ. ಜಿ. ಅಶ್ವತ್ಥನಾರಾಯಣ

ಸಂಪಾದಕರು

ಕೀರ್ತನೆಗಳ ಕ್ರಮಸೂಚಿ

ಭಾಗ - ೨ (ಕೀರ್ತನೆ ೩೧೦-೫೪೦)

ಉಗಾಭೋಗಗಳ ಕ್ರಮಸೂಚಿ

ಅನುಬಂಧಗಳು

೧. (ಅ) ಕಠಿಣಶಬ್ದಗಳ ಅರ್ಥ (ಕೀ.)

(ಆ) ಕಠಿಣಶಬ್ದಗಳ ಅರ್ಥ (ಉ.)

೨. (ಅ) ಟಿಪ್ಪಣಿಗಳು (ಕೀ.)

(ಆ) ಟಿಪ್ಪಣಿಗಳು (ಉ.)

೩. (ಅ) ಅಂಕಿತನಾಮಸೂಚಿ (ಕೀ.)

(ಆ) ಅಂಕಿತನಾಮಸಮೂಚಿ (ಉ.)

೪. (ಅ) ಕೀರ್ತನೆಗಳ ಅಕಾರಾದಿ

(ಆ) ಉಗಾಭೋಗಗಳ ಅಕಾರಾದಿ

ಅನುಬಂಧ-೧ (ಅ)

ಕಠಿಣ ಶಬ್ದಗಳ ಅರ್ಥ

ಅಂಗವಟಿ – ಅತಿಚೆಲುವೆ

ಅಂಭ್ರಣಿ – ಪಾದಧೂಳು

ಅರ್ಕ – ಸೂರ್ಯ

ಅಕ್ಷಯ ಮೆರೆ – ಅಕ್ಷಯ ವಸ್ತ್ರ

ಅವಸರಮನಿ – ಅಡಿಗೆ ಯೊಳಗೆ ಮನೆಯೊಳಗೆ

ಅಷ್ಟ ಸಂಪನ್ನೆ – ಅಷ್ಟಗುಣಯುತೆ

ಅಸುರೆಯ ಕೂಡಿದ – ಹಿಡಂಬಿಯ ವರಿಸಿದ ಭೀಮ

ಅಳವಲ್ಲ – ಸಾಧ್ಯವಲ್ಲ

ಆಗಾಮಿ – ಮುಂದಿನ ಜನ್ಮದಲ್ಲಿ ಅನುಭವಿಸುವ ಕರ್ಮಗಳು

ಇಂದುರವಿನೇತ್ರ – ಚಂದ್ರ, ಸೂರ್ಯರೇ ಕಣ್ಣಾಗಿ ಉಳ್ಳವನು

ಇಮ್ಮಹಿಷೇರ ಕೂಡಿ – ಇಬ್ಬರು ರಾಣಿಯರ ಸಹಿತ

ಉಮೆಯ ಪತಿ – ಶಿವ

ಉರಗಗಿರಿ – ಶೇಷಾಚಲ

ಉರುಹು – ನೀಡು

ಊರ್ಣಸುವಿಚಿತ್ರ ವಸನ – ಚಿತ್ತಾಲಂಕಾರ ಗಳಿಂದ ಕೂಡಿದ ಉಣ್ಣೆ ಶಾಲು

ಎರಡೆರಡು ಲಕ್ಷದಿಪ್ಪತ್ತೈದು ಸಾವಿರ – ೪ ಲಕ್ಷ೨೫೦೦೦

ಎಸು – ಎಷ್ಟು

ಏಸುಬಗೆ – ನಾನಾ ರೀತಿಯಲ್ಲಿ

ಕಕ್ಕಡ (ಕರ್ಕಡೆ)– ದೀವಟಿಗೆ

ಕಣ್ಣಿಲ್ಲದವಳು – ಅಂಜನಾದೇವಿ

ಕುಂದ್ಯರನು – ದುಃಖಿಗಳನ್ನು

ಕುವರತನು – ಹುಡುಗತನದ ರೂಪುಳ್ಳವನು

ಕೇಸಕ್ಕಿ – ಕೆಂಪು ಅಕ್ಕಿ

ಕೈಕಾಣಿಕೆ – ಉಡುಗೊರೆ

ಕ್ಷೀರವಾರಿಧಿ ಕನ್ನಿಕೆ – ಶ್ರೀ ಲಕ್ಷ್ಮಿ, ಹಾಲಿನ ಕಡಲಲ್ಲಿ ಅವತರಿಸಿದವಳು

ಕ್ಷೀರಾಂಬುಧಿ – ಹಾಲಿನ ಕಡಲು

ಕ್ಷೋಣಿ – ಪ್ರಪಂಚ

ಗರುವ ರಹಿತ – ವಿನಯ

ಗಿರಿಯೊಡತಿ ಯಪತಿ – ಕೈಲಾಸ ಪರ್ವತದ ಒಡತಿ ಉಮೆಯ ಪತಿ– ಶಿವ

ಗುರುತಲ್ಪದವನ ಕಾಲದಲ್ಲಿ – ಚಂದ್ರವಂಶದಲ್ಲಿ

ಶ್ರೀ ವಿಜಯದಾಸರ ಉಗಾಭೋಗಗಳು

೧

ಅಡಿಗಡಿಗೆ ನಾ ನಿನ್ನ ಅಡಿಗಳನೆ ನಂಬಿದೆ ।
ತೋರಯ್ಯ ಎನಗೆ ಸುಚಿತ್ತ ಚಿತ್ತಜನಯ್ಯ
ಎಡೆ ಬಿಡದೆ ನಿನ್ನಂಘ್ರಿ ಚೆನ್ನಾಗಿ ಪೂಜಿಸಿ
ಎಡೆಗೆಡಿಪ ಲಿಂಗವನ್ನು ಬಂಧಿಸಿಕೊಂಡು
ಬಡಿವಾರ ನಿನ್ನವನೆಂಬೊ ಮಾತನೆ ಪೇಳಿ
ಸಡಗರದಿ ಮೆರೆವ ದಾಸನ್ನ ಮಾಡಯ್ಯ
ಬಿಡೌಜಪತಿ ಸಿರಿ ವಿಜಯವಿಠಲ ಸ್ವಾಮಿ
ಬರಿಸೊ ಬರಿಸೊ ನಿನ್ನ ಸ್ಮರಣೆ॥

೨

ಅನ್ಯದೇವತೆಗಳು ಕರೆದೊಯ್ದು ಮನ್ನಿಸಿ
ರನ್ನದಂದಣವೇರಿ ಮೆರೆಸಲು
ಮುನ್ನೇನು ಸುಖವಿನಿತಿಲ್ಲ ದುಃಖವಲ್ಲದೆ ಘೋರ
ಗನ್ನ ಘಾತಕವು ಎಂದಿಗೆ ತಪ್ಪದು
ಸನ್ನೆಯನು ಕೇಳಿ ಸರ್ವೋತ್ತಮ ಹರಿ ಉದಾ
ಸಿನ್ನವನು ಮಾಡಿ ಕೆರ ಹೊಡಿಸಿದ ಸುಖ
ವೇನು ಬಾರದು ಕಾಣೊ ಪನ್ನಗಾರಿಗಾದರು
ಅನ್ಯಥಾ ಬಿಡದಿರು ವಿಜಯವಿಠಲನ್ನ॥

೩

ಅನಲದೇವನು ದಾಹಕನಹುದೊ ಎಂದಿಗೂ
ಮನ ಬಲ್ಲದು ಕಾಣೊ ತ್ರಿಜಗದಲ್ಲಿ
ಅನುದಿನದಲ್ಲಿ ತನ್ನಿಂದನುವಾದ ವಸ್ತ
ಕ್ಷಣದೊಳಗೆ ದಹಿಸಿ ಬಿಡುವನು ಕಾಣಿರೊ

ಯತಿಕಕ್ಷೆ – ದಾಸಕಕ್ಷೆ

೩೧೦

ಮುನಿಜನರ ನೆನೆಸಿ ಜನರೂ । ಮುನಿ ಜನರ ನೆನೆಸಿ ಬಿಡ ।
ದನುದಿನದಲಿ ನಿಮ್ಮ । ಮನ ಮಲಿನ ಪೋಗಿ ಸ ।
ಜ್ಜನ ಸಂಗವಾಗುವುದು ॥ ಅನುಮಾನವಿಲ್ಲ ಗುಣಗಣ ।
ವನಧಿ ಹರಿವೊಲಿದು । ಘನವಾಗಿ ಪಾಲಿಸುವನು ಪ

ಮಿತ್ರಮಿತ್ರಾಯು ವಿ । ಚಿತ್ರ ಭಾರ್ಗವ ವಿಶ್ವ ।
ಮಿತ್ರ ಮೈತ್ರಾವಾರುಣಿ ಭೃಗು । ವೀತಿ
ಹೋತ್ರ ಕಪಿ ಗಾರ್ಗ್ಯ ಗಾಲವ । ಗರ್ಗಗಾರ್ಚಮಾ ॥
ಅತ್ರಿ ಅತಿ ಅಷ್ಟ ವಕ್ರ ।
ಪತ್ರ ಫಾಲಾಶವಟು । ಶಾಂಡಿಲ್ಯ ಶಕಟ ಸು ।
ನೇತ್ರ ಸುಮಾಂಗಲ್ಯ ಸಂ । ಕೃತಿ ಭಾರದ್ವಾಜ ।
ಗೋತ್ರ ಗೌರೀವೀತಹವ್ಯ । ಕಪಿ ಶಂಖಕಟ
ಮೈತ್ರಾವರುಣವಾಧುಳಾ ॥ ೧

ಉಪಮನ್ಯು ಶಂಕು ಉದ್ದಾಲಕ ಕೌಂಡಿಣ್ಯ ।
ಅಪುನವಾನ ಅತಿಥಿ ಪಾಂತುಚಾವನ ಚವನ ।
ಉಪಮಿಥ್ಯು ಕಪಿಲ ಕಾಶ್ಯಪ ಕಾಣ್ವ ಹರಿತ ಕ ।
ಶ್ಯಪ ಪೂತಿಮಾಷರೈಭ ॥
ವಿಪುಳ ಜಮದಗ್ನಿ ವಾಲ್ಮಿಕಿ ರೇಭ ಜಾಬಾಲಿ ।
ಸ್ವಪನ ಸಾತ್ಯಕಿಯು ಸಾಮ್ಯಾಳ ದೇವರತತಿ ।
ತಪ ದೈವಲ ಸಿತ ಗೌತುಮ ಭದ್ರಸ್ವಾತಂತ್ರ ।
ಕಪಿಕುತ್ಸ್ನ ಪೌರಕುತ್ಸಾ ೨

ಮುನಿಮಾಧ್ರಮ ಶಣಶರ್ಮ ಬಾದರಾಯಣ ।
ಕನಕ ಕಾತ್ಯಾಯನ ಮಾರ್ಕಾಂಡ್ಯ ಮಾಂಡವ್ಯ ।
ಶುನಕ ಶೌನಕ ರೋಮಹರ್ಷಿಣಿ ಸೌಭರಿ ।
ತೃಣಬಿಂದು ಭಾಷ್ಕಾಳಾಖ್ಯ ॥
ಪನಸ ಅಘಮರ್ಷಣ ಪ್ರಮಥ ಪ್ರಾಗಾಧ ಜೀ ।
ವನಯಾಜ್ಞವಲ್ಕ್ಯ ಜೆವಂತಿ ಮಾತಂಗ ಶೋ ।
ಭನ ಸಕೆಕೃತಿ ಭಾರ್ಗವ ಸುರವತ್ಸ ಚಂ ।
ದನ ಧೌಮ್ಯ ಆರ್ಯ ರುಚಿರಾ ॥ ೩

ವಾಸಿಷ್ಟ ಶ್ರೀವತ್ಸ ಲೋಹಿತಾಷ್ಟಕಶರ್ವ ।
ವಾಸುಳೆ ಋಷಿ ಶಣಕ ಕರ್ದಮ ಮರೀಚಿ ಪಾ ।
ರಾಶರಪ್ಸಲ್ಲಾದ್ರಿಧರ ಶಕ್ತಿ ವೈರೋಹಿತ್ಯ ।
ಬೇಷಿ ಜಾವಾಯುಲಿಕೆಯೂ ॥
ಭೂಷಣೌ ಬಾರ್ಹಸ್ಪತ್ಯದಾಲ್ಭ್ಯ ಸುಯಜ್ಞಾಜ್ಞಿ ।
ವೇಶ್ಯ ಮುಖ ಸಪರಿಧಿಸಾಲಂಕಾಯನಾ ಧರ್ಮ ।
ದೈಸಿಕಾ ದೇವರಾತ ವತ್ಸರಾಜಾರ್ವನಾ ।
ನಾಶಯ ದೇವಶ್ರವತಾ ॥ ೪

ಗಿವಿಷ್ಠರಾ ವಾಮವಾಮರಿತ್ಯ ಕಾಲುಗ್ರ ।
ಶ್ರವ ಪೂರ್ಣವಾಹಕ ಕೃತು ಅಂಗಿರಸಾಂಗಿರಾ ॥
ಪವನ ಪ್ರಚಿನಾ ಯಜ್ಞಾರಿಷ್ಟ ಶಠನಾ ಪಾ ।
ಲವ ಶಮನ ಋಷಿಶೃಂಗ ॥
ಕವಿ ವೇದಶಾಲ ವಿಶಾಲ ಕೌಶಿಕ ಶುಚಿ ।
ಭುವನ ಉರ್ಜಯನ ಮಾಹಋಷಿಭಹುದ ಸಂ ।
ಭವಸ್ತಂಭ ಕಿರಾಠಿ ಕಪಿಸೇನ ಶಾಂಡಿಲ್ಯ ।
ಪವನದಮ ಬೀಜವಾಪಿ ॥ ೫

ಉಲಿಖಲು ಧನಂಜಯ ವಾಲಿಖ್ಯಮಾಯ ।
ಕಲಿಕಿ ಸೃಂಗಿ ಮಧು ಚಂದವಿತನು ಬಹು ।

ಬಲ ಧೂಮ್ರ ಜಠರ ಉರ್ವಾಸ ಐಕ್ಯಾಯನ ।
ತಿಲುಕ ವಿಭಾಂಡ ಶರಭ ॥
ಪುಲಸ್ತ್ಯ ದಧೀಚಿ ಕಥಾಸೂನು ಸೇವಾಸ್ಯ ಮಾ ।
ದ್ಗಲ ವಿಷ್ಣು ತ್ರಿಧಕುಕ್ಷಿ ಶುಕ್ಷ ಮನತಂತು ।
ಪುಲಹ ಹವಿಧಾನ ಉತ್ತಂಕ ಉತ್ತಮ ಕಚರ ।
ಬಲವೀರ್ಯ ಬಭ್ರಾಮೇನೂ ೬

ಸುತಪ ಅಪವರ್ಗ ಹಿರಣ್ಯನಾಭ ಅ ।
ಧ್ಭುತ ಅಜಾಮೀಡ ಪರ್ವತ ಶ್ವೇತಕೇತಮಾಹ ॥
ದ್ಯುತಿ ಶಕ್ತಿ ವೈಶಂಪಾಯನ ಪೈಹಿಲಜಯ ।
ಸತ್ಯವ್ರತ ಶ್ರುತಿದ್ಯುತಿ ಆಯುತಾ ॥
ಶ್ರುತಿಕೀರ್ತಿ ಸುಪ್ರಭಾವತ್ಸ ಮೃತಾಂಡ ಸೂ ।
ಮತಿ ಕ್ರೋಢ ಕೋಲ ಗೋಬಲ ಮಾತೃಕಾನಂದ ॥
ದ್ಯುತಿ ತಪವಿದ್ವಾಹ ದರ್ಭಾ ಜಾನ್ವವಶೀಲ ।
ಕಥನ ಸರ್ವಸ್ಥಂಬವಾ ೭

ನೈಧ್ರುವಾ ದೀರ್ಘತಮ ಜಮದಗ್ನಿ ಕಾರುಣಿ ।
ಸದ್ಮುನಿಕಾಂಡಮಣಿ ಮಾಂಡವ್ಯವಾಚಸಕ ।
ಶುದ್ಧ ಸಂವರ್ತ ಸಂತತ ಕಾಮ ಸಂಹತಿ ।
ಶಿದ್ಧಿಸನಕಸ ನಂದನಾ ॥
ವಿದ್ಯಾಂಗ ಹವ್ಯರೋಹಿತಶರ್ಮ ಸೂಕರ್ಮ ।
ಉದ್ದಾಳ ಉಚಿತ್ಥ್ಯಹರಿ ಮೇಧ ಮೇಧ ಪ್ರ ।
ಸಿದ್ಧ ಮಯೂರ ಶುಕ ಕಪಿಲ ಕಾಪಿಲ್ಯ ಗುಣ ।
ಬುದ್ಧಿ ಸಮೇಧ ಪೇರ್ಮಿ ೮

ಪಂಚ ಪಂಚಾಸಪ್ತ ಅಷ್ಟ ಕಾಲದಲಿ ಪ್ರಾ ।
ಪಂಚದೊಳು ತೊಡಕದಲೆ ಬುದ್ಧಿ ಚಿತ್ತದೊಳಿಟ್ಟು ।
ಅಂಚಿಗಂಚಿಗೆ ಬಹು ಮುನಿಗಳೊಳ ।
ಗಿದ್ದವರ ಕೊಂಚ ಮುನಿಗಳ ಪೇಳಿದೆ ॥

ವಂಚನೆಯಿಲ್ಲದೆ ಸ್ಮರಿಸಿ ಮಧ್ವಮತಪೊಂದಿ ।
ಸಂಚಿತಾಗಮ ಕಳೆವ ಸರ್ವಸುಖವೀವ ವಿ ।
ರಂಪಪಿತ ವಿಜಯವಿಠ್ಠಲರೇಯ ಇದು ರವಿ ।
ಮಿಂಚಿನಂದದಿ ಪೊಳೆವನು ೯

೩೧೧

ಗುರುವಶಕೆ ನಮೋ ಎಂಬೆ ನಮ್ಮ
ಮರುತ ಮತಾಬ್ಧಿಗೆ ನಮೋ ಎಂಬೆ ಪ

ಶ್ರೀ ಮದಾನಂದತೀರ್ಥ ಪದ್ಮನಾಭರಿಗೆ ।
ರಾಮದೇವರ ಕಂದ ನರಹರಿಗೆ ॥
ಕಾಮಿತ ಫಲವೀವ ಮಾಧವಕ್ಷೋಭ್ಯರಿಗೆ ।
ಆ ಮಹಾಮಹಿಮ ಜಯತೀರ್ಥ ರಾಯರಿಗೆ ೧

ವಿದ್ಯಾಧಿರಾಜರಿಗೆ ವಿಜಯ ಕವೀಂದ್ರ ಸು ।
ಸದ್ಗುಣ ವಾಗೀಶ ರಾಮಚಂದ್ರರಿಗೆ ॥
ವಿದ್ಯಾನಿಧಿ ರಘುನಾಥ ರಘುವರ್ಯತೀರ್ಥರಿಗೆ ।
ಅದ್ವೈತಮತ ಖಂಡ ರಘೋತ್ತರಾಯರಿಗೆ ೨

ವೇದವ್ಯಾಸ ವಿದ್ಯಾಧೀಶ ವೇದನಿಧಿ ಮುನಿಗೆ ।
ಸಾಧುಜನ ಪ್ರಿಯ ನಿತ್ಯ ವತ್ರರಿಗೆ ॥
ಮೇದಿನಿಯಲಿ ಮೆರೆದ ಸತ್ಯನಿಧಿತೀರ್ಥರಿಗೆ ।
ವಾದಿಗಜಕೆ ಸಿಂಹ ಸತ್ಯನಾಥರಿಗೆ ೩

ಯತಿಶ್ರೇಷ್ಠ ಸತ್ಯಾಭಿನವತೀರ್ಥರಿಗೆ ।
ಸತತ ಸಜ್ಜನಪಾಲ ಸತ್ಯಪೂರ್ಣರಿಗೆ ॥
ಅತಿಶಯವಾನಂದ ಸತ್ಯ ವಿಜರಿಗೆ ।
ಮತ ಉದ್ಧಾರಕ ಶ್ರೀ ಸತ್ಯಪ್ರಿಯರಿಗೆ ೪

ಇಂತು ಗುರುಗಳ ಸಂತರೆ ಕೊಂಡಾಡಿ
ಇಂತು ಸುತಾಪವನುರುಹಿ ಬಿಟ್ಟು ॥
ಸಂತೋಷಿ ನಾನಾದೆ ವಿಜಯವಿಠ್ಠಲನ್ನ
ಚಿಂತಿಯ ಮಾಡುವೆ ದಾಸರ ದಯದಿಂದ ೫

೩೧೨

ಸಂತರನ ಸ್ಮರಿಸಿ ಜನರು
ಸಂತರನ ಸ್ಮರಿಸಿ ಜನ ನಿಂತಲ್ಲಿ ಕುಳಿತಲ್ಲಿ
ಇಂತೆಂತು ಸದ್ಧರ್ಮ ಚರಿಸುವ ಕಾಲಕ್ಕೆ
ಅಂತರಂಗದಲಿದ್ದು ಚಿಂತೆಯನು ಬಿಟ್ಟು ಸಿರಿ
ಕುಂತುಪಿತನೊಲಿಮೆಯಿಂದ ಪ

ವ್ಯಾಸ ಶಿಷ್ಯರಾದ ಗುರುಮಧ್ವ ಮುನಿರಾಯ
ಲೇಸು ಪಂಕಜನಾಭ ನರಹರಿ ಮಾಧವ ಮು
ನೇಶ ಅಕ್ಷೋಭ್ಯ ಜಯರಾಯ ವಿದ್ಯಾಧಿರಾಜ
ಪೋಷಿತ ಕವೇಂದ್ರತೀರ್ಥರಾ
ನ್ಯಾಶಿ ವಾಗೀಶ ಯತಿ ರಾಮಚಂದ್ರ ನಂದ
ಭಾಸುರ ವಿದ್ಯಾನಿಧಿ ರಘುನಾಥ ರಘುವರ್ಯ
ಭೂಷಣ ಮತಕೆ ರಘೋತ್ತಮ ನಿಧಿವೇದ
ವ್ಯಾಸ ವಿದ್ಯಾಧೀಶರೂ ೧

ವೇದಮುನಿ ಸತ್ಯವ್ರತ ಸತ್ಯನಿಧಿ ರಾಯ
ಬೋಧ ಮೂರುತಿ ಸತ್ಯನಾಥ ಸತ್ಯಾಭಿನವ
ಕ್ರೋಧ ಜಯ ಸತ್ಯಪೂರ್ಣ ಸತ್ಯ ವಿಜಯ ವಿ
ನೋದ ಸತ್ಯಪ್ರಿಯರೂ
ಭೇದಾರ್ಥ ಬಲ್ಲ ವಿಭುಧೇಂದ್ರ ರಘುತನಯ ಸ
ಮ್ಮೋದ ಜಿತಾಮಿತ್ರ ತೀರ್ಥ ಮುನಿಪ ಸುರೇಂದ್ರ

ವಾದಿ ಎದೆ ಶೂಲ ವಿಜಯೀಂದ್ರ ಸುಧಿಯೀಂದ್ರ ಹ
ಲ್ಲಾದ ರಾಘವೇಂದ್ರರು ೨

ಯೋಗೇಂದ್ರ ಭೂಸುರೇಂದ್ರ ಸುಮತೀಂದ್ರ ಉಪೇಂದ್ರ
ಯೋಗಿ ಶ್ರೀಪಾದರಾಯರ ಪೀ
ಳಿಗೆಯ ಅತಿ ಸಾಧನವು ವ್ಯಾಸರಾಯರ ಪಾರಂಪರಿಯವ ಲೇ
ಸಾಗಿ ಎಣಿಸಿ ಕೊಂಡಾಡಿ
ಆಗಮನುಕೂಲ ಮಧ್ವ ಶಾಸ್ತ್ರವನುಸರಿಸಿ
ವೇಗದಿಂದಲಿ ಮಹಸಂತರಿಗೆ ಶಿರ
ವಾಗಿ ಭವದಿಂದ ಕಡೆ ಬಿದ್ದು ಮುಕ್ತಿಗೆ ಪೋದ
ಭಾಗವತ ಜನರ ನಿತ್ಯ ೩

ಕ್ಷೇತ್ರ ಸರೋವರ ನದಿ ಮಿಗಿಲಾದ ದೇಶದಲಿ
ಪಾತ್ರರಾಗಿದ್ದು ವರ್ಣೋಚಿತ ಧರ್ಮವನು
ಗಾತ್ರದಂಡಿಸಿ ಮಾಡಿ ಹರಿಯ ಮೆಚ್ಚಿಸುವ ಪಾ
ರತ್ರಯವನೇ ಬಯಸುವ
ಪುತ್ರ ಪೌತ್ರರ ಕೂಡಿ ಜ್ಞಾನದಲಿ ಇಷ್ಟ ಚ
ರಿತ್ರಾರಾ ಮಹಿಮೆ ಕೊಂಡಾಡಿದವರ ವಿ
ಚಿತ್ರವನು ಪೊಗಳುವ ದಾಸದಾಸಿಯರ ಪದ
ಸ್ತೋತ್ರ ಮಾಡಿರೋ ಆವಾಗ ೪

ಉದಯಕಾಲದಲೆದ್ದು ಸಂತನ ಮಾಲಿಕೆಯನ್ನು
ಮೃದು ಪಂಚರತ್ನದಲಿ ನಿರ್ಮಿತವಾಗಿದೆ
ಸದಮಲರು ಪೇಳಿ ಸಂತೋಷದಲಿ ಕೇಳಿ ಕೊರಲೊಳಗೆ
ಪದರೂಪದಲ್ಲಿ ಧರಿಸಿ
ಮದ ಮತ್ಸರವು ಪೋಗಿ ವೈರಾಗ್ಯದಲಿ ಸಾರ
ಹೃದಯರ ಬಳಿ ಸೇರಿ ಜ್ಞಾನ ಸಂಪಾದಿಸಿ
ಪದೋಪದಿಗೆ ವಿಜಯವಿಠ್ಠಲನ ನಾಮಾಮೃತವ
ವದನದಿಂದಲಿ ಸವಿದುಂಬ ೫

೩೧೩

ಜಯರಾಯರ ನೋಡಿರೋ ಸಜ್ಜನರೆಲ್ಲ
ಜಯರಾಯರ ನೋಡಿರೋ ಪ

ಜಯರಾಯರ ನೋಡಿ ಜಪಿಸಿ ಮನದಿ ಪಾಡಿ
ಜಯವಾಗುವುದು ನಿಮಗೆ
ಭಯನಾಶ ಸಂತತ ಅ.ಪ

ದುರುಳಮತವೆಂಬೊ ಕರಿಗೆ ಅಂಕುಶವಿತ್ತು
ಸುರಸಾದ ಗ್ರಂಥ ಆನಂದಮುನಿ
ವಿರಚಿಸಿ ಇರಲಾಗಿ ಪರಮಭಕ್ತಿಯಿಂದ ವಿ
ಸ್ತರ ಮಾಡಿದಾ ಕರದ ಕನ್ನಡಿಯಂತೆ ೧

ವಾದಿಗಳನ್ನೆಲ್ಲಾ ಜೈಸಿ ಡಂಗುರ ಹೊಯ್ಸಿ
ಭೇದಾರ್ಥಜ್ಞಾನ ಸತ್ಯವೆನಿಸಿ
ಈ ಧರಿಯೊಳಗೆ ಹರಿಪರ ದೈವವೆಂದು
ಸಾಧಿಸಿ ಉದ್ದಂಡವಾದ ಗುರುತಿಲಕ ೨

ಅಕ್ಷೋಭ್ಯತೀರ್ಥರ ಕರದಿಂದ ಜನಿಸಿ
ಮೋಕ್ಷಕೆ ಜಯ ಪತ್ರಿಕೆ ಕೊಡಿಸಿ
ಪಕ್ಷಿವಾಹನ ಸಿರಿ ವಿಜಯವಿಠ್ಠಲನನ್ನ
ನೀಕ್ಷಿಸುವದಕೆ ಉಪದೇಶ ಕೊಡುವ ಋಷಿ
ಶ್ರೀ ಮಧ್ವೇಶಾರ್ಪಿತವು ೩

೩೧೪

ಟೀಕಾಚಾರ್ಯರ ಪಾದ । ಸೋಕಿದ ಕೊನೆಧೂಳಿ ಪ

ತಾಕಿದ ಮನುಜರಿಗೆ ಕಾಕುಬುದ್ಧಿಗಳೆಲ್ಲ ಪರಿಹಾರವಾಗುವವೊ ।
ಬೇಕಾದ ಪದವಿಯ ಕೊಡುವನು ಶ್ರೀ ಹರಿ ಅ.ಪ

ಮಧ್ವಮತವೆಂಬ ಅಬ್ಧಿಯೊಳಗೆ ಪೂರ್ಣ ।
ಉದ್ಭವಿಸಿದ ಚಂದ್ರನಾ ಗುಣಪೂರ್ಣನಾ ॥
ಅದ್ವೈತಮತ ತಮನಿಧಿ ನಿಶಿಕುಠಾರ ।
ವಿದ್ಯಾರಣ್ಯವ ಗರುವಕೆ ಪರಿಹಾರ ೧

ತತ್ವ ವಾರಿಧಿಗಳ ತತ್ವಸುಧೆಯ ಭಾಷ್ಯ ।
ವಿಸ್ತರಿಸಿ ಇರಲು ಬೇಗದಲಿ ॥
ಚಿತ್ರವಲ್ಲಭನ ಸೇವೆಯ ಮಾಡಿ ಟೀಕಂಗಳ ॥
ಸುತ್ತೇಳು ಲೋಕಕ್ಕೆ ಪ್ರಕಟಿಸಿ ಮೆರೆವರ ೨

ಎಂದಿಗಾದರು ಒಮ್ಮೆ ಕೊನೆ ನಾಲಿಗೆಯಿಂದ ।
ಬಿಂದು ಮಾತ್ರದಿ ನೆನೆಯೆ ॥
ಮಂದ ಮತಿಯಾದರೂ ಅಜ್ಞಾನನಾಶವು ।
ಸಂದೇಹವಿಲ್ಲವು ಅವಾವ ಕಾಲಕ್ಕೆ ೩

ಜ ಎಂದು ಪೊಗಳಲು ಜಯಶೀಲನಾಗುವ ।
ಯ ಎನ್ನೆ ಯಮರಾಯನಂಜುವನು ॥
ತೀ ಎಂದು ಪೊಗಳಲು ತೀವ್ರ ಪದವಿ ಉಂಟು ।
ರ್ಥ ಎಂದು ಪೊಗಳಲು ತಾಪತ್ರಯುಪಶಮನ ೪

ಯೋಗಿ ಅಕ್ಷೋಭ್ಯತೀರ್ಥರ ಕರಕಮಲಸಂಜಾತ ।
ಭಾಗವತರ ಸುಪ್ರೇಮ ॥
ಕಾಗಿಣಿ ತೀರದ ಮಳಖೇಡ ನಿವಾಸಾ ।
ಶ್ರೀ ಗುರು ವಿಜಯವಿಠ್ಠಲ ಸೇವಕ ಭಕ್ತಾ ೫

೩೧೫

ಸಾರಿ ಭಜಿಸಿರೋ ಟೀಕಾಚಾರ್ಯರಂಘ್ರಿಯಾ ಪ

ಘೋರ ಪಾತಕಾಂಬುಧಿಯ ದೂರ ಮಾಳ್ಪರ ಅ.ಪ

ಮೋದತೀರ್ಥರ ಮತವ ಸಾಧಿಸುವರ ।
ಪಾದ ಸೇವ್ಯರ ದುರ್ಬೋಧ ಕಳೆವರ ೧

ಭಾಷ್ಯತತ್ವ ಸುವಿಶೇಷ ಮಾಳ್ಪರ ।
ದೋಷ ದೂರರ ವಾಸವಾದಿ ರೂಪರ ೨

ಶ್ಯಾಮಸುಂದರ ಹರಿಗೆ ಪ್ರೇಮಪೂರ್ಣರ ।
ನೇಮನಿತ್ಯದ ನಿಷ್ಕಾಮನಾ ವರ ೩

ಮೋಕ್ಷದಾತಗ ಅಕ್ಷೋಭ್ಯತೀರ್ಥರ ಅ- ।
ಶಿಕ್ಷಿತಾದರ ಅಪೇಕ್ಷ ರಹಿತರ ೪

ವಿಜಯವಿಠಲನ ಅಂಘ್ರಿ ಭಜನೆ ಮಾಳ್ಪರ ।
ಕುಜನ ಭಂಜರ ದಿಗ್ವಿಜಯ ರಾಯರ ೫

೩೧೬

ವ್ಯಾಸರಾಯರ ಸ್ಮರಿಸಿರೋ
ವ್ಯಾಸರಾಯರ ಸ್ಮರಿಸಿ ಏಸು ಜನ್ಮದ ಪಾಪ
ನಾಶವಾಗುವುದು ನಿಮ್ಮಾಶೆ ಸಿದ್ಧಿಸುವುದು
ಲೇಸಾಗಿ ಸುಖಿಸಿ ಆನಂದ ವೈಕುಂಠದಲಿ
ವಾಸವಾಗುವುದು ನಿಜ ಭಕುತಿಯಲಿ ಬಿಡದೆ ಪ

ಪಿತನಿಂದ ನೊಂದು ರತಿಪಿತನ ಸ್ಮರಿಸುತ
ಪ್ರತಿಬಂಧಕಗಳ ಪ್ರತಿಯಾಗಿ ಬಂದಿರಲು
ಅತಿವೇಗದಿಂದ ಪಾರಂಗತನಾಗಿ
ಬಲು ಮತಿವಂತನಾಗಿ ಮುದದೀ
ಕ್ಷಿತಿಯ ಭಾರವ ವೊಹಿಸಿ ಕೃತಭುಜ ಮುನೀಶ್ವರನ
ಸ್ತುತಿಸುತಲ್ಲಿದ್ದು ಮಿತಿಕಾಲ ಹಿಂಗಳದು
ಸುತಗೆ ರಾಜ್ಯವನಿತ್ತು ಕೃತಕಾರ್ಯನಾಗಿ
ಅಚ್ಯುತನ ವರದಿಂದ ಬಂದು ೧

ಅಲ್ಲಿ ತ್ರಿಣೀನೇತ್ರ ಶ್ರೀ ವಲ್ಲಭನ ಶ್ರೀಪಾದ
ಪಲ್ಲವಾರುಣಿ ಚಿತ್ತದಲ್ಲಿ ಪ್ರತಿದಿವಸದಲಿ
ನಿಲ್ಲಿಸಿ ನಿಗಮಾರ್ಥದಿಂದ ಪೂಜಿಸುತ್ತಿದ್ದ ಬಲ್ಲ ಭಕುತಿಂದ ಸತತ
ಖುಲ್ಲನಲಿ ಪುಟ್ಟಿದ ಪ್ರಲ್ಹಾದ ದೇವನು
ಬಲ್ಲಿದಾನಾಗೆಲ್ಲಿ ಸಂಸಾರನುತ್ತರಿಸಿ
ಎಲ್ಲ ಕಾಲದಿ ಇರುತಿರಲು ನಾರದ
ಮುನಿ ಮೆಲ್ಲನೇ ನಡತಂದನು ೨

ಬಂದ ನಾರದಗೆ ಪ್ರಲ್ಹಾದ ದೇವನು ಎರಗಿ
ನಿಂದು ಕಂಗಳ ಮುಗಿದು ತ್ರಾಹಿ ತ್ರಾಹಿ ಎಂದು
ಒಂದೊಂದು ಬಗೆಯಲ್ಲಿ ಕೊಂಡಾಡಿ
ಬೆಸಗೊಂಡು ಇಂದು ನಿಮ್ಮಯಾ ದರುಶನಾ
ಛಂದವಾಯಿತೆನಗೆತ್ತಲಿಂದ ಬಂದಿರಿ ಇತ್ತ
ಬಂದ ವಿಚಾರ ಪೇಳೆಂದು ಬಿನ್ನೈಸಲು
ವೃಂದಾರಕ ಮುನಿ ಕೃಷ್ಣನ ಮಹಿಮೆ
ನಂದದಲಿ ಹಾಹಾ ಎನುತಾ ೩

ವೃಕೋದರನಿಂದ ನೊಂದು ದೇಹವನು ಬಿಡುವಾಗ ಬಾ
ಲ್ಹಿಕರಾಯನಾಗಿ ಹುಟ್ಟಿದ ಪ್ರಲ್ಹಾದನು
ಉಕುತಿಯಿಂದಲಿ ಪೊಗಳಿ ವರವ ಬೇಡಿದನು
ವೈದಿಕ ಮಾರ್ಗವನ್ನೇ ಧರಿಸಿ
ಉಕುತಿಯನೇ ಸಾಧಿಸಿ ಕಲಿಯೊಳಗೆ ನಿಮ್ಮ ಪೂ
ಜಕನಾಗಿಪ್ಪೆನೆಂದು ತಲೆವಾಗಲು
ಭಕುತಿಗೆ ಮೆಚ್ಚಿಸಲೆ ಅಂದ ಮಾತಿಗೆ
ಇಂದು ಪ್ರಕಟವಾಯಿತು ಧರೆಯೊಳು ೪

ದಿಕ್ಕುಗಳಂ ಮರದು ಧಿಗಿಧಿಗಿನೆ ಚಿಗಿದಾಡುತ್ತ
ಉಕ್ಕಿದವು ಕಣ್ಣಿಂದ ಅಶ್ರು ಜಲಧಾರೆ ತಾ
ಶಕ್ತಿಯೆಂದದಿ ಪೊಳೆವುತಿರಲು
ಮೈಮರೆದು ದೇವಕಿ ನಂದನನ ನೆನೆದು

ನಕ್ಕು ಕಿಲಿಕಿಲಿ ರಾಹಸ್ಯಗಳನುಚ್ಚರಿಸುತಾ
ತರ್ಕೈಸಿ ತಿಳುಪಿದನು ಮುಂದಣಾಗಮವೆಲ್ಲ
ಇಕ್ಕೆಲದವಲವರು ಸಾಹ ಕೇಳಲಾ
ವೃತ್ತಾಂತ ಅಕ್ಕಟ ಅದ್ಭುತವೇನೆಂಬೆ ೫

ಬನ್ನೂರು ಗ್ರಾಮದಲಿ ಜನಿಸಿದನು ಭೂಸ್ವರೂಪ
ಮುನ್ನಿಲ್ಲದೇ ಬೆಳೆದು ಮುನಿ ಸುಬ್ರಾಹ್ಮಣ
ರನ್ನು ಪಾಲಿಸುವ ಪರಮಾನಂದವುಳ್ಳ ಬ್ರಹ್ಮಣ್ಯತೀರ್ಥರ ಕರದಿ
ಚೆನ್ನಾಗಿ ಪೋಷಿಸಿಕೊಂಡು ಉಪನೀತವಾಗಿ
ಸನ್ಯಾಸಿ ಪಟ್ಟವನೆ ಧರಿಸಿ ಧರ್ಮದಲಿ ಸ
ತ್ಪುಣ್ಯ ಶ್ರೀಪಾದರಾಯರಲ್ಲಿ
ವಿದ್ಯವನೋದಿ ಧನ್ಯ ಕೀರ್ತಿಯಲಿ ಮೆರೆದಾ ೬

ರಾಯಗದ್ದುಗೆನೇರಿ ಅವನಿಗೆ ಬಂದ ಮಹಾ
ಕುಹುಯೋಗವ ನೂಕಿ ರಾಜ್ಯದೊಳಗೆ ಇದ್ದ
ಮಾಯಿಗಳ ಮರ್ದಿಸಿ ಮುದದಿಂದ
ಸುವರ್ಣ ಛಾಯದಂತೆ ಕಾಂತಿಲೀ
ನ್ಯಾಯಾಮೃತ ತರ್ಕ ತಾಂಡವ ಚಂದ್ರಿಕೆ ಎಂಬ
ಶ್ರೀಯರಸನೊಲಿಸಿ ನಾನಾ ವಿಧದಿ ಪೂಜಿಸಿ
ಸ್ಥಾಯವಾದರು ಪೊಂಪದಿ ೭

ಯಂತ್ರೋದ್ಧಾರಕನ ಪ್ರತಿಷ್ಠಿಸಿ ವಿಜಯೀಂದ್ರ
ಸಂತ ವಾದಿರಾಜಗೊಲಿದು ಪುರಂದರ
ಇಂತು ಶಿಷ್ಯರನ್ನ ಪಡೆದು ಉಪದೇಶಿಸಿ
ಮಂತ್ರ ಸಿದ್ಧಿಯನೆ ಕೊಟ್ಟು
ಭ್ರಾಂತಗೊಳಿಸುವ ಮಹಾ ಅನ್ಯಾಯ ಮತವೆಂಬ
ಕಾಂತಾರ ಪಾವಕನೆ ವ್ಯಾಸಾಬ್ಧಿಯನು ಬಿಗಿದು
ಶಾಂತ ನಿಸ್ಸೀಮನೆನಿಸಿ ಯತಿಶಿರೋರನ್ನ
ಚಿಂತಿತಾ ಫಲದಾಯಕ ೮

ಮಧ್ವಮತವೆಂಬ ದುಗ್ಧಾಬ್ಧಿಗೆ ಪೂರ್ಣೇಂದು
ಹೃದ್ವನಜದೊಳಗಿರಿಸಿ ಕೃಷ್ಣನ ಪದಾಂಬುಜವ
ಚಿದ್ವಾತ್ಯದಲಿ ನಿಲಿಸಿ ಕಾವ್ಯದಲಿ ಕೊಂಡಾಡಿ ಸದ್ವೀರ ವೈಷ್ಣವರಿಗೆ
ಪದ್ಧತಿಯನು ಪೇಳಿ ತವಕದಿಂದಲಿ ತಾವು
ಸದ್ವೈಷ್ಣವ ಲೋಕ ಸಿರಿಮರಳೈದಿದರು
ಮಧ್ವವಲ್ಲಭ ನಮ್ಮ ವಿಜಯವಿಠ್ಠಲನ
ಪಾದದ್ವಯವ ಭಜಿಸುವವರೂ ಕೇಳಿ ೯

೩೧೭

ವ್ಯಾಸರಾಯರ ಸೇವೆ ಲೇಸಾಗಿ ಮಾಡಲು
ದಾಸನೆಂದೆನಿಸಿಕೊಂಬ ಪ

ಸಾಸಿರನಾಮದ ವಾಸುದೇವನ ಭಕ್ತ
ಕಾಷಾಯ ವಸ್ತ್ರಧರ ಅ.ಪ

ತಾ ಸಹಗಮನದಿ ಪತಿಸಹ ಪೋಗುವ
ಆ ಸ್ತ್ರೀಯು ಬ್ರಹ್ಮಣ್ಯತೀರ್ಥರಲ್ಲಿಗೆ ಪೋಗೆ
ಶ್ರೀಶ ಬದರಿಯಲ್ಲಿ ಪೇಳಿದ ಮಹಿಮೆಯ
ಆ ಸುಮಹಿಮ ಪ್ರಹ್ಲಾದನ್ನ ಸ್ಮರಿಸುತ್ತ
ಮೋಸ ಬರುವುದೆಂದಾಲೋಚನೆ ಇಲ್ಲದೆ
ಆ ಸತಿ ವಂದಿಸೆ ಸುಮಂಗಲ್ಯವನಿತ್ತು
ಆ ಸಮಯದಿ ಮಂತ್ರಾರ್ಥ್ಯಾವನೆ ಕೊಂಡು
ತಾ ಸುಮ್ಮಾನದಿ ಬನ್ನೂರಿಗೆ ಪೋಗ್ಯತಿ
ಯಾ ಸತಿಪತಿಯ ಪ್ರಾಣವನುಳಿಹಿ ರನ್ನ
ತಾ ಸಮೀಪದಿ ಮಠದಲ್ಲಿ ವಾಸಮಾಡಿಸಿ
ಕುಸುಮಾಕ್ಷತೆ ಫಲ ಮಂತ್ರಿಸಿ ಆಕೆಗೆ ಕೊಟ್ಟು
ಆ ಸುಮಂಗಲಿಯಲ್ಲಿ ಪ್ರಹ್ಲಾದ ಪುಟ್ಟಿದ
ಆ ಸಮಯದಿ ಚಿನ್ನದ ಹರಿವಾಣದಲಿ ಶಿಶು
ತಾನು ಬಿಡದೆ ಕಣ್ವ ನದಿಯಲ್ಲೀ

ಶಿಷ್ಯರಿಗೆ ತೊಳಸಿ ತಂದು ಮಠಕೆ ಆಗ
ವಾಸುದೇವನಭಿಷೇಕ ಕ್ಷೀರವನ್ನು
ಆ ಸುರಭಿಯ ಕರೆದಭಿಷೇಕವನೆ ಕೊಂಡ
ಲೇಸಿನಿಂದಲಿ ಮೊಲೆಯುಂಡು ಬೆಳೆದನು
ವಾಸವನುತ ದೇವೇಶನ ಪಾಡುತ
ವಾಸವಾದರು ಮಳೂರಿನಲಿ ೧

ಆ ಶಂಕುಕರ್ಣನೇ ಶೇಷಾವೇಶದಲ್ಲಿ
ಶ್ರೀಶನ ಕಂಭದಿ ತೋರಿಸಿದಾತನೆ
ತಾ ಸುಮ್ಮಾನದಿ ನರಸಿಂಹನ ಪೂಜೆಗೆ
ತಾಸು ಬಿಡದೆ ಆಸೆ ತೀರಿಸಿದಾತನೆ
ಈಸು ಮಹಿಮೆಗೆ ವ್ಯಾಸ ನಾಮಕರಣವು
ಆ ಸುಮನೋಯತಿ ಆಶೀರ್ವಾದವಮಾಡೆ
ತಾ ಸುಮ್ಮನಿರದಲೆ ಕೃಷ್ಣನ್ನ ಸ್ಮರಿಸುತ್ತ
ಈ ಶಿಶುಬೆಳೆಯೆ ಆಭರಣದಿ ಶೋಭಿತ
ವೀ ಸುಮತಿಯ ಮಂಗುರುಳಿಗೆ ಮುತ್ತಿನ ಗೊಂಡೆ
ಆ ಸುಮನೋಹರಗಳೆಲೆ ಮಾಗಾಯಿ
ಭೂಸುರ ನಿಕರವ ಮೋಹಿಪ ಬಗೆವಂಟಿ
ಭೂಸುರ ಕರ್ಣಕೆ ಚಳತುಂಬು ಬಾವಲಿ
ನಾಸಿಕಭಂದವು ಪದ್ಮವಿಕಸಿತ ಮುಖನೇತ್ರ
ಆ ಸೂರ್ಯ ಕಾಂತಿಯ ಮುಖ ಫಣೆ ತಿಲಕನ ನೃ
ಕೇಸರಿ ಪ್ರಾಯಗೆ ಹಾರಪದಕವಿಟ್ಟು
ಆ ಸುಕರಗಳಲಿ ಉಂಗುರ ಪೊಳೆಯುತ
ಆ ಸುಕಾಂತಿಯ ಕಡಗ ಸರಪಳಿ ವಂಕಿಯೂ
ಲೇಸು ವಡ್ಯಾಣವ ನಡುವಿಗೆ ಧರಿಸಿ
ಆ ಸಣ್ಣ ಪಾದಕ್ಕೆ ಗೆಜ್ಜೆ ಕಾಲ್ಗಡಗವು
ಈ ಶಿಶುವಿನ ಹರಿ ಆಡಿಸುವಾ ೨

ವರ್ಷವೈದಕೆ ಚೌಲ ಅಕ್ಷರಾಭ್ಯಾಸ
ಆರನೆ ವತ್ಸರ ಉಪನಯನ ಮಾಡಿ

ಧೀರಗೆ ಸಪ್ತ ವರ್ಷಕೆ ತುರ್ಯಾಶ್ರಮ
ಕಾರುಣ್ಯದಿಂದ ಶ್ರೀಪಾದರಾಯರಲ್ಲಿ
ಅರುಹಿಸಲು ವೇದಶಾಸ್ತ್ರ ನಿಗಮಪಾತ
ಸಾರವ ತರ್ಕತಾಂಡವ ಚಂದ್ರಿಕೆಯ ಮಾಡಿ
ಸೂರಿಶಿಷ್ಯ ವಾದಿರಾಜನ್ನ ಪಡೆದೆಯೋ
ಶೂರಕೇಸರಿಯಂತೆ ವಾದಿದಿಗ್ಗಜಗಳ
ಧಾರಿಣಿಯಲ್ಲಿ ತಲೆ ಎತ್ತದಂತೆ ಮಾಡಿ
ನೂರೆಂಟು ಮಂದಿ ಶೂರವಾದಿಗಳಿಂದ
ಧೀರ ಜಯಪತ್ರಿಕೆ ಕೊಂಡು ವಾರಿಧಿ ಕಟ್ಟಿ
ಮಾರುತಿಯನು ಪ್ರತಿಷ್ಠೆಯ ತಾಮಾಡಿ
ಶ್ರೀ ರುಕ್ಮಿಣಿಪತಿ ಗೋಪಾಲ ಕೃಷ್ಣನ
ಸಾರಸಾಕ್ಷನ ಸೇವೆ ಅನುದಿನವು ಮಾಡಿ
ತೋರಿ ಪುರಂದರ ದಾಸರಿಗಂಕಿತಾ
ಪಾರ ಕುಹುಯೋಗವ ನೂಕಿ ಭೂಪತಿಯನು ಕಾಯ್ದ
ಪಾರ ಮಹಿಮೆ ಫಾಲ್ಗುಣ ಬಹುಳ ಚೌತಿಯು
ಶ್ರೀ ರಮಣನ ಪುರಿಯಾತ್ರೆಗೆ ರಥವೇರಿ
ತೋರಿದ ವರದ ವಿಜಯವಿಠ್ಠಲನಾ ಪಾ
ಸೇರೀದರಿವರು ಆನಂದದಿ * ೩

೩೧೮

ವ್ಯಾಸಾ ಬದರಿ ನಿವಾಸಾ । ಎನ್ನಯ ।
ಕ್ಲೇಶ ನಾಶನಗೈಸು ಮೌನೀಶಾ । ಸಾಸಿರ ಮಹಿಮನೆ ।
ದೋಷರಹಿತ ಸುರ ಭೂಸುರ ಪರಿಪಾಲ ಶಾಶ್ವತ ವೇದ ಪ

ಸತ್ಯವತಿ ವರಸೂನು ಭವತಿಮಿರ ಭಾನು ।
ಭೃತ್ಯವರ್ಗದ ಸುರಧೇನು ।
ಸತ್ಯಮೂರುತಿಯೆ ನೀನು । ಸ್ತುತಿಪೆ ನಾನು ॥

* ಈ ಕೀರ್ತನೆ ವರದ ವಿಜಯವಿಠಲಾಂಕಿತದಲ್ಲಿ ದಾವಣಗೆರೆ ಶ್ರೀನಿವಾಸದಾಸಕೃತ ವ್ಯಾಸರಾಜ ಚರಿತೆಯಲ್ಲಿ ಉಪಲಬ್ಧವಿದೆ.

ನಿತ್ಯ ನಿನ್ನಂಘ್ರಿಯರೇಣು । ಉತ್ತಮಾಂಗದಲಿ
ಹೊತ್ತು ಹೊತ್ತಿಗೆ ಸೂಸುತ್ತಿರಲೆನಗದು ।
ಅತ್ಯಂತ ಸುಖತರ । ಸುತ್ತವ ಸುಳಿಯೆಂದೆತ್ತಿ ಕಡೆಗೆಯಿಡು ।
ಎತ್ತ ನೋಡಲು ವ್ಯಾಪುತ ಸದಾಗಮ ೧

ಲೋಕ ವಿಲಕ್ಷಣ ಋಷಿ । ಗುಣವಾರಿ ರಾಸಿ ।
ವೈಕುಂಠ ನಗರನಿವಾಸಿ । ನಾಕಾರಿಗಳ ಕುಲದ್ವೇಷಿ ಚಿತ್ರ ಸನ್ಯಾಸಿ ।
ಬೇಕೆಂದು ಭಜಿಪೆ ನಿಲಸಿ ।
ಜೋಕೆ ಮಾಡುವುದ । ನೇಕ ಪರಿಯಿಂದ ।
ಆ ಕುರುವಂಶವ ನಿಕರ ತರಿಸದೆ । ಭೂಕಾಂತರು ನೋಡೆ ।
ಸಾಕಾರ ದೇವ ಕೃಪಾಕರ ಮುನಿ ದಿವಾಕರ ಭಾಸಾ ೨

ಸ್ಮರಿಸಿದವರ ಮನೋಭೀಷ್ಟ । ವಾಶಿಷ್ಟ ಕೃಷ್ಣ
ನಿರುತ ಎನ್ನಯ ಅರಿಷ್ಟ ।
ಪರಿಹರಿಸುವದು ಕಷ್ಟದೊಳಗುತ್ಕೃಷ್ಟ ।
ಮೆರೆವ ಉನ್ನತ ವಿಶಿಷ್ಟ ।
ಸುರ ನರ ಉರಗ ಕಿನ್ನರ ಗಂಧರ್ವರ ।
ಕರಕಮಲಗಳಿಂದ । ವರಪೂಜೆಗೊಂಬ ।
ಸಿರಿ ಅರಸನೆ ನಮ್ಮ ವಿಜಯವಿಠ್ಠಲ ಪರಾ ।
ಶರಸುತ ಬಲು ವಿಸ್ತರ ಜ್ಞಾನಾಂಬುಧೆ ॥ ೩

೩೧೯

ಗುರು ವಾದಿರಾಜ ಯತಿಯಾ ನೆನಸುವದು
ನಿರುತ ಕರುಣಿಪ ಮತಿಯಾ ಪ

ಆರ್ತನಾ ಸರಿದಾರು ನವನ
ವರ್ತಮಾನವನೆ ಕೇಳಿ
ಕರ್ತೃತ್ವ ಪರಿಹರಿಸಿ ಸಂಸೃತಿಯ ಗರ್ತದಿಂದೆತ್ತಿ ನೋಳ್ಪ ೧

ದುರಿತ ರಾಶಿಗಳ ಶೀಳಿ ಹೊರದೆಗೆದು
ಮರುತ ಶಾಸ್ತ್ರವನೆ ಪೇಳಿ
ಪರಮಾರ್ಥ ಮಾರ್ಗವಾ ತೋರಿ ಸುಖಬಡಿಸಿ
ಧರಿಯೊಳಗೆ ಮೆರೆದೆ ಧೀರ ೨

ವಂದಿಸಿ ಸೌಂದರ್ಯಪುರಿಯ ವಾಸ ವರಪ್ರದ
ನಂದ ಸತ್ಕೀರ್ತಿ ಭೂಪ
ವಂದಿಸಿದವರಿಗೆ ಲೇಸಾಗಿ ಕೊಡುವ ಮು
ಕುಂದನಂಘ್ರಿಯ ದಾಸ ೩

ತೀರ್ಥಯಾತ್ರೆಯನೆ ಮಾಡಿ
ಹರಿ ಭೇದಾರ್ಥದಿಂದಲೆ ಕೊಂಡಾಡಿ
ಅರ್ಥಾಸೆಗಳ ಈಡಾಡಿ
ಹಯಮೊಗನ ಅರ್ಥಿಯಿಂದಲಿ ಪೂಜಿಪ ೪

ತ್ರಿಜಗದೊಳಗಿನವರಿಗೆ ಎಣೆಗಾಣೆ
ಕುಜನ ಮತ ಸೋಲಿಸುವಲ್ಲಿ
ವಿಜಯವಿಠ್ಠಲನೆ ದೈವವೆಂದು
ಧ್ವಜವೆತ್ತಿ ತಿರುಗಿದ ಮುನಿಪ ೫

೩.೨೦

ಗುರು ವಾದಿರಾಜ ರವಿಕೋಟಿ ತೇಜಾ
ಶರಣೆಂಬೆನಯ್ಯಾ ಸತತಗೇಯಾ ಪ

ನಂಬಿದೆನು ನಿನ್ನ ದಯ ಸಂಪನ್ನ
ಸಂಭ್ರಮದಲ್ಲೆನ್ನ ಪೊರೆಯೊ ಪ್ರಸನ್ನ ೧

ವೇದಶಾಸ್ತ್ರ ಬಲ್ಲ ಭಳಿರೆ ಮಲ್ಲ
ಭೇದ ಜ್ಞಾನವೆ ಎಂಬೊ ನಿಜವೆಂಬ ಫಲ ೨

ಮಾಯಿಗಳ ವದ್ದ ಮಮತಾ ಗೆದ್ದ
ಗಾಯನ ಪ್ರಸಿದ್ಧ ಗುಣದಲಿ ಇದ್ದ ೩

ನಾನಾ ಚಾರಿತ್ರ ತೋರಿದ ಮಿತ್ರ
ಧೇನಿಸಿ ಸಿರಿ ಹರಿಯ ಗಾತ್ರದೊಳಿಟ್ಟ ಪಾತ್ರ ೪

ಸಂತತ ವಿರಕ್ತ ಜೀವನ ಮುಕ್ತಾ
ಸಂತಾರಿ ಸುಶಕ್ತಾ ಹರಿನಾಮ ಭೋಕ್ತಾ ೫

ಸ್ವಾದಿಪುರವಾಸ ಸಾಧುಗುಣ ಭಾಸಾ
ಸದ್ಭಕುತ ಪೋಷ ಮಧ್ವಮುನಿಯ ದಾಸಾ ೬

ವಿಜಯವಿಠ್ಠಲನ್ನ ನೆನೆಸುವ ಘನ್ನ ಹರಿ
ತ್ರಿಜಗ ಹಯವದನನ್ನ ಪರನೆಂಬೊ ಪೂರ್ಣ ೭

೩೨೧

ರಾಜವದನೆ ನೀ ಗುರು–
ರಾಜರಿರುವ ಸಂಭ್ರಮ ನೋಡೆ ಪ

ರಾಜಿಸುವ ಮುಖಿನ
ಪೂಜಿಸುವ ಯತಿವರನೆ ಅ.ಪ

ದೂಷಿತ ದುರ್ಜನರ
ತಾಸು ಬಾಳದಂತೆ ವಿ–
ಶೇಷದಿಂದ ಭಜಿಸುವರ
ಪೋಷಿಸುವ ಯತಿವರನೆ ೧

ಪಾದ ನಂಬಿದವರಿಗೆ
ಮೋದವೀವ ದೇವನೆ

ಬೀದಿಬಿಡುವ ನಂಬಿದವರ
ವಾದಿರಾಜ ದೊರೆವರನೆ ೨

ಅಜಪದಕೆ ಅರ್ಹನೆಂದು
ಗಜವರದನ ದಾಸನೆಂದು
ಭಜನೆ ಮಾಡುವ ನಿಜವ ಪೇಳುವ
ವಿಜಯವಿಠಲನ ಸೇವಕರಿವರೇ ೩

೩.೨೨

ವಾದಿರಾಜ ಧೀರ ಯತಿವರ ವಾದದಿ ಬಹು ಶೂರ
ಮೋದತೀರ್ಥರ ಮತವ ಪೊಂದಿದ
ಸಾಧುಗಳನು ಉದ್ಧಾರ ಮಾಡುವ ಪ

ರಂಗ ಮಂಗಳಾಪಾಂಗ ತುಂಗ ವಿಕ್ರಮ ಹರಿಯಾ
ಶೃಂಗೇರಿ ಮಠದ ಧ್ವಜ ಹಾರಿಸಿದ ೧

ಒಡೆಯ ಹಯವಕ್ತ್ರನಿಗೆ ಕಡಲೆ ಹೂರಣವಿತ್ತ
ಕಡಲಶಯನ ಪದಬಿಡದೆ ಆರಾಧಿಸುವ ೨

ಅಜಪದಕರ್ಹ ಋಜುಗಣಪತಿ ಜೀವೋತ್ತಮ
ವಿಜಯವಿಠ್ಠಲದಾಸ ಸುಜನಮಂದಹಾಸ ೩

೩.೨೩

ದುರಿತ ಜೀಮೂತವಾತ
ಪೊರಿಯಯ್ಯ ನಿನಗೆ ನಿರುತ
ಧರಣಿಯೊಳಗೆ ವಿಸ್ತರಿಸಿ ಬಲ್ಲವರಾರು
ಗುರುವೆ ನಿಜ ನಮಿತರ ಸುರತರುವೆ ಪ

ನಂಬಿದೆ ನಿನ್ನ ಪಾದವಂಬುಜವನು ಗಾಲ
ಬೆಂಬಿಡದಲೆ ನಾನೆಂಬೋದು ಬಿಡಿಸಿಂದು
ಬೆಂಬಲವಾಗು ಆರೆಂಬ ಖಳರ ನೀಗು
ಇಂಬಾಗಿ ನೋಡು ದಿವ್ಯಾಂಬಕದಿಂದ ವೇಗ
ಡಿಂಬಾರೋಪಿರೆ ಡಂಬಕತನವೆಂಬುದು ಕೊಡದಲೆ
ಸಂಭ್ರಮದಲಿ ಹರಿದೊಂಬಲ ಬಯಸುವ
ಹಂಬಲಿಗರ ಕೂಡ ಇಂತು ತೋರು ಬಲು
ಗಂಭೀರ ಕರುಣಿ ೧

ಎಣೆಗಾಣೆ ನಿಮಗೆ ಕುಂಭಿಣಿಯೊಳಗೆಲ್ಲ ಯತಿ
ಮಣಿಯೆ ರಾಮವ್ಯಾಸರ
ಮಣಿಭೂಷಣ ಚರಣಾರ್ಚನೆ ಮಾಳ್ಪ ಮಹಿಮ
ಮನಸಿಜ ಶರಭೀಮ ಮನದಣೆ ಗುಣಿಸಿ ಈ
ದಿನ ಮೊದಲು ಪಿಡಿದು ಜನುಮ ಜನುಮದ ಸಾ
ಧನ ಫಲಿಸುತು ಯೋಚನೆಗೊಳಲ್ಯಾಕೆ
ಅನುಮಾನ ಸಲ್ಲದು ಘನತರ ಕೀರ್ತಿ ನೂರಾರಕೆ
ಎಣಿಕೆ ಇಲ್ಲದೆ ಮೆರೆವ ದಿನಕರ ಪ್ರಭ ಕಾಯ ೨

ವರಹಜೆ ಸರಿತೆಯಲ್ಲಿ ಸ್ಥಿರನಾಗಿ ನಿಂದು ಕ್ಷಣ
ಸುರರಿಂದಾರಾಧನೆ ಸರಸರನೆ ಹಗಲು
ಇರಳು ಕೈಗೊಳುತ ವಕ್ಕಾರಗಳು ಹರಸಿ ಸುಂ
ದರ ವರಗಳನಿತ್ತು ಚಿರಕಾಲ ಬಿಡದಲೆ
ಪರವಾದಿಯ ಬಲ ಉರುದಲ್ಲಣ ಪೂ
ತುರೆ ಸುಧೇಂದ್ರರ ಕರಾರವಿಂದಜ
ಅರಸರಸರ ಪ್ರಿಯ ವಿಜಯವಿಠ್ಠಲನ
ಬಿರಿಯ ಹೊಯಿಸುವ ಧೀರಾ ಗುರು ರಾಘವೇಂದ್ರ ೩

೩೨೪

ನೋಡಿದೆ ಗುರುಗಳ ನೋಡಿದೆ ಪ

ನೋಡಿದೆನು ಗುರುರಾಘವೇಂದ್ರರ
ಮಾಡಿದೆನು ಭಕುತಿಯಲಿ ವಂದನೆ
ಬೇಡಿದೆನು ಕೊಂಡಾಡಿ ವರಗಳ
ಈಡು ಇಲ್ಲದೆ ಕೊಡುವ ಗುರುಗಳ ಅ.ಪ

ಮೊದಲು ಗಾಂಗೇಯ ಶಯ್ಯಜನು ಈ
ನದಿಯ ತೀರದಲ್ಲಿ ಯಾಗವ
ಮುದದಿ ರಚಿಸಿ ಪೂರೈಸಿ ಪೋಗಿರ
ಲದನು ತಮ್ಮೊಳು ತಿಳಿದು ತವಕದಿ
ಹೃದಯ ನಿರ್ಮಲರಾಗಿ ರಾಗದಿ
ಬುಧಜನರ ಸಮ್ಮೆಳದಲಿ ಸಿರಿ
ವದನನಂಘ್ರಿಯ ತಿಳಿದು ನೆನೆವರ
ಉದಿತ ಭಾಸ್ಕರನಂತೆ ಪೊಳೆವರ ೧

ಅಲವಬೋಧ ಮಿಕ್ಕಾದ ಮಹಮುನಿ
ಗಳು ಸಅಂಶರು ಒಂದು ರೂಪದಿ
ನೆಲೆಯಾಗಿ ನಿತ್ಯದಲಿ ಇಪ್ಪರು
ಒಲಿಸಿಕೊಳುತಲಿ ಹರಿಯ ಗುಣಗಳ
ತಿಳಿದು ತಿಳಿಸುತ ತಮ್ಮ ತಮಗಿಂ
ರಧಿಕರಿಂದುಪದೇಶ ಮಾರ್ಗದಿ
ಕಲಿಯುಗದೊಳು ಕೇವಲ ಕ
ತ್ತಲೆಯ ಹರಿಸುವ ಸೊಬಗ ಸಂತತ ೨

ರಾಮ ನರಹರಿ ಕೃಷ್ಣ ಕೃಷ್ಣರ
ನೇಮದಿಂದೀ ಮೂರ್ತಿಗಳ ಪದ–
ತಾಮರಸ ಭಜನೆಯನು ಮಾಳ್ಪರು
ಕೋಮಲಾಂಗರು ಕಠಿನಪರವಾದಿ

ಸ್ತೋಮಗಳ ಮಹಮಸ್ತಕಾದ್ರಿಗೆ
ಭೂಮಿಯೊಳು ಪವಿಯೆನಿಸಿದ ಯತಿ
ಯಾಮ ಯಾಮಕೆ ಎಲ್ಲರಿಗೆ ಶುಭ
ಕಮಿತಾರ್ಥವ ಕರೆವ ಗುರುಗಳ ೩

ನೂರು ಪರ್ವತ ವರುಷ ಬಿಡದಲೆ
ಚಾರು ವೃಂದಾವನದಲಿ ವಿ
ಸ್ತಾರ ಆರಾಧನೆಯು ತೊಲಗದೆ
ವಾರವಾರಕೆ ಆಗುತ್ತಿಪ್ಪುದು
ಸಾರೆ ಕಾರುಣ್ಯದಲಿ ಲಕುಮೀ
ನಾರಾಯಣ ತಾ ಚಕ್ರರೂಪದಿ
ಸಾರಿದವರಘವ ಕಳೆದು ಇವರಿಗೆ
ಕೀರುತಿಯ ತಂದಿಪ್ಪುದನುದಿನ ೪

ಮಿತವು ಎನದಿರಿ ಇಲ್ಲಿ ದಿನ ದಿನ–
ಕತಿಶಯದೆ ಆಗುವುದು ಭೂಸುರ
ತತಿಗೆ ಭೋಜನ ಕಥಾಶ್ರವಣ ಭಾ–
ರತ ಪುರಾಣಗಳಿಂದಲೊಪ್ಪುತ
ಕ್ಷಿತಿಯೊಳಗೆ ಮಂಚಾಲೆ ಗ್ರಾಮಕೆ
ಪ್ರತಿಯ ಇಲ್ಲವೆಂದೆನಿಸಿಕೊಂಬುದು
ಪತಿತಪಾವನ ವಿಜಯವಿಠಲನ
ತುತಿಸಿಕೊಳ್ಳುತ ಮೆರೆವ ಗುರುಗಳ ೫

೩೨೫

ಪರಮ ಮಂಗಳ ಮೂರುತಿ ದಿವ್ಯಕೀರುತಿ ।
ಧರೆಯೊಳಗಿದೆ ವಾರುಕಿ ಪ

ಕರುಣಾಪಯೋನಿಧಿಯೆ ಕರವ ಪಿಡಿದು ಎನ್ನ ।
ಕರಣಶುದ್ಧನ ಮಾಡೊ ಕರವ ಮಸ್ತಕ ಬಾಗಿಪೆ ೧

ರಾಘವೇಂದ್ರರ ಪಾದ ಲಾಘವ ಮರೆಯಲ್ಲಿ ।
ಶ್ಲಾಘನ ಮಾಡಿದ ಮಾಘಧರನ ಪ್ರಿಯ ೨

ನಿರುತ ಮಂತ್ರಾಲಯ ಪುರವಾಸಾ ಅಘನಾಶಾ।
ಸಿರಿ ವಿಜಯವಿಠ್ಠಲನ ಚರಣ ಭಜಿಪ ಗುರುವೆ ೩

೩೨೬

ಪಾವನಕಾಯ ರಾಘವೇಂದ್ರ ಪ

ರಾಘವೇಂದ್ರ ದುರಿತ ಘೋರ ಪರಿಹಾರ ।
ರಾಘವೇಶನ ಪಾದ ।
ಮೇಘನುಣಿಪ ಗುರು ೧

ಶರಣು ಹೊಕ್ಕೆನು ಹೊಕ್ಕೆನು ಯಿಂದು ।
ಕರುಣ ಕರುಣ ಪೋಲುವ ಚರಣ ।
ಸ್ಮರಣೆ ಪಾಲಿಸುವುದು । ಕರುಣದಿಂದ ಮಹಿಮ ಗುರು ೨

ಸಿರಿ ವಿಜಯವಿಠಲ ಪರದೈವವುಯೆಂದು ।
ಸ್ಥಿರವಾಗಿ ಸ್ಥಾಪಿಸಿ ಪೊರೆದ ನಿರ್ಮಲ ಗುರು ೩

೩೨೭

ಮಂತ್ರಾಲಯನಿವಾಸ ಉತ್ತಮ ಹಂಸ ।
ಸಂತಾಪ ಪರಿಹರಿಸ ಕೊಡು ಎನಗೆ ಲೇಸ ಪ

ಯತಿಗಳ ಶಿರೋರನ್ನ ಯೋಗಸಂಪನ್ನ ।
ಕ್ಷಿತಿಯೊಳಗೆ ನಿನಗೆ ಸರಿಗಾಣೆನೊ ॥
ನುತಿಸುವೆ ಭಕ್ತಿಯಲಿ ಬಿಡದೆ ।
ಮುಕುತಿಯಲಿ ಸತತಾನಂದದಲಿಪ್ಪ ೧

ಕಪಿಲ ತೀರ್ಥದಲಿ ಶರಣ ಶುದ್ಧಿಯಲ್ಲಿ ।
ತಪವ ಮಾಡುವ ಜ್ಞಾನಿ ಸೌಮ್ಯಜ್ಞಾನಿ ॥
ಜಪಶೀಲ ಗುಣ ಗಣಾಂಬುಧಿ ಪುಣ್ಯದ ಬುದ್ಧಿ
ಕೃಪೆಮಾಡಿ ಕೊಡು ಗುರುವೆ ಶಿಷ್ಯಸುರತರುವೆ ೨

ತಮೋಗುಣ ಕಾರ್ಯ ಪೋಗಲಾಡು ವ್ಯಾಪ್ತಿಯಾ ।
ಶಮೆದಮೆಯಲ್ಲಿ ಉಳ್ಳ ಮಹಿಮೆಯಾ ॥
ನಮಗೆ ಪೇಳುವೆ ವೇದಬಲ್ಲ ವಿನೋದ ।
ಸುಮನ ಸುಗುಣವ ಮೆಚ್ಚೆ ದುರ್ಮತಕೆ ಕಿಚ್ಚೆ ೩

ಕಾಶಿ ಸೇತುವೆ ಮಧ್ಯೆ ಮೆರೆವೇ ಜನರಲ್ಲಿ ।
ಭೇದ ವಿದ್ಯಾ ಸಜ್ಜನಕೆ ತಿಳಿಸು ಮನಸು ನಿಲ್ಲಿಪೆ ॥
ಪೋಷಿಸುವೆ ಅವರ ಅಟ್ಟುವ ಮಹದುರ ।
ದೋಷವ ಕಳೆವಂಥ ವಿಮಲ ಶಾಂತ ೪

ವರಹಜ ತೀರದಲ್ಲಿದ್ದ ಸುಪ್ರಸಿದ್ಧ ।
ಮರುತ ಮತಾಂಬುಧಿ ಸೋಮ ನಿಸ್ಸೀಮ ॥
ನರಸಿಜಾಪತಿ ನಮ್ಮ ವಿಜಯವಿಠ್ಠಲನಂಘ್ರಿ ।
ಸ್ಮರಿಸುವ ಸುಧೀಂದ್ರ ಸುತ ರಾಘವೇಂದ್ರ ೫

೩೨೮

ರಾಘವೇಂದ್ರ ಗುರುರಾಯ ರಮಣೀಯ ಕಾಯ
ರಾಘವೇಂದ್ರ ಪಾದಾಂಬುಜ ಭೃಂಗ ಭವ ಭಯ ಭಂಗ ಪ

ನೋಡಿದೆ ನಿಮ್ಮ ಮಹಿಮೆಯ ಹಾಡಿ ಪಾಡುವೆನೊ ನಿತ್ಯ
ಆಡಿ ಕೊಂಡಾಡಲು ಬಲು ಗೂಢವಾಗಿದೆ
ನಾಡಿನೊಳಗೆ ವೊಮ್ಮೆ ಸ್ಮರಣೆ ಮಾಡಿದವ ಧನ್ಯ ಎನ್ನ
ಮೂಢ ಬುದ್ಧಿಯನು ಬಿಡಿಸು ಕೂಡಿಸು ಸಜ್ಜನರೊಳಗೆ ೧

ನಾಮಾಭಿವಿಡಿದು ಉಮಾಪತಿ ಪರಿಯಂತ
ಈ ಮನ ಎರಗಲಿ ಯಾಮ ಯಾಮಕೆ
ಕಾಮಿಪೆ ಇದನೆ ಗುರುವೆ ವಾಮದಕ್ಷಣ ಮಾರ್ಗ
ನೇಮ ತಪ್ಪುದಂತೆ ತಿಳಿಸಿ ಭ್ರಾಮ ಬುದ್ಧಿಯ ಓಡಿಸುವುದು . ೨

ಚಿಂತಾಮಣಿ ಕಂಡ ಮೇಲೆ ಭ್ರಾಂತಿಗೊಳಿಪ ವಿಷಯ
ಚಿಂತಿಸಿ ಬೇಡುವುದು ಲೋಕಾಂತದ ಸುಖವು
ಇಂತು ಬಾಗಿ ನಿಂತು ಕೇಳುವಂತೆ ಮಾಡದಿರು ಕರುಣಿ
ಸಂತತ ನಿನ್ನ ಪಾದಕ್ರಾಂತನಾಗಿ ತುತಿಸುವೆ ೩

ಸಾರಿಸಾರಿಗೆ ಈ ಚಿತ್ರ ತಾರತಮ್ಯವ ವಿಚಾರಗೈದು ನಲಿದಾಡಿ
ಮೇರೆ ಇಲ್ಲದೆ ಕೋಶ ಇಂದಿರೇಶನ್ನ ಹೃ
ದ್ವಾರಿಜದೊಳು ನಿಲಿಸಿ
ಆರಾಧನೆ ಮಾಡುವ ವೈಕಾರಿಕ ಭಾಗ್ಯವೆ ಬರಲಿ ೪

ನಮೋ ನಮೋ ಯತಿರಾಜ ಮಮತೆ ರಹಿತ ಅನುಪಮ ಚರಿತಾ
ಚಾರುಹಾಸನೆನಿಪ ನಿನ್ನ ಹೆಮ್ಮೆಯಿಂದಲಿಪ್ಪ
ಪರಬೊಮ್ಮ ವಿಜಯವಿಠಲ ನಾ
ತುಮ್ಮದೊಳಚಿನಪ ಜ್ಞಾನೋತ್ತುಮ ತುಂಗಭದ್ರವಾಸ ೫

೩೨೯

ರಾಘವೇಂದ್ರ ಪಾವನ ಕಾಯ ರಾಘವೇಂದ್ರ
ರಾಘವೇಂದ್ರ ದುರಿತೌಘ ಪರಿಹರಿಸಿ
ರಾಘವೇಷನ ಪಾದಮೌಘ ನುತಿಪ ಗುರು ಪ

ಶರಣು ಪೊಕ್ಕೆನು ಇಂದು ಕಿರಣಪೊಲುವ ಪಾದ
ಸ್ಮರಣೆ ಪಾಲಿಸುವುದು ಕರುಣದಿಂದಲಿ ಇಂದು ೧

ವ್ಯಾಕುಲ ಹರಿಸಿ ಕಾಮಕ್ರೋಧ ಓಡಿಸಿ
ಸಾಕುವುದು ಎನ್ನನೇಕ ಮಹಿಮ ಗುರು ೨

ಸಿರಿವಿಜಯವಿಠ್ಠಲ ಪರದೈವವೆ ಯೆಂದು
ಸ್ಥಿರವಾಗಿ ಸ್ಥಾಪಿಸಿ ಮೆರೆದ ನಿರ್ಮಳಕಾಯ ೩

೩೩೦

ರಾಘವೇಂದ್ರಂ ಭಜೇಹಂ ||ಶ್ರೀ|| ಪ

ಆಗಮಚಯ ವಿಜ್ಞಾನ ಸುಗೇಹಂ
ಶ್ರೀಗದಾಬ್ಜ ಚಕ್ರಾಂಕಿತ ದೇಹಂ ಅ.ಪ

ರಾಗ ಮೋಹನಾದಿ ರಹಿತಂ ಸುಚರಿತಂ
ಭೋಗಿರಾಟ್ ಶಯನ ಗುಣಮತಿ ಮಹಿತಂ
ಭಾಗವತೋತ್ತಮ ಮತಿ ಸುಮತಿಯುತಂ
ಯೋಗಿ ಜನಹಿತಂ ಶ್ರೀ ಗುರು ನಿರುತಂ ೧

ಅತಿಪಾವನ ಕಾಷಾಯ ಸುವಸನಂ
ನತಜನೇಷ್ಟ ವಿಶ್ರಾಣನ ನಿಪುಣಂ
ಧೃತ ದಂಡ ಕಮಂಡಲ ಶುಭಪಾಣಿಂ
ಕೃತ ಹರಿಸುತಿ ಸಂಗೀತ ಸುವಾಣೀಂ ೨

ನಿಜತಪಸಾ ಸಮುಪಾರ್ಜಿತ ತೇಜಂ
ಸುಜನಾವನ ಗುಣಹಿತ ಸುರಭೂಜಂ
ವೃಜಿನ ಹರಣ ಕೃಷ್ಣ ವಿಜಯವಿಠ್ಠಲರೇಯಂ
ಅಜಿನಾಸನ ಸುಸ್ಥಿರ ಯತಿರಾಜಂ ೩

೩೩೧

ಮುನಿಯ ನೋಡಿರೊ ವಂದನಿಯ ಮಾಡಿರೊ
ಕನಸಿನೊಳಗೆ ನೆನೆದ ವರವ ಕ್ಷಣದಲೀವ ಘನ ಸಮರ್ಥ ಪ

ತೊಲಗದಿಪ್ಪ ಭೂತಪ್ರೇತ ನೆಲೆಯಾಗಿರಲು ಇವರ ಚರಣ
ತೊಳೆದ ಜಲವು ಬೀಳಲಾಕ್ಷಣ
ಹಲುಬಿಕೊಳುತಲಳಿದು ಪೋಗೋವು ೧

ಹಿಂದೆ ವ್ಯಾಸ ಮುನಿಗಳಿಂದ
ನೊಂದು ನಮಿತರಾಗಿ ಅವರಿಂದ ಭೇದವರಿತು ಗೋ
ವಿಂದ ಒಡೆಯನೀತ ೨

ಮೊದಲು ಹೇಮಕಶ್ಯಪಜನ ಬದಿಯಲಿದ್ದು ತತ್ವ ಜ್ಞಾನ
ಮುದದಿ ತಿಳಿದು ಮಾಯಿ ಶಾಸ್ತ್ರ
ವೊದೆದು ಕಳೆದ ನಿಜ ಸದಮಲ ಸಮರ್ಥ ೩

ಮಧ್ವಮತಾಂಬುಧಿಯೊಳು ಪುಟ್ಟಿ
ಅದ್ವೈತ ಮತವನೆಲ್ಲ ಸದದು ಸದ್ವೈಷ್ಣವರನ್ನ ಪಾಲಿಸಿ
ಊರ್ಧ್ವ ಲೋಕದಲ್ಲಿ ಮೆರೆದ ೪

ವರಸತ್ಯಾಭಿನವತೀರ್ಥರ ಕರಕಂಜದಿಂದ ಜನಿಸಿ
ವೇಲೂರ ಪುರಪಯೋನಿಧಿವಾಸ ಜಗದ
ದೊರೆ ವಿಜಯವಿಠ್ಠಲನ್ನದಾಸ ೫

೩೩೨

ಭಜಿಸಿರೊ ಬಿಡದೆ ವಿರಾಜಮಾನರಾಗಿ ನಿತ್ಯ
ಕುಜನರೊಳಾಡದಲೆ ನಿಜ ಭಕುತಿಯಿಂದ
ಭುಜಬಲವುಳ್ಳ ಪರಜರಟ್ಟುವ ದಿ
ಗ್ವಿಜಯ ಸತ್ಯಪೂರ್ಣರ ಸುಜನರೊಂದಾಗಿ ಪ

ಭರದಿಂದ ಬಂದು ನಿಂದು ನಿರೀಕ್ಷಿಸಿ ನಿರ್ಮಳ
ಕರಯುಗಳ ಮುಗಿದು ಶಿರವಾನಿಲ್ಲದೆ
ಧರಣಿಯಾ ಮ್ಯಾಲೊಂದು ತೀವರ ಸಾಷ್ಟಾಂಗ ನಮ
ಸ್ಕರಿಸಿ ಕೊಂಡಾಡಿ ನಿಂದಿರಲಾನರರಿಗೆಲ್ಲ
ಪರಿಹರವೊ ಬಂದರಘಳಿಗೆಯಲಿ
ಪರಿಪರಿ ಜನ್ಮದ ತರತರದಘಗಳು
ಸರಿಯೆನ್ನಬಹುದಿವರ ದರ್ಶನ ಲಾಭ
ದುರುಳರಿಗಾಯ್ತು ಮರಿಯದೆ ಚೆನ್ನಾಗಿ ೧

ನೆರೆನಂಬಿ ನಿಮ್ಮಯ ಗೋತುರ ಸಹಿತಕ್ಕೆ ಜ್ಞಾನಾಂ
ಕುರವಾಗುವುದು ಇದು ಉರುಕಾಲ ಸಿದ್ಧವೆನ್ನಿ
ತರತಮ್ಯ ತತ್ವ ತಾತ್ಪರಿಯ ವಿಧ ತಿಳಿದು
ತಿರಗುವರನುದಿನ ಸುರರು ಮೆಚ್ಚುತಲಿರೆ
ಮುರರಿಪು ಚತುರ್ದಶ ಧರಣಿಗೆ ಪರನೆಂದು
ಬಿರಿದನು ಎತ್ತಿ ಡಂಗುರವ ಹೊಯಿಸಿ ಡಿಂಗರರಿಗೆ ಸಚ್ಛಾಸ್ತ್ರ
ಅರುಹಿ ಸುಖಾರ್ಥವ ಕರೆದು
ಕೊಡುವ ಯತಿಶಿರೋಮಣಿ ಕರ್ನಾ ೨

ಅವನಿಯೊಳು ಸತ್ಯಾಭಿನವತೀರ್ಥರ
ಪಾದಾಂಬುಜಾತ ಕೃಷ್ಣಾ ತನು
ಭವಸರಿತ ನಿವಾಸಾ ದಿವಿಜೇಶನಾಯುಧ
ಕವಚದಿಂದಲಿ ತನ್ನವರನ ಪೊರೆದೆತ್ತಿ
ನವವಿಧ ಬಗೆ ತೋರಿ ತವಕದಿ ಕೋಲುಪುರ
ಪವಿತುರ ಸ್ಥಳದಲ್ಲಿ ರವಿಯಂತೆ ಪೊಳವರು
ಭವದೋಷ ಕಳೆವುತಾ ಕವಿಗಳ ಮನೋಹರ ವಿಜಯವಿಠ್ಠಲನ
ಶ್ರವಣ ಮನನ ಧ್ಯಾನವನು ಬಲ್ಲವರಾ ೩

೩೩೩

ನೋಡಿ ನೋಡಿ ಸತ್ಯಪ್ರಿಯರ ನಾ ನಿಂದು ನಿಂದು
ಪಾಡಿ ಪಾಡಿ ಯೋಗಿವರ್ಯರ ನಾ
ಪಾಡಪಂಥದಲಿ ಬಂದ ಮೂಢ ಮಿಥ್ಯಾವಾದಿಗಳ
ಓಡಿಸಿ ತನ್ನನು ಕೊಂ
ಡಾಡಿದವರ ಪೊರೆವ ಯತಿಯ ಪ

ನಾಗಸರ ನಾಗಬಂಧ ಕೊಂಬು ಕೊಳಲು
ರಾಗದಿಂದ ಪಾಡುವ ಸನಾಯಿಸುತಿಗಳು
ಬೇಗಿ ಕೂಗುವ ಹೆಗ್ಗಾಳೆ ದುಂದುಭಿ ಎಸಿಯೆ ಚತು
ಸ್ಸಾಗರ ಪರಿಯಂತ ಮೆರೆದ ಯೋಗಿಗಳಾಗ್ರಣ್ಯನ ೧

ವಾದಿಗಳೆದೆಯು ಬಿರಿಯೆ ಧವಳ ಶಂಖದಾ
ನಾದ ಒಪ್ಪಿಸುತ್ತಿ ಮೆರೆವ ಬಿರಿದು ಸಮುದಾಯ
ವೇದ ಓದುವ ಶಿಷ್ಯರು ಮೇದಿನಿ ಸುರರು
ಬಲದಾರಿಯಲಿ ಬರೆ ಆಶೀ
ರ್ವಾದವನ್ನು ಕೊಡುವ ಧೀರನು ೨

ವಾಜಿ ಗಜ ಪಾಯಿದಳನೇಕಸಂದಣಿ
ಯೋಜನದಗಲಕೆ ಘೋಷಣವಾಗಲು
ರಾಜಾಧಿರಾಜರು ಪೂಜೆಯನ್ನು ಮಾಡುತಿರೆ
ಈ ಜಗದೊಳಗೆ ಸಿದ್ಧ ತೇಜಪುಂಜರನ್ನ ೩

ಬುದ್ಧಿಹೀನನಾದ ಜನರ ಉದ್ಧರಿಸುತ
ಅದ್ವೈತಮತಶಾಸ್ತ್ರ ವದ್ದು ಕಳವುತ
ಮಧ್ವಮತವ ಎಂಬೊ ಸುಧಾಬ್ಧಿಗೆ ರಾಕೇಂದುನಂತೆ
ಇದ್ದು ಭವರೋಗಳಿಗೆ ಮದ್ದು ಅಹುದೋ ಸುಗುಣದವರ ೪

ಚಂಡಮಾಯವಾದಿಗಳ ಹಿಂಡು ಬರಲಾಗಿ
ಕಂಡು ಹರುಷದಿಂದ ಸಭಾಮಂಡಿತರಾಗಿ
ಖಂಡ ತುಂಡು ಮಾಡಿ ಅವರ ದಿಂಡುಗೆಡಹಿ ಮಂಡಲಕೆ
ಪುಂಡರಿಕಾಕ್ಷನೆ ಉದ್ದಂಡನೆಂದು ಸಾರಿದರನ ೫

ಬಿಜವಾಡದಲಿ ಕೃಷ್ಣ ತಜ್ಜಲದೊಳು
ದುರ್ಜಂತುಗಳು ನರರಾ ಬೆಚ್ಚರಿಸಲು
ಪ್ರಜ್ವಲಿಸುತ ಪೋಗಿ ಮಾರ್ಜನೆ ಯನ್ನು ಗೈದು ಭೀತ
ರಾಜರುರವ ಬಿಡಿಸಿ ಕಾಯಿದ ಸಜ್ಜನರ ಮನೋಹರ ೬

ದೇಶದೊಳೀ ಶೇಷವಾದ ದಾಸರ ಪ್ರಿಯ
ವಾಸ ಸಿರಿ ವಿಜಯವಿಠ್ಠಲೇಶನಂಘ್ರಿಯ ಸಾಸಿರ ದಳದ ಧ್ಯಾನ
ಮೀಸಲಾಗಿ ಮಾಡುತಿಪ್ಪ ದೋಷರಹಿತರಾದ ಸಂ
ನ್ಯಾಸ ಕುಲಭೂಷಣನಾ ೭

೩೩೪

ಸತ್ಯಪ್ರಿಯ ಗುರುರಾಯ ಮಂಗಳಕಾಯ
ನಿತ್ಯದಲಿ ನಿಜ ಭೃತ್ಯ ಸಹಾಯ ಪ

ಮಧ್ವಮತಾಬ್ಧಿ ಚಂದ್ರ ಸದ್ಗುಣಸಾಂದ್ರ
ಅದ್ವೈತಮದ್ರಿ ಇಂದ್ರ ಇದ್ಧರಿಯೊಳಗನಿ
ರುದ್ಧನೆ ವರನೆಂದೆದ್ದು ನೆಗಹಿ ಕರ
ಬದ್ಧ ಕಂಕಣರಾಗಿ
ಸಿದ್ಧ ಪ್ರಮೇಯಗಳನುದ್ಧರಿಸಿದ ಪರಿಶುದ್ಧ ಸ್ಮರ ಮಾರ್ಗಣ ಗೆದ್ದ ೧

ವಿತರಣದಲಿ ಬಲು ಶೂರಾ ಕೀರ್ತಿವಿಹಾರಾ
ಸತತ ವೇದಾರ್ಥ ವಿಚಾರ
ಮಿತಿ ಇಲ್ಲದೇ ಆ ಕಥಾಮೃತ ತತುವ ಮಾರ್ಗದಲಿ ವಿ
ಹಿತ ಶಿಷ್ಯರಿಗೆ ನಗುತ ಪೇಳಿದ ಅ
ದ್ಭುತ ಮಹಿಮಾ ಸಂಚರಿಸುತ ಆನಂದ ಭರಿತ ೨

ನೆನೆಸಿದವರ ಸುರಧೇನು ನಿನಗೆಲ್ಲಿ ನಾನು
ಎಣೆಗಾಣೆ ಎಣಿಸಲು ಮೇಣೂ
ಮುನಿ ಸತ್ಯಭೋಧರ ಮನದಲ್ಲಿ ನಿಂದರ್ಚನೆಯನು ಮನದಲ್ಲಿ
ಘನವಾಗಿ ಕೈಕೊಂಬ ಗುಣದಿ ವಿಜಯವಿಠ್ಠಲನ ಚರಣಾಂಬುಜ
ಧ್ಯಾನ ಮಾಡುವ ತ್ರಾಣ ೩

೩೩೫

ಹಾವಿಗೆಯ ಮಹಾಪೂಜೆ ನೋಡಿ ಪಾಪಾಖ್ಯ
ಹಾವಿಗೆ ತಡೆಯಾಗಿಪ್ಪದು ನಿತ್ಯ ಹಾಡಿ ಪ

ಮನುಜನ್ನ ಭೋಕ್ತರಿಕಾಯ್ಯದಿ
ಧನದಾತ ಸವಸನ ಭೂಷಣ ವಿದ್ಯಾ ಕನಕ
ವಿನಯದಿಂದಲಿ ಇಲ್ಲಿ ತನಕ ಬಂದು
ಘನವಾಗಿ ಬೇಡುವರು ಮುಕ್ತಿ ಅಹಿಕಾ ೧

ದೇವ ಪಾದ ಪರಿಯಿಂತು ತಿಳಿದು ಕರ್ಮ ಭೂ
ಮಿವಾಸ ಮಾಳ್ಪೆನೆಂದಲ್ಲಿಂದ ಇಳಿದು
ಆವಾವತರು ಜಾತಿಗಳಳಿದು ನಮ್ಮ
ಪಾವಮಾನಿ ಮತ ಪೊಕ್ಕು ಸುಳಿದು ೨

ಒಂದೊಂದು ಪರಿಯಲ್ಲಿ ಸಾಗಿ ಸಾರಿ
ನಿಂದಿರದೆ ಇಪ್ಪದು ಕಾವ ಲೇಸಾಗಿ
ಅಂದದಿಂದಲಿ ಮೌಳಿ ತೂಗಿ ವೇಗ
ಕುಂದನಿಷ್ಟವಾಯಿತು ತಾನೆ ಪೋಗಿ ೩

ಏಕಾಂಶದಲಿ ಇಲ್ಲಿ ಒಂದೆ ನಮಗೆ
ಬೇಕಾದರ್ಥವ ಕೊಡುವದು
ವಾಕುವರ ಸಿದ್ಧಿ ಲೋಕ ತುಂಬಿದೆ ಇದೆ ಸುಧಿಕೀರ್ತಿ
ತಾ ಕೊಂಡಾಡಿದರಾಗೆ ಬಲು ಚಿತ್ತ ಶುದ್ಧಿ ೪

ಸತ್ಯಾಗಿ ಸತ್ಯಬೋಧಯತಿ ಕೈಯ ಗುರು
ಸತ್ಯಪ್ರೀಯ
ಸ್ತೌತ್ಯರಾಮನ್ನ ಹಾವಿಗೆಯ ನಂಬೆ
ಭೃತ್ಯವತ್ಸಲ ವಿಜಯವಿಠ್ಠಲ ಸಹಾಯ ೫

೩೩೬

ನುತಿಸಿ ಬೇಡುವೆ ವರವ ಕರವ ಮುಗಿದು
ಸತತ ಲಕುಮಿಪತಿಯ ಭಕುತಿ ಒಂದೇ ಇರಲಿ ಪ

ಮದನಶರ ತಿಮಿರಾರ್ಕ ಸುಜನವಾರ್ಧಿಗೆ ಪೂರ್ಣ
ಬದರಮಂಗಳಗಾತ್ರ ಬಲು ಸುಲಭ
ಬುದ್ಧನಾಗಿ ಶಿಷ್ಯರ್ಗೆ ಸುಧಿಯ ಪೇಳುವ ಮೌನಿ
ಎದಿರಿಲ್ಲ ನಿಮಗೆಲ್ಲಿ ಗುರುವೆ ಸುರತರುವೆ ೧

ಅಂದವಾದ ಕಾವ್ಯ ಸಾಮರ್ಥ್ಯಧೀರುವೆ
ಮಂದಹಾಸದಿ ನೋಳ್ಪ ಭಕುತ ಜನರ
ಒಂದೊಂದು ಪದಾರ್ಥ ಪಿಡಿವ ಗಂಟಲೆ ರಾಹು
ನಂದತೀರ್ಥರ ಮತಕೆ ಕೇತುಸ್ಥಾನಿಯ ನಿತ್ಯ ೨

ವಾದಿಗಳೆದೆಯ ಶೂಲ ಸತ್ಯಪ್ರಿಯ ಕರಜಾತ
ಸಾಧು ಸಜ್ಜನಗೇಯ ಸತ್ಯಬೋಧ
ಮೋದಿ ಹಯವದನ ರಾಮ ವಿಜಯವಿಠ್ಠಲ
ನಾದಿದೈವವೆಂದು ಎಣಿಸುವ ಜಪಶೀಲ ೩

೩೩೭

ಕಂಡೆ ಕಂಡೆನೊ ಕಂಗಳಲಿ ಭೂ ।
ಮಂಡಲದೊಳು ಮೆರೆವ ಯತಿಗಳ
ಮಂಡಲಾಬ್ಧಿಗೆ ಸೋಮನೆನಿಪ ಅ ।
ಖಂಡ ಮಹಿಮಾ ವಾದೇಂದ್ರ ಗುರುಗಳ ಪ

ನಸುನಗಿಯ ಮೊಗ ।
ಪಸರಿಸಿದಾ ದ್ವಾದಶನಾಮಗಳು ಶ್ರೀ ಮುದ್ರೆ ಮುದದಿಂದ ।
ನೊಸಿಲಿಲೊಪ್ಪುವ ಗಂಧ ಅಕ್ಷತಿ ಎಸೆವ ಸಣ್ಣಂಗಾರ ಕಿವಿಯಲಿ
ಹಸನಾದ ಎಳೆ ತುಲಸಿ ಶೋಭಿಸಿ ।
ಬೆಸಸುವ ಒಂದೊಂದು ಮಾತಾ ।
ಲಿಸಿದರದು ವೇದಾರ್ಥತುಲ್ಯಾ ।
ಲಸವ ಗೈಯಿಸದೆ ಬರುವ ಗುರುಗಳ ೧

ಮೊಸಳಿವಾಯಪಲಕ್ಕಿ ಸುತ್ತಾ ಭಾ ।
ರಿಸುವ ನಾನ ವಾದ್ಯಾದಾ ಘೋಷಾ ।
ಪುಸಿಕರೆದೆದಲ್ಲಣರು ಎಂಬಾ ।
ದಶ ದಿಕ್ಕಿನೊಳು ಕೀರ್ತಿ ತುಂಬಿರೆ ।
ಶಿಶುವು ಮೊದಲಾದವರು ತಮ ತಮ ।
ಬೆಸನೆ ಪೇಳಲು ಕೇಳಿ ಅವರು ।
ಬ್ಬಸವ ಕಳದಿಷ್ಟಾರ್ಥ ತೋರುವ
ಋಷಿಕುಲೋತ್ತಮರಾದ ಗುರುಗಳ ೨

ಶ್ವಶನ ಮತ ವಾರಿಧಿಗೆ ಪೂರ್ಣ ।
ಶಶಿ ಎನಿಸಿಕೊಂಬ ಧೀರುದಾರರೆ ।
ಅಸಮ ತತ್ವ ಪ್ರಮೆಯದಲಿ ನಿರ್ಮಿಸಿದನೆ ।
ಲೋಕೇಶ ಇವರನ್ನ ವಸುಧಿ ಅಮರರು ।
ಪ್ರಸರ ಎಡಬಲ ಎಸದು ತುತಿಸಲು ಹಿಗ್ಗಿ ಕರುಣಾ ।
ರಸಭರಿತರಾಗಿ ನೋಡುತ್ತ ಮಾ ।
ಸನದಿ ಹರಿಪದ ಭಜಿಪ ಗುರುಗಳ ೩

ಕುಸುವಶರನ ಬಾಣವನು ಖಂಡ್ರಿಸಿ
ಬಿಸುಟ ಸಂಪನ್ನ ವಿದ್ಯಾ ।
ವಸುವಿನಲಿ ಆವಾಗ ತಲೆ ತೂ ।
ಗಿಸುವರು ಪಂಡಿತರ ಮೆಚ್ಚಿಸಿ ।
ವಶವೆ ಪೊಗಳಲು ಎನಗೆ ಇವರ ದ ।

ರುಶನದಿಂದಲಿ ಗತಿಗೆ ಪಥನಿ ।
ವಿಷದೊಳಗೆ ಇದು ಸಿದ್ಧವೆಂದು ವಂ ।
ದಿಸಿದಿರೊ ಮರಿಯದೆ ಈ ಗುರುಗಳಾ ೪

ಮಿಸುಣಿ ಮಂಟಪದೊಳಗೆ ರಂ ।
ಜಿಸುವ ರಾಮನ ಕುಳ್ಳಿರಿಸಿ ಅ ।
ರ್ಚಿಸುವ ಚಿತ್ತೇಕಾಗ್ರದಲಿ ವೊ ।
ಲಿಸುವ ತಂತ್ರ ಸಾರೋಕ್ತ ಬಗೆಯನು ।
ಕುಶಲರಾದ ಉಪೇಂದ್ರ ಮುನಿಕರ ।
ಬಿಸಜದಿಂದಲಿ ಜನಿಪ ಭಕುತಿಲಿ ।
ಅಸುರರಿಪು ಸಿರಿ ವಿಜಯವಿಠ್ಠಲನ್ನ ।
ಪೆಸರುಗಳು ಎಣಿಸುವ ಗುರುಗಳ ೫

೩೩೮

ಅಡಿಗಳಿಗೊಂದಿಪೆ ಪುರಂದರ ಗುರುವೆ ಪ

ಕಡು ಜ್ಞಾನ–ಭಕ್ತಿ–ವೈರಾಗ್ಯದ ನಿಧಿಯೆ ಅ.ಪ

ವರ ಮಧ್ವಮತ ಕ್ಷೀರಾಂಬುಧಿಗೆ ಚಂದ್ರನಾದೆ ।
ಗುರು ವ್ಯಾಸರಾಯರಿಂದುಪದೇಶಗೊಂಡೆ ॥
ಎರಡೆರಡು ಲಕ್ಷದಿಪ್ಪತ್ತೈದು ಸಾವಿರ ।
ವರ ನಾಮಾವಳಿ ಮಾಡಿ ಹರಿಗೆ ಅರ್ಪಿಸಿದೆ ೧

ಗಂಗಾದಿ ಸಕಲ ತೀರ್ಥಂಗಳ ಚರಿಸಿತು ।
ರಂಗವದನ ವೇದವಾಸ್ಯನ ॥
ಹಿಂಗದೆ ಮನದಲ್ಲಿ ನೆನೆದು ನೆನೆದು ಮರೆವ ।
ಮಂಗಳ ಮಹಿಮೆಯ ನುತಿಸಿ ನುತಿಸಿ ನಾ ೨

ನಿನ್ನತಿಶಯಗುಣ ವರ್ಣಿಸಲಳವಲ್ಲ ।
ನಿನ್ನ ಸೇವಕನ ಸೇವಕನೆಂತೆಂದು ॥
ಪನ್ನಗಶಯನ ಮುಕುಂದ ಕರುಣ ಪ್ರ ।
ಸನ್ನ ವಿಜಯವಿಠ್ಠಲ ಸಂಪನ್ನ ೩

೩೩೯

ಒಂದಾನೊಂದು ದಿವಸದಲ್ಲಿ ಗುರುವ್ಯಾಸರಾಯರು । ಪ

ಚಂದದಿಂ ದ್ವಾದಶಿ ಸಾಧನೆ ಬರಲು
ಅಂದದಿಂದ ಪುರಂದರದಾಸರಿ ।
ಗಿಂದು ಭೋಜನಕ್ಕೆ ಬನ್ನಿರೆಂದು ಕರೆದರೂ ಅ.ಪ

ಪೇಳಿತೆಂದು ದಾಸರು ಪೋಗಿ ತಾವು ನಿರ್ಮಲ ಸ್ನಾನ
ಜಪಮಂತ್ರ ಹರಿಪೂಜೆಯನೆ ಮಾಡಿ ॥
ಧಳಧಳಿಸುವ ವಿಠಲನ ದಿವ್ಯ ಪಾದ
ಗಳ ಧ್ಯಾನಿಸಿ ಕುಳಿತರು ಜನಗಳೆಲ್ಲ ಕೇಳಿ ೧

ವಿಠಲನ ದಿವ್ಯ ಮೂರ್ತಿಯ ಪಾಡಿ ದೃಷ್ಟಿಯಿಂದಲಿ ನೋಡಿ ।
ಮುಟ್ಟಿ ಮುಂದೊಲಿದು ಕುಣಿಕುಣಿದಾಡಿ ॥
ಥಟ್ಟನೆ ವೇದಕ್ಕೆ ಸಮನಾದ ಪದಗಳು ।
ನಿಷ್ಠೆಯಿಂದ್ಪೇಳಿ ಅಭೀಷ್ಟವ ಪಡೆದರು ೨

ಎಡೆಯೊಳು ಷಡ್ರಸದನ್ನವ ನೀಡೆ । ಕಡು ಮಮತೆಗಳಿಂದ ।
ಬಿಡದೆ ದಾಸರ ದಾರಿಯ ನೋಡಿ ॥
ಯೆಡ ಬಲದಷ್ಟ ದಿವ್ಯದಿಂಡೆಯರೆಲ್ಲಾ ।
ಕಡೆಯದೆಶೆ ಧರಿಸಿದರು ದಾಸರಾ ೩

ಹಗಲು ಒಂಭತ್ತು ತಾಸಾಗಿರಲು ।
ಆಗೆದ್ದು ಬೇಗ ಗುರುಗಳ ಸಮೀಪಕ್ಕೆ ಬರಲು ॥

ಮುಗಿದು ಕರಯುಗ್ಮವ ಬಗೆ ಬಗೆ ಸ್ತುತಿಸುತಾ ।
ಜಗದೊಳು ನಾನಪರಾಧಿಯೆಂದರೂ ೪

ಭೋಜನವ ಮಾಡಿ ಗುರುಗಳಂದು ಸಿಂಹಾಸನದಲ್ಲಿ ।
ರಾಜಿಸುತ್ತ ಬಂದು ಕುಳಿತಿರಲಂದೂ ॥
ಆ ಜನದೊಡಗೀ ದಾಸರು ಕರೆಯಲು ।
ನೈಜಭಾವದಿಂದು ಬಂದು ಕುಳಿತರೂ ೫

ಪದಗಳು ಬರದ ವಹಿಯಕೊಂಡು ಪೋಗಿ ।
ಮಧ್ವಶಾಸ್ತ್ರದ ಮೇಲೆ ಕುಳ್ಳಿರಲಾಗ ॥
ಅದನರಿಯದೆ ದಿಂಡೆಯನೊಬ್ಬನು ಆ ।
ಪದವಹಿಯ ತೆಗೆದು ಬಿಸುಟನಾಗಾ ೬

ಯೆರಡಾವರ್ತಿ ತೆಗೆಯಲು ಆಗ ।
ತಿರುತಿರುಗಿ ಬಂದು ವರಪುಸ್ತಕದ ಮ್ಯಾಲೆ ಕುಳ್ಳಿರಲಂದೂ ॥
ಗುರು ವ್ಯಾಸರಾಯರು ನೋಡಿ ಹರುಷದಿಂದ ।
ಕರೆದು ಬೈದರವಗೆ ಕಡು ಮೂರ್ಖನೆಂದೂ ೭

ಪದದೊಹಿ ತೆಗೆದು ಬಿಸಾಡಿದರೆ ತಿರುತಿರು
ಗ್ಯದರಮ್ಯಾಲೆ ವರನಾಲ್ಕು ವೇದಾರ್ಥದರೊಳಗುಂಟು ॥
ನರರುತ್ತಮರೆಲ್ಲ ನೋಡಿ ಹರುಷದಿಂದ ।
ಧರೆಯೊಳು ಪುರಂದರ ಉಪನಿಷತ್ತೆಂದರೂ ೮

ಗುರುರಾಯರು ದಾಸರ ನೋಡಲಾಗ ಭರದಿಂದ ಯೆದ್ದು ।
ಅರಿವೆಯ ಕೈಯಿಂದೊರಸಲು ಆಗ ॥
ತ್ವರಿತದಿ ಕೇಳಲು ವಿಠಲನ ಗುಡಿಯೊಳು ।
ಪಡದಗುರಿ ಹತ್ತವು ವರಿಸಿದೆವೆಂದರು ೯

ಹಾಗೆಂದು ನುಡಿದಾಕ್ಷಣದಲಿ ಬೇಗ ಶಿಷ್ಯರಿಗೆ ।
ಹೋಗಿ ನೋಡಿ ಬಾರೆಂದೆನಲಾಗಿ ॥

ಬೇಗದಿಂದಲಿ ಬಂದು ಕೇಳಲು ಅವರು ।
ಈಗ ದಾಸರು ಬಂದು ಪರಿಹರಿಸಿದರೆಂದು ೧೦

ಆ ಮಾತು ಕೇಳಿದಾಕ್ಷಣದಿ ಬೇಗ ।
ಪ್ರೇಮದಿ ಬಂದು ಸ್ವಾಮಿರಾಯರಿಗೆ ಪೇಳಲು ಆಗ ॥
ನಾಮವ ಸ್ಮರಿಸುತ ಪ್ರೇಮಾಲಿಂಗನವಿತ್ತು ।
ಕಾಮಿತಾರ್ಥ ಫಲವೀವ ಕಲ್ಪತರುವೆಂದರೂ ೧

ಇಂತು ಅನುಭವ ಮಾತುಗಳನಾಡಿ ಲಕ್ಷ್ಮೀಕಾಂತನ ।
ಅಂತರಂಗದಲಿ ಅತಿಮಾನವ ಮಾಡಿ ॥
ಕಾಂತಿ ಹೆಚ್ಚಿದ ಕಂತುಪಿತನ ಮೂರ್ತಿ ।
ಶಾಂತತ್ವದಿ ನೋಡುತ ಶರಣು ಮಾಡಿದರೂ ೧೨

ಗಜಪುರದಲ್ಲಿ ಇರುವರು ಕೂಡಿ ವಿಜಯವಿಠ್ಠಲನ್ನ ।
ಭಜನೆಯಿಂದ ದಿನ ದಿನ ಪೊಗಳಿ ॥
ತ್ರಿಜಗದೊಡೆಯ ಗುರು ಪುರಂದರವಿಠಲನ ।
ನಿಜ ವೈಕುಂಠದ ಮುಕ್ತಿಯೈದಿದರೂ ೧೩

೩೪೦

ಕರುಣಿಸಯ್ಯಾ ಗುರುವರ್ಯ ಪರಮ ಸುಹೃದಯಾ ।
ನಿರುತ ನಿನ್ನವನೊ ನಾನು ಪುರಂದರರಾಯ ಯಿಂದು ಪ

ಲೋಕದ ಜನರು ತಮ್ಮ ಸುಕುಮಾರರಿಗೆ ಪೆಸರು ।
ಯಾಕೆ ಯಿಡವರೊ ಜೀಯ್ಯಾ । ನೇಕ ಮಮತೆಯಲಿ ॥
ಬೇಕೆ ಎನಗೆ ಯಿಂಥ ಖ್ಯಾತಿ ನೀ ಕೊಟ್ಟ ಭಾಗ್ಯವೆಯಿರಲಿ ।
ವಾಕು ವ್ಯರ್ಥವಾಗದಂತೆ ಸಾಕುವದು ಬಿಡದೆ ಒಲಿದು ೧

ಅಡವಿ ಹತ್ತಿ ಪೋಪ ನರನ ಒಡನೆ ಕೂಡಿಕೊಂಡು ಬಂದು ।
ಕಡು ಮಹೋತ್ಸವವ ಮಾಡಿ ವೇಗ ಪೊಡವಿಪತಿತನವು ॥

ಧೃಢವಾಗಿ ವಾದಿಸಿ ಅವನ
ತೊಡರು ಕಳೆದು ಸರ್ವರೊಳಗೆ ।
ನಡತಿವಂತ ಮಾಡಿದಂತೆ ಬಡವನ್ನಾ ಉದ್ಧರಿಸು ಜ್ಞಾನಿ ೨

ಕೀರ್ತಿಯಪಕೀರ್ತಿ ಎರಡು ಪೆತ್ತ ತಂದೆ
ಯಿರಲಾಗಿ ಪುತ್ರನೀಗೆ ಬರುವಾವೆ
ಉತ್ತಮರು ಮೆಚ್ಚುವಂತೆ ನಿತ್ಯವೊಲಿದು
ಪಾಲಿಪದು ಎತ್ತಲಿದ್ದರೂ ।
ಸತ್ಯ ವಿಜಯವಿಠ್ಠಲನ್ನ ।
ತುತ್ತಿಸುವ ಮಹಾಮಹಿಮಾ ೩

೩೪೧

ಗುರು ಪುರಂದರ ದಾಸರೇ ನಿಮ್ಮ ಚರಣ ಸರಸಿಜ ನಂಬಿದೆ ಪ

ಗುರುವ ರಹಿತರ ಮಾಡಿ ನಮ್ಮನು ಪೊರೆವ ಭಾರವು ನಿಮ್ಮದೆ ಅ

ಒಂದು ಅರಿಯದ ಮಂದಮತಿ ನಾನಿಂದು ನಿಮ್ಮನು ವಂದಿಪೆ
ಇಂದಿರೇಶನ ತಂದು ತೋರಿಸಿ ತಂದೆ ಮಾಡೆಲೊ ಸತ್ಕೃಪೆ ೧

ಪುರಂದರ ಗಡದೊಳಗೆ ನಿಂದು ನಿರುತ ದ್ರವ್ಯವ ಗಳಿಸಿದೆ
ಪರಮ ಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ ೨

ಪರಮ ನಿರ್ಗುಣ ಮನವರಿತು ಹರಿಗೆ ಸೂರೆಯ ನೀಡುತ
ಅರಿತು ಮನದೊಳು ಹರಿದು ಭವಗಳ
ತರುಣಿ ಸಹಿತಾ ಹೊರಟನೆ ೩

ಮಾರಜನಕನ ಸನ್ನಿಧಾನದಿ ಸಾರಗಾನವ ಮಾಡುವ
ನಾರದರೆ ಈ ರೂಪದಿಂದಲಿ ಚಾರುದರುಶನ ತೋರಿದ ೪

ಅಜಭವಾದಿಗಳರಸನಾದ ವಿಜಯವಿಠ್ಠಲನ ಧ್ಯಾನಿಪ
ನಿಜ ಸುಜ್ಞಾನವ ಕೊಡಿಸಬೇಕೆಂದು
ಭಜಿಪೆನೋ ಕೇಳ್ ಗುರುವರ ೫

೩೪೨

ದಾಸರೆ ಪುರಂದರದಾಸರು
ಲೇಸಾಗಿ ಎನಗೆ ಸುಮಾರ್ಗವನು ತೋರಿದರು ಪ

ಅತಿ ಮುಗ್ಧನಾಗಿ ದುರುಳರಾ ದುರಾಚಾರದಲ್ಲಿ
ಮತಿಗೆಟ್ಟು ಮಹಿಯೊಳಗೆ ತಿರುಗುತಿರಲೂ
ಅತಿ ದಯಾಪರರಾಗಿ ತನ್ನವನಿವನೆಂದು
ಹಿತದಲ್ಲಿ ಪೊರೆದು ಕುಮತಿಯ ಬಿಡಿಸಿದರು ೧

ಶಬ್ದಾದಿ ಮೊದಲಾದ ವಿಷಯಂಗಳಾ ಕರ್ಮ
ದಬ್ಧಿಯೊಳಗೆ ಬಿದ್ದು ಪೊರುಳುತಿದ್ದಾ
ಲುಬ್ಧಕನ ಕರೆದು ದೃಢವಾಗಿ ಸುಜ್ಞಾನದ
ಅಬ್ಧಿಯೊಳಗಿಟ್ಟು ಕರುಣದಲಿ ನೋಡಿದರು ೨

ಹಿಂದೆ ಏಸೇಸು ಜನ್ಮ ಜನಿಸಿ ಅನ್ಯ
ರಿಂದಲಿ ಬಲು ಕಾಲ ನೊಂದ ನರನಾ
ತಂದು ವೈರಾಗ್ಯದೊಳು ಪೊಗಸಿ ಸೌಖ್ಯವ ಪರಶಿ
ತಂದೆ ಮಕ್ಕಳನು ಸಾಕಿದಂತೆ ಸಾಕಿದರು ೩

ಉಪದೇಶವಿತ್ತರು ಸುಪ್ರೀತಾರ್ಥದಲಿ ಬಂದು
ಜಪ ನಿಜಾಸನ ಧ್ಯಾನ ಜ್ಞಾನದಿಂದ
ಸಪುತೆರಡು ಲೋಕದ ಒಡೆಯನ್ನ ಪಾದವ
ಸಫಲವಾಗುವಂತೆ ಸಾಧನವ ಪೇಳಿದರು ೪

ದಾರಿದ್ರ ದೋಷವ ಸೇರಿದ ಮಾನವನಿಗೆ
ಆರು ಕೊಡದಲೆ ಧೇನು ದೊರಕಿದಂತೆ
ಕಾರುಣ್ಯದಲಿ ಗುರು ಪುರಂದರದಾಸರು
ಮೂರುತಿ ವಿಜಯವಿಠ್ಠಲನ್ನ ತೋರಿಸಿದರು ೫

೩೪೩

ಪುರಂದರ ಗುರುರಾಯ ಪುರಂದರ
ಗುರುರಾಯ ಪೂರ್ಣ ಗುಣಾಂಬುಧೆ
ಶರಣಜನ ಪರಿಪಾಲಾ ಸುಸ್ಸೀಲಾ ಪ

ಕಲಿ ವಿಪ್ರಜಿತು ದ್ವಾಪರ ಮಧು ಕೈಠಭ
ಖಳರು ಬಂದಾಗೆ ಅಪಾರ ಸುಲಭ ಮಾರ್ಗಕೆ ಎನ್ನ
ಸುಳಿಯಲೀಸದೆ ತಮ್ಮ ಬಳಗಾ ಹರಿಯಬಿಟ್ಟು
ಕಳವಳಿಸುವ ಚಂಚಲತನವಿತ್ತು ಕೆ
ತ್ತಲೆಯೊಳು ಪೊಗಿಸುವ ಮಾಯಾ ಕತ್ತರಿಸುವ ಪ್ರೀಯಾ ೧

ಜ್ಞಾನ ಭಕುತಿ ವಿರಕುತಿ ಸರ್ವದಯಿತ್ತು
ಮಾಣಿಸುವುದು ದುರ್ಮತೀ
ನೀನೋಲಿದು ಯಿಂದು ಅನಂತ ಜನುಮಕ್ಕೆ
ದಾನವಾರಿಯ ಪಾದ ಧ್ಯಾನವೆ ಮಾಡುವ
ಆನಂದವನೆ ಕೊಡು ನಾನಾ
ಬಗೆಯಿಂದ ಗುರುವೆ ನಿತ್ಯಸರು ತರುವೆ ೨

ಈ ದೇಹ ಬಂದದೆ ಪಂಚ ಭೇದವೆ ತಿಳಿಸಿ
ಮೋದವೆ ಕೊಡು ಪ್ರಾಪಂಚ
ಖೇದವೆ ಖಂಡಿಸಿ ಆದರಿಸುವದಪರಾಧವಗಳೆಣಿಸದೆ
ಸಾಧುಗಳಡಿಯಲಿ ಕಾದುಕೊಂಡಿಪ್ಪ ವಿ
ನೋದವೆ ಕರುಣಿಸು ವಿಜಯವಿಠ್ಠಲನ ಪ್ರೀಯಾ ೩

೩೪೪

ಪುರಂದರ ಗುರುರಾಯಾ ಸತ್ಪುಣ್ಯ ಕಾಯಾ ಪ

ನಿರುತ ನಿನ್ನ ಚರಣ ಸೇವೆ ಕರುಣ ಮಾಳ್ಪದೋ ಜೀಯಾ ಅ.ಪ.

ಬಹು ಜನ್ಮಗಳಲ್ಲಿ ನಾನು ಮಹ ಪುಣ್ಯ ಮಾಡಿದವರ
ಸಹವಾಸದಲಿದ್ದು ಗ್ರಹದ ಮುಂದೆ
ದೇಹಿಗ ನಾನಾದದರಿಂದ ದ್ರುಹಿಣ ಸುತನೆ ನಿನ್ನನು
ಗ್ರಹದಿಂದೆನಗೆ ಮಹಿಸುರ ಜನ್ಮವಿತ್ತೆ ೧

ಮಾನವನೋ ಖಗನೋ ಮೃಗನೋ ಶ್ವಾನ ಸೂಕರನೊ
ನಾನದನು ಕಾಣೆನೊ ಮತ್ತಾವನೊ ನಾನಾ ಜೀವನೊ
ಆನು ಒಂದು ತಿಳಿಯೆ ಗುರುವೆ ನೀನೆ ಬಲ್ಲಿ ಎನಗೆ ಬಂದ
ಅನಾದಿ ಶರೀರವ ಅಜ್ಞಾನವನ್ನೇ ತೆಜಿಸುವುದು ೨

ಯಾಚನೆ ದೇಹದಲ್ಲಿ ಊಚು ಭಾಗ್ಯವ ಜಯಸದಿಪ್ಪ
ಯೋಚನೆಯಿಂದಲಿ ಕಮಲಲೋಚನ ನಿನ್ನಂಘ್ರಿಯಾ
ಯಾಚನೆಯಿಂದಲಿ ಕರವ ಬಾಚೆನೊ ಹೀನರಿಗೆ ನಿನ್ನ
ಪಾಚಕರ ಮನೆಯ ಪರಿಚಾರ ಸಿದ್ಧವಾಗಲಿ ೩

ಹಿಂದೆ ಏನು ಪ್ರೇರಿಸಿದಿಯೊ ನಂದವ ನಾನರಿಯೆನೊ
ತಂದೆ ತಾಯಿ ನೀನೆ ಎಂದು ಪೊರದಿ ಸಂದೇಹವಿಲ್ಲ
ಯೆಂದು ಪೊರೆದದ್ದು ನಿನ ಕರುಣವಲ್ಲವೆ ಮತ್ತೆ
ಮುಂದೆಯಿದರಂತೆ ಪೊರೆವ
ಭಾರವು ನಿನದೆಂದು ನಾ ಪ್ರಾರ್ಥಿಸುವೆ ೪

ತಿರುಗುವುದು ಕುಳ್ಳಿರುವುದು ಬರುವುದು ಮತ್ತೇಳುವದು
ಮರಳೆ ಮಾತನಾಡುವುದು ವಾಸರದಲ್ಲಿ ಬಿಡದೆ
ಚರಿಸುವ ಕರ್ಮಗಳಲಿ ಸಿರಿ ವಿಜಯವಿಠ್ಠಲನ್ನ
ಚರಣಸ್ಮರಣೆಯ ಸುಖಾಂತರ
ಕರದೊಳಿಪ್ಪಂತೆ ಮಾಳ್ಪದೊ ಜೀಯಾ ೫

೩೪೫

ಬಂದ ದುರಿತ ವಿನಾಶನಾ
ಬಂದ ದುರಿತ ವಿನಾಶನ ಇಂದು ಪುರಂದರನ
ಪೊಂದುತಲಿ ಅತಿ ಭಕುತಿಯಿಂದ ಸ್ಮರಿಸುವ ಜನರ
ಹಿಂದೆ ಮುಂದು ಕುಲಕೋಟಿಗಳು
ಉದ್ಧಾರ ಸಂದೇಹ ಸಲ್ಲದಿದಕೆ ಪ

ದ್ವಾರಕಾಪುರದಲ್ಲಿ ಶ್ರೀರಮಣ ಸಭೆಯೊಳಗೆ
ಚಾರು ಮಂಡಿತನಾಗಿ ಇರುತಿರಲು ಯದು ಪರಿ
ವಾರ ವಾಲಗ ಮಾಡೆ ಸುತ್ತಲಿಹ
ಗೋಪಿಕಾ ನಾರಿಯರ ಖ್ಯಾಲದಲ್ಲಿ
ವಾರ ಕಾಂತೆಯರು ಮದವೇರಿ ನೃತ್ಯವ ಮಾಡೆ
ಘೋರೆಂಬ ವಾದ್ಯವಿಳೆಯೊಳು ಮೊಳಗೆ ದೇವತತಿ
ಧೀರರಾರಾರೆಂದು ಪೊಗಳಲಾ ನಭದಿಂದ
ನಾರದನು ಧರೆಗಿಳಿದನು ೧

ಬರುತಲೇ ವೈಕುಂಠಪುರದರಸಗೆರಗಿದನು
ಕರಗಳನು ಮುಗಿದು ಕಿನ್ನರಿಯನ್ನು ತಾ ಧರಿಸಿ
ಹರುಷದಿಂದಲಿ ಸ್ವರವನೆತ್ತಿ
ಮೂವತ್ತೆರಡು ರಾಗಗಳಲಿದಿರುನಿಂದು
ಎರಡು ಕಂಗಳಧಾರೆ ಸುರಿಯೆ ಪುಳುಕೋತ್ಸಹದಿ

ಕೊರುಳುಬ್ಬಿ ತೊದಲುನುಡಿ ಮೈಸ್ಮರಣೆ ಹಾರೆ ಶ್ರೀ
ಹರಿ ಹರೀ ಹರಿಯೆಂದು ಹರಿದಾಡುತಿರಲಾಗ
ಸುರರು ಶಿರವನೆ ತೂಗಲು ೨

ಅಚ್ಚುತನು ಪರಮ ಭಾಗವತನ್ನ ಭಕುತಿಗೆ
ಮೆಚ್ಚಿದನು ಬೇಡುವುದು ವರವಧಿಕವೆಂದೆನಲು
ಮುಚ್ಚಿದಂಬಕಗಳನು ತೆರೆದು
ಗೀರ್ವಾಣಮುನಿ ಎಚ್ಚರಿಕೆಯನು ಪೇಳುತ
ಅಚ್ಚಗನ್ನಿಕೆ ರಮಣ ದೀನನನು ಮನ್ನಿಪುದು
ನಿಚ್ಚಟೆನ್ನಯ ಕೂಡೆ ಬಿಡದೆ ಆಡೆನಲು ಕಲಿ-
ಹೆಚ್ಚಿದಾ ಯುಗದಲ್ಲಿ ಸಲಿಸುವೆನು
ಕೀರ್ತಿಗಳು ಬಿಚ್ಚಿ ತೋರಿಸುವೆನೆಂದ ೩

ವರ ಪಡೆದು ನಾರದನು ಇರುತಿರಲು ತಾವಿತ್ತ
ಬರಲು ಕಲಿ ದೊರೆತನವು ಕೆಲವು ಕಾಲಾಂತರಕೆ
ಸಿರಿವರನ ದಯದಿಂದ ಜನಿತರಾದರು
ಪುರಂದರವೆಂಬ ನಗರಿಯಲ್ಲಿ
ಚರಿಸಿದರು ಕೆಲವು ದಿನ ಸಂಸಾರ ವೃತ್ತಿಯಲಿ
ಜರಿದು ವೈರಾಗ್ಯವನು ತೊಟ್ಟು ದೃಢಮನಸಿನಲಿ
ತರುಣಿ ಮಕ್ಕಳು ಸಹಿತ ಸೇರಿದರು
ಕಿಷ್ಕಿಂಧಗಿರಿ-ತುಂಗ ಪಂಪದಲ್ಲಿ ೪

ಅಂದು ಭಕುತಗೆ ಇತ್ತ ಭಾಷೆ ತಪ್ಪಲಿಬಾರ-
ದೆಂದು ಇಂದಿರೆಪತಿಯು ದಯದಿಂದ ವಲಿದವರ
ಮುಂದೆ ಒಂದರಘಳಿಗೆ ತೊಲಗದಲೆ
ಕುಣಿಕುಣಿದು ನಂದವನೆ ತೋರಿಕೊಳು
ಮಂದಭಾಗ್ಯರಿಗೆ ಈ ಪರಿಯ ಸೊಬಗುಂಟೆ ನಾ

ರಂದರಿವರಾದ ಕಾರಣದಿಂದ ಪರ ಬೊಮ್ಮ
ಬಂದು ಸಿಲುಕಿದನೆಂಬುವುದೆ ಇದಕೆ
ಪ್ರಾಮಾಣ್ಯವೆಂದು ತಿಳಿದು ಸುಜನರು ೫

ವಾಸವನೆ ಮಾಡಿದರು ಪ್ರಹ್ಲಾದನವತಾರ
ವ್ಯಾಸರಾಯರ ಬಳಿಯ ಮುದ್ರೆ ಗುರುಮಂತ್ರ ಉಪ
ದೇಶ ಕೈಗೊಂಡು ವೈಷ್ಣವರಾಗಿ
ಪುರಂದರ ದಾಸರೆಂಬುವ ಪೆಸರಲಿ
ದೇಶಗಳ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ
ಲೇಸಾಗಿ ಅಲ್ಲಲ್ಲಿ ಮಹಿಮೆಗಳ ಪೇಳುತ ದು
ರಾಸೆಯನು ತೊರೆದು ವಿಠ್ಠಲನ ಸನ್ನಿಧಿಯಲಿ
ವಸಿಸಿದರು ಧರ್ಮಬಿಡದೆ ೬

ಉಪಾದಾನವ ಬೇಡಿ ವಿಪ್ರರಿಗೆ ಮೃಷ್ಟಾನ್ನ
ಅಪರಿಮಿತವಾಗಿ ಉಣಿಸುತ್ತಿರಲು ಅವರಲ್ಲಿ
ಗುಪಿತ ಚರಿತೆಯ ಕಂಡು ದೇವಮುನಿ
ತಟಿನಿಗಳು ತಪಸು ಫಲವಾಯಿತೆಂದು
ತಪನ ಕಾಲದಲೆದ್ದು ದಾಸರಾ ಸದನದಲಿ
ಜಪಿಸಿ ತಮ ತಮ ತಕ್ಕ ತಾರತಮ್ಯಗಳಿಂದ
ಉಪಚಾರ ಕೈಗೊಂಡು ಧನ್ಯರಾದೆವು ಎಂದು
ಸುಪಥವನು ಇಚ್ಛೈಸುವರು ೭

ಅವರೆಂದ ವಚನಗಳೆಲ್ಲ ವೇದಾರ್ಥವಾಗಿ
ಅವನಿಯೊಳು ತುಂಬಿದುವು ಬಂದರೇ ಗ್ರಹಿಸಿದರ
ಭವರೋಗ ಭಸಿತಾಗಿ ಸುಜ್ಞಾನವೆಂಬಂಥ
ಭುವನ ನಿಧಿಯೊಳಗೆ ಮುಳುಗಿ
ಪವನ ಮತವಿಡಿದು ಪರಿಪೂರ್ಣಮಾಚಾರದಲಿ

ತವಕದಿಂದಲಿ ಹರಿಯ ಪಾದವನೆ ಪಡಕೊಂಡು
ಜವನಪುರ ದಾಟಿ ಜನ ತಪ ಸತ್ಯ ಲೋಕದಲಿ
ನವರೂಪಿನಲಿ ಇಪ್ಪರು ೮

ಏನು ಇದು ಎಂತೆಂದು ದೂಷಿಸದಿರಿ ದಾಸರ
ಸೂನು ಪೇಳಿದನು ಗುರು ವ್ಯಾಸಮುನಿ ರಾಯರಿಗೆ
ಆ ನಾರದರೆ ಪುರಂದರ ದಾಸರೆಂಬಂಥ ಸೂನೃತದ ಸಿದ್ಧಾಂತದ
ಧ್ಯಾನದಲಿ ತಿಳಿದು ಸುಜ್ಞಾನಿಗಳ ವದನಖದ
ರೇಣಿನವನಾಗಿ ಬಿನ್ನೈಸಿದನು ಜ್ಞಾನಮಯ
ಆನಂದಮಯ ವಿಜಯವಿಠ್ಠಲನ್ನ ಪಾದಾಂಬುಜ
ಕಾಣುವಾ ಜನ ಲಾಲಿಸೆ ೯

೨೪೬

ಬೇಸರದೆ ಭಜಿಸಿರೋ ಪುರಂದರ ದಾಸರಾಯರ
ಶ್ರೀಶ ನಿಮ್ಮನು ಉದಾಶೀನ ಮಾಡದೆ
ಪೋಷಿಸುವ ಸಂತೋಷದಿಂದಲಿ ಪ

ಪುರಂದರಗಡಾದ ಒಳಗೆ ಹಿರಿಯ ಸಾವುಕಾರನೆನಸಿ
ಪರಿಪರಿಯ ಸೌಖ್ಯಗಳ ಸುರಿಸುತ್ತ
ಇರುತಿರಲು ನರಹರಿ ತ್ವರಿತದಿಂ ಬ್ರಾಹ್ಮಣನಾಗುತ್ತ
ಕರುಣದಲಿ ಅವರುದ್ಧರಿಸಲೋಸುಗ ಮನೆಗೆ
ಪೋಗುತ್ತ ಯಜಮಾನ ಕಂಡು
ಜರಿದು ಬ್ರಾಹ್ಮಣನ್ನೊರಗೆ ಹಾಕಲು
ಮರುದಿವಸ ಮತ್ತೊಗಿ ನಿಂತ ೧

ಭಾರಿಭಾರಿಗೆ ಸಾವುಕಾರನ
ಮೋರೆಗ್ನೊತ್ತಿ ಮೇರೆಯಿಲ್ಲದೆ
ಆರು ತಿಂಗಳು ಬೆನ್ನು ಬೀಳುತ್ತ ನಾಯಕರು ಈತನ

ಆರು ಅಟ್ಯಾರೆಂದು ಬೈಯುತ್ತ ಬೇಸತ್ತು ಎರಡು
ಹೇರು ರೊಕ್ಕಾ ಮುಂದೆ ಸುರಿಯುತ್ತ ಅದರೊಳಗೊಂದು
ಡ್ಡಾರಿಸಿಕೋ ಎಂದು ಹೇಳಲು ನಾರಾಯಣ ಬಿಟ್ಹೋದ ನಗುತ ೨

ಹಿತ್ತಲಾ ಬಾಗಿಲಿಗೆ ಹೋಗಿ ಮತ್ತೆ ಆತನ ಮಡದಿಗಾಗಿ
ಹತ್ತಿ ಬಿದ್ದನು ವಿತ್ತ ತಾ ಯೆನುತ ತನ ಮಗನ ಮುಂಜ್ಯೆಂ
ದೆತ್ತಿ ಕರದಿಂ ಬಾಯಿ ತೆರೆಯುತ್ತ ಆ ಪ್ರಾಣಿ ನುಡಿದಳು
ಎತ್ತಣ ದ್ರವ್ಯವು ತನಗೆನುತ ನಿನ್ನ ಮೂಗಿನ
ಮುತ್ತಿನ ಮೂಗುತಿಯ ಕೊಡು ಎನೆ
ಉತ್ತುಮಳು ತೆಗೆದಿತ್ತಳಾಕ್ಷಣ ೩

ಜೋಕೆಯಿಂ ಮೂಗುತಿಯನೊಯ್ದು
ಆಕಿ ಗಂಡನ ಕಣ್ಣೆದುರಿಗೆ ಹಾಕಿದನು ತಾ
ಪಾಕಿ ಕೊಡೆಯೆನುತ ಅದು ಕಂಡು ಇದು ನ
ಮ್ಮಾಕಿದೆಂದು ಈತ ನುಡಿಯುತ್ತ ಅನ್ಯರದು ಯಿಂಥಾ
ದ್ಯಾಕೆ ಯಿರಬಾರದೆನ್ನುತ್ತಾ ಬೆಲೆ ಹೇಳು ಎನಲು
ನಾಕು ನೂರು (ಪಾಕಿ) ಶುಭ್ರ ಕೊಡು
ಎಂದಾಕೆ ಹೋದನು ತಿರೂಗಿ ಬಾರದೆ ೪

ತಿರುಗಿ ಬ್ರಾಹ್ಮಣ ಬಾರದಿರಲು ಕರೆದು ತನ್ನ ಹೆಂಡತಿಯ
ಬರಿಯ ನಾಶಿಕವನ್ನೆ ಕಂಡುನು ಮೂಗುತಿಯ ಎಲ್ಲೆನೆ
ಮುರಿದಿಹುದು ಯೆಂದಾಕೆ ಹೇಳಲು ಒಳಗ್ಹೋಗಿ ನೀ ತಾರದಿರೆ
ಅರೆವೆ ನಿನ್ನಯ ಜೀವವೆಂದನು ವಿಷಕೊಂಬೆನೆಂದು
ಕರದಿ ಬಟ್ಟಲು ಧರಿಸಲಾಕ್ಷಣ
ತ್ವರಿತದಲಿ ಹರಿ ಅದರೊಳಾಕಿದ ೫

ಹರುದಿಂ ಮೂಗುತಿಯನ್ನು
ಪುರುಷನಾ ಕೈಕೊಳಗೆಯಿಡಲು
ತರಿಸಿ ತನ್ನಲ್ಲಿದ್ದ ಪೆಟ್ಟಿಗೆಯಾ ಅದು ಕಾಣದಿರಲು

ಬೆರಗಾಗಿ ನೋಡಿದನು ಮಡದಿಯ ನಿಜ ಪೇಳುಯೆನಲು
ಅರಸಿ ಪೇಳ್ದಳು ಕೊಟ್ಟ ಸುದ್ದಿಯಾ ಅಭಿಮಾನಕಂಜಿ
ಅರದು ವಿಷವನು ಕುಡಿವೆನಲು ಸಿರಿರಮಣಾ ಕೊಟ್ಟ ಖರಿಯಾ ೬

ದೇವ ದೇವನು ಎನ್ನ ಮನದ
ಭಾವವನ್ನು ತಿಳಿವುದಕೆ ತಾ ವೃದ್ಧ ಬ್ರಾಹ್ಮಣನಾಗಿ
ಬಂದಿದ್ದ ಪರಿಪಕ್ವವೆನಗೆ
ನ್ನಾವ ಕಾಲಕೆ ಆಗಬೇಕೆಂದ ವೈರಾಗ್ಯಭಾವದಿ
ಜೀವಿಸಿಕೊಂಡಿರುವುದೇ ಛಂದ ಹೀಗೆನುತ ಮನೆ ಧನ
ಕೋವಿದರ ಕರೆದಿತ್ತ ಹರುಷದಿ
ಕಾವನಯ್ಯನ ದಾಸನಾದ ೭

ಲಕ್ಷ್ಮೀಪತಿಯ ಪಾದದಲ್ಲಿ ಲಕ್ಷ್ಯವಿಟ್ಟು ವ್ಯಾಸರಾಯರ
ಶಿಕ್ಷೆಯಿಂದಲಿ ಅಂಕಿತವ ಕೊಳುತ ತಿರಿಪಾದ ಐದು
ಲಕ್ಷಪದ ಸುಳಾದಿ ಪೇಳುತ್ತ ಪ್ರತಿದಿವಸದಲ್ಲು
ಪಕ್ಷಿವಾಹನ ನಾಟ್ಯವಾಡುತ ಅಪರೋಕ್ಷ ಪುಟ್ಟಲು
ಮೋಕ್ಷಸ್ಥಾನಕ್ಕೆ ಕರೆದೊಯ್ದು ಅ
ಧೋಕ್ಷಜನು ಸಂರಕ್ಷಿಸಿದ ೮

ಘೋರ ನರಕದೊಳಗೆ ಬಿದ್ದಾ
ಪಾರ ಜನರು ಚೀರುತಿರಲು
ದ್ಧಾರ ಮಾಡಿದ ನಾರದಾರಿವರು ಅವ
ತಾರ ಮಾಡಿ ಧಾರುಣಿಯಲಿ ಮತ್ತೆ ಬಂದರು ಸರುವೋತ್ತಮ
ಹರಿ ನಾರಾಯಣನೆ ಎಂದು ಸಾರಿದರು ಹೀಗೆಂದು ತಿಳಿಯಲು
ಮಾರ ಜನಕ ವಿಜಯವಿಠ್ಠಲ ಆರಿಗಾದರು ಒಲಿವ ಕಾಣಿರೊ ೯

೩೪೭

ವಿಠ್ಠಲನ ಪದವನಜ ತುಂಬೆ
ಸೃಷ್ಟಿಯೊಳಗೆ ಎನ್ನ ಬಿಡದೆ ಪೊರೆ ಎಂಬೆ ಪ

ಜ್ಞಾನ ಭಕುತಿ ವೈರಾಗ್ಯದಲಿ ಜಾಣ
ದಾನ ಮಾಡುವರೊಳಗೆ ಪೂತುರೆ ನೀನೆ ನಿಪುಣ
ಮಾನಸದಲಿ ಹರಿಯ ಧ್ಯಾನ ಮಾಡುವ
ಆನಂದಮತಿ ವಿಮಲ ಸರ್ವವಿಧಾನ ೧

ಮಾತುಮಾತಿಗೆ ನೆನೆಸಿದವರ ಭವದ ಮಾಯಾ
ಸೇತುವಿಯ ಕಡಿದು ಸಂತತವಾಗಿ ಸಹಾಯಾ
ಪ್ರೀತಿಯಲಿ ಬಂದು ಶ್ರೀ ಹರಿಯ ಪದ ಸೇವಿಯಾ
ತಾ ತೋರಿ ತಿಳಿಸುವಾ ಪ್ರಿಯನೆನಿಸುವಾ
ಭೂತಳದೊಳು ಗುರು ಪುರಂದರ ರಾಯಾ ೨

ಪಾವನ ಶರೀರ ಎನಗೆ ವಜ್ರ ಪಂಜರಾ
ಕೂವಾದಿ ಮತಹರ ನಂಬಿದವರಾಧಾರ
ಪಾವಮಾನಿಯ ಮತದಲಿಪ್ಪ ಮನೋಹರ
ಶ್ರೀ ವಿಜಯನಗರ ಮಂದಿರದೊಳಗುಳ್ಳ
ಶ್ರೀ ವಿಜಯವಿಠಲನ್ನ ಪೂಜಿಸುವ ಧೀರ ೩

೩೪೮

ಶರಣು ಶ್ರೀ ವ್ಯಾಸಮುನಿ ಚರಣಾಬ್ಜ ಭೃಂಗ ಜಯ
ಶರಣು ಶ್ರೀ ಸುಜ್ಞಾನ ಭಕುತಿ ವೈರಾಗ್ಯಪರನೆ ಜಯ
ಶರಣು ದಾಸೋತ್ತಮರ ಮಣಿಯ ನಿನಗ್ಯಾರೆಣಿಯೆ
ಗುರು ಪುರಂದರದಾಸರೆ ನಿಮಗೆ ಪ

ಪಾಕಶಾಸನಪುರದ ಚಿನಿವಾರ ವರದಪ್ಪ
ನಾ ಕುಮಾರನಾಗಿ ಜನಿಸಿ ಸಂಸಾರದೊಳು
ನೇಕ ಬಗೆಯಿಂದ ವಿಷಯಾನಂತೆ
ಸಂಚರಿಸಿ ಲೌಕಿಕವನ್ನೆ ತೊರೆದು
ಈ ಕಲಿಯುಗದಲ್ಲಿ ತುಂಗಾತೀರ ಪಂಪಾ
ರಾಕಾಬ್ಜನಂತೆ ಪೊಳೆವ ನಿಧಿಗೆ ಬಂದು ನಿ
ರಾಕರಿಸಿ ದುಸ್ಸಂಗ ವೈಷ್ಣವರಾಗಿ ಪತಿಕರಿಸಿ ಹರಿಭಕುತಿಯಾ ೧

ಕಾಮಕ್ರೋಧ ಲೋಭ ಮದ ಮತ್ಸರ ಡಂಭ
ಈ ಮರಿಯಾದಿಗಳ ಮರ್ಮವನೆ ಕಡಿದು ನಿ
ಷ್ಕಾಮದಲಿ ಸಿರಿ ರಂಗನಾಮವನ
ಕೈಕೊಂಡು ಆ ಮಹಾ ರಚನೆಯಲ್ಲಿ
ಸೀಮೆಯೊಳು ಪ್ರಾಕೃತದ ಗೀತೆಯಲಿ ಕೊಂಡಾಡಿ
ತಾಮರಸ ಸದೆ ಬಡಿದು ಮಧ್ವಸಿದ್ಧಾಂತ ಲ
ಲಾಮದಾ ಬಿರುದೆತ್ತಿ ಸಾರಿ ಡಂಗುರ
ಹುಯಿಸಿ ಕಾವನ್ನೈಯನ ಕುಣಿಸಿದ ೨

ಶುದ್ಧ ಭಕುತಿಯಿಂದ ಸಿರಿ ವಿಠ್ಠಲನ್ನ ಮೃದು
ಪದ್ಮಗಂಧವನು ಮಧುಪನಂತೆ ಸೇವಿಸುತ್ತ
ತದ್ಧಿಮಿ ಧಿಮಿಕೆಂದು ಕುಣಿಸಿ ಕುಣಿದಾಡುತ್ತ
ಬುದ್ಧಿ ಪೂರ್ವಕದಿಂದಲಿ
ಶುದ್ಧ ಮಂದರನೆಲ್ಲ ಎಂದೆಂದಿಗೂ ಬಿಡದೆ
ಪೊದ್ದರ್ದ ಪಾಪಗಳು ತಿರುಗಗೊಡದಲೆ ಕಾಲಿ
ಲೊದ್ದು ಕಡಿಗೆ ನೂಕಿ ಸುಜ್ಞಾನ
ಮಾರ್ಗದ ಪದ್ಧತಿಯ ಸ್ಥಿತಿ ಪೇಳಿದ ೩

ವರದಪ್ಪನೇ ಸೋಮ ಗುರುರಾಯ ದಿನಕರನು
ಗುರು ಮಧ್ವಪತಿಯೆ ಭೃಗು ಅಭಿನವನೆ ಜೀವ

ವರತನಯ ನಾಲ್ವರನು ಪಡೆದು
ಉಪದೇಶಿಸಿ ಪರಮ ಜ್ಞಾನಿಗಳ ಮಾಡಿ
ಶರಧಿ ತೆರೆಯಂತೆ ಹರಿಗುಣಗಳನ್ನು ಪೊಗಳುತಿಹ
ತರಳರನು ನೋಡಿ ಗುರು ವ್ಯಾಸಮುನಿರಾಯರಿಗೆ
ಹಿರಿದಾಗಿ ಮನ ಉಬ್ಬಿ ಎರಗಿದಂತಃ
ಕರಣ ಚರಿತೆಯಲಿ ನಲಿದಾಡಿದ ೪

ಘೃತದ ಬಿಂದಿಗೆ ತಂದ ಅತಿಥಿಯ ವೋಗರನುಂಡ
ಸತಿಯಳೆಂದಾ ನುಡಿಗೆ ಚತುರ ಭಾಗ್ಯವನಿತ್ತ
ಪಥದಲ್ಲಿ ತಾ ಕಾಯ್ದು ಪಥವ ತಪ್ಪಿದರೆ
ಹಿತನಾಗಿ ದೃಢನೋಡಿದ
ಕ್ಷಿತಪ ಶೋಧಿಸೆ ಅಪರಿಮಿತವಾಗಿ ಉಣ್ಣಿಸಿದ
ಯತಿಯ ಪಂಕ್ತಿಗೆ ಭಾಗೀರಥಿ ನದಿಯ ತರಸಿದ
ಸುತನಾಗಿ ನೀರು ನಿಶಿತದಲಿ ತಂದ ಅ
ಪ್ರತಿ ದೈವತಾ ಕಿಂಕರ ೫

ದುರ್ಜನರ ಮಸ್ತಕಾದ್ರಿಗೆ ವಜ್ರ ಪ್ರಹರವಿದು
ಸಜ್ಜನರ ದಿವ್ಯ ಚರಣಾಬ್ಜಕ್ಕೆ ಭೃಂಗವಿದು
ನಿರ್ಜರರ ಮೆಚ್ಚು ಮೂರ್ಜಗದೊಳಗೆ ಬಲು
ಹೆಚ್ಚು ಲಜ್ಜೆಯನು ತೊರೆದು ನಿತ್ಯ
ಹೆಜ್ಜೆ ಹೆಜ್ಜೆಗೆ ಬಿಡದೆ ದಾಸರ ಕರುಣವೆಂಬ
ವಜ್ರ ಕವಚವ ತೊಟ್ಟು ನುಡಿದವನ ನುಡಿ ಸತ್ಯ
ಅರ್ಜುನಾಗ್ರಹ ಒಲಿದು ಸಾಧಿಸುವ ಕರುಣದಲಿ
ಅಬ್ಜಭವನೊಡನೆ ಗತಿಗೆ ೬

ಎಂತು ವರ್ಣಿಸಲಿ ಎನಗಳವಲ್ಲ ಧರೆಯೊಳಗೆ
ಸಂತತಿ ನೆಲಸಿದಂತೆ ಕಾವ್ಯವನೆ ಸ್ಥಾಪಿಸಿ

ಸಂತಾನದೊಳಗೆ ಗುರು ಮಧ್ವಪತಿ
ದಾಸರನ ಸಂತರಿಸಿ ಧರೆಗೆ ತೋರಿ
ಅಂತ್ಯಕಾಲದಲಿ ಸಿರಿ ವಿಠಲನ ಸ್ಮರಿಸುತ ಸು
ಪಂಥವನು ಹಿಡಿದು ಸದ್ಗತಿಯಲ್ಲಿ ಸೇರಿದರು
ಸಂತತದಾಸರ ಪ್ರಿಯ ವಿಜಯವಿಠ್ಠಲನಂಘ್ರಿ
ಚಿಂತೆಯೊಳಗಿಟ್ಟ ಗುರುವೆ ೭

ಆತ್ಮನಿವೇದನೆ

೩೪೯

ಆವಗತಿ ಎನಗೆ ವೈಕುಂಠಪತಿಯೆ ।
ಕಾವ ಕರುಣಿಯೆ ಸರ್ವದೇವರ ದೇವ ಪ

ಉದಯದಲಿ ಎದ್ದು ನಿನ್ನ ನಾಮವೆನ್ನದೆ ।
ಉದರಕಿನ್ನೇನು ಮಾಡಲಿ ಎನ್ನುತಾ ।
ಕದಗಳಾ ಸರಸುತ್ತ ಕಂಡಲ್ಲಿ ತಿರುಗಿದೆ ।
ಮದ ಗರ್ವದಲಿ ಬಾಳ್ವ ಮನುಜ ಶಿರೋಮಣಿಗೆ ೧

ಧನವ ಘಳಿಸವ ವಾತ್ಸಲ್ಯವಲ್ಲದೆ ಸಾ ।
ಧನಕೆ ಒಮ್ಮೆ ಮನಸ್ಸು ಎರಗಲಿಲ್ಲಾ ।
ಮನುಜರೊಳಗೆ ಖ್ಯಾತಿಯಾಗುವೆನೆಂಬೊ । ವೇ ।
ದನೆ ಮಿಗಿಲಲ್ಲದೆ ಭಕುತಿ ಮತ್ತಿಲ್ಲ ೨

ಒಬ್ಬರಕಿಂತಲಧಿಕನಾಗುವೆನೆಂದು ।
ಉಬ್ಬಿ ಪರರಾ ಸೇವೆಯನು ಮಾಡುವೆ ।
ಹಬ್ಬಿದ ಪಾಪದ ಸರವಿಗೆ ಉರುಲು ಬಿದ್ದು ।
ಸುಬ್ಬಿದ ಸುಕೃತವ ಕಳಕೊಂಡೆನಯ್ಯಾ ೩

ಪೂರ್ವದಲಿ ಉಂಡ ದುಃಖಗಳೆಲ್ಲ ಮರೆದು ।
ಸರ್ವದಾ ಗರ್ವದಲಿ ಸಜ್ಜನರ ಕೆಡನುಡಿದು ।
ಉರ್ವಿಯೊಳು ಬಲು ಬಲವಂತನೆನಸೀ ।
ಸರ್ವದಾ ಸರ್ವ ನರಕಂಗಳಲಿ ಬಿದ್ದು ಹೊರಳಿದೆನು ೪

ಇನ್ನಾದರೂ ದುರ್ಬುದ್ಧಿಯನ್ನು ಬಿಡಿಸಿ ।
ಪ್ರಾಸನ್ನ ಕರಿಸಿಕೊಳ್ಳೊ ಕರವ ಬಿಡದೆ ।
ಕನ್ಯಾಮಣಿ ಪತಿ ವಿಜಯವಿಠ್ಠಲರೇಯಾ ।
ಎನ್ನ ಭಾವವು ನಿನ್ನದಲ್ಲವೇನಯ್ಯಾ ೫

೩೫೦

ಆವದೆನೆಗೆ ಪ್ರೀತಿ ಎಂದೆಂಬಿಯಾ ।
ದೇವ ದೇವಕಿ ತನುಜ ಬಿನ್ನಪವ ಮಾಡುವೆನೊ ಪ

ದೊರೆತನವಲ್ಲೆ ಧನವಲ್ಲೆ ಒಬ್ಬರ ಬಳಿಯ ।
ಹಿರಿಯತನವಲ್ಲೆ ಹಿಗ್ಗುವುದು ವಲ್ಲೆ ।
ಹರಿ ನಿನ್ನ ಚರಣಗಳ ಸ್ಮರಿಸುವ ಭಾಗವತರ ।
ಅರಮನೆಯ ಬೀದಿಯಲಿ ಹೊರಳುವ ಭಾಗ್ಯವ ಕೊಡು ೧

ಪಂಡಿತನಾಗಲಿವಲ್ಲೆ ಫಲವಲ್ಲೆ ನಾವು ಪ್ರ ।
ಚಂಡ ಯೋಗಗಳೊಲ್ಲೆ ಯಾಗವಲ್ಲೆ ।
ಥಂಡ ಥಂಡದಿ ನಿನ್ನ ಕೊಂಡಾಡುವರ ಬಳಿಯ ।
ಕೊಂಡರಾಗಿಪ್ಪವರ ಸೇರುವ ಭಾಗ್ಯವ ಕೊಡು ೨

ಅಂದಣವೇರಲಿವಲ್ಲೆ ಆತ್ಮಸುಖವಲ್ಲೆ ನಾ ।
ನೆಂದು ಪೇಳುವರ ಸಂಗತಿಯವಲ್ಲೆ ।
ಇಂದಿರಾಪತಿ ನಿನ್ನ ವಂದಿಸುವ ಜನ ನಿತ್ಯ ।
ನಿಂದಂಗಳದೊಳಗೆ ಯಿಪ್ಪ ಭಾಗ್ಯವ ಕೊಡು ೩

ರಸ ರಸಾಯನ ವಲ್ಲೆ ಹಸನಾದ ಪಟ್ಟಿ ರಂ ।
ಜಿಸುವದುವಲ್ಲೆ ರಾಗಗಳುವಲ್ಲೆ ।
ವಸುದೇವ ಸುತ ನಿನ್ನ ಪೆಸರು ಎಣಿಸುವವರ ।
ಶಿಶುವಾಗಿ ಬದಕುವ ಕುಶಲ ಭಾಗ್ಯವ ಕೊಡು ೪

ಪುಣ್ಯ ತೀರ್ಥಗಳು ನಿನ್ನ ಮನಸಿಗೆ ಬಂದ ।
ವನ್ನು ಮಾಡಿಸು ಬಿಡದೆ ಮನ್ನಿಸೆನ್ನ ।
ಚನ್ನ ಮೂರುತಿ ಚೆನ್ನ ವಿಜಯವಿಠ್ಠಲರೇಯ ।
ಎನ್ನ ವಂದನೆಯನ್ನು ಮುನ್ನು ನೀ ಕೈಕೊಂಡು ೫

೩೫೧

ಆವಪರಿಯಲಿ ನಿನ್ನನು ವೊಲಿಸುವೆ
ದೇವ ಎನ್ನೊಳಗೆ ಒಂದಾದರೂ ಗುಣವಿಲ್ಲಾ ಪ

ಅರಿಯೆ ಧರ್ಮವ ಪಾಪ । ಮರಿಯೆ ಉತ್ತಮರನ್ನ
ಕರಿಯೆ ನಾಮಕೆ ಬಾಯಿ । ತೆರಿಯೆ ಸುರಿಯೆ
ಜರಿಯೆ ಮೋಹಕೆ ಮನ । ಮುರಿಯೆ ವ್ಯಾಕುಲ ಜ್ಞಾನಾಂ ।
ಕುರಿಯ ನಿನ್ನವರೊಳು । ಬೆರಿಯೆನರಿಯೆ
ಸರಿಯೆ ದುಸ್ಸಂಗ ಕಥಾ । ಬರಿಯೆ ಕರದಿ ಯಾತ್ರಿಗೆ
ಪರಿಯೆ ಪುಣ್ಯ ತೀರ್ಥ । ವರಿಯೆ ಮೊರಿಯೆ
ಹರಿಯೆ ಜಗದೊರೆಯೆ । ಸಿರಿದೊರೆಯೆ ಅಘ
ಕರಿಗೆ ಕೇಸರಿಯೆ ಮತ್ತಾ । ರರಿಯೆ ನಿನ್ನವರ ಮರಿಯೆ ೧

ನಡಿಯೆ ಸುಮಾರ್ಗ ವ್ರತವಿಡಿಯೆ ಮುಡಿದ ಪೂವು
ಮುಡಿಯೆ ಕಾಮದ ಮರ್ಮ । ತಡಿಯೆ ಕಡಿಯೇ
ಕುಡಿಯೆ ಪಾಪೋದಕವ ನುಡಿಯೆ ಮಂಗಳ ವಾರ್ತೆ
ಪಿಡಿಯೆ ಭಕುತಿ ನೀತಿ ಪಿಡಿಯೆ ಗುಡಿಯೇ

ಹುಡಿಯೆ ಸುಕೃತಿ ಕಾಳ । ಗೆಡಿಯೆ ಪರರೊಸ್ತಕ್ಕೆ
ತೊಡಿಯೆ ಚಿಂತಾತುರವ । ವುಧಿಯೆ ಹೊಡಿಯೆ
ಕೊಡಿಯೆ ಎನ್ನಗೊಡಿಯೆ ನೆಂ । ದೆಡೆಯಲ್ಲಿ ಸೂಸಿದಾ
ಪುಡಿಯಲ್ಲಿ ವೊಡಬೆರಸೆ । ಅಡಿಗಡಿಗೆ ಎನ್ನ ಕಡಿಗೆ ೨

ಸುಳಿಯೆ ಕೀರ್ತನಿಗೆ ಮದ । ವಳಿಯೆ ಗುರುನಿಂದಕರ
ಹಳಿಯೆ ಕಾಮದ ಕುಪ್ಪೆ । ಕಳಿಯೆ ಬಳಿಯೆ
ತೊಳಿಯೆ ಮನನ ನರಕಕ್ಕೆ । ಮುಳಿಯೆ ಸುಮತಿಮಾರ್ಗ
ತಿಳಿಯೆ ಪದವಿಗೆ ಪೋಗಿ । ಇಳಿಯೆ ಬೆಳಿಯೆ
ಛಳಿಯೆ ಮುಂದಿನ ಜನನ । ಹೊಳೆಯೆಂಬೋದು ಅರಿದು
ಶಳಿಯೆ ಸಂಚಿತ ಕರ್ಮ । ವಳಿಯೆ ತುಳಿಯೆ
ವುಳಿಯೆ ಬೊಬ್ಬುಳಿಯೆ ಈ । ಕಳೆಯೇನುವಲ್ಲನಭ
ಸುಳಿ ಹೃದಯಾವಳಿಯಲ್ಲಿ । ವಿಜಯವಿಠ್ಠಲವೊಳಿಯೆ ೩

೩೫೨

ಇದೇ ಸಮಯ ಹರಿಯೇ ಇದೇ ಸಮಯ ಪ

ನಿನ್ನ ಪದ ಕಮಲ ತೋರಿ ಸದಾ ।
ಬಿಡದೆ ಎನ್ನ ಮುದದಿ ಪೊರೆವುದಕೆ ಅ.ಪ

ನಾನಾ ಯೋನಿಯಲಿ ಬಂದು ಜ್ಞಾನ ದುರ್ಲಭನಾಗಿ ।
ಹೀನನಾದವಗೆ ಸುಜ್ಞಾನ ಪಾಲಿಸುವುದಕೆ ೧

ಆಶಾಪಾಶಕೆ ಸಿಲುಕಿ ಶ್ರೀಶನ ಮರೆತೆನೋ ।
ಲೇಸು ದಾರಿಯ ತೋರಿ ದಾಸನ ಕಾಯುವುದಕೆ ೨

ಸಂತರ ಸಂಗವ ಸಂತತ ಪಾಲಿಸಿ
ಅಂತರಂಗದಿ ನಿನ್ನ ಚಿಂತನೆ ಕೊಡುವುದಕೆ ೩

ಹಿಂದಿನ ಸುಕೃತದಿ ಬಂದೆ ಭೂಸುರನಾಗಿ ।
ಮುಂದಿನ ಪದಕ್ಕಾಗಿ ಕುಂದದೆ ಸಲಹುವುದಕೆ ೪

ಶ್ರೀ ಪತಿ ವಿಜಯವಿಠ್ಠಲ ವೆಂಕಟ ।
ತಾಪವ ಕಳೆದೆನ್ನ ಕಾಪಾಡುವುದಕೆ ೫

೩೫೩

ಇರಬಾರದೊ ಬಡವ ಜಗತ್ತಿನೊಳಗೆ ।
ಪರದೇಶಿ ಮಾನವಗೆ ದಿಕ್ಕು ಮತ್ತಾವನು ಪ

ಪೊಡವಿಪತಿ ದೃಷ್ಟಿಗಳು ಒಳ್ಳೆವಲ್ಲಾವೆಂದು ।
ಬಿಡದೆ ಜನ ಪೇಳುವುದು ಸಿದ್ಧವಯ್ಯಾ ।
ಬಡವ ನಾನಯ್ಯ ನಾನಾ ಕಷ್ಟಬಟ್ಟೆರಡು ।
ಒಡವೆ ಸಂಪಾದಿಸಲು ಅಪಹರಿಸಿದ ನೋಡು ೧

ದಿನ ಪ್ರತಿ ದಿನದಲ್ಲಿ ಕರಳು ಕಟ್ಟಿಕೊಂಡು ।
ಹಣದಾಸಿಯಿಂದ ನಾ ಘಳಿಸಿದ್ದೆನೊ ।
ಮನೆವುಗೆ ಬಂದು ಮಾಡಿಕೊಂಡೊಯ್ದಿಯಾ ಧರ್ಮವೇ ।
ವನಜನಾಭನೆ ನಿನ್ನ ದೊರೆತನಕೆ ಶರಣೆಂಬೆ ೨

ದೊರೆಗಳಾ ಲಕ್ಷಣವಿದೆ ಎಂದೆಂದಿಗೆ ತಮಗೆ ।
ಸರಿಬಂದ ಕಾರ್ಯಮಾಡುವರಲ್ಲದೇ ।
ನೆರೆಯವರದೇ ತಪ್ಪೇ ವಿಜಯ ವಿಠ್ಠಲರೇಯ ।
ಮರಳೆ ಮಾತಾಡಿದರೆ ಅಪರಾಧ ಹೊರಿಸುವರು ೩

೩೫೪

ಇವನ ಪಾಲಿಸಿದರೆ ನಿನಗೆ ಪುಣ್ಯ ಪ

ಅವನಿಯೊಳೆಂದೆಂದಿಗೂ ನಾನೆ ಧನ್ಯ **ಅ.ಪ**

ನೆಟ್ಟ ಮುಳ್ಳು ಕಿತ್ತು ಬಿಸುಟಂತೆ ಮಾಡು ।
ಘಟ್ಟಿಯಾಗಿ ಭಕುತನ್ನ ಕಾಪಾಡು ೧

ಸಾಧನ ಪ್ರಾಣಿಗಳಿರಲಿ ಬೇಕು ।
ಆದರದಿಂದಲಿ ಕೇಳೆನ್ನ ವಾಕು ೨

ತ್ರಿಜಗದೊಳಗೆ ನಿನಗ್ಯಾರೆಣೆಯೆ ।
ವಿಜಯವಿಠ್ಠಲ ಕೇಳೆನ್ನ ದೊರೆಯೆ ೩

೩೫೫

ಈ ಪರಿಯಲಿ ಸಲೆ ಸೇವೆಯನು
ಕೊಡು ಕಂಡ್ಯಾ ಹರಿಯೇ ।
ಶ್ರೀಪತಿ ಉತ್ತಮರ ಸಂಗತಿಯಲೆನ್ನಯಿಟ್ಟು ಪ

ಬಂದು ಕುಳ್ಳಿರುವಲ್ಲಿ ಸಿಂಹಾಸನನಾಗುವೆನು ।
ನಿಂದಲ್ಲಿ ಮೆಟ್ಟುವ ಹಾವಿಗೆಯಾಗುವೆ ।
ಮಿಂದ ಬಚ್ಚಲಿಗೆ ಹಚ್ಚಿದ ಶಿಲೆಯಾಗುವೆ ।
ಗಂಧವಾಗುವೆ ನಿನ್ನ ಅಂಗಾಲಿಗೆ ೧

ಉಂಬಲ್ಲಿ ಬಿದ್ದ ಎಂಜಲ ತಿಂದು ಬದುಕುವೆ ।
ಅಂಬು ಶೀತಳವಾಗಿ ಕರವ ತೊಳಿವೆ ।
ಅಂಬುಜ ಕುಸುಮವಾಗಿ ಹಾಸಿಕೆಯಾಗುವೆ ಬಾಯ ।
ದೊಂಬಲಿಗೆ ಕರವಡ್ಡಿ ಛಲ ಹೊರುವೆ ೨

ಪವಡಿಸುವ ಮನೆಯೊಳಗೆ ಸೂಜ್ಯೋತಿಯಾಗುವೆ ।
ಪವಳ ಮಂಚದ ನಾಲ್ಕು ಕಾಲಾಗುವೆ ।
ಪವನ ರಿಪುಗಮನ ಸಿರಿ ವಿಜಯವಿಠ್ಠಲ ।
ಜವನ ದೂತರನೊದದು ಸುಶುಚಿಯಾಗುವೆ ೩

೩೫೬

ಈ ಮಾತುರ ನೀಯದಿದ್ದರೆ ನಿನ್ನ ।
ಧಾಮದಲ್ಲಿಗೆ ಪೋಗಿ ಸೇರಿ ಸುಖಿಪದೆಂತೋ ಪ

ಹುಟ್ಟಿದಾರಭ್ಯದಿ ಹೊಟ್ಟೆ ಬಟ್ಟೆಯಲಿಂದ ।
ಕಷ್ಟ ಬಟ್ಟೆನೆಂದು ಹೇಳಲಿಲ್ಲಾ ।
ಸೃಷ್ಟೇಶ ಕಾಡುವ ಅಷ್ಟ ಮಹಾಮದಗಳ ನಷ್ಟಗೊಳಿಸಿ ನಿನ್ನ ।
ನಿಷ್ಟಿಲಿಡೆಂದಲ್ಲದೆ ೧

ಸತಿ ಸುತರಿಗೆ ಯೇನೋ ।
ಗತಿ ಗೋತ್ರವಿಲ್ಲೆಂದು ।
ಸತತ ನಿನ್ನ ಕೇಳಿ ದಣಿಸಿಲಿಲ್ಲಾ ।
ಪತಿತ ಪಾವನ ಎನಗೆ ಗತಿಯಾಗುವುದಕೆ ।
ಸುಪಥವನೆ ತೋರುವ ।
ಮತಿಕೊಡೆಂದೆನಲ್ಲದೆ ೨

ಕರುಣಿ ಬೇಡಿಕೊಂಬೆ ।
ಉರು ಕಾಲದಲಿ ನಿನ್ನ ।
ಶರಣರ ಸಂಗತಿಲೆನ್ನ ಇಟ್ಟು ।
ಪರಮ ಶುದ್ಧನ ಮಾಡಿ
ವಿಜಯವಿಠ್ಠಲ ನಿನ್ನ ।
ಚರಣಸೇವೆ ನಿರಂತರ ಕೊಡೆಂದೆನಲ್ಲದೆ ೩

೩೫೭

ಉದರ ಪೂರ್ತಿಯ ಕೊಡದಿರು ಉದಧಿಶಯನ ಪ

ಮುದದಿ ನಿನ್ನನು ನೆನೆದು ಮಲಗುವೆನೊ ಸುಖದಿ ಅ.ಪ

ಮುದದಿ ನಿನ್ನ ಚರಣವನು ಸ್ಮರಿಸುವುದು ।
ಪರಿಹಾರವು ಬಹು ಗರ್ವ ಹೆಚ್ಚುವುದು ಎನಗೆ ।
ಅರವಿಂದನಾಭ ಹರಿ ವರವಿದೆ ನಿನ್ನ ಕೇಳ್ವೆ ।
ಪರಿಹಾಸ್ಯ ನುಡಿಯಲ್ಲ ಪರಮ ಪಾವನಗೆ ೧

ತನುಮನವು ನಿನ್ನ ವಿಷಯಕ್ಕೆರಗಲಿ ।
ಅನುಮಾನವಿದ್ದ ಪರಿಯೆಲ್ಲ ತೊಲಗಿ ॥
ವನಜಸಂಭವನೈಯ್ಯ ವೈಕುಂಠಪತಿ ನಿನಗೆ ।
ಅನವರತ ದೊರೆ ಎಂಬೊ । ಘನತೆ ತಪ್ಪದೆ ಇರಲಿ ೨

ಗಜಮದದಿ ಕಂಗೆಟ್ಟ ಪರಿಯನ್ನ ಮಾಡದೇ ।
ಅಜಮಿಳಗೆ ಒಲಿದಂತೆ ಎನಗೆ ವೊಲಿದೂ ॥
ಸುಜನ ರಕ್ಷಕನೆಂಬೊ ಬಿರುದು ಬೇಕಾದರೆ ।
ನಿಜವಾಗಿ ದಯಮಾಡೊ ವಿಜಯವಿಠ್ಠಲನೇ ೩

೩೫೮

ಉದ್ಧರುಸುವದೆನ್ನ ಉದಧಿಶಯನ ।
ಬಿದ್ದೆ ನಿನ್ನಯ ಪಾದ ।
ಪದ್ಮದ್ವಯಕೆಯಿಂದು ಪ

ಅಂದು ನೀ ಪೇಳಿದಂದಲಿ ತೀರ್ಥಯಾತ್ರೆ ।
ನಿಂದರದೆ ಸಂಚರಿಸಿ ಪುಣ್ಯವೆಲ್ಲಾ ।
ತಂದು ನಿನಗರ್ಪಿಸಿದೆ ಕೈ ಕೊಂಡು ।
ಮುಂದೆ ಎನ್ನಗೊಂದು ದಾರಿಯ
ತೋರು ತಡಮಾಡದಲೆ ದೇವಾ ೧

ಯಾತರವ ನಾನು ನರಮನೆ ಗಾಯಕರ
ದೂತರೆಂಜಲನುಂಡು ಬೆಳದ ನರನೋ ॥
ನೋತ ಫಲವಾವದೊ ನೀನೆ ಬಲ್ಲೆಯಾ ಜೀಯಾ ।
ಮಾತು ಮಾತಿಗೆ ಹಿಗ್ಗಿ ನಗುವ ಚನ್ನಿಗರಾಯಾ ೨

ಇಷ್ಟೆನ್ನ ಮನದ ಭೀಷ್ಟೆ ಒಂದೆ ವುಂಟು ।
ಕೃಷ್ಣಾ ಸ್ನಾನ ಕೃಷ್ಣ ಸಂದರುಶನಾ ।
ಕೊಟ್ಟು ಕೇವಲವಾಗಿ ನಿನ್ನಂಘ್ರಿಯಲಿ ರತಿ ।
ಇಟ್ಟು ಭಜಿಸುವಂತೆ ಭಾಗ್ಯವನು ಕೊಡೊವೇಗಾ ೩

ಏನು ಕಡಿಮೆ ನೀನು ಒಲಿದರಾದಡೆ ರಾಮ ।
ಧೇನು ತರುಮಣಿ ಬಾರದೆ ನಿಲ್ಲವೇ ॥
ಶ್ರೀನಿವಾಸನೆ ನಿನ್ನ ।
ನಂಬಿದ ಪಾಪಿಗೆ ಹಾನಿಯಲ್ಲದೆ
ಲೇಶ ಸುಖವು ತೋರದು ದೇವಾ ೪

ವೆಂಕಟಗಿರವಾಸಾ ವೇದ ವಂದಿತ ಚರಣಾ ।
ಶಂಖ ಚಕ್ರಪಾಣಿ ಕರುಣಾಕರಾ ।
ಶಂಖಾಣ ನೃಪವರದ ವಿಜಯವಿಠ್ಠಲ ತಿಮ್ಮ
ಅಂಕದ ಮೇಲಾಡುವ ಬಾಲನೆಂದು ಬಿಡದೆ ೫

೩೫೯

ಎಂತಹದೋ ನಿನ್ನ ಸಂದುರಶನಾ ।
ಕಂತುವಿನ ಜನಕ ಉಡಪಿ ಕೃಷ್ಣರಾಯಾ ಪ

ಪರರ ಓದನ ತಿಂದೆ ।
ಪರರ ದ್ರವ್ಯದ ತಂದೆ ।
ಪರ ಸತಿಯರಿಗೆ ನೊಂದೆ ।
ಗುರು ಹಿರಿಯರ ನಿಂದೆ ।
ಹಿರದಾಗಾಡಿದೆ ಮುಂದೆ ।
ಬರುತಿಪ್ಪ ಪಾಪದಿಂದೆ ।
ಒಂದೆ ಪೋಯಿತು ವಂದೆ
ಪರಿಯಾಗಿ ಈ ಬಂದೆ ।
ಅರುಹು ತೊರದೆ ಬಂದೆ ।
ಕರುಣಿಸು ಜಗದ ತಂದೆ ೧

ಸುಜನರ ಗುಣವ ಹಳಿದೆ ।
ಕುಜನರ ಸಂಗದಲಿ ಬೆಳಿದೆ ।
ಭಜನೆಗೆಟ್ಟು ಸುಳಿದೆ ।
ಪ್ರಜರನು ಪೊಗಳಿದೆ ।
ವ್ರಜ ಪುಣ್ಯಕೋಶ ಕಳಿದೆ ।
ಋಜುಮಾರ್ಗವ ತೊರದುಳಿದೆ ।
ರಜನಿಚರ ಮತಿಗಳಿದೆ ।
ವಿಜಯ ವಾರ್ತೆಗೆ ಮುಳಿದೆ ।
ತ್ರಿಜಗಪತಿ ಕೇಳಿದೆ ೨

ಹರಿವಾಸರವ ಬಿಟ್ಟೆ ।
ದುರುಳರಿಗೆ ಧನ ಕೊಟ್ಟೆ ।
ಹರಿಭಕ್ತರ ತೊರೆದು ಕೆಟ್ಟೆ ।
ಹರಿಶ್ರವಣ ಬಚ್ಚಿಟ್ಟೆ ।
ಪರಮ ವ್ರತವ ಮೆಟ್ಟೆ ।
ಹರುಷದಲ್ಲಿಗೆ ಮನಮುಟ್ಟಿ ।
ದುರ ರಸಕೆ ಸುಖ ಬಟ್ಟೆ ।
ವಿರಕುತಿಯನು ಬಿಟ್ಟೆ ।
ದುರಿತಕ್ಕೆ ಗುರುತಿಟ್ಟೆ ।
ಪರಕೆ ಕಾಣೆನೊ ಬಟ್ಟೆ ೩

ಜ್ಞಾನವೆಂಬೋದೇ ಇಲ್ಲಾ ।
ಏನು ಪೇಳಲಿ ಸೊಲ್ಲಾ ।
ನೀನೆಂಬೋದಿಲ್ಲವಲ್ಲಾ ।
ಹಾನಿ ವೃದ್ಧಿಗಳೆಲ್ಲಾ ।
ನಾನುಂಟೆ ಎಲ್ಲ ಸಲ್ಲಾ ।
ದಾನಾದೆ ಸತತ ಖುಲ್ಲಾ ।
ತಾ ನುಡಿಗೆ ಸೋತು ಚೆಲ್ಲಿ ।
ರಾನಡತಿ ಸಿರಿನಲ್ಲಾ ।
ನಾ ನಡದೆ ನೀ ಬಲ್ಲಾ ।
ದೇ ನೋಡು ಪ್ರತಿ ಮಲ್ಲಾ ೪

ಅಪರಾಧಿ ನಾನಯ್ಯ ।
ಅಪವಾದದವನಯ್ಯ ।
ಕೃಪಣದಿಂದೆನ್ನ ಕಾಯಾ ।
ಉಪಜಯವಾಯಿತು ಪ್ರೀಯಾ ।
ಸ್ವಪನದಿ ಪುಣ್ಯ ಸಹಾಯಾ ।
ಲಪಮಾಡಲಿಲ್ಲ ಜೀಯಾ ।
ಕೃಪೆಯಲ್ಲಿ ಪಿಡಿ ಕೈಯಾ ।
ವಿಜಯವಿಠ್ಠಲರೇಯಾ ।
ಗುಪುತವಾದುದುಪಾಯಾ ।
ತಪಸಿಗಳ ಮನೋಜಯಾ ೫

೩೬೦

ಎಂತು ಗತಿ ಎನಗಾಗುವದೊ ಶ್ರೀ ।
ಕಾಂತ ನಿನ್ನ ಭಕುತಿಯ ಕಾಣೆ ಪ

ಸಂಸಾರ ಎಂಬುದು ಸುಖವೆಂದು ನಾನು ।
ಹಂಸನಂತೆ ನಲಿಯುತ್ತಲಿದ್ದೆ ।
ಕಂಸಾರಿ ನಿನ್ನ ನಾಮಸ್ಮರಣೆ ಒಳ್ಳೆ ।
ವಂಶರ ಕೂಡ ನಲಿಯಲಿಲ್ಲಾ ೧

ಪಾತ್ರರ ಕಂಡರ ಪರಿಹಾಸ್ಯ ಕು ।
ಪಾತ್ರರ ನೋಡಲವರ ಶಿಷ್ಯಾ ।
ಯಾತ್ರೆ ಪೋಗುವದಕ್ಕೆ ಅತಿ ಕ್ಲೇಶ ಎನ್ನ ।
ಗಾತ್ರಗೋಸುಗ ಪೋಗೆ ಬಲು ತೋಷಾ ೨

ವಿರಕ್ತಿ ಕೇಳಲು ತಲೆಶೂಲೆ ವಿ ।
ಹಾರ ಮಾಡುವಲ್ಲಿ ಅನುಕೂಲೆ ।
ವಾರಿಜಾಕ್ಷ ನಿನ್ನ ಕಥೆ ಬಿಡುವೆ ಬಹು ।
ಜಾರುವಾಕರ ಕೂಡ ಸುಖಬಡುವೆ ೩

ಕಾಸು ಪ್ರಾಪುತವಾಗಿ ಬಚ್ಚಿಡುವೆ ಅದೆ ।
ಕಾಸು ಬೇಡಿದರೆ ಪ್ರಾಣವ ಕೊಡುವೆ ।
ಮೋಸ ಬುರುವದು ಕಾಣೆನಲ್ಲಾ ದು ।
ರಾಶೆಯಿಂದಲಿ ಬಾಳಿದೆನಲ್ಲಾ ೪

ನೆಂಟರು ಬಂದರೆ ಹಿಗ್ಗುವೆನೊ
ವೈಕುಂಠದಾಸರು ಬರೆ ಕುಗ್ಗುವೆನೊ ।
ಕುಂಟತನಕೆ ಬಹು ನಲಿದಾಟಾ ಗತಿ ।
ಉಂಟಾದದಕೆ ಉಚ್ಚಾಟ ೫

ತಂದೆ ತಾಯಿಗಳಲ್ಲಿ ವಂಚನೆ ಹೀನ ।
ಮಂದಿಕೂಡಾಪ್ತಾಲೋಚನೆ ।
ಕುಂದು ನುಡಿದೆ ಸಜ್ಜನರಿಗೆ ಆ ।
ನಂದ ಬಡಿಸುವೆ ದುರ್ಜನರಿಗೆ ೬

ಹೆಂಡತಿ ಮುನಿದರೆ ಬೇಡಿಕೊಂಬೆ ಹರಿ ।
ಕೊಂಡರು ಮುನಿದರೆ ಪೋಗಲೆಂಬೆ ।
ಕೊಂಡು ಬಾಹ್ಯನೆ ಪರರವಡಿವೆ ।
ಪರರ ಕಂಡರೆ ಬೇಡವೆಂದು ನುಡಿವೆ ೭

ಮಕ್ಕಳು ಹಸ್ತರೆ ಬಳಲುವೆನೊ ಭೂದೇ ।
ವಕ್ಕಳು ಹಸ್ತರೆ ನಗುವೆನೊ ।
ಮುಕ್ತಿಗಾಗುವ ನಾನಾ ಶ್ರವಣ ನೀಚ ।
ಉಕ್ತಿಗೆ ಮಾಡಿದೆ ಅನುದಿನಾ ೮

ದೇವರ ಮನೆ ದೀಪವೆ ಕಾಣದು ಎನ್ನ
ಜೀವನಕ್ಕೆ ಬೇಕಾದದೆ ಮಾಣಿದು ।
ಕೋವಿದರೊಡನೆ ಆಡುವೆ ಸುಳ್ಳು
ಅಭಾವಾ ಮಾಡೆನು ನೀಚರ ಸೊಲ್ಲು ೯

ಹರಿ ನಿನ್ನ ಶುಚಿಮಾಡೆ ಹೀನ
ನರರ ದೊಂಬಲು ತೆಗಿಯದೆ ಬಿಡೆ ।
ಭರದಿಂದ ಅಗ್ರೋದಕ ತಾರೆ ನೀರು ।
ಹೊರುವೆನೊ ಹಣವೆಂದರೆ ಮಾರೆ ೧೦

ಗಂಡಿಕಿಸಿಲಿ ತೊಳೆಯಲಿ ಮಿಡಿಕಿ ನಾನು ।
ಅಂಡವಲಿವೆ ಅಶನ ಹುಡುಕಿ ।
ಅಂಡಜವಾಹನ ನಿನ್ನ ಸೇವೆ ಕೈ ।
ಕೊಂಡು ಮಾಡದೆ ಪೋದೆ ಹೀಗೆವೆ ೧೧

ಗಂಧವ ತೆಗೆ ಎಂದರೆ ಅಳುವೆ । ಬಿದ್ದ ।
ಮಂದಿರಕೆ ಕದಡುತಳುವೆ ।
ಒಂದು ತುಲಸಿದಳ ತರಲಾರೆನೆಂದು ।
ಸಂದಿಗೊಂದಿ ಸುತ್ತಿದೆನೊ ದೊರೆ ೧೨

ಧೂಪಾರತಿ ಏಕಾರುತಿ ।
ಶ್ರೀಪತಿ ನಿನ್ನ ದಿವ್ಯ ಮೂರ್ತಿ ।
ಪಾಪಾತಿಶಯದಿಂದಾ ನೋಡಲಿಲ್ಲ ಬಹು ।
ತಾಪತ್ರಯದಿಂದ ನೊಂದೆನಲ್ಲಾ ೧೩

ನೈವೇದ್ಯ ತಂದು ಮುಂದಿಟ್ಟು ಸಿರಿ ।
ದೇವನಿಗೆ ಯಿತ್ತು ಸುಖಬಟ್ಟು ।
ಆವಾವ ರುಚಿಗಳ ಭುಂಜಿಸದೆ ನಾನು ।
ಪಾವನಮತಿಯಾಗದೆ ಪೋದೆ ೧೪

ಎಳೆದುಲಸಿ ನಿರ್ಮಾಲ್ಯವಾಸವಾ ॥
ಬಳಿಯಲ್ಲಿಯಿಟ್ಟು ಕೈವಲ್ಯವಾ ।
ಘೊಳಿಸಿಕೊಳ್ಳದೆ ಬಲು ದುರ್ಗಂಧ ಬಂದು ।
ತಿಳಿಯದೆ ಪೋದಿನೊ ಭವ ಬಂಧಾ ೧೫

ಹರಿಕಥೆಗೆ ಮೊಗ ತಿರುಹುವೆನೊ ।
....
ಸ್ಮರಣೆ ಮಾಡುವಲ್ಲಿ ಅತಿ ಹೇಯಾ ದುರಾ ।
ಚರಿತೆಯ ಮಾಡುವಲ್ಲಿ ಬಲು ನ್ಯಾಯಾ ೧೬

ಹರಿದಾಸರನಪ್ಪಿಕೊಳ್ಳದೆ ಪಾ ।
ಮರ ಸತಿಯೊಳನಪ್ಪ ತಾ ಪೊಳದೆ ।
ಧರೆಯೊಳು ನಾನು ನಡಿವಂಥ ಇಂಥಾ ।
ದುರುಳಾಟಕೇನೆಂಬೆ ಗುಣವಂತಾ ೧೭

ನಿನ್ನಂಘ್ರಿಗೆ ಅಡ್ಡಬೀಳದೆ ತುತ್ತು ।
ಅನ್ನಕೆ ಎರಗುವೆ ಸೋಲದೆ ।
ಅನ್ಯಾಯ ಮಾಡುವಲ್ಲಿ ಆನಂದಾ
ಸತಿಸ । ತ್ತುಣ್ಯ ಮಾಡುವಲಿ ನಿಭಂಧಾ ೧೮

ಸಾಧುಗಳೊಡನೆ ತಾಳುವೆ ದ್ವೇಷಾನಿತ್ಯ ।
ಕ್ರೋಧರ ಕಂಡರೆ ಬಲು ಹರುಷಾ ।
ಓದನಕೆ ವೇದವನೋದಿ ತಂದು ।
ವಾದಿಸುವೆನು ಸಭೆಯಲಿ ಕಾದಿ ೧೯

ಸತಿಯಳ ಸಂಬಂಧಿಗಳ ಸಾಕುವೆನೊ ಮಾತಾ ।
ಪಿತರ ಕಡೆಯವರ ನೂಕುವೆನೊ ।
ಖತಿಗೊಂಬೆ ಕರ್ಮ ಮಾಡೋರ ನೋಡಿ ಹೀನ ।
ವಕ್ರದವರು ಕಂಡು ಬಲು ಪಾಡಿ ೨೦

ಔತನವಾದರೆ ಪರಿ ಪರಿ ಹೊಸ ।
ಕೌತುಕ ಪೇಳೂವೆ ನೋಡಿರಿ ।
ಶ್ರಾತಾದಿಗಳು ಎಲ್ಲಿ ಧಿಕ್ಕರಿಸಿ ಯಿಂಥ ।
ಭೌತಿಕ ನೆಚ್ಚಿದೆ ಅನುಕರಿಸಿ ೨೧

ಒಡಿವಿ ಮಾಡಿಸಿ ಮಡದಿಗೆ ಇಡದೆ ಅನ್ಯ ।
ಮಡದಿಯರಿಗೆ ಧನ ಸೂರೆವಿಡಿದೆ ।
ಬಡವರ ಕಂಡರೆ ಅಣಕಿಸುವ ಭಾಗ್ಯ ।
ಪಡದವರಿಗೆ ಬಾಗಿ ನಮಿಸುವೆ ೨೨

ಧರ್ಮಕ್ಕೆ ಅಸೂಯಾ ಬಡುವೆ ಅ ।
ಧರ್ಮಕೆ ಹಿಗ್ಗಿ ಸುಖವ ಬಡುವೆ ।
ನಿರ್ಮತ್ಸರರೊಳು ವೈರತನಾ ದು ।
ಷ್ಕರ್ಮಿಗಳ ಕೂಡಾಮಾನತನಾ ೨೩

ವಿಧಿ ನಿಷೇದವನೆಣಿಸದಲೆ ನಾನು ।
ಉದರ ತುಂಬಿದೆ ಭೀತಿ ಗಣಸದಲೆ ।
ವದಗಿ ಬೀಳುವ ನರಕದ ಬಾಧೆ ಕೇಳಿ ।
ಹದುಳಕ್ಕೆ ಮನಮಾಡದೆ ಪೋದೆ ೨೪

ಯಜಮಾನ ನಾನೆಂದು ಪೇಳಿಕೊಂಡು ದೋಷ ।
ವ್ರಜದಲಿ ಚರಿಸದೆ ದು:ಖವುಂಡು ।
ಸುಜನರಾ ಸಂಗತಿ ಕೊಟ್ಟು ಇಂದು ।
ಕಾಯೊ ವಿಜಯವಿಠ್ಠಲ ಕಾರುಣ್ಯ ಸಿಂಧು ೨೫

೩೬೧

ಎಂತು ನಿಲ್ಲುವೆನು ನಿನ್ನಯ ಬಳಿಯಲ್ಲಿ ।
ಅಂತರಾತ್ಮಕ ಪೇಳು ಎನಗೊಂದು ಹದನಾ ಪ

ವೇದಶಾಸ್ತ್ರವನು ಅರಿಯೆ ।
ಪುರಾಣ ಪುಣ್ಯಕಥೆ ।
ಓದಲಿನ್ನರಿಯೆನೊ ಎಂದೆಂದಿಗೂ ।
ಭೇದ ಭೇದವನರಿಯೆ ।
ಬಾಗಿ ನಮಿಸುವದನರಿಯೇ ।
ಆದರಣಿ ಅರಿಯೆ ಆರಾಧಿನಿಯನರಿಯೆ ೧

ಜ್ಞಾನ ಭಕುತಿಯನರಿಯೆ ।
ಗಮನ ತೀರ್ಥವನರಿಯೆ ।
ಧ್ಯಾನವನು ಅರಿಯೆ ದಾಕ್ಷಿಣ್ಯವನು ಅರಿಯೆ ।
ಮೌನವನು ಅರಿಯೆ ಮಹತಪಸ್ಸು ಮೊದಲೆ ಅರಿಯೆ ।
ಗಾನವನು ಅರಿಯೆ ಗತಿಮತಿಗಳನು ನಾನರಿಯೆ ೨

ಭೂತದಯವನು ಅರಿಯೆ ।
ಬುದ್ಧಿ ಪೂರ್ವಕವರಿಯೆ ।
ಯಾತರ ಸೇವಿ ಅರಿಯೆ ಏನು ಅರಿಯೆ ।
ದಾತಾರ ಜಗದೇಕ ।
ನಾಥ ವಿಜಯವಿಠ್ಠಲ ಪ್ರೀತಿಯಲಿ
ನಿನ್ನ ನಾಮವನುಣಿಸಿಕಾಯೊ ೩

೩೬೨

ಎಂತು ಬಿನ್ನೈಸಲೊ ಮುರಾರಿ ಸಾರಿಗೆ ಸಾರಿ ।
ಸಂತ ಜನರ ಆಧಾರಿ ಪ

ಶ್ಲೋಕ – ಘನ ಅನವರತ ಕಾಯಾ ।
ಸ್ವಾಮಿ ಲಕ್ಷ್ಮೀ ಸಹಾಯ ।
ಅನಿಮಿಷ ಮುನಿಗೇಯಾ ಹೇಯ ಧರ್ಮ ವಿಹಾಯ ।
ಅನಘ ನಗರ ನಿಲಯಾ ।
ಅಮಿತ ಆನಂದ ಕಾಯಾ ।
ನೆನಹಿ ಪಾಲಿಸೋ ಜೀಯಾ ।
ನಾಗ ತಲ್ಪೋರು ಗಾಯಾ ೧

ಪದ – ಶರಣು ಶರಣು ಶಾರಣ್ಯನೆ ।
ಗುಣ ಗುಣ್ಯನೆ ।
ನಮಗಾನನ್ಯನೆ ।
ನಿರುತರಂತರ ಕಾರುಣ್ಯನೆ ಪ್ರದದಾನ್ಯನೆ ।
ಅಪ್ರತಿ ಧನ್ಯನೆ ।

ಪರಮ ಪುರುಷ ಅಸಮಾನ್ಯನೆ ।
ಮಹ ಪುಣ್ಯನೆ ।
ಪ್ರಳಯ ಕನ್ಯೆನೆ ।
ಕರುಣ ಸಾಕ್ಷಿಗನೆ ಲಾವಣ್ಯನೆ ।
ಅನುಗಣ್ಯನೆ ಪ್ರಾಕೃತ ಶೂನ್ಯನೆ ೧

ಶ್ಲೋಕ – ಪರಿಪರಿ ಹೇಯ ಗಾತ್ರಾ ತೆತ್ತನೊ ಇಷ್ಟ ಮಾತ್ರಾ ।
ಚರಿಸಿದೆ ವಿಷಯ ಯಾತ್ರಾ ।
ಪಾರಗಾಣೆನೋ ಮಿತ್ರಾ ।
ಕೊರಳಿಗೆ ಮಮತೆ ಸೂತ್ರಾ ।
ಉರುಲು ಬಿದ್ದಿದೆ ಚಿತ್ರಾ ।
ಸುರಕು ಬಿಡಿಪ ತನುತ್ರಾ ।
ಆವನೋ ಕಮಲ ನಿನೇತ್ರಾ । ೨

ಪದ – ನರಕ ನರಕ ಉಂಡು ಬೆಂದೆನೊ ।
ಇಲ್ಲಿ ನಿಂದೆನೊ ।
ಗತಿಗೆ ಮುಂದೇನೊ ।
ಕುರುಡ ಕಿವುಡನಾಗಿ ನೊಂದೆನೊ ।
ಇನ್ನೊಂದೇನೊ ।
ಉಪಾಯವಂದೆನೊ ।
ಮರಹು ಸಾಗರದೊಳು ಸಂದೆನೊ ।
ಅಂದು ಹಿಂದೆನೊ ।
ಸುಜನರಿಗಂದೇನೊ ೨

ಶ್ಲೋಕ – ಸುಲಲಿತ ರುಚಿರಪಾಂಗಾ ।
ಶುದ್ಧ ಸ್ವಭಾವ ರಂಗಾ ।
ಪಲಿಪರಮಾಣು ಸಂಗಾ ।
ಪಾವನ ಕೋಮಲಾಂಗಾ ।
ವೊಲಿಸಿದವರ ಭಂಗಾ ।
ಪರಿಸುವ ಶಿಂಗ ಶಿಂಗಾ ।
ವರಬಲಗುಣ ತರಂಗಾ ।
ಸರಸಿಜ ಹೃತ್ತುಂಗಾ ೩

ಪದ – ಚಿಂತಿಸುವೆನೊ ನಿನ್ನ ವಿಗ್ರಹಾ ।
ಮನೋನಿಗ್ರಹಾ ।
ವಾಗಲಿ ಅನುಗ್ರಹಾ ।
ಸಂತತ ಎನಗಿದೆ ಸಂಗ್ರಹಾ ।
ದೇಹವೈಗ್ರಹಾ ।
ದುರುಳರ ಪ್ರತಿ ಗ್ರಹಾ ।
ಮುಂತೆ ಕೈಕೊಂಬ ದುರಾಗ್ರಹಾ ।
ಯೈವ ವಿಗ್ರಹಾ ।
ಮಾಣಿಸು ಶಿರಿಗ್ರಹಾ ।
ಸಂತೈಸು ಕರುಣವಾರುಣಗ ಅನಿಗ್ರಹಾ ೩

ಶ್ಲೋಕ – ನವನೀತ ಚೋರಾ ಗೋಪಿ ವಸ್ತ್ರಾಪಹಾರಾ ।
ಲವ ಲವ ಕಾಲ ಧಾರಾ ।
ಕಂಸದಾನವ ಸಂಹಾರಾ ।
ಧ್ರುವ ಬಲಿಕರಿ ಉದ್ಧಾರಾ ।
ನಾನವತಾರ ಧೀರಾ ।
ಪವನ ಮನಮಂದಿರಾ ಪಾಲಿಸೊ ವಾರಂ ವಾರ ೪

ಪದ – ವಿಜಯನಗರಾಧೀಶ ಸರ್ವೇಶಾ ।
ಮಣಿಮಯ ಭೂಷಾ ।
ಸೂರ್ಯ ಕೋಟಿ ಪ್ರಕಾಶಾ ।
ತ್ರಿಜಗದೊಳಗೆ ನೀನೆ ನಿರ್ದೋಷಾ ।
ಶಕ್ತಿ ವಿಶೇಷಾ ।
ಐಶ್ವರ್ಯ ವಿಲಾಸಾ ।
ಋಜುಜ್ಞಾನ ಕೊಡುವದೊ ಮನೋತ್ತರಿಸಾ ।
ಮಂಜುಳ ಭಾಷಾ ।
ಭೂದಾ ರಜವಾಸಾ ।
ವಿಜಯವಿಠ್ಠಲ ನಿರ್ಜರ ಕೋಶಾ ।
ಹೃದಯ ಕಾಶಾ ।
ನಾಮಕ ಮಹಿದಾಸಾ ೪

೩೬೩

ಎಂತು ಮರುಳಾದೆ ನೀ ಯದಿಯ ಬಿಗುವಿನಲಿ ತಿರುಗಿ ।
ಪಂಥದಲ್ಲಿ ಕೆಡಲಿಬೇಡ ಎರಡು ದಿನ ।
ಸಂತೆ ನೆರೆದಂತೆ ಮೂಢ ಇಪ್ಪದಿದು ।
ಸಂತತ ತೊರೆದು ಬಾಡೊ ಪ್ರಾಣಿ ಪ್ರಾಣಿ ಪ

ವಿಂಚುಗೂಳನು ತಿಂದು ಮನೆ ಮನೆಗಳು ತಿರುಗಿ ।
ಸಂಚಿತಾರ್ಥವ ತಿಳಿಯದೆ ಮರುಳಾದ ।
ಪಂಚೇಂದ್ರಿಯಂಗಳನು ಅಳಿಯದೆ । ಬಂದ ಪರ ।
ಪಂಚವನು ನೀ ಕಳಿಯದೆ ವ್ಯರ್ಥಾಯ ।
ವಂಚನಿಂದಲಿ ನಡೆದು ಬಾಯಿ ತೆರೆದು । ಹಲ್ಲನು ।
ಹಂಚಿಕೆ ತೋರಿದಂತೆ ಮೃತ್ಯುವಿನ ।
ಪಂಚದಲಿ ಸೇರಿದಂತೆ । ಆಗುವುದು ।
ಕಂಚು ಕೆಳಗೆ ಬಿದ್ದಂತೆ ಪ್ರಾಣಿ ೧

ನುಗ್ಗು ನುಸಿಯಾಗದಿರು । ನೂಕು ನಿನ್ನಹಂಕಾರ ।
ಹಿಗ್ಗದಿರು ಈ ಬದುಕಿಗೆ ಎಂದಿಗೂ ।
ಕುಗ್ಗದಿರು ಈ ಮಲಕಿಗೆ ವೊಳಗಾಗಿ ।
ಮುಗ್ಗದಿರು ಈ ಬಲಕಿಗೆ ಸ್ಥಿರವಾಗಿ ।
ಬಗ್ಗು ನಡೆವಳಿ ನಡೆದು ।
ವೆಗ್ಗಳದ ನಡೆವಳಿ ನಡೆದು ।
ವೆಗ್ಗಳದ ಧರ್ಮದಾ ಸುಗ್ಗಿಯಲಿ ದಿನವ ಹಾಕೊ ।
ಬಿಡು ಬಿಡು ಅಗ್ಗಳಿಕೆತನವೆ ।
ಸಾಕು ಆವಾಗ ತೆಗ್ಗಿಕೊಂಡಿರಲಿ ಬೇಕು । ಪ್ರಾಣಿ ೨

ಇನ್ನಾದರೂ ಕೇಳು । ಪುಣ್ಯವಂತರ ಕೂಡು ।
ನಿನ್ನವರು ನಿನಗೆ ದಾರೊ ।
ಕಣ್ಣಾಗೆ ಎಣ್ಣೆ ಬಿದ್ದಂತೆ ಸಾರೊ ಬಾಯಿಂದ ।

ಬೆನ್ನಿಗೆ ಬಂದ ವಿಚಾರೊ ತುದಿಯಲಿ ।
ಮಣ್ಣು ಮಣ್ಣನೆ ಕಲಿತು ಹೋಗುವುದು ನಿಶ್ಚಯವು ।
ಚೆನ್ನಾಗಿ ಎಚ್ಚೆತ್ತುಕೋ ಈ ಮಾತಿಗೆ ।
ಖಿನ್ನನಾಗುವದೇತಕೊ ಸಾವಿರಕು ।
ಮುನ್ನಿಲ್ಲವೊ ಮನಸಿತೊ ಪ್ರಾಣಿ ೩

ವೇದಶಾಸ್ತ್ರವನರಿಯೆ ಆದಿಪುರಾಣಗಳು ।
ಓದುಬರವೆಂದನ್ನದಿರೂ ಅದ್ವೈತ ।
ವಾದವರ ಕೂಡದಿರು ಇದೆ ಮಿಗಿ
ಲಾದರು ಮರಿಯದಿರು ಉತ್ತಮ ।
ಸಾಧನಗತಿಗೆ ಸಿರಿ ವಿಜಯವಿಠ್ಠಲನ ಶ್ರೀ ।
ಪಾದವನು ಒಂದೇ ಭಕ್ತಿಯಿಂದಲಾ ।
ರಾಧಿಸು ಇದಕೆ ಯುಕ್ತಿ ಕಡಿಯದಲೆ ।
ಮಾಧವನು ಕೊಡುವ ಮುಕ್ತಿ ಪ್ರಾಣಿ ೪

೩೬೪

ಎಂದಿಗಾಹುದೋ ನಿನ್ನ ದರುಶನ ।
ಇಂದಿರೇಶ ಮುಕುಂದ ಕೇಶವ ಪ

ಗಾನಲೋಲನೆ ದೀನವತ್ಸಲ ।
ಮಾನದಿಂದಲಿ ನೀನೆ ಪಾಲಿಸೋ ೧

ಯಾರಿಗೆ ಮೊರೆ ಇಡುವೆ ಶ್ರೀ ಹರಿ ।
ಸಾರಿ ಬಂದು ನೀ ಈಗಲೆ ಪೊರಿ ೨

ಗಜವ ಪಾಲಿಸೊ ಗರುವದಿಂದಲಿ ।
ಭುಜಗಶಯನ ಶ್ರೀ ವಿಜಯವಿಠಲಾ ೩

೩೬೫

ಎಂದಿಗ್ಯಾಹೋದೋ ನಿನ್ನ ದರುಶನ ಪ

ವೇಳೆ ತಪ್ಪದೆ ಊಳಿಗವನು ಧ್ಯಾನ
ಮಾಳ್ಪ ನಿನಾಳುಗಳ ಸಂಗ ೧

ನಿನ್ನ ಮೂರ್ತಿಗಳ್ಧ್ಯಾನ ಮಾಡುವ
ಉನ್ನಂಥಾ ಗುಣಯೆನ್ನ ಸೇರ್ವದೋ ೨

ತ್ರಿಜಗವಂದಿತ ಕುಜನನಿಂದಿತ
ಭುಜಗಶಯನ ಶ್ರೀ ವಿಜಯವಿಠ್ಠಲನೇ ೩

೩೬೬

ಎನಗ್ಯಾರು ಗತಿಯಿಲ್ಲ ನಿನಗ್ಯಾರು ಸರಿಯಿಲ್ಲ ।
ಎನಗೆ ನಿನಗೆ ನ್ಯಾಯ ಪೇಳುವರಿಲ್ಲ ಪ

ಒಂದುಗೂಡಿಲಿ ಬಂದು ಒಂದು ಕ್ಷಣ ವಗಲದೆ ।
ಯೆಂದೆಂದು ನಿನ್ನ ಪಾದ ಪೊಂದಿರಲೂ ॥
ಬಂದ ವಿಷಯಂಗಳಿಗೆ ಯೆನ್ನನೊಪ್ಪಿಸಿ ಕೊಟ್ಟು ।
ನೀನಂಧಕನಂತೆ ನೋಡುವದುಚಿತವೆ ರಂಗಾ ೧

ಪರಸತಿಯರ ಕೂಡಿದರೆ ಪರಮ ಪಾತಕವೆಂದು ।
ಪರಿ ಪರಿಯ ನರಕಗಳ ನಿರ್ಮಿಸಿರುವಿ ॥
ಪರಸತಿಯರೊಲುಮೆ ನಿನಗೊಪ್ಪಿತೆಲೋ ದೇವಾ । ನಿನ್ನ ।
ದೊರೆತನಕಂಜಿ ನಾ ಶರಣೆಂಬೆನಲ್ಲದೇ ೨

ನಿನ್ನಾಜ್ಞಧಾರನಾಗಿ ನಿನ್ನ ಪ್ರೇರಣೆಯಿಂದ ।
ಅನೇಕ ವಿಧಕರ್ಮಗಳ ಮಾಡುತಿರುವೇ ॥
ಯೆನ್ನಪರಾಧಗಳ ವರ್ಣಿಸಲಾಗದೊ । ದೇವ ।
ಪನ್ನಂಗಶಯನ ಶ್ರೀ ವಿಜಯವಿಠಲನೇ ೩

೩೬೭

ಎನ್ನ ಪಾಲಿಸುವುದಾನಂತ ಶಯನ ।
ಚನ್ನ ಗರುಡವಾಹನಾ ।
ಇನ್ನು ನಿನ್ನಯ ಪಾದವನ್ನೆ ಸೇರಿ ಕೌಂಡಣ್ಯ।
ಮುನಿಗೊಲಿದನಂತ ಗುಣಾರ್ಣವಾ ಪ

ದೇವಾ ನಂಬಿದವರ ನೋವ ಕಳೆದು ಬಿಡದೆ ।
ಕಾವ ಬೇಡಿದ ವರವ ನೀವ ಮೂರು ।
ಭುವನ ಜೀವ ವಿಮಲರಾ ।
ಜೀವ ನಯನ ವಸುದೇವ ದೇವಕಿತನು ।
ಭವನೆ ಭವದೂರ ದುರ್ಜನ ಸಂಹಾರ ।
ದೇವತಾ ವರ ಸಂಜೀವಾ ಪ್ರಭಾವಾ ೧

ಸೂರ್ಯಕೋಟಿ ಪ್ರಕಾಶಾ । ಚಾರ್ಯನಾ ನಾಯಕಾಧೀಶಾ ।
ಧೈರ್ಯವುಳ್ಳ ಸರ್ವೇಶಾ । ಕಾರ್ಯರೊಳು ವಿಶೇಷಾ ।
ಕಾರ್ಯವಂತನೆ ಈಶಾ । ತುರ್ಯಮಹಿಮಾ ಸುರ
ವರ್ಯ ಮನ್ಮಥನಯ್ಯಾ ।
ಮರ್ಯಾದಿಯಲಿ ಬಲು । ವೀರ್ಯದಲಿ ಮತಿ ।
ಧಾರ್ಯನ ಮಾಡೋದು । ನಿರ್ಯಾಣ ಸಮಯಕ್ಕೆ ೨

ಬಂದು ಮತ್ಸ್ಯಾದಿ ತೀರ್ಥ । ಬಂದು ಬಲು ಸಮರ್ಥ ।
ನೆಂದು ಬೇಡಿದೆ ಪುರುಷಾರ್ಥ । ಇಂದು ಕರುಣಿಸು ಕರ್ತಾ ।
ಬೆಂದು ಪೋಗಲಾರ್ಥ । ಮುಂದುಣಿಸು ಸುಧಾರ್ಥ ।
ತಂದು ನೀನೆ ಮುಕ್ತಾರ್ಥ । ಬಂದು ವೈತಿರುವಾ
ನಂದು ರೂಪವನೆ । ಸಿಂಧುಶಯನ ಆ
ನಂದ ವಿಜಯವಿಠ್ಠಲೆನ್ನ ಪಾಲಿಸೋ ೩

೩೬೮

ಎನ್ನಲ್ಲಿ ಅವಗುಣ ಶತಸಾವಿರವಿರೆ ।
ಅನ್ಯರ ಕರೆದಾನು ನಡತೆ ಇದೇನೆಂಬೆ ಪ

ವೇದವನೋದಿದೆ ಪರರಿ । ಗಾದರಿಸಿ ಮುಕುತಿಗೆ ।
ಸಾಧನೆ ಇದೆ ಎಂದು । ಹಾದಿಯವರಿಗೆ
ಭೋದಿಪೆನಲ್ಲದೆ ನಾನು । ಕ್ರೋಧ ಬಿಟ್ಟೆವನಲ್ಲ
ಹಾದರಹಳು ನಾರಿ । ಮಾದಿಗನ ಪೋದಂತೆ ೧

ಧನದಾಸೆಯಿಂದ ಸಾಧನವಾಗದೆಂದು ।
ಜನರಿಗೆ ಉಪದೇಶವನು ಮಾಡುವೆ ।
ಮನೆ ಮನೆಯ ತಿರು ಮಾತಿನ ಬಣ್ಣವಲ್ಲದೆ ।
ತೃಣ ಹತ್ತದಿದ್ದ । ವಧನರಾಶಿ ಕದ್ದಂತೆ ೨

ರಸನೇಂದ್ರಿಯಗಳ ಬಂ । ಧಿಸಬೇಕೆಂದು ನಾನು ।
ಉಸುರುವೆ ಅಲ್ಲಲ್ಲಿ ಕುಶಲನಾಗಿ ।
ಹಸನಾಗಿ ಹೇಯ ಬ । ಯಸುವೆನು ಅಮೃತ ।
ರಸವಲ್ಲೆನೆಂದಾವ ಮುಸುರಿಯ ಮೆದ್ದಂತೆ ೩

ಒಡಿವೆ ವಸ್ತುಗಳು ಸಂಗಡ ಬಾರವು ಮಮತೆ ।
ಬಿಡು ಸಂಸಾರವಿದು ಕಡಿಗೆ ಭವದ ।
ಮಡವು ಸಿದ್ಧವೆಂದು ನುಡಿವೆನೊ ಪರರಿಗೆ ।
ಯಡಹಿಯೊ ಎಂದಾವ ಗಿಡನೇರಿ ಬಿದ್ದಂತೆ ೪

ಭಕುತಿ ಕೂಡಿದ ವಿರಕುತಿ ಲೇಶವಿಲ್ಲಾ ।
ಯುಕುತಿ ಬಾಯಲಿ ನಾರಕಕೆ ಸಾಧನಾ ।
ಲಕುಮಿವಲ್ಲಭ ನಮ್ಮ ವಿಜಯವಿಠ್ಠಲ ನಿನ್ನ ಅ ।
ರ್ಚಕನಾಗಿ ಬದುಕತಕ್ಕದ್ದು ಮಾರ್ಗವ ತೋರೊ ೫

೩೬೯

ಎಲೆ ಮನ ಮುರಾರಿಯನು ಕೊಂಡಾಡು ಪ

ಸಾಧನಕಿದು ಉಪಾಯ ನೋಡು ಅ.ಪ

ಕಾಲನ ದೂತರ ಕಾಲಿಗೆ ಬಿದ್ದರೆ ।
ನಾಳೆಗೆ ನಿಲುವರೆ ನೋಡು ೧

ಮಂದಿಯ ಮಾತಿಗೆ ಎಂದೆಂದು ಮರುಗದೆ ।
ಮುಂದಿನ ಗತಿ ನೀ ನೋಡು ೨

ರಾಜೀವ ಮುಖಿಯರ ಸೋಜಿಗ ಮೆಚ್ಚದೆ ।
ವಿಜಯವಿಠಲನ ಪಾಡೋ ೩

೩೭೦

ಎಲ್ಲೊ ಎಲ್ಲೊ ಎನ್ನ ಸಾಲವೆತ್ತದೊ ।
ನಿಲ್ಲೊ ನಿಲ್ಲೊ ನಿನ್ನ ಕಂಡ ಮ್ಯಾಲಕೆ ಬಿಡೆ ಪ

ಮೀನ ನಡೆದ ಹೆಜ್ಜೆಗಳು ಕಾಣದಂತೆ ಪೋಗಿ ನಡಗಿದೆ ।
ಬೆಟ್ಟದಡಿಯ ಅಂದು ಒಡನೆ ಮಣ್ಣುಕಚ್ಚಿ ಬಾಯಿದೆರದು ಆ ।
ರ್ಭಟಿಸಿದರೆ ನಿನ್ನ ಪೋಗಗೊಡುವೆವೇನೊ ೧

ಬಲು ಉದ್ದ ಬೆಳೆದರೆ ನ್ಯಾಯದಿ ಸೋಲಿಸಿ ।
ಹೆಗ್ಗಲಿದಾ ಗಿಡದ ಬೇರು ಕಡಿಸುವೆನೊ ।
ಕಲಕಾಲಾ ಉಪವಾಸ ಮಾಡಲು ನಮಗೇನು ।
ಕಳವು ಹಾದರದಲ್ಲಿ ನಿಸ್ಸೀಮ ಪುರುಷನೇ ೨

ಮಾಣಿಯ ತೋರಿಸಿದರೆ ನಿನಗಾರುರಂಜೋರೋ ।
ಪಾಣಿಯೊಳಗೆ ಖಡ್ಗ ಇದ್ದರಂಜೆ ।
ಕಾಣಿ ಪಾದಿದ್ದರೆ ಹಿಂದೆ ಸುಮ್ಮನಿದ್ದೆ ।
ಜಾಣತನವೇನೊ ವಿಜಯವಿಠಲ ಇಂದು ೩

૩೭೧

ಏಕಾಂತದಲಿ ಬಂದು ಮಾತು ನುಡಿದೆ ಶ್ರೀ ।
ಕಾಂತ ನಿನಗಿದು ಸುಲಭವಾಗಿದೆ ನೋಡು ಪ

ಪರಧನವನಪಹರಿಸಿಕೊಂಡು ಬೆಳೆದು ಇದ್ದ ।
ವರ ಮನೆಯೊಳಗಡಲೇತಕೆ ।
ನಿರುತ ಎನ್ನ । ಹೃದಯವೆಂಬೊ ಗಾಡಾಂಧಕಾರ ।
ಭರಿತವಾಗಿದೆ ಇಲ್ಲಿ ಅಡಗಬಾರದೆ ಬಂದು ೧

ಕೇವಲ ಹಕ್ಕಲದ ವನದೊಳು ಪೊಕ್ಕು ಬೇಟೆ ।
ದೇವ ಆಡುವರೆ ನೀ ಹುಡಿಕಿ ಹುಡಿಕಿ।
ಕಾವಲಾರಣ್ಯ ಇಲ್ಲಿ ವಿಂಡೂ ತುಂಬಿದೆ ।
ಸಾವಧಾನದಿ ಬೇಟೆ ಆಡಬಾರದೆ ಬಂದು ೨

ವೈಕುಂಠ ಮೂರು ಸ್ಥಾನದಲಿ ಮುಕ್ತರಿಗೆ ।
ಬೇಕಾದದೀಯಾಬೇಕು ಕಡಿಮೆ ಇಲ್ಲಾ ।
ನೀ ಕೇಳು ಎನ್ನಲ್ಲಿ ಸರಿ ಬಂದಂತೆಯಲ್ಲದೆ ।
ವಾಕು ಪೇಳುವೆ ನಿಲ್ಲು ವಿಜಯವಿಠ್ಠಲ ಬಂದು ೩

૩೭೨

ಏನು ಕಾರಣ ಮತಿಯಿಲ್ಲ ಮನವೆ ಪ

ಹೀನಾಯವಾಡದಿರು ಪರರ ಗುಣಗಳ ಎಣಿಸಿ ಅ.ಪ

ಅವನ ಗೊಡವೆಯೇಕೆ ಅವನಾರು ನೀನಾರು ।
ಅವನ ಪಾಪಕ್ಕೆ ನೀ ಭಾಗಾದಿಯೆ ।
ಅವನುತ್ತಮನಾದಡವನೆ ಬದುಕಿದ ಕಾಣೊ
ಅವ ಪುಣ್ಯಮಾಡಿದರೆ ಅವನ ಕುಲ ಉದ್ಧಾರ ೧

ನಿನಗೆ ಕೊಡುವುದರೊಳಗೆ ಬೇಡ ಬಂದವನಲ್ಲ ।
ನಿನಗೆ ಅವನಿಗೆ ಏನು ಸಂಬಂಧವೊ ।
ಮನೆ ಒಡವೆ ವಸ್ತುಗಳ ಹಂಚಿಕೊಂಬುವುದಲ್ಲ ।
ಕ್ಷಣ ಕ್ಷಣಕೆ ಕ್ಲೇಶವನು ಮಾಡಿಕೊಂಬುದು ಸಲ್ಲ ೨

ನಿನ್ನ ಗತಿ ಮಾರ್ಗಕ್ಕೆ ಅವನಡ್ಡ ಬಾಹನೆ ।
ನಿನ್ನಿಂದ ಪರಲೋಕ ಅವನಿಗುಂಟೆ ।
ನಿನ್ನೊಳಗೆ ನೀ ತಿಳಿದು ವಿಜಯವಿಠ್ಠಲನ್ನ ।
ಸನ್ನುತಿಸಿ ಭವರೋಗ ಬನ್ನವನು ಕಳೆಯೊ ೩

೩೭೩

ಒಲಿದವಳ ಬಿಡುವುದು ಧರ್ಮವಲ್ಲ ।
ಚಲುವ ನಿನಗಾಗಿ ನಾ ಯೇಸು ಕಾಲಕೆ ತಪವಿದ್ದೆ ಪ

ತಂದೆತಾಯಿಗಳಲ್ಲಿ ಪುಟ್ಟಿದಾಕ್ಷಣದಲ್ಲಿ ।
ಅಂದೆ ನೇಮಿಸಿದರು ಪೆಸರನಿಟ್ಟು ।
ಸಂದೇಹಗೊಳದಿರು ಮೈಲಿಗೆಯವಳೆಂದು ।
ಬಂದ ಪ್ರಾಣವ ನೋಡು ಬರಿದೆ ಪೇಳುವಳಲ್ಲ ೧

ಕನ್ಯಾವಸ್ಥೆಯಲಿಂದ ನಿನ ನಿನ್ನ ಧ್ಯಾನವಲ್ಲವೇ ।
ಅನ್ಯಪುರುಷರಾಪೇಕ್ಷೆ ಮಾಡಲಿಲ್ಲ ।
ಅನ್ಯಾಯವೇನು ಆಗಲಿ ಪೋಗುವರೇನೊ ।
ಅನ್ಯಥಾ ಈ ನುಡಿಗೆ ನಿಜಕೆ ನಿಲ್ಲುವೆ ನಾನು ೨

ಮಲದಲ್ಲಿ ಮೂರುದಿನ ಪೋಗಾಗಿ ಹೋಗಿದ್ದೆ ।
ಬಲು ಶುಚಿಯಾದೆನೊ ಶುದ್ಧ ಜಲದಿ ।
ಘಳಿಗೆ ಕಡೆದರೆ ಎನ್ನ ಪ್ರಾಣನಿಲ್ಲವೊ ।
ಎನ್ನನಗಲಿ ಮೈ ತಪ್ಪಿಸಿ । ದೂರ ಕರೆದೊಯ್ಯೊ ಕರುಣದಲಿ ೩

ನಗೆಗೇಡಿ ಮಾಡದಿರು ಜಗದೊಳಗೆ ಇಪ್ಪವಳ ।
ಸೊಗಸಿಗನೆ ಸರಸವಾಡುವನೆ ಬಾರೊ ।
ಮಗುಳೆ ಮತ್ತೊಬ್ಬರು ಮೆಚ್ಚಿದರೆ ಇದೆ ಪಾಟು ।
ಮಗುಳೇನು ಹೊಸ ಪರಿಯು ತೋರುವುದು ನೋಡಿದರೆ ೪

ಕಂಡ ಕಾಣದ ಹಾಗೆ ಮಾತನಾಡಿದಿರೆನ್ನ ।
ಅಂಡೊಲಿವ ಖ್ಯಾತಿ ಎಂದಿಗೆ ತೀರದೂ ।
ಕುಂಡಲಿಗಿರಿವಾಸ ವಿಜಯವಿಠ್ಠಲ ವೆಂಕಟ ।
ಹಿಂಡು ಬಂಧುಗಳಿದ್ದರೇನು ಮಾನವನು ತೊರೆದೆ ೫

೩೭೪

ಒಳ್ಳೇದೋ ಒಳ್ಳೇದೋ ಎಲ್ಲ ಸ್ಥಳವ ಬಿಟ್ಟು ।
ಇಲ್ಲಿ ಅಡಗಿದ ಬಲ್ಲಿದ ತನವೇ ಪ

ಬಿಡೆ ಬಿಡೆನೊ ಎನ್ನ ಒಡಿಯ ತಿರುಮಲ ನಿನ್ನ ।
ಉಡಿಯ ಪೀತಾಂಬರ ಪಿಡಿದು ನಿಲಿಸಿಕೊಂಬೆ ೧

ಎರವು ಎರವು ಮಾಡಿ ತಿರುಗಿಸಿದಿ ನೀ ಎನ್ನ
ಕೊರಳಿಗೆ ನಿನ್ನ ಚರಣ ಕಟ್ಟಿಕೊಂಬೆ ೨

ಅತ್ತ ಇತ್ತಲಿ ನೋಡಿನೆತ್ತ ಪೋಗಲಿ ಎನ್ನ ।
ಚಿತ್ತದಲಿ ನಿನ್ನ ಹತ್ತೆಗಟ್ಟಿಕೊಂಬೆ ೩

ಅತ್ತಿಯ ಮಕ್ಕಳಿಗೆ ತೆತ್ತಿಗ ನೀನಾಗಿ ।
ವಿತ್ತವಿತ್ತದರಾದ ರಾಸಿ ಸಿರಿಯಲ್ಲಿ ೪

ಇರಳು ಹಗಲು ಬಿಡದೆ ಗುರು ಪುರಂದರಗೊಲಿದೆ ।
ಬಿರಿದು ಏನೊ ಇಷ್ಟು ವಿಜಯವಿಠಲಾ ೫

೩೭೫

ಕಂಗೆಡದಿರು ಮನವೆ
ಕಂಗೆಡದಿರು ಒಡನೊಡನೆ ನೆರೆದು ಬಂದು ಪ

ಜನಕೆ ಗ್ರಾಸವೆಂತಹುದೆಂದು
ಅನುಮಾನ ಹಚ್ಚಿಕೊಂಡು
ಬಡವಾಗದಿರೆಲೆ ಆಲೋಚನೆ ಮಾಡು
ನಿನ್ನೊಳಗೆ ತಿಳಿದು ಮರಳಿ ಮರಳಿ
ಘನಮಹಿಮ ನಾರಾಯಣ ಅನಾದಿ ಸ್ವಾಭಾವಿಕ
ಚಿನುಮಯ ಸತ್ಯಸಂಕಲ್ಪ ದೇವ। ೧

ಇನಿತು ಜೀವಿಗಳಿಗೆ ಕಾಲಕಾಲಕೆ
ತೃಣ ಮೊದಲಾದ ಗ್ರಾಸ ಮಾಡಿಯಿಪ್ಪಾ
ಕ್ಷಣಮಿರಗೊಡದೆ ಆವಲ್ಲಿಯಿದ್ದರೂ
ವುಣಿಸುವ ಉಚಿತವನ್ನೆ ತಿಳಿದು ನೋಡಿ
ದಿನ ದಿನಕೆ ಅಧಿಕವಿಲ್ಲಾ ತತ್ಪೂರ್ವ ಚೇತನಕೆ
ನಿರ್ಮಾಣ ಮಾಡಿದಂತೆ ಬೊಮ್ಮಾ ೨

ಫಣೆತಿಯಲ್ಲಿ ಬರೆದಿರುವ ಆಯು: ಕರ್ಮವಿದ್ಯಾ
ಧನ ನಿಧಾನನೆನೆಸಿ ಶ್ರೀಹರಿಯ ಆಜ್ಞಾದಿ
ಜನಿಸುವಾಗಲೆ ಅವರವರವಾಡಿಪನಾ

ಕೊನೆಯ ಸೆರಗಿನಲಿ ಕಟ್ಟಿಹನೋ
ನಿನಗೆ ಕಾಣಬಾರದೋ ಪದಶಾಸ್ತ್ರಗಳಿಂದೆ
ಗುಣಿಸಿ ನೋಡಿದರೆ ಕಾರುಣಿಕವಹುದೊ ೩

ಅಣುಮಾತ್ರನಿಂ ನಿಂದಾ ಆಗುವಾ ಶೌರ್ಯವೇನೋ
ಅನುಭವಕೆ ತಂದುಕೊಂಡು ಗ್ಲಾನಿಯಾಗೋ
ಮಿನುಗು ಚಿಂತೆಗಳಿಂದಾ ಬರುವ ಲಾಭವೇ ಕಾಣೆ
ತನುವ ಶೋಷಿಸಿ ವಿರೋಧಾವಾಗಿ ಕೊಂಬೆ
ಧನವಂತಾ ಸಿರಿ ನಮ್ಮ ವಿಜಯವಿಠಲರೇಯಾ
ಮನುಜಾದಿ ದೇಹಿಗಳಿಗೆ ಸ್ವಾಮಿಯಾಗಿಪ್ಪನೋ

೩೭೬

ಕಮಲಸಂಭವ ನಾಸಿಕ । ಸಂಭವ ಕಾಯೊ
ನಮಿಸುವೆ ನಿನಗೆ ನಾನು ಪ

ಅಂದು ಧರಣಿ ಜಲ ವಂದಾಗಿ ಕರಗಿರೇ ।
ನಂದನ ಚಿಂತಿಸಿ ಬಂದ ವರಹಮೂರ್ತಿ ೧

ಮಧು ಪಾನಾವವ ಸಾ । ದದು ಅವನ ಚರ್ಮ ।
ಹೊದಿಸಿ ಹೆಪ್ಪುಗೊಟ್ಟು ಮೇದಿನೆಂದಿಸಿದೆ ೨

ಕನಕಲೋಚನ ಭೂಮಿಯನು ಕದ್ದು ಮೈಯಲು ।
ಅನಿಮಿಷರೊಲಿಸೆ ಅವನ ಕೊಂದುದ್ಧರಿಸಿದೆ ೩

ಕರುಣಾಕಟಾಕ್ಷದಿ ಹೊರವಲ್ಲಿ ನಾನೆಲ್ಲಿ ।
ಸರಿಗಾಣೆ ನಿನಗೆ ಅಂತರ ಬಹಿರದೊಳು ೪

ರಜೋಭಿಮಾನಿಯ ವಡಿಯಾ ಸುಜನಪಾಲಾ ।
ಭುಜಗ ಗಿರಿಯ ವಾಸಾ ವಿಜಯವಿಠ್ಠಲಾಧೀಶಾ ೫

೩೭೭

ಕರುಣಿಸೋ ಕೃಷ್ಣ ಕರುಣಿಸೊ ।
ಕರುಣಿಸಿದರೆ ನಾ ನಿನ್ನನೆಂದಿಗು ಮರೆಯ ಪ

ಭೂತಳದೊಳು ನಾನು ಈ ತನುವುತೆತ್ತು ।
ಪಾತಕದಲಿ ಯಮಯಾತನೆ ಪಟ್ಟೆ ೧

ಇಂದೆನ್ನ ಹೃದಯವೆಂಬೊ ಮಂದಿರದೊಳು ।
ಬಂದು ವಾಸವಾಗೊ ಇಂದಿರೆ ರಮಣ ೨

ಹಿಂದಿನ ಅವಗುಣ ಒಂದೂ ಎಣಿಸದೆ ।
ಮುಂದೆ ದೋಷಕ್ಕೆ ಮನವೆರಗಿಸದೆ ೩

ಪಾಪ ಪುರುಷನೆಂಬೊ ಪಾಪಿಯ ಕೈಗೆ ।
ಪೋಪಗೊಡದೆ ಎನ್ನ ಕಾಪಾಡೊ ರನ್ನ ೪

ಅಂತ್ಯಕಾಲದಲಿ ಅಂತಕರು ಬಂದು ।
ನಿಂತಾಗಲಿ ನಿನ್ನ ಚಿಂತೆ ಒದಗಲಿ ೫

ಕನಸಿನೊಳಗೆ ನಿನ್ನ ನೆನಸಿಕೊಂಬಂತೆ ।
ಮನಸು ಸುಸ್ಥಿರವಾಗಲಿ ಅನುಗಾಲವಿರಲಿ ೬

ಇದ್ದಾಗ ದಾಸರದಾಸನೆನಿಸೊ ಬೇಗ ।
ಅಬ್ಧಿಶಯನ ಸಿರಿ ವಿಜಯವಿಠ್ಠಲ ಕರುಣಿಸೊ ೭

೩೭೮

ಕೂಗಿದರು ಧ್ವನಿ ಕೇಳದೆ ಶಿರ ।
ಬಾಗಿದರು ದಯ ಬಾರದೆ ಪ

ಭೋಗಿಶಯನ ಭುವನಾಧಿಪತೇ ನಿನ್ನ ।
ಆಗಮನವೆಂದಿಗೆ ಆಗುವುದು ಪ್ರಭೊ ಅ.ಪ

ಭಕ್ತರಿಗೊಲಿದವ ನೀನು ಖರೆ ಎ।
ನ್ನತ್ತ ನೋಡುವುದು ದೊರೆ ॥
ಚಿತ್ತವಧಾನ ಪರಾಕು ಮಹಾಪ್ರಭು ।
ಎತ್ತಣ ರಥವನು ಎತ್ತಿ ಬಾ ನೀಡು ದೊರೆ ೧

ಸಿಂಧುಶಯನ ಶೇಷಾದ್ರಿ ವರ ಸಿರಿ ।
ಮಂದಿರ ಭಕ್ತ ಕುಟುಂಬಧರ ॥
ಸುಂದರ ಮೂರುತಿ ಒಂದಿನ ಸ್ವಪ್ನದಿ ।
ಬಂದು ಪದದ್ವಯ ಚಂದದಿ ತೋರಿಸೊ ೨

ಕರುಣಾ ಶರಧಿಯು ನೀನಲ್ಲವೇ ಕೃಷ್ಣ ।
ಶರಣಾಗತರಿಗೆ ದೊರೆಯಲ್ಲವೆ ॥
ಮೊರೆಹೊಕ್ಕವರಿಗೆ ಮರೆಯಾಗುವರೆ ।
ಸರಿಯೆ ಜಗದೊಳು ವಿಜಯವಿಠ್ಠಲರೇಯಾ ೩

೩೭೯

ಕೃಷ್ಣ ಎನಗೆ ಬಂದರಿಷ್ಟವ ಕಳೆದು ನಿನ್ನ
ನಿಷ್ಠೆಯಲಿ ಇರುವಂತೆ ಇಷ್ಟೆ ಮಾತುರವೀಯೋ ಪ

ನಿರ್ದೋಷ ಗುಣವಾರುಧಿ
ನಿರ್ಧಾರವಾಗಿ ನುಡಿವೆ
ಸಿದ್ಧಾಂತ ಮತದಲಿ ಪೊದ್ದಿಪದೆ ಸಾಕು ೧

ಅಜ ಭವಾದ್ಯರು ನಿನ್ನ
ಭಜಿಪರಾರು ದೋಷ
ವ್ರಜದ ಮಾನವ ತಿಳಿದು ಭಜಿಸಬಲ್ಲೆನೆ ದೇವಾ ೨

ಮಧ್ವ ಸರೋವರದಲ್ಲಿ
ಇದ್ದು ಪೂಜೆಯಗೊಂಬ
ಮುದ್ದು ವಿಜಯವಿಠಲ ಬಿದ್ದೆ ನಿನ್ನಯ ಪದಕೆ ೩

೩೮೦

ಕೃಷ್ಣ ಕೃಷ್ಣ ಬಾಂಧವ ಸೃಷ್ಟ್ಯಾದಷ್ಟ ಕರ್ತ
ದೃಷ್ಟನಾಮಕ ಭವ ನಷ್ಟವಗೈಸೋದು
ಅಷ್ಟರೊಳಗೆ ಹರಿ ವಿಷ್ಣು ಸರ್ವೋತ್ತಮ
ಇಷ್ಟೆ ಪೇಳುವದಕೆ ನಿಷ್ಟೆಯನೀಯೊ ಪ

ಈ ಸುದಿನವಾರಭ್ಯ ಕ್ಲೇಶದೊಳಗೆ ಬಿದ್ದಾ
ಯಾಸ ಬಡುತಲಿದ್ದೆ ಲೇಶವಾದರು ಸುಖ
ಲೇಶಗಾಣದಿರಲು ಏಸು ಜನ್ಮದ ಪುಣ್ಯ
ಸೂಸಿತೋ ನಿನ್ನಯ ದರುಶನ ಲಾಭವಾಗೆ
ದೇಶದೊಳಗೆ ನಿನ್ನ ದಾಸರ ದಾಸನೆನಿಸಿಕೊಂಬ
ಈ ಸುಲಭ ವೊಂದಿಸನುದಿನ ದು
ರಾಶೆಯ ಬಿಡಿಸೆಂದು
ನಾಶರಹಿತ ಗುಣರಾಶಿ ರಮೇಶ . ೧

ವೇದಪರಾಯಣ ಸಾಧುಗಳರಸಾ ವಿ
ನೋದಿಗಾ ಪಳ್ಳಿಗನೆ ಆದಿದೈವವೆ ತೀರ್ಥ
ಪಾದ ಜಗತ್ಯೆಂತ ಭೇದಾ ಶೃಂಗಾರ ವೇಣು
ನಾದ ಸನಕಾದಿ ಮುನಿವಂದಿತಾ
ಮಾಧವ ಮಹಿಧರ ಯಾದವ ಕರುಣ ಪ

ಯೋಧದಿ ಎನ್ನಪರಾಧವನೆಣಿಸದೆ
ಸಾಧನ ಕೆಡಿಸುವ ಕ್ರೋಧವ ಬಿಡಿಸಾರಾಧನೆ ತಿಳಿಯದು
ಭೂದೇವರೊಡಿಯಾ ೨

ಕರವಾ ಬಿಡದಿರೆನ್ನ ಕರಣ ಶುದ್ಧವ ಮಾಡು
ಕರದ ಮಾತಿಗೆ ಭಯಂಕರವ ಓಡಿಸಿ ಮಂದ
ಕರಿಯ ಕಾಯಿದ ಶುಭಕರ ಕಾಳಿ ಮಥನ ಸಂ
ಕರ ಪಾಲಾ ನಿತ್ಯ ಚಾಮಿ ಕರ ರತುನ ಭೂಷಿತ
ಕರಡಿಸುತಿಯ ಪತಿ ಕರಸಿದ ಹರಿನಿಶಕರ
ಕುಲ ರತುನಾ ಕರಕೆ ಉಡುಪ ಮಕರಧ್ವಜಪಿತ
ಶಿರಿ ವಿಜಯವಿಠ್ಠಲ ಪದ ಕರದು
ತೋರಿಸೊ ಭಜಕರರೊಳಗಿಡುವುದು ೩

೩೮೧

ಕೃಷ್ಣಾ ನಿನ್ನ ಕನಿಷ್ಟ ಪೊಳವ ವುಂ
ಗುಷ್ಟ ಭಜಿಸುವ
ನಿಷ್ಠ ಜನರ ಉಚ್ಚಿಷ್ಟ ಎನಗದು
ಮೃಷ್ಟಾನ್ನವಾಗಲಿಷ್ಟೇ ಬೇಡಿದೆನೊ ಪ

ನರಲೋಕದ ಸುಖ ಪರಿಪರಿಯಲ್ಲಿ
ಅರಿದೆನದರೊಳು
ಪರಮ ಸೌಖ್ಯ ಎಳ್ಳರೆ ಅನಿತಿಲ್ಲ
ಬರಿದೆ ಜನನ ಮರಣ ಪರಿಯಂತಾ
ಅರಸಿ ನೋಡಲು ದುರಿತ ವಾರುಧಿ
ಧರೆಯೊಳಗೆ ನಿಂದಿಸಲಾರೆ ಸಾಕು
ಶರಣು ಹೊಕ್ಕೆನು
ಕರುಣಪಾಂಗನೆ ಕರವಿಡಿದು ಸಲಹೋ ೧

ಆವುದುಂಟದು ದೇವ ಮಾಣಿಸು
ಈ ವರವ ಕೊಂಡು ನಾ ಒಂದನು ವಲ್ಲೆ
ಭಾವಶುದ್ಧ ವಾಕ್ಯವೆ ನಿಶ್ಚಯವೊ
ಬೇವು ಬೆಲ್ಲವೆ
ನೋವು ಬಯಿಪ ಮಾನವ ನವ ಮುಕ್ತಾ ನೀ
ಕಾವ ನೈಯನೆ
ಕಾವ ಜೀವ ನಿನ್ನಂಘ್ರಿ ಸೇವೆ ಸಂಪದವೊ ಜಗತ್ರಯವ ೨

ಹಡಗದೊಳಗಿಂದ ತಡಿಯದೆ ಬಂದಾ
ಕಡಗೋಲ ನೇಣ ಪಿಡಿದ ಪಡುವಲಾ
ಗಡಲ ತೀರದ ಉಡುಪಿನಲಿ ನಿಂದ
ಅಡಿಗಡಿಗೆ ಪೂಜೆ
ಬಿಡದೆ ಯತಿಗಳಿಂ
ದೊಡನೆ ಕೈಕೊಂಬ ಸಡಗರುಳ್ಳ
ಉಘಡ ವಿಜಯ ವಿಜಯವಿಠ್ಠ
ಲೊಡಿಯ ಭಕ್ತರ ಬಿರುದಿನ ಕಡು ಸಾಹಸಮಲ್ಲ ೩

೩೮೨

ಕೊಡುವವನು ನೀನು ಕೊಂಬುವನು ನಾನು ಪ

ಬಡಮನದ ಮನುಜನ ಬೇಡಿ ಫಲವೇನು ಅ.ಪ

ಹದಿನಾರು ಹಲ್ಲುಗಳ ಬಾಯ್ದೆರದು ಬೇಡಿದರೆ
ಇದು ಸಮಯವಲ್ಲೆಂದು ಪೇಳಿ ತಾನು
ಮದನ ಕೇಳಿಗೆ ನೂರನೊಂದಾಗಿ ನೋಡುವನು
ಮದಡ ಮಾನವನೇನು ಕೊಡಬಲ್ಲ ಹರಿಯೆ ೧

ಗತಿಯಲ್ಲವೆಂತೆಂದು ನಾನಾ ಪ್ರಕಾರದಲಿ
ಮತಿಗೆಟ್ಟು ಪೊಗಳಿದರೆ ಅವನು ತನ್ನ

ಸತಿಸುತರ ಕೇಳಬೇಕೆಂದು ಮೊಗ ತಿರುಹುವ
ಅತಿ ದುರುಳ ಮತ್ತೇನು ಕೊಡಬಲ್ಲ ಹರಿಯೆ ೨

ಹೀನ ವೃತ್ತಿಯ ಜನರಿಗಾಸೆಯನು ಬಡುವದು
ಗಾಣದೆತ್ತು ತಿರುಗಿ ಬಳಲಿದಂತೆ
ಭಾನು ಕೋಟಿ ತೇಜ ವಿಜಯವಿಠ್ಠಲರೇಯ
ನೀನಲ್ಲದನ್ಯತ್ರ ಕೊಡುಕೊಂಬುರಂಟೆ ೩

೩೮೩

ಗೋಪಾಲವಿಠ್ಠಲ ನಿನ್ನ ಪೂಜೆ ಮಾಡುವೆನು
ಕಾಪಾಡೊ ಈ ಮಾತನು ಪ

ಅಪರಾ ಜನುಮದಲಿಡುವನೆ ಮ್ಯಾಲೆ
ನೀ ಪ್ರೀತಿಯನು ಮಾಡಿ ನಿಜದಾಸರೊಳಿದು ಅ.ಪ

ಶ್ರುತಿಶಾಸ್ತ್ರ ಪುರಾಣ ಮಿಕ್ಕಾದ ಗ್ರಂಥಗಳ ಸತತ ಅಭ್ಯಾಸ ಮಾಡಿ
ಮಿತಿಯಿಲ್ಲದಲೆ ತೀರ್ಥಯಾತ್ರೆ ನಾನಾ
ದಾನ ವ್ರತಗಳನೆ ಬಿಡದೆ ಮಾಡಿ
ಮತಿಯಲ್ಲಿ ನಿಮ್ಮಯ ಸ್ತೋತ್ರಗಳ ಗೈದುನ್ನ
ತೋಪಾಸನಗಳನು ಮಾಡಿ
ಹಿತ ಪುಣ್ಯದಿಂದವಗುಪದೇಶವನು
ಮಾಡಿದೆನು ಚ್ಯುತಿದೂರ ನಿನ್ನ ಕೊಂಡಾಡಿದೆ ೧

ಜ್ಞಾನವೆ ಭಕುತರಿಗೆಯಿತ್ತು ಯಥಾರ್ಥದಲಿ
ಕ್ಷೋಣಿಯೊಳಗೆ ನಡಿಸುತ
ಮಾನವರೊಳಗಿದ್ದು ವಿಚಿತ್ರವನು ತೋರಿ
ಮೇಣು ಧನ್ಯನ್ನ ಮಾಡು
ಮಾಣದಲೆ ಈ ಪರಿ ಕೀರ್ತಿ ತುಂಬಿರಲಾಗಿ
ಧ್ಯಾನದಲಿ ಅಮರರಿಗೆ ಬೆಡಗುಗೊಳಿಸುವ ದೇವಾ ೨

ಅಂಕಿತವ ನಾನಿತ್ತೆ ನಿನ್ನ ಪ್ರೇರಣೆಯಿಂದ
ಕಿಂಕರಗೆ ಲೌಕಿಕದ ಡೊಂಕು ನಡತೆಯ ಬಿಡಿಸಿ
ಮಂಕು ಜನುಮ ಜನುಮದಲ್ಲಿದ್ದ ಪಂಕವಾರವ ತೊಲಗಿಸಿ
ಶಂಕೆ ಪುಟ್ಟದಂತೆ ಕಾವ್ಯಗಳ ಪೇಳಿದದು
ಸಂಕಟಗಳಟ್ಟಿಧಾರಿಗೆ ವೆಂಕಟ ಕೃಷ್ಣನು
ನೀನೆ ವಿಜಯವಿಠ್ಠಲಯೆಂದು
ಅಂಕುರವ ಪಲ್ಲೈಸಿ ಫಲಪ್ರಾಪ್ತಿಯಾಗದೊ ೩

೩೮೪

ಚರಣವ ತೋರೈ ಚಲುವರಸನೇ
ಚರಣವ ತೋರೈ ಪ

ಸ್ಮರಣೆಮಾತ್ರದಲಿ ಮುಕುತಿಯ ಕೊಡುವ ಚರಣವ ತೋರೈ ಅ.ಪ

ರಮ್ಮೆಯ ಮನಕೆ ಬೆಡಗು ತೋರುವ ಚರಣ
ಬೊಮ್ಮಾದಿಗಳ ಮನಕೆ ನಿಲುಕದ ಚರಣವ ತೋರೈ
ಚಿಮ್ಮಿ ರಾವಣನ ಬಲು ದೂರಗೈದ ಚರಣವ ತೋರೈ
ಘಮ್ಮನೆ ಮೊಸರು ಮೆದ್ದು ಓಡುವ ಚರಣ ತೋರೈ ೧

ಗೋಕುಲ ಭೂಮಿಯ ಪಾವನ ಮಾಡಿದ ಚರಣವ ತೋರೈ
ಲೋಕವನೆಲ್ಲಾ ಅಡಗಿಸಿಕೊಂಡಾ ಚರಣವ ತೋರೈ
ಬೇಕೆಂದು ಕುಬುಜಿಯ ಮನೆಗೆ ಪೋದ ಚರಣವ ತೋರೈ
ನೂಕಿ ಭವಾಬ್ಧಿ ಬತ್ತಿಸಿ ಬಿಡುವಾ ಚರಣವ ತೋರೈ ೨

ಬಿಡದಲೆ ಸರ್ವಜ್ಞತೀರ್ಥರಿಗೊಲಿದಾ ಚರಣವ ತೋರೈ
ಒಡವರಾಧಾರ ದಿವ್ಯಭೂಷಣವಿಟ್ಟು ಚರಣವ ತೋರೈ
ಕಡು ಮುದ್ದು ಸಿರಿಕೃಷ್ಣ ವಿಜಯವಿಠ್ಠಲ ನಿನ್ನ ಚರಣವ ತೋರೈ
ಉಡುಪಿಯ ಸ್ಥಳದಲಿ ನಿಂದು
ಪೂಜೆಯಗೊಂಬ ಚರಣವ ತೋರೈ ೩

೩೭೫

ಚಿಂತೆ ಮಾಡುವುದ್ಯಾಕೆ ಮನವೆ ನೀನು
ಪಿಂತೆನ್ನೆಸಗಿದ ಕರ್ಮ ಎಂದಿಗಾದರೂ ಬಿಡದು ಪ

ಮಗನಾರು ನೀನಾರು ಪೇಳೊ ಸಿದ್ಧ
ನಿಗಮಾರ್ಥಗಳಿಂದ ಸಜ್ಜನರ ಕೇಳೊ
ತಗಿದು ಕಳಿ ಶೋಕದ ಗೋಳು ನಿತ್ಯ
ನಗಧರನ ಭಕ್ತಿಯಲಿ ಸುಖದಲ್ಲಿ ಬಾಳೋ ೧

ಸಾಹನಶಕ್ತಿಯನ್ನು ಮಾಡೊ ಬರಿದೆ
ಸ್ನೇಹ ಮಾಡಿದರಿಂದ ಜ್ಞಾನಕ್ಕೆ ಕೇಡು
ತಾಹಾದು ಸ್ಥಿರವೆಂದು ನೋಡೊ ನೀನೂ
ಮಾಹಪದವಿಗೆ ಬಂದೆ ಸುದೃಢವೆ ಬೇಡು ೨

ವಿರಕ್ತಿ ತೊಡು ತೊಡು ಬಿಡದೆ ಎಂದು
ಸಾರಿದೆ ಪೇಳಿ ಧರ್ಮದಲಿನ್ನು ನುಡಿದೆ
ವಾರವಾರಕೆ ಹೀಗೆ ಕೆಡದೇ ಶ್ರಿಂ
ಗಾರ ಶ್ರೀ ವಿಜಯವಿಠ್ಠಲಲೆನ್ನು ದು:ಖಬಡದೆ ೩

೩೭೬

ಛೀ ಹಳಿ ಥೂ ಖೋಡಿ ಪಾಪಿ ಮನವೆ, ನಿನ್ನ ಪ

ಕುಹಕ ಬುದ್ಧಿಗಳೆಲ್ಲ ಬಿಡು ಕಂಡ್ಯ ಮನವೆ ಅ.ಪ

ಬಣ್ಣದ ಬೀಸಣೆಗ್ಯಂತೆ ಹೆಣ್ಣು ತಿರುಗೋದ ಕಂಡು
ಕಣ್ಣು ಸನ್ನೆಯಮಾಡಿ ಕೈ ಹೊನ್ನು ತೋರಿ
ತಣ್ಣೀರು ಹೊಯಿದ ಹೊಸ ಸುಣ್ಣದಂತೆ ಕುದಿದು ನಿನ್ನ
ಕಣ್ಣಿಗೆ ಮಣ್ಣು ಚೆಲ್ಲಿಕೊಂಬರೆ ಮನವೆ ೧

ನೆರೆಹೊರೆ ಮನೆಗಳಲಿ ಪ್ರಸ್ಥವನ್ನು ಮಾಡಿದರೆ
ಕರೆಯದಲೆ ಮೊದಲ್ಹೋಗಿ ಹಾಳು ಹರಟೆ
ಬಡಿಗಂಟು ಸುದ್ದಿ ನೂರಾರು ಹೇಳಿ ಅವರ
ಹಿರಿಯ ಮಗನಂತೆ ಉದರವ ಪೊರೆವೆ ಮನವೆ ೨

ಉತ್ತಮಾನ್ನವ ನೀಡೆ ಮುಸುರೆ ಬಯಸುವಂತೆ
ಚಿತ್ತದೊಲ್ಲಭನ ಸಂಗಡದಿ ನಲಿದು
ಮತ್ತೆ ಉಪರತಿಗೆ ಪರಪುರುಷನ ಬಯಸುವ
ತೊತ್ತು ಬುದ್ಧಿಯನೆಲ್ಲ ಬಿಡು ಕಂಡ್ಯ ಮನವೆ ೩

ಪಗಡೆ ಚದುರಂಗ ಕವಡೆಯನಾಡ ಕರೆದರೆ
ನಿಗುರುವುವು ಕರ್ಣಗಳು ಮೊಚ್ಚೆಯಂತೆ
ಜಗದೀಶನ ದಿನದಿ ಜಾಗರಕೆ ಕರೆದರೆ
ಮುಗಿಲ್ಹರಿದು ಬಿದ್ದಂತೆ ಧರೆಗಿಳಿವೆ ಮನವೆ ೪

ವಾಸುದೇವನ ಪೂಜೆಯೊಮ್ಮೆ ಮಾಡೆಂದರೆ
ಬೇಸತ್ತು ತಲೆಯ ಚಿಟ್ಟಿಕ್ಕಿ ಕುಳಿತೆ
ಆ ಸಮಯದೊಳಗೊಬ್ಬ ಕಾಸು ಕೊಟ್ಟೇನೆನಲು
ದಾಸಿ ಮಗನಂತೆ ಬೆನ್ನಟ್ಟಿ ಪೋದೆ ಮನವೆ ೫

ಕುಳ್ಳಿರುವ ಸ್ಥಳವೆಷ್ಟು ಕೂಳು ತಿಂಬುವುದೆಷ್ಟು
ಉಳ್ಳನಕ ಕೀರ್ತಿಯಪಕೀರ್ತಿಯೆಷ್ಟು
ಗುಳ್ಳೆಯಂದದ ದೇಹನೆಚ್ಚಿ ನೀ ಕೆಡಬೇಡ
ಉಳ್ಳಿಪರೆ ಸುಲಿದರೆ ಹುರುಳಿಲ್ಲ ಮನವೆ ೬

ಬಿಂದು ಮಾತ್ರವೊ ಸುಖವು ದುಃಖ ಪರ್ವತದಷ್ಟು
ಸಂದೇಹವಿಲ್ಲವಿದು ಶಾಸ್ತ್ರಸಿದ್ಧ
ಎಂದೆಂದು ಸಿರಿಯರಸ ವಿಜಯವಿಠ್ಠಲನಂಘ್ರಿ
ಕುಂದದೆ ಹೃದಯದೊಳು ನೆನೆಕಂಡ್ಯ ಮನವೆ ೭

೩೮೭

(ಉದಯರಾಗ)[1]

ಜನಿಸಲಾರೆನು ಜಗದೊಳಗೆ ಹರಿಯೆ ಪ

ಕನಸಿನೊಳು ನೆನೆಯೆ ಕಂಪನವಾಗುತಿದೆ ಮನಕೆ ಅ.ಪ

ವಾರಿಮಂಡಲ ವೃಷ್ಟಿಧಾರೆ ಧಾರುಣಿ ಜನಕ
ದ್ವಾರದಿಂ ಸರಿದುಪೋಗಿ–ಸಾಗಿ
ಜಾರಿ ಜನನೀ ಜಠರ ನಾರುವ ದುರ್ಗಂಧ
ಸೇರಿ ಬೊಬ್ಬುಳಿಯ ತೆರದಿ–ಭರದಿ
ವಾರಿವಾರಕೆ ಬೆಳೆದು ತಾರಿತಗಲಿ ಬಳಲಿ
ಶರೀರವನ್ನೆ ಪೊತ್ತು–ತೆತ್ತು
ಖಾರ ಕಟು ಲವಣಾದಿ ಘೋರತರ ಮಹಕ್ಲೇಶ
ವಾರಿಧಿಯೊಳಗೆ ಮುಳುಗಿ ಮರುಗಿ ಸೊರಗಿ ೧

ಲೇಶಾವಕಾಶವಿಲ್ಲದ ದೇಶದೊಳು ಸನ್ನಿ
ವಾಸ ಉಲ್ಬಣದೊಳಿದ್ದು–ಕುದ್ದು
ಘಾಸಿಯಲ್ಲಿ ಪರಿತಾಪ ಸೂಸಲು ಹಾಹಾಯೆಂಬ
ಘೋಷಧ್ವನಿಯಿಂದ ಬೆದರಿ–ಅದರಿ
ರೋಷವಾಗಿದ್ದ ಕ್ರಿಮಿರಾಶಿ ಮುಖ ಕಾಟದಿಂ
ಏಸು ಬಗೆಯಿಂದ ನೊಂದು ಬೆಂದು
ಶ್ವಾಸ ಬಿಡುವುದಕೆ ವ್ಯತ್ಯಾಸವಾಹುದು ಮುಂದೆ
ಮೋಸಗೊಂಡು ಮತಿಗೆಟ್ಟು ಬೇಸರಿಕೆ ಅಕಟಕಟ ೨

ಜಾನು ಮಧ್ಯದಲಿ ಶಿರಗೋಣು ತೂರಿಸಿಕೊಂಡು
ಮಾಣದಲೆ ಬಿಕ್ಕಿ ಬಿಕ್ಕಿ–ಸಿಕ್ಕಿ
ಏನೆಂಬೆ ಮಸೆದುಕ್ಕಿನ ಬಾಣ ಪೆಟ್ಟಿನ ಸಮ–
ಬೇನೆಯಿಂದಧಿಕವಾಗೆ ಮೈಗೆ
ಮೇಣು ಕೈಕಾಲುಗಳು ಕಾಣಿಕಾ ಕಾಲವಗ–

ಲಾನು ಚರಿಸದಾದೆನೊ ಇನ್ನೇನೊ
ಗಾಣ ತಿರುಗಿದಂತೆ ಗೇಣು ಬೈಲೊಳಗೆ ಈ
ಆ-ನನ ಮೇಲಡಿಯಾಗಿ ಬಂದೆ-ನೊಂದೆ ೩

ಸೂತಿಕಾಮರುತ ಬೀಸಿದಾತುರಕೆ ಬೆಸಸುವ
ಯಾತನೆಗೆ ಕಾಣೆ ಲೆಖ್ಖ-ದು:ಖ
ಗಾತುರವು ಕಿರಿದಾಗಿ ಪೋತಭಾವವ ವಹಿಸೆ
ಭೂತಳಕೆ ಉಗ್ಗಿಬಿದ್ದು-ಎದ್ದು
ಶೀತೋಷ್ಣ ಮಲರೋಗ ಭೀತಿ ಲಾಲನೆಯಿಂದ
ಮಾತೆಯ ಮೊಲಿಯನುಂಡು-ಉಂಡು
ಆ ತರುವಾಯ ಉಪನೀತ ವಿವಹಗಳಲ್ಲಿ
ಖ್ಯಾತನಾಗೀ ವಿಷಯ ವ್ರಾತ ಕೈಕೊಂಡೆನಯ್ಯ ಜೀಯ ೪

ಯೌವನದಿ ಚತುರ್ವಿಂಶತಿ ತತ್ವಜ್ಞಾನವ ಜರಿದು
ಯುವತಿಯರ ರೂಪಲಾವಣ್ಯ ನೋಡಿ-ಬಾಡಿ
ನೆವನೆವದಿ ಭೋಗಗಳ ಸವಿ ಸವಿದಿಪೇಕ್ಷಿಸಿ
ಭವನ ಭವನವನು ಪೊಕ್ಕು -ಸೊಕ್ಕು
ಅವರಿವರ ಜಾತಿಯೆನ್ನದೆ ಮಾತುಗಳನಾಡಿ
ದಿವರಾತ್ರಿಯಲ್ಲಿ ಹೊರಳಿ-ಉರುಳಿ
ಕವಿಜನರ ಧಿಕ್ಕರಿಸಿ ಕೋಣನಂತೆ ಸದಾ
ಆವಧಿಯಿಲ್ಲದೆ ಕಾಲ ಕಳೆದೆ ಉಳಿದೆ ೫

ಹೆಂಡ್ರು ಮಕ್ಕಳಿಗಾಗಿ ಎನ್ನ ಹಿತಮನೆ ಮರೆದು
ಕಂಡಕಂಡವರ ಕಾಡಿ-ಬೇಡಿ
ಉಂಡುಟ್ಟು ಸುಖಪಟ್ಟು ಪಾರತ್ರಯವ ಜರೆದು
ಕೊಂಡೆಯಲಿ ನಿಪುಣನಾಗಿ ತೂಗಿ
ಮಂಡೆಯನು ಬಲಿತ ಪಶುವಿನಂತೆ ಮದವೇರಿ
ಚಂಡ ವೃತ್ತಿಯಲಿ ನಡೆದು-ನುಡಿದು
ಹಿಂಡು ಮಾತೇನು ಈ ಜರೆನರೇ ಬಂದೆನ್ನ
ಲಂಡತನ ಪೋಗದಕಟ್ಟ-ಉಂಬೆ ವಿಕಟ ೬

ನಾನಾ ಯೋನಿಗಳಲ್ಲಿ ಬರಲಾರೆ ಬರಲಾರೆ
ನಾನು ಪೇಳುವುದು ಏನೋ–ಇನ್ನೇನೊ
ನೀ ನೋಡಿದರೆ ಅನ್ಯ ಕಾವ ದೈವರ ಕಾಣೆ
ಮಾನಸದೊಳಗೆ ಒಮ್ಮೆ–ಇಮ್ಮೆ
ದೀನರಕ್ಷಕ ಬಿರುದು ಅನವರತ ನಿನ್ನದು
ಎಣಿಸದಿರು ಎನ್ನ ದೋಷ ಲೇಶ
ಶ್ರೀನಾಥ ವಿಜಯವಿಠ್ಠಲರೇಯ ನೀನೊಲಿದು
ಧ್ಯಾನದಲ್ಲಿ ಬಾರೊ ನಿಜ ಮೂರುತಿಯ ತೋರೊ ೭

೩೮೮

ತುತ್ತನ್ನವ ನಮಗಿಂದು ನೀಡಿರಮ್ಮಾ ನಾನು
ಹತ್ತು ಸಾರೆ ಬಾರದಲೆ ತೊಲಗೆನಮ್ಮ ಪ

ನಿರಾಧಾರಾದಿ ನಿದ್ರೆ ಬಾರದಮ್ಮ ವಿ
ಚಾರಿಸು ತಾಯಿ ಪಾಲುವಲ್ಲೆನಮ್ಮ
ಧಾರುಣಿ ಸಂಬಂಧ ಎನಗಾಗದಮ್ಮ ಇದಕ್ಕೆ
ಸಾರಿ ಸಾರಿಗೆ ಬಾಯಿ ತೆರೆವೆನಮ್ಮ ೧

ದೇಹಿ ಎಂಬೊದೆನ್ನ ಜಾತಿಧರ್ಮವಮ್ಮ ನಾನು
ದ್ರೋಹಿಗಳಿಗೆ ಕರ ಚಾಚೆನಮ್ಮ
ಆಹಾರಕ್ಕೆ ಬಲುದಿನ ಮೀರಿತಮ್ಮ ಸಂ
ದೇಹವಿಲ್ಲದೆ ನಾರೇರು ಬಡಿಸಲಮ್ಮ ೨

ಇದೇ ಕೇಳಿದೆನು ಇನ್ನು ಮೌನವಮ್ಮ ಬಲು
ಸದಮಲ ಜ್ಞಾನಿಗಳಿಗೆ ಪ್ರೀತಿಯಮ್ಮ
ಮಧುಹರಿ ವಿಜಯವಿಠ್ಠಲ ಪೂರ್ಣನಮ್ಮ ಸರ್ವರ
ಹೃದಯದೊಳಗಾನಂದವಾಸನಮ್ಮ ೩

೩೮೯

ತೋರೊ ನಿನ್ನಯ ಮೂರ್ತಿಯ
ತೋರೊ ನಿನ್ನ ಮೂರ್ತಿ ಬೀರೊ ಹೃದಯವೆಂಬೊ
ನೀರಜಹಾದೊಳಗೆ ಸಾರೋ ಸಾರಿ ಸಾರಿಗೆ ಸೇರೊ
ಬಾರೊ ಬಾರೊ ಪರಿವಾರದೊಡನೆ ಮನಸೂರೆಗೊಡುವೆ ಕಂ
ಸಾರಿ ಮುರಾರಿ ಪ

ತುಂಬೆ ವಿಶ್ವಮಾಯಾದ ಬೊಂಬೆ ನಾಮ ಪೀಯೂಷ
ಉಂಬೆ ಸೇವೆಯ ಕೈಕೊಂಬೆ ಅನ್ಯರ ನಂಬೆ
ಕಾಂಬೆ ನಮಿಸಿ ಪಾಲಿಸೆಂಬೆ ಕಾಲಿಗೆ ಮನ
ದುಂಬೆ ದಂತೆ ಎರಗಿ ಅಂಬೆ ಪಿಡಿವಾಕೊಂಬೆ
ನಂಬಿದೆ ನಂಬಿದೆ ಅಂಬುಜಾಕ್ಷ ನೀ
ನೆಂಬದು ಸುರನಿಕರಂಬ ಹಂಬಲಿಸಲು
ದಿಂಬಾಗಿ ಕರ್ಣಾವಲಂಬನವಾಯಿತು
ಇಂಬಿಡು ಪ್ರಾಜ್ಞನೆಂದೆಂಬ ಮೂರುತಿಯಾ ೧

ಸ್ನಾನ ಪ್ರಣಮ ವಾಚಾ ಮಾನದಿಂದಲಿ ಬಲು
ಮೌನವಾಗಿದ್ದು ಮಾಳ್ಪ ಧ್ಯಾನವು ಇತ್ತು ಮಾಜ್ಞಾನಾ
ನಾನಾ ಪ್ರಕಾರದಿಂದ ದಾನಧರ್ಮಂಗಳ ನಿ
ದಾನ ಕೊಂಡಡಲಾಮೇಲೆ ನೆನೆವೆನನುದಿನ
ಮಾನವನ ಹೀನವ ನಾಡದೆ ನೀನೆನಿಸದೆ
ಸುಮ್ಮನದಿಂದಲಿ ನೋಡೊ
ದಾನವನ ವಡಲನು ಬಗದು ಕರುಳನು
ವನಮಾಲೆ ಹಾಕಿದ ಶ್ರೀನಿಕೇತನ ೨

ಒಂದನಾಂದರೆಯಿಂತು ಇಂದು ಮಾಡುವದೇನು
ಚಂದ ಭಕ್ತರಿಗತಿ ಬಂಧವನೆ ಯಾಕೆಂದಾ
ಅಂದ ರಕ್ಕಸನಾಗಿ ಕೊಂದಾವರದ ಮುಕ್ಕುಂದಾ
ವಂದಿತ ಮರ ವೃಂದಾ ಕರುಣದಿಂದಾ

ಎಂದಿಗೆಂದಿಗೆ ಎನ್ನಿಂದಗಲದೆ ಗೋ
ವಿಂದ ಇಂದಿರಾಪತಿ ಸುಂದರ ವಿಗ್ರಹ
ಮಂದಿರದೊಳು ಸುಮದಾಸನದಲ್ಲಿ
ಬಂದು ವಿಜಯವಿಠ್ಠಲೆಂದು ನೀನಿಂದು ೩

೩೯೦

ದಯ ಬಾರದ್ಯಾಕೊ ರಾಘವಾ ಪ

ಕಾಯಬೇಕು ಯೆಂದು ಕೊರಗಿ ಮೊರೆಯಿಡೆ
ನ್ಯಾಯವೇನು ಯೆನ್ನ ಮರತುಬಿಡುವದು ಅ.ಪ

ಅಂದು ಅಜಮಿಳನು ಅಂತ್ಯಕಾಲದಲ್ಲಿ
ಕಂದ ನಾರ ಬಾಯೆಂದು ಕರಿಯಲು
ಅಂದ ಮಾತುಗಳಿಗೆ ಅತಿ ಹರುಷಿಸಿ
ಬಂದ ಯಮನ ಬಾಧೆ ಬಿಡಿಸಲಿಲ್ಲವೇನೊ ೧

ಹರಿಯೆ ಗತಿಯೆಂದು ಹೊಗಳು ಕಂದನ
ಹರುಷವಿಲ್ಲದೆ ಪಿತ ಕಷ್ಟಪಡಿಸಲು
ಊರು ತೋರದಂತಾ ಸ್ತಂಭದಿಂದ ಬಂದು
ಮೂರು ಜಗವು ಅರಿಯೆ ಮನ್ನಿಸಲಿಲ್ಲವೇನೊ ೨

ಸರ್ಪಶಯನನೆ ಸಾರ್ವಭೌಮನೆ
ಶೂರ್ಪನಖಿ ನಾಸಿಕ ಶ್ರೋತ್ರವಳಿದನೇ
ಅಪ್ಪ ಗುರುವರ ವಿಜಯವಿಠ್ಠಲನೇ
ಒಪ್ಪದಿಂದ ವಲಿವ ವರದರಾಜನೇ ೩

೩೯೧

ದಯಮಾಡು ದಯಮಾಡು ಎನ್ನ ಮೇಲೆ ।
ಅಂತರಂಗದೊಳಿಪ್ಪ ಅಚ್ಯುತಮೂರ್ತಿ ಪ

ಗಂಧ ಪರಿಮಳ ಕುಸುಮ ಜಾಜಿ ಮಲ್ಲಿಗೆ ಮಾಲೆ ।
ಮಂದಾರ ಹಾರ ಕೊರಳೊಳಿಡಲೂ ॥
ಚಂದವಿಲ್ಲವೆಂದು ತೆಗೆದು ಬಿಸಾಟಿ ಊರ ।
ಹಂದಿಯಂದದಿ ಇಲ್ಲಿ ಇಪ್ಪ ನರಗೆ ॥ ೧

ಹೆತ್ತ ತುಪ್ಪ ಸಣ್ಣಶಾವಿಗೆ ಪರಮಾನ್ನ ।
ಹೆತ್ತತಾಯಿ ತಂದು ಉಣ್ಣ ಬಡಿಸಲು ॥
ಅತ್ತ ಮೊಗವಗಬೆ ತೊತ್ತು ಉಣಬಡಿಸಿದ ।
ಹೊತ್ತು ಓಗರ ತಿಂದು ಇಪ್ಪೆನೆಂಬ ನರಗೆ ೨

ತುಂಬಿದ ಹೊಳೆಯಲ್ಲಿ ಹರಿಗೋಲಿಟ್ಟುಕೊಂಡು ।
ಅಂಬಿಗ ತಡೆಯದೆ ದಾಟಿಸಲು ॥
ಅಂಬುವಾಸನೆ ನೋಡಿ ದಾಟಿ ಪೋಗುವೆನೆಂ ।
ದೆಂಬ ಮಾನವನಾದೆ ವಿಜಯವಿಠ್ಠಲ ಕರುಣೀ ೩

೩೯೨

ದಯವಿರಲಿ ಎನ್ನಲ್ಲಿ ಧರಣಿಧರನೆ
ಭಯಗಳನು ಪೋಗಾಡು ಭಕ್ತಜನ ಪ್ರೀಯಾ ಪ

ಎರಗಿಸುವದು ಚರಣದಲಿ ಶಿರಸು
ಎರಗಲಿ ನಿನ್ನ ಧ್ಯಾನದಲಿ ಮನಸು
ಎರವೆರವು ಮಾಡದಲೆ ನಿನ್ನ ನಾಮಾಮೃತವ
ಎರದು ಸಾಕುವದು ಸಂತತ ಎನ್ನ ಬಿಡದೆ ೧

ಮತಿಗೆಟ್ಟ ಮಾನವಗೆ ಗತಿ ನೀನೆ ಆವಾವಾ
ಶ್ರುತಿಗಳೊಳು ಪೇಳುತಿದೆ ವರದೊರದೂ
ಕ್ಷಿತಿಯೊಳಗೆ ರವಿ ಶಶಿಯ ಗತಿ ತಪ್ಪಿದರೇನು
ಪತಿತ ಪಾವನ ನಿನ್ನ ಕೃಪೆಗೆ ಎಣೆಗಾಣೆ ೨

ಕೊಡುವಲ್ಲಿ ಕೊಳುವಲ್ಲಿ ಯಡಿಯಡಿಗೆ ಭಕುತಿರಸ
ಕುಡಿಸುವಲಿ ಕಲಕಾಲ ಸಂತೋಷವ
ಬಡಿಸಿ ಪೊರೆವಲ್ಲಿ ನಿನಗಾವಲ್ಲಿ ಸರಿಗಾಣೆ
ಮೃಡನೊಡಿಯಾ ಸಿರಿ ವಿಜಯವಿಠ್ಠಲ ತಿರುಮಲೇಶಾ ೩

३೯३

ದಾಸ ದಾಸ ದಾಸರ ದಾಸ್ಯವ ಕೊಡೊ–
ದೋಷ ರಾಸಿಯಳಿದು ಪ

ಶ್ರೀಶ ಧೀಶ ಸರ್ವೇಶ ಸುರೇಶ್ವರ –
ಭಾಸುರ ಗುಣಗಣ ಭವ್ಯ ಶರೀರ ಅ.ಪ

ಚಿತ್ತ ನಿನ್ನ ಪದ ಸೇವೆಯೊಳಿರಲಿ–ಚಿಂತೆ ಇತರ ಬಿಡಲಿ
ಅಂತರಂಗದಲ್ಲಾನಂದಿಸಲಿ–ಅಹಂಕೃತಿಯನ್ನೆ ಬಿಡಲಿ
ಸಂತತ ನಿನ್ನ ಪದ ಪಂಕಜ ಭಕ್ತರ –
ಪಂಥವ ಪಾಲಿಸೊ ಪರಮ ಪುರುಷ ಹರಿ ೧

ಅರಿಷಡ್ವರ್ಗಗಳಟವಿಯ ಖಂಡಿಸು–ಆನಂದದಲಿರಿಸು
ದುರುಳರ ಸಂಗವ ದೂರ ಮಾಡಿಸು–
ದುರ್ಮತಿಯನೆ ಬಿಡಿಸು
ಸರಸ ಸಂಭ್ರಮ ಸನ್ನುತ ಭಕುತರೋಳ್–
ನಿರುತವು ನಿಲ್ಲಿಸೋ ನೀರಜಾಕ್ಷ ಹರಿ ೨

ತ್ರಿಜಗನ್ಮೋಹನಾಕಾರ ತ್ರಿ–ಗುಣಾತೀತ ತೀರ್ಥಪಾದ
ಭಜಕರ ಪಾವನ ಭವನುತ ಚರಣ–ಋಜಗಣನುತಾಭರಣ
ವಿಜಯವಿಠ್ಠಲಾಧೀಶ ವಿಶ್ವೇಶ್ವರ ಕುಜನ
ವಿದಾರಣ ಕೋವಿದನುತ ಹರಿ ೩

೩೯೪

ದುರ್ಗಾಪತಿಯೆ ಕಾಯೊ ಸತತ
ದುರ್ಗಣ ಪರಿಹರಿಸಿ
ನಿರ್ಗುಣದಲಿ ದೇವಾ ನಿನ್ನಯ
ದುರ್ಗದೊಳಿಡು ಎನ್ನಾ ಪ

ಕೋಪವಧಿಕವಾಗಿ ಕುಚ್ಚಿತ
ಪಾಪಕ್ಕೆ ಎರಗುತಾ
ತಾಪಸರನ್ನ ಜರಿದು ಬಲು ಸಂ
ತಾಪದಿ ಬಳಲಿದೆನೊ ಕುಕ್ಕಿ ೧

ಹಿಂಸೆಯ ಮಾಡುವಲ್ಲಿ ಹೇಸದೆ
ವಂಶರಾ ನಿಂದಿಸುವೆ
ಅಂಶುಮಾಲಿಯಂತೆ ತಮೋಗುಣ
ಧ್ವಂಸಗೈಸು ವೇಗಾ ೨

ಕಠಿಣ ಉತ್ತರ ನುಡಿದು ಮತ್ಸರ
ಕುಟಿಲತನವಾ ಮರಿಯೆ
ಸಟೆ ಮಾತುಗಳನಾಡಿ ನಿನ್ನಾ ನಿ
ಚ್ಚಟದ ಮರಿದೆನೊ ಹರಿಯೆ ೩

ಕಲಹವೆಂದರೆ ಕಾಲು ಕೆದರುವೆ
ಕೆಲಸಾರದಲೇವೇ ಮಲಿತು ಎದುರು
ನಿಲುವೆ ಮುಂದಿನ
ನೆಲೆಗಾಣದೇ ಪೋದೆ ೪

ವ್ಯಾಧೆ ವೇದನೆಯಿಂದ ಬಲು ಕಷ್ಟ
ವಾದದು ಈ ದೇಹಕ್ಕೆ
ಮೋದ ವಿಜಯವಿಠ್ಠಲ ನಿನ್ನಿಂ
ದಾದದ್ದು ತೊಲಗಿಸಿ ೫

೩೯೫

ದೂರ ನೋಡುವರೆ ರಂಗಯ್ಯ ಎನ್ನ ಪ

ದೂರ ನೋಡುವರೇನೋ ಸಂಸಾರ ಶರಧಿಯೊಳಗೆ ಮುಳುಗಿ
ದಾರಿಗಾಣದೆ ನೀನೆ ಗತಿ ಮು-ರಾರಿಯೆಂದು ಸಾರಿದ ಮೇಲೆ ಅ.ಪ

ಆಸೆ ಬಿಡದೆಲೊ ಕಾಸುವೀಸಕೆ-ಕ್ಲೇಶ ಘನ್ನವೆಲೊ
ಈಶ ಯಾರಿಗೆ ಪೇಳಲೊಶವೆಲೊ-ಶ್ರೀಶ ಎನ್ನ ಮನಸಿನಲ್ಲಿ
ಲೇಶಮಾತ್ರ ಭಕುತಿಯಿಲ್ಲ, ಆಸೆ ಬದ್ಧನಾಗಿ
ಬಹಳ ಘಾಸಿಪಟ್ಟೆನೊ-ದಾಶರಥಿ ೧

ಭಕುತಿಯಿಲ್ಲವೊ ಅದರ ಹೊರತು-ಮುಕುತಿಯಿಲ್ಲವೊ
ಯುಕುತಿಯಿಂದಲಿ ವಲಿವನಲ್ಲವೊ-
ಮುಕುತಿದಾಯಕ ನಿನ್ನ ಕಾಣದೆ
ಭಕುತಿಗೋಸುಗ ಪರರ ತುತಿಸಿ, ಕಕುಲಾತಿಯಿಂದಲೆನ್ನ-
ಶಕುತಿಯೆಲ್ಲ ನಷ್ಟವಾಯಿತು ೨

ಪೊರೆಯದಿರುವರೆ ಕರುಣಾಳುಯೆಂಬ-ಬಿರುದ ಬಿಡುವರೆ
ಹರಿಯೆ ಯೆನ್ನ ಮರೆತು ಬಿಡುವರೆ-
ಕರಿಯು ಹರಿಯೇ ಎಂದು ಕರೆಯೆ
ಸಿರಿಗೆ ಪೇಳದೆ ಭರದಿ ಬಂದು, ಪೊರೆದೆಯೆಂಬ ವಾರ್ತೆಕೇಳಿ
-ಮರೆಯ ಹೊಕ್ಕೆನೊ ವಿಜಯವಿಠ್ಠಲ ೩

೩೯೬

ದೇವರ ದೇವ ನಿನ್ನ ಬಲವಲ್ಲದೆ ಮತ್ತೆ
ಆವ ಗ್ರಹಗಳಿಂದಲಿ ಉಂಟು ಎನಗೆ ಪ

ಇಂದು ನಿನ್ನ ನೆನಹು ಇಂದು ಬಲವೊ ಅರ
ವಿಂದ ಪದ ನೋಡುವದು ಅರ್ಕ ಬಲವು
ವಂದನ ಗೈದು ಮಂತ್ರಿ ಬಲವೋ ಎನಗೆ
ನಿಂದು ಕೊಂಡಾಡುವದು ಕಾವ್ಯ ಬಲವೊ ೧

ಆರಾಧನೆ ಮಾಡುವುದು ಅಂಗಾರಕನ ಬಲವೊ
ಸಾರಿ ಪೇಳುವದೆನಗೆ ಸೌಮ್ಯ ಬಲವೊ
ಕಾರುಣ್ಯ ಕಡುಸೋನೆ ಎನಗೆ ಶೌರಿಬಲವೊ
ಹಾರೈಸಿ ಹಿಗ್ಗುವದು ರಾಹು ಬಲವೊ ೨

ಕೇಳುವ ಕಥಾಶ್ರವಣ ಕೇತು ಬಲವೊ ಎನಗೆ
ವಾಲಗ ಮಾಡುವದು ತಾರಾಬಲವೊ
ಮೂಲೋದರಸು ಸಿರಿ ವಿಜಯವಿಠ್ಠಲ ನಿನ್ನ
ಆಳಾಗಿ ಬಾಳುವದು ಸರ್ವಬಲವು ೩

೩೯೭

ಧನ್ಯನೋ ಶೇಷಗಿರಿದಾಸ ನೀನೂ
ಪುಣ್ಯವಂತನು ಅಹುದೊ ಮನೊ ವಾಚದಲಿ ನಿತ್ಯ ಪ

ಮುಂಗೈಯ ಮ್ಯಾಲಿನ ಗಿಳಿ ಹಾರಿಹೋದಂತೆ
ರಂಗ ಮಧ್ವನ ಸ್ಮರಣೆ ಮಾಡಿಕೊಳುತ
ಮಂಗಳಾಂಗನಾಗಿ ಸ್ವರ್ಗಸ್ಥನಾದಿ ಕ್ಷಣ
ಭಂಗುರವೆಂಬ ಪ್ರಮಾಣ ಸಿದ್ಧಿಸಿತು ಗಡ ೧

ಸತ್‌ಶಿಷ್ಯನೆಂದೆನಿಸಿಕೊಂಡದಕೆ ಎನ್ನ ಮ
ನೋತ್ಸಾಹ ಮಾತ್ರ ಬಂದಾಗಲಿಲ್ಲಾ
ವತ್ಸ ಕೇಳು ಉಪಸರ್ಗ ಕೂಡಿದ ನಾಭಿ
ತತ್ಸಮಾನಾಯಿತೊ ಇಂದಿನಾರಭ್ಯವೂ ೨

ಒಂದೆ ಪ್ರವಾಹದೊಳು ಈಸು ಬೀಳಲು ಸುಳಿ
ಯಿಂದ ಹಿಂದಕೆ ಒಬ್ಬನಿಂದಂತೇವೆ
ಇಂದು ಎನಗಾಯಿತೊ ಭೂಮಿಯೊಳಗೆ ಋಣಾನು–
ಬಂಧ ಇಂತಿರಲಿಕ್ಕೆ ಯತ್ನ ಒಬ್ಬರದಿಲ್ಲ ೩

ಪರಿಣಾಮಕೆ ನಿನಗೆ ಸಾನುಕೂಲಾವಾಗಿ
ಅನಿಲದೇವನು ಒಲಿದು ಹರಿಯ ಕೂಡಾ
ಪ್ರಣಮಪೂರ್ವಕದಿಂದ ಪಂಚತ್ವ ಐದಿದೆ ಸಾ–
ಧನ ಪೂರ್ತಿಕಾಲ ಎಳ್ಳನಿತು ಉಳದಿಪ್ಪದೊ ೪

ವಿಧಿ ಸಂವತ್ಸರ ಭಾದ್ರಪದ ಶುಕ್ಲದ ಭಾನು
ಬಿದಿಗೆಯಲಿ ಪ್ರವರ ಗೌತಮ ಸಂಗಮಾ
ನಿಧಿಯಲಿ ವಿಜಯವಿಠ್ಠಲನಂಘ್ರಿಯುಗಳವನು
ಹೃದಯದಲಿ ಇಟ್ಟು ದೇಹವ ತ್ಯಾಗಮಾಡ್ದೆ ೫

೩೯೮

ನಂಬಿದೆ ನಿನ್ನ ನೀರಜಪಾದ ।
ಇಂಬಿನಲ್ಲಿಟ್ಟು ಸಲಹೊ ಪ್ರಸಾದ ಪ

ಅಂಬರೀಷನ ಶಾಪ ಹಿಂಗಿಸಿ ಕಳೆದ ದ– ।
ಯಾಂಬುಧಿ ನೀನೆಂದು ಹಂಬಲಿಸಿದೆ ಹರಿಯೆ ಅ.ಪ

ಉಗ್ರನ್ನ ಖಳವಂಚಿಸಿ ತನ್ನ ಕ- ।
ರಾಗ್ರವಾ ಶಿರದಲ್ಲಿ ಇಡಬರಲು ॥
ಅಗ್ರೇಶ ಕಾಯೆಂದು ಅವನೀಗ ಮೊರೆಯಿಡೆ ।
ಶೀಘ್ರದಿಂದಲಿ ಬಂದು ಕಾಯ್ದು ಕರುಣಿಯೆಂದು ೧

ಕಾಲದೂತರು ಅಜಾಮಿಳನೆಳೆಯಲು ।
ನಾಲಿಗೆಯಿಂದ ನಾರಗನೆನ್ನಲು ॥
ಆಲಸ್ಯ ಮಾಡದೆ ನಿನ್ನ ದೂತರನಟ್ಟಿ ।
ಓಲಗ ವೈಕುಂಠವಿತ್ತ ಬಾಂದವನೆಂದು ೨

ಭೂತಳದೊಳು ನಿನ್ನನು ಪೋಲುವ ।
ದಾತರ ನಾನೆಲ್ಲಿ ಕಾಣೆ ಶ್ವೇತವಾಹನ ॥
ಮಸ್ತಕವನು ಉಳುಹಿದ ದಾತ ।
ವಿಜಯವಿಠ್ಠಲನಹುದೆಂದು ದೃಢವಾಗಿ ೩

೩೯

ನಂಬಿದೆನೊ ನಂಬಿದೆನೊ ಅಂಬುಜಾಕ್ಷ
ತೊಂಬಲಿಗೆ ಹಂಬಲಿಸಿ ಹಾರೈಸಿದೆ ನಿನ್ನ ಪ

ಮೊದಲುಂಡ ಪಾಪದಲಿ ಕಳೆಗುಂದಿ ಕಳೆಗುಂದಿ
ಮುದದಿಂದ ನಿತ್ರಾಣನಾದೆನಯ್ಯಾ
ಪದುಮನಾಭನೆ ನಿನ್ನಭಯದೊಂಬಲನಿತ್ತು
ವದನ ಚೇತನನಾಗುವಂತೆ ದಯಮಾಡೊ ೧

ವಿಷವ ಸೇವಿಸಿದ ತರುಣನಂತೆ
ಮೆಲವು ಭಾವಿಸದೆ ಬೀಳುತೀ ನೀ ನೆಲೆಗಾಣದೆ
ಬಿಸಿಜಾಕ್ಷ ನೀನೆ ಕೃಪಾಳು ಎಂದೆಂದಿಗೆ
ರಸ ಸುರಿವ ಸುರಿವ ಬಾಯದೊಂಬಲಾನಿತ್ತು ಸಲಹೊ ೨

ಆವದಾದರುವಲ್ಲೆ ಅನಿಮಿತ್ತ ಬಂಧು ಕೇಳು
ಜೀವವೇ ನಿನ್ನ ಪಾದದಾಧೀನವೋ
ಶ್ರೀವಧುರಮಣ ನಮ್ಮ ವಿಜಯವಿಠ್ಠಲ ನೀನೆ ದೇವ ಯನಗ
ಹುದು ತೊಂಬಲನಿತ್ತು ಪೊರಿಯೊ ೩

೪೦೦

ನಂಬಿದೆನೊ ನಿನ್ನ ಪಾದಾರವಿಂದಾ
ಇಂಬು ಈವದು ಎನಗೆ ವೈಕುಂಠಪುರದೊಳಗೆ ಪ

ಮಲಭಾಂಡದಲ್ಲಿ ಪೊಕ್ಕು ನೆಲೆಗಾಣದಲೆ ಸಿಕ್ಕು
ಸಲೆ ಸೊರಗಿ ತಿರುಗಿದೆನೊ ಬಳಲಿ ಮರುಗಿ
ಉಳಿವದಕುಪಾಯವನು ಒಂದರೆ ಕಾಣೆನೊ
ಎಲೊ ಬಲುದೈವ ನೀನೆ ದಯಾಳು ಎಂದೂ ೧

ಕಂಡಮಾರುತದಲ್ಲಿ ಕೈವಲ್ಯ ಕೊಡುವಲ್ಲಿ
ಮಂಡಲದೊಳು ಎಣಿಯಾರು ನಿನಗೆ
ಭಂಡಕಾಯವ ತೆತ್ತು ಬರಲಾರೆ ನಿನ್ನ ತೊತ್ತು
ತೋಂಡರೊಳು ಇಡು ನಿತ್ಯ ಎಳೆನೋಟದಲಿ ನೋಡು ೨

ಯದುಕುಲಲಲಾಮ ಸುರಸಾರ್ವಭೌಮ ಮಹಿಮ
ಮದನಪಿತ ಕಾಳಿಂಗಭಂಗ ರಂಗಾ
ಮಧುಸೂದನ ವಿಜಯವಿಠ್ಠಲ ಲಕುಮಿನಲ್ಲಾ
ಹೃದಯದೊಳು ಪೊಳೆವ ಬಲು ವಿಚಿತ್ರ ಚಲುವಾ ೩

೪೦೧

ನಂಬಿದೆ ನಿನ್ನ ಪಾದವ ಕಾಣಬೇಕೆಂದು
ಹಂಬಲಿಸಿದೆ ಮಾಧವ
ಬೆಂಬಲವಾಗು ಪೀತಾಂಬರಧರ ಕುಟುಂಬಿ ಪಾಲಾ
ಕಮಲಾಂಬಕ ರಂಗಾ ಪ

ಚಂದಿರಹಾಸ ಸರ್ವೇಶ ಚಂಡ ಪ್ರಕಾಶಾ
ಇಂದಿರಾ ಮನೋವಿಲಾಸ
ಮಂದಿರ ವೈಕುಂಠವಾಸಾ ಮನಜವೇಷ
ವೃಂದಾರಕರ ನಿಜಕೋಶಾ
ಮಂದರಧರ ವಸುಂಧರಪತಿ ಪುರಂದರ
ವಂದಿತ ಸುಂದರಾಂಗ ಕಂಬು
ಕಂಧರ ಎನ್ನಯ ಒಂದರಗಳಿಗೆ ಕಂದನ
ಇಂದೀಗ ತೊಂದರೆಕಿಡದಿರು ೧

ತಂದಿತಾಯಿಗಳವರಾರೊ ತಾವಳಿದು
ತಂದ ಸತಿ ನಂದನರೊ ಬಂಧುಬಳಗ ಮತ್ತಾರೊ ಬರಿದೆ ಊರು
ಪೊಂದದೆನಲೊ ಇಳಿಜಾರು ಎಂದೆಂದಿಗಿದರ
ಗಂಧದೊಳಗೆ ನಾ ಬಂದು ಬಳಲಿ ಸಂ
ಬಂಧದೊಳುರಳಿದೆ ಮುಂದಾದರು ದಾರಿ ಒಂದಾದರು ಕಾಣೆ
ತಂದೆ ತಾಯಿ ಸರ್ವಂದವು ನೀನೆ ೨

ನೊಂದೆನೊ ನಾನಾ ಜೀವಿಲಿ ನೋಡು ನೋವಿನಲಿ
ಕುಂದಿದೆ ಎಲ್ಲ ಕಾವಿಲಿ
ಹಿಂದಿನ ಹುಟ್ಟು ಸಾವಿಲಿ ಗಹನ ಠಾವಿಲಿ
ಬೆಂದೆನೋ ಬಲು ಕೋವಿಲಿ
ಅಂದದರ್ಚನೆಯಿಂದ ಮಾಡಿದ ಪಾಪಗೊಂದಿಗೆಳೆದು ಎನ್ನ
ಕೊಂದು ಕೊಲ್ಲುತಲಿವೆ ಇಂದು ಚರಣರವಿಂದವ ತೋರಿಸುವ
ಬಂಧು ವಿಜಯವಿಠ್ಠಲೆಂದಹುದೆಂದು ೩

೪೦೨

ನಂಬಿದ್ದೆನಲೊ ದಾತ ಅಂಬುಜಾಸನ ತಾತ
ಕುಂಭಿಣಿಯೊಳು ಪುಟ್ಟಿ ಜನನಿಯ ಮೊಲೆ ಪಾಲು
ಉಂಬೋದು ಬಿಡಿಸೊ ಜನನವ ಕೆಡಿಸೊ ಪ

ರಸಿಕೆ ಮುಹಕದಲಿ ನಿಶಿದಿನದಲಿ ಹೊರಳಿ
ಅಸುರುಸುರೆನುತಲಿ ಹಸಗೇಡಿಯಾದೆನೊ
ಅಸವು ನನ್ನದು ಎಂದು ಈ ಪರಿ ನೊಂದು ೧

ಹಲವು ಲಂಪಟದೊಳು ಹಲುಬಿ ಹಕ್ಕಲನಾದೆ
ಬಲೆಯೊಳಗಿದ್ದ ಎರಳೆಯಂತೆ ಮಿಡುಕುತ
ಮಲಮೂತ್ರದೊಳು ಬಳಲಿದೆ ಕೇಳೊ ೨

ಎಳ್ಳನಿತು ಸತ್ಕರ್ಮವುಳ್ಳದ್ದು ಚರಿಸಿದೆ
ಬಲಿಷ್ಠ ನಾನೆಂದು ಬಲು ದುರ್ಮತಿಯಿಂದ
ಎಲ್ಲರ ಜರಿದೆ ಧರ್ಮವ ಮರೆದೆ ೩

ಚಾರುವಾಕರಗೂಡಿ ಮೂರೆ ವಿಕಾರದಲ್ಲಿ
ನೀರೇರ ಒಡಗೂಡಿ ನೀತಿ ನಿರ್ಣಯ ತೊರೆದು
ತಾರಿ ಬರಿದೆ ಕೆಟ್ಟೆ ಮುಂದೇನು ಬಟ್ಟೆ ೪

ಎಲ್ಲಿರಲು ನಿನ್ನವನೋ
ಅಲ್ಲವೆಂದೆನಿಸದೆ ಬಲ್ಲಿದರೊಡಿಯ ವಿಜಯವಿಠ್ಠಲ ನಿ
ನ್ನಲ್ಲಿ ಸೇರಿಸಿ ಎನ್ನ ಪೊರೆಯೋ ಪ್ರಸನ್ನಾ ೫

೪೦೩

ನಾನು ನಿನ್ನ ಸೇವಕ ಏನಾದರೂ ಬರಲಿ ನಿನ್ನ ಬಿಡುವನೆ ರಂಗಾ ಪ

ಅಪತ್ತೆ ಬರಲಿ ಅತಿಶಯದ ಕ್ಲೇಶವೇ ಬರಲಿ
ಕೋಪ ಕಾಮಾದಿಗಳು ವೆಗ್ಗಳಿಸಲಿ
ಪಾಪದ ರಾಶಿಗಳು ಬಂದು ಬೆನ್ನಟ್ಟಲಿ
ಶ್ರೀಪತಿ ನಿನ ಪಾದವನು ಬಿಡಬಲ್ಲನೆ ೧

ಯಮನಪುರದ ಬಟ್ಟೆ ಅತಿ ಕಠಿಣವಾಗಲಿ
ಯಮನಾಳು ಬಲು ಭಯಂಕರರಾಗಲಿ

ಯಮನು ದಂಡಿಸಿ ತೀವ್ರ ನಿರಯದೊಳಗೆ ಇಡಲಿ
ಕಮಲನಾಭನೆ ನಿನ್ನ ಪಾದವನು ಬಿಡಬಲ್ಲನೆ ೨

ಲೋಕದೊಳಗಿದ್ದ ಜನರಿಗೆ ಬಪ್ಪ ದೋಷಗಳು
ಏಕವಾಗಿ ಎನಗೆ ಬರಲಿ ಇಂದೆ
ನಾ ಕಳವಳಿಸಿದರು ನಿನ್ನಂಘ್ರಿಯಗಳಾಣೆ
ಶ್ರೀಕಾಂತ ವಿಜಯವಿಠ್ಠಲರಂಗ ಕೇಳೊ ೩

೪೦೪

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು
ಮನ್ನಿಸುವರೊ ಮಹರಾಯ ಪ

ಎನ್ನ ಪುಣ್ಯಗಳಿಂದ ಈ ಪರಿಯುಂಟೇನೊ
ನಿನ್ನದೆ ಸಕಲ ಸಂಪತ್ತು ಅ.ಪ

ಒಬ್ಬ ಹೆಂಗಸಿನ ಹೊಟ್ಟೆಗೆ ಹಾಕುವುದಕಿನ್ನು
ತಬ್ಬಿಬ್ಬುಗೊಂಡನೊ ಹಿಂದೆ
ನಿಬ್ಬರದಿಂದಲಿ ಸರ್ವರ ಕೂಡುಂಬೊ
ಹಬ್ಬವನುಣಿಸುವಿ ಹರಿಯೆ ೧

ಸಂಜೆತನಕವಿದ್ದು ಸಣ್ಣ ಸೌಟಿನ ತುಂಬ
ಗಂಜಿ ಕಾಣದೆ ಬಳಲಿದೆನೋ
ವ್ಯಂಜನ ಮೊದಲಾದ ನಾನಾ ರಸಂಗಳು
ಭುಂಜಿಸುವುದು ಮತ್ತೇನೊ ೨

ಜೀರ್ಣ ಮಲಿನ ವಸ್ತ್ರ ಕಾಣದ ನರನಿಗೆ
ಊರ್ಣ ವಿಚಿತ್ರ ಸುವಸನ
ವರ್ಣವರ್ಣದಿಂದ ಬಾಹೋದದೇನೊ ಸಂ
ಪೂರ್ಣಗುಣಾರ್ಣವ ದೇವ ೩

ನೀಚೋಚ್ಚ ತಿಳಿಯದೆ ಸರ್ವರ ಚರಣಕ್ಕೆ
ಚಾಚಿದೆ ನೊಸಲ ಹಸ್ತಗಳ
ಯೋಚಿಸಿ ನೋಡಲು ಸೋಜಿಗವಾಗಿದೆ
ವಾಚಕ್ಕೆ ನಿಲುಕದು ಹರಿಯೆ ೪

ಮಧ್ಯಾಹ್ನ ಕಾಲಕ್ಕೆ ಅತಿಥಿಗಳಿಗೆ ಅನ್ನ
ಮೆದ್ದೆನೆಂದರೆ ಈಯಗಾಣೆ
ಈ ಧರೆಯೊಳಗೆ ಸತ್ಪಾತ್ರ ಕೂಡುಂಬೊ
ಪದ್ಧತಿ ನೋಡೊ ಪುಣ್ಯಾತ್ಮ ೫

ಮನೆ ಮನೆ ತಿರಿದರು ಕಾಸು ಪುಟ್ಟದೆ ಸು
ಮ್ಮನೆ ಚಾಲ್ವರಿದು ಬಳಲಿದೆನೊ
ಹಣ ಹೊನ್ನು ದ್ರವ್ಯಂಗಳಿದ್ದಲ್ಲಿಗೆ ತನಗೆ
ತಾನೆ ಪ್ರಾಪ್ತಿ ನೋಡೊ ಜೀಯಾ ೬

ವೈದಿಕ ಪದವಿಯನೀವಗೆ ಲೌಕಿಕ
ಐದಿಸುವುದು ಬಹು ಖ್ಯಾತೆ
ಮೈದುನಗೊಲಿದ ಶ್ರೀ ವಿಜಯವಿಠ್ಠಲನ ನಿನ್ನ
ಪಾದಸಾಕ್ಷಿಯನುಭವವೊ ೭

४೦೫

ನಿನ್ನ ಚಿತ್ತಕೆ ಬಂದುದನು ಮಾಡು ಸರ್ವೇಶ
ಎನ್ನ ಸ್ವಾತಂತ್ರ್ಯ ಲವಮಾತ್ರ ಉಂಟೇ ಸ್ವಾಮಿ ಪ

ಅನಂತಾನಂತ ಜನ್ಮ ಕಾದರು ಒಮ್ಮೆ
ಚೆನ್ನ ಗೋಪಾಲ ಕೃಷ್ಣದೇವ ಅ.ಪ.

ಛೀ ಎನಿಸು ಜನರಿಂದ ನಿಂದ್ಯವನು ಮಾಡಿಸು
ಬಾಯದೆರೆಸೊ ಹೊಟ್ಟೆಗಾಗಿ

ಗಾಯನವ ಮಾಡಿಸು ಗುಪ್ತದಲ್ಲೇ ಇರಿಸು
ದಾಯಾದಿಗಳಿಗೊಪ್ಪಿಸು
ರಾಯಪದವಿಯ ಕೊಡಿಸು ರಾಜ್ಯವೆಲ್ಲವ ಮರೆಸು
ಕಾಯಕ್ಲೇಶವನು ಪಡಿಸು
ಮಾಯಾಧವನೆ ನಿನ್ನ ಮಹಿಮೆ ತಿಳಿದವರಾರು
ನ್ಯಾಯ ಅನ್ಯಾಯವಾಗಿ ಶ್ರೀಶ ೧

ಧನವನ್ನೆ ಕೊಡಿಸು ದಾನವನೆ ಮಾಡಿಸು
ಗುಣವುಳ್ಳ ಮನುಜನೆನಿಸು
ಮನಸು ಚಂಚಲನೆನಿಸು ಮಾತುಗಳ ಪುಸಿಯೆನಿಸು
ಕ್ಷಣದೊಳಗೆ ಶುದ್ಧನೆನಿಸು
ಋಣದ ಭಯವನೆ ಹೊರಿಸು ರಿಕ್ತ ನಾನೆಂದೆನಿಸು
ತೃಣದಂತೆ ಮಾಡಿ ನಿಲಿಸು
ಪ್ರಣತ ಜನರಿಗೆ ನಿತ್ಯ ಮನದಿಚ್ಛೆಗಾರನೆ
ದಿನ ಪ್ರತಿದಿವಸವಾಗೆ, ದೇವ ೨

ಯಾತ್ರೆಯನೆ ಮಾಡಿಸು ಯೋಚನೆಯಲೇ ಇರಿಸು
ಪಾತ್ರ ಜನರೊಳು ಪೊಂದಿಸು
ಗೋತ್ರ ಉತ್ತಮನೆನಿಸು ಗೋವುಗಳ ಕಾಯಿಸು
ಧಾತ್ರಿಯೊಳು ನೀಚನೆನಿಸು
ಮೈತ್ರರೊಳು ಕೂಡಿಸು ಮೈಗೆಟ್ಟವನೆನಿಸು
ಸ್ತೋತ್ರಕ್ಕೆ ಯೋಗ್ಯನೆನಿಸು
ನೇತ್ರ ಮೂರುಳ್ಳವನು ಸ್ತುತಿಸಿದ ಮಹಾಮಹಿಮ
ರಾತ್ರಿ ಹಗಲು ಎನ್ನದೆ ದೇವ ೩

ಉಪವಾಸದಲ್ಲಿರಿಸು ಉಚಿತ ಭೋಜನ ಉಣಿಸು
ಜಪತಪವನೆ ಮಾಡಿಸು
ಅಪಹಾಸ್ಯ ಮಾಡಿಸು ಅದ್ಭುತವನೈದಿಸು
ಗುಪಿತರೊಳಗಧಿಕನೆನಿಸು
ಉಪಕಾರಿ ನರನೆನಿಸು ಉದ್ದಂಡನಿವನೆನಿಸು

ವಿಪುಳ ಮತಿಯಲಿ ನಿಲಿಸು
ಅಪರಿಮಿತ ಗುಣನಿಧಿಯೆ ಆನಂದ ಮೂರುತಿಯ
ಸಫಲಮತಿಯೀವ ದೇವ ೪

ವೇದವನು ಓದಿಸು ವೇದಾರ್ಥಗಳ ನುಡಿಸು
ಓದಿದರು ದಡ್ಡನೆನಿಸು
ಹಾದಿಯನು ತಪ್ಪಿಸು ಹಿತದವರನಗಲಿಸು
ಸಾಧು ಮಾರ್ಗವನೆ ಕೊಡಿಸು
ಬಾಧೆಗಳನಟ್ಟಿಸು ಭಕುತಿವೆಗ್ಗಳನೆನಿಸು
ಉದರಕೋಸುಗ ತಿರುಗಿಸು
ಪಾದದಲಿ ಗಂಗೆಯನು ಪೆತ್ತ ಪರಮಾನಂದ
ಮೋದ ವಿನೋದವಾಗೆ ದೇವ ೫

ಕುಣಿಕುಣಿದಾಡಿಸು ಕಾಶಿಯಲಿ ಪೊಂದಿಸು
ಮಣಿ ಭೂಷಣವ ತೊಡಿಸು
ಘನ ಕವನ ಪೇಳಿಸು ಕೌತುಕವನೈದಿಸು
ವನ ಭುವನದೊಳು ನಿಲಿಸು
ಪ್ರಣವ ಮಂತ್ರವ ಜಪಿಸು ಪ್ರಕಟಭಯವನೆ ಬಿಡಿಸು
ಬಿನುಗು ವೈರಾಗ್ಯನೆನಿಸು
ಜನನಿ ತನುಜರ ಕೂಡೆ ಅನುಸರಿಸಿ ನಡೆವಂತೆ
ಎನಗೆ ನೀನೆ ಸದ್ಗತಿ ಸ್ವಾಮಿ ೬

ಯಾವುದಾದರು ನೀನು ಇತ್ತುದಕೆ ಎನಗಿಷ್ಟು
ನೋವು ಒಂದಾದರಿಲ್ಲ
ಜೀವೇಶರೊಂದೆಂಬ ದುರ್ಮತವ ಕೊಡದಿರು
ಭಾವದಲಿ ನಾ ಬೇಡುವೆ
ಆವಾವ ನರಕದಲಿ ಬಹುಕಾಲವಿಟ್ಟರು ಇಪ್ಪೆ
ನಾನೊಲ್ಲೆ ಮಿಥ್ಯಮತವ
ಕಾವ ಕರುಣೆ ನಮ್ಮ ವಿಜಯವಿಠ್ಠಲರೇಯ
ಪಾವನ್ನ ಮಾಳ್ಪ ಶಕ್ತ ವ್ಯಕ್ತ ೭

೪೦೬

ನಿನ್ನನಗಲಿ ಪೋಗಲಾರೆವೋ ನೀರಜಾಕ್ಷ
ನಿನ್ನ ಸೇರಿ ಸುಖಿಸ ಬಂದೆವೊ ಪ

ಮನ್ನಿಸದೆ ಮಮತೆಯಿಂದ ಭಿನ್ನ ನುಡಿಗಳಾಡಿ ನಮಗೆ
ಹಣ್ಣು ತೋರಿ ಕಾಳಕೂಟವನ್ನು ಕೊಡುವರೇನೊ ಕೃಷ್ಣ ಅ

ಐದುವದಕೆ ಶಕ್ಯವಲ್ಲದ ಅಪ್ರಮೇಯ
ಆದಿಪುರುಷ ಅಮರಸನ್ನುತ
ಶ್ರೀದ ನಮ್ಮ ಕೈಯ ಬಿಡದೆ ಆದರಿಸಬೇಕು ಪರವ-
ರಾದರೇನು ನಿನ್ನ ಶರಣರಾದ ಮೇಲೆ ಬಿಡುವುದುಂಟೆ ೧

ಬಂಧುವರ್ಗವನ್ನು ಬಿಡುವುದು ಸ್ತ್ರೀಯರಿಗೆ
ನಿಂದ್ಯವೆಂದು ಶಾಸ್ತ್ರ ಪೇಳ್ವುದು
ಎಂದೆಗೆಂದಿಗೆಮಗೆ ನೀನೆ ಬಂಧುವೆಂದು ಬಂದಿಹೆವೊ
ಸಿಂಧುಶಯನ ಎಮ್ಮನ್ಯಾಕೆ ಇಂದು ಹೋಗಿರೆಂಬೆ ನೀನು ೨

ಶಮದಮಾದಿ ಗುಣಗಳಿಂದಲಿ ಸಜ್ಜನರು
ಕ್ರಮದಿ ನಿನ್ನ ಮೂರ್ತಿ ಮನದಲಿ
ಮಮತೆಯಿಂದ ಪೂಜಿಸುತ್ತ ಗಮಿಸುವರೊ ನಿನ್ನ ಪುರಕೆ
ನಮಗೆ ಮಾತ್ರ ಪತಿಸುತಾದ್ಯರಮಿತ ಸುಖವ ಕೊಡುವರೇನೊ ೩

ಮೋಕ್ಷ ಇಚ್ಛೆಯಿಂದ ನಿನ್ನನು ಭಜಿಪ ಜನರಾ
ಪಕ್ಷ ವಹಿಸಿದಂತೆ ನಮ್ಮನು
ರಕ್ಷಿಸದೆ ಬಿಡುವರೇ ಕಟಾಕ್ಷದಿಂದ ಈಕ್ಷಿಸದೆ
ಲಕ್ಷ್ಮೀದೇವಿ ನಿಮಗೆ ಬಹಳಾಪೇಕ್ಷೆಯಿಂದ ಮೋಹಿಸಿದಳೆ ೪

ಅನಘ ನಿನ್ನ ನೋಡಿ ಮೋಹಿಸಿ ಅಂತರಾತ್ಮ
ತನುವು ಮನವು ನಿನಗೆ ಅರ್ಪಿಸಿ
ಜನನ ಮರಣದಿಂದ ಜನರು ದಣಿವರೇನೂ ಕಾಂತ ನಮ್ಮ
ಮನಸಿನಂತೆ ಒಲಿದು ಸಲಹೊ ವನಜನಾಭ ವಿಜಯವಿಠ್ಠಲ ೫

೪೦೭

ನಿನ್ನ ಮನಸಿಗೆ ಬಂತೆ ಪ್ರಾಣನಾಥಾ
ಚಿಣ್ಣನೆಂದು ನೋಡದಲೆ ಕರಿಯಲಟ್ಟಿದೆ ವೇಗ ಪ

ಸಾಕಿದೆನು ನಿನ್ನ ದಾಸನೆಂದು ತಿಳಿದು ವಿ– ।
ವೇಕದಿಂದಲಿ ಉಪನಯನ ಮಾಡೀ ।
ಲೋಕದೊಳಗೆ ಬೆಳಸಿ ಮುದುವೆಯ ಮಾಡಿ ಅ–
ನೇಕ ತೀರ್ಥಯಾತ್ರೆ ತಿರುಗಿದವನಾ ಇಂದೆ ೧

ಉದ್ಧಾರವಾಗುವೆನು ಕುಲಕೋಟಿ ಸಹಿತೆಂದು
ಪದ್ದಿಟ್ಟುಕೊಂಡಿವ್ಯೆ ಈ ತರಳನ
ಸುದ್ದಿ ತಿಳಿಯಗೊಡದೆ ವಿಯೋಗ ಮಾಡಿಸಿದೆ
ಸಿದ್ಧ ಮಾಡಿದೆ ನಿನ್ನ ಸಂಕಲ್ಪವೆ ಇಂದು ೨

ನೆಚ್ಚಿ ನಿನ್ನ ಪಾದ ಭಜಿಸುವರಿಗೆ ಭಾಗ್ಯ
ಹೆಚ್ಚುಗೊಡದಿಪ್ಪನೆಂದು ಬಿರುದು ಧರಿಸಿ
ನಿಚ್ಚ ಮೆರೆವಾ ಮಹಿಮ ವಿಜಯವಿಠ್ಠಲರೇಯ
ಅಚ್ಚ ಭಕುತರ ಪ್ರಿಯ ವೈಕುಂಠಕೆ ಇಂದೆ ೩

೪೦೮

ನಿನ್ನ ಮರೆದೆನೊ ರಂಗ ನಿನ್ನ ಮರೆದೆ
ಅನ್ಯರನ್ನಕೆ ಸಿಲುಕಿ ಅನುಗಾಲ ಮರುಳಾಗಿ ಪ

ಊಟಕ್ಕೆ ಬರುವಲ್ಲಿ ತನುವುಬ್ಬಿ ಎನ್ನ ಮನ
ನಾಟುವುದು ಅವರ ಕಡೆ ಅನುರಾಗದಿ
ನೀಟಾದ ಭೋಜನವ ಬಯಸುವೆನು ಯಮರಾಯ
ಪಾಟು ಬಡಿಸುವ ಭಂಗ ಕೇಳಿ ಎಚ್ಚರಿಯದಲೆ ೧

ಮತ್ತೆ ಕರೆಯಲು ಬರಲು ಉತ್ಸವ ಪಿಡಿಯಲೊಶವೆ
ಹೊತ್ತು ಹೊತ್ತಿಗೆ ಅವರ ಕೊಂಡಾಡುತ
ಹೆತ್ತವರಿಗಿಂತಲೂ ಅಧಿಕ ನಮಸ್ಕರಿಸುವೆನು
ಚಿತ್ತಜನಪಿತ ನಿನ್ನ ಸ್ತೋತ್ರ ಪಠಿಸದಲೆ ೨

ಎಡೆಯ ಮುಂದೆ ಕುಳಿತು ಎಲ್ಲ ಕಾಲಗಳಿಂದ
ಬಿಡದೆ ಮಾಡಿದ ಪುಣ್ಯಪಾಪಗಳೆದು
ಎಡಬಲದವರ ಪಜ್ತೆ ನೋಡಿಕೊಳ್ಳುತ ದುಃಖ
ಪಡುವೆನೋ ಎನಗಿಷ್ಟು ಕಡಿಮೆ ಹಾಕಿದರೆಂದು ೩

ಅನ್ನವಿತ್ತವನ ಪಾಪಗಳು ನಿರಂತರದಿ
ಅನ್ನದಾಶ್ರಯ ಮಾಡಿಕೊಂಡಿಪ್ಪವು
ಚೆನ್ನಾಗಿ ತಿಳಿಯದಲೆ ಚಾತುರ್ಯದಿಂದಲಿ
ಧನ್ಯನಾದೆನು ನಾನು ಪರರ ಪಾಪವ ಭುಜಿಸಿ ೪

ಒಬ್ಬರೆಡೆ ನೋಡಿಕೊಳಲಧಿಕವಾಗಿದ್ದರೆ
ಉಬ್ಬುವೆನು ಊರು ಕೇರಿ ಹಿಡಿಸದಂತೆ
ಸುಬ್ಬನ ಸೂರೆಯಂತೆ ಪರರ ಅನ್ನವನುಂಡು
ಮೊಬ್ಬಿನಲಿ ದಿನಗಳೆದೆ ದೀನ ಮನಸಿನಲಿ ೫

ಒಡಲಿಗೆ ಬಿದ್ದರಸ ಮೂರು ಭಾಗಗಳಾಗಿ
ಕಡೆಗೆ ಪೋಗುವುದೊಂದು ನಿಲುವುದೊಂದು
ತಡೆಯದಲೆ ಸಂತಾನ ಪಡೆವುದೊಂದೀತೆರ
ಕಡೆಗಾಣಲಿಲ್ಲ ಪರರಲಿ ಉಂಡ ಋಣಕೆ ೬

ಆವಾವ ಬಗೆರುಚಿ ಜಿಹ್ವೆಗೆ ತೋರುತಿದೆ
ಆವಾವ ಬಗೆ ನರಕ ಬೇರೆಯುಂಟು
ದೇವ ಮಣಿ ಸರ್ವೇಶ ವಿಜಯವಿಠ್ಠಲ ಸ್ವಾಮಿ
ಈ ಜೀವ ಹಿತವಾಗುವಂತೆ ಮಾರ್ಗವ ತೋರು ೭

೪೦೯

ನಿನ್ನವರ ಸಂಗ ಎಂತಹದಯ್ಯಾ
ಅನಂತ ಜನ್ಮದ ಪಾಪ ಪುಂಜರ ನಾನು ಪ

ಬಾರೆ ಸುಜನರ ಮನಕೆ ತಾರೆ ಗಂಗೋದಕವ
ಸೇರೆ ನಿನ್ನಡಿಗಳಲಿ ಸಾರೆ ಉತ್ತಮರ ಕೀರ್ತಿ
ಬೀರೆ ನಿನ್ನಯ ಮಹಿಮೆ ಕೋರೆ ನಿರ್ಮಳ
ದಾರಿಯಾ ನೀರೆಯರ ಶಶಿಬಿಂಬ ಮೋರೆ ಬಣ್ಣಕೆ ಮೆಚ್ಚಿ
ಕಾರ್ಯ ಕಾರಣ ಜರಿದು ಭಾರಿ ತಿರುಗವನಿಗೆ ೧

ಏಕಾದಶಿ ದಿನ ಬೇಕೆಂದು ಮನವಿಟ್ಟು
ಪಾಕನ್ನ ಮಾಡಿಸುವನೊ
ಸಾಕಿದವರನ ಬಡಿದು ನೂಕಿ ಸತಿಯಳಿಂದಾ
ನೇಕಪರಿ ಮಾಡಿಸುವನೊ
ಪೋಕತನದಲ್ಲಿ ವಿವೇಕ ರಹಿತನಾಗಿ
ಗೋಕುಲವ ಹಳಿದು ಕೋ ವಾರೆವಿದ್ದವನಿಗೆ ೨

ಪರರ ವಡವೆಯ ನೋಡಿ ಧರಿಸಲಾರದೆ ಮನ
ಮರಗಿ ನಿಷ್ಠುರನಾಡಿ ಇರಳು ಹಗಲೂತ್ತ-
ಮರ ಬೈದು ಪಾಪಕ್ಕೆ ಗುರಿಯಾಗಿ ನಸುನಗುತ
ಪಿರಿದು ದುರ್ವಿಷಯದೊಳು ಹೊರಳಿ ಹಕ್ಕಲನಾಗಿ
ಮರಳಿ ಜನಗಳಲ್ಲಿ ಜನಮವಾಗುವನಿಗೆ ೩

ಅತಿಥಿ ಅಭ್ಯಾಗತರ ಕಂಡು ಸ್ಮರಿಸದೆ
ಮತಿಹೀನವಾಗಿ ಭ-
ಕುತಿ ಲೇಸ ತಾ ತಾ ಕೊಂಬೆನಯ್ಯಾ ಆರನಾರನಾದರು ಕರಿಯೆ
ಹಿತದವರ ಜರಿದೆನೋ ಮಿತಿಯಿಲ್ಲನಾಚಾರ
ಚತುರೋಕ್ತಿಯಲಿ ನೆನೆಸಿ
ಪ್ರತಿ ಯಾರು ನಿನಗೆಂದು ಗರ್ವದಲ್ಲಿದ್ದವನಿಗೆ ೪

ಆದಿಯಲಿ ಬಂದದ್ದು ಅಂತ್ಯದಲಿ ಪೋಗುವ
ಹಾದಿಯನು ತಿಳಿತಿಳಿದು
ಕ್ರೋಧವನು ಬಿಡದೆ ಕಾದುವೆನು ಹಲ್ಲು ಕಡಿದು
ಸಾಧುಗಳ ನೋಡದಲೆ ವೇದಾರ್ಥಗಳ ಓದಿ ಶೋಧಿಸಿ ಕೇಳಿ
ವಾದವನು ಮಾಡಿ ಸಂಪಾದಿಸುವ ದುರ್ಧರನಿಗೆ ೫

ದಿನವೆಂದು ತಿಳಿಯದಲೆ ತೃಣ ಮೊದಲಾಗಿ
ದುರ್ಧನಕೆ ಕೈಕೊಡುವೆ । ಮೊದಲೆ
ಕನಸಿನೊಳಗಾದರೂ ಗುಣಿಸುವೆ ಪರರ ಹಿಂಸೆಯನು ಬಿಡೆ
ಕ್ಷಣವಾದರು ತನುವಿನ ಕ್ಲೇಶದಲಿ
ದಿನವ ಹಾಕಿದೆ ವ್ಯರ್ಥ
ದಣಿದಣಿದು ಈ ಪರಿಯನು ಮಾಡಿದವನಿಗೆ ೬

ಹುಟ್ಟಿದಾರಭ್ಯವಾಗಿ ಶಿಷ್ಟಾಚಾರವ ತೊರೆದು
ಕೆಟ್ಟ ಬಾಳಿದೆ ಧರಣೀಲೀ
ಸುಟ್ಟ ಸಂಸಾರದೊಳು ಸಟಿಯಾಡಿ
ಗುಟ್ಟಗುಂದಿದೆ ವಿಜಯವಿಠ್ಠಲ ನಿನ್ನ ನೆರೆ ಮರೆದು
ಕೆಟ್ಟು ನರಕಕ್ಕೆ ಮನಮುಟ್ಟಿ ಬೀಳುವವನಿಗೆ ೭

೪೧೧

ನಿನ್ನ ವಶದಲಿ ಇದ್ದು ಇದ್ದು
ಮುನ್ನೆ ದುರ್ವೃತ್ತಿಗೆ ಪೋಗುವುದೆನ್ನ ಮನಾ ಪ

ಚಿತ್ರವಾದ ಕರಿಯ ಶೃಂಗರಿಸಿ ಮೇಲೆ
ಛತ್ರಿಗೆ ನೆರಳಲ್ಲಿ ಕುಳ್ಳಿರೆನೆ
ಆನೆ ಕೆಳಗೆ ಇಳಿದು ಬೂದಿಯೊಳಗಿಪ್ಪ
ಕತ್ತೆ ಏರುವನೆಂದು ಇಚ್ಛೆ ಮಾಡುತಲಿದೆ ೧

ಕಾಲಕಾಲಕೆ ಸುಧಿಯ ಸವಿದು
ಮಾಣಿಕದ ಉಯ್ಯಾಲೆ ಮೇಲಾಡುತ್ತ ಬಾಳು ಎನೆ

ತಾಳವೃಕ್ಷವನೇರಿ ತಲೆಕೆಳಗಾಗಿ ತಾ
ಬೀಳುವೆನೆಂದು ಅಪೇಕ್ಷೆ ಮಾಡುತಲಿದೆ ೨

ವೇಣಿ ಮಾಧವರಾಯಾ ನಿನ್ನ ಚರಣಾಂಬುಜ
ಕಾಣುವ ಪ್ರಕಾಶ ಉದಾಸಸಿ
ಕ್ಷೋಣಿಯೊಳಗೆ ಮಹಾ ಕತ್ತಲೆ ಬಯಸುವೆ
ಹೀನನಂತೆಯಾದೆ ವಿಜಯವಿಠ್ಠಲರೇಯಾ ೩

೪೧೧

ನೀನೊಲಿದುದ್ದಕ್ಕೀ ಇಹ ಸೌಖ್ಯವೇಯಿನ್ನು
ನಾನೊಲ್ಲೆ ನಾನೊಲ್ಲೆ ಸರ್ವೇಶಾ ಪ

ನಿನ್ನನುರಾಗದಿ ಗತಿಯೆಂದು ನಂಬಿದ
ಮಾನವನೊಡನೆ ನೀನಾಡುವದೆಲ್ಲಾ ಅ.ಪ

ಷಡುರಸ ನಾನಾ ಸುಭೋಜನವ ಬಿಡಿಸಯ್ಯ ದಾನವ ಭಂಜನ
ಒಡಲಿಗೋಸುಗ ನಿನ್ನನು ಸೇವಿಸುವೆ
ಒಡೆಯ ದಾಂಟಿಸೊ ಭವಕಡಲವೇಗ ಜ್ಞಾನ
ತೋರಿಸದಿರೆ । ದಿವ್ಯಾಂಬರಗಳ
ಉಡಿಸಿ ಸ್ವರ್ಣಾಭರಣಗಳ ತೊಡಿಸಿ । ಬರಿ ಮಾತಿನಲಿ ಮೊರೆ
ಯಿಡುವೆನೊ ವಾಕ್ಕಾಯದಿಂದಲೀ ೧

ಜನರು ಜನಪರಿಂದ ಮನ್ನಣೆ ಸ್ವಲ್ಪ ।
ಎನಗೆ ಹತ್ತದು ಕಾಣೊ ನಿನ್ನಾಣೆ ॥
ಮನುಜನ ಸೈಸಿದವನ ಬಾಯೆನೆ ಬರೆವಾ ।
ಹನತೇರು ಮೊದಲಾದ । ಘನ ವಿಭವ ದೊರೆಯದೆ ।
ಜನುಮದಲಿ ಬಂದದಕೆ ಮಹಾ ಸಾಧನವಿಧಾರಿ ತೋರಿಸಿ ।
ನಿನ್ನ ದಾಸನೆನಿಸದೆ । ನಿಸ್ಸಾರವೆಣಿಸಿ ತೋರ್ಪ ದೇವ ಸೈಸೈ ೨

ಕಂಡಕಂಡಲಿಯೆನ್ನ ತಿರಿಗಿಸಿ ಬಹು
ಥಂಡ ಥಂಡದಲೆನ್ನ ಮರುಗಿಸಿ ।
ಮಂಡಲದೊಳು ಪ್ರಚಂಡನೆನಿಸದಿರು ।
ಉಂಡ ಪರಾನ್ನಕೆ ದಂಡನೆ ಬಹಳಲ್ಲಿ ।
ತೊಂಡ ನಾನಯ್ಯ ಕರುಣಸಾಗರ ।
ಖಂಡ ಮತಿಯನು ಕೊಡದೆ ಮುಕ್ತರ ।
ಹಿಂಡಿನೊಳು ಕೂಡಿಸುವದೆಮ್ಮನು ।
ಅಂಡ ಜಾಂಸಗ ವಿಜಯವಿಠ್ಠಲಾ ೩

೪೧೨

ನೀ ಪಾಲಿಸದಿರಲು ನಾ ಪೋಗುವುದು ಎತ್ತ
ನೀ ಪೇಳೊ ಪರಮ ಪುರುಷಾ
ಅಪಾರ ಮಹಿಮ ಅಗಣಿತ ನಾಮ ಸುರ ಪ್ರೇಮ
ಸ್ವರ್ಣ ಗಿರಿವಾಸ ನರಕೇಶ ಭೂಷಾ ಪ

ಉದರ ಚಿಂತಿಯಲಿ ಉದಯದಲಿ
ಯೆದ್ದು ಅವರಿವರ ಸದನದಲ್ಲಿಗೆ ಹೋಗದೆ
ಮೃದು ವಾಕ್ಯವಾಡದಲೆ
ಮದ ಗರ್ವ ಬಲದಿಂದ ಎದುರಾದವರ ಜರಿದೆ
ಮನಸಿನ ಕ್ಲೇಶದ ಪರಸುದತಿಯರನೀಕ್ಷಿಸಿ
ವಿದಿತ ಕರ್ಮಗಳ ತೊರೆದೆ
ಒದಗಿ ಬಂದ ಪುಣ್ಯ ಬರಿಗೈದು ಪಾಪದ ಹುದಲೊಳಗೆ
ಬಿದ್ದು ಸಂಪದವಿಗೆ ದೂರದವನಾ ೧

ಉತ್ತಮರ ನಿಂದಿಸಿದೆ ಉಚಿತಾರ್ಥ ತಿಳಿಯದಲೆ
ಹೆತ್ತವರನ್ನ ಜರಿದೆ
ಹತ್ತೆಗರೆದು ಪರಿಪಾಲಿಸಿದ ದಾತರನು
ಹೊತ್ತಾಕೆ ಪ್ರೀತಿ ಪೇಳುವೆ

ಮತ್ತೆ ಧರ್ಮವೆಯಿಲ್ಲಾ ಮಹಾಕೃಪಣನಾಗಿ ಪರ
ವಿತ್ತಾಶೆ ಪೋಗಿ ಮುಳವೆ
ಚಿತ್ತಪಲ್ಲಟವಾಗಿ ವಿಷವೆಂಬ ಹಾವಿನ
ಹುತ್ತಿನೊಳು ಬಿದ್ದು ಪುನಿತನಾಗದವನಾ ೨

ಗುರು ನಿಂದಕರ ನೋಡಿ
ಸರವಾಗಿ ಪೋಗಳುವೆನೊ ವೇದ ಸಮ್ಮತವೆ ಬಿಟ್ಟು
ಮರೆವೆ ನಿನ್ನಯ ಸ್ಮರಣೆ ಗತಿಗೆ ಸಾಧನವೆಂದು
ಅರಿದರಿದು ಬುದ್ಧಿಗೆಟ್ಟು
ಹರಿವಾಸರದುಪವಾಸ ಮಾಡುವ ಜನರಿಗೆ
ಮುರಳಾಡಿ ಮುಟ್ಟಿಯಲಿಟ್ಟು
ಪರಮ ಜಾಗರ ತೊರೆದು ಹಿರಿ ಪಾಮರನಾಗಿ
ಹರಣ ಸ್ಥಿರವೆಂದು ಮದುಕರಿಯಂತೆ ತಿರುಗುವೆ ನಾ ೩

ಕಾಸಿಗೆ ಕಾಸು ಘಾರ್ತಿಸಿ ಗಳಿಸಿ ಬಿಡದೆ
ಮೀಸಲಾ ಪದಾರ್ಥವೆಂಬೆ
ದೋಷಕ್ಕೆ ಗುರಿಯಾಗಿ ದುರ್ಜನರ ಒಡಗೂಡಿ
ರಾಸಿ ದುರನ್ನ ಉಂಬೆ
ಆಶೆಯನು ತೊರಿಯದಲೆ ಉಪರಾಗ ಪರ್ವದಲಿ
ಕಾಸು ದಾನವನು ಕೊಂಬೆ
ಲೇಸಾದರೆ ಹಿಗ್ಗಿ ಹಾರೈಸುವೆನು ಇಷ್ಟು
ಕ್ಲೇಶ ಬಂದರೆ ದೈವವೆಂದು ದೂಷಿಸುವೆನಾ ೪

ಒಂದೇ ಎರಡೇ ಎನ್ನ ಅಪರಾಧ ಪೇಳಿದರೆ
ಎಂದೆಗೆಂದಿಗೆ ಸವಿಯದು
ನೊಂದು ದುಶ್ಚಿತ್ತದಲಿ ನೀನೆ ಗತಿ
ಎಂದು ಬಾಗಿಲ ಕಾಯಿದುದು
ಬಂದು ಮಾತುರದಲ್ಲಿ ಬಲು ದಯಾಳು ಎನ್ನ
ಸಂದೇಹವನು ತೊಡೆದು
ಮುಂದಾದರೂ ಭವದ ಅಂಧ ಕೂಪದೊಳಿಡದೆ
ಪೊಂದಿಸುವ ನಿನ್ನವರೊಳಗೆ ವಿಜಯವಿಠ್ಠಲ ಎನಗೆ ೫

४೧೩

ನೊಂದು ಸಂಸಾರದೊಳಗೊಂದಿಸುವೆನೋ ಇಂದು
ಬಿಂದು ಮಾಧವ ಯಾದವ ಪ

ಕರುಣಬಾರದೆ ನಿನಗೆ ಅಕಟಕಟ ಅಕಟಕಟ
ಶರಣ ನಾ ನಿನಗಲ್ಲವೇ ಸ್ವಾಮಿ ನಿನ್ನ
ಮೊರೆಹೊಕ್ಕೆ ಸರ್ವಾಂತರ್ಯಾಮಿ–ಎನ್ನ
ಎರವು ಮಾಡುವರೇನೋ ಪ್ರೇಮಿ–ಇನ್ನು
ಪರಿಹರಿಸು ಸಂಚಿತಾಗಾಮಿ–ಇದೇ
ಸರಿಯೇನೊ ಜಗದೊಳಗೆ ಭಕುತವತ್ಸಲನೆಂಬ
ಬಿರುದು ಪೊಳ್ಳಾಗದೇನೊ ನಿರುತ ಖ್ಯಾತ ೧

ಸತತ ಸುಖವುಳ್ಳರೆ ಬಾಯ್ದೆರೆದು ಪಲ್ಗಿರಿದು
ನುತಿಸಿ ಬೇಡಿಕೊಂಬೆನೇ ನಿನ್ನ– ಮುಂದೆ
ಗತಿಯ ಕಾಣದಲೆ ಚಾಲ್ವರಿದೆ ಭೇದ–
ಮತಿ ಕೊಡದೆ ನೋಡುವುದು ಬರಿದೆ–ಸರ್ವ
ಕ್ಷಿತಿಯೊಳಗೆ ನೀನೆಂದು ಅರಿದೆ–ವರ–
ತತುವ ನಿಯ್ಯಾಮಕರ ಬಳಿ ಪಿಡಿದು ನಿನ್ನಂಘ್ರಿ
ಶತಪತ್ರ ತೋರಿಸೈಯ್ಯಾ ಜೀಯಾ ೨

ಶೃತಿಶಾಸ್ತ್ರ ಪೌರಾಣ ಭಾರತ ರಾಮಾಯಣ
ಇತಿಹಾಸ ಪಾಂಚರಾತ್ರ ನಿಗಮ–ನಿನ್ನ
ತುತಿಪ ಭಕುತರಿಗೆ ತಲೆಬಾಗಿ–ಕೊಂಡು
ಪ್ರತಿದಿವಸದಲಿ ಚೆನ್ನಾಗಿ–ವಲಿದು
ಅತಿಶಯವ ಕೊಡುತ ಲೇಸಾಗಿ–ವಿಘ್ನ
ತತಿಕಳೆದು ನೀ ಬಂದು ಸಾರೆ ಬೆರಗಾಗುತಿದೆ
ಪತಿತ ಪಾವನ ಮೋಹನ–ಚೆನ್ನ ೩

ತಡವ್ಯಾಕೆ ಗುಣಕಾಲ ಕರ್ಮದೇಶಗಳೆಲ್ಲ
ವಡೆಯ ಎನ್ನಾಧೀನವೇ ಪೇಳೊ–ದು:ಖ
ಬಿಡಿಸುವುದು ನಿನಗುಚಿತವಲ್ಲ–ಪಾಟು
ಬಡಿಸದಿರು ಸಿರಿ ಲಕುಮಿನಲ್ಲ–ಒಂದು
ನುಡಿವೆ ನಾನಾಂತರ್ಯ ಸೊಲ್ಲ–ಇಂತು
ಕಡೆಮಾಡಿ ನೋಡದಿರು ದಿವಸ ಹಿಂದಾಗುತಿದೆ
ಬಡವರಾಧಾರಿ ಕರುಣೀ–ದಾನಿ ೪

ಧ್ರುವನು ನಭದೊಳು ಇಲ್ಲಿ ರಾವಣಾನುಜ ಅಧೋ
ಭುವನದಲಿ ಬಲಿರಾಯನ ನೋಡಿ, ನಾನು
ತವಪಾದ ಗತಿಯೆಂದು ಬಂದೆ–ಮಹಾ
ಭವಣೆ ಬಟ್ಟೆನೊ ಕೇಳು ಹಿಂದೆ–ಜಗದಿ
ತ್ರಿವಿಧ ತಾಪಗಳಿಂದ ನೊಂದೆ–ಈ
ಅವಸರಕೆ ಬಂದೊದಗಿ ನಿನ್ನ ನಾಮಾಮೃತದ
ಸವಿದೋರೊ ದ್ವಾರಾವತಿಯ–ಜೀಯ ೫

ಅಂಧಕೂಪದಲಿ ಬಿದ್ದವನ ನೋಡಿ ನಿನಗೆ ಚ
ಕ್ಕಂದವಾಗಿದೆಯೊ ಕಾಣೆ–ನಾನು
ಸಂದೇಹ ದ್ವೇಷದವನಲ್ಲ–ಇದು
ಎಂದೆಂದಿಗೂ ಪುಸಿಯು ಅಲ್ಲ–ಹೃದಯ–
ಮಂದಿರದೊಳು ಬಲ್ಲೆಯೆಲ್ಲ–ಸ್ವಾಮಿ
ನೊಂದು ಕೂಗಿದರೆ ಎಳೆಗಂದಿಯೆಂಬಾ ಮಾತು
ಇಂದು ಎತ್ತಲಿ ಪೋಯಿತೋ ತಾತ–ನೀತ ೬

ಗುಣವಂತ ಬಲವಂತ ಜಯವಂತ ಸಿರಿವಂತ
ಘನವಂತ ಧೈರ್ಯವಂತ ಶ್ರೀಕಾಂತ–ಎನ್ನ
ಮನದ ದುಮ್ಮಾನವನೆ ಬಿಡಿಸೊ–ನಿನ್ನ
ಅನವರತ ನಾಮವನು ನುಡಿಸೊ–ಮಧ್ವ

ಮುನಿ ಕರುಣ ಕವಚವನು ತೊಡಿಸೊ–ಇದೇ
ಜನುಮ ಜನುಮಕೆ ಬೇಡಿಕೊಂಬೆ–ಶರಣೆಂಬೆ
ಪ್ರಣತ ಹೃದಯಾಬ್ಜ ತುಂಬೆ–ಕಾಂಬೆ ೭

ಮಾನಸ್ನಾನವನುಂಡು ಮತಿಗೆಟ್ಟ ಪೂರ್ಣ ವಿ
ಜ್ಞಾನಮಯನೆ ನಿನ್ನ ಮರೆದೆ–ಕರ್ಮ
ಪ್ರಾಣೇಂದ್ರಿಯಂಗಳು ನಿನ್ನ ವಶವೊ–ಇಂಥ
ಜಾಣತನ ಬಹಳ ಸಂತಸವೊ–ಹೀಗೆ
ಮಾಣದಲೆ ಇಪ್ಪ ಸಾಹಸವೋ ಚನ್ನ
ಜ್ಞಾನ ಭಕುತಿ ವಿರಕುತಿ ಕೊಟ್ಟು
ನಿನ್ನವರೊಳಾನಂದದಲಿ ನಿಲ್ಲಿಸೈಯ್ಯ ಜೀಯ ೮

ಶಂಖ ಚಕ್ರ ವರಾಭಯ ಹಸ್ತದಲಿ ನಿಂದ
ವೆಂಕಟಾಚಲ ನಿವಾಸ ಶ್ರೀಶ–ನಿನ್ನ
ಕಿಂಕರನ ಕಿಂಕರನೊ ನಾನು–ಅಕ–
ಳಂಕ ಮನುಜನ ಮಾಡೊ ನೀನು–ಭವ
ಸಂಕಟವ ಕಳೆಯಾ ಸುರಧೇನು–ಬೊಮ್ಮ
ಶಂಕರ ವಿನುತ ವಿಜಯವಿಠ್ಠಲ ಹರಿ–
ಣಾಂಕ ಸೌವರ್ಣ ಪೂರ್ಣ ಸಂಪೂರ್ಣ ೯

೪೧೪

ನೋಡಿ ನೋಡಿನೊ ರಂಗಾ ನಿನ್ನ ನೋಡಿನೊ
ಆಡಲೇನಯ್ಯಾ ಪರಸತಿಯರ ಮೋಹಕ್ಕೆ ಸಿಲುಕಿ ಪ

ಹೆಣ್ಣ ನಾ ಕಾಣುತ ಮನಸು ದ್ರವಿಸುವದು ದೃಢವಾಗಿ
ಮುನ್ನೆ ದಾರಿದ್ರತನ ಯೆಣಿಸಿಕೊಳದೆ
ಕಣ್ಣು ಹೋಗುವ ಸುದ್ದಿ ತಿಳಿಯದಲೆ ನೀಕ್ಷಿಸಿ
ಬನ್ನ ಬಡುವೆನೊ ರಂಗ ನಿನ್ನ ಮೂರ್ತಿಯ ನಿತ್ಯ ೧

ಜಲ್ಪಸಿಲ್ಪಿಗಳಿಂದ ಮಂತ್ರ ಮಾಡುವೆ ಅವಳಾ
ಬಲ್ಪು ವಯ್ಯಾರ ಗುಣಗುಣಿಸಿಕೊಳುತಾ
ತಲ್ಪಮಿಕ್ಕಾದ ಭೋಗದ್ರವ್ಯ ಬಯಸಿ ವಿ
ಕಲ್ಪ ಸಂಕಲ್ಪದಲ್ಲಿ ಬಳುಲುವೆನುಬ್ಬಸವಳಿದು ೨

ವ್ಯಾಖ್ಯಾತ ಪಂಡಿತದ್ವ್ಯಾಪಕ ಪಾಠಕ ಮಹಾ
ಪ್ರಖ್ಯಾತ ವೇದವೇದಾಂತ ಪ್ರೌಢ
ಸೌಖ್ಯ ಪುಸ್ತಕ ಪಾಣಿ ಜ್ಞಾನಿ ಎನಿಸಲು ಅವಳ
ಆಖ್ಯಾನ ಕೇಳುತಲೆ ಕಿವಿಗೊಟ್ಟು ಲಾಲಿಸುವೆ ೩

ಬೀದಿಯೊಳು ಪೋಗುವವಾಳೊಂದು ಪ್ರಯೋಜನಕೆ
ಹಾದಿಯನು ಹಿಡಿದು ಸಮೀಪ ಬರಲು
ಪಾದಕಾದರು ಬಿದ್ದು ಮಾತಾಡುವೆನೆಂಬೊ
ಮೋದವನು ತಾಳಿ ಏಕಾಂತ ಹುಡುಕುವೆ ೪

ವಿಧವಾ ವ್ಯಾದಿಷ್ಟಾ ವ್ಯಭಿಚಾರಿ ಅಂಧಕ ಮೂಕಿ
ಬಧಿರೆ ಹೀನಾಂಗ ಅವರೋತ್ತಮ ಜಾತಿ
ವಿಧಿ ನಿಷೇಧವನು ಚಿಂತಿಸದೆ ತೀವರದಿಂದ
ಅಧೋಗತಿಗೆ ಇಳುವೆನು ಸತ್ಕರ್ಮವನು ತೊರೆದು ೫

ನೀರು ಸೀರೆವೊಗಿವಾಗ ಮೈ ತೊಳೆದು ಉಡುವಾಗ
ಊರು ಕುಚ ಕಚ ನೋಳ್ಪ ಆಶೆಯಲ್ಲಿ
ಮೂರು ಹತ್ತನೆ ತತ್ವ ನೆನೆನೆನೆದು ಯೋಚಿಸಿ
ವಾರಿತಿಯ ಕೇಳಿ ತಲೆದೂಗುವೆನೊ ಲೇಸಾಗಿ ೬

ಕಣ್ಣುಯಿದ್ದದಕೆ ಸಾರ್ಥಕವಾಗಲಿಲ್ಲ ಪ್ರ
ಸನ್ನ ಮೂರುತಿ ಯೆನ್ನ ಸಾಧನವೇನೊ
ಘನ್ನ ಏಲ್ಲೆಲ್ಲಿ ನಾ ನೋಡಿದರೆ ಅಲ್ಲಲ್ಲಿ
ನಿನ್ನ ರೂಪವ ತೋರೊ ವಿಜಯವಿಠ್ಠಲ ಒಲಿದು ೭

೪೧೫

ಪತಿತನ್ನ ಪಾವನ ಮಾಡುವ ರಂಗಾ ।
ಗತಿಯಿಲ್ಲದವರಿಗೆ ಗತಿಯೇ ನೀನೇ ಗತಿ ಪ

ನಿಂದಿರಲು ನೆರಳಿಲ್ಲ ನಿಲ್ಲಲು ನೆಲೆಯಿಲ್ಲ ।
ತಂದಿ-ತಾಯಿಯೆಂಬೋರು ಮೊದಲೆ ಇಲ್ಲ॥
ಒಂದು ಸಂಗತಿ ಇಲ್ಲ ಪಡದಾನಂದನರಿಲ್ಲ ।
ಬಂದು-ಬಳಗದವರು ಆರಿಲ್ಲ ಹರಿಯೇ ೧

ಕುಡಿಯಲು ನೀರಿಲ್ಲ ಕಾಲಿಡಲು ಇಂಬಿಲ್ಲಾ ।
ಪಿಡಿವೆನೆಂದರೆ ಮೇಲೆ ಕೊಡೆಯಿಲ್ಲ ॥
ಒಡನೆ ಬರುವರಾರಿಲ್ಲ ಸಂಗಡದಿ ।
ಆಡಿವೆನೆಂದರೆ ವಳ್ಳಿಗಾಯಿತೊ ಹರಿಯೆ ೨

ಧೈರ್ಯ ಕೊಡುವವರು ಇಲ್ಲ ದಾತರೊಬ್ಬರಿಲ್ಲ ।
ಕಾರ್ಯವೆಂದರೆ ಕೇಳಿ ಅರಿವರಿಲ್ಲಾ ॥
ವೀರ್ಯವು ಎನಗಿಲ್ಲ ವಸಿಷ್ಠನು ನಾನಲ್ಲ ।
ಧೈರ್ಯವು ದು:ಖವು ವೆಗ್ಗಳಿಸಿತೋ ಹರಿಯೆ ೩

ತನ್ನವರು ತನಗಿಲ್ಲ ತಾಳು ಎಂಬುವರಿಲ್ಲ ।
ಸಣ್ಣ ಮನಸ್ಸು ಅಲ್ಲದೇ ಘನವು ಯಿಲ್ಲ ॥
ಮುನ್ನ ಮಾಡಿದ ಕರ್ಮ ಬೆನ್ನ ತೊಲಗಲಿಲ್ಲ ।
ಇನ್ನು ಜನ್ಮ ವ್ಯರ್ಥವಾಯಿತೊ ಹರಿಯೇ ೪

ಸಾಕು ಈ ದುಷ್ಕೃತ ಬೇಕು ನಿನ್ನಯ ಪಾದ ।
ಸಾಕಾರ ಮಾಡಿಕೊಂಬುವರ ಸಂಗಡ ॥
ಶ್ರೀಕಾಂತ ವೆಂಕಟ ವಿಜಯವಿಠ್ಠಲರೇಯ ।
ನೀ ಕರುಣಿಸಿದರೆ ಸಕಲಾರ್ಥವಹುದು ೫

೪೧೬

ಪತಿತಪಾವನ ನಾಮ ಪೂರ್ಣಕಾಮಾ ।
ಗತಿಯ ಪಾಲಿಸೊ ಎನಗೆ ಗುರುಸಾರ್ವಭೌಮಾ ಪ

ಹದಿನಾರು ಸಾವಿರ ಸುದತಿಯರೆಲ್ಲರು ।
ತ್ರಿದಶವಿರೋಧಿಯ ಸದನದಲ್ಲಿ ॥
ಮದದಿಂದ ಸೆರೆಬಿದ್ದು ಹದುಳ ಕಾಣದೆ ।
ಸುತ್ತಿಸಿದರು ಮನದೆ ನಾರದನಿಂದ ನಲಿದಾಡಿ ೧

ಕಾರ್ತಿಕ ಮಾಸದಲಿ ಕಾಂತೆಯ ಒಡಗೂಡಿ ।
ಕಾರ್ತರಥವನೇರಿ ಕೀರ್ತಿಪುರುಷಾ ॥
ಧೂರ್ತನ ಕೊಂದು ಬಾಲೆಯರಾರ್ತವ ಪರಿಹರಿಸೆ ।
ತೀರ್ಥಧರಾದಿಗಳು ನರ್ತನದಲಿ ಪೊಗಳೆ ೨

ಇಂದುಮುಖಿಯರ ಬಂಧನ ತರಿದವರು ।
ಅಂದು ಉತ್ಸಾಹದಿಂದ ದ್ವಾರಾವತಿಗೆ ॥
ಬಂದು ಅಭ್ಯಂಗದಲಿಂದ ಮಜ್ಜನ ಮಾಡೆ ।
ಮಂದಾರ ಮಳೆ ನಭದಿಂದ ಸುರಿಯೆ ೩

ದೇವ ಶೃಂಗಾರವಾಗೆ ವೇದಾದಿಗಳು ನಿಂದು ।
ತಾವೆಲ್ಲ ಮಣಿಭೂಷಣಾವಳಿಯಿಟ್ಟು ॥
ನೋವ ಪೋಗಾಡಿಸಿ ಪಾವನರಾಗಿ ಸುಖ– ।
ವನಧಿಯೊಳು ಮೀಯುತ್ತ ಕೊಂಡಾಡೆ ೪

ನರಕಾಸುರನ ಕೊಂದು ಇರಳು ಈ ಪರಿಯಲ್ಲಿ ।
ಹರಿಮಾಡಿದ ಚರಿತೆ ತಿಳಿದುದನು– ॥
ಚ್ಚರಿಸಿದವನ ಕುಲ ನರಕದಿಂದುದ್ಧಾರ ।
ಮೊರೆಹೊಕ್ಕೆ ಇದಕೇಳಿ ವಿಜಯವಿಠ್ಠಲರೇಯಾ ೫

೪೧೭

ಪಾಪೇಂದ್ರಿಯಗಳಿಗೆರಗಿ ಪರಹಿತಾರ್ಥವ ಮರೆದು
ವ್ಯಾಪಾರ ವಿಷಯಂಗಳಲ್ಲಿರೆ ಯಮನೊಯ್ದು
ಕೋಪಾಟೋಪದಲಿಂದ ದಂಡಿಸಿ ತಮಸಿನ
ಕೂಪದಲ್ಲಿ ಹಾಕದಲೆ ಬಿಡುವನೆ ಮರುಳೆ ಪ

ಉಡಿಗೆ ತೊಡಿಗೆ ಇಡಲು ಮಡದಿಯಳ ಮುಖ ನೋಡಿ
ಕಡು ಹಿಗ್ಗಿ ಹುಗ್ಗಿ ಪಡಗದಂತೆ ಹಿರ್‍ರನೆ
ಪಿಡಿದು ಗಲ್ಲವ ಮುಟ್ಟಿ ಮುಡಿಗೆ ಮುಡಿವಾಳವನು
ತಡಿಯದಲೆ ಮುಡಿಸುತ್ತಲಿ
ಕುಡಿತೆಗಂಗಳಾ ಸವಿನುಡಿಗಳ ಕಕ್ಕಸ ಕುಚ
ವಡನೊಡನೆ ನೋಡಿ ಸುಖಬಡುತಾ
ಬಡನಡುವಿಗೆ ತೊಡಿಗೆ ಕಿರ್ದೊಡೆಗೊಲಿದು
ಬಿಡದೆ ಕಾಳ್ಯಾಡುವುದು
ಸುಡುಸುಡು ಮಾಡಿದರಿನ್ನಾವ ಗತಿ ಮರುಳೇ ೧

ನೆಂಟರು ಮನೆಗೆ ಬರಲು ವಂಟಿಯಂತೆ ಮೊಗವ
ಸೊಂಟ ಮಾಡಿಕೊಂಡು ಕಂಠವನು ತರ್ಕೈಸಿ
ಕುಂಟವಾರ್ತೆಯ ಕೇಳಿ ಬಂಟನು ನಾನೆಂದು
ತೊಂಟತನ ಬಗೆ ತೋರುತಾ
ಉಂಟಾದ ಗೋಧಿಯ ಸೊಂಟೆ ಬೆಲ್ಲನು ತಂದು
ಹೆಂಟಿಯಂತೆ ಹದಿನೆಂಟು ಕಡುಬನೆ ಕೊರಿಸಿ
ವಂಟಿಲಿ ಕುಳಿತು ಸುಂಡಿಗೆಯನ್ನು ಚಾಚುತ್ತಾ
ಎಂಟು ಮಡಿಸದೆ ವಾರ್ತಿ ಪೇಳುತಲಿ ಮರುಳೇ ೨

ಇಂದು ನಮ್ಮನೆ ಪ್ರಸ್ತವೆಂದು ಆರಾದರೂ
ಬಂದು ಪೇಳಲು ಊರ ಹಂದಿಯಂತೆ ಕಾಯಿದು
ಒಂದು ಕಾಳು ತಿನದೆ ಸಂದಿಗೊಂದಿ ಸುತ್ತಿ
ಸಂಧ್ಯಾಕಾಲ ವಾನರಾಗುತ್ತ

ಚಂದದಿಂದ್ಯುಕ್ತಿಯೊಳು ದ್ವಂದ್ವದಲಿ ಕುಳಿತಿವರು
ತಂದೆ ತಾಯಿ ಕಡೆ ಬಂಧುಬಳಗವೆಂದೂ
ಒಂದಿಷ್ಟು ಕಡಿಮೆ ತಿನ್ನದೆ ಪರರ ಒಡವೆಯನು
ತಿಂದು ಡರ್‍ರನೆ ತೇಗಿ ನಸುವ ನಗುವ ಮರುಳೇ ೩

ನಾಡಾಡಿ ಚಾಡಿ ಮಾತಾಡಬೇಕಾದರೆ
ಖೋಡಿ ನಾಲಿಗೆ ದೊಡತಾಗಿ ಬಾಹಿನೀ
ನಿಡಿ ಲಟಲಟವೆನುತಾ ಕೋಡಗದಂತೆ ಕುಳಿತು
ಹೇಡಿ ಪರನಿಂದೆಗಳಿಗೆ ಬಾಡದಲೆ ಬತ್ತದಲೆ
ಮಾಡಿದ ಮಹಾಪುಣ್ಯ ಕಾಡಿಗೊಪ್ಪಿಸಿ ಕೊಟ್ಟ
ಮೂಢ ಗಾರ್ಧಬನಂತೆ ಓಡಾಡಿ ಬಳಲಿ
ನಾಡಾಡಿ ಸುದ್ದಿಗಳಿಗೆ ಬಿಡಿ
ಬಿಡಿಂದಾ ತಿರುಗುವಾ ಹೀನ ಮರುಳೇ ೪

ಸಂಸಾರವೆಂಬಾ ಸಾರಾ ಸಾಗರ ಮಧ್ಯ
ಹಿಂಸನಾಗದೆ ಬಿಟ್ಟು ಇದರಂತೆ ಭಕುತಿ ಮರು
ದಂಶ ಗುರು ಮಧ್ವಮುನಿರನ್ನನಾ ಶ್ರೀ ಚರಣ
ಸಂಶಯವಿಲ್ಲದಲೆ ನಂಬಿ
ಸಂಸಾರ ಉತ್ತರಿಸು ಸಂದೇಹ ಇದಕಿಲ್ಲ
ಕಂಸಾಸುರನ ಪ್ರಾಣಹರ ಎನ್ನ ಮನಸ್ಸಾ
ಹಂಸ ಶ್ರೀ ವಿಜಯವಿಠ್ಠಲನ್ನ ಪಾದದಾ
ಪಾಂಶವೊ ಮಾಡಿ ಗತಿಯಲಿ ಬಾಳು ಮರುಳೇ ೫

೪೧೮

ಪಾಹಿ ಪಾಂಡವ ಪರಿಪಾಲ ನೀನೇ ನಿತ್ಯ
ಮಹದಾದಿವಂದ್ಯಾ ಸುಶೀಲಾ ಪ

ದೈಹಿಕ ಮೊದಲಾದ ಕರ್ಮವ ಮಾಡಿಸಿ
ಮೋಹಕ ಪಾಶವ ಓಡಿಸು ಕೇಶವಾ ಅ.ಪ

ಇಂದ್ರತನಯಾ ಮಾನಭಂಗ ಮಾಡಿದೆ ನೀನು
ಇಂದು ಉಂಡೆನೋ ಸಿರಿರಂಗಾ
ಮಂದರೋದ್ಧರ ಕೋಮಲಾಂಗಾ ಕೇಳೊ
ಪೊಂದಿಸು ಸುಜನರ ಸಂಗಾ
ಕಂದರ್ಪಜನಕ ಆನಂದ ವಿಗ್ರಹ ಪೂರ್ಣ ಮಾತನು
ಸುಂದರ ನಿಜ ಭಕ್ತ ವೃಂದ ಮಹೋದಧೇ ೧

ಕಾಲಕರ್ಮ ಗುಣದಿಂದಾ ವೃಥಾಯು
ವೇಳೆಯ ಕಳದೆ ಮುಕುಂದಾ
ಪೇಳಾ ಲೇಸೊ ಪ್ರತಿ ಬಂಧಾ ಇನ್ನು ನಾನು
ತಾಳಲಾರೆ ದು:ಖದಿಂದಾ
ಆಲಸ ತಾಳದೆ ಆಲಿಸು ಮಾತನು
ಆಳುಗಳೊಳಗಿಹ ಆಳಾನೆಂದು ೨

ಅನಾದಿಯಿಂದಲಿ ನಿನ್ನ ಪದಗಳ
ಧ್ಯಾನವ ಮಾಡುವೆ ಚನ್ನಾ
ನಾನಾ ಬಗೆಯಿಂದ ಯೆನ್ನಾ ಸಾಕುತಲಿಪ್ಪ
ನೀನೆ ಮುಖ್ಯನೊ ಪ್ರಸನ್ನ
ಅನಂತಶಯನ ಭೋ ವಿಜಯವಿಠ್ಠಲರೇಯ
ಮಾನದಲಿ ನಿಂದು ಪ್ರಾಣಪ್ರೇರಕನಾಗೊ ೩

೪೧೯

ಪಾಹಿ ಮೋಹನ ವಿಠಲ ಪರಮಕರುಣಾಜಲಧಿ
ಮಹದಾದಿ ದೇವ ವಂದ್ಯ ।
ಮೋಹಪಾಶವ ಬಿಡಿಸಿ ನಂಬಿದವನಿಗೆ ಒಲಿದು
ರಹಸ್ಯಮತಿ ಕೊಡುವುದು ಸ್ವಾಮಿ ಪ

ನೀನಿತ್ತ ಮಾತುಗಳು ಪೊಳ್ಳಾಗಬಲ್ಲವೆ
ಅನಂತ ಜನುಮವಾಗೆ

ಆನೊಬ್ಬನೆನ್ನದಿರು ಕೀರ್ತಿಸುವ ನರನೆಂದು
ಜ್ಞಾನಿಗಳಿಗರಿವಾಗಿದೆ
ಏನಯ್ಯ ನಿನ್ನಂಘ್ರಿ ಭಜಿಸದಲೆ ಇರುತಿಪ್ಪ
ಮಾನವನ ಕ್ಲೇಶಕೆಣೆಯೆ
ಆನಂದ ನಂದನನೆ ತೃಣವ ಪಿಡಿದು ರುತುನ
ವನು ಮಾಡಿ ತೋರುವ ಸ್ವಾಮಿ ೧

ನಿನ್ನಧೀನ ಕರ್ಮಸ್ವಭಾವ ಮೊದಲಾಗಿ
ಅನ್ಯಥಾ ಯಲ್ಲಿ ಕಾಣೆ
ಮನ್ನಿಪುದು ಮುದದಿಂದ ಮುಂದನೆನ್ನದೆ ಎನ್ನ
ಬಿನ್ನಪವ ಬರಿದೆನಿಸದೆ
ಅನ್ಯನಿವನಲ್ಲವೊ ಎನ್ನನ್ನೆ ಪೊಂದಿದ
ನಿನ್ನ ದಾಸನ ದಾಸನು
ಉನ್ನಂತ ಗುಣವಿತ್ತು ಉರುಕಾಲ ಒಲಿದು ಪ್ರ
ಸನ್ನನಾಗೋ ಪಾವನ್ನರನ್ನ ೨

ನರರಿಗೆ ಸಾಧನ ಸತ್ಕೀರ್ತನೆ ಎಂದು
ಪರಮೇಷ್ಠಿ ಒರೆದನಿದಕೊ
ಪರಿಪರಿ ಬಗೆಯಿಂದ ಕರ್ಮಗಳ ಮಾಡಿದರೆ
ದುರಿತ ಬೆಮ್ಮೊಗವಾಗವು
ಪಿರಿದಾಗಿ ಬೇಡಿದೆನೊ ವಿಜಯವಿಠ್ಠಲ ನಿನ್ನ
ಶರಣರೊಳಗಿಟ್ಟು ಕಾಪಾಡು
ಸ್ಥಿರವಾಗಿ ಅಂಕಿತವ ಪ್ರೇರಿಸಿ ಕೊಡಿಸಿದ್ದು ಧರೆಯೊಳಗೆ
ಪರಿಪೂರ್ಣವಾಗಿ ಇರಲಿ ಸ್ವಾಮಿ ೩

೪೨೦

ಪ್ರಾಯಶ್ಚಿತ್ತವು ಎನಗೆ ಇಲ್ಲವಯ್ಯಾ ಪ

ನಾಯಿಯಂತೆ ಕಂಡ ಕಂಡಲ್ಲಿ ತಿಂಬುವಗೆ ಅ.ಪ

ಮಾನಸದಿ ತ–ದೇಕ ಧ್ಯಾನದಲ್ಲೇ ಕುಳಿತು
ಜ್ಞಾನಿಗಳ ಸಹವಾಸ ಮಾಡದಲೆ
ಹೀನರಾಶ್ರೈಸೆ ನಾಲಿಗ್ಯೆ ಹಿತವನೆ ಬಯಸಿ
ಮೀನು ಗಾಣಕೆ ಬಿದ್ದು ಮಿಡುಕುವಂದದಲಿ ೧

ಸರಸರನೆ ಕಂಠವನು ಗರಗಸದಿ ಕೊಯ್ದರೂ
ತರಹರಿಸದೇ ಪರರ ಮನೆಯನ್ನವನ್ನು
ಕರದಲಿ ಸ್ಪರ್ಶ ಸಲ್ಲದು ಎಂದು ಪೇಳುತಿರೆ
ಹಿರಿದಾಗಿ ಕುಳಿತು ಭುಂಜಿಸುವ ಪಾತಕಿಗೆ ೨

ಪರರಿತ್ತ ಕೂಳಿನಲಿ ಅವರ ಕುಲಕೋಟಿ ಸಾ–
ವಿರ ಜನುಮದಲಿ ಅರ್ಜಿಸಿದ ಪಾಪ
ಬೆರೆತಿಹುದು ಎಂದ್ಹೇಳಿ ಕೇಳಿ ಕೇಳಿ ನಗುತ
ಹರುಷದಿಂ ಕುಳಿತು ವಿಷವುಂಬ ಪಾತಕಿಗೆ ೩

ಯಾತ್ರೆಯ ಪೋಪಲ್ಲಿ ತಿಥಿ ಮತಿ ಹವ್ಯದಲಿ
ಮತ್ತೆ ಕುಲಹೀನದಲಿ ಅನ್ನ ತಿಂದು
ನಿತ್ಯ ಹಿಂಗದಲೆ ಈ ನೀಚ ಒಡಲನು ಹೊರೆವ
ತೊತ್ತು ಬಡುಕಗೆ ಪುಣ್ಯವೆತ್ತ ದೊರಕುವುದೊ ೪

ಕ್ಷಿಪ್ರ ಪ್ರಾಯಶ್ಚಿತ್ತ ಪೊಂದಿಹುದು ಕೇಳಯ್ಯಾ
ಈ ಪೃಥ್ವಿಯೊಳಗೆಲ್ಲ ನಿನ್ನ ನಾಮ
ಅಪ್ರಾಕೃತ ಕಾಯ ವಿಜಯವಿಠ್ಠಲರೇಯ
ಸುಪ್ರಸಾದವನಿತ್ತು ಶುದ್ಧಾತ್ಮನನು ಮಾಡು ೫

೪೨೧

ಬಿನ್ನಪವ ಕೇಳು ಜೀಯಾ
ಬನ್ನಬಡಿಸುವ ಮಾಯಾ
ಬೆನ್ನು ಬೀಳದಂತೆ ಮಾಡು ಎನ್ನ ಕೂಡಾಡು ಪ

ಹತ್ತದ ಜನಕೆ ನೀನು ಹತ್ತಿಲಿ ಇದ್ದರೆ ಏನು
ಉತ್ತರ ಲಾಲಿಸದಿಪ್ಪ ಉತ್ತಮ ಶ್ಲೋಕಾ
ತತ್ವ ಬಲ್ಲವಂಗೆ ದೂರತ್ತಲಿದ್ದರೇನು ಅವನ
ಪತ್ತಿಗೆ ಬಂದೊದಗುವ ಚಿತ್ತಜನಯ್ಯಾ ೧

ಇಂದೆ ಕೈವಲ್ಯವ ಕೊಡುವೆ ಒಂದು ಕ್ಷಣ ಮಾಯಿಗಳ
ಮಂದಿರದಲ್ಲಿ ಜನಿಸಿ ಎಂದು ನುಡಿದಡೆ
ಮಂದರಧರನೆ ಕೇಳು ಎಂದೆಂದಿಗೆ ಎನ್ನ ನರಕ
ಬಂಧನದಲ್ಲಿಡು ಅಲ್ಲಿ ಪೊಂದುವರಾರೊ ೨

ಶ್ವಾನ ಸೂಕರ ಗಾರ್ಧಭ ನಾನಾ ಕೆಟ್ಟ ಜಾತಿಯವರ
ಯೋನಿಯೊಳು ಕಟ್ಟಿಹಾಕಿ ಹೀನಾಯ ಉಣಸೀ
ಅನಂತ ಕಲ್ಪಕ್ಕೆ ಪವಮಾನ ಮತ ಪೊಂದಿಸಿ
ನಿರ್ವಾಣವೀವೆನೆಂದರಾಗೆ ನಾನಾದಿ ಬಯಿಪೆ ೩

ಗುರುಪ್ರಸಾದದಿಂದಲಿ ಪರಮ ಸದ್ಗತಿ ಎನ
ಗರಿದಲ್ಲ್ಯಾವಾಗಾದರು ಸ್ಥಿರವೆ ಸಿದ್ಧ
ಮರುತಮತ ಸಾರಲು ನಿರಯ ದುರಾತ್ಮಗಿಲ್ಲ
ಕರವ ಮುಗಿದು ಒಂದು ವರ ಬೇಡುವೆ ೪

ಭಾಗವತರ ಸಹವಾಸ ಭಾಗವತರ ಕಥಾಗುಣ
ಭಾಗ ಗುಣಿಸುವ ಮತಿ ಭಾಗೀರಥಿ ಯಾತ್ರೆ
ಭಾಗ್ಯವೆ ಪಾಲಿಸು ದುಷ್ಟ ಭಾಗಾದಿಯರೋಡಿಸಿ ಕಡೆ
ಭಾಗಕ್ಕೆ ಎನ್ನೆಡಬಲ ಭಾಗದಲಿ ಸುಳಿಯೊ ೫

ಕಾಣಿಕಾಣೆ ಜ್ಞಾನವಿಲ್ಲ ತುತಿಪುದಕ್ಕೆ
ಧ್ಯಾನವರಿಯೆ ನಿನ್ನನೆ ನಿದಾನಿಸಲಿಕ್ಕೆ
ನಾನಾಪರಾಧವ ಮಾಡಿದ ಮಾನವನೋ ದೀನಬಂಧೊ
ನೀನೊಲಿದು ಎನ್ನ ಮನಕೆ ಆನಂದ ತೋರೋ ೬

ರಜತಪೀಠ ಪುರನಿವಾಸಾ ರಜನಿಪತಿ ಸಂಕಾಶಾ
ರಜನಿಚರ ವಿನಾಶಾ ಸುಜನಮಾನಸಹಂಸ
ರಜದೂರ ಮಂದಹಾಸಾ
ವಿಜಯವಿಠ್ಠಲ ಶ್ರೀಶಾ ಭಜಿಪೆ ಲೇಶಾ ೭

೪೨೨

ಭಕುತಿಯ ಪಾಲಿಸು ಜೀಯಾ ಮುಂದೆ
ಮುಕುತಿಗೊಡವೆ ಯಾಕೆ ನೀನೊಲಿದ ಮೇಲೆ ಪ

ತನುವೆ ನಿನ್ನಾಧೀನವೆನಿಸು ಇದು
ಅನುದಿನ ಕೊಡು ಏಕಪ್ರಕಾರ ಮನಸು
ಧನ ವಡವೆಯ ಕಂಡ ಕನಸು ಎಂದು
ಎನಗೆ ತೋರಲಿ ನಿತ್ಯ ನಿನ್ನಂಘ್ರಿ ನೆನಸು ೧

ತತ್ವದ ಮತದೊಳಗಿರುಸು ಪುಶಿ
ಉತ್ತರ ಮತವೆಂಬ ಮಾರ್ಗವ ಮರೆಸು
ಉತ್ತಮರೊಳಗೆನ್ನನಿರಿಸು ಭವ
ವತ್ತುವ ನಿನ್ನ ನಾಮಮೃತ ಸುರಿಸು ೨

ಶ್ರವಣ ಮನನ ಧ್ಯಾನವೀಯೋ ಎನ್ನ
ಅವಗುಣವೆಣಿಸದೆ ಕರುಣಾಳು ಕಾಯೊ
ಅವಸಾನದಲಿ ನೀನೆ ಗತಿಯೊ ತ್ರೈ
ಭುವನೇಶ ವಿಜಯವಿಠ್ಠಲ ನೀ ದೊರೆಯೋ ೩

೪೨೩

ಭೂರಮಣನೆ ಕಾಯೋ ನಿತ್ಯ ಪ

ಸಂಸಾರವೆ ಸುಖವೆಂದು ಹಾರಯಿಸಿ ಬಾಳುವಾ ।
ನರನ ಉದ್ಧಾರ ಮಾಡುವುದು ಅ.ಪ

ಕಂಗಳಿಂದಲಿ ಪರರ ಮನೆಯ ಅಂಗನೆಯರ ನೋಡಿ
ಅಂಗಸಂಗವ ಬಯಸಿ ಪಾಪಕ್ಕೆ ಹಿಂಗದೆ ಗುರಿಯಾದೆ ೧

ಜಿಹ್ವೆಯನು ಪಿಡಿದು ನಿಲಿಸದೆ ವಿಹ್ವಲನಾಗಿ ಬಹುರಸ
ಸಂಹ್ವತಿಯ ಮೆದ್ದು ಪುಣ್ಯದಾ ಗಹ್ವರವು ಮರಿಯದೆ ೨

ನಾಸಿಕಕೊನೆಯಿಂದ ಅನರ್ಪಿತ ವಾಸನೆ ಕೈಕೊಂಡು
ಲೇಸಾಗಿ ಮನವುಬ್ಬಿ ನಲಿವುತ ದೇಶದೊಳಗೆ ಮೆರೆದೆ ೩

ಮುಪ್ಪಾಗುವತನಕ ಸುಖದಲ್ಲಿ ಅಪ್ಪಿದೆ ನಾರಿಯರ
ಒಪ್ಪಿದ ಧರ್ಮಗಳ ಖಳರಿಗೆ ಒಪ್ಪಿಸಿದೆನೊ ಹರಿಯೇ ೪

ದುಷ್ಟರಾಡುವ ವಾಕ್ಯ ಕೇಳುತ್ತ ಅಟ್ಟಹಾಸವ ಮಾಡಿ
ಕೆಟ್ಟು ಪೋಗುವೆನೆಯ್ಯಾ ವಿಜಯವಿಠ್ಠಲ ನೀನೆ ೫

೪೨೪

ಮಂದಮತಿ ನಾನಯ್ಯ ಮಂಗಳಾಂಗಾ
ಒಂದಾದರೂ ಗತಿ ಧರ್ಮ ಚಿಂತಿಸಲಿಲ್ಲಾ ಪ

ಜಪತಪಗಳರಿಯೆ ಉಪವಾಸಗಳರಿಯೆ
ಕೃಪೆ ಮಾಡಲರಿಯೇ ಪರಿಜನಗಳಲ್ಲಿ
ಕುಪಿತವನು ಬಿಡಲರಿಯೆ ಅಪರಿಮಿತವಾಗಿದ್ದ
ಅಪರಾಧಗಳ ಮಾಡಿ ತಪಿಸುವೆನು ಭವದೊಳಗೆ ೧

ಯಾತ್ರೆ ಮಾಡಲರಿಯೆ ತೀರ್ಥ ಮೀಯಲರಿಯೆ
ಗಾತ್ರದಂಡಣಿಯ ಮಾಡಲರಿಯೆ
ಸ್ತೋತ್ರ ಪಠಿಸಲರಿಯೆ ಗಾತ್ರ ಲಘು ನೋಡಿ ಸ
ತ್ಪಾತ್ರರನು ಭಜಿಸದೆ ವ್ಯರ್ಥ ಕಾಲವ ಕಳೆವ ೨

ಅನ್ನದಾನವರಿಯೆ ಮನ್ನಣೆ ಮಾಡಲರಿಯೆ
ಚನ್ನಾಗಿ ಬಂಧುಗಳು ಪೊರಿಯಲರಿಯೆ
ಎನ್ನ ಮನದೊಡಿಯ ಶ್ರೀ ವಿಜಯವಿಠ್ಠಲರೇಯಾ
ನಿನ್ನ ಭಕುತಿ ಒಮ್ಮೆ ಪಡಿಯಲರಿಯೆ ೩

೪೨೫

ಮಗನೆಂದೆಂಬುವ ಇನ್ನು ಮತ್ತಾವನೊ
ಜಗದೊಳಗೆ ನಿನ್ನ ವಿನಾ ಕಾಣೆಯೆಲ್ಲಿ ಪ

ರಕ್ತ ಶುಕ್ಲ ಮಿಶ್ರವಾದ ಸಮ್ಮಂಧ ವಿಷ_
ಭುಕ್ತನಾಗಿದ್ದ ಸಂಸಾರದೊಳಗಾ
ಸಕ್ತತನದಲಿ ಇಪ್ಪ ಎಂದಿಗೆಂದಿಗೆ ಇವನು
ಮುಕ್ತಿ ಕೊಡುವನೇನೊ ಮುಂದೊಲಿದು ಕೊಂಡಾಡೆ ೧

ಪ್ರಕೃತಿ ಬದ್ಧನಾಗಿ ನಾನಾ ಜನುಮಗಳಲ್ಲಿ
ವಿಕೃತಿಯ ಮಾಡುವ ಮದದಿಂದಲೀ
ಸುಕೃತವನು ಮರೆದು ದೂರಾಗಿ ಸಂಚರಿಸುವ–
ನುಕ್ರ ಮವಂದುಮಾಸ ಜನತೆ ಕೈಡೆಯಿರದವ ೨

ಪುತ್ರ ಉಳ್ಳರೆ ಅವಗೆ ಕಂಡಕಡೆ ತಿರುಗಿ ಉ–
ನ್ಮತ್ತನಾಗಿ ಕೆಟ್ಟ ಗ್ರಾಸವನ್ನು
ಹೊತ್ತಹೊತ್ತಿಗೆ ತಂದು ಹಾಕಬೇಕು ಸಾಕಿ
ನಿತ್ಯದಲ್ಲಿ ಅವಗಾಗಿ ಕ್ಲೇಶಬಡಲಿ ಬೇಕು ೩

ನಾಡೊಳಗೆ ನೀನೆ ಮಗನೆಂದವನ ಭಾಗ್ಯಕ್ಕೆ
ಈಡುಗಾಣೆನು ಎಲ್ಲಿ ವಿಚಾರಿಸೆ
ಕಾಡಿ ಬೇಡುವೆ ಮುನ್ನೆ ಪರಿಪರಿಬಾಧೆಬಡಿಸಿ
ಕೂಡಿರುವೆ ಮುಕ್ತರೊಳು ಮುಕ್ತಿಗಳವಲ್ಲಿದೊ ೪

ನಿನ್ನಂಥ ಮಗನ ಪಡದಮ್ಯಾಲೆ ಎನಗೆ
ಅನ್ಯಚಿಂತೆಗಳಿಲ್ಲ ಚಿಂತಾಮಣೀ
ಘನ್ನಮೂರುತಿ ನಮ್ಮ ವಿಜಯವಿಠ್ಠಲರೇಯ
ಅನಂತಕಾಲಕ್ಕೆ ವಹಿಸುವ ದೇವ ೫

೪೨೬

ಮನವೆ ನೀ ದೃಢವಾದರೆ
ಮನಸಿಜನಯ್ಯನ ಚರಣ ಕಾಂಬೆನೊ ನಾನು ಪ

ಹಂಬಲವನು ಮಾಡದಿದ್ದರೆ ಹರಿ
ಎಂಬ ನಾಮಪೀಯೂಷ ದೊರಕುವುದು ೧

ಚಂಚಲವುಳ್ಳವುನಾಗದಿದ್ದರೆ ದುಷ್ಟ
ಪಂಚೇಂದ್ರಿಯಗಳ ಸ್ಥಿರವಾಗಿ ನಿಲ್ಲಿಸುವೆ ೨

ಅತ್ತಲಿತ್ತಲಿ ಪೋಗದಿರು ಎ
ನ್ನತ್ತ ವಿಜಯವಿಠ್ಠಲ ಬರಲೀ ೩

೪೨೭

ಮನವೆ ಮಾಧವನೊಳು ಮಮತೆಯಿರಲಿ
ತನು ಮನ ಧನಗಳು

ತನವಾ ನೀಡಿದ ಮ್ಯಾಲೆ
ಮಾನಸಿಜ ಜನಕನು ಅನುದಿನ ಪೊರೆವ ಪ

ಕಾಮ ಜನಕನು ಪ್ರೇಮದಿ ನೆನದರೆ
ಮಾಮನೋಹರ ತನ್ನ ಧಾಮವ ಕೊಡುವ ೧

ಸಂತತ ನಿನ್ನನು ಚಿಂತಿಸುವಂ–
ತೆನ್ನಂತ ಮಂಗಳ ಮತಿಯು ನೀಡು ನೀ ಮನವೆ ೨

ಅಜಭವನುತ ವಿಜಯ ಸಖನ ಯಜಿಸುವ ಜನರಿಗೆ
ನಿಜಪದವನೆ ಕೊಡುವಾ ವಿಜಯವಿಠ್ಠಲನಾ ೩

೪೨೮

ಮನಸು ನಿಲಿಸುವುದು ಬಹಳ ಕಷ್ಟ ಪ

ಗುಣಿಸುವುದು ನಿಮ್ಮೊಳಗೆ ನೀವೆ ನೆಲೆ ಬಲ್ಲವರು ಅ.ಪ

ಮುರಿದೋಡಿ ಬರುವ ರಣರಂಗ ನಿಲ್ಲಿಸಬಹುದು ।
ಹರಿಯುತಿಹ ನದಿಗಳನು ತಿರುಗಿ ಸಲಿಸಬಹುದು ॥
ಕರಿ ಸೊಕ್ಕಿ ಬರುತಿರಲು ತಡೆದು ನಿಲ್ಲಿಸಬಹುದು ।
ದುರುಳಮನ ನಿಲಿಸುವುದು ಸುರರಿಗಳವಲ್ಲ ೧

ಭೈರವ ದಾಡೆಯನು ಹಿಡಿದು ನಿಲ್ಲಿಸಬಹುದು ।
ಮಾರುತನ ಉರುಬೆಯನು ನಿಲ್ಲಿಸಲಿಬಹುದು ॥
ಮಾರಿಗಳ ಮುಂಜೆರಗ ತುಡುಕಿ ನಿಲ್ಲಿಸಬಹುದು ।
ಹಾರಿ ಹಾರುವ ಮನಸು ನಿಲಿಸಲಳವಲ್ಲಿ ೨

ಶರಧಿಗಳ ಭೋರ್ಗರೆವ ಧ್ವನಿಯ ನಿಲ್ಲಿಸಬಹುದು ।
ಸುರಿವ ಬಿರಮಳೆಯನು ನಿಲ್ಲಿಸಬಹುದು ॥
ಹರಿದೋಡುವ ಮನಸು ನಿಲಿಸಲಾರಳವಲ್ಲ ।
ಸಿರಿಯರಸ ವಿಜಯವಿಠ್ಠಲ ತಾನೆ ಬಲ್ಲ ೩

೪೨೯

ಮಾತು ಮನ್ನಿಸೊ ಪರಮಾತಮಾ ಮುದದಿಂದ
ಮಾತು ವೈದವನಲವ ಮಾತುರದೊಳು ಗೆದ್ದು
ಮಾತಿಯ ಸೆರೆ ಪ್ರೇಮಾತುರ ಭೇದಿಸಿದ
ಮಾತುರಪತಿ ಚಿನ್ಮಾತುರ ತೋರೋ ಪ

ಶುನಕ ಸೂಕರ ಘೂಕಾ ಮನಕಾಶಾ ಕಾಕಕಂಕಾ
ದನ ಕತ್ತೆ ಮೊದಲಾದ ಜನ ಕಲಿಯುಗದೀ
ತನಕೆ ಆದದಕಿನ್ನು ಮನಕಾನಂದವ ಕಾಣೆ
ದಿನ ದಿನ ಕಾಂಚನಾಶಿಯಿಂದ ಘನಕಾಮ ಬದ್ಧನಾದೆ
ಕನಕಾಂಬುಜ ಭವಜನಕ ಜಗತ್ಪತಿ ಜನ ಕಥೆಯಿಂದ ಭ
ವನಕತಿ ಮೋಹಿಸಿ ಧನಕವಿಯೆನಿಸಿದೆ
ವನಕವಿವರಗೆ ಮೋಹನ ಕಂಠ ಮಾಲಿಯೆ
ಎನ್ನ ಕಡೆ ಮೊಗವಾಗು ೧

ಸನಕಾದಿ ವಂದ್ಯ ತ್ರಿಭುವನಕಾದಿ ಮೂಲವೆನಿಸಿ
ವನಕಾಯಿದ ಕಾರುಣ್ಯರತುನಕಾರ ಪೂರ್ಣನೀತಾ
ಘನಕಾಯ ಒಂದಾರೆ ಸಾಧನಕಾಧಾರವಾದೊ ಪಾ
ವನ ಕಾಲಾ ತೊರೆದು ಜೀವನ ಕಾದುಕೊಂಡೆನಯ್ಯಾ
ಇನಕರ ತೇಜಾ ತುಹಿನಕರ ಚರಣನೆ
ಬೆನಕಾನ ತತ್ವಾದಿ ಅನಕಳೆವ ರಾಮ ನನ ಕಾರಣಕೆ
ದರುಶನ ಕರುಣಿಸೋ ಲೋ
ಚನ ಕತ್ತಲೆ ನಾಶನ ಕರಿವರದಾ ೨

ಜನಕಾ ವನಿಕಾ ನಾಭಾ ಕಾಣಿಸಿದೆ ಮುನಿ
ಜನಕಾಶ್ಚರ್ಯರಾಗೆ ವಾಗೆ ಅನನಕಾಮರಿ ತೂಗೆ ವಂ
ಚನೆ ಕಾಠಿಣ್ಯ ಪಾಪಕಾನನಕಾನಳನೆ ಜಾ
ವನ ಕಾಟ ಬಿಡಿಸಿ ಈಮ್ಮನ ಕಾದಂತಯ್ಯಾ
ನನಕೂಡ ಹಾಕು ದುಷ್ಟನದೊಟ್ಟಿ ಸ
ಜ್ಜನ ಕರ್ಮದಲಿ ಸೋಭನ ಕಡೆಯಲಿ ಇಡು
ದಿನಕರ ಕುಲಧ್ವಜ ವಿಜಯವಿಠ್ಠಲ ನೂತನ
ಕವನಕೆ ದಾಸನ ಕರವಿಡಿಯೊ ೩

೪೩೦

ಮಾಧವನ ನೋಡಿ ಸಂಪಾದಿಸಿದೆ ಭಕುತಿಯನು ।
ಆದರಪೂರ್ವಕದಿಂದಲಿ ಮಾಧುರ್ಯವಾದ ಮನ ।
ಸಾಧುಗಳ ಸಂಗತಿ ಭೇದ ಪಂಚಕ ಪೂರ್ಣಬೋಧರ
ಮತವಿಡಿದು ಪ

ಮಡುವಿನೊಳು ಕರಿ ಮೊರೆ ಇಡಲು ಕೇಳುತ ನಕ್ರನ ।
ಕಡಿದು ಕರುಣದಿಂದಲಿ ತಡಿಯದಲೆ ಜಡುಮತಿಯ ।
ಬಿಡದೆ ಉದ್ಧರಿಸಿದ ಒಡೆಯ ಪುಣ್ಯನಿಧಿಗೆ
ಕಡು ಮೆಚ್ಚಿ ಬಂದವನ ೧

ಮರಣಕಾಲದಿ ಭಯಂಕರವಾದ ಯಮನ ದೂ ।
ತರನ ನೋಡಿ ಕರಿಯಲು ।
ಪರಮ ವೇಗದಿಂದ ಪುರಕೆ ಕರಿಸಿದ
ಉಭಯ ಶರಧಿ ಮಧ್ಯದಲ್ಲಿ ।
ಮೆರೆವ ಮಧುಸೂದನನ ೨

ಜ್ಞಾನ ಪಾಪಿಯ ಸ್ನಾನ ಆನಂದದಲಿ ಮಾಡಿ ।
ಹೀನ ದೋಷಗಳ ಕಳೆದು ।

ಜ್ಞಾನವಧಿಕವಾದ ಗುರುಗಳ ಕೃಪೆಯಿಂದ ।
ಶ್ರೀ ವಿಜಯವಿಠ್ಠಲ ಸೇತುವಾಸನಾ ೩

೪೩೧

ಮಾನ ನಿನ್ನದು ಅಭಿಮಾನ ನಿನ್ನದು ।
ದಾನವಾಂತಕ ರಂಗ ದಯಮಾಡಿ ಸಲಹೊ ಪ

ಒಡೆಯಳು ಕುಳಿತಿರಲು ತೊತ್ತಿನ ಮುಂದಲಿಯ ।
ಪಿಡಿದೆಳೆದೊಯ್ದು ಘಾಸಿಯನು ಮಾಡಿ ॥
ಅಡಿಗಡಿಗೆ ಅಪಮಾನಗೊಳಿಸಿ ಕೊಲೆ ಮಾಡಿದರೆ ।
ಒಡತಿಗಲ್ಲದೆ ಕೊರತೆ ಅವಳಿಗೇನಯ್ಯಾ ೧

ಸದನದೊಳು ಪುರುಷನು ಇರುತಿರಲು ಹೆಂಡತಿಯ ।
ಎದೆಯ ಮೇಲಿನ ಸೆರಗು ಸೆಳೆದುಕೊಂಡು॥
ಒದೆದು ಕೈ-ಕಾಲಿಂದ ಮಾನಹಾನಿ ಮಾಡಿದರೆ ।
ಅದು ಪುರುಷಗಲ್ಲದೆ ವಧುವಿಗೇನಯ್ಯಾ ೨

ಪಿತನ ಬಳಿಯಲಿ ಮಗನು ಕುಳಿತಿರಲು ವರ ಮನುಜ ।
ಖರೆಯಿಂದ ಕೆಡಹಿ ಪಾಶದಲಿ ಕಟ್ಟಿ ಬಿಗಿಯಾಗಿ ॥
ಮತಿಗೆಡಿಸಿ ನಾನಾ ಪ್ರಕಾರ ಭಂಗವ ಮಾಡೆ ।
ಕ್ಷತಿ ತಂದೆಗಲ್ಲದೆ ಕುವರಗೇನಯ್ಯಾ ೩

ಆಳುವ ದೊರೆಯ ಸಮ್ಮುಖದಲಿ ಬಂಟನಿರೆ ।
ಖೂಳರು ಬಂದು ಶಸ್ತ್ರವನು ತೆಗೆದು ॥
ಕೀಳು ಮಾಡಿ ಬಂಟನ ಅಭಿಮಾನ ಕೊಂಡರೆ
ಏಳಲವು ಅರಸಗಲ್ಲದೆ ಬಂಟನಿಗೇನು ೪

ಸತ್ಯ ಸಂಕಲ್ಪ ಸರ್ವೋತ್ತಮ ಸುರಪಾಲ ।
ಅತ್ಯಂತ ಪಾಲಸಾಗರ-ಸದನನೆ ॥

ಭೃತ್ಯರಪಮಾನ ಅಭಿಮಾನ ನಿನ್ನದು ಸದಾ ।
ನಿತ್ಯ ತೃಪ್ತನೆ ಸಿರಿ ವಿಜಯವಿಠ್ಠಲರೇಯಾ ೫

೪೩೨

ಯಚ್ಚತ್ತು ನಡಿ ಕಂಡ್ಯ ಮನವೇ ನಮ್ಮ
ಅಚ್ಯುತನಂಘ್ರಿಗಳನು ನೆನೆ ಮನವೇ ನೀ ನೆನೆ ಕಂಡ್ಯ ಮನವೇ ಪ

ಆಡದಿರಪವಾದಗಳನು ನೀನು
ಕೊಂಡಾಡದಿರು ಚಿಲ್ಲರೆ ದೈವಗಳನು
ಬೇಡಾಡದಿರುಭಯ ಸೌಖ್ಯಗಳನು ನೀ
ಮಾಡಿ ಕಂಡ್ಯ ದುರ್ಜನರ ಸ್ನೇಹವನ್ನು ಸಜ್ಜನರ ದ್ವೇಷವನು ೧

ಹಾಳು ಹರಟೆಗ್ಹೋಗ ಬ್ಯಾಡ ಕಂಡ
ಕೂಳುಗಳನು ತಿಂದು ವಡಲ್ಹೊರಿಯ ಬೇಡ
ಕಾಲ ವೃಥಾ ಕಳಿಯ ಬ್ಯಾಡ ನಮ್ಮ ।
ಪ್ರಾಲಬ್ಧ ಭೋಗಕ್ಕೆ ಮನಸೋಲ ಬ್ಯಾಡ,
ಶ್ರೀ ಹರಿ ದಯಮಾಡಾ ೨

ನಾನು ಯೆಂಬುದು ಬಿಡು ಕಂಡ್ಯಾ ಎನ್ನ
ಮಾನಾಭಿಮಾನದ ಹರಿಯನ್ನು ಕಂಡ್ಯಾ
ಜ್ಞಾನಿಗಳೊಡನಾಡು ಕಂಡ್ಯಾ ವಿಷಯ
ಜೇನೆಂದು ಮೆದ್ದರೆ ಅದು ವಿಷ ಕಂಡ್ಯಾ
ಬೀಳುವಿ ಯಮಕೊಂಡಾ ೩

ಅನ್ಯಸ್ತ್ರೀಯರ ನೋಡಬ್ಯಾಡಾ ಹಿಂದೆ
ಮಣ್ಣು ಕೂಡಿರುವರೆಗೊ ಕೇಳೊ ಮೂಢಾ
ಅನ್ಯಶಾಸ್ತ್ರವನೋದ ಬ್ಯಾಡಾ ನಮ್ಮ
ಪೂರ್ಣಪ್ರಜ್ಞರ ಬೊಧ ತಿಳಿದುಕೊ ಗಾಢ,
ಮೈಮರೆದಿರ ಬ್ಯಾಡಾ ೪

ನರಜನ್ಮ ಬರುವೋದು ಕಷ್ಟ ಅಮ್ಮ
ಹಿರಿದು ನೋಡಲೋ ವಿಪ್ರತ್ವವು ಶ್ರೇಷ್ಠ
ಮರಳಿ ಬಾರದು ಉತ್ಕೃಷ್ಟ ನಮ್ಮ
ಮಾರುತ ಮತವನೆ ಪೊಂದುವದೆ ದುರ್ಘಟ,
ಕೇಳೆಲವೋ ಮರ್ಕಟ ೫

ಗೋವಿಪ್ರರ ಸೇವೆ ಮಾಡೋ ಸೋಹಂ
ಭಾವಗಳನು ಬಿಟ್ಟು ದಾಸತ್ವ ಕೂಡೋ
ಕೇವಲ ವೈರಾಗ್ಯ ಮಾಡೋ ಎಂಟು
ಝಾವಗಳಲಿ ಶ್ರೀ ಹರಿಯ ಕೊಂಡಾಡೊ,
ಲಜ್ಜೆಯನೀಡ್ಯಾಡೋ ೬

ಕಷ್ಟ ಪಡದೆ ಸುಖ ಬರದು ಕಂ
ಗೆಟ್ಟ ಮ್ಯಾಲಲ್ಲದೆ ಕಷ್ಟ ತಿಳಿಯದು
ದುಷ್ಟ ವಿಷಯದಾಶೆ ಜರಿದು ವಿಜಯ
ವಿಠಲನೆನ್ನದೆ ಮುಕ್ತಿಯು ಬರದೂ, ಕೂಗೆಲವೊ ಬ್ಯಾದೆರದು ೭

೪೩೩

ಯಾಕೆ ಜೀವನವೆ ನೀ ಶ್ರೀಕಾಂತನನು ಮರೆವಿ ।
ವಿವೇಕವೇ ನಿನಗಿದು ? ಪ

ಜೋಕೆಯಿಂದಲಿ ನಿನ್ನ ಸಾಕುವ ಶ್ರೀ ಹರಿಯು ।
ಬೇಕಾದ ವರವೀವ ಭಕ್ತವತ್ಸಲ ದೊರೆಯಾ ಅ.ಪ

ಲೇಸಾದರು ವಿಷಯದಾಸೆಯ ಬಿಡಲೊಲ್ಲಿ ।
ಏಸು ಜನ್ಮಂಗಳಾದರು ಈ ಶರೀರವು ನಿನ್ನದೆಂದು ತಿಳಿದು ॥
ಪೋಷಿಸುವಿಯೊ ಬರಿದೆ ದೋಷರಹಿತ ಶ್ರೀನಿ– ।
ವಾಸನ್ನ ನೆನೆದು ನಿರ್ದೋಷವ ಕಳೆದೆನ್ನ ಪೋಷಿಸು ಎನ್ನದಲೆ ೧

ಸತಿ–ಸುತರನು ನೀನು ಸಲಹುವೆನೆನುತಲಿ ।
ಅತಿ ಚಿಂತೆ ನಿನಗ್ಯಾತಕೊ ಗತಿ ನಿನಗಾಗುವ ॥
ಹಿತಚಿಂತನೆ ಮಾಡೊ ಸದ್ಗತಿಯಾಗುವ ತನಕ ।
ರತಿಪತಿ ಪಿತನ ನೆನೆದು ನೀ ಪ್ರತಿಕ್ಷಣ ಹರಿಕಥೆ ಕೇಳದಲೆ ೨

ಪೊಟ್ಟೆಗೋಸುಗ ಭ್ರಷ್ಟರ ಸ್ತುತಿಸಿ ನೀ ।
ಕೆಟ್ಟು ಪೋಗುವಿ ಯಾತಕೋ ಜೀವನವೆ ॥
ಪುಟ್ಟಿಸಿದವ ನಿನ್ನ ಪೊಟ್ಟೆಗೆ ಕೊಡನೇನೋ ।
ಕೆಟ್ಟುಹೋಗದೆ ವಿಜಯವಿಠ್ಠಲನ್ನ ನೆನೆದು ಸುಖಿಯಾಗು ೩

೪೩೪

ಯಾಕೆ ಪುಟ್ಟಿಸಿದಿ ಇನ್ನು ಎಲೊ ಹರಿಯೆ ।
ಲೋಕ ದೊಳಗನುಗಾಲ ತಿರಿದು ತಿಂಬುವಂತೆ ಮಾಡಿ ಪ

ಒಡಲಿಗಾಗಿ ಒಬ್ಬನ ಸಂಗಡ ಹೋಗಲು ।
ಕೊಡುವವನು ಇಲ್ಲೆಂದು ಪರಿಹರಿಸುವ ॥
ಸುಡು ಈ ಶರೀರವ ಬಳಲಲಾರೆನೊ ವಿಷದ,
ಮಡುವನಾದರು ಧುಮುಕಿ ಮರಣವಾಗುವೆ ರಂಗಾ ೧

ಪ್ರತಿದಿನವೂ ಅನ್ನ ಕೊಡುವವನ ಬಾಗಿಲಿಗ್ಹೋಗೆ ।
ಹುತವಾಗುವನು ಎನ್ನ ನೋಡುತಲಿ ॥
ಕ್ಷಿತಿಯೊಳಗೆ ಈ ಪರಿ ಬದುಕಿ ಇಹೋದಕಿಂತ ।
ಹತವಾಗಬಹುದಂಬಿನ ಮೊನೆಗೆ ಬಿದ್ದು ರಂಗಾ ೨

ಎಲ್ಲಿ ಬೇಡಿದಲ್ಲವೆಂಬೋ ಸೊಲ್ಲಿಲ್ಲಿದೇ ।
ಒಲ್ಲೆನೋ ಸಾಕು ಈ ನರ ಜನ್ಮವು
ಬಲ್ಲಿದ ಬಲ್ಲಿದರರಸ ಸಿರಿ ವಿಜಯವಿಠ್ಠಲ ನಿ– ।
ನ್ನಲ್ಲಿ ದೂತರ ಸಂಗದಲ್ಲಿ ಸುಖಬಡಿಸೊ ೩

೪೩೫

ಯಾಕೆ ಬಂದಿ ಜೀವಾ ಯಾಕೆ ಬಂದಿ ।
ಲೋಕದ ಸವಿಸುಖ ಅನುಭವವಾಯಿತು ಪ

ಮೇರು ಪರ್ವತದಲ್ಲಿ ವಾರಣವಂತನಾಗಿ ।
ಶ್ರೀ ರಮಣನ ಧ್ಯಾನ ಆರಾಧನೆಯ ಬಿಟ್ಟು ೧

ಉಡಿಗೆ-ತೊಡಿಗೆ ಇಟ್ಟು ಅಡಿಗಡಿಗೆ ಸುಖ ।
ಬಡುವೆನೆಂಬುದಕೆ ಈ ಪಾಡುಬಡಲು ನೋಡು ೨

ಉಣ್ಣು ಉಣ್ಣು ಉಣ್ಣು ಮತ್ತೆ ಉಣ್ಣು
ಹೆಣ್ಣು-ಹೊನ್ನು-ಮಣ್ಣು ನಿನ್ನಾಧೀನವೆಂಬೀ ೩

ಅಲ್ಲಿಗಲ್ಲಿಗೆ ಜ್ಞಾನ ಬಲ್ಲವರ ಕೂಡ ।
ಎಲ್ಲ ಕಾಲದಲಿ ನಲಿದಾಡೋದು ಬಿಟ್ಟು ೪

ಆದದ್ದಾಯಿತು ಹೋದ ಮಾತುಗಳೇಕೆ ।
ಶ್ರೀಧರ ವಿಜಯವಿಠ್ಠಲನ ಮರೆಯದಿರು ೫

೪೩೬

ವಾಸುದೇವನ ನೆನೆದು ನೀ ಸುಖಿಯಾಗು ಮನವೆ ।
ಈ ಶರೀರದ ಭ್ರಾಂತಿ ಇನ್ಯಾಕೆ ಮನವೆ ಪ

ಕಾಲುಗಳು ಕುಂದಿದವು ಕಣ್ಣದೃಷ್ಟಿ ಹಿಂಗಿದವು ।
ಮೇಲೆ ಯೌವನ ಹೋಗಿ ಮುಪ್ಪಾಯಿತು ॥
ಕಾಲ ಕರ್ಮಂಗಳು ಒದಗಿದಾಕ್ಷಣದಲಿ ।
ಬೀಳುವ ತನುವಿನಾಶೆ ಇನ್ಯಾತಕೆಲೆ ಮರುಳೆ ೧

ಧಾತುಗಳು ಹಿಂಗಿದವು ದಂತಗಳು ಸಡಲಿದವು ।
ಕಾಂತೆಯರು ನೋಡಿ ವಾಕರಿಸುವರು ॥
ಭ್ರಾಂತಿ ಇನ್ಯಾಕೆ ಬಯಲಾದ ದೇಹಕ್ಕೆ ಇನ್ನು ।
ಅಂತರ ಮಾಡದೆ ಹರಿಯ ನೆನೆ ಮನವೆ ೨

ನೀರ ಬೊಬ್ಬುಳಿಯಂತೆ ನಿಜವಲ್ಲ ದೇಹ ।
ಧಾರಣಿಯನು ಮೆಚ್ಚಿ ಮರುಳಾಗಿ ಕೆಡದೆ ॥
ಶ್ರೀರಮಣ ವಿಜಯವಿಠ್ಠಲರಾಯ ।
ಸೋರಿ ಹೋಗುತಿದೆ ಸ್ವರ್ಗ ಸುಮ್ಮನಿರಬೇಡಾ ೩

೪೩೭

ವಿಠಲಾ ನಿನ್ನ ನಂಬಿದೆ ಎನ್ನ ಕಾಯೋ ।
ಪುಟ್ಟುವದು ಬಿಡಿಸೊ ಎನ್ನವರೊಳಗಿರಿಸೊ ಪ

ಬಲುಕಾಲ ಮಲ-ಮೂತ್ರ ಡೊಳ್ಳಿನೊಳು ಬಿದ್ದು ।
ಹಲುಬಿದೆ ಒಂದಿಷ್ಟು ನೆಲೆಗಾಣದೆ ನಾನು ॥
ಹಲವು ಮಾತೇನು ಎನಗೆ ಬಿಡದು ।
ಸಲಹಬೇಕಯ್ಯಾ ಸಮುದ್ರ ಶಯ್ಯಾ ೧

ಕರ ಪಿಡಿದು ಎತ್ತುವ ಬಿರುದು ಪರಾಕ್ರಮ ।
ಮರಳಿ ಮಿಗಿಲೊಂದು ದೇವರಿಗೆ ಉಂಟೆ ॥
ಮರೆವು ಮಾಡದೆ ಮಹಾದುರಿತವ ಪರಿ_ ।
ಹರಿಸು ಸ್ಮರಣೆಯನ್ನು ಇತ್ತು ಕೀರ್ತನೆ ಪೇಳಿಸೋ ೨

ಬಿನ್ನಹ ಲಾಲಿಸು ಚೆನ್ನ ಲಕುಮಿಪತಿ ।
ಚೆನ್ನಾಗಿಡು ನಿತ್ಯ ಪ್ರಾಣನಾಥಾ ಅಭಯ ಹಸ್ತಾ ॥
ಅನ್ನದಾತಾ ಸಿರಿ ವಿಜಯವಿಠ್ಠಲರೇಯಾ ।
ಸನ್ನಿಧಿಯಲ್ಲಿ ಎನ್ನ ಸಂತೋಷಪಡಿಸೊ ೩

೪೩೮

ವಿರಹ ನಿಲ್ಲದು ಕಾಣೊ ನಿನ್ನ ಕೂಡದೆ ।
ಗುರುತ ಮಾಡಿದ ಸೊಗಸು ಮರಿಯದೊ ಗೋಪಾಲ ಪ

ಕಣ್ಣುನೋಟ ತಿರುಹಿ ನೀ ಕೈಯ ಮುದರಿ ವರಹ ।
ಹೊನ್ನು ಕಂಭದಲಿ ನಿಂದು ತೋರಿ ।
ಭ್ರಮಿಸಿ ಕುನ್ನಿಗೆ ಕಣಿಯನಿಕ್ಕಿ ಹೊಡೆಯೊನಾಗಿ ।
ಹೆಣ್ಣು ಭಾವನ ಕರೆದು ಸೂಚನೆ ಮಾಡಿದನು ೧

ಪುಟ್ಟ ಹೆಜ್ಜೆಲೆ ಸಾಗಿ ಮುದ್ದು ಕೊಡಲು ಬಯಸಿ ।
ದೃಷ್ಟಿಯಿಂದ ನೋಡಲು ಭ್ರಾಂತಳಾಗಿ ।
ಅಟ್ಟ ಅಡಿವೆಯೊಳು ನಡಿವೆ ನಾ ಪೋಗಲು ।
ದುಷ್ಟ ನಾದಿನಿ ಕಂಡು ಮಾವಗೆ ಪೇಳಿದಳು ೨

ಇಂದಿರೇಶ ತಾನಾಗಿ ಎದೆ ಮುಟ್ಟಿ ನಿನಗೆ ।
ಇಂದಿನ ದಿವಸ ನಾ ಭ್ರಮಿಸಿದ್ದು ।
ಒಂದೊಂದು ಬಗೆ ನೆನಿಸಿ ಕಲೆಕಲೆಗಳು ಕೆರಿದ್ಯಾಸೆ ।
ಮುಂದೆಗಾಣದೆ ನಡಿಯೆ ಗಂಡಾ ತಲೆದೂಗಿದನು ೩

ಬೀದಿಯೊಳಗೆ ನೀನು ಕುದರಿಯ ಕುಣಿಸುತ
ಹಾದು ಪೋಗಲು ನಮ್ಮ ಮನಿಯ ಮುಂದೆ ।
ಪಾದಕ್ಕೆ ಕಪ್ಪನೆ ಇಟ್ಟು ತೊಟ್ಟ ಕುಪ್ಪಸ ಬಿಚ್ಚೆ ।
ಮದನ ನೋಡಿ ಮನೆಯಲ್ಲರಿಗೆ ಬೀರಿದನು ೪

ಪರಮಪುರುಷ ನೀನೆ ನಿನ್ನಂಗ ಸಂಗಕ್ಕೆ ।
ಸರಿಗಾಣೆ ಸ್ಮರಿಸೆ ಮನಸು ನಿಲ್ಲದೊ ।
ಸುರತ ಕೇಳಿಯ ಜಾಣ ವಿಜಯವಿಠ್ಠಲ ಎನ್ನ ।
ಕರೆದು ಮಸಕು ತೆಗೆದು ತಕ್ಕೈಸೊ ಚನ್ನಿಗಾ ೫

೪೩೯

ವೇಣು ಗೋಪಾಲವಿಠ್ಠಲರೇಯ ನಿನ್ನ ಪದ
ರೇಣು ನಂಬಿದ ಮಾನವ
ಏನು ಅರಿಯದಲಿಪ್ಪ ನೀನೊಲಿದು ಕರುಣದಲಿ
ಜ್ಞಾನ ಭಕುತಿಯ ಕೊಡುವುದು ಸ್ವಾಮಿ ಪ

ಪರದೈವ ನೀನೆಂದು ಮೂಢಮತಿಯಾದವನು ।
ಪರಿಪೂರ್ಣವಾಗಿ ನಿರುತ ।
ನೆರೆ ನಂಬಿದೆನು ನಾನಾ ಪ್ರಕಾರದಲಿ
ಸ್ಮರಣೆ ಮಾಡುತ ಮನದಲಿ ।
ತರತಮ್ಯ ಭಾವದಲಿ ಮಾರ್ಗವನೆ ತೋರಿ ವಿ
ಸ್ತರ ಮಾಡು ಇವನ ಕೀರ್ತಿ
ಕರುಣಾಕರನೆ ನಿನ್ನ ಮೊರೆಹೊಕ್ಕ ಶರಣನ್ನ
ಕರಪಿಡಿದು ಪಾಲಿಸುವುದು ಸ್ವಾಮಿ ೧

ಲೌಕಿಕವೆಲ್ಲಿನಗೆ ವೈದಿಕವೆಂದೆನಿಸಿ ।
ಸಾಕುವುದು ಸಾಕಾರನೆ
ನೂಕು ದುರಳದಿಂದ ಬಂದ ವಿಪತ್ತುಗಳ
ತಾಕಗೊಡದಂತೆ ವೇಗ
ಬೇಕು ಬೇಕೆಂದೆನುತ ಪೊಗಳುವವನಿಗೆ ಶುಭ ।
ವಾಕು ನೇಮಿಷುದು ಸತತ
ನಾಕಜನ ಬಲವಾಗಿ ರಕ್ಷಿಸಲಿ ಸುರತರುವೆ
ಶ್ರೀ ಕಾಂತ ನಿನ್ನಿಂದಲಿ ಸ್ವಾಮಿ ೨

ಓರ್ವನ ಪೆಸರುಗೊಂಡು ಪೇಳಲೇತಕೆ ಇನ್ನು ।
ಸರ್ವರನು ಈ ವಿಧದಲಿ ।
ಊರ್ವಿಯೊಳಗೆ ಇಟ್ಟು ಉದ್ಧರಿಸಿ ಉರುಕಾಲ
ನಿರ್ವ್ಯಾಜದವನ ಮಾಡಿ

ಸರ್ವರಗೋಸುಗ ತುತಿಸುತಲಿ ಯೋಗ್ಯರಿಗೆ
ಸರ್ವದಾ ಕೃಪೆಮಾಡು ಎಂಬೆ
ಸರ್ವರಾಧಾರ ಸಿರಿ ವಿಜಯವಿಠ್ಠಲ ನಿನ್ನ
ಶರ್ವ ತುತಿಸಿ ಕಾಣ ನಾನೊಬ್ಬ ಪೊಗಳುವನೆ ೩

೪೪೦

ಸದಾ ಎನ್ನ ಹೃದಯದಲ್ಲಿ ವಾಸ ಮಾಡೊ ಶ್ರೀಹರೆ ಪ

ನಾದಮೂರ್ತಿ ಮೋದದಿಂದ ನಿನ್ನ ಪಾದ ಭಜಿಸುವೆ ಅ.ಪ

ಜ್ಞಾನವೆಂಬೊ ನವರತ್ನದ ಮಂಟಪದ ಮಧ್ಯದಲ್ಲಿ
ಗಾನಲೋಲನ ಕುಳ್ಳಿರಿಸಿ
ಧ್ಯಾನದಿಂದ ಭಜಿಸುವೆ ೧

ಭಕ್ತಿರಸವೆಂಬ ಮುತ್ತು ಮಾ
ಣಿಕ್ಯದ ಹರಿವಾಣದಿ
ಮುಕ್ತನಾಗಬೇಕು ಯೆಂದು ಮುತ್ತಿನಾರತಿ ಎತ್ತುವೆ ೨

ನಿನ್ನ ನಾಮ ಬಿಡುವನಲ್ಲ
ಎನ್ನ ನೀನು ಬಿಡಲು ಸಲ್ಲ
ಘನ್ನ ಮಹಿಮ ವಿಜಯವಿಠ್ಠಲ ಕೇಳೊ ನಿನ್ನ ಭಕ್ತರ ಸೊಲ್ಲ ೩

೪೪೧

ಸವಿದುಣ್ಣ ಬಾರಯ್ಯ ಸಾರಾಭೋಕ್ತಾ
ಪವನಾಂತರ್ಗತ ಕಪಿಲಾತ್ಮ ನರಸಿಂಗಾ ಪ

ಉಪ್ಪು ಉಪ್ಪಿನಕಾಯಿ ಪತ್ರ ಶಾಖ ಸೂಪ
ಒಪ್ಪುವ ಸಂಡಿಗೆ ವ್ಯಂಜನಗಳು

ಇಪ್ಪವು ನಿರುಋತಿ ಪ್ರಾಣ ಮಿತ್ರ ಶೇಷ
ಸರ್ಪವೈರಿ ದಕ್ಷ ಲೋಕೇಶನಲ್ಲಿಗೆ ೧

ಅನ್ನ ಮಂಡಿಗೆ ತೈಲ ಪಕ್ವಂಗಳು ಪರ
ಮಾನ್ನ ಭಕ್ಷ ತುಪ್ಪ ಹುಳಿ ಪದಾರ್ಥ
ಮುನ್ನೆ ಚಂದ್ರ ಬೊಮ್ಮ ಜಯಂತರ್ಯ ಸೂರ್ಯ
ಕನ್ಯ ಲಕುಮಿದೇವಿ ಪರ್ವತ ಸುತಿ ಇರೆ ೨

ಕ್ಷೀರ ನವನೀತಧಿಕಾರಣಾಮ್ಲ
ಚಾರು ಉದ್ದಿನ ಭಕ್ಷ ಕಟು ದ್ರವ್ಯ ಪಾ
ವಾರಿಜಾಸನ ರಾಣಿ ವಾಯು ಸೋಮ
ಮಾರ ವೈರಿ ಧರ್ಮ ಸ್ವಾಯಂಭುವಂಗಳು ಅಲ್ಲಿ ಹಾಕಿರೆ ೩

ಇಂಗು ಯಾಲಕ್ಕಿ ಸಾಸಿವೆಯಿಂದ ವೊಪ್ಪುತಾ
ಬಂಗಾರ ಪಾತ್ರಿಯೊಳಗೆ ತಂದಿಡೆ
ಪೊಂಗಳಸದಲ್ಲಿ ಸ್ವಾದೋದಕ ಇಡೆ
ಅಂಗಜಾ ದುರ್ಗಿಯ ಚಂದ್ರಮಸುತನಿರೆ ೪

ವೀಳ್ಯವ ಕೈಕೊಳೊ ಗಂಗಾಜನಕ ಹರಿ
ಅಲ್ಲಲ್ಲಿಗೆ ನಿನ್ನ ರೂಪವುಂಟು
ಬಲ್ಲಿದಾ ವಿಜಯವಿಠ್ಠಲರೇಯ ಎನಗಿದೆ
ಸಲ್ಲೊದೆ ಸರಿ ಲೇಶವಾಪೇಕ್ಷದವನಲ್ಲ ೫

೪೪೨

ಸಾಕು ಇಹಕೆನ್ನ ನೂಕದಿರು ತಂದೆ
ವಾಕು ಕೇಳು ಪರಾಕು ಮಾಡದೆ
ಸಾಕು ದಯದಿಂದನೇಕ ಮಹಿಮನೆ
ಏಕಾಮೇವಾದ್ವಿತೀಯ ಪ

ಮಂಗಳಾಂಗ ಮಾತಂಗವರದ ವಿ–
ಹಂಗಗಮನ ಭುಜಂಗಶಯನ ತು–
ರಂಗವದನ ಶುಭಾಂಗ ರಿಪುಕುಲ–
ಭಂಗ ಅಸಿತಾಂಗ ಅ.ಪ.

ಶೃಂಗಾರಾಂಬುಧಿ ರಂಗ ನಿನ್ನಯ
ಅಂಗಸಂಗಕ್ಕೆ ಅಂಗೀಕರಿಸಿದ
ಸಂಗಿತರ ಚರಣಂಗಳಬ್ಜಕೆ
ಭೃಂಗನಪ್ಪೆನೆಂತೊ ೧

ಮಾನವಾವುದು ಸುಮ್ಮನಿರೆ ಪವ–
ಮಾನವಂದಿತ ನಿನ್ನ ಪೋಲ್ವ ಸ–
ಮಾನರಾರನು ಕಾಣೆ ಎನ್ನಭಿ–
ಮಾನದ ದೊರೆಯೆ
ಮಾನವಾಧೀಶ ಮಾನವಮಾನ–
ಮಾನದಿಂದ ಕ್ರಮಾನುಸಾರನು
ಮಾನಗೊಳಿಸದೆ ಮಾನವಿತ್ತು ದು–
ಮ್ಮಾನವನೆ ಬಿಡಿಸೊ ೨

ಬಲ್ಲೆ ನಿನ್ನಯ ಎಲ್ಲ ಪರಿಯಲಿ
ಬಲ್ಲಿದರಿಗತಿ ಬಲ್ಲಿದನು ಸಿರಿ–
ವಲ್ಲಭಾ ನೀನಲ್ಲದಿಲ್ಲೆಂದು
ಎಲ್ಲ ತುತಿಸುತಿದೆ
ಸೊಲ್ಲುವೊಂದನು ನಿಲ್ಲುತಲಿ ಕೇಳು
ಎಲ್ಲು ಬಯಸದೆ ಇಲ್ಲಿಗೇ ಬಂದೆ
ಕೊಲ್ಲು ಕಾಯ್ಸಿರಿ ವಿಜಯವಿಠ್ಠಲ
ಬಲ್ಲದನು ಮಾಡೋ ೩

೪೪೩

ಹದಿನಾಲ್ಕು ಲೋಕವನಾಳುವ ತಂದೆಗೆ ।
ಮುದದಿಂದ ನಾನೊಬ್ಬ ಭಾರವಾದೆನೆ ಪ

ಸುರಗಿರಿಯು ಶರಧಿಯೊಳು ಕಡೆವಾಗ ಮುಣಗಲಾ ॥
ಭರದಿಂದ ಪೋಗಿ ಚೆನ್ನಾಂತು ಪೊತ್ತೆ ॥
ಧರಣಿಯು ಮೊರೆಯಿಡಲು ತೆರಳಲ್ಲಿ ಬಂದು ।
ಭೂತರುಣಿಯನು ಸೆರೆಬಡಿಸಿ ಉಳುಹಿಕೊಳ್ಳಲಿಲ್ಲವೆ ೧

ಸುರಪತಿ ಮುನಿದೇಳು ಹಗಲಿರುಳು ಮಳೆಗರೆಯೆ ।
ಬೆರಳಲಿ ಧರಿಸಿ ಕಾಯ್ದು ನಿಜದೆ ॥
ವರಮುನಿ ಪಸವನು ಬೇಡಲಾಗಿ ಬೆದರಿ ನರ- ।
ನರಸಿ ನಿನ್ನ ಕರೆಯೆ ಕರುಣದಲಿ ಪಾಲಿಸಿದೆ ೨

ಜಲಜಾಕ್ಷ ಬೆಟ್ಟವನು ಪೊತ್ತು ಬಳಲಿದಾಗ ।
ಸಲಹಬೇಕೆಂದು ಬೇಸರಿಸಲಿಲ್ಲಾ ॥
ಸುಲಭದಲಿ ಶೇಷಾಚಲನಾಗಿಪ್ಪ ।
ಒಲಿದೆನ್ನ ಸಂರಕ್ಷಿಸೊ ವಿಜಯವಿಠ್ಠಲನೆ ೩

೪೪೪

ಹರಿಮಣಿವರ್ಣ ವಿಠ್ಠಲಾ ನಿನ್ನವನೊ
ಪರಮ ಪ್ರೀತಿಯಿಂದ ಪಾಲಿಸ ಬಾರಯ್ಯ ಪ

ಹೃದಯ ಪಂಕಜ ದಳ ಕೂಡಿತು ನೋಡು
ಮುದರಿಕೊಂಡವು ಕುಮುದವೆಂಬೊ ಕಣ್ಣು
ಪದುಮನಾಭನೆ ನಿನ್ನ ನಖವೆಂಬೊ ರವಿ
ವದನವೆಂಬೊ ಚಂದ್ರಮಾ ಉದಿಸಲಿ ೧

ಬರಿದಾಗಿ ಕಿವಿ ಎಂಬೊ ಮನೆ ಇಪ್ಪವು
ಸ್ಪರಿಶ ಮಾಡುವೆನೆಂದು ಕಲಿ ಸುಳಿದಾ
ಹರಿ ನಿನ್ನ ಗೆಜ್ಜೆ ಧ್ವನಿಯಿಂದ ಕರ್ಣ ಮಂದಿರವೆ ತುಂಬಲಿ
ಕಲಿ ಅಡಗಿ ಪೋಪಾ ೨

ನಾಸಾ ದುರ್ವಾಸನೆಗೆ ಇಚ್ಛೆ ಮಾಡಿತು
ಹೇಸಿಗೆ ರಸಗಳಿಗೆ ಜಿವ್ಹೆ ಪೋಗುದದು
ಪೂಸಿದಾ ಗಂಧ ದಿವ್ಯವಾಸನೆ ಬರಲಿ
ಲೇಸು ನಿನ್ನ ನಾಮರಸ ಸುರಿಸುವಂತೆ ಮಾಡು ೩

ನೀನಲ್ಲದೆ ತುಲಾ ಕಾವೇರಿಯೊಳಗೆ
ಸ್ನಾನ ಜಪ ತಪಗಳು ಮಾಡುವದೇಕೆ
ಕಾಣದಿರೆ ನಿನ್ನ ಚರಣ ಸಿರಿ ಪ್ರಾಣರಿಗೆ
ಪ್ರಾಣನಾದ ಬಲು ಮೋಹನಾ ೪

ಈ ಕ್ರೋಧನಾಬ್ಧ ಆಶ್ವಿಜ ನಿನ್ನ ಪಕ್ಷದ
ಏಕಾದಶಿ ರಾತ್ರಿಯೊಳು ಬಾ ಹೃದಯದೊಳಗೆ
ಯಾಕೆ ಕೂಡದಯ್ಯ ಜೀಯಾ ಪೇಳೊ ಎನ್ನೊಡಿಯ
ಲೋಕ ಚರಿಸುವದೇನು ನಿನ್ನ ಪೋಗಾಡಿ ೫

ಧವಳಗಂಗಿಯೊಳಂದು ಬಿದ್ದು ಬಂದಾಗ
ಕವಿ ವಾದಿರಾಜಗೊಲಿದು ಬರಲಿಲ್ಲವೇ
ಅವರ ದಾಸಾನುದಾಸನು ಸತತ ನಾನು
ತವಕದಿಂದಲಿ ಬಾರೊ ಭಕ್ತವತ್ಸಲಾ ೬

ಅರ್ಚಿಸಬಲ್ಲನೆ ದೇವ ನಿನ್ನನುದಿನಾ
ಗಚ್ಚರಿತವಂದಲ್ಲವೆ ಮತ್ತಾವದರಿಯೆ
ಅಚ್ಯುತದಾಸರ ಪ್ರೀಯ ವಿಜಯವಿಠ್ಠಲ
ಬೆಚ್ಚಿಸಿದೋಪಾದಿಯಲ್ಲಿ ಪೊಂದಿ ಬಾರಯ್ಯ ೭

೪೪೫

ಹೋದ್ಯಾ ಶೇಷಗಿರಿದಾಸ ಸುಲಭ
ಹಾದಿಯನು ಮೆಟ್ಟಿ ನಮ್ಮನು ಭವಾಬ್ಧಿಯೊಳಿಟ್ಟು ಪ

ಸಲಹಿದೆನು ಸಾಕಿದೆನು ಕಾಲಕಾಲಕೆ ನೋಡಿ
ತಿಳಿಸಿದೆನು ತತ್ವಗಳು ನಿರುತ ಬಿಡದೆ
ಬಳಿವಿಡಿದು ತಿರುಗಿ ಉಣಿಸಿದೆನು ಉಡಿಸಿದೆನು ವೆ–
ಗ್ಗಳವಾಗಿ ನೋಡಿ ಸುಖಿಸಿದೆನೊ ಮಾತಾಡಿ ೧

ನಿನ್ನ ಮ್ಯಾಲಿನ ಕರುಣ ಕಮಲಾಕ್ಷ ವೇಗದಲಿ
ಎನ್ನಮ್ಯಾಲೆ ಇನ್ನು ಮಾಡಲಿಲ್ಲ
ಮುನ್ನೆ ಸಾಧನ ಪೂರ್ತಿ ನಿನಗಾಯಿತೇನೋ ಸಂ
ಪನ್ನಮತಿ ಉಳ್ಳವನೆ ಸಜ್ಜನ ಶಿರೋಮಣಿ ೨

ಧಿಕು ಎನ್ನ ಜನುಮ ನಿನ್ನಂಥ ಪ್ರಿಯನ ಬಿಟ್ಟು ।
ಅಕಟಕಟ ಭೂಮಿಯೊಳು ಬದುಕುವದೂ ।
ಸಕಲಲೋಕೇಶ ಸಿರಿ ವಿಜಯವಿಠ್ಠಲ ನಿನ್ನ
ಭಕುತಿಗೆ ಮೆಚ್ಚಿ ತಡಮಾಡದಲೆ ಕರದೊಯ್ದು ೩

ಆತ್ಮ ನಿವೇದನೆ

೪೪೬

ಇಂದು ಪಾವನವಾಗಿರೊ ।
ಇಂದಿರಾ ರಮಣನ್ನ ದಿನ ವ್ರತವ ಮಾಡಿ ಪ

ಜನನಿ ಜನಕ ಭ್ರಾತಾ ಅನುಜ ನಿಜಾಂಗನೆ ।
ತನಯರು ನೆರೆಹೊರೆ ಮನ ಜನಕೆ ।

ಬಿನಗು ವ್ರತವ ಬಿಟ್ಟು ವನಜನಾಭಾನ ಸಿರಿ ।
ದಿನ ತ್ರಯವನು ಅನುಸರಿಸಿರೆಂದು ೧

ಏಕಾದಶಿದನ ವಿಕೇತನದಲಿ ಪಾಕ ಮಾಡಿದರದು ।
ಕಾಕಮಾಂಸ ಲೋಕದೊಳಗೆ ಸರಿ । ಲೋಕದೊಳಗೆ ಎಂದು ।
ತಾ ಕೂಗಿ ಸುಖದಲ್ಲೀ ।
ವಾದ ಪೇಳುತಲಿದ್ದು ಏಕ ಭಕುತಿಯಲ್ಲೀ ೨

ಹರಿದಿನದಲ್ಲಿ ನೀರು ಬೆರಳಲಿ ಸುರಿದಾ ।
ಭೂಸುರನು ಚಾಂಡಾಲನು ನಿರುತದಲೀ ।
ವರಗೋಮಾಂಸ ನರಕಾ । ನರಿ ನಾಯಿರಾಸ ।
ಸೂಕರ ಭಕ್ಷಣಿಗಿಂತ । ಪರಮ ಉತ್ತಮನೆಂದು ೩

ಪ್ರಾಣತ್ಯಾಗವಾಗಿ ಹಾನಿ ಪ್ರಾಪುತದಿಂದ ।
ಏನೇನು ಸಂಕಟ ತಾನೊದಗೆ ।
ಆನಂದ ಮತಿ ಈವಾ ಶ್ರೀನಾಥನ ದಿವಸ ।
ಧಾನ್ಯದಲಿಟ್ಟು ನಿದಾನಕೆ ಗತಿ ಎಂದು ೪

ಇತರ ದಿವಸದಲ್ಲಿ ಅತಿಶಯದಿಂದಲೀ ।
ಕೃತ ಕರ್ಮಗಳು ವಿಹಿತವಹುದ..
ರತಿಪತಿಪಿತನ ಅಪ್ರತಿವಾಸರದಲ್ಲೀ ।
ಅತಿ ಅವಶ್ಯಕವಾ ವರ್ಜಿತ ಮಾಡಿ ಸಜ್ಜನರು ೫

ಎಲೆ ಹಾಕದೆ ಜಾಗರವ ಬೇಸರದಲೆ ।
ಲವಲವಿಕೆಯಿಂದ ಕವಿಗಳೊಡನೆ ।
ತವಕದಿಂದಲಿ ಪಾಡುತ ಗಾಯನ ಶುದ್ಧಾ ।
ಶ್ರವಣ ಮಾಡುತ್ತ ಸದಾ । ಪವನ ಮತದೊಳಿದ್ದು ೬

ದಶಮಿ ವಂದು ಏಕಾದಶಿ ಎಂಟು ತಿಳಿದು ।
ದ್ವಾದಶಿ ಐದು ಹ । ದಿನಾಲ್ಕು ಎಸವ ಝುವಾ ।

ಪುಶಿಯಲ್ಲ ಇದು ಸಿದ್ಧಾ ಅಸುಯವ ಬಡದಲೇ ।
ಕುಶಲದಿಂದಲಿ ವ್ರತ ಚರಿಸುತ್ತಲಿ ಚನ್ನಾಗಿ ೭

ಏಳೊಂದು ವತ್ಸರದ ಮೇಲೆ ।
ಎಂಟು ಹತ್ತು ಮೇಲು ವತ್ಸರ ಬಿಟ್ಟು ವಾಲಾಯ ಉಳಿದವರು ।
ನೀಲವರ್ಣನ ವ್ರತವಾ ಲೀಲೆಯಿಂದಲಿ ಚರಿಸಿ ೮

ಆವಾದಾದರ ಬಿಡದಿರೀ ।
ಕೇವಲ ಸಾಧನವೂ ।
ಈ ವಾರವು ದೇವೇಶ ವಿಜಯವಿಠ್ಠಲಗೆ ಸಮರ್ಪಿಸೆ ।
ಸೇವಿಯ ಪಾಲಿಸಿ ಕೈವಲ್ಯದಲಿ ಇಡುವಾ ೯

೪೪೭

ಈ ದೇಹ ಬಲು ಸಾಧನ
ಭೂದೇವ ಜನ್ಮದಲಿ ಬಂದ ಕಾರಣ ನಮಗೆ ಪ

ಶ್ವಸನ ಮತವೆ ಪೊಂದಿ ।
ನಸು ಚಿತ್ತದಲಿ ಯಿದ್ದು ।
ವಿಷಯಂಗಳೆಲ್ಲ ನಿರಾಕರಿಸಿ ।
ಋಷಿಮಾರ್ಗದಲಿ ನಡೆದು ವಿಹಿತಾರ್ಥದ ಸತ್ಯ ।
ಬೆಸಸೆ ಪೇಳುತ ನಿತ್ಯ ಸಜ್ಜನರ ಒಡಗೂಡು ೧

ಬಾಹುದ್ವಯದಲಿ ಶಂಖ ಚಕ್ರ ಧರಿಸಿ ಉ ।
ತ್ಸಾಹದಲಿ ದ್ವಾದಶ ಮಂದ್ರಗಳನಿಟ್ಟು ।
ಸ್ನೇಹಭಾವದಲಿ ಸತತ ಭಕುತಿಯ ಮಾಡು ।
ಇಹಲೋಕದಲಿ ಇಷ್ಟಾರ್ಥ ಬೇಡುತಲಿರು ೨

ಅನಿಷಿದ್ಧ ಕರ್ಮಗಳು ಆಚರಿಸಿ ಭೂತದಯ ।
ಅನುಗಾಲ ಇರಲಿ । ಬಂಧುಗಳ ಕೂಡಾ ।

ಮನಮೆಚ್ಚು ನಡೆದು ನೀ ಮಂದಮತಿಯನು ಕಳೆದು ।
ಘನಜ್ಞಾನದಲಿ ನಡೆದು ಗುಣವಂತನಾಗು ೩

ಧರ್ಮೋಪದೇಶವನೆ ಮಾಡುತಲಿರು ನೀನು ।
ಪೇರ್ಮೆಯುಳ್ಳವನಾಗು ಪೃಥವಿಯೊಳಗೆ ।
ನಿರ್ಮತ್ಸರನಾಗು ವೈಷ್ಣವ ಜನರ ಕೂಡ ।
ದುರ್ಮತವ ಪೊಂದದಿರು ಅನಂತ ಜನ್ಮಕ್ಕೆ ೪

ಕೊರಳು ತುಳಸೀ ಮಣೀ ಕರ್ಣ ತುಲಸೀ ದಳ ।
ಬೆರಳಲ್ಲಿ ಪವಿತ್ರದುಂಗರವನಿಟ್ಟು ।
ಪರಮ ವಿರಕುತಿಯಲಿ ದೇಹವನು ದಂಡಿಸುವ ।
ಹಿರಿದಾಗಿ ಭಾಗವತನಾಗು ವ್ಯಾಕುಲವ ಬಿಡೋ ೫

ವದನದಲಿ ಹರಿಸ್ಮರಣೆ ಮರೆಯದಿರು ಕಂಡಕಡೆ ।
ಉದರಕ್ಕೆ ಪೋಗಿ ಚಾಲ್ವಯದಿರು
ಅಧಿಕರ ಆಪೇಕ್ಷಗಳ ಮಾಡದಿರು ಹರಿಯಿತ್ತ
ದದು ಭುಂಜಿಸಿ । ಬಂದ ಕಾಲವನು ಹಿಂಗಳಿಯೊ ೬

ತೀರ್ಥಯಾತ್ರೆಯ ಚರಿಸು ಕಥಾಶ್ರವಣವನು ಕೇಳು ।
ಅರ್ಥವನೆ ಬಯಸದಿರು ಬಾಕಿ ಬಸಿದು
ವ್ಯರ್ಥ ನಿನ್ನಾಯುಷ್ಯ ಪೋಯಿತೆಂದೆನಿಸದೆ ।
ಪ್ರಾರ್ಥನೆಯ ಮಾಡು ಪ್ರತಿಕ್ಷಣಕೆ ಶ್ರೀ ಹರಿಚರಣ ೭

ವ್ರತಗಳನೆ ಬಿಡದಲಿರು ವಾರ್ಧಿಕ ಪರಿಯಂತ ।
ಮಿತ ಆಹಾರ ಮಿತ ನಿದ್ರಿ ಮಿತ ಮಾತನು ।
ಸತತ ಮೀರದಲಿರು ಶೋಕಕ್ಕೊಳಗಾಗದಿರು ।
ಸತಿ ಸುತರು ಎಲ್ಲ ಶ್ರೀ ಹರಿಗೆ ಸೇವಕರೆನ್ನು ೮

ಹರಿದಿನದ ಉಪವಾಸ ಜಾಗರ ಗಾಯನ ।
ಮರಳೆ ಮರಳೆ ಮಂತ್ರ ಪಠನೆಯಿಂದ ।

ಧರೆಯೊಳಗೆ ಪುಣ್ಯವಂತನಾಗಿ ಸರ್ವದ ।
ಇರಬೇಕು ಇಹಪರಕೆ ಲೇಸು ಎನಿಸಿಕೊಂಡು ೯

ಸುಖ ದು:ಖ ಸೈರಿಸುತ ಅರಿಗಳಿಗೆ ಭಯಪಡದೆ ।
ನಖಶಿಖವಾಗಿ ಆನಂದ ವಿಡಿದೂ ।
ಮುಖದಲ್ಲಿ ಹರಿನಾಮ ಅಮೃತವೆ ಸುರಿಸುತ್ತ ।
ಸಖರೊಳಗೆ ಲೋಲಾಡು ಹರಿಗುಣವ ಕೊಂಡಾಡು ೧೦

ಸಕಲಾಧಿಷ್ಠಾನದಲಿ ಹರಿಯೆ ಲಕುಮಿ ತತ್ವ ।
ನಿಕರವನು ನೆನೆದು ಕರ ಮುಗಿದು ತಿಳಿದು ।
ಮುಕುತಿ ಕರದೊಳಗಿಡು ವಿಜಯವಿಠ್ಠಲರೇಯನ ।
ವಿಕಸಿತ ಮನದಲ್ಲಿ ಭಜಿಸು ಬಲು ವಿಧದಿಂದ ೧೧

೪೪೮

ಎಚ್ಚತ್ತು ಇರು ಕಂಡ್ಯ ಮನವೇ । ನಮ್ಮ ।
ಅಚ್ಯುತನಂಘ್ರಿಗಳನು ನೆನೆ ಕಂಡ್ಯ ಮನವೆ ಪ

ಆಡದಿರಪವಾದಗಳನು ಕೊಂ ।
ಡಾಡದಿರಿನ್ನು ಚಿಲ್ಲರೆ ದೈವತಗಳನು ॥
ಬೇಡದಿರು ಭಯ ಸೌಖ್ಯವನು ನೀ ।
ಮಾಡದಿರಿನ್ನು ದುರ್ಜನ ಸೇವೆಯನು ॥ ಸಜ್ಜನ ದ್ವೇಷವನು ೧

ನರಜನ್ಮ ಬರುವದೆ ಕಷ್ಟ ಇದ– ।
ನರಿದು ನೋಡು ವಿಪ್ರಾದಿ ಶ್ರೇಷ್ಠ ॥
ಮರಳಿಬಾಹುದು ಉತ್ಕೃಷ್ಟ ।
ಮರುತ ಮತವ ಪೊಂದುವದು ದುರ್ಘಟ ॥
ಕೇಳೆಲವೊ ಮರ್ಕಟ ೨

ಹಾಳು ಹರಟೆಗೆ ಹೋಗಬೇಡ ನೀ ಕಂಡ ।
ಕೂಳನು ತಿಂದು ಒಡಲ್ಹೊರಿಯಬೇಡ ॥
ಕಾಲ ವ್ಯರ್ಥ ಕಳಿಯ ಬೇಡ ನಮ್ಮ ।
ಪ್ರಾರಬ್ಧ ಭೋಗಕ್ಕೆ ಮನ ಸೋಲಬೇಡ ॥
ಶ್ರೀ ಹರಿಯ ದಯಮಾಡ ೩

ಅನ್ಯ ಸ್ತ್ರೀಯರ ನೋಡ ಬೇಡಾ ಹಿಂದೆ ।
ಮಣ್ಣುಕೂಡಿದವರ ನೀ ನೋಡಾ ॥
ಅನ್ಯ ಶಾಸ್ತ್ರವನೋದಬೇಡಾ ನಮ್ಮ ।
ಪೂರ್ಣಪ್ರಜ್ಞರ ಬೋಧ ತಿಳಿದಕೊ ಗಾಢಾ ॥
ಮೈ ಮರೆತಿರಬೇಡಾ ೪

ಗೋ ವಿಪ್ರರ ಸೇವೆ ಮಾಡು ಸೋಹಂ ।
ಭಾವಗಳನು ಬಿಟ್ಟು ದಾಸತ್ವ ಕೊಡು ॥
ಕೇವಲ ವೈರಾಗ್ಯ ಮಾಡು ವಿಜಯ ॥
ಝಾವಗಳಲ್ಲಿ ಶ್ರೀ ಹರಿಯ ಕೂಡ್ಯಾಡೊ ॥
ಲಜ್ಜೆಯ ಈಡ್ಯಾಡೊ ೫

ನಾನು ಎಂಬುದು ಬಿಡು ಕಂಡ್ಯ ಎನ್ನ ।
ಮಾನಾಪಮಾನಕ್ಕೆ ಹರಿಯೆನ್ನು ಕಂಡ್ಯ ॥
ಜ್ಞಾನಿಗಳ ಒಳಗಾಡು ಕಂಡ್ಯ ವಿಷಯ ।
ಜೇನೆಂದು ಮೆದ್ದರೆ ಅದು ವಿಷ ಕಂಡ್ಯಾ ॥
ಬೀಳುವಿ ಯಮಗೊಂಡಾ ೬

ಕಷ್ಟ ಪಡದೆ ಸುಖಬರದು ಕಂ– ।
ಗೆಟ್ಟ ಮೇಲಿನ್ನು ಕಷ್ಟ ತಿಳಿಯೋದು ॥
ದುಷ್ಟ ವಿಷಯ ಆಶೆ ಜರಿದು ವಿಜಯ– ।
ವಿಠ್ಠಲರಾಯನ ಹೊರತು ಮುಕ್ತಿ ಬಾರದು ॥
ಕೂಗೆಲವೊ ಬಾಯಿ ತೆರೆದು ೭

೪೪೯

ಎಚ್ಚರಿಕೆಚ್ಚರಿಕೆ ಮನವೆ ಇನ್ನು ।
ಎಚ್ಚರಿಕೆಚ್ಚರಿಕೆ ಯಮನ ಪುರದ ಬಾಧೆ ಪ

ಕಿಚ್ಚನಾದರು ಕೇಳಿ ದುಶ್ಚಿಂತನ ಬಿಡು ಅ.ಪ

ಗಂಡ ಅತ್ತೆ ಮಾವ ಮೈದುನರ ಬೈವರ ।
ಖಂಡ ತುಂಡನೆ ಮಾಡಿ ಖಂಡವ ಕೊಯಿದು ।
ಕಂಡದೊಳಗೆ ಬೇಯ್ಸಿ ದಿಂಡುಗೆಡಹಿ ಕಟ್ಟಿ ।
ಮಂಡೆಯ ಒಡೆದು ಡಂಡದಿ ಶಿಕ್ಷಿಸಿ ।
ಹಿಂಡಿ ಹಿಪ್ಪೆಯ ಮಾಡಿ ಕೊಂಡೊಯ್ದು ಅಗ್ನಿಯ
ಕುಂಡವ ಹೋಗಿಸುವರೊ-ಎದೆಯ ಮೇಲೆ ।
ಗುಂಡನೆ ಹೊರಿಸುವರೊ-ಬಾಯೊಳಗೆ ।
ಕೆಂಡವ ಸುರಿಸುವರೊ-ಕೋಟಿ ಜನ್ಮ
ಚಂಡಾಲ ಯೋನಿಯಲಿಟ್ಟು ಬಾಧಿಸುವರೊ ೧

ಉತ್ತಮ ಗುರು ಹಿರಿಯರುಗಳ ಬೈವರ ।
ತಿತ್ತಿಯ ಸುಲಿದು ಕತ್ತರಿಪ ಬಾಚೆಯ ತಂದು ।
ಕೆತ್ತಿ ಶರೀರಕ್ಕೆ ಹತ್ತೊ ನೀರನೆ ಚೆಲ್ಲಿ ।
ನೆತ್ತಿಯ ಕೊರೆದು ಖಾರವನೊತ್ತಿ ಹಾವಿನ
ಹುತ್ತವ ಹೊಗಿಸಿ ವಿಷವನಿತ್ತು ಕೈ ಕಾಲು ।
ಕಿತ್ತು ಹೊಟ್ಟೆಯ ಕೊಯ್ವರೊ ಬೊಬ್ಬಿರಿ ।
ಯುತ್ತುರುಳು ಹಾಕುವರೊ ಬೆನ್ನೊಳಗೇ ।
ಎತ್ತಿ ಕರುಳ ತೆಗೆವರೊ ದೊಡ್ಡ ಬೆಟ್ಟ ।
ಹತ್ತಿಸಿ ತಲೆಕೆಳಗಾಗಿ ನೂಕಿಸುವರೊ ೨

ಪರಧನ ಪರಸತಿ ಪರನಿಂದೆಗೆಳೆವರ ।
ಮರುಳುವ ಮರಳಿನೋಳ್ ಹೊರಳಿಸಿ ಅಸ್ಥಿಯ ।
ಮುರಿದು ಮುಟ್ಟಿಗೆ ಮಾಡಿ ಉರೆದ ಗುಂಡಿಗೆ ಸೀಳಿ ।

ಗರಗಸದಲಿ ಜಿಹ್ವೆ ಕೊರೆದು ತೈಲದೊಳಗೆ ।
ಅರಿವೆಯೆದ್ದಿ ಮೈಗೆ ಉರಿಯ ಸುತ್ತಲಿಕ್ಕೆ ।
ಉರವಣಿಸು ಕುಣಿಸುವರೊ–ಹೆರೆದಂಬಿಗೆ ।
ಗುರಿಮಾಡಿ ನಿಲಿಸುವರೊ ಉಕ್ಕಿನ ಕಂಭ ।
ಕ್ರೂರಗಿಸಿ ನಿಲಿಸುವರೊ ಶೂಲಕೆ ಹಾಕಿ ।
ಎರಡು ಕಾಲೆಳೆದು ಕಾವಲಿ ಮೇಲೆ ನಿಲಿಸೀರೊ ೩

ಹೆಣ್ಣುಮಾರಿ ಹೊನ್ನು ಕಟ್ಟಿದ ಮನುಜರ ।
ಕಣ್ಣನೆ ಕಳಚಿ ಹಿಂಗಿನ ಪುಡಿಯನೆ ತುಂಬಿ ।
ಸುಣ್ಣದೊಳಗೆ ಹೂಳಿ ಜನ್ಮ ಕಳೆದು ಶಿರ ।
ವಣ್ಣಿಕಲ್ಲನೆ ಆಡಿ ಇನ್ನು ಉಕ್ಕಿನ ಕಾದ– ।
ಎಣ್ಣೆಯ ಸುರಿದು ನೀರನ್ನೆರದು ನರಮಾಂಸ– ।
ಉಣ್ಣೆಂದು ತಿನಿಸುವರೊ–ತಿತ್ತಿಯನಿಕ್ಕಿ ।
ಹಣ್ಣಣ್ಣು ಮಾಡುವರೊ–ಅಸೀಪತ್ರಾ– ।
ರಣ್ಯವ ಹೊಗಿಸುವರೊ–ಕ್ಷುಧೆಯೆನ್ನೆ ।
ಮಣ್ಣು ಬಾಯಲಿ ತುಂಬಿ ಕುಟ್ಟಿ ಮೆಲ್ಲಿಸುವರೊ ೪

ವಾಸುದೇವನ ವಾಸರದಲ್ಲಿ ಉಂಬರ ।
ಹಾಸುಗಲ್ಲಿನ ಮೇಲೆ ಬೀಸಿ ಅಪ್ಪಳಿಸಿ ಆ– ।
ಕಾಶಕ್ಕೊಗೆದು ಖಡ್ಗ ರಾಸಿಯೋಳ್ ಬೀಳಲು ।
ಕೇಶ ಪಿಡಿದು ಕೆಡಹಿ ಘಾಸಿಸಿ ಬಾಯೊಳು ।
ಸೀಸವ ರಾಸಿ ಎರೆದು–ಸಾಸುವೆ ತುಂಬಿ ।
ನಾಸಿಕ ಕೊಯ್ಯುವರೋ–ಕೀಸಿಸಿ ಗೂಟ ।
ಹೇಸದೆ ಬಡಿಸುವರೊ ಹಂದಿಯಂತೆ ।
ಈ ಶರೀರ ಸುಡಿಸವರೊ–ತಮಸಿನೊಳು ।
ಏಸು ಜನ್ಮಕೆ ಗತಿಯಲ್ಲವೆನಿಸುವರೊ ೫

ಎಲ್ಲ ಒಂದೇ ಎಂಬ ಪಂಚ ಮಹಾಪಾತಕಿಯ ।
ಹಲ್ಲನ್ನು ಮುರಿದು ಗಂಟಲ ಶೀಳಿ ಅಂಗುಳಿಗೆ ।
ಮುಳ್ಳನ್ನು ತಂದೂರಿ ತಪ್ತ ಲೋಹದ ಮೇಲೆ ।

ಕುಳ್ಳಿರಿಸಿ ಕೊಡಲಿಯೊಳ್ ಎಲ್ಲವನು ಕಡಿದು ।
ಕೊಲ್ಲ ಬಡಿದು ಅಂಬಿನಲಿ ಚುಚ್ಚಿ ರಕ್ತ- ।
ಚೆಲ್ಲಾಡಿ ಬಗೆಯುವರೊ-ಉರಿಯ ಕೊಂಡ- ।
ದಲ್ಲಿ ಮುಳುಗಿಸಿಬಿಡವರೊ-ಹೊತ್ತು ಒಯ್ದು ।
ಕಲ್ಲುಗಾಣಕೆ ಹಾಕುವರೋ-ಕುಂಭೀಪಾಕ ।
ದಲ್ಲಿ ಕುದಿಸಿ ಬೇಯ್ಸಿ ಬೆಂಡು ಮಾಡುವರೊ ೬

ಒಂದು ನೋಡಿದರೊಂದು ಅಧಿಕ ಪಾಪಗಳಿವೇ-
ನೆಂದು ಪೇಳಲಿ ಎನಗೊಂದಾದರಳವಲ್ಲ ।
ಹಿಂದಿನ ದುರ್ವಾರ್ತೆ ಮರೆದು ಮುಂದಾದರು ।
ನಂದತೀರ್ಥರ ಪಾದಾನಂದದಿ ಭಜಿಸಿ ಪು ।
ರಂದರನನು ಸರಿಸಿ-ವಿಜಯವಿಠ್ಠಲ ।
ನ್ನೊಂದಿ ಪತಿಕರಿಸಿ-ಮುಕ್ತಿ ಮಾರ್ಗ- ।
ವಿಂದು ಆಶ್ರಿಯಿಸೊ ಗೋವಿಂದನ ಸ್ತುತಿಸಿ । ೭

೪೫೦

ಎಲ್ಲಿದ್ದರೇನು ಶ್ರೀ ಹರಿಗಲ್ಲದವನು ಪ

ನಿಲ್ಲದೆ ಜಪಿಸಿದರೆ ಸಲ್ಲುವನೆ ಸದ್ಗತಿಗೆ ಅ.ಪ

ಕಪ್ಪೆ ಕಮಲದ ಬಳಿಯೆ ತಪ್ಪದೆ ಅನುಗಾಲ ।
ಇಪ್ಪುದೈ ಒಂದು ಅರೆ ಘಳಿಗೆ ಬಿಡದೆ ॥
ಬಪ್ಪದಿಂದಲಿ ಅದರ ಪರಿಮಳದ ಸೊಬಗ ನೀ- ।
ಕಪ್ಪೆ ವಾಸನೆಗೊಂಡು ಹರುಷಪಡಬಲ್ಲುದೆ ೧

ಹಾಲುಕೆಚ್ಚಲು ಬಳಿಯೆ ತೊಣಸಿ ಹತ್ತಿಕೊಂಡು ।
ಕಾಲವನು ಕಳೆವ ಬಗೆ ಬಲ್ಲಿರೆಲ್ಲ ॥
ವೇಳೆವೇಳೆಗೆ ಹಸುವ ಕರೆದುಂಬ ನರನಂತೆ ।
ಕೀಳು ತೊಣಸಿಯು ಉಂಡು ಹರುಷಪಡಬಲ್ಲುದೆ ೨

ತುಳಸಿ ಸಾನ್ನಿಧ್ಯದಲಿ ನೀರುಳ್ಳಿಯನು ಹಾಕಿ ।
ಹೊಲಸು ಹೋಗ್ವುದೆ ಹಲವು ಕಾಲಿದ್ದರೆ ॥
ತಿಳಿವಳಿಕೆ ಇಲ್ಲದವ ಸಿರಿ ವಿಜಯವಿಠ್ಠಲನ
ಬಳಿಯಲಿದ್ದರೇನು ದೂರಿದ್ದರೇನು ೩

೪೫೧

ಎಲ್ಲಿ ಭಯಗಳು ಹರಿಯ ಭಕುತರಿಗೆ ಇಲ್ಲ ಪ

ಇಲ್ಲವೋ ಕಾಣೋ ಎಂದಿಗಾದರು ಮರುಳೆ ಅ.ಪ

ಹುಲಿ ಇಲಿಯಾಗುವುದು ತೋಳ ಕೋಳ್ಯಾಗುವುದು ।
ಕಲಿ ಬಂದು ಹಿತ್ತಲನ್ನೀಗ ಬಳಿವ
ಖಳ ಮಹಾಚೋರ ಚೊಚ್ಚಿಲಗೌಡಿ ಮಗನಾಹ
ಜಲಜಾಕ್ಷನ ಕೃಪೆಯ ಪಡೆದ ದಾಸರಿಗೆ ೧

ಕರಡಿ ಕರುವಾಗುವುದು ಉರಿ ಮಂಜು ಆಗುವುದು ।
ಕರಿ ನಾಯಿಯಾಗುವುದು ಕಂಡವರಿಗೆ ।
ಭರದಿಂದ ಸುರಿವ ಮಳೆ ನಿಲ್ಲೆನಲು ನಿಲ್ಲುವುದು ।
ನರಹರಿಯ ನಾಮಗಳ ನಂಬಿ ಭಜಿಪರಿಗೆ ೨

ಫಣಿ ಸರಿವೆಯಾಗುವುದು ದಣುವಾಗುತಿಹ ಮಾರ್ಗ ।
ಕ್ಷಣದೊಳಗೆ ಪೋದಂತೆ ಕಾಣಿಸುವುದು ।
ಘನ ಪಾಷಾಣಗಳು ತೃಣಸಮವು ಎನಿಸುವುವು ।
ವನಜಾಕ್ಷನ ಕೃಪೆಯ ಪಡೆದ ದಾಸರಿಗೆ ೩

ಕ್ಷುಧೆ ತೃಷೆಯಾಗುದು ಕ್ಷುದ್ರ ಸಂಗವಾಗದು ।
ಪದೆಪದೆಗೆ ರೋಗಗಳು ಬೆನ್ನಟ್ಟವು ।
ಉದಯಾಸ್ತಮಾನಗಳೆಂಬ ಭಯ ಸುಳಿಯದು ।
ಪದುಮನಾಭನ ಕೃಪೆಯ ಪಡೆದ ದಾಸರಿಗೆ ೪

ಬಾರವು ಭಯಗಳು ಬಂದರೂ ನಿಲ್ಲವು ।
ಹಾರಿ ಹೋಗುವುವು ದಶ ದಿಕ್ಕುಗಳಿಗೆ ।
ಘೋರ ದುರಿತಾರಿ ಶ್ರೀ ವಿಜಯವಿಠ್ಠಲನಂಘ್ರಿ ।
ಸೇರಿದ ಜನರಿಗೆ ಇನಿತು ಭಯವುಂಟೆ ೫

೪೫೨

ಏಕಾದಶಿ ವ್ರತ ಶೋಧಿಸಿ ಸಾಧಿಸಿ ಏಕಭಕುತಿಯಿಂದ
ಮಾಡಿರೊ ಪಾಡಿರೊ ।
ಲೋಕದೊಳಗೆ ಇದೆ ಬೀರುತಾ ಸಾರುತಾ ಶ್ರೀಕಾಂತನ ವೊಲಿಸಿ ಪ

ದಶಮಿ ಏಕಾದಶಿ ದ್ವಾದಶಿ ದಿನತ್ರಯ ।
ವಸುಧಿಯೊಳಗೆ ಮಹಾವ್ರತವೆಂದು ತಿಳಿದು ತ್ರಿ ।
ದಶರೆಲ್ಲ ಕೈ ಕೊಂಡು ಮಾಡಿದರಂದು ರಂ ।
ಜಿಸುವ ಸತ್ಕರ್ಮದಲ್ಲಿ ।
ಬಿಸಜನಾಭನು ಲಕುಮಿಗೆ ಪೇಳಿದ ವ್ರತ ।
ಹಸನಾಗಿ ಬೊಮ್ಮಗೆ ಅರಹು ಮಾಡಲು ದೇವ ।
ಋಷಿಗೆ ಅಜನು ಪೇಳಲಾ ಮುನಿ ಬೀರಿದಾ
ದಶ ದಿಕ್ಕಿನೊಳಗೊಂದು ೧

ಉದಯಕಾಲದೆಲೆದ್ದು ಸಂಸಾರಯಾತ್ರೆ ಎಂದು ।
ಬದಿಯಲ್ಲಿದ್ದವರೆಲ್ಲ ಹರಿದಾಸ ದಾಸಿಯರು
ಹೃದಯದೊಳೀಪರಿ ಯೋಚಿಸಿ ಅಜ್ಞಾನ ಒಂದು ಕಡೆಗೆ ನೂಕಿ ।
ಸದಮಲನಾಗಿ ಸ್ನಾನಾದಿಯ ಮಾಡಿ ಮ
ತ್ತದರ ತರುವಾಯ ದೇವತಾರ್ಚನೆ ಬಲು ವಿಧಿ ತಂತ್ರ ಸಾರದಿ
ಮುಗಿಸಿ ಶ್ರವಣ ಸಾರಾ ಹೃದಯರಿಂದಲಿ ಕೇಳಿ ೨

ಸಂಧ್ಯಾವಂದನೆ ದಿವ್ಯ ಮಂಗಳಾರುತಿ
ಗೋವಿಂದನ ಚರಣಕೆ ಎತ್ತಿ ನಿರ್ಮಲ ಚಿತ್ತ ।
ದಿಂದಲಿ ನಲಿವುತ ಹಿಗ್ಗಿ ಹಾರೈಸಿ ಆನಂದ ವಾರಿಧಿಯಲ್ಲಿ ।

ಕುಂದದೆ ಸೂಸುತ ಗೆಳೆಯರ ಒಡಗೂಡಿ ।
ತಂದು ಪುಷ್ಪಗಳಿಂದ ಮಂಟಪವ ವಿರಚಿಸಿ ।
ನಂದನ ಕಂದ ಮುಕುಂದನ ಮಧ್ಯದಿ ಇಂದು ಸ್ಥಾಪಿಸಿ ತುತಿಸಿ ೩

ಜ್ಞಾನಿಗಳೊಡನೆ ಕುಳ್ಳಿದ್ದು ಸುಜ್ಞಾನಿಗಳು ಶುದ್ಧ ಗಾ।
ಯನ ಮಾಡುತ ಹರಿಯ ಮಹಿಮಯನ್ನು
ಆನನ ಕೂಗುತ ಹಾಡುತ ಪಾಡುತ ।
ಧ್ಯಾನವ ಗೈವುತಲಿ ।
ಮಾನಸ ಪೂಜೆಯೊಳಗೆ ರಚಿಸಿ ಮೇಲೆ
ಕಾಣಬಾರದಂತೆ ಪ್ರಜೆದೊಳಗೆ ತೋರಿ ।
ನಾನೆಂಬೊ ಅಹಂಕಾರ ತೊರೆದು
ಮಗುವಿನಂತೆ ಶ್ರೀನಿವಾಸನ ನೆನಸಿ ೪

ತಾಳ ಝಾಗಟೆ ಮದ್ದಳೆ ತಂಬೂರಿ ಸಮ್ಮೇಳದಿಂದಲಿ
ಕೂಡಿ ಸೋಗು ವೈಯಾರದಿ ।
ಕಾಲಲಿ ಗೆಜ್ಜೆಯ ಕಟ್ಟಿ ।
ವಲಯಾಕಾರ ।
ಮೇಲು ಚಪ್ಪಳೆಯಿಂದ ।
ಬಾಲವೃದ್ಧರು ನಿಂದು ಕುಣಿಕುಣಿದಾಡಿ ಹಿ ।
ಯಾಲಲಿ ಹರಿಯ ಸಂಕೀರ್ತನೆ ಕೀರ್ತಿಸಿ ।
ಸೋಲದೆ ಘನಸ್ವರ ಸ್ವರದಿಂದಲಿ ಕೂಗಿ ವಿ ।
ಶಾಲ ಭಕುತಿ ಒಲಿಸಿ ೫

ಕಿರಿಬೆವರೊದಕ ಮೊಗದಿಂದಿಳಿಯಲು ।
ಉರದಲಿ ಇದ್ದ ದೇವಗೆ ಅಭಿಷೇಚನೆ ।
ಪರವಶವಾಗಿ ಮೈಮರೆದು ತಮ್ಮೊಳು ತಾವು ।
ಕರದು ತರ್ಕೈಸುತಲಿ ।
ಕಿರಿನಗೆಯಿಂದ ತೋಳುಗಳು ಅಲ್ಲಾಡಿಸಿ ।

ಎರಡು ಭುಜವ ಚಪ್ಪರಿಸಿ ಏಕಾದಶಿ ।
ದುರಿತ ರಾಸಿಗೆ ಪಾವಕನೆಂದು ಕೂಗಿ ಬೊಬ್ಬಿರಿದು ಬಿರಿದು ಸಾರಿ ೬

ಮಧ್ಯ ಮಧ್ಯದಲಿ ಮಂಗಳಾರುತಿ ಎತ್ತಿ ।
ಸದ್ವೈಷ್ಣವರುಗಳು ಹರಿ ಪರದೇವ
ಮಧ್ವರಾಯರೆ ಮೂರು ಲೋಕಕೆ ಗುರುಗಳು ।
ಸಿದ್ಧಾಂತ ಮುನಿ ಸಮ್ಮತಾ ।
ಈ ಧರೆಯೊಳಗಿದನೆ ಮಾಡದ ನರ ಮದ್ಯ ಮಾಂಸ
ಮಲ ಮೂತ್ರವನು ಕ್ರಿಮಿವ ಮನವು ।
ಮೆದ್ದಾ ಸದ್ದೋಷಿ ಚಂಡಾಲ ವೀರ್ಯಕ್ಕೆ ಬಿದ್ದವ ನಿಜವೆನ್ನಿ ೭

ಸಾಗರ ಮೊದಲಾದ ತೀರ್ಥಯಾತ್ರೆಯ ಫಲ ।
ಭೂಗೋಳದೊಳಗುಳ್ಳ ದಾನ ಧರ್ಮದ ಫಲ ।
ಆಗಮ ವೇದಾರ್ಥ ಓದಿ ಒಲಿಸಿದ ಫಲ ।
ಯೋಗ ಮಾರ್ಗದ ಫಲವೊ ।
ಭಾಗವತರ ಸಂಗಡ ಚತುರ್ದಶ ಝಾವ ಜಾಗರ
ಮಾಡಿದ ಮನುಜನ ಚರಣಕ್ಕೆ
ಬಾಗಿದವಗೆ ಇಂಥ ಫಲಪ್ರಾಪ್ತಿ ನಿರ್ದೋಷನಾಗುವ ವೈರಾಗ್ಯದಿ ೮

ನಿತ್ಯಾ ನೈಮಿತ್ಯಕ ಮಾಡು ಮಾಡದಲಿರು ।
ತತ್ವ ವಿಚಾರದಿ ಸುಖಿಸಿ ದ್ವಾದಶಿ ದಿನ ಹೊತ್ತು
ಪೋಗಾಡದೆ ಸದಾಚಾರ
ಸ್ಮೃತಿಯಂತೆ ಅತ್ಯಂತ ಪಂಡಿತ ಪಾವನ್ನ ।
ಉತ್ತಮರೊಡಗೂಡಿ ಮೃಷ್ಟಾನ್ನ ಭುಂಜಿಸಿ ।
ಮೃತ್ಯು ಜೈಸಿ ಸದ್ಗತಿಗೆ ಸತ್ಪಥಮಾಡು ।
ಸತ್ಯ ಮೂರುತಿ ನಮ್ಮ ವಿಜಯವಿಠ್ಠಲರೇಯ ।
ನಿತ್ಯ ಬಿಡದೆ ಕಾವಾ ೯

೪೫೩

ಕಥಾಶ್ರವಣ ಮಾಡೋ ಪಾಡೋ ಹರಿ ಪ

ಪಥ ವೈಕುಂಠಕ್ಕಿದು ನೋಡೋ ಅ.ಪ

ಪತಿತಪಾವನ ಪಾದಾಬ್ಜದಲಿ
ಹಿತದಿಂ ಭಕುತಿಯ ಮಾಡೋ ೧

ಜ್ಞಾನ ಭಕುತಿ ವೈರಾಗ್ಯವೀವ
ಆನಂದತೀರ್ಥರ ಪಾಡೋ ೨

ಅಜಭವಾದಿಗಳಿಗರಸನಾದ ಶಿರಿ
ವಿಜಯವಿಠಲನ ನೋಡೋ ೩

೪೫೪

ಕೇಳು ಮನವೆ ಸುಜನನಾಗಿ ಬಾಳು ಬಾಲ ಭಕುತಿಯಲ್ಲಿ
ಕೇಳು ಶ್ರವಣದಲ್ಲಿ ಪೇಳು ಹರಿಯೇ ದೈವವೆಂದು ಪ

ನಿಲ್ಲಿಸು ಹರಿಯ ವೊಲಿಸುವಳಿಗೆ ಗಳಿಸು ಜ್ಞಾನ
ವಳಿಸು ಪಾಪಕಲಿಯಾ ಬೆಳಿಸು ಘಳಿಸು
ತಾಮಸ ಸುಳಿಸು ಮಾರ್ಗ
ಬಲಿಸು ಧ್ಯಾನವ ಉಳಿಸು ಮನವ
ಬೆಳಿಸು ಚೆನ್ನಾಗಿ ಗೆಲಿಸು ವ್ರತವ
ಚಲಿಸು ಯಾತ್ರೆಯ ಇಳಿಸು ಮಮತೆ
ಕಲಿಸು ಮಿಥ್ಯವ ಥಳಿಸುವಂತೆ ಕೇಳು ಮನವೆ ೧

ನೋಡು ಕಣ್ಣಲಿ ಮಾಡು ಸೇವೆಯ ಪಾಡಿ
ಕೀರ್ತನೆ ಕಾಡು ರಂಗನ
ಬೇಡು ದೈನದಿ ನೀಡು ಹಸ್ತವ

ಬಾಡು ನಿನ್ನೊಳಗಾಡು
ತಾಡುತಾ ಕೇಡು ಒದೆದು ಬಿಡು ನೆಚ್ಚ
ದೀಡ್ಯಾಡ್ಯೋ ಕಾಯವ ಗೂಢದ ಮಾತಾಡು ಕಲಾಪ
ಬೇಡರಟ್ಟಲು ಮೋಡು ನಿಲ್ಲದೆ ಪಾಡು ಪಂಥವಾ ೨

ಕರಿಯೊ ಹರಿಯಾ ಬೆರಿಯೆ ಸಂಗಡ
ನೆರಿಯೊ ವೊಡನೆ ಸುರಿಯೊ ನಾಮವ
ಅರಿಯೊ ಮಹಿಮೆ ಮರಿಯೊ ವ್ಯಾಕುಲ
ಮೆರಿಯೊ ಗುಪ್ತದಿ ಜರಿಯೊ ಹೀನರಾ ಸರಿಯೊ ಮಿರಲು
ಗುರಿಯೊ ತಮಕ್ಕೆ ಸರಿಯೆ ಲಾಲಿಸು ಧರಿಯೊಳಗೆ ನೀ
ಮರಿಯೊ ಯೆನಿಸಿ ಹರಿಯೊಲಿದರೆ ದೊರಿಯೊ
ವಿಜಯವಿಠ್ಠಲನೆಂದು ೩

೪೫೫

ಕೋಪವೆ ತಾಪ ಬ್ರಹ್ಮೇತಿ
ಶ್ರೀ ಪುರುಷ ಬಾಲ ಅಣುರೇಣುತ್ರಿಣಗಳಿಗೆಲ್ಲ ಪ

ವಿಷ್ಣಪದೆ ಯಮುನೆ ಸರಸ್ವತಿ ಸಿಂಧು ಕಾವೇರಿ
ಕೃಷ್ಣವೇಣಿ ಗೋದೆ ತುಂಗೆ ನರ್ಮದಾ
ಇಷ್ಟು ಮಹಾನದಿಯಲ್ಲಿ ಮುಣಗಿ ಮಿಂದರೇನು
ಕಾಷ್ಟಕಭ್ಯಾಂಗವನು ಮಾಡಿ ನೀರೆರದಂತೆ ೧

ಭಕುತಿಯಲಿ ನಡೆದು ಭವಿಷೊತ್ತರ ಪೇಳಿದರೇನೊ
ವಿಕಳಮತಿಯಲಿಟ್ಟು ವರನಾದರೇನು
ಕಕುಲಾತಿ ತೊರೆದು ನಿಷ್ಕಳಂಕನಾದರೆ ಏನು
ಶುಕಪಕ್ಷಿ ಅನುಗಾಲ ಓದಿ ತಿಳಿದಂತೆ ೨

ಜ್ಞಾನದಲ್ಲಿ ಪರರಿಗೆ ನ್ಯಾಯ ಪೇಳಿದರೇನು
ಹಾನಿ ನೆನೆಸಿ ಕೀರ್ತಿಯ ಪಡೆದರೇನು

ಧ್ಯಾನದಲಿ ಮಾನಸ ಪೂಜೆ ಮಾಡಿದರೇನು
ಶ್ವಾನದಲಿ ಬೂದಿಯೊಳಗೆ ವರಗಿ ಇದ್ದಂತೆ ೩

ಯಾತ್ರೆ ತೀರ್ಥಂಗಳು ತೊಳಲಿ ತಿರುಗಿದರೇನು
ಪಾತ್ರಾಪಾತ್ರನರಿದು ನಡೆದರೇನು
ಗಾತ್ರವನು ಬಳಲಿಸಿ ನೇಮ ಮಾಡಿದರೇನು
ಮೂತ್ರದಲಿ ತೊಳೆದು ಅಮೃತನ್ನ ಉಂಡಂತೆ ೪

ವಡೆವ ಮಡಕಿಗೆ ಚಿಂತಾಮಣಿ ತಂದು ಹಚ್ಚಲು
ಗಡಿಗಿ ಅಲ್ಲದೆ ಅದು ಪರುಶಾಗೋದೆ
ಬಿಡದೆ ಕೋಪಿಷ್ಠನು ಬಲು ಶಾಂತನೆನಿಸಿದರೆ
ವೊಡಿಯ ಸಿರಿ ವಿಜಯವಿಠ್ಠಲನೊಲಿದು ಮೆಚ್ಚನಯ್ಯಾ ೫

೪೫೬

ಗೋತ್ರ ಪ್ರವರ ಉಚ್ಚಾರಣೆ ವಂದೇ ಕಾಣೊ
ಧಾತ್ರಿಯೊಳಗೆ ತಂದೆ ಮಕ್ಕಳು ಮಾಡುವ ಕಾ ।
ಲತ್ರಯದ ಸಂಧ್ಯಾವೆಲ್ಲ ಎಂದಿಗೂ ಭೇದವಿಲ್ಲಾ ಪ

ಪುತ್ರನಿಗೆ ಪಿತನು ಆನಾರಂಭದಿ ನಾಮ
ಮಾತ್ರ ನುಡಿಸುವ ಬುದ್ಧಿ ಪೇಳಿ ।
ಚಿತ್ರವ ಗೋಡೆಯ ಮೇಲೆ ರಚಿಸಿರಲು ನೋಡಿ
ಸ್ತೋತ್ರ ಮಾಡಿದರೆ ಯೇನಾಹದೋ ೧

ಚಿತ್ರಿಕ ಬಲು ವಿವೇಕ ಉಳ್ಳವನೆಂದು
ಪಾತ್ರರ ಮುಂದೆ ಕೊಂಡಾಡಿದಂತೆ ।
ಧಾತ್ರಿಯೊಳಗೆ ನಮ್ಮ ಪುರಂದರದಾಸರ
ಸ್ತೋತ್ರ ಮಾಡಿರಯ್ಯ ಸಚಲರಾಗೀ ೨

ಗಾತ್ರ ನಿರ್ಮಲವಕ್ಕು ಯೆಂದೆಂದಿಗೆ ದಿವ್ಯ ।
ನೇತ್ರದಿಂದಲಿ ಹರಿಯ ಸರಿದರುಶನಾ ।
ರಾತ್ರಿಂಚರೆಯೆಂದು ಪೆಸರುಳ್ಳವು ಕುಮುದ
ಮಿತ್ರಗೆ ಸರಿಯೇನು ಉಳದಾದವು ३

ಸ್ತೋತ್ರಾಭರಣವಾದ ದಾಸರ ಶವನಕ್ಕೆ ಅ
ನ್ಯತ್ರ ನುಡಿವದು ಧಿಕ್ಕರಿಪದು ।
ನಿತ್ರಾಣವಾದ ಮನುಜ ಹಿರಿಯರ
ವಿತ್ತದಿಂದ ಯಾತ್ರಿ ಮಾಡಿ ಪುಣ್ಯ ಫಳಿಸಿದಂತೆ ೪

ಸ್ತೋತ್ರ ಮಿಟಮ್ಯಾಲೆ ಪಂಗ್ತಿ ಹಾಕಿ ಕೊಡಲು
ಮಾತ್ರೆಗಳ ನೋಡಿ ಬರದಂತೆ ವೋ ।
ಶತ್ರು ಸಂಹಾರ ನಮ್ಮ ವಿಜಯವಿಠ್ಠಲನಂಘ್ರಿ ಶತ
ಪತ್ರ ಬಲ್ಲವರಿಗೆ ಯಿದೆ ವಿಸ್ತಾರ ನಿರ್ಮಾಣ ೫

೪೫೭

ಚಿರಂಜೀವಿಯಾಗಿರೆಲೊ ಚಿಣ್ಣ ನೀನು ಪ

ಪರಮ ಭಾಗವತರ ಪದಧೂಳಿ ಧರಿಸುತಲಿ ಅ.ಪ

ಜರಿಯಬೇಡ ಹರಿಯ ಮರೆಯಬೇಡೆಂದೆಂದು
ತಿರಿಯಬೇಡ ಖಳರ ಮನೆಗೆ ಪೋಗಿ
ಜರೆಯಬೇಡನ್ಯರಿಗೆ ರಹಸ್ಯ ತತ್ತ್ವಗಳನ್ನು
ಬೆರೆಯಬೇಡ ಪರರ ಸತಿಯ ಸ್ವಪ್ನದಲೂ ೧

ಲೋಕವಾರ್ತೆಯ ನಿನ್ನ ಕಿವಿಗೆ ಕೇಳಿಸಬೇಡ
ಶ್ರೀ ಕಾಂತ ಚರಿತೆಯನು ಕೇಳದಿರಬೇಡ
ಪಾಕವನು ಮಾಡಿ ಏಕಾಂಗಿಯಾಗುಣಬೇಡ
ಭೂಕಾಂತರನುಸರಿಸಿ ಬೆಸಗೊಳ್ಳಬೇಡ ೨

ಸಾಲ ಮಾಡಲಿ ಬೇಡ ಸಾಲದೆಂದೆನಬೇಡ
ನಾಳೆಗೆ ಹ್ಯಾಗೆಂಬ ಚಿಂತೆ ಬೇಡ
ಖೂಳ ಜನರೊಡಗೂಡಿ ಕಂಗೆಡಲಿ ಬೇಡ ನೀ
ಬಾಳುವರ ಸಂಗದಲಿ ಬಾಳೆಲವೊ ಬಾಲ ೩

ಪಂಡಿತರು ಪಾಮರರು ಆರಿಗಾದರೂ ನಿನ್ನ
ಕಂಡವರಿಗೆಲ್ಲ ಕೌತುಕ ತೋರಲಿ
ಹೆಂಡಿರು ಮಕ್ಕಳು ಅಳಿಯ ಸೊಸೆ ಮೊಮ್ಮಕ್ಕಳು
ಉಂಡುಟ್ಟು ದ್ವಿಜರ ಸಹ ಗಂಡುಗಲಿಯಾಗೋ ೪

ಮಂದಮತಿಗಳ ಕೂಡೆ ಮಾತಾಡಲಿ ಬೇಡ
ನಿಂದಕರ ಕಣ್ಣೆತ್ತಿ ನೋಡಬೇಡ
ಇಂದಿರೆಯರಸ ಶ್ರೀ ವಿಜಯವಿಠ್ಠಲನ ಚರಣ
ದ್ವಂದ್ವದಲಿ ಮಸ್ತಕವ ನೀಡದಿರಬೇಡ ೫

೪೫೮

ಡಂಗುರ ಹೊಡಿಸಿದ ಯಮನು ।
ಪಾಪಿ ಹೆಂಗಳೆಯವರ ತಂದು ಭಂಗಪಡೆಸಿದರೆಂದು ಪ

ಮೃತಿಕೆ ಶೌಚದ ಗಂಧ ಪೋಗುವಂತೆ ।
ನಿತ್ಯದಲ್ಲಿ ಸ್ನಾನ ಮಾಡದೆ ಸುಮ್ಮನೆ ॥
ತೊತ್ತು ಒಡತಿಯಾಗಿ ಮುಖವ ತೊಳಿಯದಿಪ್ಪ ।
ಕತ್ತೆ ಹೆಂಗಸರನು ಕಡಿದು ಕೊಲ್ಲಿರೊ ಎಂದು ೧

ಪತಿಗೆರಗದೆ ಗೃಹಕೃತ್ಯ ಮಾಡುವಳ ।
ಮತಿವಿರದೆ ಚಂಚಲದಿಪ್ಪಳ ॥
ವ್ರತಗೇಡಿ ಅನ್ಯರ ಮಾತಿಗೆ ಸೋಲುವ ।
ಪತಿತಳ ಎಳೆತಂದು ಹತವ ಮಾಡಿರೆಂದು ೨

ಒಬ್ಬರಿಬ್ಬರ ಕೂಡ ಸಖಿತನ ಮಾಡುವಳ ।
ಒಬ್ಬೊಬ್ಬರಿಗೆ ಮೈಯಿತ್ತು ಪಾಡುವಳೆ ॥
ಅಬ್ಬರದ ಸೊಲ್ಲನು ವಿಸ್ತರಿಸುವಳ ।
ದಬ್ಬಿರೊ ವೃಶ್ಚಿಕದ ಕುಂಡದೊಳಗೆ ಎಂದು ೩

ವಸನವಿಲ್ಲದೆ ಮೈಯ ತೊಳಕೊಂಬೊ ಪಾಪಿಯ ।
ಹಸಿವೆಯಾದರೆ ಮಲಗಿಕೊಂಡಿಪ್ಪಳ
ಅಶನ ಭಕ್ಷಿಸುವಾಗ ಅಳಲುವ ದುಃಖಿಯ
ಪೆಸರಿಯ ತರೆ ಕೆಳಗಾಗಿ ಬಾಧಿಸರೆಂದು ೪

ಬಿಗಿದು ಪುಟವ ಹಾಕಿ ಬದಿ ಬಗಲ ಮುಚ್ಚದೆ ।
ನಗುವಳು ಅವರಿವರೆಂದರಿಯದೆ ॥
ಬಗೆ ಬಗೆ ವಯ್ಯಾರ ನಿಜವಾಗಿ ತೋರುವ ।
ಅಧಮ ನಾರಿಯೆ ತಂದು ಅರಿದು ಕೊಲ್ಲಿರೊ ಎಂದು ೫

ಪಾಕದ ಪದಾರ್ಥ ನೋಡಿ ಇಡದವಳ ।
ಲೋಕವಾರ್ತೆಗೆ ಮನೆಯ ಜರಿದು ಪತಿಗೆ ॥
ಬೇಕಾದವರ ಜರಿದು ಬಹುಪುಷ್ಪ ಮುಡಿದಿಪ್ಪ
ಕಾಕಿಯ ಎಳೆತಂದು ಕಣ್ಣು ಕಳಿಚಿರೆಂದು ೬

ಪಂಕ್ತಿ ಭೇದವ ಮಾಡಿ ಬಡಿಸುವ ಪಾಪಿಯ ।
ಕಾಂತ ಕರೆದಾಗ ಪೋಗದವಳ ॥
ಸಂತರ ನೋಡಿ ಸೈರಿಸದಿಪ್ಪ ನಾರಿಯ ।
ದಂತಿಯ ಕೆಳಗೆ ಹಾಕಿ ತುಳಿಸಿ ಕೊಲ್ಲಿರೊ ಎಂದು ೭

ವಿಧವೆಯ ಸಂಗಡ ಇರಳು ಹಗಲು ಇದ್ದು ।
ಕದನ ತೆರೆದು ನೆರಳು ನೋಡುವಳ ॥
ಕದದ ಮುಂದೆ ಕುಳಿತು ತಲೆ ಬಾಚಿ ಕೊಂಬುವಳ ।
ಕುದಿಸಿ ಕಟಾಹದೊಳು ಮೆಟ್ಟಿ ಸೀಳಿರೊ ಎಂದು ೮

ಆವದಾದರು ತೊರೆದು ಪತಿದೈವವೆಂದರಿದು ।
ಸೇವೆಯ ಮಾಡಿ ಸುಜನರಿಗೆ ಬೇಗ ॥
ದೇವೇಶ ವಿಜಯವಿಠ್ಠಲ ತಿರುವೆಂಗಳ ।
ಕಾಯುವನು ದಯದಿಂದ ಕೈವಲ್ಯ ಕಲ್ಪಿಸಿ ೯

೪೫೯

ತುರುಕರಿಲ್ಲದ ಮನೆ ದಿರದಿಮ್ಮನೆ ಪ

ತುರಕರ ನೋಡದ ಕಣ್ಣು ಶಿಖಿಗರಿಗಣ್ಣು
ತುರಕರಿಗೆರಗದ ತಲೆ ಕಗ್ಗತ್ತಲೆ
ತುರಕರ ಕಥಾಶ್ರವಣ ಕೇಳದ ಕರ್ಣ ಈಚಲಪರ್ಣ
ತುರಕರುವಿನುಚ್ಛಿಷ್ಟ ಉಣ್ಣ ಬಾಯಿ ವಿಷಗಾಯಿ ೧

ತುರಕರನಾಘ್ರಾಣಿಸದ ಮೂಗು ಅಡವಿಯ ಕೂಗು
ತುರಕರಸೇವೆಸದಕರ ವಿಕಾರ ಪಾಮರ
ತುರಕರ ಕೊಂಡಾಡದ ಜಿಹ್ವೆ ಅಧಮನ ಗುಂಪೆ
ತುರಕರನೊದೆವ ಕಾಲು ಯಮನ ಪಾಲು ೨

ತುರಕರ ಪ್ರಸಾದ ಉಣ್ಣದ ಹೊಟ್ಟೆ ಗೂಗಿನ ಮೊಟ್ಟೆ
ತುರಕರನ ಚಿಂತಿಸದ ಮನ ಗಾರ್ಧಭ ಗಮನ
ತುರಕರ ಕಾಯ್ದ ವಿಜಯವಿಠ್ಠಲರೇಯ
ತುರಕರ ಕರುಣ ಪಡೆಯದವನು ಶುದ್ಧ ಶವನು ೩

೪೬೦

ದಾಸರ ಭಾಗ್ಯವಿದು–ಪುರಂದರ–ದಾಸರ ಭಾಗ್ಯವಿದು ಪ

ಸರ್ವ–ದೇಶದೊಳು ತುಂಬಿ ಸೂಸುತಲಿದೆ ಅ.ಪ

ಭೂಸುರ ಜನುಮದಿ ಬಂದು ಬೆಳೆದು ಉಪ–
ದೇಶಗೊಂಡು ಮಧ್ವಮತ ಪೊಂದಿ
ಲೇಸಾಗಿ ಭಕ್ತಿ ವಿರಕ್ತಿ ಜ್ಞಾನದ ವಿ–
ಶೇಷವಾಗಿ ನಾ ಬಾಳುವದೆಲ್ಲ ೧

ಸಜ್ಜನ ಸಂಗತಿ ಮಾಡಿ ದುರುಳಜನ
ವರ್ಜನಗೈದು ಸತ್ಕರ್ಮಗಳ
ಆರ್ಜಿಸಿ ನಾಮ ಮುದ್ರೆ ಹಗಲು ಇರಳು ನಿ
ರ್ಲಜ್ಜನಾಗಿ ನಾ ಬಾಳುವುದೆಲ್ಲ ೨

ಶ್ರವಣ ಕೀರ್ತನೆ ವಂದನೆ ಸ್ತೋತ್ರ ಹರಿನಾಮ
ತವಕದಿಂದ ನುಡಿಯುವ ಕವನ
ನವನವ ವಚನವು ಮಂತ್ರ ಸಂಕಲ್ಪವು
ಸವಿದು ಸ್ಮರಿಸಿ ನಾ ಬಾಳುವುದೆಲ್ಲ ೩

ಯಾತ್ರೆ ತೀರ್ಥ ದಿವ್ಯ ದಾನಧರ್ಮಂಗಳು
ಕ್ಷೇತ್ರ ಮೆಟ್ಟಿ ಬಹ ಸಂಭ್ರಮವು
ಮಿತ್ರರ ಕೂಡಾಡಿ ಹರಿಪರನೆಂದು ಸ–
ತ್ಪಾತ್ರನಾಗಿ ನಾ ಬಾಳುವುದೆಲ್ಲ ೪

ಹರಿದಿನದುಪವಾಸ ಜಾಗರಣೆ ಪಾರಣೆ
ಗುರು ಹಿರಿಯರಲಿ ವಿಹಿತಸೇವೆ
ಹಿರಿದಾಗಿ ಮಾಡೋದು ಪರಿಪರಿಯಿಂದಲಿ
ಹರುಷದಿಂದಲಿ ನಲಿದಾಡುವುದೆಲ್ಲ ೫

ಷಡುರಸಭೋಜನ ದಿವ್ಯವಸನ ನಿತ್ಯ
ಉಡುವುದು ಹೊದೆವುದು ಹಸನಾಗಿ
ತಡೆಯದೆ ಜನರಿಂದ ಪೂಜೆಗೊಂಡು ಸುಖ–
ಬಡಿಸುತಿರುವ ವಿಚಿತ್ರಗಳೆಲ್ಲ ೬

ಮನವೆ ಹಿಗ್ಗದಿರು ಹಿಯ್ಯಾಳಿಕೆಯಿಂದ
ಗುಣಿಸಿಕೊ ಸುಖವಾವುದು ಲೇಶ
ನಿನಗೆ ಸ್ವತಂತ್ರ ಎಂಬುದು ಕಾಣೆನೆಂದಿಗು
ಗುಣನಿಧಿ ವಿಜಯವಿಠ್ಠಲನ ಪ್ರೇರಣೆಯೆಲ್ಲ ೭

೪೬೧

ದುರ್ಲಭ ಇದು ಕಲಿಯುಗದೊಳಗೆ ಕಾಣಾ
ಎಲ್ಲರಿಗೆ ದೊರಕಬಲ್ಲದೆ ಶ್ರೀ
ವಲ್ಲಭನ ಪಾದಸೇವೆ ಮಾಡೋ ನೀ
ನಲಿದಾಡೋ ಎಲೆ ಮನುಜಾ ಪ

ಸುರನರ ಉರಗರು ಕಿಂನರಕಿಂಪುರುಷರು
ಗಂಧರ್ವರು ಸಿದ್ಧರು ವಿದ್ಯಾ
ದರಸಾಧ್ಯ ಗುಹ್ಯಕ ಸುರಮುನಿಗಣ ಗರುಡಾದ್ಯರೆ ನೆರೆದು
ಹರಿ ಸರಸಿಜ ಸಂಭವ ಪುರಹರ ಮೂವನ ಬಲ್ಲಿದರೀ
ದರಿಯೊಳು ಇದರಲಿ ಹರಿ ಭಕುತಿಗೆ ಸರಿ
ಇಲ್ಲವೆನುತಲಿ ಬರಿದು ರೇಖೆಯ
ಬರಿಸಿದರೊ ಡಂಗುರ ಹೊಯಿಸಿದರೊ ಎಲೆ ಮನುಜಾ ೧

ಹರಿಯೆಂತೆಂದವ ಧರ್ಮಕೆ ಸಂದವ
ಕರದಲಿ ದಂಡಿಗೆ ಪಿಡಿದವ ಪುಣ್ಯವ ಪಡೆದವ
ಚರಣದ್ವಯದಲಿ ಗೆಜ್ಜೆಯ ಕಟ್ಟಿದವ ಅಟ್ಟಿದವ ಯಮ ಭಟರ
ಪರಿಹರಿದಾಡುತ ಕುಣಿದವ ಉತ್ತಮ ಗುಣದವ
ಹಿರಿದಾಗಿ ಗಾಯನ ಪಾಡಿದವ ಸುರರನ ಗೂಡಿದವ
ತಿರುಹುತ ಅಭಿನವ ನೋಡೊ
ಮಾಯವ ಬಿಡೋ ಎಲೆ ಮನುಜಾ ೨

ತಂಬೂರಿ ತಂತಿಯಾ ಮೀಟಿದವ ಭವಾಬ್ಧಿ ದಾಟಿದವ
ಇಂಬಾಗಿ ಕಡ್ಡಿ ವಾದ್ಯವ ಹಾಕಿದವ ದುರುತವ ನೂಕಿದವ

ಸಂಭ್ರಮ ತಾಳ ಕಟಿದವ ಊಟದವ ಸುರರೊಡನೆ
ತುಂಬಿದ ದಾಸರ ಸಭೆಯೊಳಗಿದ್ದವ ನರಕವನೊದ್ದವ
ಕಂಬನಿ ಪುಳಕೋತ್ಸವ ಸುರಿದವ ತತ್ವವನರಿದವ
ಅಂಬುಜಾಕ್ಷನ ಮಹಿಮೆಯ ಕೇಳೋ
ನೀ ಸುಖದಲಿ ಬಾಳೊ ಎಲೆ ಮನುಜಾ ೩

ದಾಸರ ಕೀರ್ತನೆ ಒಂದು ಸುಳಾದಿಯ
ಬೇಸರದಲೆ ಹೇಳಿ ಏಕಾದಶಿಯ
ವಾಸರದಲಿ ಜಾಗರವನು ಗೈದ ಮಾನೀಸನು ಅಘನಾಶನು
ಸಾಸಿರ ಜನ್ಮದ ಕುಲಕೋಟಿಯ ಶ್ರೀನಿವಾಸನ
ಚರಣಕೆ ಏರಿಸಿದನಿವ
ಏಸು ವ್ರತಗಳು ಬಿಡಬಿಡು ಜರಿದು ಹರಿದಾಸರ ಸಂಗತಿ
ಬೆರೆದು ಎಲೆ ಮನುಜಾ ೪

ಈ ಪರಿಯಿಂದಲಿ ಸೇವಿಸಿ ಉಪಾದಾನ
ಗೋಪಾಳವನು ಬೇಡಿ ನಿತ್ಯಸುಖಿಯಾಗಿ
ತಾಪತ್ರೆಯ ಮೊದಲಾದ ದುಷ್ಕರ್ಮ ಪಾಪರಹಿತನಾಗಿ
ಶ್ರೀಪತಿ ಸಿರಿ ವಿಜಯವಿಠ್ಠಲನ ಪದ
ಪದ್ಮವ ಪೊಂದಿದ ಭಜಕರು
ಕಾಪುರುಷರಿಗೆ ವಿಶೇಷರು ಕಾಣೊ ಮುಕ್ತಿ
ಒಂದೇ ಗೇಣೊ ಎಲೆ ಮನುಜಾ ೫

೪೬೨

ನಂಬಿ ನೆಚ್ಚದಿರು ನರಲೋಕ ಸುಖವೆಂಬ, ಅಂಬಲಿ ಪರಮಾನ್ನ ಪ

ಹಂಬಲಿಸುವುದು ಹರಿಲೋಕಾನಂದವೆಂಬ ಪೀಯೂಷಪಾನ ಅ.ಪ

ದುರುಳಜನರ ಸಂಗವೆಂಬುದು ಎಂದಿಗೂ
ನೊಣ ಬೆರಸಿದ ಊಟ

ಪರಮಭಾಗವತರ ಪದಸಂಗವೆಂಬುದು ಮಸ್ತಕದ ಮಕುಟ
ಮರೆ ಮೋಸಗೊಳಿಸುವ ಸತಿಸುತರೆಂಬೋದೆ
ಕೇವಲ ಯಮಕಾಟ
ಪರತತ್ವವಾದ ಶ್ರೀಹರಿಯ ತಿಳಿವುದೆ ವೈಕುಂಠಕೆ ಓಟ ೧

ಬಿದ್ದ ಕಾಳಿಗೆ ಕಾಳು ಕೂಡಿ ಹಾಕುವುದೆಲ್ಲ,
ಹಾರಿ ಹೋಗುವ ಹೊಟ್ಟು
ಇದ್ದಾಗ ದಾನ ಧರ್ಮಂಗಳ ಮಾಡೋಡು ಕೈವಲ್ಯಕೆ ಮೆಟ್ಟು
ಹೊದ್ದಿರುವರ ಕಂಡಾಸೆಯಪಟ್ಟರೆ ಹೋಗುವಿ ನೀ ಕೆಟ್ಟು
ಬುದ್ಧಿಹೀನರಿಗೆ ಪೇಳದಿರೆಲೊ ತತ್ವಸಾರ ಸುಂದರ ಗುಟ್ಟು ೨

ಅಲ್ಪಾವಕಾಶವು ಈ ಶರೀರವು ಗಾಳಿಗೊಡ್ಡಿದ ದೀಪ
ಅಲ್ಪ ಸಂತೋಷನಾಗು ಅದು ನಿನಗೆ
ನೋಡು ಹಾಲುಸಕ್ಕರೆ ತುಪ್ಪ
ಬಲ್ಪಂಥ ಮಾಡದಿರು ಜನ್ಮಜನ್ಮದಲಿ ಬಿಡದೆಲೊ ಸಂತಾಪ
ಸ್ವಲ್ಪಕಾಲಾದರೂ ಮಧ್ವಮತವೊಂದು ಭವವೇ ನಿರ್ಲೇಪ ೩

ಹರಿಗರ್ಪಿಸದ ಕರ್ಮ ಆವುದಾದರು ಸೂಳೆಗಿಕ್ಕಿದ ವಿತ್ತ
ಹರಿಗೆ ವಿಶ್ವಾಸದಿ ಅಣುಮಾತ್ರ ಅರ್ಪಿಸೆ ಅವನೆ ನಿರ್ಮಲ ಚಿತ್ತ
ನಿರುತಗ್ರಾಸಕೆ ಚಿಂತೆಮಾಡಲು ಒದಗದು ಪುಣ್ಯವು ನಿನಗೆತ್ತ
ಅರೆಮನವಿಲ್ಲದೆ ದೃಢಮನದಿಪ್ಪುದೆ ಸಂಪಾದನೆ ಭತ್ಯ ೪

ಭಾವವಿರಕ್ತಿಯ ವಹಿಸದಿದ್ದರೆ ನಿನಗಾಗುವುದು ಖೇದ
ಸಾವಿರಕೊಂದೆ ಮಾತು ಹರಿದಾಸನೆನಿಸೋದು
ಪರಿಪರಿಯಾಸ್ವಾದ
ದೇವಕಿಸುತ ನಮ್ಮ ವಿಜಯವಿಠ್ಠಲನಂಘ್ರಿ ತೀರುಥ ಪ್ರಾಸಾದ
ಸೇವಿಸದವನೆ ನಿತ್ಯ ನರಕವಾಸ ಎನ್ನುತಲಿದೆ ವೇದ ೫

೪೬೩

ನರಕ ಎತ್ತಣದೋ ನರಕ ಎತ್ತಣದೋ
ನರ ಕಂಠೀರವನೆಂದು ಸ್ಮರಿಸುವ ಜನರಿಗೆ ಪ

ಸ್ನಾನ ಮಾಡುವುದೇಕೆ ಧ್ಯಾನಗೈಯುವುದೇಕೆ
ದಾನ ಧರ್ಮಂಗಳು ಮಾಡಲೇಕೆ
ಶ್ರೀ ನಾರಾಯಣನೆಂದು ಆವಾಗಲೂ ಜಿಹ್ವೆ
ತ್ರಾಣದಲಿ ಬಿಡದೆ ಎಣಿಸುವ ಜನರಿಗೆ ೧

ತೀರ್ಥ ಮೀಯುವದೇಕೆ ಯಾತ್ರೆ ಚರಿಪದೇಕೆ
ಸ್ತೋತ್ರ ಮಂತ್ರಾದಿಗಳು ಪಠಿಸಲೇಕೆ
ಚಿತ್ರಮಹಿಮ ನೀಲಗಾತ್ರನ್ನ ಚರಿತೆ ಕಾ
ಲತ್ರಯ ಬಿಡದೆ ಉಚ್ಚರಿಸುವ ಜನರಿಗೆ ೨

ದೀಪ ಧೂಪಗಳೇಕೆ ನಾನಾ ಪರಿಯಲ್ಲಿ
ಸೋಪಸ್ಕರದ ಎಡೆ ಇಡಲೇತಕೆ
ಅಪಾರ ಮಹಿಮ ಅನಾಥರೊಡೆಯ ರಂಗ
ಶ್ರೀಪತಿ ಎಂದೀಗ ಸ್ಮರಿಸುವ ಜನರಿಗೆ ೩

ಭೂತದಯಗಳೇಕೆ ನೀತಿ ಎಂಬುದು ಏಕೆ
ಜಾತವೇದಸನಲ್ಲಿ ಕಳವಳವೇಕೆ
ಪೀತಾಂಬರಧರ ಪಿನಾಕಿ ಸಖನೆಂದು
ಮಾತು ಮಾತಿಗೆ ನೆನೆದು ಸುಖಿಸುವ ಜನರಿಗೆ ೪

ಏನೇನು ಕರ್ಮದಾಚರಣೆ ಮಾಡುವದೇಕೆ
ಭಾನು ಉದಯವಿಡಿದು ತೊಳಲಲೇಕೆ
ದೀನನಾಗಿ ದಾತಾ ವಿಜಯವಿಠ್ಠಲ ಹರಿಯ
ಮಾನಸದಲಿ ಧ್ಯಾನ ಮಾಡುವ ಜನರಿಗೆ ೫

೪೬೪

ನಾಡ ದೈವಗಳ ಪೂಜೆಯನು ಮಾಡಿದರೆ ।
ಕೇಡಲ್ಲದೆ ಮತ್ತೆ ಕೈವಲ್ಯವುಂಟೇ ಪ

ಕೊಳಚಿ ನೀರನು ದಾಟಲರಿಯದ ಮನುಜಗೆ
ನಿಲವುದ್ದ ದ್ರವ್ಯ ಕೊಡುವೆ ಎನ್ನ ನಾ– ।
ಜಲನಿಧಿಯ ಉತ್ತರಿಸಿಕೊಂಡು ಎಂದರೆ ಅವನು ।
ಅಳಿಯದಂತೆ ದಡಕೆ ತರಬಲ್ಲನೇ ೧

ಕತ್ತಲೆಗಂಜುವನ ಕರೆತಂದು ಶೃಂಗರಿಸಿ ।
ಉತ್ತಮದ ವಾಜಿವಾಹನವ ಮಾಡಿ ॥
ಕತ್ತಿಯನು ಕರದಲ್ಲಿ ಕೊಟ್ಟು ರಿಪುಪರಿವಾರ– ।
ದತ್ತ ಒಂದಡಿಯಿಟ್ಟು ಬರಬಲ್ಲನೇ ೨

ತನಗೆ ಬಂದಾವಸ್ತು ಪರಿಹರಿಸಿಕೊಳ್ಳದೆ ಪರ– ।
ಮನ ವಿಡಿದು ಭಜಿಸಿದರೆ ಏನಾಗದೊ ॥
ಬಿನಗು ದೈವರಗಂಡ ಶ್ರೀ ವಿಜಯವಿಠ್ಠಲನ ।
ವನಜಪದ ನೆನೆದರೆ ಮುಕುತಿಯುಂಟು ೩

೪೬೫

ನಿಚ್ಚಳಾಗಲಿ ಬೇಕು ತಿಳಿದು ನಿಚ್ಚಳಾಗಲಿ ಬೇಕು ಪ

ನಿಚ್ಚಮಾಡುವ ದೋಷರಾಶಿಗಳಳಿದು ನಿಚ್ಚಳಾಗಲಿ ಬೇಕು ಅ.ಪ

ಪಾಪವೆಂಬುದು ಹೊರಗಿಹುದೆ ತನ್ನ
ಕೋಪವಲ್ಲದೆ ಬೇರೆ ಹೊಸದಾಗಿ ಬಹುದೆ
ಅಪವರ್ಗಕೆ ಮಾರ್ಗವಹುದೆ ಬಲು
ತಾಪಸಿಗಾದರು ಅದು ಸಾಧನವಹುದೆ ೧

ಪುಣ್ಯವೆಂಬದು ಬೇರೆಯಿಲ್ಲಾ ನಾನಾ
ರಣ್ಯ ಚರಿಸಿದರು ದೊರಕುವದಲ್ಲಾ
ಮನ್ಯು ಬಿಡದೆ ಮತ್ತೊಂದಲ್ಲಾ ನಿರುತ
ಅನ್ಯರಾಶಿ ಬದಲು ಗತಿಗವಸಲ್ಲಾ ೨

ವೈಕುಂಠವೆಂಬೋದು ಅಲ್ಲೆ ಬರಿದೆ
ಲೌಕೀಕ ತೊರದರೆ ಇಪ್ಪದು ಇಲ್ಲೆ
ಈ ಕಲಿಯೊಳಗೆ ಈ ಸೊಲ್ಲೆವೊಲಿಸ
ಬೇಕೆನೆ ಮಾರಿ ಓಡುವುದು ನಾ ಬಲ್ಲೆ ೩

ಹರಿಸ್ಮರಣೆಗೆ ಪೋಪ ದೋಷ ಬಲು
ಪರಿ ಪರಿ ಧರ್ಮವ ಮಾಡಲು ಲೇಶ
ಸರಿಯಾವು ತರುವಾಯ ಮೋಸದಿಂದ
ತಿರುಗಿ ತಿರುಗಿ ಪುಟ್ಟಿ ಬಡವನು ಕ್ಲೇಶಾ ೪

ಒಬ್ಬರ ಸರಿಗಟ್ಟದಿರೊ ನಿನ
ಗ್ಹಬ್ಬಿದಷ್ಟೆ ಕರ್ಮ ಸುಖವೆಂದು ಸಾರೊ
ಉಬ್ಬಲ ದಾಡಿಪರಾರೊ ಎಲೆ
ಲ್ಹಬ್ಬಿದ ವಿಜಯವಿಠ್ಠಲನೆಂದು ಸಾರೋ ೫

೪೭೭

ನೆಚ್ಚಬೇಡಿ ಪತಿತನಾರಿಯ ।
ಕಚ್ಚುವ ಹಾವಿನ ಸಂಗವೆನ್ನಿ ॥ ಪ

ಮೆಚ್ಚುಗೊಳಿಪಳು ಗುಣಿಸಿ ನೋಡಿ
ನಿಚ್ಚದಲಿ ಚಿತ್ತ ಚಂಚಲಳಾಗಿ ಅ.ಪ

ಯುವ ತನಗೆ ಬರುವ ಪರಿಯಂತ ।
ಯಾವದನಿತು ಮೊಗವನೆತ್ತದಲೆ ॥
ಎವೆ ತೆಗೆದು ದಿಕ್ಕುಗಳು ನೋಡದೆ ।

ಅವನಿಗೆ ಬಾಗಿ ನಡೆಯುತ ॥
ತವರು ಮನೆಯವರನು ಹಳಿದು ।
ನವನವ ಪ್ರಾವರ್ತನವನು ತೋರುತ ॥
ಅವಗುಣಂಗಳಿಲ್ಲ ದೋಷಾದಲಿ ।
ಲವಕಾಲವನು ಕಳೆವ ನಾರಿಯ ೧

ಪ್ರಾಯಾವಸ್ಥೆ ಬಂದು ಪ್ರಾಪ್ತವಾಗಲು ।
ಆಯುತಾಕ್ಷಿಗಳ ತಿರುಹಿ ಮೆಲ್ಲನೆ ॥
ಬಾಯಲ್ಲಿ ಒಂದೊಂದು ಕ್ರಮಾಸಾರದಿ ।
ನೋಯ ನೋಯದಂತೆ ವಚನವ ॥
ದಾಯಿಗಳಂತೆ ಮತ್ಸರಿಸಿ ಬಯ್ಯದೆ ।
ಮಾಯಾವಿ ಕಲ್ಪಿಸಿ ಮುಸಿಮುಸಿ ನಗೆ ॥
ಆಯಕೆ ತಗಲಿ ಕಂಡ ಜನರಿಗೆ ।
ಘಾಯ ಕಾಣಿಸದಂತೆ ಮಾಳ್ಪಳ ೨

ಅತ್ತೆ ಮಾವಗೆ ಅತ್ಯಂತವಾಗಿ ತಾನು ।
ಪ್ರತಿ ಉತ್ತರ ಪೇಳಲು ಅಂಜಿ ಅಂಜಿದಂತೆ ॥
ಉತ್ತಮರ ಮನೋರಥವ ಕೆಡಿಸಿ ।
ಅತ್ತಿಗಿ ನಾದುನಿ ಮಿಗಿಲಾದವರೆಲ್ಲ ॥
ಕತ್ತೆ ನಾಯಿ ನರಿಯೆಂಬೊ ಸೊಲ್ಲಲ್ಲಾದೆ ।
ಎತ್ತಲಾದರು ವಂಚಿಸಿ ಗಂಡನ್ನ ॥
ತನ್ನಂತೆ ಮಾಡಿಕೊಂಡು ಹಗಲಿರುಳು ಥೈ– ।
ತಥ್ಥಾ ಎಂದಾಡಿಸಿ ಕುಣಿಸುವ ಸತಿಯಳ ೩

ಮಿಥುನಭಾವಕೆ ಕೊಂಡ ತೆರದಿ ।
ಪತಿಯ ಸಮಯ ನೋಡದೆ ತಾನು ॥
ಸಥೆಯಿಂದಲಿ ಸಂಸಾರದೊಳಗಿದ್ದು ।
ಸುತರ ಪಡೆದು ಹಮ್ಮಿಲಿ ॥
ಕಥನವೆಬ್ಬಿಸಿ ಗಂಡನ್ನ ಅಡವಿ ।

ಪಥವ ಹಿಡಿಸಿ ಹಣದಗೋಸುಗ ॥
ಸತತ ಮನೆಯೊಳಗಿದ್ದ ಬದುಕು ।
ಮಿತಿಯಿಲ್ಲದೆ ಭಕ್ಷಿಸುವ ನಾರಿಯ ೪

ಒಲಿಪಗೆ ನೀವು ಮೋಸಗೊಂಡು ।
ಒಲಿಯದಿರಿ ಸ್ತ್ರೀಯರಿಗೆ ಸೋತು ॥
ಕಲಿಗೆ ಪ್ರಥಮ ಪಟ್ಟದ ಗದ್ದಿಗೆ ।
ಸುಲಭವಲ್ಲವೋ ಸುಖವಿಲ್ಲಾ ॥
ಕೆಲಕಾಲ ಮಹಾ ಕಾತರದಿಂದಲಿ ।
ವಳಗಾಗದಿರು ಒಳಿತು ಪೇಳುವೆ ॥
ಜಲಜಾಕ್ಷ ವಿಜಯವಿಠ್ಠಲನ್ನ ನಂಬಿರೋ ।
ನಂಬಿರೋ ನಂಬಿರೋ ಚತುರರು ೫

४६೭

ಪರಮಾತ್ಮನೆ ನೀ ಸರಿ ಎಂದು
ಕರಗದ ತಮದಲ್ಲಿ ಸೇರುವದೆ ಪ

ಜೀವ ಪರಮಾತ್ಮಗೆ ಭೇದವ
ಆವಾವ ಕಾಲಕ್ಕೆಯಿಲ್ಲವೆಂದು
ದೇವನ ಬಳಿಗೆ ನೀ ದೂರಾಗಿ
ಈ ವಸುಧೆಯೊಳು ಬದುಕುವರೆ ೧

ಭೇದ ಜೀವಕೆ ಜೀವ ಎಂದಿ
ಗಾದರು ಇಲ್ಲವೆಂದು ನುಡಿದು
ಈ ದುರಾಚಾರದಲ್ಲಿ ನಡೆದು
ಮಾದಿಗನಂತೀಗ ಮಾರ್ಮಲಿದು ೨

ಜಡ ಪರಮಾತ್ಮ ಜಡ ಜಡಕೆ
ಜಡ ಜೀವಕೆ ಅಭೇದವೆಂದು

ಕಡುಗರ್ವದಿಂದಲಿ ಉಚ್ಚರಿಸಿ
ಮಡಿದು ನರಕಕ್ಕೆ ಉರುಳುವರೆ ೩

ಅರಸಿನ ಬಳಿಗೆ ತೋಟಿಗ ಬಂದು
ಅರಸೆ ನೀನೆ ನಾನೆಂದಡೆ
ಉರವಣಿಸಿ ಕೊಲ್ಲಿಸಿ ಅವನ
ಶೆರಿಯ ಹಾಕದೆ ಮನ್ನಿಸುವನೆ ೪

ದಾಸನ ದಾಸನು ಎಂದು
ಏಸು ಜನ್ಮಕೆ ಅಹುದೆಂದು
ದ್ವೇಷವು ತೊರೆದು ನೆನಿಸಿದರೆ
ಮೀಸಲಾಗಿಡುವ ವಿಜಯವಿಠ್ಠಲಾ ೫

೪೬೮

ಪುಣ್ಯ ದೊರಕುವುದು ಅನು
ಗಣ್ಯವಾಗಿದ್ದ ಸತಿಯಿದ್ದ ಜನರಿಗೆ ಪ

ಬಡತನವಿದ್ದರು ನೆರೆಹೊರೆ ಮನೆಯಲ್ಲಿ
ನುಡಿ ಬಿಚ್ಚಿ ಪೇಳದೆ ಸೌಮ್ಯಳಾಗಿ
ಬಿಡದೆ ಮಾಡುವ ಗೃಹಕೃತ್ಯಂಗಳು ಜಗ
ದೊಡಿಯಗರ್ಪಿತವೆಂದು ಹಿಗ್ಗುತ ಅನುದಿನ ೧

ವಿಪರೀತ ಕಾಲಗಳಟ್ಟಿದ ಕಾಲಕ್ಕು
ಸ್ವಪನಾದಿಯಪ ಕಳವಳಿಸದಲೇ
ದ್ವಿಪುತ ಪ್ರಾಕಾಶವಂತಳಾಗಿ ಪತಿ ಸೇವೆ
ಅಫಲದಲ್ಲಿ ಮಾಡಿ ಒಲಿದೊಲಿದಾಡುವ ೨

ಲಾವಣ್ಯ ಪುರುಷರ ಕಂಡರು ಮನದಲ್ಲಿ
ಭಾವಿಸಬೇಕು ಸಹೋದರರು ಎಂದು
ದೇವದೇವೇಶನ್ನ ವಿಭೂತಿ ರೂಪವ
ಆವಾವ ಬಗೆಯಲ್ಲಿ ನೆನೆಸಿ ನೋಡುತ ನಿತ್ಯ ೩

ಬಂದು ತಂದರೆ ಸಾವಿರ ಮಾಡಿ ಚಿಂತಿಸಿ
ಇಂದಿರೇಶನೆ ಪತಿರೂಪವೆಂದು
ಅಂದದದಲಿದ್ದ ವಿಭವಾನುಸಾರ ಆ
ನಂದವಾಗಿ ಸಂಸಾರದೊಳಗಿರೆ ೪

ಪತಿಯ ಜನಕ ಮಾತೃ ಮಿಗಿಲಾದ ಜನರಿಗೆ
ಹಿತವಂತಳಾಗಿ ನುಡಿಸಿಕೊಳುತಾ
ಅತಿಶಯವಾಗಿ ತನ್ನಯ ಗಾತ್ರ ಸರ್ವದಾ
ಪ್ರತಿದಿನ ಸುವಿನುವಳಾ ನಾರಿ ಅಧಿಕಾರಿ ೫

ಚಕೋರ ಚಂದ್ರಮನಲ್ಲಿ ಮನಸು ಇಟ್ಟು
ಸುಖಬಡುವಂತೆ ನಾನಾ ಪ್ರಕಾರ
ಕಕುಲಾತಿಯಿಂದ ಕಾಮುಕಳಾಗದೆ ಮಹಾ
ಭಕುತಿಯಿಂದಲಿ ಗುರು ಹಿರಿಯರ ಸಮ್ಮತ ೬

ಸಂತಜನರೆಂಬ ಕ್ಷೀರಾಂಬುಧಿ ಮಧ್ಯ
ಸಂತತ ಮೀನಿನಂದದಿ ಬೀಳುತಾ
ಸಂತೋಷಮತಿಯಲ್ಲಿ ಪತಿ ಧರ್ಮವಹಿಸಿ ಶ್ರೀ
ಕಾಂತನ ಗುಣಕಥೆ ಕೇಳಿ ಪೊಗಳಲಾಗಿ ೭

ನಾಮ ಮೊದಲು ಮಾಡಿ ಪ್ರಕೃತಿಯ ಪರಿಯಂತ
ಪ್ರೇಮದಿಂದಲಿ ಗುಣಗಳ ಗುಣಿಸೀ

ಕಾಮಾದಿ ಚತುರ್ವಿಧ ಪುರುಷಾರ್ಥ ತನ್ನಯ
ಸ್ವಾಮಿಯಲಿಂದಲಿ ಸಂಪಾದಿಸುತಿಪ್ಪಾ ೮

ಆವಾವ ಪ್ರಯೋಜನ ಮಾಡಲು ಸರ್ವದ
ದೇವದೇವೇಶನಾಧೀನವೆಂದೂ
ಭಾವದಲಿ ತಿಳಿದನ್ಯ ಕರ್ಮವ ಬಿಟ್ಟು
ಪಾವನ ವಿಜಯವಿಠ್ಠಲನ ಭಕುತಿಯಿಂದಾ ೯

೪೬೯

ಪುಣ್ಯ ಕ್ಷೇತ್ರವ ಸ್ಮರಿಸಿ ಧನ್ಯರಾಗಿರೋ ಪ

ನಿಮ್ಮ । ಮುನ್ನೆ ಮಿಕ್ಕಾದಘ ಮಹ ಅನ್ಯಾಯ ಅಳಿದು ಅನು
ಗುಣ್ಯದಲ್ಲಿರೆ ಭವದಾರಣ್ಯ ದಹಿಸುವದು
ಕಾರುಣ್ಯನಿಧಿ ಹರಿ ಒಲಿವಾ ಅ.ಪ.

ಶೇಷಪರ್ವತ ಗರುಡಾದ್ರಿ ಶ್ರೀ ಶೈಲ ಪ್ರಭಾಸ
ಕ್ಷೇತ್ರ ಮಧುರೆ ಗೋಕುಲ ವೃಂದಾವನ
ನಾಸಿಕ ತ್ರಿಯಂಬಕ ಮುದ್ಗಲಕ್ಷೇತ್ರ ಪರಾಶರ ಮಗನಾಶ್ರಮ
ತೋಷದಲಿ ತೋತಾದ್ರಿ ಕುಂಭಘೋಣ
ವಾರಣಾಸಿ ಭಾರದ್ವಾಜ ಕ್ಷೇತ್ರ ಅರುಣಾಚಲ
ದೋಷವರ್ಜಿತ ಝುಲ್ಲಿಕಾರಣ್ಯ ಸೇತು
ದರ್ಭಶಯನ ಮಧ್ಯಾರ್ಜುನ ೧

ಸುಂದರ ಸಿಲಾಚಯ ಜಂಬುಕೇಶ್ವರ ಮಹಾನಂದಿ
ಚಿದಂಬರ ವೀರ ರಾಘವ ದೇವ
ಸ್ಕಂದ ನಿಬ್ಬಣಸ್ವಾಮಿ ಕಾರ್ತಿಕ ಖಗಶೇಷ ನಂದ ಯೇಕಾಂಬರೇಶ
ಅಂದವಾದ ಛಾಯ ಅಳಕಾಪುರಿ ಕ್ಷೇತ್ರ
ಮಂದಾಕಿನಿ ಇಪ್ಪ ಸಾಗರ ಯಯಾತಿಗಿರಿ

ಮಂದಮತಿ ಕಳೆವ ಘನಗಿರಿ ಕ್ಷೇತ್ರ ಧರ್ಮಪುರಿ
ಒಂದೊಂದು ಕೋಟೀಶ್ವರಾ ೨

ಶ್ರೀರಂಗ ಹಸ್ತ ಸಿರಿ ಪಾಂಡುರಂಗ ಕ್ಷೇತ್ರ
ದ್ವಾರಕಾ ಸಿಂಹಾದ್ರಿ ನೀಲಕಂಠನಿಧಿ
ಚಾರು ಗಯ ಚಂಪಕಾರುಣ್ಯ ಪಂಪಾಕ್ಷೇತ್ರ
ವೀರ ನಾರಾಯಣವೋ
ಕಾರುಣ್ಯ ಮಾಳ್ಪ ರಾಮನ ನಗರಿಯು ಮಾಯ
ಕೇದಾರ ಕುರುಕ್ಷೇತ್ರ
ಕೂರ್ಮನಿಧಿ ಸಾರಿದ ಬರುವ ಪುರುಷೋತ್ತಮ
ಪುಷ್ಕರ ಕ್ಷೇತ್ರ ಮಾರಕಾಪುರಿ ಚನ್ನಾ ೩

ಉದಯಗಿರಿ ರಾಮನಾಥಪುರ ಕಾವೇರಿ
ಉದ್ಭವ ಆದಿ ಅನಂತ ಬಲಕ್ಷೇತ್ರ
ಪದುಮನಾಭ ಪುಂಡರೀಕಾಕ್ಷ ವಿಂಧ್ಯಾದ್ರಿ
ಸುಧಿಯೆಂದು ಕನ್ಯಾಕುಮಾರಿ
ಮಧುರಿ ಅಳಗಿರಿ ತಿಮ್ಮ ಬೇಲೂರಿ ಚೆನ್ನಿಗ
ಮುದದಿ ಮಹಂಕಾಳಿ ಹಸ್ತಿಪಳಿನಾಥ
ಕದಿರಿ ಮಂಗಳ ಗಿರಿತೋರವೀಯ ನರಸಿಂಗ
ಪದ ಮುರಳಿ ತ್ರಿವಿಕ್ರಮ ೪

ಹರಿಹರ ಗಂಗಾಸಾಗರ ಕಪಿಲಕ್ಷೇತ್ರ ನಿರುಪಮಾದಿ
ಕೂರ್ಮ ನೆಲ್ಲನಪ
ತಿರುಪತಿ ಶೂರ್ಪಾಲಿ ಮಾಬಲೇಶ್ವರ ಭದ್ರಾಚಲ
ಧರಣೀಧರ ಚಾಪವಾಣಿ
ಪರಿಶುದ್ಧ ಭಕ್ತವತ್ಸಲ ಗೌರಿ ವಯ್ಯಾರ ವರಸಾರ
ಕ್ಷೇತ್ರ ಶ್ರೀನಿವಾಸನೆದ ನಿಧಿ
ಪರಮ ಸುಂದರ ಮನ್ನಾರಸ್ವಾಮಿ ಘನಶಾಮವರ
ಗೌರೀ ಮನೋಹರ ೫

ಶಂಕರನಾರಾಯಣ ಉತ್ತಮರು ಗೋಕರ್ಣ
ಶಂಕರನ ಕ್ಷೇತ್ರ ಗೋಗರ್ಭ ಶೇತುವನ
ಶಂಖಮುಖಿ ಗಜೇಂದ್ರಮೋಕ್ಷ
ಗಜಾರಣ್ಯ ಓಂಕಾರನಾಥ ದೇವಾ
ಪಂಕಜಾಸದನ ಶಿಯ್ಯಾಳಿ ವೈದ್ಯನಾಥ ಠಂಕಾಳಾಂತರ
ವೇದಿ ಗೋಪಾಲನಿಧಿ
ಬಿಂಕದಲಿ ಯಿಪ್ಪ ಚಿಂತಾಮಣಿ ನರಸಿಂಹ
ಅಲಂಕಾರ ಮುಕ್ತಿ ಕ್ಷೇತ್ರ ೬

ಸಂತಾನಗೋಪಾಲ ತಿಶಿಖಿನಾರಾಯಣ ಅನಂತಗಿರಿ
ಮಳೂರಪ್ರಮೇಯ ಶಿವಾ
ಅಂತಕನಗೆ ದ್ವಾಪುರತೀರ್ಥ ನಿವರ್ತಿ ಅಂತು ಆದಿಶ್ರೀರಂಗ
ಇಂತು ಪಾನಕ್ಷೇತ್ರ ವಾತಗಿರಿ ನೀಲಾದ್ರಿ ಸಂತು
ನೀಲಾರಣ್ಯ ರಾಜವನ ನೈಮಿಷ
ಕಾಂತರದಕ್ಷ ವನಶಿದ್ಧ ವಟಪುಷ್ಪಗಿರಿ ಕಂತುಹರ ನಂಜು ಭೋಕ್ತ ೭

ಕೂಲ ಪರ್ವತ ಕಣ್ವಮುನಿಕ್ಷೇತ್ರ ಪಿನಾಕಿಮಾಲಿ
ಅಂದದಲಿಯಿಪ್ಪ ನಿಧಿ ಮಾಧವಸ್ವಾಮಿ
ಮೇಲು ಘಟಿಕಾಚಲ ಬದರಿ ನರಸಿಂಹ ರವಿಸೇತು ಗಣ ಮುಕ್ತೇಶ್ವರ
ಕಾಲದೂತ ಗೆದ್ದ ಕ್ಷೇತ್ರ ಭವಾನಿಗುಡಿ ವ್ಯಾಳನಿಧಿ
ಮಹಾಲಕುಮಿ ರಘುನಾಥ ಶಿವಗಂಗೆ
ಬಾಲಕೃಷ್ಣ ಕ್ಷೇತ್ರ ಕರವೀರ ಪುರ ವಿಶಾಲ ವಿಹಂಗಕ್ಷೇತ್ರ ೮

ದೇಶದೊಳಗುಳ್ಳ ಪುಣ್ಯ ಕ್ಷೇತ್ರಗಳು ಯೆಣಿಸಿ
ಪೇಳಿದುದಕ್ಕೆ ಆರಿಗೆ ಅಳವಲ್ಲ
ಪ್ರದೋಷ ಕಾಲದಲಿ ಪ್ರಭಾತ ಕಾಲದಲಿ
ನೆನಸೋದು ಮಾನವರು

ಮೀಸಲಾಮನದಲ್ಲಿ ಅನಂತ ಜನುಮದ ದೋಷ ವಿ-
ನಾಶ ವಿಜಯವಿಠ್ಠಲ ಬಂದು ಲೇಸಾಗಿ
ಪಾಲಿಸುವ ಕುಲಕೋಟಿಗಳ ೬

೪೭೦

ಪೇಳುವೆ ಮನವೆ ನಿನಗೊಂದು ಕುಳಿತು
ಲಾಲಿಪುದು ಮುಕ್ತಿಗೆ ಹಾದಿ ಎಂದು ಪ

ಹರಿಯ ಚರಣಾಬ್ಜಕೆ ಎರಗು ಬಡ
ವರನ ಕಂಡರೆ ಅಕಟಾ ಎಂದು ಮರಗು
ಹರಿ ಭಕುತಿಗೆ ನೀನೆ ಕರಗು
ಇಹ ಪರದಲ್ಲಿ ಉತ್ತಮ ಯೆಂದೆನಿಸಿ ತಿರುಗು ೧

ಅಹಂಕಾರ ಮಮಕಾರ ಬಿಟ್ಟು ಅಂಬು
ರುಹಲೋಚನನ ಸುಮತವನ್ನೆ ತೊಟ್ಟು
ಕುಹಕ ಮತಿಗಳನ್ನು ಬಿಟ್ಟು ಗುರು
ದ್ರೋಹಿಗಳಾದವರ ಹೃದಯವ ಮೆಟ್ಟು ೨

ಅಲ್ಪ ಬುದ್ಧಿಗಳನ್ನು ಮಾಣು ಒಂದು
ಸ್ವಲ್ಪವಾದರು ಜ್ಞಾನದ ಮಾರ್ಗ ಕಾಣು
ಬಲ್ಪಂಥದಲಿ ಬಾಹದೇನು ಬಿಡು
ಅಲ್ಪಗಳ ಸಂಗ ಎಂದು ಸಾರಿದೆನು ೩

ಸ್ವಾಮಿಯ ಪಾದವ ನೋಡು ನಿನ್ನ
ಕಾಮ ಕ್ರೋಧಗಳೆಲ್ಲ ಕಳೆದು ಈಡಾಡು
ನಾಮ ಕೀರ್ತನೆಗಳನ್ನು ಪಾಡು ತ್ರಿ
ಧಾಮದೊಳಗೆ ಒಂದು ಇಂಬನೆ ಬೇಡು ೪

ಎಚ್ಚತ್ತು ತಿಳಿದುಕೋ ಸೊಲ್ಲಾ ನಾನು
ಮುಚ್ಚುಮೊರಿಲ್ಲದೆ ಪೇಳಿದೆನಲ್ಲಾ

ಹುಚ್ಚಾದರೆ ಫಲವಿಲ್ಲ ಮುಂದೆ
ಅಚ್ಚುತ ವಿಜಯವಿಠ್ಠಲನಲ್ಲದಿಲ್ಲ ೫

೪೭೧

ಬಿಡು ಬಿಡು ಮಾಯವನು ಕೆಡದಿರು ಕಪಟದಲಿ ।
ನಡಿ ನಡಿ ಸುಪಥವ ಜಗದೊಡಿಯೆನ ನೆನೆ ಮನವೆ ಪ

ನಾನು ನನ್ನದು ಎಂಬೊ ಹೀನ ವಚನ ಸಲ್ಲ
ಗೇಣುದರವಲ್ಲದೆ ಪೊರೆವದು ಮತ್ತೇನಾದರು ಉಂಟೆ ೧

ಮಡದಿ ಮಕ್ಕಳ ನೋಡಿ ಕಡು ಹಿಗ್ಗಿ ಕೆಡಬೇಡ ।
ಕಡು ಮುನಿದೆಮನಾಳುಗಳು ಪಿಡಿದೆಳೆದೊಯ್ವಾಗ ೨

ಇರುಳು–ಹಗಲು ನೀನು ಹರಿಸ್ಮರಣೆ ಚಿತ್ತದಲಿ ।
ಸ್ಥಿರವಾಗಿ ಇರಿಸೋದು ಅನಂತ
ಜನ್ಮಾಂತರ ಪಾಪ ಪೋಗುವುದು ೩

ಜ್ಞಾನ ಮಾರ್ಗವಿಡಿದು ಆನಂದ ಮೂರುತಿಯ ಧ್ಯಾನದಿಂದಲಿ
ಕಾಣ್ಯ ದೈನ್ಯವೃತ್ತಿಯ ಬಿಟ್ಟು ಹಾನಿ ವೃದ್ಧಿಯ ಜರಿದು ೪

ಅತಿ ಕಾಮಾತುರನಾಗಿ ರತಿಯಲ್ಲಿ ಸಿಗದಿರು ।
ಸತತ ಮಾಡಿದ ಕರ್ಮ ವ್ಯಾಳೆವ್ಯಾಳೆಗೆ ಶ್ರೀಪತಿಗರ್ಪಿತವೆನ್ನು ೫

ಸಂತೋಷಗಳು ಬರಲಿ ಸಂತಾಪಗಳು ಇರಲಿ ।
ಇಂತು ಇವರಿಗೆಲ್ಲ ಪ್ರೇರಕ ಹರಿ ಜಗದಂತರ್ಯಾಮಿ ೬

ಧನ–ಕನಕ ವಸ್ತು ಮಾನಿನಿ ನಂದನರು ಆರು ? ।
ತನುವೆ ನಿನ್ನದಲ್ಲ ತಿಳಿದುಕೊ ಗತಿ ಸಾಧನಕೆ ವಿಜಯವಿಠ್ಠಲ ೭

೪೭೨

ಬೂದಿ ಮುಚ್ಚಿದ ಕೆಂಡದಂತಿಪ್ಪರು ಪ

ಈ ಧರೆಯ ಮೇಲೆ ಶ್ರೀ ಹರಿಭಕ್ತ ಜನರು ಅ.ಪ

ಅಂಗ ನೋಡಲು ಅಷ್ಟಾವಕ್ರವಾಗಿಪ್ಪರು
ಕಂಗಳಿಂದಲಿ ನೋಡೆ ಘೋರತರರು
ಮಂಗಳಾಂಗನ ಅಂತರಂಗದಲಿ ಭಜಿಸುತ್ತ
ಹಿಂಗದೆ ಸಂತಜನ ಸಂಗದೊಳಗಿಹರು ೧

ನಾಡ ಜನರುಗಳಂತೆ ನಡೆಯರು ನುಡಿಯರು
ಕೂಡರು ಕುಟಿಲಜನ ಸಂಘದಲ್ಲಿ
ಚಾಡಿ ಕ್ಷುದ್ರವ ಹೇಳಿ ಒಡಲು ತುಂಬಿಸಿಕೊಳರು
ರೂಢಿಯೊಳಗೆಂದೆಂದು ಗೂಢವಾಗಿಹರು ೨

ಡಂಭಕತನದಿಂದ ಗೊಂಬೆನೆರಹಿಕೊಂಡು
ಡೊಂಬ ಕುಣಿದಂತೆ ಕುಣಿದಾಡರು
ಹಂಬಲಂಗಳ ಬಿಟ್ಟು ಹರುಷವುಳ್ಳವರಾಗಿ
ಬಿಂಬ ಮೂರುತಿಯನ್ನು ಕೊಂಡಾಡುತಿಹರು ೩

ಶತ್ರು ಮಿತ್ರರುಗಳ ಸಮನಾಗಿ ಎಣಿಸುವರು
ಪುತ್ರ ಮಿತ್ರ ಭ್ರಾತೃಗಳ ನೆಚ್ಚರು
ಯಾತ್ರೆ ತೀರ್ಥಂಗಳಿಗೆ ಹೋಗುತ್ತ ಶ್ರೀ ಹರಿಯ
ಸ್ತೋತ್ರಗಳ ಮಾಡಿ ಸಾಧನೆ ಮಾಡಿಕೊಂಬುವರು ೪

ಕಷ್ಟ ಸೌಖ್ಯಂಗಳನು ಕಲಿವರದಗರ್ಪಿಪರು
ಇಟ್ಟುಕೊಟ್ಟಿದ್ದನ್ನ ಹರಿಕೊಟ್ಟನೆಂಬುವರು
ಸೃಷ್ಟೀಶ ಸಿರಿ ವಿಜಯವಿಠ್ಠಲನ ಪದಪದ್ಮ
ಮುಟ್ಟಿ ಭಜಿಸಿ ಮುಕ್ತ ಸಾಮ್ರಾಜ್ಯ ಪಡೆಯುವರು ೫

೪೭೩

ಬೇಡುವರೊ ಸುಖ ಬೇಡರೊ ದುಃಖವ ।
ಮಾಡಾರೋ ಅವರ ಉಪಾಯವ । ಜನ । ಬೇಡುವರೋ ಪ

ಇಟ್ಟಿಕಲ್ಲನು ತಂದು ಕಿಟ್ಟಿ ಬೀಸುವರೊ ।
ಕುಟ್ಯಾರೋ ರಂಗವಲ್ಲಿಯಾ । ಜನ ೧

ಸಾಲು ಸಾಲೆಮ್ಮೆಯ । ಸೋಲದೆ ತೊಳೆವರು ।
ಸಾಲಿಗ್ರಾಮಕ್ಕ ಹಾಲೆರೆಯರೊ । ಜನ । ೨

ತ್ರಿಜಗವಂದಿತ ನಮ್ಮ ವಿಜಯವಿಠ್ಠಲನ ।
ಭಜನೆಯಾ ಮಾಡದೆ ಸೋಲ್ವರೋ । ಜನ । ೩

೪೭೪

ಭಕ್ತರನ ನಂಬದಿರು ಭವದೂರನೆ
ಮುಕ್ತಿಯನು ಬೇಡದಲೆ ನಿನ್ನೆ ಪೂಜಿಸುವರು ಪ

ಪ್ರಸ್ತ ಮಾಡುವ ಸಾಧನಕ್ಕೆ ಪೋಗಿ ನಿಂದು ಬಲು
ಹಸ್ತು ಬಂದವನು ತುತ್ತನ್ನ ಕೇಳೆ
ಸ್ವಸ್ತವಾಗಿ ಕುಳಿತು ಭೋಜನ ಮಾಳ್ಪ ಆ
ಗ್ರಹಸ್ತ ಪೊಟ್ಟೆ ತುಂಬದೆ ಬರಿದೆ ಏಳುವನೆ ೧

ಹಾದಿಕಾರನು ಬಂದು ವಸ್ತಿ ಮಾಡುವದಕ್ಕೆ
ಆದರದಲಿ ಸ್ವಲ್ಪ ಸ್ಥಳವ ಕೇಳಿ
ಪಾದ ಇಡುವನಿತರೊಳು ಕುಳಿತು ಆಮೇಲೆ ಸಂ
ಪಾದಿಸುವ ತನ್ನ ತಕ್ಕಷ್ಟು ಧರಣಿಯನ್ನು ೨

ಆವದೊಲ್ಲೆವೆಂದು ಆಡುವರು ನಿತ್ಯದಲಿ
ಕಾವ ಕರುಣಿ ನೀನೆಂದು ತಿಳಿದು
ಶ್ರೀ ವನಿತೆಯರಸ ಸಿರಿ ವಿಜಯವಿಠ್ಠಲ ನಿನ್ನ
ಪಾವನನಾಗಿದ್ದ ನಾಮ ಬದಲಿ ಇಂದು ೩

೪೭೫

ಭಕ್ತಿಯಲಿ ನಡೆವರಿವರೇ ಸುಗುಣರೊ
ಮುಕ್ತಿಯನು ಬಯಸಿ ಮುರಾರಾತಿಯ ಚರಣದಲ್ಲಿ ಪ

ಉದಯದಲೆದ್ದು ಉನ್ನತ ಸ್ವರದಿಂದ ಹರಿ
ಪದವೇ ಗತಿ ಎನುತಾ ಎಲ್ಲ ಕಾಲಕೆ
ಉದರ ಚಿಂತಿಯ ಮರೆದು ಮನ ಉಬ್ಬಿ ಉತ್ಸವದಿ
ಪದೋಪದಿಗೆ ಮಂಗಳಾವಾರ್ತಿ ಪೇಳುತ ನಿತ್ಯಾ ೧

ಅಡಿಬಿಡದೆ ಭಾಗವತ ಮಿಕ್ಕ ಪುರಾಣಾದಿ
ನುಡಿಗೆ ಕಿವಿಗೊಟ್ಟು ಹಾಹಾ ಎನತಲಿ
ಒಡನೊಡನೆ ಹರಿ ಮಹಿಮೆಯಲಿ ಇದ್ದು ಮಾರಿಗಳ
ಅಡಿಮಾಡಿ ಆದ್ಯಂತಕಾಲ ಸುಖಿಸುವ ನಿತ್ಯಾ ೨

ಈ ದೇಹ ತ್ಯಾಗ ಮಾಡದೆ ಆಗಲಿ ಪಂಚ
ಭೇದ ಪೇಳುವದು ಬಿಡೆನೆಂಬೊ ಸೊಲ್ಲು
ಆದಿತ್ಯ ಲೋಕಕ್ಕೆ ಮುಟ್ಟುವಂತೆ ಕೂಗಿ
ಸಾಧನ ಮಾಡುತಲಿಪ್ಪ ಶುಭಮಾರ್ಗದಲಿ ನಿತ್ಯಾ ೩

ಅವಾವ ಮೋಹಕವು ಶಾಸ್ತ್ರದಲ್ಲಿದ್ದರೂ
ಭಾವದಲಿ ಗುಣಿಸದೆ ನಿಕ್ಕರಿಸೀ

ದೇವದೇವೇಶನೆ ಬ್ರಹ್ಮಾದಿಗಳು ವಂಚಿಪ
ಕಾವ ಕೊಲ್ಲುವನೀತನೆಂದು ತಿಳಿದು ನಿತ್ಯಾ ೪

ಅನ್ಯಶಬ್ದವು ಅನ್ಯಸ್ಪರಿಶ ರೂಪಕ ರಸಾ
ಅನ್ಯಗಂಧಗಳಿಗೆ ಇಂಬುಗೊಡದೇ
ಧನ್ಯರಾಗಿದ್ದವರ ಕರುಣ ಸಂಪಾದಿಸಿ
ಪುಣ್ಯಭೂಮಿಯನು ಹಾರೈಸುವ ನಿತ್ಯಾ ೫

ಅವೈಷ್ಣವನು ಹರಿ ಎಂದು ನುಡಿವಡೆ ತಾನು
ಅವನಂತೆ ಸ್ಮರಿಸದೇ ಸುಮ್ಮನಿದ್ದೂ
ಭವವದ್ದು ಭಾಗ್ಯವನು ಅಪೇಕ್ಷಿಸದೇ ಮುಂದೆ
ಜವನ ದೂತರಿಗೆ ಮಹ ಭೀತಿ ತೋರುತ ನಿತ್ಯ ೬

ಭೂಸುರರ ಪಾದದಲಿ ವಿಶ್ವಾಸ ಇಟ್ಟು ದು
ರಾಶೆಯನು ಮಾಡಿ ನರರಾಶ್ರೈಸದೆ
ಏಸೇಸು ವಿಪತ್ತು ಗುಣ ಮೇಲಟ್ಟಿದರು
ಲೇಶವಾದರು ಧೈರ್ಯಗೆಡದೆ ಮತಿಯಲಿ ನಿತ್ಯ ೭

ಕಾಲ ಮೃತ್ಯು ಬಂದು ಹುಂಕರಿಸಿ ನಿಂದು ಮಹ
ಜ್ವಾಲೆಯನು ತೋರಿ ಕಠಿಣೋಕ್ತಿಯಲ್ಲೀ
ಏಳೇಳು ಎನುತ ಎಬ್ಬಿಸಿದ ಕಾಲಕೆ ತನ್ನ
ನಾಲಿಗೆಲಿ ಹರಿ ಕೃಷ್ಣ ಕೇಶವನೆನುತ ನಿತ್ಯಾ ೮

ಸಕಲ ಚೇಷ್ಟಾದಿಗಳು ಹರಿಮಾಡಿಸಲು ಉಂಟು
ಮುಕುತಿ ನರಕವೆಂಬ ಯೋಚನ್ಯಾಕೆ
ಭಕುತವತ್ಸಲ ಸಿರಿ ವಿಠ್ಠಲನಲ್ಲಿ
ಸುಖ ದು:ಖವಿತ್ತದು ಸಮ್ಮತವೆನುತ ನಿತ್ಯಾ ೯

೪೭೬

ಭೇದ ಪೇಳುವೆನೆ ತಮೊ ಯೋಗ್ಯ ಪೂರ್ಣ
ಬೊಧರ ಮತ ಬಿಡುವನೆ ಮುಕ್ತಿಯೋಗ್ಯ ಪ

ಸತ್ಯ ನುಡಿವನೆ ಅಪಕಾರಿ ಪರರ
ವಿತ್ತಪಹರಿಸುವನೆ ಬಲು ಉದಾರಿ
ಹತ್ಯ ಮಾಡುವನೆ ಉಪಕಾರಿ
ನಿತ್ಯ ಚಿತ್ತ ಚಂಚಲಿಸುವನೆ ಧರ್ಮದಾದಿ ೧

ಪರನಾರಿ ಸಹೋದರ ಹೀನ ಕಂಡಾ ಉ
ತ್ತರಗಳನಾಡುವನೆ ಆವಾಗ ಮೌನ
ತರತಮ್ಮ ಪೇಳುವನೆ ಕೋಣ ತನ್ನ
ಹರಣವೊಪ್ಪಿಸಿಕೊಂಬುವನೆ ಪ್ರವೀಣಾ ೨

ಭ್ರಷ್ಟನೆನೆಸುವನೆ ಧನ್ಯ ಪರರ
ಇಷ್ಟಾರ್ಥ ಕೆಡಿಸುವನೆ ಬಲು ಮಾನ್ಯ
ಕಷ್ಟ ಬೇಡುವನೆ ರಾಜನ್ಯ ವಿಜಯ
ವಿಠ್ಠಲನ್ನ ಪೂಜೆ ಮಾಡುವನೆ ಗುಣಶೂನ್ಯ ೩

೪೭೭

ಮಧ್ವಮತ ಪೊಂದದವ ದೈತ್ಯ
ಮನ ಶುದ್ಧಿಯಿಲ್ಲದೆ ಶೀಲಮಾಳ್ಪವ ದೈತ್ಯ ಪ

ರವಿಚಾರದಿರರ್ಘ್ಯ ಕೊಡುವವ ಧನ್ಯ
ದಿನದಿ ಕರ್ಮವ ಬಿಟ್ಟು ಮಲಗುವ ಠೋಣ್ಯಾ
ಭುವನೇಶಗರ್ಪಿತವಿಲ್ಲದೆ ಉಂಬುವವನನ್ಯ
ಆವದಾರವ ಕೂಡದವನಗ್ರಗಣ್ಯ ೧

ಮೂಲಾವ ತಾರ್ಕೈನೆನ್ನದವ ಖೋಡಿ
ಕಾಲವಿಲ್ಲದೆ ಸುಳ್ಳಾಡುವ ಪೀಡಿ
ಆಳಲಾರದೆ ಸತಿಯ ಬಿಡುವವ ಹೇಡಿ ಶ್ರೀ
ಲೋಲವರ ನೆನೆಯದವ ಕುಲಗೇಡಿ ೨

ತಾರತಮ್ಯವ ತಿಳಿದುಕೊಳ್ಳದವ ನಷ್ಟಾ
ಮೀರದೇ ಹಿರಿಯರರ್ಚಿಸುವವ ಶ್ರೇಷ್ಠಾ
ನಾರಿಯರಿಗೆ ಮನಸಿಡುವನೆ ಭ್ರಷ್ಟಾ
ಸೂರಿಗಳಿಗೆರಗುವವನೆ ವಿಶಿಷ್ಟಾ ೩

ತಿಥಿತ್ರಯ ಸತಿಸಂಗ ಮಾಡಿದವ ಹೊಲೆಯ
ಮತಿಗೆಟ್ಟು ಯಮನಲ್ಲಿ ತಿಂಬುವವ ಕೊಲೆಯಾ
ಸತತ ನಿರ್ಮಲ ಜಾಗರದವನು
ಪತಿ ವಿಜಯವಿಠ್ಠಲಗೆ ಗೆಳೆಯಾ ೪

೪೭೮

ಮಧ್ವಮತವ ಪೊಂದದವನ ಭಕುತಿಯಾತಕೆ ಪ

ಊರ್ಧ್ವಪುಂಡ್ರ ತಿದ್ದದವನ ಕರ್ಮವ್ಯಾತಕೆ ಅ.ಪ

ದಾನವನ್ನು ಮಾಡದವನ ದ್ರವ್ಯವ್ಯಾತಕೆ ।
ಸ್ನಾನವನ್ನು ಮಾಡದವನ ಮೌನವ್ಯಾತಕೆ ।
ಮಾನಿನಿಯು ಇಲ್ಲದವನ ಬದುಕು ಯಾತಕೆ ।
ಧ್ಯಾನವನ್ನು ಅರಿಯದವನ ಪೂಜೆ ಯಾತಕೆ ೧

ವಂಶವನ್ನುದ್ಧರಿಸದಂಥ ಮಗನು ಯಾತಕೆ ।
ಹಿಂಸೆಯನ್ನು ಪಡಿಸುವಂಥ ಅರಸು ಯಾತಕೆ ॥

ಸಂಸಾರವನು ಒಲ್ಲದಂಥ ಸತಿಯು ಯಾತಕೆ ।
ಕಂಸಾರಿಯನು ತಿಳಿಯದಂಥ ಜ್ಞಾನವ್ಯಾತಕೆ ೨

ಬಂಧು ಬಳಗ ಬಿಟ್ಟು ಉಂಬ ನೆಂಟರ್‍ಯಾತಕೆ ।
ಕಂದರನ್ನು ಮಾರುತಿಪ್ಪ ತಂದೆಯಾತಕೆ ॥
ಬಂದ ಅತಿಥಿಗನ್ನವಿಕ್ಕದ ಸದನವ್ಯಾತಕೆ ।
ನಿಂದೆಗಳು ಮಾಡುತಿಹನಾಚಾರವ್ಯಾತಕೆ ೩

ಗುರೂಪದೇಶವಿಲ್ಲದಂಥ ಮಂತ್ರವ್ಯಾತಕೆ ।
ಹಿರಿಯರನ್ನು ಸಾಕದವನ ಪುಣ್ಯವ್ಯಾತಕೆ ॥
ಚರಿಸಿ ತೀರ್ಥಯಾತ್ರೆ ಮಾಡದ ದೇಹವ್ಯಾತಕೆ ।
ವರ–ಪ್ರಸಾದವೀಯದಂಥ ದೇವರ್‍ಯಾತಕೆ ೪

ಏಕಾದಶಿಯ ಮಾಡದವನ ವ್ರತವು ಯಾತಕೆ ।
ಏಕಮನಸು ಇಲ್ಲದವನ ನಡತೆ ಯಾತಕೆ ॥
ಸಾಕಿದವನ ಕೊಲ್ಲುವಂಥ ಭಂಟನ್ಯಾತಕೆ ।
ಲೋಕವಾರ್ತೆ ಬಿಡದವನ ಜಪವು ಯಾತಕೆ ೫

ಭಾಷೆ ಬದ್ಧವಿಲ್ಲದವನ ಮಾತು ಯಾತಕೆ ।
ಕಾಸುವೀಸಕೆ ಬಡಿದಾಡುವ ಅನುಜರ್‍ಯಾತಕೆ ॥
ಲೇಸು ಹೊಲ್ಲೆಹ ನೋಡದಂಥ ಗೆಳೆಯನ್ಯಾತಕೆ ।
ಆಸೆಯನ್ನು ಬಿಡದ ಸನ್ಯಾಸವ್ಯಾತಕೆ ೬

ತಪ್ತ ಮುದ್ರೆಯಿಲ್ಲದವನ ಜನ್ಮವ್ಯಾತಕೆ ।
ಗುಪ್ತದಲ್ಲಿ ನಡೆಯದಿಪ್ಪ ದಾಸನ್ಯಾತಕೆ ॥
ಆಪ್ತಬಂಧು ವಿಜಯವಿಠ್ಠಲನ ಶ್ರೀ ಚರಣದಿ ।
ಕ್ಲುಪ್ತ ಮೀರದೆ ನಡೆದ ಮೇಲೆ ನರಕವ್ಯಾತಕೆ ೭

೪೭೯

ಮಧ್ವಮತ ಪೊಂದದೆ ಬದುಕಿದವನೂ
ಹದ್ದು ಕಾಗಿ ಬದುಕಿ ಕಾಲವನು ಕಳೆದಂತೆ ಪ

ಸಕಲೇಂದ್ರಿಯಗಳು ಇದ್ದು ನಯನೇಂದ್ರಿಯ ಇಲ್ಲದಂ ಅ.ಪ.

ಫಲಪುಷ್ಪಯಿಲ್ಲದಾ ಗಿಡಬಳ್ಳಿ ಇದ್ದಂತೆ
ಮಳೆಯಿಲ್ಲದಾ ಬೆಳಸು ನೋಡಿದಂತೆ
ಚಲುವನಾದಡೆ ಏನು ಗುಣಹೀನನಾದಂತೆ
ಖಳರು ನಿತ್ಯಾಕರ್ಮ ಚರಿಸಿದಂತೆ ೧

ಉತ್ತಮರ ಕೂಡದಾ ಯಾತ್ರೆ ಮಾಡಿದಂತೆ
ಕತ್ತೆ ಪರಿಮಳ ಪೊತ್ತು ತಿರುಗಿದಂತೆ
ಮೃತ್ತಿಕೆ ಶೌಚ ಇಲ್ಲದೆ ಆಚಾರ ಮಾಡಿದಂತೆ
ಸತ್ತ ಹೆಣಕ್ಕೆ ವಸ್ತ್ರ ಶೃಂಗರಿಸಿದಂತೆ ೨

ನಿಶಿಕರ ಇಲ್ಲದಾ ತಾರೆಗಳು ಇದ್ದಂತೆ
ವಸುಧಿಪತಿಯಿಲ್ಲದಾ ರಾಜ್ಯದಂತೆ
ಹಸಿವೆ ಇಲ್ಲದವನು ಮಧುರನ್ನ ಉಂಡಂತೆ
ಹಸುಗಳಿಲ್ಲದ ಮನೆ ವೊಪ್ಪಿದಂತೆ ೩

ತಾರತಮ್ಯಗಳಿಲ್ಲದ ವೇದ ಓದಿದಂತೆ
ಪುರಂದರದಾಸರು ಪೇಳಿದಂತೆ
ಮಾರುತಿಯ ಮತವಿಡಿದು ಸಿರಿ ವಿಜಯವಿಠ್ಠಲನ
ಕಾರುಣ್ಯ ಪಡಿಯದವ ಅಧಮನಂತೆ ೪

೪೮೦

ಶ್ರೀ ಮಧ್ವಮತ ಸಾಗರದೊಳಗೆ ಲೋಲಾಡಿ
ಆ ಮಹಾತತ್ವ ತಾರತಮ್ಯಗಳ ತಿಳಿದು
ಕಾಮ ಕ್ರೋಧಗಳೆಲ್ಲ ಹಳಿದು ಗುರು ಹನುಮಂತ
ಭೀಮ ಮಧ್ವಮುನಿಯ ಸಾರಿರಯ್ಯ । ಅಯ್ಯಯ್ಯಾ ಪ

ಅಂಜನೇಯ ಗರ್ಭದಲಿ ಜನಿಸಿ ಆಕಾಶದಲ್ಲಿ
ಕಂಜನಾಪ್ತನ ತುಡುಕಿ ಕಿಷ್ಕಿಂಧದಲಿ ಕಪಿ
ರಂಜನನ ಕೂಡಿ ಪಂಪಾ ತೀರದಲಿ ದೇವಂಜನ ಪಾದವ
ಕಂಜನಮಿತನಾಗಿ ಬಂದು ಮುದ್ರೆಯ ಧರಿಸಿ
ಜನಕಾತ್ಮಜಗೆಯಿತ್ತು ಅಕ್ಷರಿ ಎನೊ
ಭಂಜನವ ಮಾಡಿ ಲಂಕೆಯನುರಿಪಿ ಬಂದ ಪ್ರ
ಭಂಜನಿಯ ಭಜಿಸಿರಯ್ಯಾ । ಅಯ್ಯಯ್ಯಾ । ೧

ಧರ್ಮನಂದನೊಡನೆ ಜನಿಸಿ ಹಾಲಹಲ ಉಂಡು
ಸೀರ್ಮುಟ್ಟಿ ಪೋಗಿ ನಾಗನ ಗೆದ್ದು ಅರಗಿನ
ಅರ್ಮನೆಯ ದಾಟಿ ವನದೊಳಗೆ ಹಿಡಂಬನ ಶಾ
ರಿರ್ಮುರಿದು ಸೀಳಿ ಬಿಸಟು
ಕಿರ್ಮೀರ ದನುಜರ ಸದೆದು ಪೊತಂದು ಸು-
ಶರ್ಮಕನ ಬಿಗಿದು ಕಣದೊಳಗೆ ದುಶ್ಯಾಸನನ
ಚರ್ಮವನೆ ಸುಲಿದು ಸುಯೋಧನಾಂಕನಾದ
ನಿರ್ಮಳಾತ್ಮಕನ ಭಜಿಸಿರಯ್ಯಾ । ಅಯ್ಯಾಯ್ಯಾ ೨

ಹರಿಯೆ ಪರನೆಂದು ಬೊಬ್ಬಿಕ್ಕಿ ವಾದಿಗಳೆದೆ
ಬಿರಿಯೆ ದು:ಶಾಸ್ತ್ರಜ ಜರಿಯೆ ದುರ್ಮತಗಳು
ಪರಿಯ ಬಿಡದು ತಕ್ಕೆ ಮೆರೆಯೆ ಧರೆಯೊಳಗೆ ಈ
ಪರಿಯೆ ಮುನಿಗಾರು ಸರಿಯೆ ಪೊರೆಯ ಭಕ್ತರಿಗೆ ಸುಧೆ

ಗರಿಯೆ ಜ್ಞಾನ ಮಾರ್ಗಾಂಕುರಿಯೆ ವೇದದ ಸಾರ
ನೆರಿಯೆ ರಿಪುಕಾಲ ಮದಕರಿಗೆ ಕೇಸರಿಯೆ ಒಪ್ಪುವ
ಮರಿಯೆ ಜಗದೋರಿ ಗುರುವರ್‍ಯರಂ
ಭಜಿಸಿರಯ್ಯಾ । ಅಯ್ಯಯ್ಯಾ ೩

ಅಜನಾಗಿ ಮುಂದೆ ಪಸರಿಸಿ ಬೆಳೆದು ಹರುಷದಲಿ
ತ್ರಿಜಗವನು ನಿರ್ಮಾಣವನು ಮಾಡಿ ಒಂದೊಂದು
ಸೃಜಿಸುವನು ಚಿತ್ರವಿಚಿತ್ರ ಗುಣಗಣವುಳ್ಳ
ವೃಜ ಜೀವ ಜಂತುಗಳನು ನಿಜವಾಗಿ
ಇವನೆಂದು ವೇದಗಳು ಸಾರುತಿವೆ
ಕುಜನಮತವನೆ ಪಿಡಿದು ಪುಸಿಯಿದು ಎಂದೆನ್ನದೆ
ಭಜಿಸಿ ಗುರುಪಥವಿಡಿದು ಸಂದೇಹವನೆ ತೊರೆದು
ಸುಜನರ ಶಿರೋಮಣಿಯಯ್ಯ । ಅಯ್ಯಾಯ್ಯಾ ೪

ಜಾತಿ ಸಂಕರವಾಗಿ ಜಾತಿ ಧರ್ಮವ ತೊರೆದು
ಜಾತವೇದ ಸಯಜ್ಞ ಇಲ್ಲದಿದರೆ ವನಜ ಸಂ
ಜಾತ ಲೋಚನೆಗೆ ಪೇಳೆ ಜಾತಿ
ಮೌಕ್ತಿದಮಣಿ ನುಡಿದ ಕರುಣದಲಿ ದ್ವಿ
ಜಾತರನ ಉದ್ಧರಿಸ ಪೋಗೆನಲು ಜಯ ತನೋ
ಜಾತ ಪುಟ್ಟಿದನು ಇಳಿಯೊಳಗೆ ಮಧ್ಯಗೇಹರ
ಜಾತನಂ ಭಜಿಸಿರಯ್ಯ । ಅಯ್ಯಯ್ಯಾ । ೫

ಇಳಿಯೊಳಗೆ ಬಲವಂತನಾದ ಮತ ಮಧ್ವಮತ
ಸುಲಭವಾಗಿಹುದು ಸುಲಭರಿಗೆ ಕಮಲಕೇತಪನ
ಹೊಳಪು ಹೊಳೆದಂತೆ ವಿಕಸಿತಾ ಮಾಡಿ ಸುಜ್ಞಾನ
ಜಲಧಿಯೊಳಗಾಡಿಸುವುದು ಮಲತು ನಿಂತಿರ್ದ
ಕಲಿಮನದ ಮಾನವರಿಗೆ ಪ್ರಳಯನಂತಕನಂತೆ
ಹರಿನಾಮ ದಂಡವಾ

ಸೆಳೆದು ಹೊಡೆದೆಬ್ಬಿಸಿ ಹುತ್ತು ಜಲಹೊಗಿಪ
ಗುರುಕುಲತಿಲಕನಂ ಭಜಿಸಿರಯ್ಯಾ । ಅಯ್ಯಯ್ಯಾ । ೬

ದುರವಾದಿಗಳ ಗಂಡ ಗಜದಭೇರುಂಡ ಸಂ
ಕರಣ ಪ್ರಾಣವನರದು ದುರ್ಮಾಯಿ ಮಿಥ್ಯದ
ತರುಬೇರು ಕೀಳಿ ಮೂರಾರೆರಡ್ಯೊಂದು ಕುಹಕ ಭಾಷ್ಯ ।
ಮುರಿದು ಉರಹಿ
ಅರಿಗಳಂಗದ ಚರ್ಮ ಸುಲಿದು ಭೇರಿಗೆ ಹಾಕಿ ಹರಿಸೆ ಓಂಕಾರ
ಹರಿ ಪರನೆಂಬೊ ಬಿರುದಾಂತ ಪರಮ ಭಾಗವತರ
ಮಣಿಯಂ ಭಜಿಸಿಯ್ಯಾ । ಅಯ್ಯಯ್ಯಾ ೭

ಗುರುಕರುಣ ಪಡೆದ ಮಾನವನೆ ಸರ್ವಕೃತಾರ್ಥ
ಗುರುಕರುಣ ಪಡೆಯದಿದ್ದವನ ಜನ್ಮವೇ ವ್ಯರ್ಥ
ಗುರುವಿನನುಸುರಿಸಿ ಉಪದೇಶಕೊಳದಾ ಮಂತ್ರ
ಉರಗ ಉಪವಾಸ ತಂತ್ರ
ಗುರು ಮುನಿದು ಅವಘಡಿಸೆ ಹರಿ ಕರಿ ಕರುಣತಿಪ್ಪುವದು
ಗುರು ದಯಾಕರನಾಗೆ ಹರಿವೊಲಿದು ಸಲಹುವನು
ಗುರುವಾರು ಇವರವರೆಂದೆನದೆ ವರ ವೃಕೋದರನ
ಪಾದವ ನಂಬಿರೈಯ್ಯ । ಅಯ್ಯಯ್ಯಾ ೮

ಪದ್ಧತಿಯ ಕೇಳಿ ಶುದ್ಧಾತ್ಮರಿದು ವರಗುರು
ಮಧ್ವ ದುಗ್ಧಾಬ್ಧಿಯನು ಕಟಿದ ನವ ನವನೀತ
ಮುದ್ದೆಯನು ತೆಗೆದು ನವವಿಧ ಭಕುತಿರಸದಿಂದ
ಮೆದ್ದು ಸದ್ಭಾವದಲಿ ಸದ್ವೇಷ್ಣವರಾಗಿ ಮೃತ್ಯುವಿನ ಗೋನಾಳಿ
ಕಾಲನ ಮೀರಿ ವೈಕುಂಠಪುರ ಸಾರಿ
ಮಧ್ವಾಂತರ್ಯಾಮಿ ಸಿರಿ ವಿಜಯವಿಠ್ಠಲನ
ಪಾದದ್ವಯವ ಭಜಿಸಿರಯ್ಯಾ ಅಯ್ಯಯ್ಯ ೯

೪೮೧

ಮಾನಸ ಪೂಜೆಯನು ಮಾಡು ।
ಧ್ಯಾನ ಪೂರ್ವದಿಂದ ಕುಳಿತು ಪ

ಜ್ಞಾನ ಭಕುತಿಯ ವಿಡಿದು ಲಕುಮಿ ।
ಪ್ರಾಣನಾಥನ ಪ್ರೇರಣೆಯಿಂದ ಅ.ಪ

ಕಾಮ ಕ್ರೋಧವ ಹಳಿದು ವಿಷಾದವೆಂಬೋ ।
ಸ್ತೋಮಗಳನು ತೊರೆದು ರಜೋ ಮೊದಲಾದ ॥
ತಾಮಸದ ಬುದ್ಧಿ ಬಿಟ್ಟು ನೇಮನಿತ್ಯ ತೀರಿಸಿಕೊಂಡು ।
ಶ್ರೀಮದಾನಂದತೀರ್ಥರ ಕೋಮಲಾಂಘ್ರಿಯಲ್ಲಿ
ಈ ಮನಸ್ಸು ಇಟ್ಟು ೧

ಹೃದಯ ಪದುಮದೊಳಗೆ ಹರಿಯ ಪದುಮ ಪದಗಳಿಟ್ಟು ।
ದೇಹ ಕದಲದಂತೆ ಇದ್ದು ಜ್ಞಾನ ಉದಿತವಾದ ದೃಷ್ಟಿಯ ॥
ಹದುಳದಿಂದ ತಿಳಿದು ಅಂತರವೆಲ್ಲವನು ನೋಡಿ ।
ಕದವ ತೆರೆದು ಕೊಟ್ಟ ಮುದದಿ ದೃಢವ ಸಂಪಾದಿಸಿ ೨

ನೀಲ ರತುನದಂತೆ ಹೊಳೆವ ಪಾಲಸಾಗರತನುಜೆ ।
ಮೇಲು ಮಂಗಳರಮಣನಾದ ಮೇಲುಗಿರಿಯ ತಿಮ್ಮನ ॥
ಲಾಲಿಯಿಂದ ತುತಿಸಿ ತವಕ ಬೀಳದಲೆ ಪೂಜೆ ವಿಧಾ ।
ಸಾಲುಗಳನು ತಿಳಿದು ವಿಶಾಲ ಬುದ್ಧಿ ಯುಕುತಿಯಿಂದ ೩

ವೇದ ಮಂತ್ರಗಳನು ಪೇಳಿ ಆದಿಯಲ್ಲಿ ಪೀಠಪೂಜೆ– ।
ಯಾದ ತರುವಾಯ ವಿನೋದದಿಂದಲಾವರಣ ॥

ಆದರಣೆಯಿಂದ ಬಳಿಕ ಮಾಧವರಿಗೆ ಸಕಲ ಭೂಷ- ।
ಣಾದಿಗಳನು ರಚಿಸಿ ಪುಣ್ಯಹಾದಿಯನು ತಪ್ಪದೆ ೪

ದೋಷರಾಶಿಗೆ ದ್ವೇಷನಾಗಿ ಈ ಶರೀರವ ಘಾಸಿಮಾಡದೆ ।
ನಾಶರಹಿತನಾದ ಹರಿಯ ಆಶಿರಸಾವಿಡಿದು ಪಾದ ॥
ಲೇಸಿನಿಂದ ಭಜನೆಗೈದು ವಾಸವಾಗು ಪದದಲ್ಲಿ ।
ಶ್ರೀಶ ವಿಜಯವಿಠ್ಠಲರನ್ನ ದಾಸ-ದಾಸರ ದಾಸನೆಂದು ೫

೪೮೨

ಯಾಚಕರು ಪರರ ಸಂಕಟ ಬಲ್ಲರೆಣ ಪ

ಭೂ ಚಕ್ರದಲಿ ಗಾಳಿಯಂತೆ ತಿರುಗಲು ಬಿಡರು ಅ.ಪ

ಕಾಪೀನವನು ಧರಿಸಿ ಮುಖವ ಡೊಂಕನೆ ಮಾಡಿ
ಕೋಪದಿಂದಲಿ ಕರವನೆತ್ತಲ್ಯಾಕೆ
ಪಾಪಿ ಕೂಪವ ಮೀರಿ ಸಮುದ್ರವನು ನೆರೆ ದಾಟಿ
ರೂಪಾಂತರದಿ ಮನೆ ಮನೆಯ ಪೊಕ್ಕರು ಬಿಡರು ೧

ವಿಷವ ಸವಿದುಂಡು ಮಹ ಮಡುವ ಪ್ರವೇಶಿಸಿ
ವಸುಧೆಯೊಳು ಬೇಡಿ ಕಿರಿತಂದುಂಡರು
ಬೆಸಬೆಸನೆ ವನವನವ ತಿರುಗಿ ಅಜ್ಞಾತದಲಿ
ವಸಿಸಿ ಮಾನಸದಿ ಗೃಹಕರ್ಮ ಮಾಡಲಿ ಬಿಡರು ೨

ಜುಟ್ಟು ಜನಿವಾರವನು ಕಿತ್ತುಕೊಂಡು ಯತಿಯಾಗಿ
ಕಟ್ಟೆ ಕಡೆಯಲಿ ಗೃಹಸ್ಥ ಧರ್ಮ ತೊರೆದು
ಹುಟ್ಟುಗತಿ ಯಿಲ್ಲೆನಗೆ ಕೃಷ್ಣ ಕೃಷ್ಣ ವಿಜಯ
ವಿಠ್ಠಲನ ಪಾದಕೆ ಮೊರೆಯಿಟ್ಟರು ಬಿಡರು ೩

೪೮೩

ಯಾಯಾ ವಾರವ ನೀಡಿ ಪ್ರೀಯದಿಂದಲಿ ಜನರು
ಬಾಯಲ್ಲಿ ಹರಿಯ ಕೊಂಡಾಡುತ ಪತಿವ್ರತ
ಸ್ತ್ರೀಯರು ಮುದದಿಂದ ಪ

ಸಾರುತ ಹರಿದಾಸ ಕೇರಿಯೊಳಗೆ ಬರಲು
ಚೋರತನವ ಮಾಡಿ ಚುದಗು ಬುದ್ಧಿಯಲಿಂದ
ದ್ವಾರವನಿಡದಿರಿ ೧

ಬಂದಾ ಹರಿದಾಸನ ವಂದಿಸಿ ನಿಮ್ಮಯ
ಮಂದಿರದೊಳು ಕರೆದು ತಂದಿಗಳೆಂದು ನಲು
ವಿಂದಲಿ ಉಪಚರಿಸಿ ೨

ಪರಲೋಕ ಬಂಧುಗಳೆ ಕರುಣವ ಮಾಡಿದಿರಿ
ನಿರುತ ಮಾಡಿದ ಕರ್ಮ ಪರಿಹರವೆಂದು ನಾ
ಸಿರ ಬಗೆ ಕೊಂಡಾಡುತಾ ೩

ಪತಿಮತ್ತೈಕ್ಯವಾಗಿ ಅತಿಶಯ ಭಕುತಿಯಲಿ
ಗತಿಗೆ ಸಾಧನವೆಂದು ತಿಳಿದು ಈ ಧರ್ಮಕ್ಕೆ
ಪ್ರತಿಕೂಲವಾಗದಲೆ ೪

ವಕ್ಕಡತಿ ತಂಡುಲವ ಚಕ್ಕನೆ ನೀಡಲು
ಮಕ್ಕಳು ಮರಿಗಳು ಸಹಿತ ನಿತ್ಯಾ
ಸುಖವಕ್ಕು ಸಟಿಯಲ್ಲಾ ೫

ಇಲ್ಲವೆಂದು ನುಡಿದರೆ ಪುಲ್ಲಲೋಚನವಪ್ಪಾ
ಎಲ್ಲ ಕಾಲದಲಿ ನಿಮ್ಮಂಗಣದೊಳು
ಇಲ್ಲವೆ ನಿಂತಿಪ್ಪದು ೬

ಹಸ್ತು ಹರಿದಾಸ ಬಂದು ಹೊಸ್ತಿಲಿಂದಲೆ ತಿರಿಗಿ
ವಿಸ್ತರಿಸುವೆ ಕೇಳು ಹರಿ ತೊಲಗುವಾ ದ್ವಿ
ಮಸ್ತಕ ಭುಂಜಿಸುವಾ ೭

ಒಂದೊಂದು ಕಾಳಿಗೆ ಒಂದೊಂದು ಕುಲಗೋತ್ರ
ಮುಂದೆ ಉತ್ತಮ ದೇಹದಲಿ
ಬಂದು ಸುಜ್ಞಾನದಿಂದಲೆ ಲೋಲಾಡುವರು ೮

ಹಲವು ಪೇಳುವದೇನು ಸುಲಭಾವೆನ್ನು ಧರ್ಮ
ಅಳಿದು ಹೋಗುವದಲ್ಲ ಇದನು ವಿಜಯವಿಠ್ಠಲ
ಬಲ್ಲ ಮಹಾಫಲವ ೯

೪೮೪

ಯೇನಾದರೇನು ಜ್ಞಾನವಿಲ್ಲದೆ ಮೋಕ್ಷವಿಲ್ಲಾ ಪ

ವೇದವನೋದಿದರೇನು । ಶಾಸ್ತ್ರವ ನೋಡಿದರೇನು ।
ಕಾದಿ ಕಾದಾಡಿದರೇನು ॥ ೧

ಕಾಶಿಗೆ ತಾ ಹೋದರೇನು । ಕಾನನವ ಸೇರಿದರೇನು ।
ಕಾಶಿ ಪೀತಾಂಬರ ಉಟ್ಟರೇನು ೨

ಜಪ ತಪವ ಮಾಡಲೇನು । ಜಾಣತನದೊಳ್ ಮೆರೆದರೇನು ।
ವಿಜಯವಿಠ್ಠಲನ್ನ ಸಾರಿದರೇನು ೩

೪೮೫

ವ್ಯರ್ಥ ಕೆಟ್ಟರು ಯಿಂದು ನರಮನುಜರು
ಸಾರ್ಥಕ ಮಾಡಿಕೊಳ್ಳರು ಶರೀರವುಳ್ಳವರು ಪ

ನಿದ್ರೆಯೊಳಗಿದ್ದು ಪ್ರಪಂಚ ಮರುಳಾಟ ಪರ
ಬುದ್ಧಿಯೊಳು ಮುಳುಗಿ ವಿಷಯವ ಭೋಗಿಸಿ

ಮದ್ದು ತಿಂದಂತೆ ಇದ್ದಾದರು ಉದಯದಲಿ
ಎದ್ದು ಕುಳಿತು ಒಮ್ಮೆ ಹರಿಯಂದು ನುಡಿಯದೆ ೧

ಹರಿವ ಜಲವ ಮಿಂದು ಹರಿಗೆ ಅರ್ಪಿಸುತೇವೆಂದು
ಒರಿದೆ ಬಾರದೆ ಬಿಂದು ಜಲ ತಂದು
ಅರಘಳಿಗೆ ಅಚ್ಯುತಗೆ ಭಕುತಿಯಲಿ ಅಭಿಷೇಕ
ಯರದು ಯಮಬಾಧೆ ಕಳೆಯಲರಿಯದ ಮಂಕು ೨

ಅಡವಿಯಿಂದಲಿ ಒಂದು ತುಳಸಿದಳವನೆ ತಂದು
ತಡಿಯದಲೆ ತಾವರೆದಳನಯನನ
ಅಡಿಗಡಿಗೆ ಏರಿಸಿ ಕರವ ಮುಗಿದು ಮುಕುತಿ
ಪಡಿಯಲೊಲ್ಲದ ಪರಮ ಪಾಪಿಷ್ಟ ಜನರಯ್ಯಾ ೩

ಪತ್ರ ಫಲ ಪುಷ್ಪ ತೋಯ ಮುಂದಿರಿಸಿ ನೀಲ
ಗಾತ್ರಗೆ ನೈವೇದ್ಯವೆಂದು ಬಗೆದು
ಸ್ತೋತ್ರವನೆ ಮಾಡಿ ಪ್ರದಕ್ಷಿಣೆ ನಮಸ್ಕಾರ
ನಿತ್ಯ ಒಂದೊಂದು ಮಾಡದೆ ಕರ್ಮಿಗಳು ೪

ಇಂದಿನ ಹಮ್ಮು ನಾಳಿಗೆಯಿಲ್ಲ ಈ ದೇಹ
ಇಂದು ಬಂದದೆ ನಾಳೆ ಬರಲರಿಯದೂ
ಸಿಂಧುಶಯನ ನಮ್ಮ ವಿಜಯವಿಠ್ಠಲನ ಮನ
ಬಂದಾಗ ನೆನೆದು ಭವವನದಿ ಉತ್ತರಿಸದೆ ೫

೪೮೬

ಶುಂಠನಿಗೆ ಉಂಟೆ ವೈಕುಂಠಾ ।
ಬಂಟನಿಗೆ ಉಂಟೆ ಒಡತನವು ಪ

ಕಳ್ಳನಿಗೆ ಉಂಟೆ ಪರರು ಒಡವೆ ಗಳಿಸಿದ ಕಷ್ಟ ।
ಸುಳ್ಳನಿಗೆ ಉಂಟೆ ಮಿತಿಯಾದ ಭಾಷೆ॥
ಕೊಲ್ಲುವನಿಗೆ ಉಂಟೆ ದಯಾದಾಕ್ಷಿಣ್ಯದ ಮಾತು ।
ಕ್ಷುಲ್ಲಕನಿಗೆ ಉಂಟೆ ಗುಣ ಭಾರಿ ಬುದ್ಧಿಗಳು ೧

ಉಪವಾಸಿಗೆ ಉಂಟೆ ಅನ್ನ ಆಹಾರದ ಚಿಂತೆ ।
ತಪಸಿಗೆ ಉಂಟೆ ಇಹದ ವ್ಯಾಕುಲ ॥
ಕೃಪಣನಿಗೆ ಉಂಟೆ ದಾನ–ಧರ್ಮದ ಚಿಂತೆ ।
ಚಪಳನಾರಿಗೆ ಉಂಟೆ ತನ್ನ ಮನೆವಾರ್ತೆ ೨

ಕ್ಷುಧಾತುರಗೆ ಉಂಟೆ ಪಾಕಾದಿ ಫಲ ರುಚಿ ।
ಹಾದಿ ಬಿಟ್ಟವಗುಂಟೆ ಮನದ ಧೈರ್ಯ ॥
ವೇದನೆಬಡುವಗುಂಟೆ ಅನ್ನಿಗರ ಸಂಧಾನ ।
ಕ್ರೋಧದವಗುಂಟೆ ಬಲು ಶಾಂತ ನೀತಿ ೩

ಕಾಮಾತುರಗೆ ಉಂಟೆ ಭವಕುರಿತ ಲಜ್ಜೆಗಳು ।
ನೇಮ ನಿತ್ಯಗೆ ಉಂಟೆ ಮನದರೋಗ ॥
ಹೇಮಾತುರಗೆ ಉಂಟೆ ಗುರು ಬಾಂಧವ ಸ್ನೇಹ ।
ತಾಮಸಿಗೆ ಉಂಟೆ ಶುಭಕರ್ಮ ಸದ್ಭಕ್ತಿ ೪

ದಾನಿಗೆ ಉಂಟೆ ಇಂದಿಗೆ ನಾಳಿಗೆಂಬೋದು ।
ಜ್ಞಾನಿಗೆ ಹತ್ಯಾದಿ ದೋಷ ಉಂಟೆ ।
ಆನಂದಾನಂದಿ ಸಿರಿ ವಿಜಯವಿಠ್ಠಲ ಸ್ವಾಮಿಯ
ಧೇನಿಸುವಗುಂಟೆ ದಾರಿದ್ರ್ಯ ದುಷ್ಕರ್ಮ ೫

೪೮೭

ಶೋಕವ್ಯಾತಕೆ ಮನವೆ ನಿನಗೆ ಇನ್ನು ಪ.

ಈ ಕುಮಾರಕ ನಿನಗೆ ಗತಿಯ ವಿಧಿಸುವನೇನೊ ಅ.ಪ

ಕೃಷ್ಣ ಸೋದರಮಾವ ಮತ್ತೆ ಭೀಮಸೇನ
ಜೇಷ್ಠ ಪಿತೃ ಪಾರ್ಥಾದಿ ಮಹಧೀರರು
ಇಷ್ಟು ಮಂದಿರಲಾಗಿ ಅಭಿಮನ್ಯು ಪ್ರಾಣವನು
ಬಿಟ್ಟು ಹೋಗಲು ಒಬ್ಬರಾದರುಳುಹಿದರೇನೊ ೧

ವಸಿಷ್ಠ ಮುನಿಪರಿಗೆ ನೂರುಮಂದಿ ಸುತರು
ಅಸಮ ಸಾಸಿಗರು ಮಹ ಶೀಲಜ್ಞರು
ಕುಶಲದಿಂದಿರುತಿರ್ದು ಅ-ಕಾಲ ಮೃತ್ಯುವಿನ
ವಶರಾಗಿ ಪೋದರು ನೋಡಿ ಅಚ್ಚರಿಯ ೨

ಇಂಥವರಿಗೀ ರೀತಿ ನಿನಗಾವ ಸ್ವಾತಂತ್ರ್ಯ
ಸಂತೋಷವನು ತೊಡೋ ಮನಸಿನಲ್ಲಿ
ಕಂತು ಜನಕ ನಮ್ಮ ವಿಜಯವಿಠ್ಠಲನಂಘ್ರಿ
ಸ್ವಾಂತದಲ್ಲಿ ನೆನೆನೆನೆದು ಸುಖಿಯಾಗು ಮನವೆ ೩

೪೮೮

ಸಂಕಲನ ನೆನೆದು ನಿಷ್ಕಳಂಕರಾಗಿರೋ
ಪಂಕಜಾಕ್ಷನ ಕೂಡ ದ್ವೇಷ ಬಳಿಸುವ ಮಾಯಿ ಪ

ಮಲವಿಸರ್ಜನೆಯಾಗುವಾಗ ಮೂತ್ರವನು ಬಿಡುವಾಗ
ಹೊಲಗೇರಿಯೊಳಗೆ ಸುಳಿದಾಡುವಾಗ
ಹೊಲಿಯಾದವನು ತನ್ನ ಎದುರಿಗೆ ಬರುವಾಗ
ಕಲಿಶಿಷ್ಯನಾದ ಮಣಿವಂತನ ನೆನೆಸಿರೊ ೧

ಶ್ರದ್ಧವನು ಬಿಡುವಾಗ ಸ್ವಪ್ನದೊಳಗೆ
ಇಂದ್ರಿಯ ಬಿದ್ದು ಹೋಗುವಾಗ ಉಗುಳುವಾಗ
ಬದ್ಧವಾಗಿ ಗುಹ್ಯ ತೊಳೆಯುವಾಗ ಅಪ್ರ
ಬದ್ಧನಾದ ಏಕಲವ್ಯನ ನೆನೆಯಿರೋ ೨

ಶುದ್ಧ ಅಶುದ್ಧವನು ತುಳಿದು ನೆಲಕ್ಕೆ ವರಸುವಾಗ
ವಮನವಾಗುವಾಗ ಮರಿಯದಲೆ
ಅಮಲ ಸುಖ ಮುನಿ ಗುರು ವಿಜಯವಿಠ್ಠಲ ವೈದು
ತಮಕೆ ಹಾಕುವ ಶುದ್ಧ ಕುಮತಿಯನು ನೆನೆಯಿರೋ ೩

೪೮೯

ಸಲ್ಲದೋ ಎಲೋ ಮಾಯಿ ಸಲ್ಲದೊ
ಎಲೊ ಮಾಯಿ ಎಲ್ಲಾ ಒಂದೆಂಬೋದು
ಸೊಲ್ಲನಾಡಲು ಯಮ ಕೊಲ್ಲದಲೆ ಬಿಡಾ ಪ

ಉಕ್ಕಿನ ಮಳಿಯ ರೋಮರೋಮದಲಿ ಬಡಿದು
ಬೆಸಸಿ ಸದಾ ಗಂಡುತಗಲಿ ಗಟ್ಟಿ
ಪಕ್ಕಿಯ ತಿವಿದು ಪಾಶದಲಿ ಬಿಗಿದು ಕಾ
ಲಿಕ್ಕಿ ನೆಲಕೆ ವರಿಸಿ ಕೆಂಪಗೆ ಕಾಸಿ
ಇಕ್ಕಳದಲಿ ಉಚ್ಚಿ ಕರುಳು ಬೈಲಿಗೆ ಹಾಕಿ
ಪೊಕ್ಕಳಿಗೆ ತೇಳಾರು ಪೊಗಿಸಿ ಕಟ್ಟಿ
ಡೊಕ್ಕಿಯ ಸೀಳುವರು ಕರ ಹೊಯಿದು
ನಕ್ಕು ಯಮದೂತರು ನಿನ್ನ ಬಾಧಿಪರು ೧

ನಿನ್ನ ಕಾಲಲಿ
ಒದ್ದೊದ್ದು ಹೆಡಗುಡಿಯನು ಕಟ್ಟಿ ಗಾರ್ಧಭದ
ಲದ್ದಿಯೊಳಡಿಗಿಸಿ ಸುತ್ತ ಉರಿಯನಿಕ್ಕಿ
ಮದ್ದು ಮೈಯಿಗೆ ಮುಚ್ಚಿ ಮುದದಿಂದ ಬೇಯಿಸಿ
ಹದ್ದು ಕಾಗೆಗೆ ನಿನ್ನ ಯೆಡೆ ಮಾಡುವರು ಅ
ಮೇಧ್ಯವ ತಿನಿಸುವರು ಅರಗಲ್ಲಿಗೆ
ಉದ್ದಿ ಉರುಳ ಬಿಡುವರು ಕೆಂಡದ ಮೇಲೆ
ವೊದ್ದಿಸಿ ಪರಿಪರಿ ಭಂಗವಪಡಿಸುವರು ೨

ವೈತರಣಿಯೊಳಗದ್ದಿ ಅದ್ರಿಯ ಹರಿ
ಮಾತು ಪೊರಡದಂತೆ ಮಾಡಿ ಮುದ್ರೆ ಬಾಯಿಗೆ ಹಾಕಿ
ತೂತು ಮೈಯಿಗೆ ತಂತಿಯ ಪೋಣಿಸಿ
ಪೂತಿ ಗಂಧದೊಳು ಹೊರಳಿಸಿ ತಡಿಯದೆ
ಯಾತಣೆಯಿಂದ ಬಿಸುಟು ಮೊಟ್ಟೆಯ ಕಟ್ಟಿ

ಮೂತರ ಕುಡಿಸುವರು ಮೀಸಿಯನು
ಕಿತ್ತಿ ಘಾತಿಸಿ ನೋಡುವರು ಮಹಾ
ಪಾತಕನೆಂದು ವಿಧಿಯ ಮೇಲೆ ಗುದ್ದೋರು ೩

ಹೆಡತಲೆಯಿಂದ ನಾಲಿಗೆಯ ತೆಗೆದು ಕ
ಕ್ಕಾಡಿ ಮಾಡಿ ನವನಾರು ಸಂದುಗಳು ಸುಟ್ಟು
ಕೈಕಾಲನು ಕಟ್ಟಿಸಿ ಸಾಸವಿ ಸುಣ್ಣ
ತೊಡೆದು ಬೋರಿಗೆಯಿಂದ ಬಡಿದು ಬಸಿಗೆ ಹಾಕಿ
ಒಡಲೊಳು ಸೀಸವರೆದು ಮರದ ಬೇಲೆಯಲಿ
ಹೊಡೆದು ಸರ್‍ರನೆ ಸೀಳೋರು ಕುರಿಯಂತೆ
ಕಡಿದು ಈ ಬಗೆ ಮಾಡೋರು ಕೀವಿನ
ಮಡುವಿನೊಳಗೆ ಇಟ್ಟು ತಲೆಮೆಟ್ಟಿ ಕುಣಿವರೊ ೪

ಮೂಗನು ಕೊಯಿದು ಕವಡಿಯ ಪೋಣಿಸಿ ಚೆ
ನ್ನಾಗಿ ಅತ್ತರಾಟದಲ್ಲಿ ತಲೆಕೆಳಕಾಗಿ ಜೋಲುವಂತೆ
ಝೋಲಿಯ ಹೊಡೆದು ಮಾತುಗಾಲೆ ನಿನ್ನ
ತೂಗಹಾಕಿ ಬಾಗಿಸಿ ಇನ್ನೊಮ್ಮೆ
ಬೊಗಳೆಂದು ಕುಡಕಾಸಿ ವೇಗನೆ ಬರೆ
ಇಡುವರು ದು:ಖದ ಸಾಗರ ಉಣಿಸುವರು
ಬೆಕ್ಕಿನಂತೆ ಕೂಗಲು ಕೇಳಿ ಸೈರಿಸದಲೆ ಇಪ್ಪರು ೫

ಘಾಯವಡೆದಲ್ಲಿ ಇರಿದು ಉಪ್ಪನೆ ತುಂಬಿ
ಬಾಯಿವರಳು ಮಾಡಿ ಭತ್ತವ ಥಳಿಸಿ ಕ್ರೂ
ರಾಯುಧ ಕಿವಿಗೆ ಬಿರಿಯಿಟ್ಟು ಬಂಧಿಸಿ
ಖೋಯೆಂದು ಕೆಡಹಿ ಬೊಬ್ಬಿರಿಯೇ ಚಿಂದಿ ಮಾಡಿ
ನಾಯಿಗಳಿಂದ ಕಚ್ಚಿಸಿ ಸೂಜೀಯ
ಆಯಕ್ಕೆ ಊರುವರು ಮರಕ್ಕೆ ಕಟ್ಟಿ
ಊಯಾಲೆ ಆಡುವರು ಇಪ್ಪತ್ತೆಂಟು
ನಾಯಕ ನರಕದಲ್ಲಿಟ್ಟು ತೆಗೆಯುವರು ೬

ಮರಳಿ ಮರಳಿ ಈ ಪರಿ ಬಾಧಿಗೆ ಇರೆ
ನರಕ ನರಕದಲ್ಲಿ ಹೂಳಿ ಉಬ್ಬಸಗೈಸಿ
ಉರ ಕಾಲದಲ್ಲಿಟ್ಟು ತರುವಾಯ ತೆಗೆದು ಪಾ
ಮರ ದುರುಳನೆಂದು ಮಿಡುಕಿಸಿ ಮಹಾನಿತ್ಯ
ನರಕದೊಳಗೆ ನೂಕಿ ಕಡೆಗಾಣದಂತೆ
ವರಲುತಿರೆ ನಗುವರು ನಿರ್ಮಲವಾದ
ಮರುತ ಮತದವರು ಪ್ರತಿದಿನ
ಸಿರಿಪತಿ ವಿಜಯವಿಠ್ಠಲನ ನಂಬದ ಮಿಥ್ಯಾ ೭

೪೯೦

ಸಲ್ಲದೊ ಸಲ್ಲದೊ ಸರ್ವರು ಕೇಳಿ ನಮ್ಮ
ಫುಲ್ಲನಾಭನ ಬಿಟ್ಟು ಖುಲ್ಲದೇವರ ಪೂಜೆ ಪ

ಮಾರಿ ಮಸಣಿ ಜೆಟ್ಟಿ ಜೆಟ್ಟಿಂಗ ಭೇತಾಳ
ವರ ಪೋತರಾಜಾ ಬೊಮ್ಮೆಯನು
ಬೀರದೇವರು ಹಾದಿಬೀದಿಯ ಬಸವಣ್ಣ
ಚಾರುದೈವ ಉಚ್ಚಾರವಲ್ಲದೆ ಹೊಲ್ಲಾ ೧

ಯಲ್ಲಮ್ಮಾ ಯಕನಾತಿ ಅಡವಿಯ ಗಿಡದಮ್ಮ
ಹಳ್ಳದ ತೀರದ ಹಾಳದೇವಿ ಅಮ್ಮ
ಜಲದೇವಿ ಜಕ್ಕಮ್ಮನೆಂತೆನಲು
ಸೊಲ್ಲು ಬರಿದೆ ವ್ಯರ್ಥವಲ್ಲದೆ ಫಲವಿಲ್ಲ ೨

ಬನದಶಂಕರಿ ಕುಳ್ಳಹಟ್ಟಿಗೆ ಕರಿಮಾತೆ
ವನಶಕ್ತಿ ಚವಡಮ್ಮ ಜವನಿಕೆ
ಬಿನಗು ಮಾಳಾದೇವಿ ಮಾಳಿಗೆ ಹಿರಿಯಕ್ಕ
ಘನ ಪಿಶಾಚಿಗಳಿಂದ ಒಂದಿಷ್ಟು ಸುಖವಿಲ್ಲ ೩

ಖಂಡೇರಾಯ ಮಲಕಜ್ಜಿನ ಗಡಿಗೆಮ್ಮ
ಮುಂಡೆ ಮೂಕಾರುತಿ ಬೆಂಚೆಮ್ಮನು
ಭಾಂಡಾರದ ದುರ್ಗಿ ಹಿರಿಯಣ್ಣ ಮೈಲಾರ
ಹಿರಚು ಗುಂಪಿನ ಬಳಗ ಕಂಡರೇನಿಲ್ಲ ೪

ಸುಣ್ಣದ ಕೆಸರು ಹಾಲು ಕೂಡಿ ಕುಡಿದಂತೆ
ಅನ್ಯದೇವತೆಗಳ ಭಜನೆ ಹೊಲ್ಲ
ಚೆನ್ನಾಗಿ ಸಿರಿ ವಿಜಯವಿಠ್ಠಲನ ಯುಗಳಪಾದ
ಸನ್ನುತಿಸಿದರೆ ಪರಮ ಪದವಿಯಮ್ಮ ೫

೪೯೧

ಸುಳ್ಳು ಪೇಳುವೆ ನಿಮಗೆ
ಸುಳ್ಳು ನಮ್ಮನೆ ದೈವ
ಕಳ್ಳನ ಬಂಟರು ನಮಗೆ ಕಡೆ ಮೊದಲಿಲ್ಲಾ ಪ

ನಾಮವಿಲ್ಲದೆ ಬೂದಿ ನೇಮ ಮಾಡೋದು ಸುಳ್ಳು
ನಾಮವೆಂಬುದೆ ಬುದ್ಧಿ ಮಿಕ್ಕವೆಲ್ಲ ಸುಳ್ಳು ೧

ಒಂದು ಅಹುದು ಎರಡು ಎಂದೆಂದಿಗೆ ಸುಳ್ಳು
ಮುಂದರಿದು ನೋಡು ಯಿಂಥ ಅಂದವೆಲ್ಲ ಸುಳ್ಳು ೨

ಸೃಷ್ಟಿಯ ಮತ್ತೊಬ್ಬ ಪುಟ್ಟಿಸುವುದೆ ಸುಳ್ಳು
ಧಿಟ್ಟ ವಿಜಯವಿಠ್ಠಲನಲ್ಲದೆ ಶ್ರೇಷ್ಠನೆಂಬುವರು ಸುಳ್ಳು ೩

೪೯೨

ಹರಿಚಿತ್ತಾ ಸತ್ಯ ಹರಿಚಿತ್ತಾ ಪ

ನರಚಿತ್ತವಿದ್ದಂತೆ । ನಡೆಯದು ಲವಲೇಶ ಅ.ಪ

ಸುದತಿ ಮಕ್ಕಳು ಭಾಗ್ಯ ಬೈಸೋದು ನರಚಿತ್ತ ।
ಮದಿವಾಗದಿರುವೋದು ಹರಿಚಿತ್ತವು ॥
ಕುದುರೆ ಅಂದಣ ಆನೆ ಬೈಸೋದು ನರಚಿತ್ತ ।
ಪದಚಾರಿ ಗೈಸೋದು ಹರಿಚಿತ್ತವಯ್ಯಾ ೧

ವಿಧ ವಿಧ ಯಾತ್ರೆಯ ಬೈಸೋದು ನರಚಿತ್ತ ।
ವದಗಿ ಬರುವ ರೋಗ ಹರಿಚಿತ್ತವೊ ॥
ಸದ ಅನ್ನದಾನವ ಬೈಸೋದು ನರಚಿತ್ತ ।
ಉದಕಕ್ಕೆ ಅಲಸೋದು ಹರಿಚಿತ್ತವಯ್ಯ ೨

ಭೂಮಿಯನಾಳಬೇಕೆಂಬೋದು ನರಚಿತ್ತ ।
ಆ ಮಾತಿಗೆ ಅಡ್ಡ ಹರಿಚಿತ್ತವು ॥
ವಿಜಯ ವಿಠಲನ್ನ ಬೈಸೋದು ನರಚಿತ್ತ ।
ಕಾಮಿಸಿ ಜೀವ್ಯೊದು ಹರಿಚಿತ್ತವಯ್ಯಾ ೩

೪೯೩

ಹರಿದಾಸನಾದರೆ ಹ್ಯಾಂಗಿರಲಿ ಬೇಕು
ನರಲೋಕದ ಚಿಂತೆ ಬಿಟ್ಟುಕೊಡಬೇಕು ಪ

ಇಂದು ನಾಳಿಗೆಯೆಂಬ ಯೋಚನೆಯ ಬಿಡಬೇಕು
ಇಂದ್ರಿಯಗಳನ್ನೆಲ್ಲ ಗ್ರಹಿಸಬೇಕು
ಬಂದದೆಲ್ಲ ಬರಲಿ ಈಗಲೇ ಎನಬೇಕು
ಅಂದವರು ಎನಗೆ ಬಂಧುಗಳು ಎನಬೇಕು ೧

ಸ್ನಾನವನು ಬಿಟ್ಟು ಹರಿಕಥೆಯ ಕೇಳಲಿ ಬೇಕು
ದಾನಕ್ಕೆ ಸಮ್ಮೊಗನಾಗಬೇಕು

ಮಾನಾಭಿಮಾನಕ್ಕೆ ಹರಿತಾನೆ ಎನಬೇಕು
ಏನಾದರಾಗಲಿ ಸುಖಬಡಲಿಬೇಕು ೨

ಇರಳು ಹಗಲು ಹರಿಸ್ಮರಣೆ ಮಾಡಲಿ ಬೇಕು
ಪರಲೋಕದ ಗತಿ ಬಯಸಬೇಕು
ಗುರುಹಿರಿಯರಿಗೆ ವಂದನೆಯ ಮಾಡಲಿ ಬೇಕು
ದುರುಳರನ ಕಂಡರೆ ದೂರಾಗಬೇಕು ೩

ತಾವರೆಮಣಿ ತುಲಸಿಸರವ ಧರಿಸಲಿಬೇಕು
ಭಾವಶುದ್ಧನಾಗಿ ತಿರುಗಬೇಕು
ಕೋವಿದರೆ ಸಂಗಡ ಕೂಡ್ಯಾಡುತಿರಬೇಕು
ಪಾವಕನಂತೆ ಇಂಪವ ಕಾಣಬೇಕು ೪

ಅನ್ನಪಾನಾದಿಗಳಿಗವಸರ ಬೀಳದಿರಬೇಕು
ಕಣ್ಣಿದ್ದು ಕುರುಡನೆಂದೆನಿಸಬೇಕು
ಚೆನ್ನಾಗಿ ವಾಯುಮತದಲ್ಲಿ ನಿಂದಿರಬೇಕು
ತನ್ನೊಳಗೆ ತಾ ತಿಳಿದು ನಗುತಲಿರಬೇಕು ೫

ಬಿಂಬ ಮೂರುತಿಯ ಹೃದಯದಲಿ ನಿಲಿಸಲಿ ಬೇಕು
ಡಂಭಕ ಭಕುತಿಯ ಜರಿಯ ಬೇಕು
ಡಿಂಬುವನು ದಂಡಿಸಿ ವ್ರತವ ಚರಿಸಲಿ ಬೇಕು
ನಂಬಿ ನರಹರಿಪಾದವೆನುತ ಸಾರಲಿ ಬೇಕು ೬

ಹರಿಯಿಲ್ಲದನ್ಯತ್ರ ದೈವವಿಲ್ಲೆನ ಬೇಕು
ಮರುತನೆ ಜಗಕೆ ಗುರುವೆನಲಿ ಬೇಕು
ಪುರಂದರದಾಸರೇ ದಾಸರೆಂದನ ಬೇಕು
ಸಿರಿ ವಿಜಯವಿಠ್ಠಲನ ಸ್ಮರಣೆ ಮಾಡಲಿ ಬೇಕು ೭

೪೯೪

ಹರಿಯ ನೆನಸಿದ ದಿವಸ ಶುಭಮಂಗಳಾ ಪ

ಹರಿಯ ನೆನಸಿದ ದಿವಸ ಅವಮಂಗಳಾ ಅ.ಪ

ಹರಿಯ ನೆನಸಿದ ನಿಮಿಷ ಆವಾಗಲೂ ಹರುಷ ।
ಹರಿಯ ನೆನಸದ ದಿವಸ ದುರ್ವಾಸನಾ ॥
ಹರಿಯ ನೆನಸಿದ ಘಳಿಗೆ ಮುಕ್ತಿಗೆ ಬೆಳವಣಿಗೆ ।
ಹರಿಯ ನೆನಸದ ಘಳಿಗೆ ಯಮನ ಬಳಿಗೆ ೧

ಹರಿಯ ನೆನಸಿದ ಪ್ರಹರ ಕುಲಕೋಟಿ ಉದ್ಧಾರ ।
ಹರಿಯ ನೆನಸದ ಪ್ರಹರ ಹೀನಾಚಾರ ॥
ಹರಿಯ ನೆನಸಿದ ಹಗಲು ಮುಕ್ತಿಗೆ ಬಲು ಮಿಗಿಲು ।
ಹರಿಯ ನೆನಸದ ಹಗಲು ನರಕಕ್ಕೆ ತಗಲು ೨

ಹರಿಯ ನೆನಸಿದ ಮಧ್ಯಾಹ್ನ ಸುಧಾಪಾನ ।
ಹರಿಯ ನೆನಸದ ಮಧ್ಯಾಹ್ನವೇ ಕಾನನ ॥
ಹರಿಯ ನೆನಸಿದ ಸಾಯಂಕಾಲವೇ ಸುಕಾಲ ।
ಹರಿಯ ನೆನಸದ ಸಾಯಂಕಾಲವೇ ದುಷ್ಕಾಲ ೩

ಹರಿಯ ನೆನಸಿದ ದಿನವು ನರನಿಗೆ ಸಮ್ಮತವು ।
ಹರಿಯ ನೆನಸದ ದಿನವು ದುರ್ದಿನವು ॥
ಹರಿಯ ನೆನಸಿದ ನರನು ಅವನೇ ಕೃತಕೃತ್ಯ ।
ಹರಿಯ ನೆನಸದ ನರಜನ್ಮ ವ್ಯರ್ಥಾ ೪

ಹರಿಯ ನೆನಸಿದ ರಾತ್ರಿ ತೀರ್ಥಕ್ಷೇತ್ರದ ಯಾತ್ರೆ ।
ಹರಿಯ ನೆನಸದ ರಾತ್ರಿ ಪಂಚಪಾತ್ರಿ ॥
ಪುರಂದರರನ ಪ್ರಿಯ ಸಿರಿ ವಿಜಯವಿಠ್ಠಲನಂಘ್ರಿ ।
ಮುರಿಯದೇ ಸದಾ ನೆನೆವವನೆ ಮುಕ್ತ ೫

೪೯೫

ಹರಿಯ ಮರೆದುದಕಿಂತ ಪಾಪವಿಲ್ಲಾ ।
ಹರಿ ಸ್ಮರಣೆಯಿಂದಧಿಕ ಪುಣ್ಯ ಮತ್ತೊಂದಿಲ್ಲಾ ಪ

ಗೋಹತ್ಯ ಸುರಾಪಾನ ಕನಕತಸ್ಕರ ಸುಜನ– ।
ದ್ರೋಹ ಗುರುತಲ್ಪಗಮನ ಬಲು ಕಪಟ ವ್ಯಸನ ॥
ಬಾಹಿರವಾಗ್ ದ್ವೇಷ ಪರದಾರಗಮನ ವಿ– ।
ವಾಹಗಳ ಮಾಣಿಸುವ ಪಾಪಕಿಂತಲಿ ಮೇಲು ೧

ಗಂಗಾನದಿಯಲ್ಲಿ ಸ್ನಾನ ಪ್ರಣವ ಆಚಮನ ।
ಹಿಂಗದಲೆ ಗಾಯತ್ರಿ ಮಂತ್ರ ಮೌನ ॥
ಕರುಂಗ ದಾನ–ಧರ್ಮ ವೃತ್ತಿ ಕ್ಷೇತ್ರ ರತುನ ।
ಬಂಗಾರಯಿತ್ತಧಿಕ ಬಹಳ ಪುಣ್ಯ ಮೇಲು ೨

ಹಾಸ್ಯ ವಿರೋಧ ಮದ ಮತ್ಸರ ಪರಕಾರ್ಯ ।
ದಾಸ್ಯದಲಿ ಕೆಡಿಸುವ ಶಠನ ಲೋಭಿ ॥
ವೈಶ್ವ ದೇವಾಹಿತ ಅತಿಥಿಗಳ ನಿಂದ್ಯರ– ।
ಹಸ್ಯ ದೂರುವ ಬಲು ಪಾಪಕಿಂತಲು ಮೇಲು ೩

ತೀರ್ಥಯಾತ್ರೆ ವೇದ ಭಾಗವತ ಪುರಾಣ ।
ಸಾರ್ಥತ್ಯವಾದ ಪ್ರವಚನ ಶಾಸ್ತ್ರ ॥
ಪ್ರಾರ್ಥನೆ ಸ್ತೋತ್ರ ಗೀತ ಸಾರ ಪ್ರಬಂಧ ।
ಅರ್ಥ ಪೇಳುವ ಬಲು ಪುಣ್ಯಕಿಂತಲಿ ಮೇಲು ೪

ಮಿತ್ರಘ್ನ್ಯಗರಳ ಪ್ರಯೋಗ ಗರ್ಭಿಣಿವಧ ।
ಗೋತ್ರಸಂಸರ್ಗ ಬಲು ಪ್ರಾಣಹಿಂಸಾ ॥
ಕ್ಷೇತ್ರ ಅಪಹಾರ ಕ್ಷುದ್ರವಾಣಿ ನಿಜಕ– ।
ಳತ್ರದಿ ದ್ರೋಹ ಬಲು ಪಾಪಕಿಂತಲಿ ಮೇಲು ೫

ವೇದಾದಿ ಕರ್ಮ ಸರ್ವದಲ್ಲಿ ಗಯಾ ಶ್ರಾದ್ಧ ।
ಭೂಧರ ಸಮಾಗಮ ಸತ್ ಶ್ರವಣಾ ॥
ಆದಿತ್ಯ ಚಂದ್ರ ಉಪರಾಗ ಪರ್ವಣಿ ನಾನಾ ।
ರಾಧನೆಯರೆ ಬಲು ಪುಣ್ಯಕಿಂತಲು ಮೇಲು ೬

ಆವಾವ ಪಾಪ-ಪುಣ್ಯಗಳದವರ ಕಿಂಕರವು ।
ದೇವನ ನೆನಸಿದಂಥ ನೆನೆಯದಂಥ ॥
ಜೀವರೊಳಗೊಬ್ಬ ಮುಕ್ತನು ಒಬ್ಬ ತಮಯೋಗ್ಯ ।
ಕೈವಲ್ಯಪತಿ ನಮ್ಮ ವಿಜಯವಿಠ್ಠಲ ಪ್ರೇರಕ ೭

೪೯೬

ಹಿಗ್ಗದಿರು ಹಿಗ್ಗದಿರು ಮನುಜಪಶುವೆ ।
ಮುಗ್ಗಿತಗ್ಗುವುದು ಮುಂದರಿಯದಲೆ ಮರುಳಾದೆ ಪ

ಆಯುದಲಿ ದ್ರೋಣಸುತ ಕೃಪ ವಿಭೀಷಣನೇನೊ ।
ಶ್ರೇಯದಲಿ ದಶರಥ ನಹುಷನೇನೊ ॥
ಈಯುದ್ಧಕೆ ಮಯಾರ ಧ್ವಜ ಶಿಬಿ ಬಲಿಯೇನೊ ।
ಮಾಯಾ ಬಿಡುವಲ್ಲಿ ಜಡ ಭರಿತ ನೀನೇನೊ ೧

ಶೂರತ್ವದಲಿ ಭೀಷ್ಮ ಅಭಿಮನ್ಯು ನೀನೇನೊ ।
ಘೋರ ತಪಸಿನಲಿ ವಿಶ್ವಾಮಿತ್ರನೇನೊ ॥
ವಿರುಕುತಿಯಲಿ ಸುರಸೈನ್ಯ ನಾಯಕನೇನೊ ।
ಹಾರುವ ಬಿಂಕದಲಿ ಗರುಡ ನೀನೇನೊ ೨

ಬಲದಲ್ಲಿ ಬಲರಾಮ ಶಲ್ಯ ಕೀಚಕನೇನೊ ।
ತಿಳಿವಳಿಕೆಯಲಿ ವಿದುರ ಸಂಜಯನೇನೊ ॥
ಒಲಿದು ಪಾಡುವಲಿ ನಾರದ ತುಂಬುರನೇನೊ ।
ಛಲ ಮಾಡುವಲ್ಲಿ ಧ್ರುವರಾಯ ನೀನೇನೊ ೩

ಭಕುತಿಯಲಿ ಪ್ರಹ್ಲಾದ ಪುಂಡರೀಕನೇನೊ ।
ಭುಕುತಿಯಲಿ ಅಗಸ್ತ್ಯ ಬಕ ನೀನೇನೊ ॥
ಉಕುತಿಯಲಿ ಸೂತ ಸಹದೇವ ಶೌನಕನೇನೊ ।
ಶಕುತಿಯಲಿ ವಾಲಿ ಯಮರಾಯ ನೀನೇನೊ ೪

ಯೋಗದಲಿ ಶುಕ ಜನಕ ಸನಕಾದಿಗಳೇನೊ ।
ತ್ಯಾಗಮಾಡುವಲ್ಲಿ ಕರ್ಣ ನೀನೇನೊ ॥
ಭೋಗ ಬಡುವಲ್ಲಿ ಮಹಾಭಾಗ ಇಂದ್ರನೇನೊ ।
ವೇಗದಲಿ ಪುರುಷ–ಮೃಗನು ನೀನೇನೊ ೫

ಸಖತನ ಮಾಡುವಲ್ಲಿ ಶ್ವೇತವಾಹನನೇನೊ ।
ನಿಖಿಳ ಕಥೆ ಕೇಳುವಲ್ಲಿ ಪರೀಕ್ಷಿತನೇನೊ ॥
ಅಖಿಳರನು ಗೆಲುವಲ್ಲಿ ಕಾರ್ತವೀರ್ಯನೇನೊ ।
ಸುಖದಲ್ಲಿ ಇಪ್ಪದಕೆ ಪವನ ನೀನೇನೊ ೬

ವಿತ್ತದಲಿ ನೀನು ವೈಶ್ರವಣನೇನೊ ।
ಮತ್ತೆ ಕ್ಷಮೆಯಲಿ ಹರಿಶ್ಚಂದ್ರನೇನೊ ।
ಭೃತ್ಯತನ ಪಡೆವಲ್ಲಿ ಅಕ್ರೂರ ನೀನೇನೊ ।
ಸುತ್ತವಲಿ ಪ್ರಿಯವ್ರತ ರಾಯನೇನೊ ೭

ವ್ರತದಲ್ಲಿ ಅಂಬರೀಷ ರುಕುಮಾಂಗದನೇನೊ ।
ಸ್ತುತಿಯಲ್ಲಿ ಮುಚುಕುಂದರಾಯನೇನೊ ॥
ಅತಿ ಚೆಲುವತನದಲ್ಲಿ ಮನ್ಮಥ ನಕುಲನೇನೊ ।
ಕ್ರತು ಮಾಡುವಲ್ಲಿ ಧರ್ಮಪುತ್ರ ನೀನೇನೊ ೮

ಶಾಪಗಳ ಕೊಡುವಲ್ಲಿ ಬ್ರಹ್ಮಪುತ್ರನೇನೊ ।
ತಾಪ ತೋರುವಲ್ಲಿ ರವಿ ಅನಳನೇನೊ ।
ಕೋಪ ಮಾಡುವಲ್ಲಿ ಗಿರಿಜಾರಮಣನೇನೊ ।
ತಾಪಸಿರ ನಡುವೆ ವಸಿಷ್ಠ ನೀನೇನೊ ೯

ಉನ್ನತದಲಿ ನೀನು ಮೇರು ಪರ್ವತನೇನೊ ।
ಘನ ಮದದಲಿ ಧೃತರಾಷ್ಟ್ರನೇನೊ ॥
ಇನ್ನು ಮತಿಯನ್ನು ಕೊಡುವಲಿ ಗಜಮೊಗನೇನೊ ।
ಮುನ್ನೆ ಕವನದಲ್ಲಿ ಶುಕ್ರದೇವನೇನೊ ೧೦

ಹಮ್ಮಿನಲಿ ಬಾಳದಿರು ಹಿತವಾಗದೊ ನಿನಗೆ ।
ಆ ಮಹಿಮರ ಸರಿ ನೀನಲ್ಲವೊ ॥
ಸುಮನಸರೊಡೆಯ ಸಿರಿ ವಿಜಯವಿಠ್ಠಲರೇಯನ್ನ ।
ನೆಮ್ಮಬೇಕಾದರೆ ಸೋಹಂ ನಿರಾಕರಿಸು ೧೧

೪೯೭

ಹೇಳುವೆನು ಕೇಳಿ ಕರ್ಣಾಮೃತವ
ಆಲೋಚನೆ ಸಲ್ಲ ತಿಳಿದ ಜ್ಞಾನರಿಗೆ ಪ

ಲಕ್ಷಣ ಛಂದಸ್ಸು ಅಡಿಪ್ರಾಸ ಆದಿ ಅಂತಿ
ಲಕ್ಷಕ್ಕೊಂದಾದರು ಮೊದಲೇ ಇಲ್ಲಾ
ಅಕ್ಷಿ ಇಲ್ಲದವನು ಕೋಲು ಸಂಪಾದಿಸುವ
ಅಕ್ಷಿ ಉಂಟಾದವಗೆ ಅದರಿಂದ ಫಲವೇನು ೧

ಜ್ಞಾನ ಕರ್ಮಂರ ಲಂಬನ ಮಾಡಿ ತಿಳಿದಂಥ
ಮಾನವನು ನಾನಲ್ಲ ಎಂದೆಂದಿಗೂ
ಜ್ಞಾನಿಗಳ ಮನೆಯ ತೊಂಡರ ಪಾದರಕ್ಷೆಯಾ
ಪಾಣಿಯಲ್ಲಿ ಪಿಡಿದವನ ನಖಧೂಳಿ ದಯದಿಂದ ೨

ರಾಗತಾಳ ಭೇದ ಜತೆ ಜಾಣತನದಿಂದ
ವಾಗರ ನಿಮಿತ್ಯ ಪೇಳಲಿಲ್ಲಾ
ಹ್ಯಾಗಾದರೇನು ನಾರಾಯಣಚ್ಯುತನೆಂದು
ಕೂಗಿ ಕಾಲವ ಕಳದೆ ಜನುಮ ಸಾಧನಕೆ ೩

ಬೆಲ್ಲ ಕರದಲಿ ಪಿಡಿದು ಆವನಾದರೇನು
ಎಲ್ಲಿ ತಂದರೆ ಅದು ಸೀ ಎಲ್ಲವೇ
ಬಲ್ಲನವ ನರಿಯನಿವನೆಂದು ಆಡದಿರಿ
ಪುಲ್ಲನಾಭನ ಸ್ಮರಣೆ ಒಂದು ಮುಕ್ತಾರ್ಥ ೪

ಹರಿದೈವವೆಂದು ತಾ ಉತ್ತರೋತ್ತರ ತಿಳಿದು
ಗುರುಮಧ್ವಮತದಲ್ಲಿ ಲೋಲಾಡಲು
ಸಿರಿಯ ಅರಸ ವಿಜಯವಿಠ್ಠಲ ಬಂದು ವೊಲಿವನು
ಗುರು ಪುರಂದರನ ದಯೆ ಎನ್ನ ಮೇಲಿರಲಾಗಿ ೫

ತತ್ವವಿವೇಚನೆ

೪೯೮

ಅಂತರಂಗದ ಕದವು ತೆರೆಯಿತಿಂದು ಪ

ಎಂತು ಪುಣ್ಯದ ಫಲವು ಪ್ರಾಪ್ತಿ ದೊರಕಿತೊ ಎನಗೆ ಅ.ಪ

ಏಸುದಿನವಾಯಿತೊ ಬೀಗಮುದ್ರೆಯ ಮಾಡಿ ।
ವಾಸವಾಗಿದ್ದರೋ ದುರುಳರಿಲ್ಲಿ ॥
ಮೋಸವಾಯಿತು ಇಂದಿನ ತನಕ ತಮಸಿನ ।
ರಾಶಿಯೊಳಗೆ ಹೊಳೆ ಕಾಣಿಸುತ್ತಿರಲಿಲ್ಲ ೧

ಹರಿಕರುಣವೆಂಬಂಥ ಕೀಲಿ ಕೈ ದೊರಕಿತು ।
ಗುರುಕರುಣವೆಂಬಂಥ ಶಕ್ತಿಯಿಂದ ॥
ಪರಮ ಭಾಗವತರ ಸಹವಾಸದಲಿ ಪೋಗಿ ।
ಹರಿ ಸ್ಮರಣೆಯಿಂದಲ್ಲಿ ಬೀಗಮುದ್ರೆಯ ತೆಗೆದೆ ೨

ಸುತ್ತಲಿದ್ದವರೆಲ್ಲ ಪಲಾಯನವಾದರು ।
ಭಕ್ತಿಕಕ್ಕಡವೆಂಬ ಜ್ಞಾನದೀಪ ॥

ಜತ್ತಾಗಿ ಹಿಡಿಕೊಂಡು ದ್ವಾರದೊಳಗೆ ಪೊಕ್ಕೆ ।
ಎತ್ತನೋಡಿದರತ್ತ ಶೃಂಗಾರಸದನ ೩

ಹೊರಗೆ ದ್ವಾರವು ನಾಲ್ಕು ಒಳಗೈದು ದ್ವಾರಗಳು ।
ಪರ ದಾರಿಗೆ ಪ್ರಾಣ ಜಯವಿಜಯರು ॥
ಮಿರುಗುವ ಮಧ್ಯಮಂಟಪ ಕೋಟಿರವಿಯಂತೆ ।
ಸರಸಿಜನಾಭನ ಅರಮನೆಯ ಸೊಬಗು ೪

ಸ್ವಮೂರ್ತಿಗಣ ಮಧ್ಯ ಸಚ್ಚಿದಾನಂದೈಕ ।
ರಮೆಧರೆಯರಿಂದಲಾಲಿಂಗಿತ್ವದಿ ॥
ಕಮಲಜಾದಿಗಳಿಂದ ತುತಿಸಿಕೊಳ್ಳುತ ಹೃದಯ– ।
ಕಮಲದೊಳಗಿರುವ ಶ್ರೀ ವಿಜಯವಿಠ್ಠಲನ ಕಂಡೆ ೫

೪೯೯

ಅರ್ಚನೆ ಬಗೆ ಕೇಳಿ ಲೋಕ ಪ

ಕಣ್ಣು ಮುಚ್ಚಿ ಕುಳಿತರೆ ಕೊಡ ಹರಿ ಮುಕ್ತಿಲೋಕಾ ಅ.ಪ

ಜಡವ ಪೂಜಿಸಿದರಲ್ಲೇನೊ ತಾನು ।
ಜಡ ತುಲ್ಯ । ನಾಗಿದ್ದಕೆ ಸಮವೇನು ॥
ಕೆಡದಿರು ಇದರೊಳಗೆ ನೀನು ತಿಳಿ ।
ಒಡನೆ ಕರ್ಮಗಳೆಲ್ಲೇನುಂಟು ಕಾಣೋ ೧

ಏಕಾಂತದಲಿ ನಿನ್ನ ಮನಸು ಅ ।
ನೇಕವಾಗುವುದು ನಿರಂತರ ಗುಣಿಸು ॥
ನೀ ಕೇಳು ಯೋಚಿಸಿ ಗಣಿಸು ।
ಸರ್ವ ಆಕಾರದಲ್ಲಿ ಶ್ರೀ ಹರಿಯನ್ನೆ ನೆನಸು ೨

ತ್ರಿವಿಧ ಜೀವರು ಮಾಡುವಂಥ ನಡತಿ ।
ಹವಣವ ನೋಡಿದು ಬಿಡು ನಿನ್ನ ಪಂಥ ॥

ಕವಿಗಳೊಡನೆ ಸುಪಂಥದಿಂದ ।
ಪವಮಾನಮತ ಪೊಂದಿ ಭಜಿಪುದು ಇಂಥ ೩

ದ್ವ್ಯಣುಕ ಪಿಡಿದು ಬಹುಕಾಲತನಕ ।
ಎಣಿಕೆ ಮಾಡುತಲಿರು ನಿತ್ಯ ಸುಶೀಲ ॥
ಗುಣವಂತನಾಗೊ ನೀ ಬಹುಳ ಸುಖ– ।
ವನಧಿ ರಂಗನ ವ್ಯಾಪಾರವೆನ್ನೊ ಬಾಲ ೪

ಆವಾಗ ಮರೆಯದಿರು ಹರಿಯ ಕಂಡ ।
ಠಾವಿನಲಿ ಯೋಚಿಸು ಅರಗಳಿಗೆ ಬಯಸದಿರು ಸಿರಿಯ ॥
ದೇವ ವಿಜಯವಿಠ್ಠಲ ದೊರೆಯ ನಿನ್ನ
ಭಾವದಲಿ ತಿಳಿಯೊ ಆತನ ಚರಿಯಾ ೫

೫೦೦

ಅಧಮನಲ್ಲವೆ ಅವನು ಅಧಮನಲ್ಲವೆ ।
ಯದುಪತಿಯ ಭಜಿಸಿ ಸದಾ । ಬದುಕದಿದ್ದ ನರಜನ್ಮ ಪ

ಹೊರಳಿ ಎದ್ದು ಕುಳಿತು ಎರಡು ಕರವ ಮುಗಿದು ಜಿಹ್ವೆಯಲ್ಲಿ ।
ಹರಿ ಹರಿ ಎಂದು ಸ್ಮರಣೆ ಮಾಡಿ । ಹರುಷವಾಗದಿದ್ದ ನರನು ೧

ಮಡುವಿನೊಳಗೆ ಮಿಂದು ಬಂದು ।
ಕುಡತಿ ಜಲವ ಕೊಂಡು ರವಿಗೆ ।
ಕಡಿಯದರ್ಘ್ಯವೆರೆದು ಪುಣ್ಯ । ಪಡೆಯದಿದ್ದ ಹೀನ ನರನು ೨

ಹಾದಿ ಹಿಡಿತು ಬರುತ ಸುಮ್ಮನಾದರನ್ನ । ಇರದೆ ವೇಣು ।
ನಾದ ಕೃಷ್ಣ ಕೃಷ್ಣಯೆಂದೂ । ಓದಿಕೊಳುತ ಬಾರದವನು ೩

ಕಲಶ ತುಂಬಿದ ನೀರು ತಂದು ಕುಳಿತು ಘಳಿಗೆ ।
ಸಾಲಿಗ್ರಾಮ ತೊಳೆದು ತೀರ್ಥವೆಂದು ಮಾಡಿ ।
ಕೊಳದ ಯಿದ್ದ ಹೀನ ನರನು ೪

ಗಿಡದ ತೊಪ್ಪಲು ತೊಡಿಮೆ ತಂದು ।
ಪೊಡವಿಯರಸ ಕೇಶವನ್ನ ।
ಅಡಿಗೆ ಏರಿಸಿ ನಗುತ ತನ್ನ । ಮುಡಿಯಲಿಟ್ಟುಕೊಳದ ನರನು । ೫

ಅಟ್ಟ ಅಡಿಗೆ ಎಲ್ಲ ಸಿರಿ । ವಿಠ್ಠಲನ ಮುಂದೆ ತಂದು ।
ಇಟ್ಟು ಅರ್ಪಿತವೆಂದು ಸುಖ । ಬಟ್ಟು ಉಣದ ಮಂಕು ನರನು ೬

ಉಂಡು ತಿಂದು ತೇಗಿಕೊಳುತ । ತಂಡ ತಂಡದ ವಿಷಯದಲ್ಲಿ ।
ಭಂಡನಾಗಿ ನಮ್ಮ ಕೃಷ್ಣ ಭಂಡನೆಂದೂ ಅನದ ನರನು ೭

ಊರು ಕೇರಿಗೆ ಪೋಗುವಾಗ । ಭಾರಪೊತ್ತು ತಿರುಗುವಾಗ ।
ಸಾರಿಸಾರಿಗೆ ತಿಳಿದು ಕಂಸಾರಿ ಎನದ ಹೀನ ನರನು ೮

ಮಂತ್ರವಿಲ್ಲ ತಂತ್ರವಿಲ್ಲ । ಕಂತುಪಿತನ ಮುಂದೆ ನಿಂತು ।
ಸಂತರ್ಪಣೆ ಎಂದು ಮನದಿ । ಚಿಂತೆ ಮಾಡದಿದ್ದ ನರನು ೯

ಮಲಗಿ ನಿದ್ರೆಗೊಳುತರೊಮ್ಮೆ । ಕಳವಳಿಸಿ ಭೀತಿಯಲಿ ।
ತಳಮಳವಗೊಂಡು ಹರಿಯ । ಜಲಜಪಾದ ನೆನೆಯದವನು ೧೦

ಎಲ್ಲ ಬಿಟ್ಟು ವಿಜಯವಿಠ್ಠಲ ವೆಂಕಟನೆ ದೈವ ।
ಅಲ್ಲದಿಲ್ಲವೆಂದು ಬಂದು ಸೊಲ್ಲು ಪೇಳಿ ಬಾಳದವನು ೧೧

೫೦೧

ಅನ್ಯಾಯದಲಿ ಬಾಳಿ ಬದಕೋರೆ । ನಾಳೆ ।
ಕಿನ್ನೇಶದೂತರು ಎಳಿಯಾರೆ ಪ

ಹಿಂದಿನ ದುಃಖವ ನೆನಸಿಕೊ । ನೀನು ।
ಬಂದದೆ ಒಂದೊಂದು ಗುಣಿಸಿಕೊ ।
ಮುಂದೀಗ ಎಚ್ಚತ್ತು ನೋಡಿಕೊ ।
ಇದು ಸಂದೇಹವೆನದೆ ನಿಜವಾಗಿ ತಿಳಿದಕೊ ೧

ಗರ್ಭಯಾತನೆ ಬಲು ಹೇಸಿಕೆ । ವಳಗೆ ।
ನಿರ್ಬಂಧವಾಗಿ ಬೆಳೆದು ಮೇಲಕೆ ।
ದೊಬ್ಬುವರು ನಿನ್ನ ಕೆಳಿಯಿಕೆ ।
ಬಿದ್ದು ಅಬ್ಬಬ್ಬ ಐಯ್ಯಯ್ಯವೆಂದು ಅಳಲೇಕೆ ೨

ಬಾಯಿಗೆ ಬಜೆ ಬೆಣ್ಣೆ ಕೊಡುವರು । ತಾಯಿ ।
ಬಳಗವೆಲ್ಲ ಸಂತೋಷಬಡುವರು ।
ಆಯಿತು ಮಗುವೆಂದು ನುಡಿವರು ।
ಇವನ ಆಯುಷ್ಯ ಕಡಿಮೆಯೆಂದದು । ಅರಿಯದೆ ಕೆಡುವರು ೩

ಚಿಕ್ಕಂದು ಎತ್ತಿ ಮುದ್ದಾಡಿ ಬೆಳಸಿ ।
ಅಕ್ಕರದಿಂದಲಿ ನೋಡಿ ಕೊಂಡಾಡಿ ।
ಫಕ್ಕನೆ ಕುಲಗೋತ್ರರ ಕೂಡಿ । ಒಬ್ಬ ।
ರಕ್ಕಸಿಯ ತಂದು ನಿನಗೆ ಜತಿ ಮಾಡಿ ೪

ನೆಲೆ ಇಲ್ಲದ ಮಮತೆಯೊಳು । ಮುಳುಗಿ ।
ತಲೆಕೆಳಗಾಗಿ ನಡೆದು ಹಗಳಿರುಳು ।
ಕುಲನಾಶಕನೆಂಬೊದು ಬಾಳು । ಬಿಡು ।
ತಿಳಿಯ ಪೇಳುವೆನು ಎತಾರ್ಥವ ಕೇಳು ೫

ದುರ್ವಾಸನೆ ನಾರುವ ಬೀಡು । ಇದು ।
ಸ್ಥಿರವಲ್ಲ ಎಂದಿಗು ಹಂಬಲ ಬಿಡು ।
ಹರಿದಾಸರ ಸಂಗ ಮಾಡು । ಇನ್ನು ।
ಹರಿನಾಮಗಳ ಕೊಂಡಾಡು ೬

ಆವಾವ ಜನ್ಮದಲಿ ನೀನು । ಒಮ್ಮೆ ।
ದೇವ ಎಂದೆನಲಿಕ್ಕೆ ನಾಲಿಗಿತ್ತೇನು ।
ಈ ಉತ್ತಮವಾದ ಈ ತನು । ಬಂತು ।
ಕೋವಿದನಾಗಿ ಶ್ರೀ ಹರಿಯನ್ನು ಕಾಣು ೭

ಆ ಮರ ಈ ಮರ ಎನಲಾಗಿ । ಅವನ ।
ತಾಮಸದ ಜ್ಞಾನ ಪರಿಹಾರವಾಗಿ ।
ಸ್ವಾಮಿಯ ದಯದಿಂದ ಮಹಯೋಗಿ । ಎನಿಸಿ ।
ಭೂಮಿಯೊಳಗೆ ಬಾಳಿದನು ಚನ್ನಾಗಿ ೮

ಭಂಗಮಾಡುವಾಗ ದ್ರೌಪದಿ । ಸಿರಿ ।
ರಂಗ ಯೆನಲಾಗಿ ಕಾಯ್ದ ಶ್ರೀಪತಿ ।
ಕಂಗಡದಲೆ ಪುರಂದರನ ಅಂತರಂಗ
ವಿಜಯವಿಠ್ಠಲ ನಂಬು ೯

೫೦೨

ಅರಿವರಿಗಿಲ್ಲೆ ಹರಿಪುರವೊ । ಹರದಾರಿ
ಕೂಗಳತಿ ಎಂಬೊ ಸಂಶಯಸಲ್ಲಾ ಪ

ಸಮಚಿತ್ತದಲ್ಲಿ ಇದ್ದು । ಸಮ ವಿಷಮ ತಿಳಿದೆದ್ದು ।
ಕುಮತ ಮತವನು ವದ್ದು । ಬಲು ಉಬ್ಬೆದ್ದು ।
ಕಮಲ ಪೀಠನ ಹೊದ್ದು । ಕ್ರಮಣಿ ಯೋಪಾದಿಯಲಿದ್ದು ।
ತಮಕ್ಕೆ ಹರಿನಾಮ ಮದ್ದು । ಶ್ರಮ ಕಳುಕದವಗೆ ೧

ಭಾಗವತರ ನೋಡಿ । ವೇಗ ಮನಸನು ಮಾಡಿ ।
ಬಾಗಿ ಸಿರವನೆ ನೀಡಿ । ನಲಿದು ಪಾಡಿ । ಯೋಗವಾಗದೆ ಕೂಡಿ ।
ಭೋಗವನು ಈಡಾಡಿ । ತೂಗಿ ಮೈಯಲಾಡಿ ಪುಣ್ಯದನವನಿಗೆ ೨

ಹರಿ ಭಕುತಿಯ ಬೇಕು । ನರಹರಿಯ ಸ್ಮರಣೆ ಬೇಕು ।
ಹರಿಕಥಾ ಬೇಕು । ಹರಿ ಎನಲಿ ಬೇಕು ।
ಹರಿಯ ಭಜಿಸಲಿ ಬೇಕು । ಹರಿವೊಲಿಮೆ ಇರಬೇಕು ।
ಹರಿಯಲ್ಲದಿಲ್ಲೆಂದು ಹರಿದು ನುಡಿದವನಿಗೆ ೩

ಆಸಿಯನು ಕಳೆದು । ದುರ್ವಾಸನೆ ಹಮ್ಮು ಕಳೆದು ।
ಕ್ಲೇಶವನು ಅಳಿದು । ತೋಷದಲಿ ಬೆಳೆದು ।
ದೋಷರಾಶಿಗೆ ಮುಳಿದು । ದೂಷಕರನೆ ಅಳಿದು ।
ಭೇಷಜವನೆ ಅಳಿದು । ದಾಸರ ಬಳಿಗೆ ಸುಳಿದವಗೆ ೪

ಆಚಾರವನು ಪಿಡಿದು । ಸೂಚನೆ ಅರಿತು ನಡೆದು ।
ವಾಚಗಳ ಮಿತಿ ನುಡಿದು । ನಾಮಗುಡಿದು ।
ನಾಚಿಕೆಯ ತೊರೆದು । ಸಿರಿ ವಿಜಯವಿಠ್ಠಲರೇಯನ ।
ಯೋಚನಿಂದಲಿ ಬಿಡದೆ । ದಿನವ ಹಾಕುವನಿಗೆ ೫

೫೦೩

ಆರೇನು ಮಾಡುವರು ಅವನಿಯೊಳಗೆ ।
ಪೂರ್ವಜನ್ಮದ ಕರ್ಮ ಫಣಿಯಲ್ಲಿ ಬರೆದುದಕೆ ಪ

ಮಾಡಿದಡಿಗಿಯು ಕೆಡಲು ಮನಿಯ ಗಂಡನು ಬಿಡಲು ।
ಕೂಡಿದ ಸತಿ ತನ್ನ ಕುಣಿಸ್ಯಾಡಲು ನಿಜದಿ ॥
ಗೋಡೆಗೆ ಬರೆದ ಹುಲಿ ಘಡಘಡನೆ ತಿನಬರಲು ।
ಆಡಿದ ಮತುಗಳು ಅಖಿಳಿರು ನಿಜವೆನಲು ೧

ಹೊಲ ಬೇಲಿ ಮೆಯ್ದರೆ ಮೊಲ ಇರಿಯ ಬಂದರೆ ।
ತಲೆಗೆ ತನ್ನ ಕೈ ಪೆಟ್ಟು ತಾಕಿದರೆ ॥
ಹೆರಳು ಹಾವಾದರೆ ಗೆಳೆಯ ರಿಪುವಾದರೆ ।
ಕಲಿಸಿದ ಅವಲಕ್ಕಿ ಕಲಪರಟಿ ನುಂಗಿದರೆ ೨

ಹೆತ್ತ ತಾಯಿ ಹಿಡಿದು ಮಕ್ಕಳಿಗೆ ವಿಷ ಹಾಕಿದರೆ ।
ಪೆತ್ತ ತಂದೆಯು ಹೊರಗೆ ಮಾಡಿದರೆ ॥
ತೊತ್ತು ಅರಸಿಗೆ ಪ್ರತ್ಯುತ್ತರವನಾಡಿದರೆ ।
ಕತ್ತಲೆ ಬೆನ್ನಟ್ಟಿ ಕರಡ್ಯಾಗಿ ಬಂದರೆ ೩

ಕಣ್ಣವೊಳಗಿನ ಗೊಂಬಿ ಕಾದ ಬಂದರೆ ।
ಹೆಣ್ಣಿನ ಹರಟೆ ಹೆಚ್ಚಾದರೆ ।
ಅನ್ನವನು ಉಣ್ಣಲು ಅಜೀರ್ಣವಾದರೆ ।
ಪುಣ್ಯಕ್ಷೇತ್ರಗಳಲ್ಲಿ ಪಾಪ ಅಟ್ಟಿಸಿದರೆ ೪

ಏರಿ ಕುಳಿತ ಕುಂಬಿ ಎರಡಾಗಿ ಮುರಿದರೆ ।
ವಾರಿಧಿಗಳು ಮೇರೆ ಮೀರಿದರೆ ॥
ಆರಿದ ಇದ್ದಲಿಗಳು ಅಗ್ನಿಯಾದರೆ ।
ನಮ್ಮ ವಿಜಯವಿಠ್ಠಲನಿರುವ ತನಕ ೫

೫೦೪

ಆವ ಜನುಮದ ಪಾಪ ವೊದಗಿತೋ ಎನಗಿಂದು ।
ದೇವ ಗಂಗೆಯ ನೋಡಿದೆ ಪ

ದೇವಕೀಸುತ ಒಲಿದು ಕರೆತಂದು ಎನ್ನನು ।
ಪಾವನ್ನ ಮಾಡಿದನು ಇನ್ನೂ-ಮುನ್ನೂ ಅ.ಪ

ಗುರುಗಳನು ವಹಿಸಿ ಭೂಸುರರಿಗೆ ಕಠಿಣ । ಉ-
ತ್ತರ ಪೇಳಿಸಾಗಿದ್ದನೊ ।
ವರ ಬ್ರಾಹ್ಮಣರ ತಪ್ಪು ಬಲು ಇರಲು ಇಲ್ಲದೇ ।
ಸರಿಯೆಂದು ಸ್ಥಾಪಿಸಿದೆನೊ ।
ಮುರಿವ ಲಗ್ನಕೆ ಪೋಗಿ ಪುಸಿ ದ್ರವ್ಯವನೆ ಪೇಳಿ ।
ಮರಳಿ ಪೂರ್ತಿಸಿ ಇದ್ದೆನೊ ।
ವರ ವಿಪ್ರರಿಗೆ ವಧೆಯು ಬರಲು ಸಾಕ್ಷಿಯಾಗಿ ।
ಪರಿಹರಿಸಿ ಬಂದಿದ್ದನೋ ಏನೋ ೧

ಘನ ತೀರ್ಥಯಾತ್ರೆಗೆ ಪೋಗುವಾಗ-ಲು । ವಂ
ಚನೆ ಕರ್ಮ ಮಾಡಿದ್ದೆನೊ ।
ಜನಪತಿಗಳ ಮಾತು ಕೇಳದೆ ಧರ್ಮಕ್ಕೆ ।

ಅನುಕೂಲನಾಗಿದ್ದೆನೊ ।
ಮನೆಗೆ ಬಂದತಿಥಿಗಳು ಜರಿದು ಪಿತ್ರಾದ್ಯರಿಗೆ ।
ಉಣಿಸಿ ಸುಖಪಡಿಸಿದ್ದೆನೊ ।
ವನಗಳನು ಕಡಿದು ದೇವಾಲಯವ ಕಟ್ಟಿಸಿ ।
ಕ್ಷಣ ಕ್ಷಣಕೆ ಅರ್ಚಿಸೆದೆನೋ ಏನೊ ೨

ಉತ್ತಮನು ಮನೆಗೆ ಬಂದಾಗ ಮಾಡುವಂಥ ।
ಸತ್ಕರ್ಮ ತೊರೆದಿದ್ದೆನೋ ।
ಹೆತ್ತವರ ಬಾಂದವರ ಧನದಿಂದ ಕೆರೆ ಭಾವಿ ।
ಹತ್ತೆಂಟು ಕಟ್ಟಿಸಿದೆನೊ ।
ದತ್ತಾಪಹಾರವನು ಮಾಡಿ ಅದರಿಂದನಗ್ನಿ-
ಹೋತ್ರವನು ಸಾಧಿಸೆದೆನೊ ।
ಇತ್ತ್ಯಧಿಕ ನಿರ್ಬೀಜ ಪಾಪಗಳನೆಸಗಿ । ಕೃ–
ತಾರ್ಥನಾದೆನೊ ವಿಜಯವಿಠ್ಠಲನ್ನ ಕರುಣದಲಿ ೩

೫೦೫

ಆವ ಪರಿಯಲಿ ಹರಿಯ ವೊಲಿಸು
ಈ ಉಪಾಯವು ತೋರಿ ಕೊಡುವೆನು ಪ

ಉದಯದಲಿ ಎದ್ದೀಗ ಊರ ವಾರ್ತೆಯ ಬಿಟ್ಟು
ಮುದದಿಂದ ವೃಂದಾವನ ಸೇವಿಸಿ
ವದನದಲಿ ಶ್ರೀ ಹರಿಯನಾಮ ಗುಣಕಥೆಗಳನು
ಪದೋಪದಿಗೆ ಪಾಡಿ ಕೊಂಡಾಡು ನಲಿದಾಡು ೧

ಆಮೇಲೆ ದೇವರೆಡೆ ರಂಗವಾಲಿಯನಿಕ್ಕಿ
ಕಾಮುಕನಾಗದಲೆ ಸ್ನಾನ ಸಂಧ್ಯಾ

ನೇಮ ನಿತ್ಯವ ಮುಗಿಸಿ ದೇವತಾ ಪೂಜೆಗೈದು
ಪ್ರೇಮದಿಂದಲಿ ದಾನ ಕರದಲ್ಲಿ ಮಾಡೊ ೨

ಮಂಗಳ ಮೂರುತಿಯ ಅಂತರಂಗದಿ ನಿಲಿಸಿ
ಶೃಂಗಾರದುಡಿಗೆ ಇಡಿಗಿಯನು ತೊಡಿಸಿ
ಮಂಗಳಾರುತಿ ಬೆಳಗಿ ಮನದಲ್ಲಿ ನಲಿನಲಿದು
ಕಂಗಳಿಂದಲಿ ನೋಡು ಹರಿಯ ಕೂಡಾಡು ೩

ಮೂಲ ಗುಣ ಅವತಾರ ಮಹಿಮೆ ಮಹ ಉನ್ನತ
ಲೀಲೆ ವಿನೋದ ಅತಿ ಆಶ್ಚರ‍್ಯವ
ವ್ಯಾಳವ್ಯಾಳೆಗೆ ಪೋಗಿ ಉತ್ತಮ ಜ್ಞಾನಿಗಳಿಂದ
ಕೇಳು ಕರ್ಣದಲಿ ಪರಮ ಹರುಷದಲೆ ೪

ಹರಿಚರಣಕ್ಕೇರಿಸಿದ ಶಿರಿ ತುಲಸಿ ಚಂಪಕ
ವರ ಜಾಜಿ ಮಲ್ಲೆ ಮಲ್ಲಿಗೆ ಕ್ಯಾದಿಗೆ
ಪರಿಪರಿ ಗಂಧ ಚಂದನ ದಿವ್ಯ ಪರಿಮಳ
ಸರಕು ನಾಶಿಕದಲ್ಲಿ ಕೊಳ್ಳು ಸುಖ ಬಾಳು ೫

ಅಶಿವರುಣ ಮಧ್ಯ ತ್ರಿವೇಣಿ ವಿಷ್ಣುಪಾದ
ಎಸೆವ ಕುರುಕ್ಷೇತ್ರ ಅಯೋಧ್ಯ ಮಾಯಾ
ವೃಷಭ ಗಿರಿ ಶ್ರೀರಂಗ ಕಂಚಿ ಮೊದಲಾಗ್ಯುಳ್ಳ
ಹೆಸರಾದ ಪುಣ್ಯನಿಧಿ ಮಟ್ಟು ದುರಿತವ ಕುಟ್ಟು ೬

ಬೇಸರದಲೀಪರಿಚರಿಸಿದರೆ ಜನನಾದಿ
ನಾಶನವ ಮಾಡಿ ನಾರದವರದನು
ದಾಸ ಪುರಂದರಗೆ ವೊಲಿದಂತೆ ವಿಜಯವಿಠ್ಠ
ಲೇಶ ವೆಂಕಟ ನಿನಗೆ ಪರಮ ಪದವೀಯನೀವ ೭

೫೦೬

ಈ ಕಾಯ ಬಲು ಹೇಯವೊ ।
ಸಾಕು ಸಾಕು ಸಂಸಾರ ನೆಚ್ಚದಿರು ಎಚ್ಚರಿಕೆ ಪ

ಊರ್ಧ್ವಾಧೋ ಭಾಗದಿಂದ ಕೂಡಿದಾ ರಕ್ತಶುಕ್ಲ ।
ಅರ್ಧರ್ಧ ಪ್ರವೇಸಿಯಾಗಿ ।
ವರ್ಧನಾಗಿ ಮಾಂಸ ಪಿಂಡಿಕೆಯಲಿ ಬೆಳೆದು ।
ಅರ್ಧವದೊಳಗೆ ಬಳಲುವುದೇನೊ ಮಹಾ ಕಠೀಣಾ ೧

ಸನ್ನಿರೋಧವಾದ ಪ್ರಾದೇಶದಲಿ ನೀನು ।
ಬನ್ನ ಬಡುವದು ಜನಕೆ ಅರಿಯನಲ್ಲಾ ।
ಮುನ್ನೆ ಇಂದ್ರನಿಗಾಗಿ ವರವಿತ್ತ ಸಂಪತ್ತು ।
ಇನ್ನು ನಿನ್ನ ಸುತ್ತ ಬಂದದೆ ತಿಳಿದುಕೋ ೨

ಕಫ ಶ್ಲೇಷ್ಮ ಪಿತ್ತ ವಾತ ಶೈತ್ಯಜ್ವರ ಕೆಮ್ಮು ।
ಸಪುತ ಧಾತುಗಳಿಂದ ಬರುವ ರೋಗ ।
ಅಪರಿಮಿತವಾದ ತನು ಕ್ಲೇಶ ಮೋಹಗಳೊಡನೆ ।
ತಪಿಸುವುದು ನೋಡು ಅನುಗಾಲ ಬಿಡದು ಮಾಯಾ ೩

ಕಾಮ ಮದ ಗರ್ವದಲಿ ಪುಂಜನಾಗಿ ದುರಳ ನಿ ।
ಜ ಮಗಳ ಕೂಡ ಬೆರದಾಡಿ ಬೆರೆದು ।
ರೋಮರೋಮ ವಿಷಯ ಪೂರ್ತಿಯಾಗಿ ಚರಿಸಿ ।
ಪಾಮರನಾಗಿ ಬಳಲದಿರು ಬಹು ಜೋಕೆ ೪

ಸತಿ ಸುತರು ಮಿಕ್ಕಾದ ಬಂಧುಗಳು ನೆರೆನೆರೆದು ।
ಪ್ರತಿದಿವಸದಲಿ ಅಟ್ಟುವುದು ನೋಡು।
ಮತಿ ಚಂಚಲವಾಗಿ ಸತ್ಕರ್ಮ ವೃತ್ತಿಗೆ ।
ಪ್ರತಿಕೂಲವಾಗುವದು ಪ್ರೀತಿಯಾಗದು ಮುಂದೆ ೫

ಎಂತು ನೋಡಲು ವಿಷಯ ಅನುಭವಿಸಿದರು ಅದರ ।
ಅಂತು ಕಂಡವರಾರು ವಲ್ಲೆನೆಂದು ।
ಭ್ರಾಂತಿಯಿಂದಲಿ ತಿರುಗಿ ಬಯಲಾಗೋದಲ್ಲದೆ ।
ಚಿಂತೆ ಇಷ್ಟಷ್ಟು ಏನೆಂದು ಪೇಳಲಿ ೬

ಯಲೋ ಮನವೆ ಸಾರಿ ಪೇಳಿದೆನು ಚನ್ನಾಗಿ ನೀ ।
ನೆಲೆ ಮಾಡಿಕೋ ಜ್ಞಾನ ಭಕುತಿ ವಿತ್ತಾ ।
ಸುಲಭ ದೇವರ ದೇವ ವಿಜಯವಿಠ್ಠಲರೇಯ ।
ಕೆಲಕಾಲ ನೆನೆದು ಸುಖಿಯಾಗು ಸುಜನರಾ ಕೇಳು ೭

೫೦೭

ಎಂದೆಂದಿಗೂ ಎರಡು ಒಂದಾಗವು ।
ಒಂದೆ ಕುಲದಲಿ ಜನಿಸಿದ ಪಕ್ಷಿಗಳು ಪ

ಒಂದೇ ರೂಪಪಕ್ಷಿ ಒಂದರಲಿ ತಿರಗೋವು ।
ಒಂದೀಗ ಪಂಚವರ್ಣದ ಕೋವಿದಾ ॥
ಒಂದೆಲ್ಲ ಸಮನೆಂದು ಪೇಳುತ ಬದುಕುವುದು ।
ಒಂದಕ್ಕೆ ಗುರುತು ಮತ್ತೊಂದಕ್ಕೆ ಯಿಲ್ಲ ೧

ಒಂದೇ ಕೊಂಬಿನಲಿ ಎರಡು ಸೇರಿಕೊಂಡು ।
ಒಂದು ಸಾರವನುಂಬದೊಂದರಿಯದು ॥
ಒಂದು ಬುದ್ಧಿಯಲ್ಲಿಪ್ಪದೊಂದು ಇರಲೊಲ್ಲದು ।
ಒಂದು ನಾನೆಂಬೋದು ಮತ್ತೊಂದು ಪೇಳದು ೨

ಒಂದೀಗ ತನ್ನ ಫಲ ಪರರಿಗೆ ಕೊಡುವದು ।
ಒಂದು ತನ್ನ ಫಲ ತಾ ತಿಂಬೋದು ॥
ಒಂದು ಏರು ಇಳಿವ ಮೆಟ್ಟಗಳು ಬಲ್ಲದು ।
ಒಂದೀಗ ಕಾಣದೆ ಕಮರಿ ಬೀಳುವದು ೩

ಒಂದು ಸುಡಗಾಡು ಸಿದ್ಧ ಎಂದು ಕೂಗುವದು ।
ಒಂದು ಕೂಗುವದು ಪ್ರಸಿದ್ಧನೆಂದು ॥
ಒಂದು ಬೆಳೆದಿಂಗಳೊಳು ಹರುಷದಲಿ ಆಡುವದು ।
ಒಂದು ಕತ್ತಲೆಯೊಳು ಆಡುವುದು ನಿತ್ಯಾ ೪

ಒಂದಕೆ ಒಂದು ಸಂವಾದವನು ಮಾಡುವವು । ಹಾರುವುದು ।
ಒಂದು ಅರಿಯದು ಬಾಂಧವ ಪುರಂದರ ವಿಜಯವಿಠ್ಠಲನ್ನ ।
ಒಂದು ಪೊಂದಿತು ।
ಒಂದು ಪೊಂದದಲೆ ಹೋಯಿತು ೫

೫೦೮

ಎಲ್ಲಿ ಸುವರಗಳು ಇಲ್ಲದಿದ್ದರೆ ಇವ ।
ನಲ್ಲದೆ ಮತ್ತಾರಾ ।
ವಲ್ಲಿ ಕಾಣದೆ ಪೋದೆ ಪ

ಸಾರುವ ಶರೀರ ಧರಿಸಿ ಬಾಳಿದ ಮಹಾ ।
ಭಾರವಾಗಿದ್ದ ಪಾಷಾಣವ ಪೊತ್ತವ ।
ಗೊರುವ ನೆಲನಂದು ಕಾಷ್ಟದಿಂದಲಿ ಬಂದ ।
ಹಾರುವನಾಗಿ ತಿರದುಂಡು ಕುಲಧರ್ಮ ।
ಮೀರಿ ನಡೆದವ ಉಪವಾಸದವನಿಂದ ।
ಊರ ಎಂಜಲಿಗೆ ಹೇಸದೆ ಓಡಾಡಿದವ ।
ನಾರಿಯರ ವ್ರತ ಕೆಡಿಸಿ ರಾವುತನಾಗಿ ।
ಹಾರಾಡಿವನು ಇವ ಹಲವು ಕಾಯ ।
ಆರಿಂದ ಜನಿತನಿವ ನೋಡಲಾಗಿ ।
ಧಾರುಣಿಯೊಳಗಿದ್ದವ ಸರ್ವರನ್ನ ।
ಮೀರಿ ನಡೆತಲಿದ್ದವ ಇವಗೆ ಮೆಚ್ಚಿ ।
ಧಾರಿ ಎಂದ ನಿನ್ನ ಮಗಳೆ ಬೇಕೆಂದವ ೧

ಬಿರಿಗಣ್ಣೆನವನಿವ ಆವಾವ ಕಾಲಕ್ಕೆ ।
ಶಿರವಾಗಿ ಕೊಂಡಿಪ್ಪ ಶೀಲ ಸ್ವಭಾವದಿ ।
ಕೊರಳ ತಿರುಹಲಾರ ಕರುಳ ಮಾಲೆಯುವ ।
ಪರರ ಬಾಗಿಲ ಕಾವರಾಜ್ಯವಿಲ್ಲದವ ।
ಸುರರ ಕೋತಿಯ ಮಾಡಿ ಕುಣಿಸಾಡಿದವನಿವ ।
ಕರಡಿಯ ಮಗಳನ್ನು ಕೂಡಿದವನಿವ
ದಿಗಂಬರನಾಗಿ ಚರಿಸಿದೆನೆಂದು ಕೋಪದಿಂದ ।
ಕರವಾಳ ಹಸ್ತದವ ॥
ಪರಾಕ್ರಮ ಉರಗನ್ನ ಮೇಲಿದ್ದವ ಇವನ ಖೂನ ।
ಅರಿಯನು ದಾವದಾವ । ಭೇದವನಿಕ್ಕಿ ।
ತಿರುಗಿಸುವನು ಲೋಕವ ವಂಚಕನಿಗೆ ।
ಪರಮ ಪ್ರೀತಿಯಿಂದ ಕೊಟ್ಟದನೆಣಿಸುವ ೨

ತನ್ನ ಜಾತಿಗಳನ್ನು ನುಂಗುವನವನಿವ ।
ಬೆನ್ನ ಮೇಲಿನ ಒಂದೆ ಬುಗುಟಿ ಪಲ್ಲಿನ ತುದಿ ।
ಮಣ್ಣು ತೋರುವನಿವ ವಿಕಾರ ಮೊಗದವ ।
ಕಣ್ಣು ಚುಚ್ಚಿದ ಒಬ್ಬ ಹಾರವನ್ನು ನೋಡಿ ।
ಹೆಣ್ಣಿಗಭಯವಿತ್ತು ಕಾದಿ ಸೋತವನಿವ ।
ರಣ್ಯ ವಾಗನಿವ ರಣದೊಳೋಡಿದನಿವ ।
ಅನ್ಯಾಯ ಪೇಳಿದ ನಂಬಿದವರಿಗೆ ।
ಮುನ್ನೆ ಕುದುರಿಯೇರಿದಾ ಇವನು ತಾನೆ ।
ಅನಂತ ಮಾಯಮೋದಾ ಎಂಥವರಲ್ಲಿ ।
ಚನ್ನಾಗಿ ತನ್ನ ಪಾದ ಇಟ್ಟು ಇದ್ದು ।
ಕಣ್ಣಿಗೆ ಪೊಳಿಯೆ ಖೇಡ ಬಡಿಸವಂಥ ।
ಬಣ್ಣಾಣಿಗಾರನು ಬಂದೆಲ್ಲಿ ದೊರಕಿದಾ ೩

ಮೀಸಿ ಕಟ್ಟಿಸಿಕೊಂಡಿವನೀವ ಪ್ರಳಯಾದಿ ।
ದ್ವೇಷವನಿಕ್ಕಿದ ದೇವದಾನವರಿಗೆ ।
ಏಸು ದಿವಸವಾಗೆ ಅದೋ ದೃಷ್ಟಾಯವನಿವ ।

ಭೀಷನಣದನಿವ ಭಿಕ್ಷೆ ಪಾತ್ರಿಯವ ।
ಮೋಸ ಮಾಡಿದ ತನ್ನ ಸೇರಿದವನ ಶರಾಸವ
ಬಿಗಿಯನೆ ಮುರದು ಬಿಟ್ಟವನಿವ ।
ಕೂಸಾಗಿ ಕ್ರೂರದ ಕೊಂಡ ಲಜ್ಜೆಗೇಡಿ ।
ಘಾಸೆತನಕೆ ಶೂರನು ಒಮ್ಮ್ಯಾದರು ॥
ಲೇಸು ಒಬ್ಬರ ಬೇಡನು ದೊಡ್ಡವರುಪಹಾಸ
ಮಾಡುತಲಿಪ್ಪನು ಇವನು ಹೆಣ್ಣು ।
ವೇಷ ಧರಿಸಿಕೊಂಬನು ಕೇವಲ ಅವ ।
ಕಾಶ ಯಿಲ್ಲದ ಸ್ಥಾನದಲ್ಲಿ ವೊಂದಿಪ್ಪನು ೪

ದೃಷ್ಟಿ ಮುಚ್ಚದಿಪ್ಪನವನಿವ ಆವಾಗ ।
ಬೆಟ್ಟವೆ ಗತಿ ಎಂದು ಸೇರಿಕೊಂಡವನಿವ ।
ದಿಟ್ಟ ಕಠೀಣ ಕಾಯದವನಿವ ಎದುರಿಗೆ ।
ಎಷ್ಟಗಲ ಬಾಯದೆರೆದಿಪ್ಪ ಪಾದದ ।
ಬಟ್ಟಿನಿಂದಲಿ ನೀರು ಸುರಿಸುವ ಬಗೆ ಉಂಟು ।
ಕುಟ್ಟಿ ಮಾತೆಯ ಶಿರ ಕೆಡಹಿದನಿವ ಜಡೆ ।
ಗಟ್ಟಿಪ್ಪ ಚೋರನಾಯಕ ಮೌನಪ್ರಾಂತಕ್ಕೆ ।
ದುಷ್ಟನೆನಿಸಿ ಮೆರೆವ ಹತ್ತದೆಂದು ॥
ಅಟ್ಟಿಬಿಟ್ಟರೆ ಬರುವ ತನ್ನೆಲ್ಲಿಗೆ ।
ಕೆಟ್ಟವರನ ಕರೆವ ಉತ್ತಮರನ್ನು ।
ಬಿಟ್ಟು ನೀಚರ ಪೊರೆವ ಅವಸರ ಬರಲು
ಪಟ್ಟದ ರಾಣಿಗೆ ಪೇಳದೆ ಜವಾ । ೫

ಜಲದೊಳಗಾಡುವನಿವ ಹೊರೆ ಹೊತ್ತು ।
ಕಲೆಪರಟಿಯಾಗಿ ತಿರುಗುವನಿವ ಮೂಗಿಲ್ಲಿ ।
ಳಿದು ಬಂದವನಿವ ಗೊಗ್ಗರ ಧ್ವನಿಯವ ।
ತಲುವರಿ ಇವ ತಾನೆ ಶಿಷ್ಯಗೆ ವಿದ್ಯವ ।
ಕಲಿಸಿ ಶ್ಯಾಪವ ಕೊಟ್ಟನವನಿವ ವೈರತ್ವ ।
ಬಳಸದವನ ಮೇಲೆ ಕಲ್ಲು ಹಾಕಿಸಿದವ ।

ಬಲು ಭಂಡುಗೋವಳ ಅನ ಬರದದು ಬಿಟ್ಟು ।
ಕಲಿಯಾಗಿ ಓಡಾಡಿದ ।
ಹೆರರಿಗಾಗಿ ಸ್ತಳ ದ್ರವ್ಯವ ಮಾಡಿದಾ ದಾನವರಿಂದ ।
ಬಲವಾವನು ಬೇಡಿದಾ ಬೊಮ್ಮಾಂಡದ ।
ಒಳಗೆ ಹೊರಗೆ ಕಾಡಿದಾ ।
ಬಹು ಠಕ್ಕನು ।
ತಿಳಿದು ತಿಳಿದು ಈರ್ವರಿಗೆಯಲ್ಲಿ ನೋಡಿದಾ ೬

ಸವಿ ನೋಡದದರ ರೂಪನಾದವನಿವ ।
ಅವಯವಂಗಳೆಲ್ಲ ಮುದುರಿಕೊಂಡಿಪ್ಪಾನಿವ ।
ಅವನಿಗೋಡಿ ಪೋದನಿವ ಮೃಗವಲ್ಲ ಮಾ ।
ನವನಲ್ಲ ವದ್ಭೂತನಾಗಿ ತೋರುವನಿವ ।
ಬವರಿಗಾದವನಿವ ತನ್ನ ಕಾಲಕೆ ತಪ್ಪ ।
ಭವನವಿಲ್ಲದೆ ದಿನ ಕಳೆದವ ಯಾಗದ ।
ನ್ನವನುಂಡು ನಾನಾ ಶಸ್ತ್ರವನ್ನು ನುಂಗಿದವನಿವ ॥
ಹವಗಾಡಿಗ ನಿಸ್ಸಂಗ ಉದರದಲ್ಲಿ
ಯುವತಿ ಧರಿಸಿದ ಸಂಗಾ ಹಾ ।
ರುವ ಪಕ್ಕಿ ದಿವಸ ದಿವಸ ತುರುಗಾನಾಗಿಪ್ಪದು ।
ಅವಧೂತ ಮಾರ್ಗ ತುಂಗಾ ।
ಪರ್ವತವನು ।
ಲವಕಾಲಬಿಡದೆ ಬಾಯಲಿ ಕಚ್ಚಿದ ರಂಗಾ ೭

ಮಾರಧ್ವಜನನವತಾರ ತಾಳಿದನಿವ ।
ನೀರೋಳಗಡಿಗಿಪ್ಪ ಎರಡು ಭಾಗಗಲ್ಲಿ ।
ಕೋರೆಗಳದ್ದಿ ಮಸದು ಮತ್ಸರಿಸುತಿಪ್ಪ ।
ಚೀರಿ ಕೂಗುವ ಮಹಾ ಬೊಮ್ಮಾಂಡವಡದಂತೆ ।
ಮೂರಡಿಯೊಳಗೆ ತ್ರಿಲೋಕವನಿಟ್ಟವ ।
ಬೇರು ಕಡುವನಂತೆ ಕೊಡಲಿಕಾರನಿವ ।
ಆರೋಗಣಿಗೆ ಶಬರಿಯ ಹಣ್ಣು ಮೆದ್ದವ ।

ಜಾರ ಬುದ್ಧ ಉದ್ದಂಡಾ ಏಕನು ಇವ ॥
ಪಾರ ಪ್ರಾಣವನು ಕೊಂಡ ಬಹು ಕಡೆ ।
ಬೀರಿದನ್ನವ ಕೈಕೊಂಡಾ ಒಂದು ತುತ್ತು ।
ಆರಗೀಯದಲೆ ಉಂಡಾ ಇವನನ್ನು ।
ಹಾರೈಸಿದವರಿಗೆ ಏನು ಲಕ್ಷ ಹೆಚ್ಚಳ ಕಂಡಾ ೮

ಉದಕ ಬಿಟ್ಟರೆ ಬದುಕಲಾರದವನಿವ ।
ಎದೆಗಟ್ಟಿಯವನಲ್ಲಿ ಮುಟ್ಟಿ ನೋಡಿದರೆ ।
ಪೊದೆ ಪೊದರಿನೊಳು ಸೇರಿ ಕೊಂಡವನಿವ ।
ಎದುರಿಗೆ ಒಬ್ಬರ ಬರಗೊಡದವ ತನ್ನ ।
ಪದದ ಕೆಳಗೆ ಕೊಟ್ಟವನ ಇಟ್ಟವನಿವ ।
ಮದಕಾವ ಮಾಡಿ ತನ್ನೊಳು ತಾನೆ ಸೋತವ ।
ಸುದತಿಯುಳಟ್ಟಿದ ಪಾರ್ಥಗಾಳಾದ ।
ಚದುರ ಕ್ರೂರರಿಗೆ ಕ್ರೂರಾ ನಿರಂತರ ।
ಉದಧಿ ಎಂಬೊದೆ ಮಂದಿರಾ ಇವಗೆ ನೋಡು ।
ಬದರಿ ಗಿಡವೆ ಆಸರಾ ಏನೆಂಬೆನೊ ।
ಕದರು ಮೋರಿಯೆ ಶೃಂಗಾರ ತನ್ನಯ ಗುಣ ।
ಮೊದಲಿದೆ ಕಡೆ ಎಂದು ಆರಾರಿಗೆ ತೋರಾ ೯

ಚಪಲಾಕ್ಷದವನಿವ ಚಲುವನೆಂತೆಂಬೆನೆ ।
ವಿಪರೀತ ನಿದ್ರೆ ಮಾಡುವನಿವ ಕರೆದರೆ ।
ಕುಪಿತವಾಗುವ ಕಿಡಿ ಉಗುಳುವನಿವ ।
ಕಪಟದಲ್ಲಿ ಗಟ್ಟಿ ತಲೆ ಹೊಡಕ ರಾಮ ।
ಕಪಿಯ ಮೋಸದಿಂದ ಕೆಡಹಿದ ಮಾವನ್ನ ।
ನಿಪತನ ಗೈಸಿದ ।
ದೋಷಕ್ಕೆ ಶಂಕಿಸಾ ।
ತ್ರಿಪುರವ ಕೆಡಸಿದ ಹರಗೆ ಸಾಯುಕವಾಗಿ ।
ಅಪಕಾರಿ ಝುಗಳಗಂಟ ಒದಿಸಿಕೊಂಡ ॥
ವಿಪುಳದೋಳೇನು ಒಂಟಾ ಉಚ್ಚರಿಸುವೆ ।

ಕೃಪಣ ಜನರಿಗೆ ನೆಂಟಾಸನಕ್ಯಾದರ ।
ಶಪತದಲ್ಲಿಗೆ ಪೊರವಂಟಾ ಉತ್ತಮರಿಂದ ।
ಉಪದೇಶವಿಲ್ಲದ ಬಾಳುವ ಮಹಾತುಂಟಾ ೧೦

ಇವರೀರ್ವರಿಗೆ ಈಡೆ ತಪ್ಪಿಸಲು ಪದ್ಮ ।
ಭವಗಳವಲ್ಲವು ನಿನ್ನ ಕುವರಿಗೆ ।
ಸವಿಗಾರ ಇವನಲ್ಲದೆ ಮತ್ತಾವಾವಾ ।
ವಿವರಿಪೆ ಎಂಥವರಕೆ ಅಂಥ ಕನ್ನಿಕೆ ।
ಹವಣವಾಗಿದೆ ಸತ್ಯ ಸಂಕಲ್ಪವೆ ಸಿದ್ಧಾ ।
ಶ್ರವಣಾದಿ ಇಂದ್ರಿಂಗಳಿಗಗೋಚರಾ ।
ಸ್ಥವಿರ ಯೌವನ ಬಾಲ ಒಂದಾದರಿವನೆಲ್ಲಾ ।
ನವನವ ಬಗೆ ಸುಕಾಯಾ ॥ ಮೋಹನ್ನ ಯಾ ।
ದವರಾಯಾ ಶಿರಿ ವಿಜಯವಿಠ್ಠಲ ಕೃಷ್ಣ ।
ಶಿವಕುಲ್ಲ್ಯ ಪುರಿ ನಿಲಯಾ ಭಕ್ತರ ಪ್ರೀಯಾ ।
ಭವದೂರ ಬಹುಳ ಮಾಯಾ ಜಗದ್ಗುರು ।
ಪವನವತಾರ ಶ್ರೀ ಆನಂದ ಮುನಿಗೇಯಾ ೧೧

೫೦೯

ಏನಾದರೇನು ಮೋಕ್ಷವಿಲ್ಲ ಜ್ಞಾನವಿಲ್ಲದೆ ಪ

ವೇದ ಓದಿದರೇನು ಶಾಸ್ತ್ರ ನೋಡಿದರೇನು ।
ಕಾದಿ ಕಾದಾಡಿ ಗೆದ್ದರೇನು । ಜ್ಞಾನವಿಲ್ಲದೆ ೧

ಕಾಶಿಗೆ ಹೋದರೇನು ಕಾನನ ಸೇರಿದರೇನು ।
ಕಾಶಿ ಪೀತಾಂಬರ ಉಟ್ಟರೇನು, ಜ್ಞಾನವಿಲ್ಲದೆ ೨

ಜಪತಪ ಮಾಡಲೇನು, ಜಾಣತನ ಮೆರೆದರೇನು ।
ವಿಜಯವಿಠಲನ ಸಾರಿದರೇನು, ಜ್ಞಾನವಿಲ್ಲದೆ ೩

೫೧೦

ಕಟ್ಟೆಯ ಕಟ್ಟಿದರು ಭವ ಸಾಗರಕೆ ಸ್ವಲ್ಪ ಪ

ಬಿಟ್ಟು ವೇಗದಿಂದ ಸಾಧ್ಯ ಮಾಡಿಕೊಂಡು
ಮೆಟ್ಟಿಕೆಯಿಂದಲಿ ದಾಟಿ ಪೋದರು ಜಗ
ಜಟ್ಟಿ ದಾಸರು ತಮಗೆ ಸುಲಭವಾದದು ಯನಗೆ
ಇಟ್ಟುಪೋದರೆಯಿಂದು ಗುಟ್ಟು ತೋರುತಲಿದೆ ಸಾಧಾರಣವಲ್ಲ ೧

ದಿಟ್ಟವಾದಕ ವನಯನ್ನಿಂದಾದದಲ್ಲ
ಬಿಟ್ಟಿಯವರಿಗೆ ತಿಳಿಯಲಿಹದೆ
ಕೊಟ್ಟಿಗೆ ಮೇಲುಪ್ಪರಿಗೆಯಾಗುವದೆ
ಹುಟ್ಟಾರಭ್ಯವಾಗಿ ಮಂದನಾಗಿದ್ದವಗೆ
ಮಟ್ಟಯಿಲ್ಲದೆ ಬುದ್ಧಿ ಬರುವದೆಂತೊ
ಧಿಟ್ಟಳಿ ಮಹಿಮ ಶಿರಿ ವಿಜಯವಿಠಲ ಮನ
ಮುಟ್ಟಿ ಭಜಿಸಿದವ ದಾಸರ ಕರುಣವೆನ್ನಿ ೨

೫೧೧

ಕಲ್ಲಿನಿಂದ ಸರ್ವ ಫಲ ಬಾಹುದೊ । ಪ

ಕಲ್ಲು ಭಜಿಸಿದರೆ ಕೈವಲ್ಯ ತೋರುವುದೊ ಅ.ಪ

ಕಲ್ಲು ಕಡೆಯುತ್ತಿರಲು ಅಮೃತವೆ ಪುಟ್ಟಿತು ।
ಕಲ್ಲು ಎತ್ತಲು ಮಳೆಯೊಳೆಲ್ಲವರು ಉಳಿದರು ।
ಕಲ್ಲು ಹರಿಪಾದವನು ಸೋಕೆ ಹೆಣ್ಣಾಯಿತು ।
ಕಲ್ಲು ಲಂಕೆಗೆ ಮಾರ್ಗ ಚೆನ್ನಾಗಿ ಶೋಭಿಸಿತು ೧

ಕಲ್ಲಿನೊಳಗೆ ದೇವನೊಡಮೂಡಿ ಕಾಣಿಸುವ ।
ಕಲ್ಲು ಕೊರೆಯಲು ಮೂರ್ತಿ ಮಂತಾಹುದು ।

ಕಲ್ಲು ದೇವರ ಗುಡಿಗೆ ಗರುಡ ಗಂಬವು ಆಯ್ತು ।
ಕಲ್ಲು ಕೋಟ್ಯಾನು ಕೋಟಿಗೆಲ್ಲ ಬೆಲೆಯಾಯ್ತು ೨

ಕಲ್ಲೆಂದುಪೇಕ್ಷಿಸದೆ ಕಾಲಕಾಲದಿ ನಿಮ್ಮ ।
ಕಲ್ಲು ಮನಸನು ಬಿಟ್ಟು ಪೂಜೆಮಾಡಿ ।
ಕಲ್ಲಿನೊಳಗಿದ್ದು ಸಿರಿ ವಿಜಯವಿಠ್ಠಲ ಒಳ್ಳೆ ।
ಕಲ್ಲು ಪದವಿಯ ಕೊಟ್ಟು ಸತತ ಪಾಲಿಪನೊ ೩

೫೧೨

ಕ್ಲೇಶಮಾಡಲಿ ಬೇಡ ಮನವೆ ನೀನೂ
ದೇಶದೊಳಗೆ ಕೇಳು ಜ್ಞಾನಿಗಳ ಸಮ್ಮತಾ ಪ

ವಸಿಷ್ಠ ಮಹಾಋಷಿಗೆ ನೂರುಮಂದಿ ಸುತರು
ಅಸಮಸಾಹಸರು ಬಲು ಶೀಲಜ್ಞರು
ಕುಶಲದಲಿ ಇರುತಿದ್ದು ಕಾಲ ಮೃತ್ಯುವಿನ ಕೈ
ವಶವಾಗಿ ಹೋದರದು ನೋಡು ದುಃಖವ ಬಿಡು ೧

ಕೃಷ್ಣ ಸೋದರಮಾವ ಮತ್ತೆ ಭೀಮಸೇನ
ಜೇಷ್ಠಪಿತ, ಪಾರ್ಥನು ಪಡೆದ ಶೂರ
ಇಷ್ಟು ಜನ ಇರಲಾಗಿ ಅಭಿಮನ್ಯು ದೇಹವನು
ಬಿಟ್ಟು ಪೋಗಲು ಒಬ್ಬರಾದರು ಉಳುಹಿದರೆ ೨

ಇಂಥವರಿಗೀತ್ಯರನು ನಿನಗಾವ ಸ್ವಾತಂತ್ರ್ಯ
ಸಂತೋಷವೆ ಬಡು ಧೈರ್ಯದಲ್ಲಿ
ಕಂತು ಜನಕ ನಮ್ಮ ವಿಜಯವಿಟ್ಠಲನಂಘ್ರಿ
ಅಂತರಂಗದಲಿಡು ಮುಂದಿನಗತಿ ಬೇಡು ೩

೫೧೩

ಚಿಂತೆಯಾತಕೆ ನಿನಗೆ ಎಲೆ ಪ್ರಿಯಳೆ ।
ಸಂತತ ತಿಳುಪುವೆನು ಭಕುತಿಯಿಂದಲಿ ಕೇಳು ಪ

ಈ ಭೋಗ ನಮಗೆ ಯಾಕೆಂದು ನೀ ಕೇಳುವಿಯಾ ।
ಲಾಭವಲ್ಲದ ಇದು ನೋಡುವದಕೆ
ಶ್ರೀ ಭೂರಮಣ ತಾನೆ ತಂದಿತ್ತ ವಿಚಿತ್ರ
ವೈಭೋಗವಲ್ಲೆನೆಂದರೆ ಬಿಡದು ರಮಣೀ ೧

ಹಿರಿಯರು ಈರ್ವಗೆ ಮಾಡಿದ ನಿಷ್ಠೆ ವಿ
ಸ್ತರ ಪುಣ್ಯ ಬಂದು ಈ ಪರಿ ಸೌಖ್ಯವ
ಹಿರಿದಾಗಿ ಕೊಟ್ಟು ನಮ್ಮನು ಪಾಲಿಸುವುದು ಬಲು
ಮೊರೆಯಿಟ್ಟರೆ ಕೇಳು ಹರಿಯ ಮಹಿಮೆಗೆ ನಮೋ ೨

ಕ್ಷೀರಸಾಗರದೊಳಗೆ ಓಲ್ಯಾಡುವವನ ವಿ
ಚಾರಮಾಡದೆ ತಂದು ಹೃದಯಮಧ್ಯ
ಸೇರಿಸುವಂದದಿ ಎನಗೆ ಇಲ್ಲಿಹ್ಯದು ಸಂ
ಸಾರದೊಳಗಿದ್ದ ಸುಖವಿನಿತುಂಟು ರಮಣೀ ೩

ಸಂತಾನವಿಲ್ಲೆಂದು ಈರ್ವರೂ ಚಿಂತಿಪದ್ಯಾಕೆ
ಪಿಂತೆ ಕಾಂತಾರದಲಿ ಬಾಲಮೃಗನ
ಅಂತಕನ ಪುರಿಗೆ ಅಟ್ಟಿದ ದೋಷದಿಂದ ನಮ–
ಗಿಂತು ತೋರಿತು ಗುಟ್ಟು ಪೇಳಬಾರದು ರಮಣೀ ೪

ಈ ಜನ್ಮ ಬಂದದಕೆ ಇನ್ನಾದರೆಚ್ಚೆತ್ತು
ಮಾಜಿಕೊಂಡಿದ್ದು ಜನರಂತೆ ನಡದು
ಮೂಜಗತ್ಪತಿ ಸಿರಿ ವಿಜಯವಿಠ್ಠಲನ ಸ
ರೋಜ ಚರಣವನು ಪೂಜಿಸುವೆನು ರಮಣೀ ೫

೫೧೪

ಚಿಂತೆಯಾತಕೆ ಮನವೆ ನಿನಗಿದು ಸತತ ಸಲ್ಲದು ಕಾಣೊ
ನಿಂತು ಪುರಂದರ ದಾಸರನುದಿನ ಇಂತು ಬಗೆಯಲಿ ಪಾಲಿಸೊ ಪ

ಅಗ್ರ ಬುದ್ಧಿಯ ತಾಳು ನಿನಗೆ ಸಾ
ಮಗ್ರಿ ಆಲೋಚನಿ ಯಾತಕೆ ಸ
ಮಗ್ರ ಸೋಪಸ್ಕರವನು ಅನುಗ್ರಹವನು ಮಾಡುತಾ
ಉಗ್ರ ಮನುಜರ ಕೂಡಿಸದೆ ಪಾ
ಣಿಗ್ರಹ ಮಾಡಿಪ (ರಾವ) ಗವುಗಾದರೂ
ಅಂದು ಪೊಗಳಲು ಶೀಘ್ರದಲಿ ನಿಂದಿಹರೊ ೧

ಹರಿಗುರುಗಳ ಸಂಕಲ್ಪ ತಪ್ಪದು
ಗಿರಿಗಹ್ವರದೊಳಗಿದ್ದರು ಅದು
ಬರಿದೆಯಾಗದು ಕೇಳು ಸ್ಮರಿಸಿ ಬಳಲಿ ನಲಿದಾಡಿ
ಸುರ ನರೋರುಗ ಏಕತ್ರಗಳ ಮಾಡಿ ಶರಣರಿಂದಾಳಿಸುವ ನಿಶ್ಚಯ
ಪರಿದ ಕಾಲಕೆ ಬಿಡದೆ ಅಹಿಕದ ಚರಿತೆ ಅವರಿಗೆ ಗಣಣೇನೊ ೨

ತೆತ್ತಗಿನ ಸ್ವಭಾವ ಆವದೊ ಎತ್ತಲಟ್ಟಿದರತ್ತ ತೊಲಗದೆ
ಹೊತ್ತುಹೊತ್ತಿಗೆ ಪೋಗಿ ಬಾಗಿ ತೊತ್ತಿನಂದದಿ ಪ್ರಯೋಜನ
ಹೊತ್ತು ಮೀರದೆ ಮಾಳ್ಪುದು ಧರ್ಮ
ಮೊತ್ತವಲ್ಲದೆ ಇನ್ನೊಂದಿಲ್ಲವೊ
ಇತ್ತ ಭಾಗ್ಯವಿತ್ತ ನಿರ್ಮಳ ಚಿತ್ತದಲಿ ಅರ್ಪಿಸುತಿರು ೩

ನೀನು ಮಾಡಿದ ಪುಣ್ಯಗಳಿಗೆ ತಾ ನಡದು ಬರುವುದೇ ಮರುಳೆ
ನಾನಾ ಪರಿಯಲಿ ತಿಳಿದು ನೋಡು
ಧ್ಯಾನದಿಂದಲಿ ದಿನಪ್ರತಿ ಜ್ಞಾನನಿಧಿ ನಿಜಗುರು
ಶಿರೋಮಣಿ ಅನಂತಾನಂತ ಜನುಮದಲೀಗ
ಗಾನಮಾಡಿದ ನಿಷ್ಟ ಪುಣ್ಯವು ತಾನೊಲಿದು ಫಲವಿತ್ತದೋ ೪

ಕಲ್ಲು ಕರಗಿಸಿ ಬೆಣ್ಣೆ ತೆಗುವಂಥ ಬಲ್ಲಿದರು ನಿನ
ಗೊಲಿದಿರಲು ಎಲ ಎಲ್ಲಿ ಇಲ್ಲವೆಂಬೊ
ಸೊಲ್ಲುಗಳಲ್ಲದೆ ಇದು ಸಲ್ಲದೊ
ಎಲ್ಲಿ ಇದ್ದರು ನಿನ್ನ ಬಳಿಯಲ್ಲಿ ಸಲ್ಲುತಿಪ್ಪದೊ
ಸಕಲ ಮನೋಭೀಷ್ಟಾ
ತುಲ್ಯ ವಲ್ಲಭ ಮಲ್ಲದಲ್ಲಣ ನಿಲ್ಲದಲೆ ವೊಲಿದಿಹನೊ ೫

ನೂನ್ಯಪೂರ್ಣವು ಅವರನ ಕೂಡಿ
ತನ್ಯೋಪಾಯವು ಯಾಕೆ ನಿನಗೆ
ಅನನ್ಯನಾಗಿರು ಆತ ನಿನಗೆ ರಾಜೆಂದು
ಕಣ್ಣೆವೆ ಇಡುವನಿತರೊಳು ಕಾರುಣ್ಯವರುಷಗರೆದು ಬಿಡುವ
ದೈನ್ಯವೃತ್ತಿಯ ಬಿಡಿಸಿ ನಿಷ್ಕಾಮ ಪುಣ್ಯವನಧಿಯೊಳಿಡುವರೊ ೬

ಊರ್ವಿಗೀರ್ವಾಣರಿಗೆ ಉಣಿಪುದು
ಗರ್ವವನು ತಾಳದಲೆ ಚೆನ್ನಾಗಿ
ಸರ್ವಬಗೆಯಲಿ ನಾನು ಎಂಬೊ ದುರ್ವಚನಗಳ ನುಡಿಯದೆ
ಪೂರ್ವೋತ್ತರವನು ತಿಳಿದು ಸರ್ವದ
ಪೂರ್ವತನೆ ಬಯಸುತಾರಾಧಿಸು
ಶರ್ವಸನ್ನುತ ವಿಜಯವಿಠ್ಠಲ ಪೂರ್ವನೆಂತ ಪ್ರಬಲನೆ ೭

೫೧೫

ತಿಳಿದು ವಿಚಾರಿಸು ವಿಶ್ವದಲ್ಲಿ
ಹಲವು ಜೀವಿಗಳೊಂದೆ ಪ್ರಕಾರ ಚರಿಸುವದು ಪ

ಇರವು ನೊಣ ಪೋದರೆ ಏನಾದರೂ ಕ್ಲೇಶ
ಬರುವುದೇ ಪ್ರತ್ಯಕ್ಷ ನೋಡಿದರು
ಭರದಿಂದ ಆಲಿಸು ದೇಹ ಮಾತುರ ಬ್ಯಾರೆ
ಇರುವದಲ್ಲದೆ ಒಳಗೆ ಚೇತನಾಡುವದೊಂದೆ ೧

ಕೂಡಿಕೊಂಡವು ತಮ್ಮತಮ್ಮೊಳಗೆ ಭೂತಗಳು
ಆಡಲೇನದು ಪೂರ್ವದ ನಿರ್ಮಾಣ
ನಾಡೊಳಾಗಿದ್ದನಿತೆ ಸಮ್ಮಂಧವಲ್ಲದೆ
ಬೀಡು ತೊರದಾಮ್ಯಲೆ ಬಿಂಕವೆತ್ತಣದೊ ೨

ಹರಿಮಾಯದಿಂದಲಿ ನಾನು ನನ್ನದು ಎಂಬ
ಗರುವಿಕೆ ಪುಟ್ಟುವದು ಮೋಹ ಪೆಚ್ಚಿ
ನಿರಯದೊಳಿಳಿಯದೆ ವಿಜಯವಿಠ್ಠಲನ
ಸ್ಮರಣೆಯಲಿ ಕುಣಿದಾಡು ಎಲ್ಲ ಸಮನ ನೋಡು ೩

೫೧೬

ದುರಿತ ದುರ್ಗತಿಗೆ ಆವಾನಂಜನೊ
ಹರಿಯ ಕರುಣವೆಂಬ ಕವಚ ತೊಟ್ಟಿರಲಿಕ್ಕೆ ಪ

ಮಲಗಿ ಹೊರಳನೇಕೆ ಕುಳಿತುಕೊಂಡಿರನೇಕೆ
ಬಲುದೂರ ತಿರುಗಾಡಿ ಬಪ್ಪನೇಕೆ
ಮಲಿನ ವಸನವ ಪೊದ್ದು ಮೋರೆ ತೊಳಿಯನೇಕೆ
ಜಲಜನಾಭನ ಪಾದ ನೆಳಲು ಸೇರಿದವ ೧

ಸ್ನಾನ ಸಂಧ್ಯಾ ಮೌನ ಮಾಡದೆ ಇರನೇಕೆ
ಕಾನನದಲಿ ಬಂದು ಸೇರನೇಕೆ
ದಾನ ಧರ್ಮಂಗಳ ಮಾಡದೆ ಇರನೇಕೆ
ದಾನವಾರಿಯ ಕಾಣುತಲಿಪ್ಪವ ೨

ಮಡಿ ಉಡದೆ ಉಣನೇಕೆ ಅಡಿಗೆ ನೇಮನವೇಕೆ
ಅಡಿಗಡಿಗೆ ಜಪಮಣಿ ಎಣಿಸನೇಕೆ
ನಡೆಯುತ ಪಥದೊಳು ತಿನ್ನಲ್ಲಾ ಮೆಲ್ಲನೇಕೆ
ಪೊಡವೀಶ ಶ್ರೀ ಹರಿಯ ಅಡಿಗಳ ಬಲ್ಲವಾ ೩

ಓದದೆ ಇರನೇಕೆ ವೇದ ಪಠಿಸನೇಕೆ
ವೇದಮಂತ್ರ ರಚಿಸದರನೇತಕೆ
ಓದನವೀಯದೆ ಬಾಳುತಲಿ ಇರನೇಕೆ
ಮಾಧವನ ಚರಣಾರಾಧನೆ ಮಾಳ್ಪ ೪

ತೀರ್ಥ ತಿರುಗನೇಕೆ ಯಾತ್ರಿ ಚರಿಸನೇಕೆ
ವ್ಯರ್ಥ ದಿವಸವೆಂದು ಅನಿಸಲೇಕೆ
ಆರ್ಥಿಯನ್ನು ನೋಡಿ ಆಟ ಆಡುವನೇಕೆ
ತೀರ್ಥಪದನ ದಿವ್ಯತೀರ್ಥ ಬಯಸುವವ ೫

ವ್ರತವು ಮಾಡನೇಕೆ ಕಥಿಯ ಕೇಳನೇಕೆ
ಸತಿಯ ಸಂಗಡ ನಿತ್ಯರಮಿಸನೇಕೆ
ಚತುರ ಸಾರೆ ಉಂಡು ಹಾಗೇ ಇರನೇಕೆ
ಪತಿತಪಾವನನಂಘ್ರಿ ಮತಿಯಲ್ಲಿ ನೋಳ್ಪನಾ ೬

ದುರಿತವೆಂಬೋದೆಂತು ಬಿಳಿದೊ ಹಸರೊ ಕೆಂಪೊ
ಕರದೊ ಮತ್ತಾವದೋ ಅದರ ವರ್ಣಾ
ದುರಿತಾರಿ ವಿಜಯವಿಠ್ಠಲನ್ನದಾಸಗೆ ತನ್ನ–
ತೊರೆದು ಕಾಣೊ ಹಣೆ ನೋಡದೆ ಮಹಾ ೭

೫೧೭

ಧ್ಯಾನವನು ಮಾಡು ಬಿಂಬ ಮೂರುತಿಯ ಪ

ಆನಂದದಲಿ ಕುಳಿತು ಅಂತರಂಗದಲಿ ಅ.ಪ

ಸದಾಚಾರನಾಗಿ ದ್ವಾದಶಗುರುಗಳಿಗೆರಗಿ
ಮುದದಿಂದ ಮೂಲಮಂತ್ರವನು ಜಪಿಸಿ
ಸದಮಲ ಭಕುತಿಯಲಿ ದೇಹಸ್ಥಿತಿಯನೆ ತಿಳಿದು
ಪದಮಾಸನವ ಹಾಕಿ ಪರಮ ವಿಶ್ವಾಸದಲಿ ೧

ಅಂಗವನು ಚಲಿಸದೆ ಚೆನ್ನಾಗಿ ದೃಢವಾಗಿ
ಕಂಗಳನೆ ಮುಚ್ಚಿ ಇಂದ್ರಿಯಗಳನೆ ತೆರೆದು
ಮಂಗಳ ಶೋಭಿತ ಅಖಂಡ ಧ್ಯಾನದಂತ
ರಂಗದೊಳಗೆ ನಿಲಿಸಿ ಎಲ್ಲವನು ಕಾಣೊ ೨

ಭಗವದ್ರೂಪಗಳೆಲ್ಲ ಒಂದು ಬಾರಿ ಸ್ಮರಿಸಿ
ಮಗುಳೆ ಪರಮ ಗುರುವಿನ ಮೂರ್ತಿಗೆ
ತೆಗೆದು ಆಹ್ವಾನಮಾಡಿ ಅಲ್ಲಿಂದ ಹರುಷದಿ
ಸ್ವಗುರು ಬಿಂಬಮೂರ್ತಿಯಲಿ ಐಕ್ಯವನೆ ಮಾಡು ೩

ತಿರುಗಿ ಮೆಟ್ಟಿಕೆ ಮೂರು ವೇಗದಿಂದಲಿ ನಿನ್ನ
ಲ್ಲಿರುವ ಮೂರ್ತಿಯಲ್ಲಿ ಚಿಂತನೆಯ ಮಾಡೊ
ಭರದಿಂದ ಎಲ್ಲವನು ತಂದು ಹೃದಯದಲ್ಲಿ
ಸ್ಥಿರವಾಗಿ ಇಪ್ಪ ಮೂರುತಿಯೊಡನೆ ಕಲೆಸು ೪

ಆತನೆ ಬಿಂಬ ಮೂರುತಿಯೆಂದು ತಿಳಿದುಕೊ
ಆ ತರುವಾಯ ನಾಡಿಗಳ ಗ್ರಹಿಸಿ
ಆ ತೈಜಸನ ತಂದು ವಿಶ್ವಮೂರ್ತಿಯಲ್ಲಿ
ಪ್ರೀತಿಯುಳ್ಳವನಾಗಿ ಪತಿಕರಿಸು ಮರುಳೆ ೫

ಜ್ಞಾನ ಪ್ರಕಾಶದಲಿ ಇದ್ದು ನಿನ್ನ ಹೃದಯ
ಸ್ಥಾನದಲ್ಲಿ ಅಷ್ಟದಳ ಕಮಲ ಮಧ್ಯ
ಶ್ರೀನಿವಾಸನ ಮೂರ್ತಿ ನಿಲ್ಲಿಸಿ ಬಾಹ್ಯದಲಿ
ಏನೇನು ಪೂಜೆಯನು ಉಳ್ಳದನು ಮಾಡೊ ೬

ಗುಣ ನಾಲ್ಕರಿಂದಲಿ ಉಪಾಸನವನೆ ಮಾಡು
ಕ್ಷಣ ಕ್ಷಣಕೆ ಹರಿಪಾದವನು ನೋಡುತ
ಅಣುರೇಣು ಚೇತನಾಚೇತನಕೆ ನೇಮಕ
ಫಣಿಶಯನನಲ್ಲದೆ ಮತ್ತೊಬ್ಬರಿಲ್ಲವೆಂದು ೭

ಮಮತೆಯನು ತೊರೆದು ಮೇಲೊಂದಪೇಕ್ಷಿಸದೆ
ಸಮ ವಿಷಮ ತಿಳಿದೊಂದೆ ಭಕುತಿಯಲ್ಲಿ
ಸ–ಮಾಧಿಗೊಳಗಾಗಿ ದಿವ್ಯ ದೃಷ್ಟಿಲಿ ಸರ್ವ
ಕ್ರಮ ಅನುಕ್ರಮದಿಂದ ಭರಿತಭಾವುಕನಾಗೊ ೮

ಈ ಪರಿ ಧೇನಿಸಲು ದೇವ ಕರುಣನ ಮಾಡೆ
ಪಾಪ ಸಂಚಿತವು ಪ್ರಾರಬ್ಧ ನಾಶ
ಅಪರೋಕ್ಷಿತನಾಗಿ ತನ್ನ ಯೋಗ್ಯತದಷ್ಟು
ಗೋಪಾಲ ವಿಜಯವಿಠ್ಠಲನೊಲಿವನಾಗ ೯

೫೧೮

ಧ್ಯಾನಿಸು ಶ್ರೀಹರಿಯ ಧ್ಯಾನಿಸು ಪ

ಧ್ಯಾನಿಸು ಮನವೆ ಶ್ರೀ ಹರಿಯ ಪಾದ
ಧ್ಯಾನವಂತರ್ಯಾಮಿ ಹರಿಯ, ಆಹ
ಪ್ರಾಣಾಪಾನ ವ್ಯಾನೋದಾನ ಸಮಾನರ್ಗೆ
ಪ್ರಾಣನಾಗಿಹ ಮುಖ್ಯ ಪ್ರಾಣಾಂತರ್ಗತನ ಅ.ಪ

ಪರಮಾಣು ಪ್ರದೇಶದಲ್ಲಿ, ಪ್ರಾಣಿ
ರಾಸಿ ಅನಂತವುಂಟಲ್ಲಿ ಹೀಗೆ
ವರಲುತಿದೆ ವೇದದಲ್ಲಿ ದೃಷ್ಟಾಂ
ತರವ ಪೇಳುವೆ ದೃಢದಲ್ಲಿ–ಆಹ
ಪರಮ ಸೂಕ್ಷ್ಮ ವಟತರು ಫಲದಲ್ಲಿಹ
ಪರಿಮಿತಲ್ಲದ ಬೀಜದಿರವನರಿತು ನಿತ್ಯ ೧

ನಿರುತ ಸುವರಣ ಬ್ರಹ್ಮಾಂಡದಲ್ಲಿ
ಪರಿಪೂರ್ಣವಾಗಿ ಅಖಂಡವಾಗಿ
ಮೆರೆವುತಲಿಪ್ಪ ಮಾರ್ತಾಂಡ ದಿವ್ಯ

ಕಿರಣದಂತಿರುವ ಪ್ರಚಂಡ–ಆಹ
ಹೊರಗೆ ಒಳಗೆ ಹರಿ ಚರಿಸುವ ಪರಿಯ ನೀ
ನರಿತು ಆವಾಗಲು ದೊರಕಿದ ಸ್ಥಳದಲ್ಲಿ ೨

ಸಲಿಲ ಭೂಗಿರಿ ಲತೆ ನಾನಾ–ವೃಕ್ಷ
ಫಲ ಮೃಗ ಪಕ್ಷಿ ಕಾನನ–ಮುಕ್ತ
ಸ್ಥಳಗಳವ್ಯಾಕೃತ ಗಗನ, ತೃಣ–
ಜಲ ಪಾವಕ ತರು ಪವನ–ಆಹ
ಒಳಗೆ ಹೊರಗೆ ಎಲ್ಲ ಸ್ಥಳದಲ್ಲಿ ಹರಿಮಯ
ನೆಲೆಯ ನೀ ನಲವಿಂದ ತಿಳಿದು ಆವಾಗಲು ೩

ಕೇಶವ ವಿಶ್ವ ಮತ್ಸ್ಯಾದಿ, ತೇಜೊ
ರಾಶಿ ಹಯಗ್ರೀವಾದಿ, ಜೀವ
ರಾಶಿಯೊಳಿದ್ದು ಅನಾದಿ ಸರ್ವ
ದೇಶ ಭೇದಿಸುವಂಥ ವೇದಿ–ಆಹ
ಈ ಸಮಸ್ತ ಮೂರ್ತಿ ಶ್ರೀಶ ರಂಗನೆಂದು
ವಾಸನಾ ಮಯದಿಂದ ನೀ ಸೇವಿಸುತ ನಿತ್ಯ ೪

ಸಪ್ತಾವರಣ ದೇಹದಲ್ಲಿ, ದಶ
ಸಪ್ತ ದ್ವಿಸಹಸ್ರ ನಾಡಿಯಲಿ, ದಶ
ಸಪ್ತ ದ್ವಿಸಹಸ್ರ ರೂಪದಲಿ ಹರಿ
ವ್ಯಾಪ್ತ ನಿರ್ಲಿಪ್ತ ಸ್ಥಾನದಲಿ–ಆಹ
ಆಪ್ತನಂತಿಪ್ಪ ಸುಷುಪ್ತಿ ಜಾಗರದೊಳು
ತಪ್ತ ಕಾಂಚನದಂತೆ ದೀಪ್ತಿಸುತಿಪ್ಪನ್ನ ೫

ಜೀವರಿಂದತ್ಯಂತ ಭೇದ, ಪ್ರತಿ
ಜೀವಾಂತರದಲ್ಲಿ ಮೋದನಾಗಿ
ಯಾವಾಗಲಿರುತಿಹ ವೇದ–ದಲ್ಲಿ
ಪೇಳುವುದು ಸತ್ಯಂಭಿದಾ–ಆಹ
ಈ ವಿಧ ವೇದಾರ್ಥ ಸಾವಧಾನದಿ ತಿಳಿದು
ಶ್ರೀ ವಾಯುಮತದ ಸುಕೋವಿದರೊಡಗೂಡಿ ೬

ಶ್ರೀಕೇಶವನೆ ಮೂಲರಾಶಿ, ಶ್ರುತಿ–
ಏಕೋಃ ನಾರಾಯಣ ಆಸೀತ್ ನಾನಾ
ಲೋಕ ಸೃಷ್ಟಿಪ ಧಾತನಾಸೀತ್, ಜಗ
ದೇಕತಾರಕ ಉಪದೇಶೀ–ಆಹ
ನೀ ಕೇಳಿ ನಿಗಮಾರ್ಥ ನೀಕರಿಸು ಸಂಶಯ
ಏಕಮೇವ ದ್ವಿತಿಯ ಶ್ರೀಕೃಷ್ಣನಂಘ್ರಿಯ ೭

ಗಂಗಾಜನಕ ಸಿರಿರಂಗ ಉ–
ತ್ತುಂಗ ಗುಣಾಂತರಂಗ, ಕಾ
ಳಿಂಗ ಸರ್ಪನ ಮದಭಂಗ, ಭು
ಜಂಗಶಯನ ಅಮಲಾಂಗ–ಆಹ
ಮಂಗಳ ಇಡಾ ಪಿಂಗಳ ಸುಷುಮ್ನ
ಸಂಗಡ ಮಧ್ಯದಿ ತಿಂಗಳಂತಿಪ್ಪನ್ನ ೮

ಹೃದಯಸ್ಥಾನದಲಿದ್ದ ಮೂರ್ತಿ, ಬಲು
ಅದುಭುತಾತನ ದಿವ್ಯಕೀರ್ತಿ, ಅದು
ಪದುಮುಜಾಂಡದಿ ಪರಿಪೂರ್ತಿ ತರು
ವುದಕೆ ಬೇಕು ವಾಯು ಸಾರಥಿ–ಅಹಾ
ಅದು ಬಿಂಬಮೂರ್ತಿ ಜೀವದಾಕಾರಾವಾಗಿದ್ದ
ಪದುಮಕೋಶದಲ್ಲಿ ಸದಮಲಾತ್ಮಕನನ್ನು ೯

ಧರೆಯನಳೆದ ದಿವ್ಯ ಚರಣ, ಅದು
ಮೆರೆವುತಿಹುದು ಕೋಟಿ ಅರುಣನಂತೆ
ಪರಿಪೂರ್ಣ ಭರಿತವು ಕಿರಣ, ಸ್ಮರಿ–
ಪರಿಗೆ ಮಾಡುವುದು ಕರುಣ–ಆಹ
ತರಣಿಯಂಥ ನಖದಿ ಸುರನದಿಯನು ಹೆತ್ತ
ಎರಡೈದು ಬೆರಳಲ್ಲಿ ಕಿರುಗೆಜ್ಜೆ ಪೆಂಡೆಯು ೧೦

ಪೆರಡು ಜಾನು ಜಂಘೆ ಘನ್ನ ಸುರು–
ಚಿರ ವಜ್ರಾಂಕುಶ ಧ್ವಜ ನಾನಾ, ದಿವ್ಯ
ವರ ರೇಖೆಯಿಂದಲೊಪ್ಪುವನ, ಜಘನ

ಪರಮ ಶೋಭಿತ ಸುಂದರನ-ಆಹ
ಉರುಟು ಕದಳಿ ಕಂಬ ಇರುವೂರು ಶೋಭಿಸೆ
ಸರಿಗಾಣೆ ಹರಿವುಟ್ಟ ವರ ಪೀತಾಂಬರವನ್ನು ೧೧

ಗಜವೈರಿಯಂತಿಪ್ಪ ಮಧು ಬಲು
ವಿಜಯ ವಡ್ಯಾಣ ಅಚ್ಛೇದ್ಯ, ಭೇದ್ಯ
ನಿಜಘಂಟೆ ಘಣರೆಂಬೊ ವಾದ್ಯ, ಕು
ಬುಜೆ ಡೊಂಕ ತಿದ್ದದನಾದ್ಯ-ಆಹ
ಅಜ ಜನಿಸಿದ ನಾಭ್ಯಂಬುಜದಳ ಚತುರ್ದಶ
ತ್ರಿಜಗ ಭರಿತ ಕುಕ್ಷಿ ನಿಜಪೂರ್ಣ ಸಖನನ್ನು ೧೨

ಉದರ ತ್ರಿವಳಿ ನಾನಾ ಹಾರ ದಿವ್ಯ
ಪದಕ ಪವಳದ ವಿಸ್ತಾರ ರತ್ನ
ಮುದದಿಂದ ಧರಿಸಿದ ಧೀರ ಸುಂದರ
ವಾದ ಕಂಬುಕಂಧರ-ಆಹಾ
ಪದುಮಜ ಭವರಿಂದ ತ್ರಿದಶರು ತಿಳಿಯುತ್ತ
ಸದಾಕಾಲ ಧ್ಯಾನಿಪ ಹೃದಯಾಂಬರವನ್ನು ೧೩

ಸಿರಿವತ್ಸ ಕೌಸ್ತುಭಹಾರ, ಮೇಲೆ
ಸರಿಗೆ ನ್ಯಾವಳದ ವಿಸ್ತಾರ ಅಲ್ಲಿ
ಉರ ವೈಜಯಂತಿ ಮಂದಾರ, ಗುರು
ತರವಾದ ಭುಜ ಚತುರ-ಆಹ
ಮರಿಯಾನೆ ಸೊಂಡಿಲಂತಿರೆ ಬಾಹು ಕೇತಕಿ
ಬೆರಳು ನಕ್ಷತ್ರದ ಅರಸಿನಂತೆ ನಖ ೧೪

ಕರಚತುಷ್ಟಯದಲ್ಲಿ ಶಂಖ, ಚಕ್ರ
ವರಗದೆ ಪದುಮು ನಿಶ್ಶಂಕನಾಗಿ
ಧರಿಸಿ ಮೆರೆವೊ ಅಕಳಂಕ, ದುರು
ಳರ ದಂಡಿಸುವ ಛಲದಂಕ ಆಹ

ಬೆರಳು ಮಾಣಿಕದುಂಗುರ ಕಡಗ ಕಂಕಣ
ಬಿರುದಿನ ತೋಳ್ಬಂದಿ ವರ ಭುಜಕೀರ್ತಿಯ ೧೫

ಅಗರು ಚಂದನ ಗಂಧಲೇಪ, ಕಂಬು
ಸೊಗಸಾದ ಕಂಠಪ್ರತಾಪ, ಮಾವು
ಚಿಗುರಲೆ ಕೆಂದುಟಿ ಭೂಪ, ನಸು
ನಗುವ ವದನ ಸಲ್ಲಾಪ–ಆಹ
ಮಗನಾಗಿ ತಾನು ಗೋಪಿಗೆ ವದನದೊಳು
ಜಗವೆಲ್ಲ ತೋರಿದ ಅಗಣಿತ ಮಹಿಮನ್ನ ೧೬

ಮುಗುಳು ಮಲ್ಲಿಗೆ ಮೊಗ್ಗೆ ದಂತ ಪಜೆ,
ಜಗವ ಮೋಹಿಸುವ ಸುಶಾಂತ ಜಿಹ್ವೆ
ನಿಗಮಕೆ ವೇದ್ಯವಾದಂಥ ಬಲು
ಬಗೆಯಿಂದ ನಡೆಸುವ ಪಂಥ–ಆಹ
ಪೊಗಳಲಾರದು ವೇದ ಖಗವಾಹನನ ಮಹಾ
ಅಗಣಿತ ಮಹಿಮೆ ಸಂಪಿಗೆಯ ನಾಸಿಕನನ್ನು ೧೭

ಪೊಳೆವೊ ವಿದ್ಯುತ ಕಪೋಲ, ನೀಲೋ–
ತ್ಪಲದಳ ನೇತ್ರ ವಿಶಾಲ, ದಿವ್ಯ–
ತಿಲಕವನಿಟ್ಟ ಸುಫಾಲ, ನೀಲಾ–
ಚಲಕಾಂತಿ ತನುರುಹ ಜಾಲ–ಆಹ
ಹೊಳೆವ ಕುಂಡಲ ಕರ್ಣದೊಲುಮೆಯ ಚೆಲುವಿಕೆ
ಇಳೆಯೊಳಗೆಣೆಗಾಣೆ ಇಂದಿರಾಲೋಲನ್ನ ೧೮

ಕರುಣ ಶಾಂತ ಶುಭ ನೋಟ, ಕಂಗ–
ಳೆರಡ ಚೆಲುವಿಕೆ ಮಾಟಕಿನ್ನು
ಅರವಿಂದ ಸರಿಯಿಲ್ಲ ದಿಟ ಅಲ್ಲಿ
ತರಣಿ ಚಂದ್ರಮರ ಕೂಟ–ಆಹ
ಶರಣ ಜನರ ಮನೋಹರುಷ ವಾರ್ಧಿಗೆ ಸುಧಾ
ಕರ ದುಷ್ಟಜನರ ತಿಮಿರಕ್ಕೆ ಭಾಸ್ಕರನ್ನ ೧೯

ಹೊಳೆವ ಹುಬ್ಬುದ್ವಯ ಸ್ಮರನ ಚಾಪ-
ತಲೆ ತಗ್ಗಿಸುವಂಥ ರಚನ ಫಾಲ-
ದಲ್ಲಿಟ್ಟು ತಿಲಕ ಸುಂದರನ ಲೋಕ-
ಕಳವಳಗೊಳಿಸುವ ಸುಗುಣ-ಆಹ
ನಲಿವ ವದನದಲ್ಲಿ ಅಳಿಗಳಂತೊಪ್ಪುವ
ಸುಳಿಗುರುಳಿನ ಮೇಲೆ ವಲಿವಾರಳೆಲೆಯನ್ನು ೨೦

ರೂಪ ಶೃಂಗಾರ ವಿಲಾಸ ಉಡು-
ಭೂಪ ನಾಚುವ ಮುಖಹಾಸ ವಿಶ್ವ
ರೂಪ ಧೃತ ಸ್ವಪ್ರಕಾಶ ಸರ್ವ
ವ್ಯಾಪಕಾಖಿಳ ಜಗದೀಶ-ಆಹ
ತಾಪಸರಿಗೆ ಕರುಣಾಪಯೋನಿಧಿ-ಅಣು
ರೂಪಿನೋಳ್ ಪರಮಾಣು ರೂಪನಾಗಿಪ್ಪನ್ನ ೨೧

ಕೋಟಿಮಾರ್ತಾಂಡ ಸಂಕಾಶ ಕಿ
ರೀಟಕ್ಕೆ ಅಸಮ ಪ್ರಕಾಶ ಎಲ್ಲು
ಸಾಟಿಗಾಣೆನು ಲವಲೇಶ ಕಪಟ-
ನಾಟಕ ಶ್ರೀ ಲಕುಮೀಶ-ಆಹ
ನೇಟಾಗಿ ನಖ ಲಲಾಟ ಪರಿಯಂತ
ನೋಟದಿಂದಲೆ ಈಶ ಕೋಟಿ ಸಹಿತನಾಗಿ ೨೨

ಕಾಮಾದಿಗಳನೆಲ್ಲ ತರಿದು ಮುಕು-
ತೀ ಮಾರ್ಗವನ್ನೆ ನೀನರಿದು ಅತಿ-
ಪ್ರೇಮದಿ ಗುರುಗಳ ನೆನೆದು ಹೇಮ
ಭೂಮಿ ಕಾಮಿನಿಯರ ಜರಿದು-ಆಹ
ಸಾಮಜ ವರದ ಶ್ರೀ ವಿಜಯವಿಠ್ಠಲನಂಘ್ರಿ
ತಾಮರಸ ಯುಗ್ಮ ನೇಮದಿಂದಲಿ ನಿತ್ಯ ೨೩

೫೧೯

ನಂಬದಿರು ಈ ದೇಹ ನರಲೋಕವೆಂಬುದು ಸುಖವೆಂದು
ನಂಬದಿರು ಮಾಯಾ ಪ್ರಪಂಚವನು ಅನುಗಾಲಾ
ನಂಬು ನಮ್ಮಂಬುಜಾಂಬಕನ ಪಾದಾಂಬುಜವ
ನಂಬಿದರೆ ಮುಕ್ತಿಯಲಿ ಇಂಬುಂಟು ಮರುಳೆ ಪ

ತಂದೆ ತಾಯಿ ತಮ್ಮ ಸುಖಕೆ ಏಕಾಂತದಲಿ
ಒಂದು ದಿನಲಿರಲಾಗಲವರರೇತಸು
ಬಿಂದುವಿನಲಿ ಉತ್ಪತ್ಯವಾಗಿ ಬೆರೆದಾಗ ದು
ರ್ಗಂಧದೊಳು ಬಂದು ನಿಂದೂ
ಬಂಧನದೊಳಗೆ ಸಿಲುಕಿ ಒಂದೆಂಟು ತಿಂಗಳು
ಪೊಂದಿ ಯಾತನೆಬಟ್ಟು ಮಲಮೂತ್ರ ಹೇಸಿಕೆಯಿಂದ ಕುದಿದು
ಬೆಂದೂ ಗರ್ಭದ ಮಧ್ಯದಲಿ ನೊಂದು
ಬಿಂದು ಕೆಳಗೆ ಹೊರಳಿದಿರು ಮರುಳೆ ೧

ತಾಮಸವ ಕವಿದು ಕಾವಳಗೊಂಡ ಕತ್ತಲೆಯ
ಸೀಮೆಯೊಳಗೆ ಸಿಲ್ಕಿ ಬಾಲತ್ವತನದಲ್ಲಿ
ನೀ ಮಂದನಾಗಿ ಮರುಳಾಟಕ್ಕೆ ಮನವು ಉಬ್ಬಿ
ಧಾಮಕ್ಕೆ ಪೋಪುತಿರಲೂ ಆಮೇಲೆ
ಮುಂಜಿಯನು ಕಟ್ಟಿ ಬಂಧುಬಳಗ
ಪ್ರೇಮದಿಂದಲಿ ನೆರೆದು ಮೋಹದಲಿ ಒಬ್ಬ
ಕೋಮಲೆಯ ಜತೆಮಾಡಲು ನೋಡಿ ಹಿಗ್ಗುತ್ತಾ
ಛೀಮಾರಿಯಾಗಿ ತಿರುಗಲಿ ಬೇಡ ಮರುಳೆ ೨

ಮದ ಮತ್ಸರ ಲೋಭ ಮೋಹ ಕಾಮಾದಿಯಲಿ
ಮದನ ಬಲಿಗೆ ಬಿದ್ದು ಅಹಂಮತಿ ಪಂಕದಾ
ಹುದಲಿನೊಳಗೆ ಮುಣುಗಿ ಮುಂಗಾಣದಲೆ ತನು ರೂಹ
ಮೊದಲಾಗಿ ವಿಷವ ತುಂಬಿ ಇದರಲಿ
ಕಾಲವನು ಕಳೆದು ಮಕ್ಕಳ ಪಡೆದು

ತುದಿಮೊದಲು ಧರ್ಮವನು ಮರೆದು ಮಮತೆಯಲ್ಲಿ
ಸದರೆಂದಿಲ್ಲದಾ ದುಷ್ಕರ್ಮಗಳು ಮಾಡಿ
ಮುದದಿಂದ ನರಕದೊಳು ಬೀಳುವಾ ಹುರುಳೆ ೩

ಇದ್ದಾಗ ನೆಂಟರಿಷ್ಟರು ಬಂದು ಚೆನ್ನಾಗಿ
ಹೊದ್ದಿಕೊಂಡು ನಿನ್ನ ಕೊಂಡಾಡಿ ನೂರಾರು
ಸುದ್ದಿಯನು ಪೇಳಿ ನಡುಮನೆಯೊಳಗೆ ಇದ್ದು ನಿನ್ನಯ ಬದುಕು
ಉದ್ದಿನ ಕಾಳಿನಷ್ಟು ಉಳಿಯಲೀಸದೆ ನಿತ್ಯಾ
ಬದ್ಧವಿಲ್ಲದಲೆ ಕರಗಾತಿಂದು ಬಡತನಾ
ಸಿದ್ಧನಾಗಲು ತಿಂದವರು ಹರದೋಡಿ
ಎದ್ದು ಪೋಗಲು ಕೆಟ್ಟಬಾಯಿದೆರವಾ ಮರುಳೆ ೪

ಬಿಡು ಬಿಡು ಅಕಟ ಸಂಸಾರ ಸಾಗರದ
ಮಡುವಿನೊಳಗೆ ಬಿದ್ದು ಕಾಲ್ಗೆಡೆದು ಪೋಗದೆ
ಹಿಡಿ ಹಿಡಿ ಪರಮ ಭಾಗವತರ ಸಂಗತಿಯ
ಬಿಡದೆ ಪರಿಶುದ್ಧನಾಗಿ ಪಡೆದು
ಸರ್ವಜ್ಞತೀರ್ಥರ ಮತದ ಕರುಣವನು
ಪಡೆಯಲು ಅಧಿಕಾರನಾಗಿ ಸಿರಿದೇವಿಯ
ವೊಡಿಯ ವಿಜಯವಿಠ್ಠಲನಂಘ್ರಿ ನೆರೆ ನಂಬಿ
ತಡಿಯದಲೆ ಸದ್ಗತಿಗೆ ಸೇರುವದು ಮರುಳೆ ೫

೫೨೦

ನೀನೆ ಮಾಡಿದ ಲೀಲೆ ಬಲು ಸುಖವೊ ।
ಆನೇನು ದುಃಖವನು ಬಡುವುದಿಲ್ಲವೋ ಜೀಯ । ಪ

ತೋಟವನು ಮಾಡಿಸಿ ಅದರೊಳಗೆ ಒಂದು ಫಲ ।
ನಾಟಿಸಲು ಬೆಳೆದ ಫಲ ಪಕ್ವವಾಗೆ ।
ನೀಟಾದ ಫಲವೆಂದು ಅರಸು ಕೊಯ್ ತರಿಸಲು
ತೋಟಿಗಾಗೇನು ದುಃಖ ಅರಸಿನಿಂಗೇನ್ಯೆಯ ೧

ನಿನ್ನ ಸಂಕಲ್ಪನೆ ಸ್ಥಿರವಾಗಿ ಇದೆ ಇದೆ
ಅನಂತ ವೇದಗಳು ಪೊಗಳೂತಿವಕೊ
ಪನ್ನಗಶಯನನೆ ನೀನು ಮಾಡಿದ ಕ್ಲುಪ್ತ
ಅನ್ಯಥಾವಾಗುವದೆ ಅನುಭವಾದಿಗಳಿಗೆ ೨

ಸುಖ ದು:ಖವೆ ಎರಡು ನಿನ್ನ ವಶವಾಗಿದೆ
ಸಖನಾಗಿ ಸುಖ ಉಣಿಸಲು ಹಿಗ್ಗುವೆ
ದು:ಖ ತಂದಿತ್ತರೆ ಅಳಲಿ ಬಳಲುವದ್ಯಾಕೆ
ಅಖಿಳ ನೀನಾವದಿತ್ತರ್ದೇ ಬಲು ಲೇಸು ೩

ನೀನೆ ಕಲ್ಪಿಸಿದರೆ ಸೈರಿಸಲಾರದೆ ವೇಗ ।
ನಾನು ವ್ಯಧಿಕರಣ ಪೇಳಿದರಾಯಿತೆ ।
ಆನಂದಕೆ ಹ್ರಾಸ ಬರುವುದೆ ಶಾಶ್ವತ ।
ಏನಾದರೇನು ನೀನಾಡಿದಾಟವೆ ಸಮ್ಮತ । ೪

ಸತ್ಪಾತ್ರರಾ ನೋಡಿ ದಾನವಿತ್ತರೆ ಅವಗೆ ।
ಉತ್ತಮಾ ಪದ ಉಂಟು ಪುಶಿಯಲ್ಲವೋ ।
ಸತ್ಪಾತ್ರ ನೀನೆಂದು ಪುತ್ರಾಖ್ಯ ಧನವಿತ್ತೆ ।
ಉತ್ತುಮಾ ಗತಿ ನೀಯೋ ವಿಜಯವಿಠ್ಠಲ ಕರುಣಿ ೫

೫೨೧

ನೀನೇನ ಮಾಡಲಾಪಿಯೋ ಲಕುಮೀಶಾ ।
ನಾನೀಗ ಪಡೆದದ್ದು ಉಣದಲೆ ಪೋಗುವದೆ । ಪ

ಲೋಕದೊಳಗೆ ನಿನ್ನ ಕೊಂಡಾಡಿ ಪ್ರತಿದಿನ
ಏಕ ಭಕುತಿಲಿ ಸರ್ವೋತ್ತಮನೆಂದು
ಏಕಾಂತ ಭಜಿಪ ಮನುಜಗಾದರು ಬರೆದ
ವಾಕು ತಪ್ಪುವದೇನೋ ಅಜನು ನಿರ್ಣೈಸಿದ ೧

ಮುಂದೆ ಕೊಡುವ ಫಲಕೆ ಕರ್ತ ನೀನಲ್ಲದೆ
ಹಿಂದಣಿಂದಲಿ ಬರುವ ಕಾಲಾಖ್ಯಿಕೆ ಒಂದು
ಬಿಂದು ಮಾತ್ರ ತೊಲಗಿಪ ನಡತಿ ಕಾಣೆ
ಅಂದಲ್ಲಿ ಏನು ಫಲ ಎನ್ನ ಕರ್ಮವಷ್ಟೇ ೨

ಇದ್ದದೊಂದು ಮರಿ ಅಡಗಾಣಿಸಿ ಬಂದು
ಹದ್ದು ತಾ ವೈಯಲು ಆ ಕುರುಬ ಯೆಲ್ಲಿ
ಇದ್ದರೇನು ಭಯ ವಿಜಯವಿಠ್ಠಲ ನಿನ್ನ
ಪೊದ್ದಿದವಗಾದರು ಅನುಭವಿಸದೆ ಬಿಡದು ೩

೫೨೨

ನೆಚ್ಚದಿರು ಸಂಸಾರ ಕಡೆಗೆ ಹಾಕುವುದಲ್ಲ
ಮಚ್ಚುಗೊಳಿಸುವುದು ವಿಷಯದಲಿ
ಎಚ್ಚತ್ತು ಪ್ರವರ್ತಿಸು ಇನ್ನಾದರೂ ಸಿರಿ–
ಅಚ್ಯುತನ ಪಾದವನು ನಂಬೊ ಪ್ರಾಣಿ ಪ

ಪುಂಪೆಣ್ಣಳಿಂದ ಪುಟ್ಟಿದ ದೇಹವನು ತಿಳಿ
ಕೆಂಪು ಬಿಳಿದಿನ ವರ್ಣ ಮಿಳಿತ
ಇಂಪಾಗಿದೆಯೆಂದು ಹಿಗ್ಗದಿರೆಲವೊ ಹೊಲೆ–
ಗಂಪು ನಾರುವುದು ಅದ ತೊಳೆಯದೆ ಇರಲು ೧

ಜನಿಸಿದಾಕ್ಷಣ ಕಾಯು ಕಡಮೆಂದು ತಿಳಿಯದಲೆ
ಜನನಿ ಜನಕರು ಸುಖಿಸುತಿಹರು
ತನುಭ್ರಮಣವಲ್ಲದೆ ಚಿದ್ರೂಪ ಬಲ್ಲರೆ
ಕೊನೆಗೆ ಏನಾಗುವುದೊ ಪ್ರಾಣಿ ೨

ಗಳಿಸಿ ಧನ ತರುವಾಗ ಸುತ್ತ ನೆರೆದಿಹರೆಲ್ಲ
ಭಳಿರೆ ಇವ ಮಹಾತ್ಮನೆಂದು
ಘಳಿಗೆ ತೊಲಗಲು ಧನವು ಕರಗಿ ತಿಂದು ಪೋಗಿ
ಹಳಿದು ಹಲ್ತೆರೆದು ಅಣಕಿಪರೋ–ಪ್ರಾಣಿ ೩

ಹುಬ್ಬಿನಿಂದಲೆ ಹೊಡೆದು ಹೃದಯದ ಕಗ್ಗಂಟು
ಕಬ್ಬು ಕಾರ್ಮುಕನಿಂದ ಬಿಡಿಸಿ
ಉಬ್ಬಿಸ್ಯುಕ್ಕಿನ ತಂತಿಯಂತೆ ಮಾತುಗಳಾಡಿ
ಉಬ್ಬಸವ ಬಡಿಸುವಳೊ ನಾರಿ ಪ್ರಾಣಿ ೪

ಯೌವನವೊದಗಿದಾಗ ಏನೆಂದರೂ ಅಪ್ಪ
ಅವ್ವಣ್ಣನೆಂದು ನಸುನಗುತ
ಗವ್ವಳಿಕೆ ವೃದ್ಧಾಪ್ಯ ಬಂದೊದಗಲು ಇವನ
ಬವ್ವನ ತೆರೆದಲಾಡಿಪರೋ–ಪ್ರಾಣಿ ೫

ನಿಷ್ಠಕ್ಕೆ ದೇಹವನು ಮಾಡಿಕೊಂಡಂತೆ ನೀ
ದುಷ್ಕರ್ಮಕೊಳಗಾಗದಿರೆಲೋ
ನಿಷ್ಕಂಟಕವಾದ ಮಾರ್ಗದಲಿ ನರಹರಿಯ
ನಿಷ್ಕಾಮದಲಿ ಭಜಿಸೊ ಮನವೆ ಪ್ರಾಣಿ ೬

ಅಂಬಲಿಗೆ ಗೃಹಪಾಲ ಮನೆ ಮುಂದೆ ಹಗಲಿರುಳು
ಹಂಬಲಿಸಿ ಬಿದ್ದಂತೆ ನೀನು
ಉಂಬ ವಿಷಯಂಗಳಿಗೆ ಕವಿ ಜೋತು ಬಿದ್ದು ಈ
ಡಿಂಬವನು ಪೋಷಿಸದಿರೆಲವೊ–ಪ್ರಾಣಿ ೭

ದೇಹಕ್ಕೆ ಬಲವಾಗಬೇಕೆಂದು ಎಲ್ಲರೊಳು ಕಂಡಲ್ಲಿ
ಸ್ನೇಹಭಾವವನ್ನು ಬಯಸಿ
ಆಹಾರಗಳ ತಿಂದು ಕಾಯ ಪುಷ್ಟಿಯಿಂದ
ಮೋಹಕ್ಕೆ ಒಳಗಾದೆಯಲ್ಲೋ–ಪ್ರಾಣಿ ೮

ಸ್ವಲ್ಪ ದಿನವುಳಿಯಿತು ಒಂದು ಸಾಧನ ಕಾಣೆ
ಕಲ್ಪಾಯು ನಿನಗಿಲ್ಲವಲ್ಲೊ
ಬಲ್ಪಂಥಗಳ ಮಾಡಿ ಭೋಗಪಡದಿರು ನಾಗ–
ತಲ್ಪನ್ನ ಮೊರೆಹೋಗಲೋ–ಪ್ರಾಣಿ ೯

ದೇಶ ದೇಶವ ತಿರುಗಿ ಬಳಲಿ ಬಾಯಾರಿ ನೀ
ಕ್ಲೇಶಕೊಳಗಾಗಿ ಹೊನ್ನುಗಳ
ಏಸೇಸು ತಂದದ್ದು ಏನಾಯಿತೋ ಒಂದು-
ಕಾಸು ನಾಳೆಗೆ ಕಾಣೆಯೋ-ಪ್ರಾಣಿ ೧೦

ಎಂದಿಗಾದರೋ ಇದೇ ಸಂಸಾರ ವಿಸ್ತಾರ
ಒಂದಕ್ಕೆ ಒಂದೊಂದು ಅಧಿಕ
ಬಂಧನವಲ್ಲದಲೆ ಲೇಶ ನಿರ್ಮಲ ಕಾಣೆ
ಪೊಂದು ಸಜ್ಜನರಲ್ಲಿ ಮಂದ-ಪ್ರಾಣಿ ೧೧

ನಿತ್ಯ ಗಂಡಾಂತರದಿ ಬಿದ್ದು ಸಕಲಕ್ಕೆ
ಕರ್ತೃ ನಾನೆಂದು ಕೂಗುವಿಯಲೊ
ಮೃತ್ಯು ನಗುವುದು ನಿನ್ನ ಹೆಡತಲೆಯಲಿ ನಿಂದು
ಚಿತ್ತದಲ್ಲಿ ತಿಳಿದು ತಲೆ ಬಾಗೊ-ಪ್ರಾಣಿ ೧೨

ದೊಡ್ಡವನು ನಾನು ಎನಗೆಲ್ಲ ಜನರು ಬಂದು
ಅಡ್ಡಬೀಳುವರೆಂಬ ಮಾತು
ಹೆಡ್ಡತನ ತಾಳದಿರು ಕೊನೆಗೆ ಅನುಭವಕ್ಕು
ಕಡ್ಡಿಯಂದದಿ ಮಾಳ್ಪರೋ-ಪ್ರಾಣಿ ೧೩

ಕೋಟಿಯಾದರು ಕೇಳು ಅವರೋಕ್ಷಿಗಾದರೂ
ಕೋಟಲೆಯೊಳಿರದೆ ಗತಿಯಿಲ್ಲ
ತಾಟತೂಟಕ ಮಾಡಿ ಅವರಂತೆ ನುಡಿದು ಭವ
ದಾಟಬೇಕೋ ಬೇಗ ಜಾಣ-ಪ್ರಾಣಿ ೧೪

ಆದರಿಸಿ ಸತಿಸುತರು ಬಂಧು ಬಳಗಕ್ಕೆ ಸಂ
ಪಾದಿಸಿ ಧನ ಧಾನ್ಯ ತಂದು
ಮೋದಪಡಿಸುವೆನೆಂದು ವಾದಿಸುವ ಮನುಜನ್ನ
ಪಾದಕ್ಕೆ ಶರಣು ಸಾರೆಲವೋ-ಪ್ರಾಣಿ ೧೫

ವನಧಿಯೊಳು ಸಪ್ತದ್ವೀಪದ ಮೃತ್ತಿಕೆ ಹಾಕೆ
ದಣುವಿಕ್ಕಲ್ಲದೆ ಪೂರ್ಣವಹುದೆ
ಇನಿತು ತಿಳಿಯೆಲ್ಲೆಲ್ಲಿ ತಂದ ಧನದಿಂದ ಭವ–
ವನಧಿ ತುಂಬದು ಕಾಣೊ ಮರುಳೆ–ಪ್ರಾಣಿ ೧೬

ಚಿತ್ರಗುಪ್ತರು ನಿತ್ಯ ಬರೆದ ಲೆಖ್ಖವು ದಿವಾ
ರಾತ್ರಿ ನೋಡುತಲಿದ್ದು ನಿನ್ನ
ಪತ್ರ ಕರದಲಿ ಪಿಡಿದು ಈ ಮೂರ್ಖ ನರಮಹಿಷ–
ಪುತ್ರನೆಂದು ನಸುನಗುವರಲ್ಲೋ–ಪ್ರಾಣಿ ೧೭

ಎನಗೆ ತನಗೆಂದು ಯಮಭಟರು ಕರಗಳ ಹೊಯಿದು
ಕಣಿದು ಭುಜ ಚಪ್ಪರುಸುತಿಹರೊ
ಅನಿತರೊಳಗೆಚ್ಚರಿಕೆ ಎಚ್ಚತ್ತು ಹರಿಚರಣ
ವನಜ ಧಾನ್ಯವ ಒಲವು ಮಾಡೊ–ಪ್ರಾಣಿ ೧೮

ಶ್ರುತಿಗೆ ಅಪ್ರಾಮಾಣ್ಯ ಬಾರದಂತೆ ಮಧ್ವ
ಮತಕೆ ವಿರೋಧವಾಗದಂತೆ
ಕ್ಷಿತಿಯೊಳಗೆ ಸುಜನರಿಗೆ ಹಿತವಾಗುವಂತೆ ಶ್ರೀ–
ಪತಿಯ ಸೇವಿಸಿ ಸುಗತಿ ಪಡೆಯೋ–ಪ್ರಾಣಿ ೧೯

ಅರ್ಥಬಾರದು ನಿನ್ನ ಸಂಗಾತ ಕೇಳ್ ಕೊನೆಗೆ
ವ್ಯರ್ಥಧಾವತಿ ಪ್ರಾಪ್ತಕರ್ಮ
ತೀರ್ಥಯಾತ್ರೆಯ ಮಾಡಿ ನಿಸ್ಸಂಗನಾಗು ಯ_
ಥಾರ್ಥಾ ಜ್ಞಾನದಿಂದ ಬಾಳೊ ಪ್ರಾಣಿ ೨೦

ಶಿಥಿಲವಾಗಿ ಪೋಪ ದೇಹಕೆ ಮಮತಿಂದ
ಮಿಥುನ ಭಾವಗಳನ್ನೆ ಬಯಸಿ
ವ್ಯಥೆಪಟ್ಟು ಪಥತಪ್ಪಿ ನಡೆದು ನರಹರಿ ಸುಗಣ
ಕಥೆಗೆ ವಿಮುಖನಾಗದಿರೆಲೊ–ಪ್ರಾಣಿ ೨೧

ವನಗಿರೀ ನದಿ ಮೆದೆ ಹೊದರು ಗಹ್ವರ ಹುತ್ತ
ವನರಾಶಿ ದ್ವೀಪ ಪಾತಾಳ
ತನು ಮರ್ತ್ಯ ಸುರಲೋಕ ಜನನಿ ಜಠರದೊಳಿರಲು
ಅಣು ಮಾತ್ರ ತಪ್ಪುವುದೆ ಬರಹ ಪ್ರಾಣಿ ೨೨

ಹಲವು ಹಂಬಲ ಸಲ್ಲ ಆದ್ಯಂತಕಾಲದಲಿ
ಗಳಿಸಿಕೋ ಪೂರ್ಣಾಯು ವಾಯು
ಒಲಿಯದಲೆ ನಿನ್ನೊಳಗೆ ವಿಜಯವಿಠ್ಠಲರೇಯ
ಸುಳಿಯ ಜಾಗ್ರತನಾ ಗೆಲೋ ಪ್ರಾಣಿ ೨೩

೫೨೩

ಬ್ಯಾಡವೊ ಕುವಾದಿ ಬ್ಯಾಡವೊ ಪ

ಬ್ಯಾಡವೊ ಕೇಳು ಕುವಾದಿ ನೀ
ನಾಡುವದುಚಿತವಲ್ಲ ಧಾದಿ । ಆಹಾ ।
ಮೂಢ ನಿನಿಗದಾವ ಖೋಡಿ ಬೋಧಿಸಿದನೊ
ನಾಡಿಗೊಡಿಯ ರಂಗಗೀಡು ನೇನೆಂಬದು ಅ.ಪ

ಎಲ್ಲ ಜೀವರು ದೇವವೊಂದೆ ಭೇದ
ವಿಲ್ಲೆಂದಾಡುವುದು ಧಂದೆ ಯಮ
ಕೊಲ್ಲದೆ ಬಿಡ ನಿನ್ನ ಮುಂದೆ ನಿನ್ನ
ಹಲ್ಲು ಮುರಿವನೊಂದೊಂದೆ ॥ ಆಹಾ ॥
ಉಳ್ಳಿಗಡ್ಡಿಯ ಉದ್ದಿ ಬೆಳ್ಳಗೆ ತೊಳೆದರೆ
ಅಲ್ಲಕ್ಕೆ ಸರಿಯೇನೊ ಬಲ್ಲವರೊಪ್ಪಾರು ೧

ಇದ್ದು ನೀ ಇಲ್ಲೆಂತೆಂಬಿ ಕಾಲಿ
ಲೊದ್ದರೆ ಬಲು ನೊಂದು ಕೊಂಬಿ ಇ
ಲ್ಲಿದ್ದವರೆಲ್ಲ ಬ್ರಹ್ಮ ನಾನೆಂಬಿ ಆ ಪರ

ಬುದ್ಧಿಯಿಂದ ಶುದ್ಧ ಎಂತೆಂಬಿ ॥ ಆಹಾ ॥
ಬಿದ್ದುಹೋಯಿತು ನಿನ್ನ ಸಿದ್ಧಾಂತವೆಲ್ಲವು
ಸದ್ದು ಎನ್ನ ಕೂಡ ಗೆದ್ದು ಹೋಗಲಾರಿ ಬ್ಯಾಡವೊ ೨

ಒಬ್ಬ ಬ್ರಹ್ಮ ಎಲ್ಲಾ ಮಾಯವೊ ಇ
ನ್ನೊಬ್ಬನೆ ಎಲ್ಲಿಹ ಸುಖವೊ
ನಿನ್ನ ಕುಹಕ ಶಾಸ್ತ್ರವೆಲ್ಲ ಮೃಷವೋ
ಉಬ್ಬಿ ಆಡುವುದು ನಿರಯವು ॥ ಆಹಾ ॥
ಒಬ್ಬ ಬ್ರಹ್ಮಗೆ ಮುಕ್ತಿ ಒಬ್ಬ ಬ್ರಹ್ಮಗೆ ನರಕಾ
ಈ ಬಗೆಯಾಯಿತು ನಿನಗೊಬ್ಬಗೆ ಈ ಮಾತು ಬ್ಯಾಡವೊ ೩

ಒಂದೆ ಆದರೆ ನಿನಗೆಲ್ಲ ನಿನ
ತಂದೆಯಿಂದ ನೀ ಪುಟ್ಟಿದ್ದೆಲ್ಲ ನಿನ್ನ
ತಂದೆ ನೀನು ಒಂದೆ ಎಲ್ಲಿ ಇನ್ನು
ಛಂದಾಗಿ ನೀ ತಿಳಿಯೊ ಸೊಲ್ಲ ॥ ಆಹಾ ॥
ತಂದೆಯ ಸತಿ ನಿನಗೇನಾದಳೊ ಮನುಜ
ಮಂದ ಮತಿಯೆ ತಾಯಿಗಂಡ ನೀನಾದೆಲ್ಲೋ ೪

ಅನ್ನಕ್ಕೆ ಪರಬ್ರಹ್ಮನೆಂಬಿ ಈಗ
ಅನ್ನ ಚಲ್ಲಲು ದೋಷವೆಂಬಿ ನಿತ್ಯ
ಚನ್ನಾಗಿ ಪರಿಪೂರ್ತಿಗೊಂಬಿ ಈ
ಅನ್ನ ನಾನು ವೊಂದೆ ಎಂಬೀ ॥ ಆಹಾ ॥
ನಿನ್ನ ದೇಹಕ್ಕೆ ರೋಗವು ಬಂದರೆ ನೀನು
ಅನ್ನವ ಬಿಟ್ಟಿನ್ನು ಚನ್ನಾಗಿ ಮಲುಗುವಿ ೫

ಭೇದವಿಲ್ಲೆಂತೆಂದರೆ ನೀನು
ಮಾದಿಗರೆಲ್ಲ ಒಂದೇನೊ ಸರಿ
ಹೋದವರೆಂಜಲ ತಿನ್ನೋ ಕಹಿ
ಸ್ವಾದವು ನಿನಗಿಲ್ಲವಿನ್ನು ॥ಆಹಾ॥
ಓದನಾದರು ವೊಂದೆ ಮೇಧ್ಯವಾದರು ವಂದೇ
ಭೇದವಿಲ್ಲದೆ ತಿಂದು ಹೋದಿಯೋ ನರಕಕ್ಕೆ ೬

ಎಲ್ಲವೂ ಬ್ರಹ್ಮಸ್ವರೂಪಾ ಬ್ಯಾರೆ
ಇಲ್ಲೆಂದು ನಿನಗೆ ರೂಪಾ
ಭೇದವಿಲ್ಲೆಂತೆಂಬುವದು ನಿಶ್ಚಯವು ವಾಕು
ಸಲ್ಲದೆ ಇನ್ನು ಪೋದಾವು ॥ಆಹಾ ॥
ಬಲ್ಲಿದ ಪುರುಷನು ಮೆಲ್ಲನೆ ನಿನ್ನ ಸತಿ
ಯಲ್ಲಿ ಮಲಗಿದರೆ ನೆಲ್ಲಿ ನೀ ಸೈರಿಸಿ ೭

ನಾಶವಿಲ್ಲೆಂಬುದೆ ಸತ್ಯ ದೋಷ
ಕ್ಲೇಶವಿಲ್ಲೆಂಬುದೆ ಮಿಥ್ಯ ಜಗ
ದೀಶಗೆ ಜೀವನು ಭೃತ್ಯ ಬಿಡದೆ
ವಾಸವಾಗಿಹ ಹೃದಯ ನಿತ್ಯ ॥ಆಹಾ॥
ದ್ವಾಸುಪರ್ಣವೆಂಬೊ ಈ ಶ್ರುತಿಗರ್ಥವು
ಲೇಸಾಗಿ ತಿಳಿಯದೆ ಘಾಶಿಪಡುವಿ ವ್ಯರ್ಥ ೮

ಈಶನು ನೀನಾದರೇನು ಸರ್ವ
ದೇಶ ಪೋಷಿಸದೆ ಇಪ್ಪೋರೆ ನಿನ್ನ ಸಾ
ಹಸ ವ್ಯರ್ಥ ಮಾಡೋರೆ ಹರಿ
ದಾಸರು ಕಂಡು ಸಹಿಸೋರೆ ॥ಆಹಾ ॥
ಗ್ರಾಸ ಇಲ್ಲದೆ ಉಪವಾಸ ಸತಿ ಸುತರು
ಕ್ಲೇಶ ಪಡುವುದು ಬಿಡಿಸಲಾರಿಯೊ ಲೇಶ ೯

ಗುರುದೈವವಿಲ್ಲವೊ ನಿನಗೆ ಒಬ್ಬ
ಸರಿಯಿಲ್ಲ ಈ ಧರೆಯೊಳಗೆ
ಯಾರು ಹಿರಿಯ ಕಿರಿಯರಿಲ್ಲ ನಿನಗೆ ನೀನು
ಖರ ಶಬ್ದಕಿಂತ ಹೊರಗೆ ॥ಆಹಾ ॥
ಎರಡಿಲ್ಲಾಯೆಂಬೊದೆ ಇರುಳಿಲ್ಲ ಹಗಲಿಲ್ಲಾ
ನರಕ ಸ್ವರ್ಗ ವಂದೇ ಅರಿಯಾದೆ ಮುಳುಗುವಿ ೧೦

ವಂದನೆ ನಿಂದ್ಯಗಳೊಂದೇ ನಿನಗೆ
ಗಂಧ ದುರ್ಗಂಧವು ವಂದೇ ಕೆಟ್ಟ
ಹಂದಿಯೆಲ್ಲ ನೀನು ವಂದೇ ನಿನ್ನ
ಕೊಂದರೆ ದೋಷವಿಲ್ಲವೆಂಬೆ ॥ಆಹಾ॥
ಎಂದಿಗೂ ಈ ಮಾತು ನಿಂದಾವೆ ನಿನಗಿನ್ನು
ಮುಂದಕ್ಕೆ ಬರಲಾರಿ ಮಂದಮತಿಯೆ ಖೋಡಿ ೧೧

ಜಗದೊಳಗೆ ನೀ ನಿಂತು ಇದು
ಜಗವಲ್ಲವೆಂಬೋದಕ್ಕಿಂತು ನೋಡಿ
ನಗುವರೋ ಅಶುದ್ಧ ಜಂತು ಜಿಂಪ್ಹೆ
ಬಿಗಿದು ಕೋಯಿಸುವ ಯಮನಿಂತು ॥ಆಹಾ ॥
ಹಗಲು ಇರುಳು ವಂದೆ ನಗುತ ನಗುತಾ ಕಂಡು
ತೊಗಲು ದೇಹವು ನಿನ್ನದಗೆ ಮಾಡುವುದು ವ್ಯರ್ಥ ೧೨

ಸ್ವಾಮಿ ನಿನಗೆ ಬ್ಯಾರಿಲ್ಲಾ ನಿತ್ಯ
ನೇಮ ಕರ್ಮವು ಬ್ಯಾರೆ ಸಲ್ಲ ಒಂದು
ಕಾಮಿನಿ ನಿನಗೆ ಬೇಕಲ್ಲ ಪೂರ್ಣ
ಕಾಮನು ನೀನೆಂಬೆಯಲ್ಲಾ ॥ಆಹಾ॥
ಗ್ರಾಮ ಭೂಮಿಗಳ್ಯಾಕೊ ತಾಮಸ ನಿನಗಿನ್ನು
ತಾಮಸರಿಗೆಲ್ಲ ಸ್ವಾಮಿಯಾಗಿರು ಹೋಗೋ ೧೩

ಕಾಣದೆ ಬಗಳುವೆ ಮಾಯಿ ನಾಯಿ
ನಿನಗೆ ತಂದೆ ತಾಯಿ ಇನ್ನು
ಕಾಣುತ ಬೊಗಳೋದು ನಾಯಿ ಈ
ನಾಯಿ ಕಚ್ಚೆ ನೀ ಸಾಯಿ ॥ಆಹಾ ॥
ಬಾಯ ಮುರಿವಾ ನಿನ್ನ ನ್ಯಾಯದಿಂದಲಿ ವಾಯು
ಬಾಯ ಶೀಳಿ ನಿನ್ನ ಕಾಯ ಖಂಡ್ರಿಸುವನೊ ೧೪

ಇಷ್ಟು ಹೇಳಿದರೆ ನೀ ಕೇಳಿ ನೀ ವ್ಯರ್ಥ
ನಿಷ್ಠುರಾಡಿ ನೀ ಬಾಳೀ ನಿನ್ನ
ಕಟ್ಟಿಗೆ ಮುರಿದಂತೆ ಶೀಳಿ ಬಾಯ
ಕುಟ್ಟಿ ತುಂಬುವ ಯಮಧೂಳಿ ॥ಆಹಾ॥
ಸೃಷ್ಟಿಗೊಡೆಯ ನಮ್ಮ ವಿಜಯವಿಠ್ಠಲನ ಮುಟ್ಟಿ ಭಜಿಸದಲೆ
ಭ್ರಷ್ಟ ಮನುಜ ನೀ ಅಷ್ಟವೆಂದೆಂಬೋದು ಬ್ಯಾಡವೊ ೧೫

೫೨೪

ಮುಕುತಿ ತಮಸು ಎರಡಿಲ್ಲೆ ಕಂಡ್ಯಾ
ಮುಕುತಿ ಬೇರೆ ತಮಸು ಬೇರಿಲ್ಲ ಕಂಡ್ಯಾ ಪ

ಗುರುಪಾದ ಒಡಗೊಂಡು ಮರುತ ಶಾಸ್ತ್ರವ ನೋಡಿ
ಹರಿಯ ಗುಣಂಗಳ ಕೊಂಡಾಡುತ
ಪರಮ ಉತ್ತಮರು ಬರಲು ಬನ್ನಿ ಬನ್ನೆಂದು
ಎರಗಿ ತಕ್ಕೈಸಿ ಕೊಂಡುಂಬುವದೆ ಮುಕ್ತಿ ೧

ನಾನು ನೀನು ಎಂದು ಜ್ಞಾನವನೆ ತಿಳಿಕೊಂಡು
ತಾ ನಿಲ್ಲದಿಲ್ಲೆಂದು ಪೇಳಿಕೊಂಬಾ
ಈ ನಾಡಿನೊಳಗಿವ ಹೀನವನು ಎಂಬರ್ಥ
ಈ ನುಡಿ ಎನಿಸಿಕೊಂಬುದೆ ತಮಸು ೨

ಒಂದರೊಳಾನಂತ ಅನಂತದಲಿ ಒಂದು
ಒಂದೊಂದು ಅನಂತ ಹರಿಪ್ರೇರಕ
ಎಂದು ಗ್ರಹಿಸಿ ಹರಿಗುರು ಹರಿದ್ವೇಷಿಗಳನ್ನ
ನಿಂದಕವಾಗಿ ಬಾಳುವದೆ ಮುಕ್ತಿ ೩

ಅನ್ನದಾ ಸಮಯ ಇಲ್ಲದೆ ಕಂಡಲ್ಲಿ
ತಿನ್ನಲೋಡಿ ಸಮಯವೆನ್ನದೆ
ಅನ್ಯರ ಬದುಕ ಪಹರಿಸುವ ಖಲು
ಗನ್ನ ಘಾತಕನೆನಿಸಿಕೊಂಬುವದೆ ತಮಸು ೪

ಮೀಸಲಾ ಮನದಲ್ಲಿ ವಾಸುದೇವನ ನಿಜ
ವಾಸರದಲ್ಲಿ ಜಾಗರಾ ಮಾಡುವಾ
ಆಶೆಬಡಕನಲ್ಲ ದೇಶದೊಳಗೆ ಹರಿ
ದಾಸನೆಂದು ಪೇಳುವುದೆ ಮುಕ್ತಿ ೫

ವ್ರತವಿಲ್ಲ ವಾವಿಲ್ಲ ಮತಿ ಮೊದಲು ಇಲ್ಲಾ
ಕಥಾಶ್ರವಣ ಒಂದು ಕೇಳಲಿಲ್ಲ
ಪಿತ ಮಾತರನ್ನ ಬೊಗಳುವ ನಾಯಿ ಕು
ತ್ಸಿತನು ಎಂದೆನಿಸುವದೆ ತಮಸು ೬

ಗುಣ ಒಳ್ಳೇದು ನೀತಿ ಮನ ಒಳ್ಳೇದು ಅಜ
ತೃಣ ಜೀವಾದಿಯ ಭೇದಬಲ್ಲನಿವ
ಗಣನೆಮಾಡ ವಿಜಯವಿಠ್ಠಲನಲ್ಲದೆ
ಕ್ಷಣ ಹೀಗೆ ಎಂದೆನಿಸುವದೆ ಮುಕ್ತಿ ೭

೫೨೫

ವಿಠ್ಠಲನ ಮಂತ್ರ ಜಪಿಸೋ ಎಲೆ ಮನವೆ
ಕುಟಿಲವನು ಕಳೆದು ಬಲು ಕುಶಲತನವೀವದು ಪ

ಆಗಮ ಸಿದ್ಧಾಂತದಲ್ಲಿ ಪೊಳೆವ ಮಂತ್ರ
ಯೋಗಿಗಳ ಮನಕೆ ಬಲು ಸೌಮ್ಯ ಮಂತ್ರ
ಸಾಗರವು ಮಥಿಸಲು ಉದಿಸಿ ಪೊರೆದ ಮಂತ್ರ
ಯೋಗಿಗಳು ನೆನೆದರೆ ಸವಿಯಾದ ಮಂತ್ರ ೧

ಸುಧಾಮಗೆ ವೊಲಿದು ಸೌಭಾಗ್ಯವಿತ್ತ ಮಂತ್ರ
ಕದನದೊಳು ಫಲ್ಗುಣನ ಕಾಯಿದ ಮಂತ್ರ
ಮಧುರಾಮೃತವಾಗಿ ಜಿಹ್ವೆಗೆ ಒಪ್ಪುವ ಮಂತ್ರ
ಯದುಕುಲಾಗ್ರಣಿಯಾದ ವಿಶ್ವಮಂತ್ರ ೨

ಹಾರೈಸಿದವರಿಗೆ ವರವನೀವ ಮಂತ್ರ
ಕಾರುಣ್ಯನಿಧಿ ವಿಜಯವಿಠ್ಠಲರೇಯನ್ನ ಮಂತ್ರ
ಸೇರಿದವರನ್ನ ಬಿಡದೆ ಪೊರೆವ ಮಂತ್ರ ೩

೫೨೬

ಶೋಕವಾಗುವುದು ಯಾತಕೆ ಎಲಾ ।
ಕಾಕುಲಾತೀ ಸಲ್ಲ ಕರಣಶುದ್ಧನಾಗು ಪ

ಜೀವಕ್ಕೆ ಎಂಬೆನೆ ಅನಂತಕಲ್ಪಕ್ಕೆ
ಜೀವನಿತ್ಯ ಸುಖೀ ಎಲ್ಲಿದ್ದರೂ
ಸಾವೆ ಹುಟ್ಟೀಯಲ್ಲಿ ಸತತದಲಿ ಚರಿಸಿದರು
ಜೀವ ಉಂಬುವದೆತ್ತ ಪ್ರಾಪ್ತವಾದ ಕ್ಲೇಶ ೧

ಶರೀರಕೆಂಬೆನೆ ಚೇತನ ತಪ್ಪಿದರೆ
ಇರುವುದು ಜಡವಾಗಿ ಬಿದ್ದುಕೊಂಡು
ಹಿರಿದಾಗಿ ತಿಳಿವುದು ಜಡಕೆ ಲೇಪನವುಂಟೆ
ಚರಾಚರದಲಿ ಇದೆ ಸಿದ್ಧವಾಗಿಪ್ಪಯಾ ೨

ಪಾರ ನೋಡುವದು ಈ ಪರಿ ಜ್ಞಾನದಲಿದು
ಸಾರ ಕಾಣಿಸದು ಸಂಸಾರದೊಳಗೆ
ಮಾರಜನಕ ನಮ್ಮ ವಿಜಯವಿಠ್ಠಲ ಹರಿಯ
ಸಾರದಲೆ ಅಭಿಮಾನ ಬಿಡದವಗೆ ಇದೆ ಉಂಟು ೩

೫೨೭

ಸಾಧನಕ್ಕೆ ಬಗೆಗಾಣೆನೆನ್ನಬಹುದೆ
ಸಾದರದಿ ಗುರುಕರುಣ ತಾ ಪಡೆದ ಬಳಿಕ ಪ

ಕಂಡಕಂಡದ್ದೆಲ್ಲ ಕಮಲನಾಭನ ಮೂರ್ತಿ
ಉಂಡು ಉಟ್ಟದ್ದೆಲ್ಲ ವಿಷ್ಣು ಪೂಜೆ

ತಂಡತಂಡದ ವಾರ್ತೆ ವಾರಿಜಾಕ್ಷನ ಕೀರ್ತಿ
ಹಿಂಡು ಮಾತುಗಳೆಲ್ಲ ಹರಿಯ ನಾಮ ೧

ವಾಗತ್ಯಪಡುವದೆ ವಿಧಿನಿಷೇಧಾರಚರಣೆ
ರೋಗಾನುಭವವೆಲ್ಲ ಉಗ್ರತಪವು
ಆಗದವರಾಡಿಕೊಂಬುವುದೆ ಆಶೀರ್ವಾದ
ಬೀಗುರುಪಚಾರವೇ ಭೂತದಯವು ೨

ಮೈಮರೆತು ಮಲಗುವುದೆ ಧರಣಿ ನಮಸ್ಕಾರ
ಕೈಮೀರಿ ಹೋದದ್ದೆ ಕೃಷ್ಣಾರ್ಪಣ
ಮೈ ಮನೋವೃತ್ತಿಗಳೆ ವಿಷಯದಲಿ ವೈರಾಗ್ಯ
ಹೋಯ್ಯಾಲಿತನವೆಲ್ಲ ಹರಿಯ ವಿಹಾರ ೩

ಹಿಡಿದ ಹಟ ಪೂರೈಸಲದು ಹರಿಯ ಸಂಕಲ್ಪ
ನಡೆದಾಡುವೋದೆಲ್ಲ ತೀರ್ಥಯಾತ್ರೆ
ಬಡತನವು ಬರಲದೇ ಭಗವದ್ಭಜನೆಯೋಗ
ಸಡಗರದಲ್ಲಿಪ್ಪುದೆ ಶ್ರೀಶನಾಜ್ಞಾ ೪

ಬುದ್ಧಿಸಾಲದೆ ಸುಮ್ಮನಿರುವುದೇ ಸಮ್ಮತವು
ಯದೃಚ್ಛಾಲಾಭವೇ ಸುಖವುಯೆನಲು
ಮಧ್ವಾಂತರ್ಗತ ಶ್ರೀ ವಿಜಯವಿಠ್ಠಲರೇಯ
ಹೃದ್ಗತಾರ್ಥವ ತಿಳಿದು ಒಪ್ಪಿಸಿಕೊಳನೆ ೫

೫೨೮

ಹರಿ ಮಾಡ್ದ ಮರ್ಯಾದೆ ಅನುಭವಿಸಲೀ ಬೇಕು
ಸರಸಿಜಭವಾದ್ಯರಿಗೆ ಬಿಡದು ಪ

ವರಕಲ್ಪ ಕಲ್ಪದಲಿ ಮೀರಿದವರುಂಟೆ ನಿಂ
ದಿರದಾವ ಜನುಮವಾಗೆ ಪ್ರಾಣಿ ಅ.ಪ.

ವಾರಿಜಭವನ ನೋಡು ಮುನಿಶಾಪದಿಂ
ಧಾರುಣಿಯೊಳು ಪೂಜೆ ತೊರೆದ
ಪ್ರಾರಬ್ಧ ನಿರ್ದೋಷಿಗಾದರೂ ತಪ್ಪದವ-
ತಾರವಿಲ್ಲದವನಾದನೋ ಪ್ರಾಣಿ ೧

ಜಗಕೆ ಗುರುವೆಂದೆನಿಸಿಕೊಂಡ ಪ್ರಾಣನ ನೋಡು
ಯುಗದೊಳಗೆ ಕೋತ್ಯಾದನಲ್ಲೋ
ಮಗುಳೆ ಮಾತನು ಕೇಳು ಕಚ್ಚುಟವ ಧರಿಸಿದ
ಅಗಣಿತ ಸತ್ವನಿಗೆ ಈ ಪರಿಯೆ ಪ್ರಾಣಿ ೨

ಶಿವನ ನೋಡೋ ಮರುಳೆ ದೂರ್ವಾಸ ಮುನಿಯಾಗಿ
ಅವನಿಪತಿ ಮೊರೆ ಹೊಕ್ಕನಲ್ಲೊ
ಭುವನದೊಳಗೆಂದೆಂದು ವ್ರಣದಿಂದ ದುರ್ಗಂಧ
ಸ್ರವಿಸುವುದು ಶಿರಸಿನಲ್ಲೀ ಪ್ರಾಣಿ ೩

ಇಂದ್ರ ತರ್ಕವನೋದಿ ನರಿಯಾದ ಪರಸತಿ-
ಯಿಂದ ಮೇಷ ವೃಷಣನಾಭ
ಕಂದರ್ಪ ಶರೀರದಿಂದ ನಾಶನನಾಗಿ
ಬಂದ ಮೀನಿನ ಗರ್ಭದಿಂದ ಪ್ರಾಣಿ ೪

ಸೂರ್ಯ ಚಂದ್ರರ ನೋಡು ಮೂಲ ರೂಪದಿ ಪರ
ಭಾರ್ಯರಿಗೆ ಶಿಲುಕಿ ತಮ್ಮಾ
ವೀರ್ಯವನು ಕಳಕೊಂಡು ಬರಿದಾದರೋ ಕರ್ಮ-
ಕಾರ್ಯ ವಾರಿಗು ಬಿಡದೆಲೋ ಪ್ರಾಣಿ ೫

ಪಾವಕನು ಸರ್ವಭಕ್ಷಕನಾದ ಮಿಕ್ಕಾದ
ಅವಾವ ಸುರರ ಕರ್ಮಂಗಳ
ಯಾವತ್ತು ವರ್ಣಿಸಲಳವಲ್ಲ ಎಚ್ಚತ್ತು
ಪಾವನ್ನ ನೀನಾಗೆಲೋ ಪ್ರಾಣಿ ೬

ಆವಾವ ಸ್ಥಳದಲ್ಲಿ ಜನನ ಸ್ಥಿತಿಗತಿ ಮತ್ತೆ
ಸಾವು ಸಾಕಲ್ಯದಿ ಮರೆಯದಲೆ
ದೇವದೇವನು ಕ್ಲುಪ್ತ ಮಾಡಿಪ್ಪನೋ ಅದನು
ಆವನಾದರು ಮೀರಲೊಳವೇ ಪ್ರಾಣಿ ೭

ಉಣಬೇಕು ಉಣಬೇಕು ಮತ್ತೆ ಉಣಲೀಬೇಕು
ತ್ರಿ–ಗುಣ ಕಾರ‍್ಯರ ಭವಣೆ ಮನುಜ
ತೃಣ ಜನ್ಮ ಬಂದ ಕಾಲಕ್ಕು ತ್ರೈತಾಪಗಳು
ಅಣುಮಾತ್ರವೂ ತಪ್ಪವೋ ಪ್ರಾಣಿ ೮

ಧೀರನಾಗಲಿ ಮಹಾಶೂರನಾಗಲಿ ಮತ್ತೆ
ಧಾರುಣೀಪತಿ ಭಾಗ್ಯನಾಗೆ
ಆರಿಗಾದರು ಬಿಡದು ಪರೀಕ್ಷಿತರಾಯನು
ನೀರೊಳಗಿದ್ದ ತಿಳಿಯೋ ಪ್ರಾಣಿ ೯

ಜಲಗಿರಿವನ ಪೊದೆ ಹೊದರು ಗಹ್ವರ ಹುತ್ತ–
ಬಿಲ ಸಪ್ತದ್ವೀಪ ಪಾತಾಳದಿ
ಹಲವು ನಭ ಸ್ವರ್ಗಾದಿಲೋಕ ಜನನಿಯ ಜಠರ–
ದೊಳಗಿರೆ ತಪ್ಪುವುದೆ ಬರಹಾ ಪ್ರಾಣಿ ೧೦

ಅಣಿಮಾದಿ ಅಷ್ಟಾಂಗ ಯೋಗ ಮಾಡಲು ಮಹಾ
ಗುಣವಂತ ಜನರು ಒಂದು
ಕ್ಷಣವ ಮೀರಲುಬಹುದೆ ಮೃತ್ಯು ಬಂದೆದುರಾಗಿ
ಸೆಣಸುತಿರೆ ಬೇರುಂಟೆ ಕಾರ‍್ಯ ಪ್ರಾಣಿ ೧೧

ಎಲ್ಲೆಲ್ಲೆ ಅನ್ನ ಮತ್ತೆಲ್ಲೆಲ್ಲಿ ಉದಕ ಇ–
ನ್ನೆಲ್ಲೆಲ್ಲಿ ನಿದ್ರೆ ಜಾಗರಣೆಯೊ
ಎಲ್ಲೆಲ್ಲಿ ಹೆಜ್ಜೆಗಳನಿಡುವ ಪರಿಮಿತಿಯುಂಟೊ
ಅಲ್ಲಿಲ್ಲಿಗೊಯ್ಯುವುದೊ ಬಿಡದೆ ಪ್ರಾಣಿ ೧೨

ಧಿಕ್ಕಾರ ಸತ್ಕಾರ ನಿಂದೆ ವಂದನೆಗಳು
ರೊಕ್ಕಾ ಸುಖ ದುಃಖ ಕಾರಣಗಳು
ಉಕ್ಕೇರಿದಂತೆ ಬರುತಿಹುದೊ ನಮ್ಮ ದೇ-
ವಕ್ಕಿ ಕಂದನ ಆಜ್ಞೆಯಿಂದ ಪ್ರಾಣಿ ೧೩

ಕಾಶಿಯಲ್ಲಿರೆ ಮರಣ ಆವಲ್ಲಿ ಇಪ್ಪುದಾ-
ದೇಶಕ್ಕೆ ಒಯ್ಯುವುದು ಕಾಲ
ಕಾಶಿರಾಯನ ನೋಡು ಒಡನೆ ಅಪಮೃತ್ಯು ವೇದ-
ವ್ಯಾಸರಿದ್ದರು ತಪ್ಪಲಿಲ್ಲ ಪ್ರಾಣಿ ೧೪

ಮಾರುತ ಭಾರತಿ ಶೇಷ ಶಿವ ಪಾರ್ವತಿ-
ಸರಸಿಜ ಬಾಂಧವಾಗ್ನಿ ಧರ್ಮ
ತರುವಾಯ ಕಾಲ ಮೃತ್ಯು ಕಾಲನ ದೂತರು
ಅರಸುತಿಪ್ಪರು ಲವ ತ್ರುಟಿಯ ಪ್ರಾಣಿ ೧೫

ಇವರಿವರಿಗುತ್ತಮರು ಇವರಿವರಗಧಮರು
ಇವರೆಲ್ಲರಿಗೆ ಶ್ರೀ ಭೂಮಿ ದುರ್ಗಾ
ಅವಳಿಗೆ ಶ್ರೀ ಹರಿಯು ತಾನೆ ನಿಯಾಮಕನು
ವಿವರದಲಿ ತಿಳಿ ತಾರತಮ್ಯ ಪ್ರಾಣಿ ೧೬

ಲಕುಮಿ ಮೊದಲು ಮಾಡಿ ಇವರೆಲ್ಲರಿಗೆ ಲೇಶ
ಶಕುತಿಯಿಲ್ಲವೊ ಕಾಣೊ ಮರುಳೆ
ಅಕಟಕಟ ಗುಣಪೂರ್ಣ ಸರ್ವ ಸ್ವಾತಂತ್ರ ವ್ಯಾ-
ಪಕ ಸರ್ವಾಂತರ್ಯಾಮಿಯೆನ್ನೋ ಪ್ರಾಣಿ ೧೭

ಗುರು ಪರಂಪರ ವಾಯು ಲಕುಮಿ ನಾರಾಯಣನ
ಕರುಣಾ ಕಟಾಕ್ಷವುಳ್ಳನಕ
ಸುರ ನರೋರಗ ಯಕ್ಷಲೋಕದಲ್ಲಿದ್ದವರು
ಬರಿದೆ ಕೂಗಿದರೇನು ಆಹುದೋ ಪ್ರಾಣಿ ೧೮

ಆವಾವ ಕಾಲ ತಪ್ಪಿಸಿ ಕಾವ ಹರಿತಾನು
ಸಾವ ಕಾಲವ ಮಾತ್ರ ತಪ್ಪಿಸನೋ
ಕಾವ ಕೊಲ್ಲುವ ಸ್ವಾಮಿ ಕಾಲನಾಮಕ ಪುರುಷ
ಜೀವಿಗಳು ಮುಖ್ಯವಲ್ಲ ಕಾಣೋ ಪ್ರಾಣಿ ೧೯

ಭಗವವಸ್ವತಂತ್ರವನು ತಿಳಿಯದೆ ಮರುಳಾಗಿ
ಜಗದೊಳಗೆ ಚರಿಸದಿರೊ ಮಾನವ
ಅಘ ದೂರನಾಗೊ ನಾನಾ ಬಗೆಯಿಂದಲ-
ನ್ಯಗರ ಚಿಂತೆಗಳಲ್ಲಿ ಬಿಟ್ಟು ಪ್ರಾಣಿ ೨೦

ಹಲವು ಮಾತೇನಿನ್ನು ದಾಸಭಾವವ ವಹಿಸಿ
ಕಲಿಯುಗದೊಳಗೆ ಸಂಚರಿಸೆಲೊ
ಬಲವಂತ ವಿಜಯವಿಠ್ಠಲನ ಪಾದಾಂಬುಜವ
ನಿಲಿಸಿ ವಲಿಸಿಕೊ ಮನಸಿನಲ್ಲಿ ಪ್ರಾಣಿ ೨೧

ಕಥನಾತ್ಮಕ

೫೨೯

ಆರಸಿಕೊಡು ಒಬ್ಬಳ ಅರಸಿಕೊಂಬೆ ।
ಅರಸಿಕೊಂಬೆ ಮನಸ್ಸಿಗೆ ಬಂದವಳ ಪ

ಶ್ರೀ ರುಕ್ಮಿಣಿ ಸಂಗಡ ಕೇಳಿಯಲಿ ಶ್ರೀ ರಮಣ ಇರಲು ।
ನಾರದಮುನಿ ಬಂದು ಕುಳಿತು ಷೋಡಶೋಪಚಾರವ
ಕೊಂಡು ಮಾತಾಡಿ ಬೇಡಿದ ೧

ನಾರಿಯರು ನಿನಗೆ ಉಂಟಾಗ ಈರೈದು ಸಾವಿರ
ನೂರಾಎಂಟು ಮಂದಿಯೊಳಗತಿ ಚಲುವಿಯು
ಕಾರುಣ್ಯವನು ಮಾಡುಬೇಕು ಪರಾಕು ೨

ಕೇಳ್ಳೈ ಮಹ ತಪಸಿಯನ್ನೀಗ ವೇಳ್ಯ ಮೀರಗೊಡದೆ ।
ಲಾಲಿಸು ಮಾತನು ನಾ ನಿಲ್ಲದೆ । ಸತಿ ಆಲಯಕೆ
ವೇಗ ಪೋಗು ನೀ ಸಾಗು ೩

ನಿಂದಿರದೆ ನಾರದಾ ಗೋಪಿಯವರ ಮಂದಿರವ ಸುತ್ತಿದಾ ।
ಒಂದೊಂದು ಮನೆಯಲಿ ಸೋಜಿಗ ಅತಿಶಯ ।
ಅಂದು ನಾರದಗೆ ತಾ ತೋರಿದ ಬಿರುದಾ ೪

ಒಂದೆ ಮನೆಲಚ್ಯುತಾ ಅನಂತ ಒಂದು ಕಡೆ ಗೋವಿಂದ ।
ಒಂದೆರಡು ನಾಲ್ಕು ಆರಭ್ಯವಾಗಿ
ನೂರೊಂದು ಪರಿಯಂತ ಏಕಾಂತ ೫

ಪಗಡಿಯೊಳೊಂದು ಮನೆ ।
ಚದುರಂಗ ನಗೆಕೂಟ ಒಂದು ಮನೆ ।
ಮಗುವು ಮುದ್ದಾಡಿ ಮಂಚದ ಮೇಲೆ ಮಡದಿಯಾ ।
ಬಿಗಿದಪ್ಪಿ ಸವಿನಾಡುವ ನೋಡಾ ೬

ಉಯ್ಯಾಲೆ ಒಂದು ಕಡೆ ಕೈಗಳು
ಹೋಯಿದಾಟ ಒಂದು ಮನೆ ।
ಮನ್ಯರಾದ ಶುದ್ಧಿ ಮಕ್ಕಳ ಶೋಭನಾ ।
ಪಯಣಗತಿಯಲಿದ್ದ ವಾರ್ತಿ ಒಂದರ್ಥಿ ೭

ಕರುಗಳು ಒಂದು ಕಡೆ ಬಿಡುತ ತುರುಗಳ ಒಂದು ಮನೆ ।
ಕರಕೊಂಡು ಕುಡಿಯುತಾ ।
ತರುಣಿಯ ತುರುಬಿಗೆ ಅರಳಿದ
ಕುಸುಮವ ಮುಡಿಸುತ ನುಡಿಸುತಾ ೮

ಸ್ನಾನವು ಒಂದು ಕಡೆ ಸಂಧ್ಯಾನ ಮೌನವು ಒಂದು ಕಡೆ ।
ಧ್ಯಾನ ಜಪ ತಪ ವ್ಯಾಖ್ಯಾನ ಪುರಾಣ ।
ದಾನ ಧರ್ಮಗಳ ಕೊಡುವನು ನಡೆವನು ೯

ನಿಂದಿದ್ದ ಒಂದು ಮನೆ ಎಣ್ಣೆ ಪೂಸಿ
ಮಿಂದುಂಡು ಒಂದು ಮನೆ ।
ಕಂದಗಳಾಡಿಸಿ ಪರಿಪರಿಯಿಂದಲೆ ಒಂದು
ಅನಂತ ಇದ್ದಾ ಅನಿರುದ್ಧಾ ೧೦

ಬೆರಗಾಗಿ ಬೆಡಗು ನೋಡಿ ತಿರುಗಿ
ಬಂದು ಹರಿಯ । ಚರಣಕ್ಕೆ ಬಿದ್ದು ।
ಅರಿಯದೆ ಮರುಳಾದೆ ವಿಜಯವಿಠ್ಠಲರಾಯ ।
ಪರಬ್ರಹ್ಮ ನೀನಲ್ಲದಿಲ್ಲಾ ಇನ್ನಿಲ್ಲಾ ೧೧

೫೩೦

ನಾರಾಯಣನು ನಾರಿಯಾದನು
ನಾರಾಯಣನು ನಾರಿಯಾಗಲು ಉಗರು ಕಾಂತಿ ಪೋಗಿ
ವಾರಿಜಭವ ಮಾರರಿಪು ಮುಖ್ಯರ
ಸಾರಸುಂದರವ ತಿರಸ್ಕರಿಸೆ ಶೃಂಗಾರಸ ನಿಧೆ ಪ

ಸುರರಸುರ ಕರೆಸಿ ವೈರೆವ
ಮರೆಸಿ ಸ್ನೇಹದಿಂದಿರಿಸಿ ಈ ಕುಲ
ವರಿಸಿ ನಿಮ್ಮೊಳು ಬೆರಸಿ ಸುಖವಂಕುರಿಸುವಂತೆ ಸಂಚರಿಸೆಂದು
ಸರಸದಿಂದಲಾದರಿಸೆ ಸುರರ
ಧರಿಸಿ ಬಿಡದುದ್ಧರಿಸುವೆ ನಿದ್ರಿ
ತರಿಸಿ ದೈತ್ಯರ ವರಿಸೆಂದು
ಸರಸಿಜಾಂಬಕ ಹರಿ ಸಿರಿ ೧

ದಿತಿಜಾದಿತಿ ಜ್ಯಾತ ತತಿಗಳನು ಸ
ಮ್ಮತ ಬಡಿಸಿ ಅಮೃತ ಬಪ್ಪದಕ್ಕೆ
ಹಿತವ ಪೇಳುವೆನೆಂದತಿಶಯದಿಂದ
ಚತುರಾತುಮ ಮಾರುತ ಪಿತಾ

ಕ್ಷಿತಿಯೊಳು ನೂರು ಶತ ಯೋಜನ ಪರ್ವತ ಮಂದಾರುಂಟು
ಜತೆಯಲಿ ಏಕಮತರಾಗಿ ಪೋಲ್
ಜಾತವ ಕಿತ್ತೆತ್ತಿಸಿತಾಬ್ಧಿಯೊಳು ಮಥಿಸೆಂದು ೨

ಹರಿ ನಿರೂಪವ ಧರಿಸಿ ಎಲ್ಲರು
ಗಿರಿಯ ಬಳಿಗೆ ಹರಿದರಾಗಲೆ
ಕಿರಿ ಬೆರಳ ಅಬ್ಬರದಾಟವು ಬೊಬ್ಬಿರುವ ಧ್ವನಿ ಭೀಕರ
ಸಾರೀಗಧರ ಅಂಬರೆಂಟು ಕರಿ ಎರಡೈದು
ಶರಧಿ ಮಿಕ್ಕ ಗೋತುರ ಸಪ್ತದ್ವೀಪ
ತರು ಮೃಗಾದಿ ಜೀವರು ತಲ್ಲಣಿಸೆ
ಗಿರಿ ವೆಗ್ಗಳಿಪ ಭರಕಂದು ೩

ಸುತ್ತ ಈ ಪರಿಯಾಗುತ್ತಿರೆ ಇತ್ತ ಪ
ರ್ವತವಲ್ಲಾಡಿಸಿ ಕಿತ್ತಿ ತೆಗೆದೆತ್ತಿ
ಹೊತ್ತರಿತ್ತಂಡದಿ ಚಿತ್ತ ಮಾರ್ಗವನು ಹತ್ತಿ ಬರಲು ದೇವತೆಗಳು
ಹೊತ್ತರದ್ರಿಮೂಲ ಎತ್ತಲಾರದಲೆ
ತತ್ತಳಗೊಂಡು ಮಾರುತ್ತ ಅಡಿಗಡಿ
ಎತ್ತಿಡಲರಿದು ದೈತ್ಯರ ವಂಚಿಸಿ ಆ
ದಿತ್ಯರಿಗಿರಿಸಿದುತ್ತಮನೊ ೪

ವನಧಿಯೊಳದ್ರಿ ದನುಜ ಮರರ ಗುಣವಿಳಹಿ ಸ
ರ್ಪನ ತಂದೀಗ ನೇಣನೆ ಮಾಡಿದರು
ಫಣ ಸುರರು ಬಾಲನು ದೈತ್ಯಯರು ಹೂಣಿಕೆಲಿ
ವಿನಯದಿಂದ ಮಥಿಸುವಾಗ
ವದನದನಿಲಕೆ ಅನಿಮಿಷರು ತಲ್ಲಣಿಸೆ
ಹರಿ ತನ್ನನು ನಂಬಿದವರ ಕಾಯಿದ ವಂಚನೆಯಿಂದ ೫

ಉಭಯ ಜನರು ಗಂಭೀರವಾದ ಕ್ಷೀರಾಂಬುಧಿ ಕಟವ
ರಭಸಗೈದು ಕಕುಭದಲಿ ಪ್ರತಿ ಶಬ್ದಪುಟ್ಟಿ ಉ
ದುಭವಿಸಿದವು ಶುಭಾ ಶುಭ

ಪ್ರಭು ಧನ್ವಂತ್ರಿ ಸುಲುಭ ರಸ ತಾರೆ
ವಿಭುದರೊಳಗೆ ಗಲಭೆಯ ಬೀಸಿ ಅ
ನಿಬರು ಒಯ್ಯಲು ಋಭುಜಾದ್ಯರು
ಅಬುಜಾಪ್ತ ಪೋದನಭವಾಗೆ ೬

ಹರಿ ತಿಳಿದ ಭಕ್ತರ ಮನೋಕ್ಲೇಶ
ಸಿರಿ ಸ್ತುತಿಗಗೋಚರನೆನ್ನಲು
ಧರಿಸಿ ಬಂದನು ಮಿರುಗುತಿಪ್ಪ ಸುಂ
ದರ ನಾರೀ ರೂಪ ಪರದೈವ
ಅರುಣ ಚರಣ ಬೆರಳುಂಗುರ ನೂಪುರ
ಕಡಗ ಕುಸುಮ ಪೊಂಗೆಜ್ಜೆಯ
ಸರಪಳಿಯ ಮೇಲೊಲಿವ ಕಾಂಚಿದಾಮ
ಶರತ್ಕಾಲದ ಚಂದಿರನಂತೆ ೭

ಸಣ್ಣವನಾರಾ ಮೋಹನ್ನಕರವು ಪಾ
ವನ್ನ ಕೌಸ್ತುಭ ರನ್ನ ವನಮಾಲೆ
ಚೆನ್ನದ ಸರ ಶೋಭನ ಕರಡಿಗೆ
ಚನ್ನಗೋಡಿ ಸರ ಬಣ್ಣ ಸರ
ರನ್ನದಪದಕ ಕನ್ನಡಿ ಮಲಕು
ಚನ್ನಪ ನ್ಯಾವಳ ಮುನ್ನೆ ಸರ್ವಹಾರ
ಭಿನ್ನಭಿನ್ನವಾಗಿನ್ನು ತೋರಲು ಸಂಪನನ್ನು ಅಪರಿಚ್ಛಿನ್ನ ಮೂರ್ತಿ ೮

ಮುತ್ತಿನ ಚಿಂತಾಕ ಮುತ್ತಿನೋಲೆ ಜಾತ
ಮುತ್ತಿನ ಮೂಗುತಿ ಮುತ್ತಿನಕ್ಷತಿಯು
ಮುತ್ತಿನ ಸೂಸುಕಾ ಮುತ್ತಿನ ಜಡೆಯು
ಮುತ್ತಿನ ಗೊಂಚಲು ಮತ್ತೆ ತೋಳು
ಮುತ್ತು ಮೇಲಗೊಪ್ಪು ಕತ್ತಲೆ ಸೋಲಿಪ ಕಸ್ತೂರಿ ತಿಲಕಾ
ನೆತ್ತಿಯ ಬೈತಲು ಸುತ್ತ ತಳಪು ಸುರೋತ್ತಮ ಚಂದ್ರಮಾ
ನಿತ್ಯಾನಂದ ಪರುಷೋತ್ತಮನು ೯

ನೀಲಗೂದಲು ಸುಫಲಾದಿ ಶ್ರವಣ ಭ್ರೂಲಾದಿಕವು ಚಂ
ಚಲ ನಯನ ಕಪೋಲ ನಾಸಿಕ ತಾಂಬುಲದ ವದನ
ನಾಲಿಗೆತಳ ವಿಶಾಲ ಭುಜ
ಮೇಲು ಕಂದರ ಸುಂಡಾಲಾಕಾರವಾದ
ತೋಳು ಕರತಳ ಪಾಲು ಬಪ್ಪ ಸ್ತನ
ಸ್ಥೂಲೋದರ ನಾಭಿ ಲೀಲಾ ನಡವು ಪಂ
ಚಳ ಊರು ಜಾನು ಲೋಲಾಡುತಾ ೧೦

ಹರಡಿ ಕೈಕಟ್ಟು ಬೆರಳುಂಗುರವ
ವರ ಕಂಕಣಾದಿ ಸರಿಗೆ ತಾಯಿತ
ಸರ ಹುಲೆಯುಗರು ಎಣ್ಣೆ ನೂಲು
ತರುಳಹಾರ ಚೌರಿಯಿಂದ ಪರಿಪರಿ ಚಿತ್ರ ಬರೆದ ಕಂಚುಕಾ
ಸರಿಸರಿ ಬಂದಾಭರಣ ಧರಿಸಿ
ಅರೆ ಶರಗು ಗಹ್ವರದಿ ಮಾಡುತ್ತ
ಮರಿಯಾನೆ ಬಪ್ಪ ತೆರದಂತೆ ೧೧

ಗಂಧ ಪಚ್ಚಿಕೊಂಡು ಒಂದು ಕರದೊಳು
ಗಂಧ ವಿಳ್ಯವು ಮತ್ತೊಂದು ಕರದೊಳು
ಕಂದುಕ ಪುಟಿಸುತ್ತೊಂದೊಂದು ಹೆಜ್ಜೆಯನು
ನಿಂದಲ್ಲಿ ನಿಲ್ಲದೆ ಚಂದದಿಂದ
ಬಂದಬಂದಂತೆ ಪೂ ಮಂದರಾದಿ ಮುಡಿಯಿಂದ ಉದರಲು
ಮಂದಹಾಸದಿಂದ ವೇಗ ನಡೆ ತಂದು ಸಮೀಪದಿ
ನಿಂದನು ಖಳರಿಗೊಂಡಿ ಮಾರಿ ೧೨

ದುರುಳ ಸಮೂಹ ಪರವಶನಾಗಿ ಬೆರಗಾಗಿ ನಿಲ್ಲೆ
ಕರೆದು ನಿಮ್ಮಯ ಪರಿ ಏನೆನಲು
ಇರದೆ ಪೇಳಲು ಶಿರವದೂಗುತ್ತಾತಾರವೆಂದ
ಭರ ಯೌವ್ವನ ಸ್ತ್ರೀ ಪರಪುರಷರ
ಸರಿತದಲ್ಲಿಗೆ ಚರಿಸಬಾರದು
ಎರಡು ಬಲದವರು
ಕರದಿ ಲೋಚನವ ಮುಚ್ಚಿ ಸಾಗಿರೆ ಪಂಜ್ತಿ ೧೩

ಬಡಿಸೂವೆನೆ ಒಡನೆ ತಮ್ಮಯ
ಪಡೆ ಸಮ್ಮತ ಸಾಲ್ಹಿಡಿದು ಕುಳ್ಳಿರೆ
ನಡುವೆ ಪಿಯೂಷ ಪಿಡಿದು ದುಷ್ಟರ
ಕಡಿಗೊಂದು ಬಿಂದು ಬಡಿಸದೆ
ದೃಢ ಭಕ್ತರಿಗೆ ಕುಡಿಸುತ್ತಿರಲು
ಬಡ ರಾಹು ತಾನು ದುಡುಗಿ ಸುರರಾ
ಎಡೆಯೊಳಿರಲು ಕುಡಿತಿಯೊಳು ತಾ ಬಡಿಸಿ ಚಕ್ರವಾ ತುಡುಕಿದ ೧೪

ಓರ್ವನ ತರಿದು ಈರ್ವಗೆ ಮಾಡಿದ
ಊರ್ವಿಗೆ ಕೆಡಹಿ ಗರ್ವ ಮುರಿದು
ಸರ್ವಬಗೆಯಿಂದ ನಿರ್ವಾಹ ಕರ್ತನು
ಓರ್ವನಲ್ಲದೆ ಮತ್ತೋರ್ವನಾರೊ
ನಿರ್ವಿಣ್ಣರಾಗಿದ್ದ ಗೀರ್ವಾಣ ಜನರ
ನಿರ್ವಾಧಿಕವೊಹಿಸಿ ಪರ್ವತೆಡೆಯಿದ್ದ ದು
ರ್ವಿಷಯಾಬ್ಧಿಗೆ ಚೀರ್ವನಾಗಿದ್ದ ವಿಜಯವಿಠ್ಠಲ ನಿರ್ವಾಣೇಶ ೧೫

೫೩೧

ಶ್ರೀನಾಥ ಶ್ರೀನಾಥ ಶ್ರೀನಾಥ
ಮೋಹಿನೀ ರೂಪ ತಾ ತಾಳಿದಾನೆ ಸುಕಲಾಪ
ತಾನೋಡಿಸುವುದು ಹೃತ್ತಾಪ
ವನಂಬೆನೆ ಹರಿಯ ಪ್ರತಾಪ ಪ

ಬಂಗಾರದ ಲತೆಯಂತೆ ಬಳುಕುವಳು
ಬಾಜು ಬಂದಿಗೆ ಗೊಂಡೆಗಳ ಕಟ್ಟಿಹಳು
ಮುಂಗಾಲಿಲೆ ನಿರಿಗಿಗಳ ಚಿಮ್ಮುವಳು
ಮೋಹನ ಮಾಲೆಗಳ ಕಟ್ಟಿಹಳು
ಕುಂಭ ಕುಚದ ಭಾರಕ್ಕೆ ತಡಿಯಳೂ
ತುದಿಬೆರಳಲಿ ಗಲ್ಲವನೊತ್ತಿಹಳು

ರಂಗು ಕೇಸರಿ ಗಂಧ ಹಚ್ಚಿಹಳು
ರಾಜೀವದ ಮಂಜರಿಯ ಪೋಲುವಳು
ಹೊಂಗ್ಯಾದಿಗೆ ಪೋಲುವ ಮೈಬಣ್ಣ
ಹೊಮ್ಮಸದಲಿ ಹೋಲುವ ಈ ಹೆಣ್ಣು
ಹಿಂಗಡೆಯಲಿ ವರ ಹೆರಳು ಭಂಗಾರ
ಹಿಮ್ಮಡಿ ಬಡಿಯೋದು ಸರ್ಪಾಕಾರ

ಭಂಗಿಸುವಳು ಬಹು ದೈತ್ಯರ ಹೃದಯ
ಬಹು ವಿಲಾಸದಿ ತೋರ್ಪಳು ಸಖಿಯ
ಅಂಗಜದರು ಗಂಧಕೆ ಅಳಿವೃಂದ
ಆಡುತಲಿಗೆ ಝೇಂಕಾರಗಳಿಂದಾ
ಸಂಗಡನೆರದ ಸುರಾಸುರರಿಂದ
ಸೊಕ್ಕ ಮೋಹಿಸಿದಳು ಸತಿ ಚಲುವಿಂದಾ

ಮಂಗಳಮುಖಿ ನಮ್ಮಂಗಳ ಮೋಹಿಸಿ
ಭಂಗನ ಪಡಿಸುವಳ್ಳೆ ತ್ರಿಜಗವ
ಜಗಂಗಳ ಪಾಲಿಸುವಳು । ಮನ
ಸಂಗಡ ಅಪಹರಿಸುವಳು । ಜಡ
ಜಂಗಮಲಿಗೆ ಬಹು ಪ್ರೀತ್ಯಾಸ್ಪದಳು
ಸಾರಂಗಿ । ಸಾರಂಗಿ । ಸಾರಂಗೀ
ಸಾಂಬಮದ ಭಂಗಿ । ಬಹಳ ಸುಖಸಂಗಿ
ಸುಂದರಿ ಲಲಿತಾಂಗಿ । ಮೋಹನಾಪಾಂಗೀ
ಬಡು ಹೆಂಗಲ್ಲ ಈಕೆ ಬಹುಭಂಗ
ಬಡುವಿರಿ ಜ್ವಾಕೆ ॥ ಶ್ರೀನಾಥ ॥ ೧

ಕನ್ನಡಿಯಂದದಿ ಪೋಲುವ ಕಪೋಲ
ಕರ್ಪೂರ ರಂಜಿತ ವರ ತಾಂಬೂಲ
ಕಣ್ಣಿಗ್ಗಚ್ಚಿಹಳು ಕನಕದ ಕೋಲಾ
ಕಾಮಿನಿಯಂದಡಿ ತೋರ್ಪಳು ಜಾಲಾ

ಬಿನ್ನುಡಿ ಹಾಕಿದ ಚಂದ್ರದ ಕುಪ್ಪುಸ
ಚಪಲಾಕ್ಷಿಯ ನೋಟದ ಬಲು ರಭಸಾ
ಕರ್ಣಾಯತ ನೇತ್ರಗಳ ವುಲ್ಲಸಾ
ವುನ್ನಂಕಾ ನಾಶಿಕದ ಬುಲಾಕು
ವಜ್ರಮಯದ ವರಮುಖರೆದ ಬೆಳಕು
ಕರ್ಣದಿ ರತ್ನಖಚಿತ ತಟಾಂಕಾ
ಕುಸುರು ಹಚ್ಚಿದ ಬಾಹುಲಿಗಳ ಬಿಂಕ

ಸಣ್ಣ ನಡುವಿನೊಯ್ಯಾರದ ನಲ್ಲೆ
ಸರಸಿಜನಾಭನ ಸೃಷ್ಟಿ ಇದಲ್ಲೆ
ಬಣ್ಣಿಸಲಳವಲ್ಲವು ಸೌಂದರ್‍ಯ
ಬಿಡಿಸುವುದು ಕೇಳ ಮುನಿಗಳ ಧೈರ್ಯ
ಬೆಣ್ಣೆಯಂತೆ ಮೃದುವಾದ ಶರೀರ
ಭಾಗ್ಯಹೀನರಿಗೆ ಇದು ಬಲುದೂರಾ
ಕನ್ನೆ ಶಿರೋಮಣಿ । ಕಾಮನ ಅರಗಿಣಿ
ಕೌಸ್ತುಭಮಣಿಗಳ ಹಾರೇ
ಸುವರ್ಣವರ್ಣ ಸುಕುಮಾರೇ
ಮೋಹನ್ನರಸನೆ ಗಂಭೀರೇ
ಮೋಹನ್ನೆ ಮಧುರ ಮಧುರಾಧರ ಮಂಜುಳ
ವಕುಜಲರೆ ಬಹೋಚ್ಚಧರೆ ಛುಪ್ಪನ್ನ
ಛಪ್ಪನ್ನ ದೇಶಗಳು ಚಲುವರಿದ್ದರೂ
ಚಪಲಾಕ್ಷಿಗೆ ಸಮರಾರೇ
ಗತ ಪುಣ್ಯದಿಂದ ಕೈಸೇರುವಳಲ್ಲದೇ
ಕಾಮಾಂಧರಿಗತಿ ದೂರೇ

ಈ ಹೆಣ್ಣು । ಈ ಹೆಣ್ಣು । ಈ ಹೆಣ್ಣು
ಸುರಾಸುರರನ್ನೆ ಮೋಹಿಸಳು
ಚನ್ನ ಮನಕೆ ತರಳಿನ್ನ ಬಿಡು
ವಿಷದ್ವಣ್ಣು ಅಪೇಕ್ಷಿಸೆ ಮಣ್ಣು ಕೂಡಿಸುವಳು

ತನ್ನ ಜನರಿಗಮೃತಾನ್ನ ಕೊಡುವಳು
ಮಾನ್ಯಳು ಪರಮಸೋನ್ನಳು ।
ಸುಗುಣ ಅರಣ್ಯ ವಿನಾಶೇ
ಬ್ರಹ್ಮಾಂಡಜಾದ್ಯಂಗೀತೇ ॥ ಶ್ರೀನಾಥ ॥ ೨

ಹುಡುಗಿ ನೋಡು ಹೊಸ ಪರಿಯಾಗಿಹಳು
ಹದ ಮೀರಿದ ಯವ್ವನದಿ ಮೆರೆವಳು
ಮುಡಿಯಲಿ ಮಲ್ಲಿಗಿ ಅರಳು ತುಂಬಿಹಳು
ಮಂದಸ್ಮಿತದಲಿ ಮೋಹಿಸುತಿಹಳು
ಬೆಡಗಿನಿಂ ನುಡಿಯ ಸವಿಯ ತೋರುವಳೂ ॥

ಬಹು ವಿಧದಾಭರಣಗಳನ್ನಿಟ್ಟಹಳು
ನಡಿಗಿಗಳಿಂದ ನಾಚುತ ಹಂಸ
ನವಮಣಿ ಚಂದ್ರರ ಕೆಡಿಸಿತು ।
ನಂಬೆ ಜಡಿತ ಮುತ್ತಿನ ತಾಯಿತ ಕಠಾಣೀ
ಜಗವನು ಮೋಹಿಸುವಳು ಸುಶ್ರೋಣೀ

ಬಿಂಕದ ನುಡಿ ಸೊಬಗಿನ ಚಂದಾ
ಅಡಗಿದವೆ ಪಿತಭೃಂಗಗಳಿಂದಾ
ಹಿಡಗಿ ಮರಗಿ ಮಧ್ಯಶಮನ ಮರಗೀ
ಹಿರಿಮೈಸಿತು ಕೇಸರಿ ಬಹು ಸೊರಗೀ
ಉಡುಪತಿ ಕೋಟಿ ಪ್ರಭ ಧಿಕ್ಕಾರಾ
ಉಲ್ಲಾಸದಿ ಮನ ಮುಖ ಚಂದಿರಾ
ನಡಿಗಗಳಿಂದೆನೆ ರಾಜಿಸುತಿ ಹೋದೆ
ನವರತ್ನದಯದೆ ಮಯದ ಫಣಿಕಟ್ಟು
ಮೇಲ್ಪೊಡವಿವೊಳಗೆ ಪಡಿಗುಣಕ ಕಡಿಯಿಲ್ಲಾ
ಸುಳ್ಳುನುಡಿಯಿಲ್ಲಾ ಯೆನ್ನೊಡೆಯಾ
ಶ್ರೀ ವಿಜಯ ವಿಠ್ಠಲನಲ್ಲದೆ ಎಲ್ಲಿಂದ ಬಂದಳೋ ಕೆಳದೀ
॥ ಶ್ರೀನಾಥ ॥ ೩

೫೩೨

ಶ್ರೀಶ ವೇದವ್ಯಾಸನಾದನು ಪ

ಶ್ರೀಶ ವೇದವ್ಯಾಸನಾಗಲು
ಸಾಸಿರ ನಯನ ಸಾಸಿರ ವದನ
ಸಾಸಿರ ಕರ ಮಿಕ್ಕ ಸುರರೆಲ್ಲ ತು–
ತಿಸಿ ಹಿಗ್ಗುತ ಹಾರೈಸಲಂದು ಅ.ಪ.

ದರ್ಪಕ ಜನಕ ಸರ್ಪತಲ್ಪನಾಗಿ
ತಪ್ಪದನುಗಾಲ ಇಪ್ಪ ವಾರಿಧೀಲಿ
ವಪ್ಪದಲಿ ಕಂದರ್ಪ ಹರನ್ಯೆಯ
ಸುಪರ್ಣರಥನಾಗಿ ಒಪ್ಪಿಕೊಂಡು
ಇಪ್ಪತ್ತು ಲಕ್ಷಗಲಿಪ್ಪ ಯೋಜನದ
ಅಪ್ಪನ ಅರಮನೆ ದರ್ಪಣದಂತೆ ತಾ
ರಪ್ಪಥ ಮೀರಿದಂತಿಪ್ಪದು ನೋಡಿ ಸಾ–
ಮೀಪಕ್ಕೆ ವಾಣೀಶ ಬಪ್ಪ ಬೇಗಾ ೧

ಬಂದು ಬೆನ್ನೈಸಿದ ಮಂದಮತಿ ಕಲಿ–
ಯಿಂದ ಪುಣ್ಯಮೆಲ್ಲ ಹಿಂದಾಯಿತೆನೆ ಮು
ಕುಂದ ಭಕ್ತನಿಗೆ ಒಂದೆ ಮಾತಿನಲಾ–
ನಂದ ಬಡಿಸಿ ಪೋಗೆಂದು ಪೇಳೆ
ಅಂದು ಸುಯೋಜನಗಂಧಿ ಗರ್ಭದಲ್ಲಿ
ನಿಂದವತರಿಸುತ ಪೊಂದಿದ ಅಜ್ಞಾನ
ಅಂಧಕಾರವೆಲ್ಲ ಹಿಂದು ಮಾಡಿ ಸುರ–
ಸಂದಣಿ ಪಾಲಿಸಿ ನಿಂದ ದೇವ ೨

ಕೆಂಜೆಡೆವೊಪ್ಪ ಕೃಷ್ಣಾಜಿನ ಹಾಸಿಕೆ
ಕಂಜಾಪ್ತನಂದನದಿ ರಂಜಿಸುವ ಕಾಯ
ಮಂಜುಳ ಸುಜ್ಞಾನ ಪುಂಜನು ವಜ್ರರ–

ಪಂಜರನೋ ನಿತ್ಯ ಅಂಜಿದಗೆ
ಸಂಜೆಯ ತೋರಿ ಧನಂಜಯ ಶಿಷ್ಯ ನೀ-
ಗಂಜದಂತೆ ಕರಕಂಜವ ತಿರುಹಿ
ಮಂಜುಳ ಭಾಷ ನಿರಂಜನ ಪೇಳಿದ
ಕುಂಜರ ವೈರಿಯ ಭಂಜನನು ೩

ಗಂಗಾತೀರದಲಿ ಶೃಂಗಾರ ಉಪವ-
ನಂಗಳದರೊಳು ಶಿಂಗಗೋಮಾಯು ಭು
ಜಂಗ ಮೂಷಕ ಮಾತಂಗ ಸಾರಮೇಯ
ಕೊಂಗಹಂಗ ಸರ್ವಾಂಗ ರೋಮ
ತುಂಬ ಶರಭ ವಿಹಂಗ ಶಾರ್ದೂಲ ಸಾ-
ರಂಗ ಕುರಂಗ ಕುಳಿಂಗ ಪಾಳಿಂಗ ಪ್ಲ
ವಂಗ ತುರಂಗ ಪತಂಗ ಭೃಂಗಾದಿ ತು-
ರಂಗವು ತುಂಬಿರೆ ಮಂಗಳಾಂಗ ೪

ಬದರಿ ಬೇಲವು ಕಾದರಿ ಕಾಮರಿ
ಮಧುಮದಾವಳಿ ಅದುಭುತ ತೆಂಗು
ಕದಳಿ ತಪಸಿ ಮದಕದಂಬ ಚೂ-
ತದಾರು ದ್ರಾಕ್ಷಿಯು
ಮೃದು ಜಂಬೀರವು ಬಿದಿರು ಖರ್ಜೂರ
ಮೋದದಿ ದಾಳಿಂಬ ತುದಿ ಮೊದಲು ಫ
ಲದ ನಾನಾವೃಕ್ಷ ಪದಲತೆಯ ಪೊದೆಯು ಫಲ್ಗಸೈ
ಇದೆ ಆರು ಋತು ಸದಾನಂದ ೫

ವನದ ನಡುವೆ ಮುನಿಗಳೊಡೆಯ
ಮಿನುಗುತ್ತಿರಲಾ ಕಾನನ ಸುತ್ತಲು ಆ-
ನನ ತೂಗುತ್ತ ಧ್ವನಿಯೆತ್ತಿ ಬಲು-
ಗಾನ ಪಾಡಿದವು ಗುಣದಲ್ಲಿ
ಕುಣಿದು ಖಗಾದಿ ಗಣಾನಂದದಿಂದಿರೆ

ವನನಿಕರ ಮೆಲ್ಲನೆ ಮಣಿದು ನೆ–
ಲನ ಮುಟ್ಟುತಿರೆ ಅನಿಮಿಷರು ನೋ
ಡನಿತಚ್ಚರಿಯನು ಪೇಳೆ ೬

ಮೌನಿ ನಾರದನು ವೀಣೆ ಕೆಳಗಿಟ್ಟು
ಮೌನವಾದನು ಬ್ರಹ್ಮಾಣಿ ತಲೆದೂಗಿ
ತಾ ನಿಂದಳಾಗ ಗೀರ್ವಾಣ ಗಂಧರ್ವರು
ಗಾನ ಮರೆದು ಇದೇನೆನುತ
ಮೇನಕೆ ಊರ್ವಸಿ ಜಾಣೇರು ತಮ್ಮಯ
ವಾಣಿ ತಗ್ಗಿಸಿ ನರ್ತನೆಯ ನಿಲ್ಲಿಸಿ
ದೀನರಾದರು ನಿಧಾನಿಸಿ ಈಕ್ಷಿಸಿ
ಎಣಿಸುತ್ತಿದ್ದರು ಶ್ರೀನಾಥನ ೭

ನಮೋ ನಮೋಯೆಂದು ಹಸ್ತ–
ಕಮಲ ಮುಗಿದು ನಮಗೆ ನಿಮ್ಮಯ
ಅಮಲಗುಣ ನಿಗಮದಿಂದೆಣಿಸೆ
ಕ್ರಮಗಾಣೆವು ಉತ್ತಮ ದೇವ
ಕೂರ್ಮ ಖಗಮೃಗ ಸಮವೆನಿಸಿ ಅ–
ಚಮತ್ಕಾರದಲ್ಲಿ ನಾಮಸುಧೆಯಿತ್ತ
ರಮೆಯರಸ ಆಗಮನತ ೮

ಇದನು ಪಠಿಸೆ ಸದಾ ಭಾಗ್ಯವಕ್ಕು
ಮದವಳಿ ದಫವುದದಿ ಬತ್ತೋದು
ಸಾಧನದಲ್ಲಿಯೆ ಮದುವೆ ಮುಂಜಿ
ಬಿಡದಲ್ಲಾಗೋದು ಶುಭದಲ್ಲಿ
ಪದೆಪದೆಗೆ ಸಂಪದವಿಗೆ ಜ್ಞಾನ–
ನಿಧಿ ಪೆಚ್ಚುವುದು ಹೃದಯ ನಿರ್ಮಲ
ಬದರಿನಿವಾಸ ವಿಜಯವಿಠ್ಠಲ
ಬದಿಯಲ್ಲೆ ಬಂದೊದಗುವ ೯

೫೩೩

ಭೀಮ ಶಾಮ ಕಾಮಿನಿಯಾದನು ಪ

ಭೀಮ ಶಾಮ ಕಾಮಿನಿಯಾಗಲು
ಕಾಮನ ಪತಿ ಪುಲೋಮ ಜಿತುವಿನ
ಕಾಮಿನಿ ಸಕಲ ವಾಮ ಲೋಚನೆಯ-
ರಾಮೌಳಿ ಕೂಗುತಲೊಮ್ಮನದಿ ಪಾಡೆ ಅ.ಪ

ದಾಯವಾಡಿ ಸೋತು ರಾಯ ಪಾಂಡವರು
ನ್ಯಾಯದಿಂದ ಸ್ವಾಮಿಯ ಸೇವೆಯೆಂದು
ಕಾಯದೊಳಗೆ ಅಸೂಯೆಪಡದಲೆ
ಮಾಯದಲ್ಲಿ ವನವಾಯಿತೆಂದು
ರಾಯ ಮತ್ಸ್ಯನಾಲಯದೊಳು ತಮ್ಮ
ಕಾಜು ವಡಗಿಸಿ ಅಯೋನಿಜೆ ದ್ರೌಪ-
ದೀಯ ವಡಗೂಡಿ ಆಯಾಸವಿಲ್ಲದೆ
ಅಯ್ವರು ಬಿಡದೆ ತಾವಿರಲು ೧

ಬಾಚಿ ಹಿಕ್ಕುವ ಪರಿಚಾರತನದಲಾ
ಪಾಂಚಾಲಿಗೆ ಮತ್ಸ್ಯನಾ ಚದುರೆಯಲ್ಲಿ
ಆಚರಣೆಯಿಂದ ಯಾಚಕರಂದದಿ
ವಾಚವಾಡಿ ಕಾಲೋಚಿತಕೆ
ನೀಚರಲ್ಲಿಗೆ ಕೀಚಕನಲ್ಲಿಗೆ
ಸೂಚಿಸಲು ಆಲೋಚನೆಯಿಂದಲಿ
ನಾಚಿಕೆ ತೋರುತಲಾ ಚೆನ್ನೆ ಪೋಗಲು
ನೀಚ ಖೂಳ ಕರ ಚಾಚಿದನು ೨

ಎಲೆಗೆ ಹೆಣ್ಣೆ ನಿನ್ನೊಲುಮೆಗೆ ಕಾಮನು
ಕಳವಳಿಸಿದ ನಾ ಗೆಲಲಾರೆನಿಂದು
ವಲಿಸಿಕೊ ಎನ್ನ ಲಲನೆಯ ಕರುಣಾ-

ಜಲಧಿಯೆ ನಾರೀ ಕುಲಮಣಿಯೆ
ಬಳಲಿಸದಲೆ ನೀ ಸಲಹಿದಡೇ ವೆ–
ಗ್ಗಳೆಯಳ ಮಾಡಿಪೆನಿಳೆಯೊಳೆನ್ನೆ–ಆ–
ಖಳನಾ ಮಾತಿಗೆ ತಲೆದೂಗುತಲಿ ಅ–
ನಿಳಜನೆನ್ನ ನೀ ಸಲಹೆಂದ ೩

ಮೌನಿ ದ್ರೌಪದಿ ಮೌನದಲ್ಲಿ
ಹೀನನಾಡಿದಾ ಊನ ಪೂರ್ಣಗಳು
ಮನೋಭಾವವ ಧೇನಿಸಿ ನೋಡುತ್ತ
ಹೀನಕೆ ತಿಳಿದಳು ಮನದಲಿ
ದೀನವತ್ಸಲ ಕರುಣವು ಮೀರಿತು
ಕಾನನದೊಳ್ಕಣ್ಣು ಕಾಣದಂತಾಯಿತು
ಏನು ಮಾಡಲೆಂದು ಜಾಣೆಯು ಚಿಂತಿಸಿ
ಅನಿಲಗೆ ಬಂದು ಮ–ಣಿದಳು ೪

ಚೆಲ್ವೆ ಕಂಗಳೇ ನಿಲ್ಲೆ ನೀ ಘಳಿಗೆ
ಸಲ್ಲದೆ ಆತನ ಹಲ್ಲನು ಮುರಿದು
ಹಲ್ಲಣವ ಹಾಕಿ ಕೊಲ್ಲುವೆ ನಾನೀಗ
ತಲ್ಲಣಿಸದಿರೇ ಗೆಲ್ಲುವೆನೆ
ಪುಲ್ಲನಾಭ ಸಿರಿನಲ್ಲನ ದಯವಿ–
ದ್ದಲ್ಲಿಗೆ ಬಂದಿತು ಎಲ್ಲ ಕಾರ್ಯಗಳ
ಸಲ್ಲಿಸಿ ಕೊಡುವನು ಬಲ್ಲಿದ ನಮಗೆ
ಮಲ್ಲಿಗೆ ಮುಡಿಯಾ ವಲ್ಲಭಳೆ ೫

ಎಂದ ಮಾತಿಗಾನಂದ ಮಯಳಾಗಿ
ಬಂದಳಾ ಖಳನ ಮಂದಿರದೊಳು ನೀ–
ನೆಂದ ಮಾತಿಗೆ ನಾನೊಂದನು ಮೀರೆನು
ಎಂದು ಕಪಟ ಸೈರಂಧಿರಿಯೂ
ಕುಂದಧಾಭರಣವ ತಂದು ಕೊಡಲು ಆ–

ನಂದದಿಂ ಪತಿಯ ಮುಂದೆ ತಂದಿಟ್ಟಳು
ಮಂದರೋದ್ಧರನ ಚಂದದಿ ಪೊಗಳುತ
ಇಂದು ಸುದಿನವೆಂದ ಭೀಮ ೬

ಉಟ್ಟ ಪೀತಾಂಬರ ತೊಟ್ಟ ಕುಪ್ಪಸವು
ಇಟ್ಟತಿ ಸಾದಿನ ಬಟ್ಟು ಫಣಿಯಲ್ಲಿ
ಕಟ್ಟಿದ ಮುತ್ತಿನ ಪಟ್ಟಿಸ ಕಿವಿಯಲ್ಲಿ
ಇಟ್ಟೋಲೆ ತೂಗಲು ಬಟ್ಟ ಕುಚ
ಘಟ್ಟಿ ಕಂಕಣ ರ್‍ಯಾಗಟೆ ಚೌರಿ ಅ–
ದಿಟ್ಟಂಥ ಈರೈದು ಬೆಟ್ಟುಗಳುಂಗರ
ಮುಟ್ಟೆ ಮಾನೆರಿ ದಟ್ಟಡಿವೊಪ್ಪತಿ
ಕಟ್ಟುಗ್ರದ ಜಗ ಜಟ್ಟಿಗನು ೭

ತೋರ ಮೌಕ್ತಿಕದ ಹಾರ ಸರಿಗೆ ಕೇ
ಯೂರ ಪದಕ ಭಂಗಾರ ಕಾಳಿಸರ
ವೀರ ವಿದ್ರುಮದ ಭಾಪುರಿ ಉ–
ತ್ತಾರಿಗೆ ವರ ಭುಜಕೀರುತಿಯು
ಮೂರೇಖೆಯುಳ್ಳ ಉದಾರ ನಾಭಿವರ
ನಾರಿ ನಡು ಉಡುಧಾರ ಕಿಂಕಿಣಿ ಕ–
ಸ್ತೂರಿ ಬೆರಸಿದ ಗೀರುಗಂಧವು ಗಂ–
ಬೂರ ಲೇಪ ಶೃಂಗಾರದಲಿ ೮

ವಂಕಿ ದೋರ್‍ಯವು ಕಂಕಣ ಒಮ್ಮೆಯೀ–
ನಾಂಕ ಚಾಪ ಭ್ರೂ ಅಲಂಕಾರ ಭಾವ
ಪಂಕಜಮಾಲೆ ಕಳಂಕವಿಲ್ಲದಲೆ
ಸಂಕಟ ಕಳೆವ ಪಂಕಜಾಂಘ್ರಿ
ಝುಂಕಾರಕೆ ಲೋಕ ಶಂಕಿಸೆ ನಾನಾ–
ಲಂಕಾರದ ಹೊಸ ಅಂಕುರ ವೀರ–
ಕಂಕಣ ಕಟ್ಟಿದ ಬಿಂಕದಿಂದಲಾ–
ತಂಕವಿಲ್ಲದೆಲೆ ಕಂಕಾನುಜ ೯

ಕಂಬು ಕೊರಳು ದಾಳಿಂಬ ಬೀಜ ದಂತ
ದುಂಬಿಗುರುಳು ನೀಲಾಂಬುದ ಮಿಂಚೆಂ-
ದೆಂಬ ತೆರದಲಾ ಅಂಬಕದ ನೋಟ
ತುಂಬಿರೆ ಪವಳ ಬಿಂಬಾಧರ
ಜಂಬೀರ ವರ್ಣದ ಬೊಂಬೆಯಂತೆಸೆವ
ತಾಂಬೂಲ ಗಿಳಿಯೆಂಬ ಗಂಭೀರ ಪುರುಷನು
ಹಂಬಲಿಸಿದ ತಾ ಸಂಭ್ರಮದಿ ೧೦

ಸಂಧ್ಯಾದೇವಿಯೊ ಇಂದ್ರನ ರಾಣಿಯೊ
ಚಂದ್ರನ ಸತಿಯೋ ಕಂದರ್ಪನಾಕರ-
ದಿಂದ ಬಂದ ಅರವಿಂದದ ಮೊಗ್ಗೆಯೊ
ಅಂದ ವರ್ಣಿಪರಾರಿಂದಿನಲಿ
ಇಂದು ರಾತ್ರಿ ಇದೆ ಎಂದಮರಮುನಿ
ಸಂದೋಹ ಕೊಂಡಾಡೆ ಇಂದುಮುಖಿಯೊಡ
ನಂದು ತಾ ನಾಟ್ಯದ ಮಂದಿರಕೆ ನಗೆ-
ಯಿಂದ ಬಂದ ಕುಂತಿನಂದನನು ೧೧

ಭಂಡ ಉಡಿಯಲಿ ಕೆಂಡವೊ ಪರರ
ಹೆಂಡರ ಸಂಗ ಭೂಮಂಡಲದೊಳೆನ್ನ
ಗಂಡರು ಬಲು ಉದ್ದಂಡರು ನಿನ್ನನು
ಕಂಡರೆ ಬಿಡರೋ ಹಂಡಿಪರೋ
ಲಂಡ ಬಾಯೆಂದು ಮುಕೊಂಡು ಕೈದುಡುಕಿ
ಅಂಡಿಗೆಳೆದು ಅಖಂಡಲನ ಭಾಗ್ಯ
ಉಂಡು ತೀರಿಸೆನ್ನೆ ಮಂಡೆ ಮೊಗ ಗಲ್ಲ
ಡುಂಡು ಕುಚ ಮುಟ್ಟಿ ಬೆಂಡಾದನು ೧೨

ಸಾರಿಯಲ್ಲ ಮಕಮಾರಿಯಿದೆನುತ ಶ-
ರೀರ ವತಿ ಕಠೋರವ ಕಂಡು ಜ-
ಝಾರಿತನಾಗಿ ನೀನಾರು ಪೇಳೆಂದು ವಿ-
ಕಾರದ್ಯಬ್ಬರಿಸಿ ಕ್ರೂರನಾಗಿ

ತೋರು ಕೈಯೆಂದು ಸಮೀರನು ಎದ್ದು ವಿ
ಚಾರಿಸಿಕೋ ಎನ್ನ ನಾರಿತನವೆಂದು
ವೀರ ಮುಷ್ಟಿಯಿಂದ್ವಾರಿ ಹೊಡೆಯಲು
ಕ್ರೂರನು ರಕ್ತವ ಕಾರಿದನು ೧೩

ಹಾರಿ ಹೊಯ್ಯತಲೆ ಮೋರೆಲಿದ್ದ ಕಳೆ–
ಸೂರೆಯಾಯಿತು ಪರನಾರೇರ ಮೋಹಿಸಿ
ಪಾರಗಂಡವರುಂಟೆ ಶರೀರದೊಳಿದ್ದ
ಮಾರುತೇಶ ಹೊರಸಾರಿ ಬರೆ
ಧೀರ ಭೀಮರಾಯ ಭೋರಿಡುತ ಹಾರಿ
ಕೋರ ಮೀಸೆಯನೇರಿಸಿ ಹುರಿಮಾಡಿ
ನಾರಿಮಣಿ ಯಿತ್ತ ಬಾರೆಂದು ಕರೆದು
ಸಾರಿದನು ನಿಜಾಗಾರವನು ೧೪

ಸರಸವು ನಿನಗೆ ವಿರಸವು ಆಯಿತು
ಕರೆಸೆಲೊ ಈ ಪುರದರಸಾ ಕಳ್ಳನ
ನರಸಿಂಹನ ನಿಜ ಅರಸಿಗೆ ಮನವನು
ವೆರೆಸಿದ್ಯೋ ಮಂದರ ಅರಸನೆ
ಅರಸಿ ನೋಡುತಿರೆ ವರೆಸಿದನಾ ಜೀವ
ದೊರಸೆಯ ಖೂಳನ ಬೆರೆಸಿ ಸವಾಂಗ
ವಿರಿಸಿ ಅಲ್ಲಿಯೆ ಸಿರಿ ವಿಜಯವಿಠ್ಠಲ
ಅರಸಿನ ಲೀಲೆಯ ಸ್ಮರಿಸುತಲಿ ೧೫

೫೩೪

ನಾರಿ ಗೌರಿ ಕೌಮಾರಿ ವಾರಿಜಾಕ್ಷನ ಚರಣ
ವಾರಿಯನು ಧರಿಸುವ ನಾರಿ ಗೌರಿ ಕೌಮಾರಿ ಪ

ಬಾಣ ಕುಂಭನೆಂಬೊ ದಾನವರೀರ್ವರು
ಕ್ಷೋಣಿಯೊಳು ಬಂದಲ್ಲಿ ತಪವ ಮಾಡಿ

ಮಾಣದಲೆ ಕಮಲ ಗರ್ಭನವೊಲಿಸಿ ವೇಗದಲಿ
ಏನು ವರ ಬೇಡೆನಲು ನಗುತಲವನು ಸುರಿದನು ೧

ಜಗಕ್ಕೊಡಿಯನಾವಾತ ಆತನ ತನು
ಸಂಬಂಧಿಗಳೆಮ್ಮ ಕೊಲ್ಲಲ್ಲಿ ಉಳಿದವರ
ಬಗಿಯದಂತೆ ವರವನು ಪಾಲಿಸೆನಲು
ನಗುತ ಲೋಕೇಶ ದುರುಳರಿಗೆ ಸಲೆ ಇತ್ತಾ ೨

ಚತುರ್ದಶ ಲೋಕವನು ಗೆದ್ದು ತ್ರಿದಶರಾ
ಮಿತಿಯಿಲ್ಲದೆ ಮಾನಭಂಗ ಮಾಡಿ
ಪತಿತರು ಈ ತೆರದಲಿರುತಿರಲು ವಿಬುಧರು
ಚತುರ ಮುಖಗೆ ಮೊರೆಯಿಡಲು ಹರಿಗೆ ಬಿನ್ನೈಸಿ ೩

ತಿಳಿದು ಕುಂಡಲನೊಲಿದು ದ್ವಾಪಾರಾಂತ್ಯದಲಿ
ಖಳ ಕಂಸನೆಂಬುವನು ಪುಟ್ಟಿ ತನ್ನ
ಬಲದಲಿ ತನ್ನ ಅನುಜೆಯರ ಶರೆಯುಯಿಟ್ಟು
ಬಳಲಿಸುವವಳಿಗೊಲಿದು ಅವತಾರ ಮಾಳ್ಪ ಯುದಕುಲದಲಿ ೪

ಎನ್ನ ಕೂಡಲೀ ದುರ್ಗಿ ಜನಿಸಿ ಬರಲು ಅವ
ಳನ್ನ ಕೊಲ್ಲುವೆನೆಂದು ಕಂಸ ಮುನಿಯೆ
ತನ್ನ ಶಕ್ತಿಯಿಂದಾ ಗಗನಕ್ಕೆ ಪಾರಿ ಬರಲು
ಘನ್ನ ಘಾತುಕರನ್ನ ಮಡುಹಿ ಬಿಡುವಳೆನಲು ೫

ಇಂತು ಪೇಳಲಿ ಅಜನು ಸಂತೋಷದಿರಲಿತ್ತ
ದಂತಿ ಗಮನಳು ಉದುಭವಿಸಿ ಬಂದು
ಪಿಂತೆ ಮಾಡಿದ ತಪಸು ಸಿದ್ಧಿಸಿತು ಎನಗೆನುತ
ಅಂತಕರಾಗಿದ್ದ ಖೂಳರ ಸದೆ ಬಡಿದು ೬

ಹರಿಕೃಪೆಯಿಂದ ದಕ್ಷಿಣ ಶರಧಿಯಲಿ ನಿಲ್ಲಲು
ಪರಮ ಮುನಿ ಅಗಸ್ತ್ಯ ಪೂಜಿಸಿದನು

ಶರರಾಜ ಬಂದು ಮದುವೆನೈದಲು
ಪರಮೇಷ್ಠಿ ಹರನ ಸಹಿತಲಿ ನಡೆತಂದಾ ೭

ಬರಲಾಕ್ಷಣದಲ್ಲಿ ಕಲಿಯುಗ ಪ್ರಾಪುತವಾಗೆ
ಮರಳೆನಿಂದರು ವರ ಸುಧೇಂದ್ರವೆಂಬೊ
ಪುರದಲ್ಲಿ ಪೂಜೆಗೊಳ್ಳುತಲ್ಲಿರಲು ಇತ್ತ ಸುಂ
ದರ ಕನ್ಯಾಮಣಿಯಾಗಿ ದಶದಿಶಿಗೆ ಪೊಳೆಯುತಿರೆ ೮

ಅಂದಾರಭ್ಯನಾಗಿ ಕನ್ಯಾಕುಮಾರಿ ಎನಿಸಿ
ಬಂದು ನವತೀರ್ಥದಲಿ ಯಾತ್ರೆ ಜನರು
ಮಿಂದಾಗಲೆ ಮನದಂತೆ ಭಕುತಿಯನಿತ್ತು
ಪೊಂದಿಸುವೆ ವಿಜಯವಿಠ್ಠಲನ ಪಾದದಲ್ಲಿ ೯

ಸಂಪ್ರದಾಯ

೫೩೫

ಜಯಮಂಗಳಂ ನಿತ್ಯ ಶುಭಮಂಗಳಂ ಪ

ತೊಳಸಿದಕ್ಕಿಯ ತಿಂಬ ಕಿಲುಬು ತಳಿಗೆಯಲುಂಬ
ಕೊಳಗದಲಿ ಹಣಗಳನು ಅಳೆದುಕೊಂಬ
ಇಲ್ಲ ಕಾಸು ಎಂದು ಸುಳ್ಳು ಮಾತಾಡಿದರೆ
ಎಲ್ಲವನು ಕಸುಗೊಂಬ ಕಳ್ಳ ದೊರೆಗೆ ೧

ತನ್ನ ನೋಡೇನೆಂದು ಮುನ್ನೂರುಗಾವುದ ಬರೆ
ತನ್ನ ಗುಡಿಯ ಪೊಕ್ಕ ಜನರಿಗೆಲ್ಲ
ಹೊನ್ನು ಹಣಗಳ ಕೊಂಡು ತನ್ನ ದರುಶನ ಕೊಡದೆ
ಬೆನ್ನೊಡೆಯ ಹೊಯಿಸುವ ಅನ್ಯಾಯಕಾರಿಗೆ ೨

ಗಿಡ್ಡ ಹಾರವನಾಗಿ ಒಡ್ಡಿ ದಾನವ ಬೇಡಿ
ದುಡ್ಡು ಕಾಸುಗಳಿಗೆ ಕೈಯನೀಡಿ
ಅಡ್ಡಬಿದ್ದ ಜನರ ವಿಡ್ಡೂರಗಳ ಕಳೆದು
ದೊಡ್ಡವರ ಮಾಳ್ಪ ಸಿರಿ ವಿಜಯವಿಠ್ಠಲಗೆ ೩

೫೩೬

ಜಯ ಮಂಗಳಂ ನಿತ್ಯ ಶುಭಮಂಗಳಂ ಪ

ಮಂಗಳಂ ಹತ್ತಾವತಾರದ ದೇವಗೆ
ಮಂಗಳಂ ಹತ್ತ ದಿಕ್ಕಿನ ಒಡೆಯಗೆ
ಮಂಗಳಂ ಹತ್ತಾವರಣದಲಿ ವ್ಯಾಪ್ತನಿಗೆ
ಮಂಗಳಂ ಹತ್ತರಲಿಪ್ಪ ಹರಿಗೆ ಅ.ಪ

ನೋಡುವಗೆ ಗಿರಿಯ ಕೆಳಗಾಡುವಗೆ ಭೂಮಿಯನು
ತೋಡುವಗೆ ಮಹಭಯವ ಮಾಡುವಗೆ
ಬೇಡುವಗೆ ವೈರಿಗಳ ಕಾಡುವಗೆ ಅಮೃತಾನ್ನ
ನೀಡುವಗೆ ಗೋಪಿಯರ ಕೂಡುವಗೆ ೧

ಬೆಳೆವವಗೆ ಖಡ್ಗವನು ತೊಳೆವವಗೆ ಜಲದೊಳಗೆ
ಮೊಳೆವವಗೆ ಪಾತಾಳಕಿಳಿವವಗೆ
ಮುಳುಗುವಗೆ ನಖವನ್ನು ತೊಳೆವವಗೆ ಕ್ಷಿತಿಪನ್ನ
ತುಳಿವವಗೆ ಕ್ಷತ್ರಕುಲವಳಿವವಗೆ ೨

ಚರಿಸುವವಗೆ ಪರ್ವತವ ಧರಿಸುವಗೆ ವ್ರತವ ಅಪ–
ಹರಿಸುವಗೆ ತುರಗವನು ಹಾರಿಸುವಗೆ
ಅರುಸುವಗೆ ಸುರರನುದ್ಧರಿಸುವಗೆ ಧರೆಯ ಪತಿ–
ಕರಿಸುವಗೆ ದಯಾದೃಷ್ಟಿ ಸುರಿಸುವಗೆ ೩

ಪಡೆವವಗೆ ಮಾತೆಯನು ಕಡಿದವಗೆ ಕೋದಂಡ
ಪಿಡಿದವಗೆ ರಥವನ್ನು ಹೂಡಿದವಗೆ
ಬಿಡುವವಗೆ ಕಲಿತಾಪ ಸುಡುವವಗೆ ಪದವಿಲ್ಲದೆ
ನಡೆವವಗೆ ಅಮೃತವನು ಕೊಡುವವಗೆ ೪

ತಾಹನಿಗೆ ಕಂಭದಿಂ ಬಾಹನಿಗೆ ಊರ್ಧ್ವ ಗ
ನಾಹನಿಗೆ ಕ್ಷತ್ರಿಯರ ದ್ರೋಹನಿಗೆ
ಹೋಹನಿಗೆ ಎರಡರಲಿ ಮೋಹನಿಗೆ ಸುಜನರ
ಸ್ನೇಹನಿಗೆ ಶ್ರೀ ವಿಜಯವಿಠ್ಠಲ ಹರಿಗೆ ೫

೫೩೭

ನವನೀತ ತಸ್ಕರಾಯ ಜಯಮಂಗಳಂ
ಪವಮಾನ ವಂದಿತಾಯ ಶುಭಮಂಗಳಂ ಪ

ಪರಿಪೂರ್ಣಾಯ ವಿಶ್ವ ಪರಬ್ರಹ್ಮ ಅಚ್ಯುತಾಯ
ಶರನಿಧಿ ಮಂದಿರಾಯ ಜಯಮಂಗಳಂ
ಪರವಸ್ತ ಪರಪರಂಜ್ಯೋತಿ ಪ್ರಕಾಶಾಯ
ಸಿರಿದೇವಿ ಅರಸಾಯ ಶುಭಮಂಗಳಂ ೧

ಈಶಾ ಇಂದ್ರಾ ವಂದಿತಾಯ ವಿಶ್ವನಯನಾಯ ವಾರಾ
ಣಾಸಿ ಕ್ಷೇಮ ಸ್ಥಾಪಿತತಾಯ ಜಯಮಂಗಳಂ
ಆಶಾ ದೋಷಾ ಕ್ಲೇಷಾ ಪಾಶಾ ನಾಶಾ ನಾರಾ ಪೋಷಕಾಯ
ಶೇಷರಾಜ ಶಯನಾಯ ಶುಭಮಂಗಳಂ ೨

ವಾಣೀಪತಿ ಜನಕಾಯ ವೇಣು ನಾದಾ ವಿನೋದಾಯ
ಮಾಣಿಕ್ಯ ಹೀರಾ ಹಾರಾಯ ಜಯಮಂಗಳಂ
ಬಾಣ ಬಾಹು ಖಂಡನಾಯ ಬಲಿ ಸದನವಾಸಾಯ
ಚಾಣೂರ ಮರ್ಧನಾಯ ಶುಭಮಂಗಳಂ ೩

ವಿಷ್ಣು ಕರ್ಮಾಣಿ ಪಶ್ಯಾಮಿ ವಿಶ್ವ ಕುಟುಂಬಿ ಪಾಲಾಯ
ವಿಷ್ಣು ಸರ್ವೋತ್ತಮಾಯ ಜಯ ಮಂಗಳಂ
ಶಿಷ್ಟ ಜನ ವರದಾಯ ಸಿದ್ಧ ಪ್ರಸಿದ್ಧ ರೂಪಾಯ
ಮುಷ್ಟಿಕಾ ಸುರವಧಾಯ ಶುಭಮಂಗಳಂ ೪

ಬಂಧು ಬಂಧನಾಯಾ ಮಹಸಿಂಧು ನರ ರಕ್ಷಕಾಯ
ಸಿಂಧುರಾಜಾ ಹರಣಾಯ ಜಯಮಂಗಳಂ
ವೃಂದಾವನ ಸಂಚಾರಾಯ ವಿಜಯವಿಠ್ಠಲರೇಯಾಯ
ಬಿಂದು ಮಾಧವ ದೇವಾಯ ಶುಭಮಂಗಳಂ ೫

೫೩೮

ಸಾಮಜ ವರದಗೆ
ಮಾಮನೋಹರಗೆ
ಕಾಮನ ಪಿತ ಶಾಮವರ್ಣ ಶ್ರೀಹರಿಗೆ
ವಾಮದೇವನ ಸಖ ಸೋಮವದನ ಹರಿಗೆ
ಕಾಮಿನಿ ಸತ್ಯಭಾಮ ಪತಿಗೆ ಹೊಸ
ಹೇಮದಾರುತಿಯ ಬೆಳಗಿರೆ ೧

ಲಕ್ಷ್ಮೀಯ ಅರಸಗೆ ಪಕ್ಷಿವಾಹನಗೆ
ಮೋಕ್ಷದಾಯಕ ಪಾಂಡವ ಪಕ್ಷ ಶ್ರೀಹರಿಗೆ
ವಕ್ಷಸ್ಥಳದಿ ಲಕ್ಷ್ಮೀಯ ಪೊರೆವ
ಕುಕ್ಷಿವಳಗೆ ಜಗವ ರಕ್ಷಿಸುವ ಹರಿಗೆ
ಲಕ್ಷದಾರತಿಯ ಬೆಳಗಿರೆ ೨

ಆಗಮವೇದ್ಯಗೆ ಭೋಗಿ ಶಯನಗೆ
ಬೇಗದಿಂದಲಿ ಭಕ್ತರ ಪೊರೆವಗೆ
ವಾಗೀಶವಂದ್ಯ ಶ್ರೀ ಗುರು ವಿಜಯವಿಠ್ಠಲ
ಮಂಗಳ ಮಹಿಮ
ತುಂಗ ಚರಿತ ಹರಿಗೆ ಮಂಗಳಾರುತಿಯ ಬೆಳಗಿರೆ ೩

೫೩೯

ಶೋಭಾನ । ಶೋಭಾನವೆನ್ನಿರೆ ಸುರರಂಗನಿಯರೆಲ್ಲ
ಶೋಭಾನವೆನ್ನಿ ಶುಭವೆನ್ನಿ ಪ

ಮಂಗಳದೇವಿಯ ರಮಣ ಬಾ ।
ಶೃಂಗಾರದ ಗುಣನಿಧಿಯೆ ಬಾ ।
ಅಂಗಜಜನಕ ಅರವಿಂದದಾಳಾಕ್ಷನೆ ರಂಗಾ ಬಾ ॥
ಭವಭವ ಭಂಗಾ ಬಾ । ದೇವೋತ್ತುಂಗಾ ಬಾ ।
ಜಗದಂತರಂಗಾ ಬಾ ಹಸೆಯ ಜಗುಲಿಗೆ ೧

ಸಂಕುರುಷಣ ಅನಿರುದ್ಧಾ ಬಾ । ಪಂಕಜ ಸಂಭವನಯ್ಯ ಬಾ ।
ಕುಂಕುಮಾಂಕಿತನೆ ಭಕುತ ಕುಮುದ ಮೃಗಾಂಕ ಬಾ ॥
ನಿಷ್ಕಳಂಕಾ ಬಾ ಶಂಖಚಕ್ರಾಂಕ ಬಾ ।
ಅಹಿಪರಿಯಂಕ ಬಾ ಹಸೆಯ ಜಗುಲಿಗೆ ೨

ಹೇಮಾಂಬರಧರ ಹರಿಯೇ ಬಾ ।
ಸಾಮಜರಾಜಾ ವರದಾ ಬಾ ।
ಸಾಮವಿಲೋಲನೆ ಸದ್ಗುಣ ಶೀಲನೆ ರಾಮಾ ಬಾ ॥
ಸುರಸಾರ್ವಭೌಮಾ ಬಾ ದೈತ್ಯವಿರಾಮಾ ಬಾ ।
ರಣರಂಗಭೀಮಾ ಬಾ ಹಸೆಯಾ ಜಗುಲಿಗೆ ೩

ಅನಂತ ಅವತಾರ ಅಚ್ಯುತ ಬಾ ।
ಉನ್ನತ ಮಹಿಮನೆ ಯಾದವ ಬಾ ।
ಘನ್ನ ಮೂರುತಿಯೆ ಸುಪ್ರಸನ್ನಾ ಬಾ ಸಚ್ಚರಿತಾ ಬಾ ।
ಭಾಗ್ಯ ಸಂಪನ್ನಾ ಬಾ ಜೀವರ ಭಿನ್ನಾ ಬಾ ಹಸೆಯಾ ಜಗುಲಿಗೆ ೪

ನಾರಾಯಣ ದಶರೂಪಾ ಬಾ । ಚಾರುಚರಿತಾ ಪ್ರತಾಪ ಬಾ ।
ಶೌರಿ ಮುರಾರಿಯೆ ನಿಟಿಲ ಕಸ್ತೂರಿಯ ಲೇಪಾ ಬಾ ॥
ಯದುಕುಲ ದೀಪಾ ಬಾ ನಿತ್ಯ ಸಲ್ಲಾಪಾ ಬಾ
ನಮ್ಮ ಸಮೀಪ ಬಾ ಹಸೆಯಾ ಜಗುಲಿಗೆ ೫

ವಾಸುದೇವ ಮುಕುಂದಾ ಬಾ । ಸಾಸಿರನಾಮ ಗೋವಿಂದಾ ಬಾ ।
ಕೇಶವ ಪುರುಷೋತ್ತಮ ನರಸಿಂಹ ಉಪೇಂದ್ರ ಬಾ ॥
ಗೋಪಿಕಂದಾ ಬಾ । ಬಹುಬಲ ವೃಂದಾ ಬಾ ।
ಅತಿಜವದಿಂದಾ ಬಾ ಹಸೆಯಾ ಜಗುಲಿಗೆ ೬

ಪರತತ್ವದಿ ಅತಿ ಚಿಂತಾ ಬಾ । ಪರಬೊಮ್ಮನೆ ಅತಿ ಶಾಂತಾ ಬಾ ।
ಪರಮಾತ್ಮನೆ ಪರಿಪೂರ್ಣ ವಿಭೂತಿವಂತಾ ಬಾ ॥
ಅಖಿಳ ವೇದಾಂತಾ ಬಾ । ರುಕ್ಮಿಣಿಕಾಂತಾ ಬಾ ।
ಸದ್ಗುಣವಂತಾ ಬಾ ಹಸೆಯಾ ಜಗುಲಿಗೆ ೭

ಉದಯ ಪ್ರಭಾಕರ ಭಾಸಾ ಬಾ ।
ತ್ರಿದಶಗುಣನುತ ವಿಲಾಸಾ ಬಾ ।
ಪದುಮನಾಭ ಮಾಧವ ಶ್ರೀಧರನೆ ಸುನಾಸಾ ಬಾ ॥
ಸಿರಿಮಂದಹಾಸಾ ಬಾ । ಭಕುತ ಉಲ್ಲಾಸಾ ಬಾ ।
ಶ್ರೀ ಶ್ರೀನಿವಾಸಾ ಬಾ ಹಸೆಯಾ ಜಗುಲಿಗೆ ೮

ಕೃಷ್ಣವೇಣಿಯ ಪಡೆದವನೆ ಬಾ । ರಥ ಹೊಡೆದವನೆ ಬಾ ।
ಕೃಷ್ಣೆಯ ಕಷ್ಟವ ನಷ್ಟ ಮಾಡಿದ ಕೃಷ್ಣಾ ಬಾ ॥
ಯದುಕುಲ ಶ್ರೇಷ್ಠ ಬಾ । ಸತತ ಸಂತುಷ್ಟ ಬಾ ।
ಉಡುಪಿಯ ಕೃಷ್ಣ ಬಾ ಹಸೆಯಾ ಜಗುಲಿಗೆ ೯

ಎಲ್ಲರೊಳಗೆ ವ್ಯಾಪಕನೆ ಬಾ ಬಲ್ಲಿದ ದೊರೆಗಳ ಅರಸನೆ ಬಾ ।
ನಾ ಎಲ್ಲಿ ನೋಡಲು ಪ್ರತಿಗಾಣೆ ನಿನಗೆ ಸಿರಿನಲ್ಲಾ ಬಾ ॥
ಅಪ್ರತಿಮಲ್ಲ ಬಾ ಭಕ್ತವತ್ಸಲಾ ಬಾ ।
ವಿಜಯವಿಠ್ಠಲ ಬಾ ಹಸೆಯ ಜಗುಲಿಗೆ ೧೦

೫೪೦

ಶೋಭಾನವೆನ್ನಿರೆ ಸ್ವರ್ಗಾರೋಹಿಣಿಗೆ ।
ಶೋಭಾನವೆನ್ನಿ ಶುಭವೆನ್ನಿ ಪ

ಹರಿಪಾದ ನಖದಿಂದ ಬ್ರಹ್ಮಾಂಡವ ಶೀಳಲು ।
ಭರದಿಂದ ಇಳಿದು ಸತ್ಯಲೋಕ ॥
ಭರದಿಂದ ಇಳಿದು ಸತ್ಯಲೋಕಕೆ ಬಂದ ।
ವಿರಜೆಗಾರುತಿಯ ಬೆಳಗಿರೇ ೧

ಸರಸಿಜಾಸನ ನಮ್ಮ ಹರಿಪಾದ ತೊಳಿಯಲು ।
ಸರಸ ಸದ್ಗುಣ ಸುರಲೋಕ ।
ಸರಸ ಸದ್ಗುಣದಿ ಸುರಲೋಕಕೈದಿದಾ ।
ಸ್ವರ್ಣೆಗಾರುತಿಯ ಬೆಳಗಿರೇ ೨

ಇಂದ್ರಲೋಕವ ಸಾರಿ ಧ್ರುವನ ಮಂಡಲಕಿಳಿದು ।
ಚಂದದಿಂದಲಿ ಮೇರುಗಿರಿಗೆ ।
ಚಂದದಿಂದಲಿ ಮೇರುಗಿರಿಗೆ ಬಂದಾ ।
ಸಿಂಧುವಿಗಾರುತಿಯ ಬೆಳಗಿರೇ ೩

ಶತಕೋಟಿ ಎಂತೆಂಬ ಅಜನ ಮಂದಿರ ಪೊಕ್ಕು ।
ಚತುರ್ಭಾಗವಾಗಿ ಕರೆಸಿದ ।
ಚತುರ್ಭಾಗವಾಗಿ ಕರೆಸಿದ ಶ್ರೀ ಭೋಗ ।
ವತಿಗಾರುತಿಯ ಬೆಳಗಿರೇ ೪

ಇಂದ್ರ ದಿಕ್ಕಿಗೆ ಸಿತಾ ಚಕ್ಷು ಪಶ್ಚಿಮ ದಿಕ್ಕು ।
ಚಂದ್ರ ಯಮ ದಿಕ್ಕಿಗೆ ಭದ್ರದೇವಿ ।
ಚಂದ್ರ ಯಮ ದಿಕ್ಕಿಗೆ ಭದ್ರದೇವಿ ಅಳಕ ।
ನಂದಿನಿಗಾರುತಿಯ ಬೆಳಗಿರೇ ೫

ಕುಂದ ಮಂದರೆ ಇಳಿದು ಗಂಧ ಮಾದನಗಿರಿಗೆ ।
ಹಿಂಗದೆ ಪುಟಿದು ವಾರಿನಿಧಿಯ ।
ಹಿಂಗದೆ ಪುಟಿದು ವಾರಿನಿಧಿಯ ನೆರದ ।
ಗಂಗೆಗಾರುತಿಯ ಬೆಳಗಿರೇ ೬

ಗಿರಿಜೆ ಸೂಪಾರಶ್ವಕೆ ಧುಮುಕಿ ಮಾಲ್ಯವಂತಕೆ ಜಿಗಿದು ।
ಪರಿದಂಬುಧಿಯ ಕೂಡಿ ಮೆರದು ।
ಪರಿದಂಬುಧಿಯ ಕೂಡಿ ಮೆರದಾ ।
ತ್ರಿದಶೇಶ್ವರಿಗಾರುತಿ ಬೆಳಗಿರೇ ೭

ಕುಮುದಾದ್ರಿಗೆ ಇಳಿದು ನಲಾ ಶತ ಶೃಂಗ ।
ಕ್ಷಮಧಾರಿಗಳಿಗೆ ಹಾರಿ ವನಧಿ ।
ಕ್ಷಮಧಾರಿಗಳಿಗೆ ಹಾರಿ ವನಧಿ ಕೂಡಿದಾ ।
ಸುಮತಿಗಾರುತಿಯ ಬೆಳಗಿರೇ ೮

ಮೇರು ಮಂದರಕಿಳಿದು ನಿಷಧ ಕಾಂಚನ ಕೂಟ ।
ಮೀರಿ ಹಿಮಗಿರಿಗೆ ಹಾರಿ ಬದರಿಗೆ ।
ಮೀರಿ ಹಿಮಗಿರಿಗೆ ಹಾರಿ ಬದರಿಗೆ ಬಂದಾ ।
ನಾರಿಗಾರುತಿಯ ಬೆಳಗಿರೇ ೯

ಕ್ಷಿತಿಪ ಭಗೀರಥನಂದು ತಪವ ಒಲಿದು।
ಅತಿಶಯವಾಗಿ ಧರೆಗಿಳಿದು ।
ಅತಿಶಯವಾಗಿ ಧರೆಗಳಿದು ಬಂದಾ ।
ಭಾಗೀರಥಿಗಾರುತಿಯ ಬೆಳಗಿರೇ ೧೦

ಮುನಿ ಜನ್ಹು ಮುದದಿಂದ ಆಪೋಶನವ ಮಾಡೆ ।
ಜನನಿ ಜಾನ್ಹವಿ ಎನಿಸಿದಾ।
ಜನನಿ ಜಾನ್ಹವಿ ಎನಿಸಿದಾ ಮೂಜಗದ ।
ಜನನಿಗಾರುತಿಯ ಬೆಳಗಿರೇ ೧೧

ವಿಷ್ಣು ಪ್ರಜಾಪತಿ ಕ್ಷೇತ್ರದಲ್ಲಿ ನಿಂದು ।
ಇಷ್ಟಾರ್ಥ ನಮಗೆ ಕೊಡುವಳು ಸತತ ।
ಇಷ್ಟಾರ್ಥ ನಮಗೆ ಕೊಡುವಳು ಸತತ ಸಂ ।
ತುಷ್ಟಿಗಾರುತಿಯ ಬೆಳಗಿರೇ ೧೨

ಕ್ರಮದಿಂದ ಬಂದು ನಲಿವುತ ಸರಸ್ವತಿ ।
ಯಮುನೇರ ನೆರೆದು ತ್ರಿವೇಣಿ ।
ಯಮುನೇರ ನೆರೆದು ತ್ರಿವೇಣಿ ಎನಿಸಿದಾ ।
ವಿಮಲೆಗಾರುತಿ ಬೆಳಗಿರೇ ೧೩

ಸತ್ವ ರಜೋ ತಮ ತ್ರಿವಿಧ ಜೀವರು ಬರಲು ।
ಅತ್ಯಂತವಾಗಿ ಅವರವರ ।
ಅತ್ಯಂತವಾಗಿ ಅವರವರ ಗತಿ ಕೊಡುವ ।
ಮಿತ್ರೆಗಾರುತಿ ಬೆಳಗಿರೇ ೧೪

ಪತಿಯ ಸಂಗತಿಯಿಂದ ನಡೆತಂದು ಭಕುತಿಲಿ ।
ಸತಿಯಲ್ಲಿ ವೇಣಿಕೊಡಲಾಗಿ ।
ಸತಿಯಲ್ಲಿ ವೇಣಿ ಕೊಡಲಾಗಿ ಕಾವ ಮಹಾ ।
ಪ್ರತಿಗಾರುತಿ ಬೆಳಗಿರೇ ೧೫

ವೇಣಿಯ ಕೊಟ್ಟಂಥ ನಾರಿಯ ಭಾಗ್ಯವು ।
ಏನೆಂಬೆನಯ್ಯ ಪಡಿಗಾಣೆ ।
ಏನೆಂಬೆನಯ್ಯಾ ಪಡಿಗಾಣೆ ಸುಖವೀವ ।
ಕಲ್ಯಾಣಿಗಾರುತಿಯ ಬೆಳಗಿರೇ ೧೬

ಒಂದು ಜನ್ಮದಲಿ ವೇಣಿಯಿತ್ತವಳಿಗೆ ।
ಎಂದೆಂದು ಬಿಡದೆ ಐದೆತನವ ।
ಎಂದೆಂದು ಬಿಡದೆ ಐದೆತನವೀವ ಸುಖ ।
ಸಾಂದ್ರೆಗಾರುತಿಯ ಬೆಳಗಿರೇ ೧೭

ವಾಚಾಮಗೋಚರೆ ವರುಣನರ್ಧಾಂಗಿನಿ ।
ಪ್ರಾಚೀನ ಕರ್ಮಾವಳಿ ಹಾರಿ ।
ಪ್ರಾಚೀನ ಕರ್ಮಾವಳಿ ಹಾರಿ ಮಕರ ।
ವಾಚಳಿಗಾರುತಿಯ ಬೆಳಗಿರೇ ೧೮

ಅಂತರ ಬಾಹಿರ ಪಾಪ ಅನೇಕವಾಗಿರೆ ।
ಸಂತೋಷದಿಂದಲಿ ಭಜಿಸಲು ।
ಸಂತೋಷದಿಂದಲಿ ಭಜಿಸಲು ಪೊರೆವ ಮಹಾ ।
ಕಾಂತೆಗಾರುತಿಯ ಬೆಳಗಿರೇ ೧೯

ಗುರುಭಕುತಿ ತಾರತಮ್ಯ ಇಹಪರದಲ್ಲಿ ತಿಳಿದು ।
ಹರಿ ಪರನೆಂದು ಪೊಗಳುವರ ।
ಹರಿ ಪರನೆಂದು ಪೊಗಳುವರ ಪೊರೆವ ।
ಕರುಣಿಗಾರುತಿಯ ಬೆಳಗಿರೇ ೨೦

ಜಗದೊಳು ಪ್ರಯಾಗ ಕ್ಷೇತ್ರದಲ್ಲಿ ನಿಂದು ।
ಬಗೆ ಬಗೆ ಶುಭವ ಕೊಡುವಳು ।
ಬಗೆ ಬಗೆಯ ಶುಭವ ಕೊಡುವ ವಿಜಯವಿಠ್ಠಲನ ।
ಮಗಳಿಗಾರುತಿಯ ಬೆಳಗಿರೇ ಶೋಭಾನೆ ೨೧

ವಿನಯದಿಂದಲಿ ತಾನು ಇಟ್ಟ ತೊಟ್ಟ ಉಟ್ಟ
ಮಣಿ ಭೂಷಣ ವಸನವ ದಹಿಸಿಕೊಂಬನೇನೊ
ವನಜನಾಭನು ಪಾವಕ ಸ್ಥಾನಿಯಾದಡೆ
ನೆನಸಿ ಮೊರೆ ಪೊಕ್ಕವರ ಪೆಸರುಗೊಳನು
ಘನ ದುರಿತವ ಸುಟ್ಟು ದಾನವರ ಪುಡಿಮಾಡಿ
ಪ್ರಣತ ಜನರ ಆರ್ತಿ ಕಳೆವ ಪೊಳೆವ
ಫಣಿಶಾಯಿ ವಿಜಯವಿಠಲರೇಯ ಕಾರುಣ್ಯ
ವನಧಿ ಕಾಣೋ ಭಕ್ತರಿಗೆ ಪ್ರಾಣ ಪದಕ ॥

೪

ಅನಂತ ಅಪರಾಧ ಮಾಡಿದ ಕಾಲಕ್ಕು
ನೀನೆಣಿಸುವನಲ್ಲ ಸತ್ಯ ಕಾಮಧೇನೆಂದು
ಶ್ರೀ ನಾರಿ ಬೊಮ್ಮ ಮಹೇಂದ್ರಾದ್ಯರು ನಿತ್ಯ
ಎಣಿಕೆ ಮಾಳ್ಪರು ಎಲ್ಲೆಲ್ಲಿ ನಿರೀಕ್ಷಿಸಿ
ಮಾಣದೆ ಮತಿಯಿಂದ ತಲೆದೂಗಿ
ಅನುಭವ ಏನೆಂಬೆ ನಿನ್ನಯ ಬಲು ಪ್ರತಾಪಕ್ಕೆ
ಮಾನವ ಗುಣಿಸಿ ನೆಲೆಗಾಣಬಲ್ಲನೆ
ಮೇಣು ಗಿರಿಜೇಶಗೆ ಕಾಶೀ ಪಟ್ಟಣದಲ್ಲಿ
ನೀ ನಿಲಿಸಿದೆ ಬ್ರಹ್ಮ ಹತ್ಯವ ಓಡಿಸಿ ಆನಂದ
ವನವಾಸ ವಿಜಯವಿಠಲರೇಯ ಜಾಹ್ನವಿ ಪಡದಾ॥

೫

ಅನಂತ ಕಲ್ಪಕ್ಕೆ ನಿನ್ನ ಮೊರೆ ಬಿದ್ದವಗೆ
ಖಿನ್ನವಿಲ್ಲವೆಂಬುದ ಕೇಳಿ ಬಲ್ಲೆ
ಚೆಣ್ಣ ಧ್ರುವ ಪ್ರಹ್ಲಾದ ಮೊದಲಾದ ಭಕುತರ

ಘನ್ನತೆ ಏನೆಂಬೆ ಲೋಕದಲ್ಲಿ
ಮನ್ನಿಸು ಮಹರಾಯ ವಿಜಯವಿಠಲರೇಯ
ಬಿನ್ನಹ ಕೈಕೊಂಡು ಭಕುತನ್ನ ಪಾಲಿಸು॥

೬

ಅಬಲೆಯ ಮಾತಿಗೆ ಮನಸು ಕರಗಿತು । ನಿನ್ನ
ಅಬುಜಪಾದಕೆ ಬಿಡದೆ ಬಿನ್ನೈಸಿದೆ
ಪ್ರಬಲ ನೀನಾದ ಕಾರಣದಿಂದ ಚನ್ನಾಗಿ
ವಿಬುಧೇಶ ನಾನಾ ರೋಗ ವಿನಾಶನನೆ
ಶುಭವೆ ಕೊಡು ಜೀಯ ನಿನಗಲ್ಲದೆ ಅನ್ಯ
ವಿಭುಗಳಿಗೆ ಶರಣೆನ್ನೆ ಸರ್ವಕಾಲ
ಶಬದ ಮಾತುರವಲ್ಲ ಅಂತರಂಗದ ಸ್ತೋತ್ರ
ಶಬರಿಗೆ ಒಲಿದವನೆ ಸತ್ಯಮೂರ್ತಿ
ಕುಬುಜಿಯ ತಿದ್ದಿದ ವಿಜಯವಿಠಲರೇಯ
ನಿಬಿಡ ಕರುಣಾಂಬುಧಿ ಮಹ ದುರಿತಾರಿ॥

೭

ಆಕಳಿಗೆ ಕರುವುಗಳು ಏಸು ಇಪ್ಪಾವೆಂದು
ಲೋಕದೊಳು ಕೇಳಿದರೆ ಜನ ಒಪ್ಪೋದು
ಈ ಕರುವಿಗೆ ಎಷ್ಟು ಆಕಳುಗಳುಂಟೆಂದು
ವಾಕು ಬೆಸಗೊಂಡರೆ ಜನಮೆಚ್ಚುವುದೆ?
ಶ್ರೀಕಾಂತ ನಿನಗಿಂದು ಉತ್ತರ ಕೊಡಲಾಪೆನೆ
ಸಾಕುವ ದೊರೆಗಳು ಎಷ್ಟೆಂದು.
ನೀ ಕೇಳಿದದಕೆ ಸೋಜಿಗವಾಗಿದೆ ಎನಗೆ

ಸಾಕುವರು ನಿನ್ನ ವಿನಾ ಉಂಟೇನಯ್ಯಾ
ಬಾಕುಳಿಗ ಮಾನವರು ಎನ್ನಂಥವರು ನಿನಗ
ನೇಕ ಜನ ತುಂಬಿಹದು ನೋಡಿದಲ್ಲಿ
ಏಕೋ ಸ್ವಾಮಿ ನೀನೆ ಎನಗೋರ್ವನಲ್ಲದೆ
ನಾ ಕಾಣೆ ಇನ್ನೊಂದು ನಿನ್ನ ಸಮನಾ
ಶ್ರೀ ಕಳತ್ರ ವಿಜಯವಿಠಲ ವೆಂಕಟರಾಯ
ಯಾಕೆ ಎನ್ನೊಡನೆ ಈ ಮಾತು ಸೊಗಸೆ॥

೮

ಆವದಾದರು ನೀನಿತ್ತದ್ದೆ ಎನಗಿಷ್ಟ
ನೋವು ಒಂದಾಥರಿಲ್ಲ ಕಾವಜನಕ
ಜೀವೇಶರೊಂದೆಂಬ ದುರ್ಮತಿ ಕೊಡದಿರೇಕೋ
ಭಾವದಲಿ ಇದನೆ ಬೇಡಿಕೊಂಬೆ
ದೇವ ನೀ ನರಕದಲ್ಲಿ ಬಹುಕಾಲ ಇಟ್ಟಿರು ಇಪ್ಪೆ
ನಾ ಒಲ್ಲೆ ಮಿಥ್ಯ ಮತವ
ಕಾವ ಕರುಣಿ ನೀನೆ ವಿಜಯವಿಠಲ ಎನ್ನ
ಪಾವನ ಮಾಳ್ಪ ಪರಮ ಪುರುಷ ಹರೇ ॥

೯

ಆ ವಿಜಯವಿಠಲನ್ನ ಚರಣವಿರಲು
ಕಾವರಾರೆಂದು ಇನ್ಯಾಕೆ ಮರಗುವಿ ಪ್ರಾಣಿ
ಕ್ಷೀರವಾರಿಧಿ ತಡೆಯ ಸೇರಿ ಮನಗಟ್ಟಿಕೊಂಡು
ನೀರ ಮಜ್ಜಿಗೆ ಕಾಣದಳುವದೇನೋ
ಸಾರಿದರೆ ನಿನ್ನ ಕುಲ ಸಹಿತಕ್ಕೆ ಸುಖವೀವ
ನಾರದವರದ ಸಿರಿ ವಿಜಯವಿಠಲ ಎನ್ನ ಸ್ವಾಮಿ॥

೧೦

ಇಂದೇ ಮುಕುತಿ ಬೇಡ ಬಂದಿಲ್ಲ
ಹಿಂದೆಪಟ್ಟಾ ಕ್ಲೇಶಾ ಪೋಗಾಡು ಎನ್ನಲಿಲ್ಲ
ಮುಂದಾಗುವ ವಿಹಿತ ಅನುಭವವಾಗಲಿ ಎಂದು
ಅಂದಿಗಾವದು ಎಂದಿಗೆ ಬಪ್ಪದೆ
ವಂದಿಸಿ ನಿನಗಿನ್ನು ದ್ವಂದ್ವಕರವ ಮುಗಿದು
ಒಂದೆ ಬಿನ್ನೈಸುವೆ ಒಂದೆ ದೈವ
ಎಂದೆಂದಿಗೆ ನಿನ್ನ ದಾಸರ ದಾಸನಾದೆ
ಮುಂದೆ ಕಾಯ್ದು ನಿತ್ಯ ಅವರೆಡೆಯ ಎಂಜಲು
ತಿಂದು ಬದುಕಿ ನಿನ್ನ ಕೊಂಡಾಡುವಂತೆ ಮಾಡು
ಕಂದರ್ಪಪಿತ ನಮ್ಮ ವಿಜಯವಿಠಲರೇಯ ॥

೧೧

ಈ ಕಲ್ಪ ಸಾಧನೆ ಅಪರೋಕ್ಷ ನಂತರದಲ್ಲಿ
ಬ್ರಹ್ಮ ಮೊದಲು ಮಾಡಿ ತೃಣ ಜೀವ ಪರಿಯಂತರಾ
ಅವರ ಯೋಗ್ಯತೆ ಸಾಧನ ಹೇಳಿ
ಅದೆ ಇದು ಎಷ್ಟಾಯಿತೆಂದರೆ ಎರಡು ಮಹಪದ್ಮ
ಆರೈವತ್ತು ಪದ್ಮ ಎರಡು ಮಹ ಖರ್ವ ಏಳು ಖರ್ವ ಒಂದು
ನಿರ್ಬುದ ಆರೈವತ್ತಾರು ಕೋಟಿ ವರುಷವಾಯಿತು ಶ್ರೀ ವಿಜಯವಿಠಲ॥

೧೨

ಉಪವಾಸವಿದ್ದವನಿಗೆ ಊರು ತುಂಬಿದರೇನು
ಅಪಹಾಸಗೊಳಿಸುವ ಗೆಳೆಯನಾದರೆ ಏನು
ಕುಪಿತವ ಬಿಡದವನು ಕುಲಜನಾದರೇನು
ಕಪಟವ ಬಿಡದವನ ಕೂಡ ಉಂಡರೇನು
ಕೃಪೆಮಾಡದವನ ಪಾಲಿಗೆ ಬಿದ್ದರೇನು
ತಪಸಿಗಳೊಡೆಯ ನಮ್ಮ ವಿಜಯವಿಠಲರೇಯಾ॥

೧೩

ಎತ್ತಣದೊ ಮಾಯಾ ಸಂಸಾರ
ನಿತ್ಯವಲ್ಲ ವಿಚಾರಿಸೆ
ತುತ್ತನು ಮೆಲುವಾಗ ಕಂಟಕವಿದ್ದಂತೆ
ಮೃತ್ಯು ಮಾರಿಗಳು ಕಾದಿಪ್ಪವೆಲ್ಲ
ಮರ್ತ್ಯದಲ್ಲಿ ಪುಟ್ಟಿ ಸುಖ ಬಯಸುವ ನರಗೆ
ಹತ್ತುಸಾವಿರ ಪ್ರಣಾಮ ಮಾಡುವೆನೊ
ಉತ್ತಮಗತಿ ಬಯಸುವ ನಾಯಿ ತಲೆ ಮೇಲಿನ
ಬುತ್ತಿಯಂದದಿ ಕಾಣೊ ಸತಿ ಸುತರು
ಚಿತ್ತದಲ್ಲಾಡುವ ವಿಜಯವಿಠಲರೇಯನ
ತುತ್ತಿಸಲು ಬಂದು ಕೈವಲ್ಯ ದಾರಿಗಿಡುವ॥

೧೪

ಎಲೊ ಎಲೊ ದುರಿತವೆ ಓಡು ಓಡು ಎನ್ನ
ಬಳಿಯಲ್ಲಿ ಮೊದಲಂತೆ ತಲೆ ಬಲಿತು ನಿಂದೆಯಾದರೆ ನಿನ್ನ
ಕುಲಕೆ ಕ್ಷೇಮವಿಲ್ಲ ಕೈಲೆ ಕಡ್ಡಿಯನಿತ್ತೆ
ಮಲೆತವರ ಗಂಡ ಸಿರಿಕೃಷ್ಣ ಕಂಡರೆ ನಿನ್ನ
ತಲೆಯ ಚೆಂಡಾಡುವ ಭೂತ ಬಲಿಯನೀವ
ತಿಳಿದುಕೊ ನಿನ್ನೊಳು ನೀನು ಮೊದಲಂತೆ ನಾನಲ್ಲ
ಸುಲಭ ವಿಜಯವಿಠಲ ಒಲಿದರೆ ಭಯವಿಲ್ಲ॥

೧೫

ಒಂದು ಕೈಯಲ್ಲಿ ಖಡ್ಗ ಒಂದು ಕೈಯಲ್ಲಿ ಹಲಗೆ
ಅಂದವಾಗಿ ಪಿಡಿದುಕೊಂಡು ದಿವಾರಾತ್ರಿಯಲ್ಲಿ
ಒಂದು ಬದಿಯಲ್ಲಿ ನಿತ್ಯ ಬಾರಾಸನಾಗಿ
ಹಿಂದು ಮುಂದುಪದ್ರವಾಗದಂತೆ

ಇಂದಿರೇರಮಣ ಕಾಯುತ್ತಲಿರೆ ಎನಗಾವ
ಬಂಧನಗಳಿಲ್ಲ ಧನ್ಯ ಧನ್ಯ
ಕಂದರ್ಪನಯ್ಯ ಸಿರಿ ವಿಜಯವಿಠಲರೇಯ
ಎಂದೆಂದಿಗಾಪತ್ತು ಬರಲೀಸನೊ॥

೧೬

ಒಂದೆರಡು ಮೂರು ನಾಲ್ಕೈದಾರು ಏಳು
ಒಂದೇಳು ಒಂಬತ್ತು ಹತ್ತು ಸಾರಿ
ವಂದಿಸಿ ಸ್ತೋತ್ರ ಮಾಡಿದುದಕೆ ಅವರವರ
ಬಂಧನವ ಪರಿಹರಿಸಿ ಕಾಯ್ದೆ ನೀನು
ಒಂದೊಂದು ಚಿತ್ತಕ್ಕೆ ಅನುಭವವಾದುದು ನೋಡಿ
ಇಂದು ಪ್ರಾರ್ಥಿಸಿದೆನೊ ಪಾರ್ಥಸೂತ
ಅಂದ ಮಾತನು ಬರಿದಾಗದಂತೆ ದೇವ
ಬಂದ ವ್ಯಾಧಿಗಳೆಲ್ಲ ಕಡೆಗೆ ಮಾಡಿ
ನಂದವ ಇತ್ತು ಈ ದೇಹದಲಿ ಸುಖಬಡಿಸು
ತಂದೆ ಈ ಭಕುತನ ಮೊರೆ ಕೇಳಿ
ಕಂದರ್ಪಪಿತ ನಮ್ಮ ವಿಜಯವಿಠಲ ನಿನ್ನ
ಪೊಂದಿದ ಮೇಲೆ ಮುನ್ನಾವ ಕ್ಲೇಶಗಳಿಲ್ಲ॥

೧೭

ಒಂದೆಂಟು ಬಾಗಿಲುಳ್ಳ ಪಟ್ಟಣದೊಳಗೆ
ಮುಂದೆ ಇಪ್ಪತ್ತ ನಾಲ್ಕು ಮನೆಯೊಳು
ತಂದೆನ್ನ ನಿಲ್ಲಿಸಿ ಒಳಗಿಟ್ಟು ಕಾವಲು ಮಾಡಿ
ಬಂಧನದೊಳಗಿಟ್ಟು ಬಳಲಿಸುವುದನ್ಯಾಯ
ತಂದೆ ಅಂತರಾತ್ಮಕ ನೀನು ಒಳಗಿದ್ದು ಸ್ವತಂತ್ರ
ನೆಂದೆನಿಸಿ ಎನ್ನ ಬರಿದೆ ಕೊಲ್ಲಿಸುವರೇನೊ
ಕಂದರ್ಪಿತರಂಗ ನೀ ಕಾಯ ಬೇಕೆನ್ನ
ಎಂದಾದರೇನು ಅನಂತ ಮೂರುತಿ ವಿಜಯವಿಠಲ॥

೧೮

ಒಬ್ಬ ಸತಿ ಪತಿಗಾಗಿ ಮುನಿಯ ಶಾಪವ ಧರಿಸಿ
ಅಬ್ಜ ಬಾಂಧವನ ನಿಲಿಸಿದಳು ನೋಡಾ
ಒಬ್ಬ ಸತಿ ಪತಿಗಾಗಿ ಧರ್ಮನ ಸಭೆಯ ಸಾರಿ
ನಿಬ್ಬರದಿ ಪ್ರಾಣವನು ಪಡೆದಳು ನೋಡಾ
ಒಬ್ಬ ಸತಿಪತಿಗಾಗಿ ಚಿತ್ರಗುಪ್ತರಾಡಿದಾ
ಶಬ್ದ ಲಾಲಿಸಿ ಐದೆತನ ಪಡೆದಳು
ಉರ್ಬಿಯೊಳಗೀಪರಿ ಸತಿಯರ ಸ್ವಧರ್ಮ
ನಿಬ್ಬಿಡಿಯಾಗಿದೆ ನಿನ್ನ ದಯದಿ
ಅಬ್ಜನಾಭನೆ ಇವನ ಮೇಲೆ ದಯಮಾಡು ಕರು
ಣಾಬ್ಧಿಯೆ ಉಪೇಕ್ಷೆ ಮಾಡದಲೆ
ಅಬ್ಬರ ದೈವ ವಿಜಯವಿಠಲರೇಯ
ಲಬ್ಧವಾಗಲಿ ನಾನು ಬೇಡಿದ ವರವು॥

೧೯

ಋಷಿಗಳ ಋಣ ಪೂರ್ವಾಶ್ರಮದಿಂದ ಪರಿಹಾರ, ತ್ರಿ
ದಶರ ಋಣ ಮೇಧಾದಿಗಳು ಮಾಡೆ
ಅಸು ಸಂಬಂಧಿಗಳ ಋಣ ಗೃಹಸ್ಥಾಶ್ರಮದಲಿ
ಪುಸಿಯಲ್ಲ ತಿದ್ದಿ ಹೋಗುವುದು ಸಿದ್ಧ
ವಸುಧೆಯೊಳಗೆ ಒಂದು ಕಾಸು ಕೊಟ್ಟವನ ಋಣ
ವಸುಧೆಯೆಲ್ಲಾ ತಿರುಗೆ ಪೋಗದಯ್ಯಾ
ಪಶುಪಾಲ ಅವ್ಯಯಾತ್ಮ ವಿಜಯವಿಠಲರಂಗ
ಬಸುರೊಳು ಪೊಗಲಿಟ್ಟು ಬೆಸಸದೆ ಬಿಡದಯ್ಯ

೨೦

ಕಟ್ಟೆಯ ಕಟ್ಟಿದರು ಭವಸಾಗರಕೆ ಸ್ವಲ್ಪ
ಬಿಟ್ಟು ವೇಗದಿಂದ ಸಾಧ್ಯ ಮಾಡಿಕೊಂಡು
ಮೆಟ್ಟಿಕೆಯಿಂದಲಿ ದಾಟಿ ಪೋದರು ಜಗ

ಜಟ್ಟಿ ದಾಸರು ತಮಗೆ ಸುಲಭವಾದದ್ದು ಎನಗೆ
ಇಟ್ಟು ಪೋದರೆಂದು ಗುಟ್ಟು ತೋರುತಲಿದೆ ಸಾಧಾರಣವಲ್ಲ
ದಿಟ್ಟವಾದ ಕವನ ಎನ್ನಿಂದ ಬಾಹದಲ್ಲ
ಬಿಟ್ಟಿಯವರಿಗೆ ತಿಳಿಯಲಹುದೆ
ಕೊಟ್ಟಿಗೆ ಮೇಲುಪ್ಪರಿಗೆಯಾಗುವುದೆ?
ಪುಟ್ಟಾರಭ್ಯವಾಗಿ ಮಂದನಾಗಿದ್ದವನಿಗೆ
ಮಟ್ಟಿದಲ್ಲದೆ ಬುದ್ಧಿ ಬರುವುದೆಂತೊ
ದಿಟ್ಟ ಮಹಿಮ ಸಿರಿ ವಿಜಯವಿಠಲನ ಮನ
ಮುಟ್ಟಿ ಭಜಿಪುದು ದಾಸರ ಕರುಣವೆನ್ನಿ॥

೨೧

ಕಠಿಣವಾದರು ನಿನ್ನ ನಾಮ ಅನುಗಾಲ
ಜಠರಾದೊಳಗೆ ಇಟ್ಟು ಎಂತಾದರಾಗೆ
ನಟನೆಯ ಮಾಡುತ ತಿರುಗುವ ಮಾನವಗೆ
ಅಟವಿಯಲ್ಲಾದರು ಪೂರ್ಣ ಸುಖವು
ಸಟೆಯಲ್ಲ ಈ ಮಾತು ಅಜಭವಾದಿಗಳೆ ಬಲ್ಲರು
ದಿಟನೆ ತಿಳಿದು ಪೇಳಿದರು ಪುಸಿಯಲ್ಲ
ವಟಪತ್ರಶಾಯಿ ನಮ್ಮ ವಿಜಯವಿಠಲರೇಯ
ವಿಠಲಾ ಎಂದು ನುಡಿದವಗೆ ಆವ ಭಯವುಂಟು॥

೨೨

ಕಾಲಕಾಲಕೆ ನಿನ್ನ ನಾಮದ ಸ್ಮರಣೆಯನು
ನಾಲಗೆಗೆ ಕೊಡು ಕಂಡ್ಯ ನಾರಾಯಣನೆ
ಕೀಳು ಮತಿಯನೆ ಬಿಡಿಸೊ ಕೀರ್ತನೆಯ ಮಾಡಿಸೊ ನಿ
ನ್ನಾಳುಗಳೊಳಗೆ ಊಳಿಗವನಿತ್ತು ಪಾಲಿಸೊ
ಬಳಲಿದೆನೊ ಭವದೊಳಗೆ ಬಿದ್ದು ಬ
ಯಲಾಸೆಯಲಿ ನಾ ಕಾಲವ ಕಳೆದೆ

ಪಾಲಸಾಗರಶಾಯಿ ವಿಜಯವಿಠಲ ನಿನ್ನ
ಪಾಲಿಗೆ ಬಂದೆನೊ ಪರಮ ಪುರುಷ ಹರೆ ॥

೨೩

ಕಾಲನಾಮಕ ಭಗವಂತ ನಿನ್ನಯ ಭೀತಿ।
ಕಾಲನಾಮಕಳಾದ ದುರ್ಗಾಳಿಗೆ
ಕಾಲಾಖ್ಯ ಗರುಡ ಶೇಷ ರುದ್ರರಿಗೆ ದುರ್ಗೆ ಭಯ
ಕಾಲಯಮನಿಗೆ ಇವರ ಭಯ ಯಮನ ಭೀತಿ
ಕಾಲನೆಂಬೊ ಯಮನ ತಮ್ಮನಿಗೆ ಯಾಗುವುದೊ
ಕಾಲಮೃತ್ಯುವಿಗೆ ಈ ಕಾಲನ ಭಯ
ಕಾಲದೂತರಿಗೆ ಭಯ ಇದರಿಂದಾಗುವುದು ಕ್ಷುದ್ರ
ಕಾಲದೇವತೆಗಳಿಗೆ ದೂತರ ಭಯ
ಕಾಲಕಾಲಕೆ ಇರಲು ಸ್ವಾತಂತ್ರದಲಿ ಲೇಶ
ಕಾಲವಾದರು ನರನ ಮುಟ್ಟುವರೆ
ಕಾಲನಿಯಾಮಕ ನಿನ್ನ ನಂಬಲು ಸರ್ವ
ಕಾಲದಲಿ ಸುಖವುಂಟು ನಿರೋಗದಿ
ಕಾಲ ದೇಶ ಪೂರ್ಣ ವಿಜಯವಿಠಲ ನಿನ್ನ
ಕಾಲಿಗೆ ಎರಗುವೆನು ಕರವಿಡಿದು ಸಲಹೊ॥

೨೪

ಕುಟ್ಟು ಕುಟ್ಟು ಕುಂಟಣಗಿತ್ತಿ ದುರುಳರ
ಕುಟ್ಟು ಹಿಡಿವಂತೆ ಕುಟ್ಟು ಕುಟ್ಟು ಪರರ
ಕುಟುಂಬ ಬಯಸುವ ಕುಟೀರದೊಳಿದ್ದೆ ಕುಟಿಲ ವರ್ಗಗಳ
ಕುಟ್ಟಿ ಕುಟ್ಟಿ ಕುಟ್ಟಿ ಹಿಟ್ಟು ಮಾಡಿ ಅವರ
ಗುಟ್ಟಾರಿಸಬೇಕು ಒಳಗೆ ಹಾಕಿ
ಸೃಷ್ಟೀಶ ವಿಜಯವಿಠಲರಾಯನ ಮನೆ
ಜಟ್ಟಿಗನಾಗಿ ಮುಷ್ಟಿ ಪೆಟ್ಟಿನಿಂದಲಿ॥

೨೫

ಕುಲಿಶ ನಂಬಿದ ನರಗೆ ಶೈಲದ ಭಯವುಂಟೆ ।
ಜಲಧಿ ನೆಲೆ ಬಲ್ಲವಗೆ ಕೊಳಚೆ ನೀರಿನ ಭೀತೆ
ಛಲದಂಕ ವಿಜಯವಿಠಲ ನಿನ್ನ ನೆನೆಯಲು
ಕೆಲಕಾಲಾರ್ಜಿಸಿದ ದುರಿತಗಳು ನಿಲ್ಲೋವೆ

೨೬

ಕ್ಷೇಮವ ಕೊಡು ಜೀಯಾ ಇವರಿಬ್ಬರಿಗೆ ನಿತ್ಯ
ಕಾಮಿತಾರ್ಥವು ಎನಗೆ ಇದೆಯಲ್ಲದೆ
ಭೂಮಿಯೊಳಗೆ ಮತ್ತೊಂದಪೇಕ್ಷೆ ಇಲ್ಲವೊ
ಸ್ವಾಮಿ, ಕರುಣದಿಂದ ಒಲಿದು ನೋಡೊ
ಶ್ರೀ ಮನೋಹರ ವಿಜಯವಿಠಲ ನಿನ್ನ
ನಾಮದ ಬಲಕಿಂತ ಅನ್ಯಬಲಗಳುಂಟೆ॥

೨೭

ಕೋಟಿಗಾದರು ನಿನ್ನ ನಾಮ ಒಂದೆ ಸಾಕು
ದಾಟಿಸುವುದು ಭವಸಾಗರ
ಬೂಟಕತನದಲಿ ಹರಿದಾಸನಾದರೆ
ತೋಟವಿಲ್ಲದೆ ಮೋಟೆ ಎತ್ತಿದಂತೆ
ನೀಟಾಗದು ಕಾಣೊ ಎಂದಿಗೂ ಯಮ ಭಟರ
ಕಾಟತಪ್ಪದು ಕಾಶಿಯೊಳಗಿದ್ದರು
ಹಾಟಕಾಂಬರಧರ ವಿಜಯವಿಠಲರೇಯ
ನಾಟಿಸು ನಿನ್ನ ಚರಣದಲಿ ಎನ್ನ ಮನಸು॥

೨೮

ಜಠರವನು ಕೈಲಮಕಿ ಜುಣು ಜುಣುಗಿ ಮೆಲ್ಲನೆ
ನಿಟಿಲವನು ನರನ ಚರಣದಲಿಟ್ಟು
ಗಿಟಿಕಿರಿದು ಹಲ್ಲನು ಗಿದ್ಧನಾ ಕೊಡು ಎಂದು
ಪಟುವಾಗಿ ಕಾಯದೊಳಗಲುಕಿಕೊಳುತ
ಕಟುಕರಂಗಡಿ ಮುಂದೆ ಕಾಯ್ದ ನಾಯಿಯಂತೆ
ಗುಟುಕುಗಳು ಉಗುಳದಲೆ ನುಂಗಿಕೊಳುತಾ ಅ
ಕಟಕಟಾ ಹೀಗೆ ಮಾಡುವರೇನೊ ಹೇ ವಿಜಯ
ವಿಠ್ಠಲ ನಿನಗಿನಿತು ಕರುಣವು ಇಲ್ಲವೊ॥

೨೯

ಜನನದ ಭಯ ಮರಣದ ಭಯ ಬರುತಿಪ್ಪ
ಮನೊ ಇಂದ್ರಿಯಂಗಳು ವಿಷಯಕ್ಕೆರಗುವ ಭಯ
ಕಾನನ ಭಯ ಬಲುರೋಗ ತೊಡಕುವ ಭಯ ತೀವ್ರತಮ
ಸಿನ ಭಯ ಬಂದರಾದರು
ಗಣನೆ ಮಾಡರು ಕಾಣೊ ಹರಿಯ ನಂಬಿದ ಜನರು
ಅನುಮಾನ ಸಲ್ಲದು ಸಂತರ ತಿಳಿವುದು
ಜನುಮಾದಿ ಕರ್ತ ಶ್ರೀ ವಿಜಯವಿಠ್ಠಲನ
ರ್ಚನೆ ಮಾಡಿ ಅನುದಿನ ಭಯಗಳ ನೀಗೊ॥

೩೦

ಜಾಲಿಸಬೇಕು ಜಾಲಿಸಬೇಕು ಜಾಲಿಸಬೇಕು ಜಾಲಗಾರನಾಗಿ
ಜಾಲ ಪಾಪಂಗಳು ಕಸ ಪೋಗುವಂತೆ ಜಾಲಿಸಬೇಕು
ಜಾಲಿಸಿ ಒಳ್ಳೆ ವಸ್ತ್ರ ಸಂಪಾದಿಸಿ
ಜಾಳಿಗ ಚೆನ್ನಾಗಿ ತುಂಬಲು ಮಾಯಾ
ಜಾಲ ವಿಜಯವಿಠಲನ ಸನ್ನಿಧಿಯಲ್ಲಿ
ಜಾಳಿಗೆಯಿಟ್ಟು ಜನನ ನೀಗಬೇಕು॥

೩೧

ಜುಟ್ಟು ಜನಿವಾರ ಕಿತ್ತಿಕೊಂಡು ಯತಿಯಾಗಿ
ಕಟ್ಟ ಕಡೆಯಲಿ ಗೃಹಸ್ಥ ಧರ್ಮ ತೊರೆದು
ಹುಟ್ಟುಗ ಇಲ್ಲೆನುತ ಕೃಷ್ಣ ಕೃಷ್ಣ ವಿಜಯ
ವಿಠಲನ ಪಾದಕ್ಕೆ ಮೊರೆ ಇಟ್ಟಿರುವರು॥

೩೨

ತತ್ವಾಭಿಮಾನಿಗಳಿರಾ ಉತ್ತರ ಪಾಲಿಪುದು
ಎತ್ತಿ ಕರವ ಮುಗಿವೆ ವಿನಯದಲ್ಲಿ
ಆತ್ಮದೊಳಗೆ ನಿಮ್ಮ ವ್ಯಾಪಾರ ಘನವಯ್ಯ
ತತ್ತಸ್ಥಾನದಲ್ಲಿ ನಿತ್ಯವಾಗಿ
ದೈತ್ಯರಿಗೆ ಸರ್ವದ ನಿಮ್ಮ ಪ್ರೇರಣೆಯುಂಟು
ಅತ್ತ ಎಳೆಸದಿರಿ ದುಸ್ಸಂಗಕ್ಕೆ
ಚಿತ್ತದಲ್ಲಿ ನೀವೇ ನಿಜ ವ್ಯಾಪಾರ ಮಾಡುವರು
ಸತ್ಯಕ್ಕೆ ಎರಗುವ ಮಾರ್ಗವಿತ್ತು
ಉತ್ತಮ ಗುಣದಲ್ಲೆ ಮೊದಲೆ ನಿಮ್ಮ ಪೂಜಿಪ
ಅರ್ಥಿಯಾಗಲಿ ಆ ತರುವಾಯದಿ
ಉತ್ತಮ ಶ್ಲೋಕ ಸಿರಿವಿಜಯವಿಠಲನ್ನ
ತುತಿಸಿ ಆತನ್ನ ಚರಣ ನೋಳ್ಪದ ಮಾಡು॥

೩೩

ತನ್ನಂತರ್ಯಾಮಿ ಒಳಗಿದ್ದ ಬಿಂಬನ್ನ
ಅನಂತಾನಂತ ಅಂಶವೇ ಚಿಂತಿಸಿ
ಭಿನ್ನ ಜೀವರ ತಿಳಿದು ಅವರವರ ಒಳಗಿಪ್ಪ
ಘನ್ನ ಮೂರುತಿಯ ತುತಿಸಿ ಬಹು ಬಗೆಯಿಂದ
ಪುಣ್ಯ ಪ್ರಾಣನೆಂದು ಸ್ಮರಿಸಿ ಆ ಅಂಶಗಳ

ಭಿನ್ನ ಮಾಡದೆ ತಿಳಿದು ಬಿಂಬನೊಳಗೆ
ಚೆನ್ನಾಗಿ ಕೂಡಿಸಿ ಏಕತ್ರಯ ಮಾಡಿ
ಮುನ್ನ ದ್ವಿವಿಧ ಕರ್ಮ ತೋರಿಸಲಾಗಿ
ಪುಣ್ಯವೆ ಬರುವುದು ಅದರಿಂದಲಾದರೂ
ತನ್ನ ಸಹಿತದಲ್ಲಿ ಗುಣ ಯೋಚಿಸಬೇಕು
ಪನ್ನಗಶಯನ ನಮ್ಮ ವಿಜಯವಿಠಲರೇಯನ
ಸನ್ಮತಿಯಿಂದ ಆಲೋಚಿಸಿದ ಮನುಜಗೆ॥

೩೪

ದಾಸನಾಗುವನಿಗೆ ಕ್ಲೇಶಬಡಿಸದೆ ಒಲಿಯ
ರೆಕ್ಕೆ ಮುರಿದ ಪಕ್ಕಿ ಬಾಯಿ ಬಿಟ್ಟಂತೆ
ಗಗನಕ್ಕೆ ಮೊಗವೆತ್ತಿ ಕೂಗುತಿಪ್ಪೆ
ಅಕ್ಕರೆ ನಿನಗಿನ್ನು ಬಾರದೇನಲೊ
ದೇವಕ್ಕಳೊಡೆಯ ತ್ರಿಜಗದಲ್ಲಿ ನೀನು
ಠಕ್ಕಿಸಿ ಪೋಗುವೆಯಾ ಸರ್ವಜೀವಿಗಳೊಳು
ಯಾತಕ್ಕೆ ಎನ್ನೊಬ್ಬನ ಪುಟ್ಟಿಸಿದೆ
ಪಕ್ಕದಾಸನು ನಾನು ವಿಜಯವಿಠಲ ನಿನ್ನ
ಲೆಕ್ಕಕ್ಕೆ ಮೊದಲಿಗನೆನಿಪೆನಯ್ಯಾ

೩೫

ದಾಸನಾಗುವೆನೆಂದು ಆಸೆ ಮಾಡಲು ಬಲುಕ್ಲೇಶವ ಬಡಿಸುವ। ಆ
ಭಾಸವ ನುಡಿಸುವ ನಾಶಮಾಡುವ ಸಕಲೈಶ್ವರ್ಯಗಳನ್ನೆಲ್ಲ
ಗ್ರಾಸವಾಸಕೆ ತರರೀಸನು ಪರರಿಂದ ಮೋಸವಾದ ಭವ
ಕ್ಲೇಶಪಾಶದಿ ಬಿಗಿದು ದ್ವೇಷವ ಮಾಡಿಸುವ ನೀಚರ ಕೈಯಿಂದ
ಕಾಸಿನವನ ಮಾಡಿ ಬೀಸಿ ಬಿಸಾಡುವ ಲೇಸು ಕೊಡುವ ನಮ್ಮ
ವಿಜಯವಿಠಲನು ।

೩೬

ದೂರದಲ್ಲಿದ್ದೀಯೇನೋ ಮೊರೆಯಿಟ್ಟು ಬೇಡಿದರೆ
ಆರು ನೀವೆಂದು ಕೇಳದಿಪ್ಪುದು ಸರಿಯೆ
ದಾರಿದ್ರನ ಸೊಲ್ಲು ವ್ಯರ್ಥವಾಗಿದೆ ನೋಡು
ತಿರುಗಿ ಕೂಗಿದ್ದರಿಂದಲೇನಾಹುದೊ
ಧೀರ ನೀ ಕುರುಡನೊ ಮೂಕನೊ ಬಧಿರನೊ
ಕೀರುತಿ ಒಲ್ಲೆನೆಂಬೊ ಮೌನವೊ ಏನಿದು
ಧಾರುಣಿಯೊಳಿದ್ದವರ ನೋಡೆ, ನಾನೊಬ್ಬನೆ
ಭಾರವೇನೊ ತಂದೆ ಅಕಟಕಟ
ಸಾರಿದವರ ಪೊರೆವ ವಿಜಯವಿಠಲ ನಿನ್ನ
ಕಾರುಣ್ಯತನಕೆ ನಾನೊಬ್ಬನೆ ಎರವೆ॥

೩೭

ದೇವ ನಿನ್ನ ಪಾದದಾಣೆ ನಿನ್ನಭಕ್ತರಾಣೆ
ಈ ವಚನ ಸತ್ಯ ಮಾಡುವುದು ಎನಗೆ
ಇವನ ಜೀವದಾನ ಕೊಡು ಇದೇ ದೇಹದಲ್ಲಿ
ಮೂವರುಷ ಎನ್ನಾಯುಷ್ಯದೊಳಿತ್ತು
ಕಾವುದಲ್ಲದೆ ಇನ್ನು ಸುಮ್ಮನಿಪ್ಪದು ಸಲ್ಲ
ಸಾವಿರ ಬ್ರಹ್ಮ ಭೋಜನವ ಮಾಡಿಸುವೆನೊ
ದೇವ ನಿನ್ನ ಪಾದದಾಣೆ ಭಕ್ತರಾಣೆ
ಈ ವ್ಯಾಳಿಗೆ ಅಪ ಬಂದ ಮೃತ್ಯು ಓಡಿಸಬೇಕು
ಭೂ ವಿಭುದರೆಲ್ಲ ಕಷ್ಟಪಡುವುದ ನೋಡು
ಕೋವಿದರಾಯ ಎನ್ನಾಣೆ ಕೇಳಿದಗತ್ಯ
ಪಾವನ ಮೂರುತಿ ವಿಜಯವಿಠಲರೇಯ
ಜೀವೇಶನಿಂದಲಿ ರಕ್ಷಣೆ ಮಾಡಿಸು॥

೩೮

ಧಾರುಣಿಯೊಳಗೆಲ್ಲ ಪರದೈವವಾವುದೆಂದು
ತಾರಿ ಬೆಂಡಾಗದಿರಿ ತವಕದಿಂದ
ಸಾರುವೆನು ಕರ ನೆಗಹಿ ಉರಗಹಾರವ ಧರಿಸಿ
ಮಾರುತ್ತರವು ಸಲ್ಲದು ದುರುಳರಿಗೆ
ನಾರಾಯಣನೆಂಬೊ ನಾಮಕ್ಕೆ ನಿರ್ವಚನ
ಆರು ಮಾಡಬಲ್ಲರು ಪ್ರಾಜ್ಞರೊಳು
ತೋರಿರೊ ಈ ನುಡಿದ ನುಡಿಯನು ಬಿಚ್ಚಿ
ಕ್ಷೀರವಾರಿಧಿಶಯನ ವಿಜಯವಿಠಲ ದೈವ॥

೩೯

ಧ್ವಜ ವಜ್ರಾಂಕುಶ ರೇಖಾಂಕಿತದ ಹರಿಯ ಪಾದಾಂ
ಬುಜವ ಸೇವಿಸುವ ಅಜಭವರ ಭಾಗ್ಯ ನೋಡು
ತ್ರಿಜಗವಂದ್ಯನ ಪಾಡು ಭಕುತಿಯ ನೀ ಬೇಡು
ಕುಜನರ ಮಾತ ಸುಡು ದುರ್ಜನರ ಸಂಗವ ಬಿಡು
ಗಜರಾಜನ ಕಾಯ್ದ ಕೃಷ್ಣನ ಧ್ಯಾನಮಾಡು
ವಿಜಯವಿಠಲನ ಬಿಡದೆ ಕೊಂಡಾಡು॥

೪೦

'ನ ತೇ ವಿಷ್ಣೋ' ಎಂದೆಂಬೊ ನಿಗಮಾರ್ಥ
ಹಿತದಿಂದಲಿ ತಿಳಿದು ಹಿರಿದಾಗಿ ಅರಿದು
ಕ್ಷಿತಿಸುರರ ಗರ್ಭದಲ್ಲಿ ಬಂದು ಮಾ
ರುತಿ ಮತದಲಿ ಬಲು ಜ್ಞಾನಿಯಾಗೊ
ಇತರ ಮತವ ನಂಬಿ ಓದದಿರು ವೇದ
ಗತಿಯಿಲ್ಲದೆ ಹಾಯ ಹಾಯನಾಗುವದೇನೊ

ಯತಿಗಳಿಗೆ ಸಿಕ್ಕ ವಿಜಯವಿಠಲಂಗೆ
ಪ್ರತಿ ಕಕ್ಷಿಯಿಲ್ಲ ದೇವತೆಗಳೊಳು ಕೇಳು
ಮತಿಗೆಡದಿರು ನೀನು ಮತಿಗೆಡದಿರು ನೀನು॥

೪೧

ನಾನು ನನ್ನದು ಎಂದು ನಾನು ನನ್ನದು ಇಂದು
ನಾನು ನನ್ನದು ತಂದು ನಾನು ನನ್ನದು ಒಂದು
ನಾನು ನನ್ನದು ವಸ್ತು ನಾನೆಂಬುದು ಬಿಡದೆ
ನಾನಿಂದಲಿ ಕೆಟ್ಟೆ ನಾನೆಂಬುದು ಬಿಡಿಸೊ
ನೀನೇ ವಿಜಯವಿಠ್ಠಲ ॥

೪೨

ನಾನು ನೀನು ಎಂದು ಒಮ್ಮೆಗಾದರು ನರ
ಅನಂತ ಜನುಮದಲ್ಲಿ ನುಡಿದನಾಗೆ
ಶ್ವಾನ ಸೂಕರ ದುರ್ಯೋನಿಯಲ್ಲಿ ಪುಟ್ಟಿ
ಮಾನಸಾಧಮನಾಗಿ ಕಟ್ಟಕಡಿಗೆ
ನಾನಾ ಸಂಕಟ ಬಿಟ್ಟು ಹೀನ ಭೋಜನ ಮಾಡಿ
ತಾನಿಳಿವನು ನಿತ್ಯ ನರಕದಲ್ಲಿ
ಅನಂತ ಜನುಮದೊಳು ಸೇವಕನೆಂದೆನೆ
ತಾನೊಲಿದು ಈವ ವಿಜಯವಿಠಲ ಗತಿ॥

೪೩

ನಾರಾಯಣನ ನಾಮಕೆ ಇತರ ನಾಮಗಳೆಣೆಯುಂಟೆ
ತಾರತಮ್ಯದಿ ದೇವತೆಗಳೊಳಗೆ ಹಿರಿತನಕೆ ಸಮವುಂಟೆ
ಧಾರುಣಿಯೊಳಗನ್ನದಾನಕೆ ಸಮಾನ ಉಂಟೆ
ಧೀರ ವಿಜಯವಿಠಲನ್ನ ದ್ವಾದಶಿ ತಿಥಿಗೆ ಸಮವುಂಟೆ॥

೪೪

ನಿನ್ನ ಜನರ ಸಂಗ ಕೊಡು ಎನ್ನಂತರಂಗ
ಘನ್ನ ಸುಗುಣಾಂತರಂಗ ಮಂಗಳಾಂಗ
ಅನ್ಯಾಪೇಕ್ಷೆಯೊಲ್ಲೆ ಅಂದಿನ ಭವಣಿ ಬಲ್ಲೆ
ಮನ್ನಿಸು ಮಾರಮಣ ಇಲ್ಲೇ ಇಲ್ಲೇ
ಇನ್ನು ಈ ದೇಹದಲ್ಲೇ ಕಡೆಮಾಡು ಇಹದಲ್ಲಿ
ಮುನ್ನೆ ಪುಟ್ಟಿ ಬರುವ ಕರ್ಮದ ಬಲೆ
ಎನ್ನ ಮನೋರಥ ಸಿರಿ ವಿಜಯವಿಠಲ ಹರಿ
ಧನ್ಯನ ಮಾಡುವದು ಪಥವ ತೋರಿ॥

೪೫

ನಿನ್ನ ದಾಸನೆಂದೆನಿಸಬೇಕಾದರೆ
ಭಂಗಪಡಲುಬೇಕು ದಿನ ಪ್ರತಿದಿನದಲ್ಲಿ
ಅನ್ನವಸ್ತ್ರಕಿಲ್ಲದೆ ತಿರುಗಬೇಕು
ಬೆನ್ನುಬಿಡದೆ ರೋಗಂಗಳು ಬರಬೇಕು
ಪನ್ನಗಶಯನ ಶ್ರೀ ವಿಜಯವಿಠಲರೇಯ
ಎನ್ನನೀ ಪರಿಯಲ್ಲಿ ಮಾಡಿದ ಬಗೆ ಏನು?

೪೬

ನಿನ್ನ ಪಾದಾಂಬುಜವ ನೋಡಿದ ಮನುಜಗೆ
ಘನ್ನ ಪಾಪಗಳುಂಟೆ ಘನ್ನವರ್ಣ
ನಿನ್ನ ಪೋಲುವ ದೈವ ಆವಾವ ಕ್ಷೇತ್ರದಲ್ಲಿ
ಬಣ್ಣಿಸಿ ನೋಡಿದರು ಕಾಣೆನಯ್ಯ
ಕಣ್ಣಿಲಿ ನೋಡಿದರು ಕರ್ಣದಲಿ ಕೇಳಿದರು
ಬಿನ್ನಹ ಮಾಡಿ ತುತಿಸಿದ ಕಾಲಕ್ಕು

ಎನ್ನ ಮೊದಲು ಮಾಡಿ ಪರಮೇಷ್ಠಿ ತನಕ ಸಂ
ಪನ್ನ ಜ್ಞಾನದಲ್ಲಿ ಗುಣಿಸಿದರು
ಪನ್ನಗಶಾಯಿ ಸಿರಿ ವಿಜಯವಿಠಲರೇಯ
ನಿನ್ನ ಮಹಿಮೆಗೆ ನಮೋ ನಮೋ ಎಂದೆಂಬೆನೊ॥

೪೭

ನಿನ್ನ ಮನದೊಳಗೆ ಉಳಿಸುವೆನೆಂಬ ಹರುಷ ಮಹ
ಘನ್ನವಾಗಿರಲಿಕ್ಕೆ ಎನ್ನೊಳಗೆ
ಇನ್ನಿತು ಪ್ರೇರಿಸಿ ನೀನೇ ನುಡಿಸಿದ್ದು
ಘನ್ನವಲ್ಲವೆ ಇದಕೆ ಸಂಶಯವಿಲ್ಲ
ಇನ್ನು ಯೋಚಿಸಲ್ಯಾಕೆ ಭಕ್ತ ಪಾಲಕ ಬಿರುದು
ಅನ್ನಂತಕಾಲಕ್ಕೆ ನಿನ್ನದಯ್ಯಾ
ಉನ್ನತ ಮಹಿಮ ಸಿರಿ ವಿಜಯವಿಠಲರೇಯ
ಎನ್ನ ಮಾನಾವಮಾನ ಮತ್ತಾರದಲ್ಲಾ॥

೪೮

ಪತಿಯೇ ನೀನಾಗಿ ಹಂಗಿಸಲ್ಯಾಕೋ ಎಲೊ ದೇವ
ಶ್ರುತಿ ಶಾಸ್ತ್ರವಿದಕೆ ಸಮ್ಮತ ಪೇಳುವೆ
ಕ್ಷಿತಿಯೊಳು ಜನಿಸಿ ನಾ ದೋಷ ಮಾಡದಿದ್ದರೆ
ಪತಿತ ಪಾವನನೆಂಬ ಬಿರುದು ನಿನಗೆ
ಜಿತವಾಗುವುದೇನೊ ಪರಮೈಶ್ವರ್ಯನೆ ಕೇಳು
ಪ್ರತಿ ದೈವವಿದ್ದರೆ ಅವಗಾಗದೆ
ತುತಿಸಿ ನುತಿಸಿ ನಿನ್ನ ಕೊಂಡಾಡುವಂಥ ಈ
ಅತಿಶಯ ನನಗ್ಯಾಕೆ ಹಗಲಿರುಳು
ಸತತ ಗುಣಾಂಬುಧಿ ವಿಜಯವಿಠಲ
ಪತಿತನಾಗಿ ನಿನಗೆ ಮೊರೆ ಇಡುವೆ॥

೪೯

ಪರಮ ರಹಸ್ಯವಿದು ಕೇಳಿರಿ ಸಜ್ಜನರು
ಅರುಹುವೆ ಸಿರಿಪತಿಯ ವ್ಯಾಪಾರವ
ಕರುಣಿಸಿ ವಾಕು ಮನೋ ಮಯನೆನಿಸಿ
ಶಿರದಶ ತೋಳೆರಡು ಪದವೆರಡು ಧರಿಸುತ್ತ
ಸ್ಥಿರ ದೇಹದಲ್ಲಿ ನಿಂತು ತ್ರಿವಿಧರ ಮನದಲಿಪ್ಪ
ಸುರರಿಗೆ ಬಲಭಾಗ ಪಂಚಾಸ್ಯದಿ ಇವರಿ
ವರ ಸ್ತ್ರೀಯರಿಗೆ ವಾಮ ಪಂಚಾಸ್ಯದಿಂದ
ಪ್ರೇರಣೆ ಮಾಡುತ್ತ ಸದಾಕಾಲಾ
ಶರಣವತ್ಸಲ ಸಿರಿ ವಿಜಯವಿಠ್ಠಲರೇಯ
ವರವ ಕೊಡುತಿಪ್ಪ ಇವರ ಗತಿ॥

೫೦

ಪಾಮರ ಮನುಜರು ದಾಸವೇಷವ ಧರಿಸಿ
ನೇಮನಿಷ್ಠೆಗಳೆಲ್ಲ ಪೋಗಾಡಿಸಿಕೊಂಡು
ಕಾಮಚಾರಿಗಳಾಗಿ ಕಂಡಲ್ಲಿ ಸಂಚರಿಸಿ
ಮಾಮನೋಹರನ ಲೀಲೆಯ ಪೇಳಿದರೇನು?

ಈ ಮಹಿಯೊಳು ಮೃಷ್ಟಾನ್ನ ಭೋಜನ ವಸನ
ಇದೇ ಮಹಾಫಲವೆಂದು ಹಿಗ್ಗಿ ಕೆಟ್ಟು ಪೋಗುವನು
ಸ್ವಾಮಿ ತನ್ನ ನಿಜದಾಸನೆಂದವನಿಗೆ
ನಾಮಸುಧೆಯನಿತ್ತು ಸಲಹುತಿಪ್ಪ ವಿಜಯವಿಠ್ಠಲರೇಯ॥

೫೧

ಪ್ರಮೋದ ಸಂವತ್ಸರದಲೆನ್ನವರಿಗೆ
ರೋಮ ಕೊಂಕದು ಕಾಣೊ ನೀನೊಲಿದರೆ
ಪ್ರಮೋದವಲ್ಲದೆ ಕ್ಲೇಶಲೇಶವಿಲ್ಲ

ಸ್ವಾಮಿ ಲಾಲಿಸಿ ಕೇಳೊ ಇಷ್ಟ ದೈವ
ಪ್ರಮಾದದಿಂದಲಿ ಬಂದಿದ್ದ ಕಾಲಕ್ಕೆ
ಗೋಮಾಯುವಿನಂತೆ ಓಡಿ ಪೋಪುದು
ಶ್ರೀ ಮನೋಹರ ನಮ್ಮ ವಿಜಯವಿಠಲ ನಿನ್ನ
ನಾಮ ನೆನೆಸಿದ ಮಾರ್ಕಾಂಡ ಮುನಿಯ ನೋಡು॥

೫೨

ಪುರಂದರದಾಸರು ವೈಶ್ಯ ಮಾದಮ್ಮನ
ವರ ಕುಮಾರನ ಬದುಕಿಸಿದರು ಗಡ
ಗುರು ವ್ಯಾಸ ಮುನಿರಾಯರು ಭೂಪತಿಗೆ ಬಂದದು
ಸ್ತರವಾದ ಕುಹುಯೋಗ ಬಿಡಿಸಿದರು ಗಡ
ಸಿರಿ ನಾರಾಯಣ ಯೋಗಿ ವ್ಯಾಸಮುನಿಗೆ ಬಂದ
ಉರಗ ಬಾಧೆಯ ಕಳೆದು ಪಾಲಿಸಿದರು ಗಡ
ಹರಿಯೆ ಈ ಕಲಿಯುಗದಿ ನಿನ್ನ ಶರಣರು ಇಂಥಾ
ಚರಿತೆ ಮಾಡಿಪ್ಪರು ಆವನಾದರು ಇನಿತು
ಸ್ಮರಣೆಗೈದವಗೆ ಮನಸು ನಿರ್ಮಲ ಕಾಣೊ
ಧರೆಯೊಳು ಈ ಮನುಜರಾಡಿದ್ದೇ ವೇದ
ನೆರೆ ನಂಬಿದವರಿಗೆ ರೋಗ ಹಿಂಗಳೆವುದು
ಪರಮ ಶುದ್ಧನ ಮಾಡಿ ಪೊರೆವನು ತಡಿಯದೆ
ಕರುಣಾಕರ ನಮ್ಮ ವಿಜಯವಿಠಲ ನಿನ್ನ
ಚರಣ ಧೇನಿಸುವವರ ಪಡಿದೊತ್ತು ನಾನಯ್ಯ॥

೫೩

ಬಾಂಧವನು ನೀನೆ ಭಕ್ತ ಹೃದಯ
ಮಂದಿರದಲ್ಲಿ ವಿಠಲ ಮೂರುತಿಯಾಗಿ
ನಿಂದವನು ನೀನೆ ಶೇಷ ಪರ್ವತದಲ್ಲಿ
ಧಂ ಧಂ ರಧಿಸುವ ಸುಂದರ ತಿರುವೆಂಗಳನಾಗಿ

ಒಂದೇ ಮೂರುತೆರಡೊಂದೆನಿಸಿ
ಮಂದಮತಿಗೆ ಐಶ್ವರ್ಯವ ತೋರಿದೇನೆಂಬ
ವಿಜಯವಿಠಲ ತಿರುವೆಂಗಳ
ಒಂದಕೊಂದಾನಂತ ಅನಂತ ಒಂದೋ॥

೫೪

ಬಿಂಬ ಪೊಳೆಯುತಿರೆ ದಿಂಬ ದಂಡನೆ ಯಾಕೆ
ತುಂಬಿದೂಟವಿರೆ ತಿರುಪೆ ಯಾಕೆ
ಕೊಂಬೆಯಲಿಪ್ಪ ಹಣ್ಣು ತಾನೇ ಬೀಳುತ್ತಿರಲು
ಕುಂಭಿಣಿಯಲಿ ಕೆಡಹಿ ಫಲ ಮೆಲುವರೆ
ಹಂಬಲಗೊಳಿಸಲ್ಲ ಕರ್ಮವೆಂಬುದು ತೊರದು ಜ್ಞಾ
ನಾಂಬುಧಿಯೊಳಗಿರು ನಂಬಿ ಹರಿಯ ಸಾರು
ಗಂಭೀರ ಪುರುಷ ಶ್ರೀ ಹರಿ ವಿಜಯವಿಠಲರೇಯನ
ಬಿಂಬ ನೋಡಿದವರಿಗೆ ಇಂಬುಂಟು ವೈಕುಂಠದಲ್ಲಿ॥

೫೫

ಭವಿತ ಭಾವಿತ ಲೋಕವೆಂದೆಂಬ ನಿಗಮಾರ್ಥ
ಶಿವಗೆ ಸನಕ ಮುನಿ ಪೇಳಿದನಂದು
ಶಿವನೆ ದುರ್ವಾಸನು ಒಮ್ಮೆ ಪರೀಕ್ಷಿಸಿ
ಅವನಿಪತಿಯಿಂದ ಖಿನ್ನನಾದ
ಕುವರನಾಗಿ ಒಮ್ಮೆ ಗುಣಗಳ ಎಣಿಸಿ
ಹವಣ ತೋರದೆ ಬೆರಗಾಗಿ ನಿಂದ
ಬವರದೊಳಗೆ ಗುರುನಂದನನಾಗಿ ಶ
ರವನು ಎಸೆದು ಬೆಂಡಾಗಿ ನಿಂದ
ಪವನನೊಡೆಯ ನಮ್ಮ ವಿಜಯವಿಠ್ಠಲಂಗೆ
ಶಿವನು ಸೇವಕನಾಗಿ ಅರಸುತಿಪ್ಪ॥

೫೬

ಭೂತಹಿತನೆಂದು ಭ್ರಾಂತಿತತಿಗಳು ಪೇಳ್ವ
ಮಾತುಗಳೆಲ್ಲ ಕೇಳುವುದಲ್ಲವೊ
ಭೂತಹಿಂಸನೆಂಬೊ ಮಾತು ಅನುಭವ ಸಿದ್ಧ
ಭೂತದೊಳಗೆ ಪೊಗಳುವುದು ಬರದೆ
ಆತುರನಾಗಿ ಬೇಡಿದ ಇಷ್ಟ ಈಯದಿರೆ
ಯಾತಕಿದು ನಿನಗೆ ಕರುಣತನವು
ಜ್ಯೋತಿ ಹಚ್ಚಿದರೆ ಪ್ರಕಾಶವಾದರೆ ಖ
ದ್ಯೋತನ್ನ ಉಪಕಾರ ಯಾತಕ್ಕೇನೊ
ಭೀತಿ ಸಿರಿ ವಿಜಯವಿಠ್ಠಲ ನಿನ್ನ
ಕೌತುಕವೆಂಥದೊ ಎಣಿಸಿದರೆ ತಿಳಿಯದೊ॥

೫೭

ಮಂಗಳಪ್ರದ ನಿನ್ನ ಭಜಿಸಿದ ಜನರ
ಸಂಗದಲ್ಲಿದ್ದ ಮಾನವಗೆ ಸತತ
ಮಂಗಳವಲ್ಲದೆ ಲೇಶ ಕ್ಲೇಶಪಾಶಗಳಿಲ್ಲ
ತುಂಗ ಮಂಗಳ ತರಂಗವಾರ್ಧಿ ಚಂದ್ರಾ
ಹಿಂಗಳೆದು ರೋಗವನು ಹಿರಿದಾಗಿ ಬ್ರಾಹ್ಮಣಗೆ
ಅಂಗ ಆರೋಗ್ಯವಾಗಲಿ ಅಂಗನೆ
ಗಂಗಾಜನಕ ನಮ್ಮ ವಿಜಯವಿಠ್ಠಲ ನಿನ್ನ
ಅಂಘ್ರಿ ಧ್ಯಾನವೆ ಸರ್ವಾರಿಷ್ಟ ನಾಶ॥

೫೮

ಮಡಿಮಾಡಿಕೊಂಬ ಬಗೆ ತಿಳಿಯಬೇಕು ಮನುಜ
ಮಡುವಿನೊಳಗಿನ ಉದಕ ಜಡವಲ್ಲವೆ
ಮಡಿ ಎಂದೆನಿಸಿಕೊಂಬ ವಸ್ತ್ರ ತಾನೆ ಜಡವು
ಮಡಿ ಎಂತಾಯಿತು ಪೇಳೊ ಸದಾಚಾರನೆ

ಜಡಜಡಕೆ ಸಂಬಂಧವಾದರೆ ತಕ್ಷಣಕೆ
ಉಡುವದು ಹೊದೆವದು ಶುಚಿವಾಹುದೆ
ಜಡಕೆ ಈ ಸಾಮರ್ಥ್ಯ ಬಂದ ತರುವಾಯ
ಪೊಡವೀಶ ರಂಗಂಗೆ ಪೇಳು ಅದನೆ
ಕಡಲಶಯನ ನಮ್ಮ ವಿಜಯವಿಠ್ಠಲರೇಯನ
ಅಡಿಗಳ ನೆನೆದವನು ಸರ್ವದಾ ಮಡಿ ಎನ್ನು॥

೫೯

ಮರಣ ಮುಂದೆ ಬಂದೊದಗುವುದೆ ಸತ್ಯ ಸಂ
ಕರುಷಣನೆ ಕೇಳು ಎನ್ನ ಬಿನ್ನಪ ನಿನ್ನ
ಚರಣ ಸ್ಮರಣೆ ಎನಗಿರುವುದಿಲ್ಲವೊ ತಿಳಿಯೆ
ಹರಿಯೆ ನಿನ್ನದಾಗಲಿ ಎಂಥಾದು ಕರಣ
ಹರಣ ಮನಸು ಸ್ವಾಧೀನವಿದ್ದಾಗ
ನೆರೆ ನಂಬಿ ಸ್ತೋತ್ರಗಳ ಮಾಳ್ಪೆನಯ್ಯ
ಕರುಣಾಂಬುಧಿ ಮರವು ಕಲಿಸದಿರು ಆ ಕಾಲಕ್ಕೆ
ನಿರಯಣ ಸಮಯಕ್ಕೆ ನಿನ್ನ ನಾಮಂಗಳು ಉ
ಚ್ಚರಣೆಯಾಗುವಂತೆ ಪ್ರೇರಿಸಬೇಕು
ವರುಣಾಂತರ್ಯಾಮಿ ವಿಜಯವಿಠ್ಠಲರೇಯ
ಶರಣರ ಭಾರ ವಹಿಸುವ ದೇವ॥

೬೦

ಮರಿಗುಬ್ಬಿ ಬಾಯಿ ಬಿಟ್ಟಂತೆ ಬಿಡುತಲಿ ನಿಂದು
ಸೆರಗೊಡ್ಡಿ ಬೇಡುತಿಹಳೊ ಜೀಯ
ಪರಮ ಪುರುಷನೆ ನೀನು ಎನ್ನೊಳು ವ್ಯಕ್ತವಾಗಿ
ಇರುತಿರಲು ತಿಳಿದು ಬಲು ದೈನ್ಯನಾಗಿ
ಶರಣಪೇಳುವ ಮಾತು ನಿನ್ನದೆ ಎಂದಿಗೂ
ಸರಿ ಎಂದು ಜ್ಞಾನಿಗಳು ಪೇಳುತಿಹರೊ

ಬರಿದಾಗಗೊಡದಿರು ಬ್ರಾಹ್ಮಣಗೆ ಬಂದ ಮಹ
ದುರಿತ ತರಿದಟ್ಟಿ ರೋಗಗಳ ಕಳೆಯೊ
ಮರಣ ರಹಿತ ನಮ್ಮ ವಿಜಯವಿಠಲ ನಿನ್ನ
ಸರಿದೊರೆಯ ಕಾಣೆನೊ ರಕ್ಷಿಸುವಲ್ಲಿ॥

೬೧

ಮಾತು ಮಿಂಚಿತು ಕಾಣೊ ಹೆಂಗಳಿಯಾ ಮನೋ
ವೃತ್ತಿಗೆ ಆತುಮದೊಳಗಿಪ್ಪ ಆತ್ಮ ಕೇಳೋ
ಭೂತದೊಳಗೆ ಭಕ್ತರಧೀನ ನೀನೆಂದು
ಖ್ಯಾತವಾಗಿದೆ ನೋಡು ಸರ್ವದಲಿ
ನೀತ ಗುಣವಂತ ನಿನ್ನವರ ದಾಸಾನುದಾಸ
ಜ್ಞಾತ ಅಜ್ಞಾತದಲಿ ನುಡಿದೆನಯ್ಯಾ
ನೀ ತವಕದಿಂದ ನುಡಿಯ ಪಾಲಿಸದಿರಲು
ದಾತರೊಬ್ಬರ ಕಾಣೆ ಬೊಮ್ಮಾಂಡದಿ
ಯಾತರವ ನಾನಲ್ಲ ನಿನ್ನ ನಾಮವೆ ಗತಿ ಬೆ
ನ್ನಾತು ಕಾಯೊ ಎನ್ನ ಮನ ದೈವವೆ
ವಾತಾಂತರ್ಗತ ನಮ್ಮ ವಿಜಯವಿಠ್ಠಲರೇಯ
ಪ್ರೀತನಾಗು ಎನ್ನ ಸ್ತುತಿಗೆ ಮೈದೋರಿ॥

೬೨

ಮಾಯಾವಾದಿ ಪೋದಲ್ಲಿ ಸುಜನರೆಲ್ಲ
ದೃಢವಾಗಿ ತಿಳಿವುದು ಅಡ್ಡಗಂಧದವನ ಮುಖನೋಡದಿರಿ
ನೀಡದಿರಿ ಗ್ರಾಸ ನಿಮ್ಮ ಗುರುಗಳಾಣೆ
ಮೂಢ ಆವಾತನ ಮತವು ಸುಡಲಿ ಸುಡಲಿ
ಹೆಡ್ಡತೊತ್ತಿನ ಪೋದ ಮಡದಿಯೊಳು ಪೊಕ್ಕು
ಹೆದ್ದೊರೆಬಲದಿಂದ ಪೊಡವಿಗಧಿಕಶಿವ ವಿಜಯವಿಠ್ಠಲನ್ನ
ಪಾದಕ್ಕೆ ನೀವು ಬೀಳಿರೋ ಅಡ್ಡಬೀಳಿರೊ॥

೬೩

ಮಾಯವಾದ ವಾದಿಗಳಿಗೆ ನಾಯಿ ಜನ್ಮವೆ ಸತ್ಯ
ಹರಿಭಕ್ತರೆಲ್ಲೆಲ್ಲಿ ಪೂಜ್ಯರು ಸತ್ಯ
ಸಂಕರನೆಂಬೋನು ಮಂಕುತೊತ್ತಿನ ಮಗ
ಹಿಂದಿನ ವೈರದಿ ಹೀನಮತವ ಮಾಡ್ದ
ಅಂದು ಅವನ್ನ ಹಿಡಿದು ಭುಂಜಿಸಿದ್ದ ಕಲಿಭೀಮ
ಇಂದು ಅವನ ಮತವ ಮೂರಡಿಯ ಮಾಡಿ
ವಿಜಯವಿಠ್ಠಲನೆ ಪರದೈವವೆಂದು ಮೆರೆದ ಈ ಧರೆಯೊಳಗೆ॥

೬೪

ಮೀಸಿಕಾಸಿಯ ತೋರಿ ಬಂಟ ಬದುಕುವ ಗಡ
ವೇಶ್ಯಾಸ್ತ್ರೀ ತನ್ನ ಎದೆಯ ತೋರಿ
ಗ್ರಾಸಕೆ ಪುಟ್ಟಿಸಿ ಕೊಂಬುವಳು
ಸೂಲಗಿತ್ತಿ ಕೂಸು ಮಾಸವ ಪಿಡಿದು ಬದುಕುವಳು
ಔಷಧವಿತ್ತು ವೈದ್ಯ ಬದುಕುವ ಗಡ
ಕಾಸಿಗಾಗಿ ಉತ್ತಮರ ವಂಚಿಸಿ
ಲೇಸಾಗಿ ಕುಂಠಣಿತನ ಮಾಡಿ ಬದುಕುವವರು ಕೆಲರು
ದೇಶದೊಳಗೆ ಜೋಗಿ ಕೊರವ ಕೋತಿ
ಆ ಸರ್ಪದಿಂದ ಬದುಕುವರು ಗಳ
ಪಾಶದಿಂದಲಿ ಚೋರ ಬದುಕುವನು
ಏಸು ವಿಧ ಪೇಳಲಿ ಪೊಟ್ಟೆ ಪೊರೆವ ಜನರು
ಮೋಸಗೊಳಿಸುವರು ಒಂದೊಂದು ಬಗೆಯಾ
ಕೇಶವ ನಾನು ಇವರಂತೆ ವಂಚಕನಾಗಿ
ವೇಷವ ಧರಿಸಿ ಪೊಟ್ಟೆಯ ಪೊರೆವೆನೊ
ವೀಸ ತೂಕವಾದರು ನಿನ್ನ ಪಾದದ ವಿ

ಶ್ವಾಸ ಕಾಲು ಘಳಿಗೆ ಇಲ್ಲ ಇಲ್ಲ
ಆಸೆ ಕವಚದಿಂದ ನಿನ್ನ ಮೊರೆ ಬಿದ್ದು ಇ
ನ್ನೀ ಶರೀರವ ಜೋಕೆ ಮಾಡಿಕೊಂಡು
ದಾಸನೆಂದೆನಿಸಿದೆ ಧರಣಿಯೊಳಗೆ ತಿರುಗಿ
ಹೇಸಿ ಮಾರ್ಗಕ್ಕೆ ಒಳಗಾಗಿಹೆನೊ
ನಾಶರಹಿತ ನಮ್ಮ ವಿಜಯವಿಠ್ಠಲರೇಯ
ಈ ಸಂಸಾರ ಚಿಂತೆ ನಿನ್ನಲ್ಲಿ ಆಗದೊ॥

೬೫

ಯಾಚಿಸುವನ ಜನ್ಮ ಯಾತಕ್ಕೆ ಬರುವದು
ಯೋಚನೆ ಮಾಡಲಿ ಬೇಕು ತನ್ನೊಳಗೆ
ವಾಚಾಳನಾಗಿ ಪೋಗಿ ಎಲ್ಲೆಲ್ಲಿ ತಿರುಗುತ
ಊಚ ನೀಚವೆನದೆ ಸ್ತುತಿಸಿ ಕೇಳುತಾ
ಆಚಾರವನು ಬಿಟ್ಟು ದಿನಾಂತರವೆನದೆ
ಚಾಚುವೆನೊ ಕರವ ಕೇವಲ ದೈನ್ಯದಿ
ಯೋಚನೆಗೊಳಗಾಗಿ ಕುದಿಯಬೇಕೊ
ಛೀ! ಛೀ! ಒಬ್ಬರ ಬೇಡುವ ನಡತೆಗಿಂತಲಿ
ನಾ ಚರಿಸಬಹುದು ಮಾರಿಗಳ ಕೂಡ
ಕುಚೇಲಪಾಲ ಸಿರಿ ವಿಜಯವಿಠ್ಠಲ ಎನಗೆ
ನಾಚಿಕೆಯಾಗಿದಯ್ಯಾ ಉದರಗೋಸುಗ॥

೬೬

ರುದ್ರಾಂತರ್ಗತ ನಾರಸಿಂಹ ರೋಗನಿವಾರಣ
ಭದ್ರವಾಗಲಿ ಇವಗೆ ಇವನ ಪತ್ನಿ
ಆರ್ದ್ರಳಾಗಿ ಚಾಲ್ವರಿದು ವಂದಿಪಳು ಸ
ಮುದ್ರ ಶಾಯಿ ಇವಳ ಮಂಗಳ ಸೂತ್ರ
ನಿದ್ರೆಯೊಳಗಾದರು ಸ್ಥಿರವಾಗಿರಲಿ ಉ

ಪದ್ರಗಳು ಬಂದರು ಪರಿಹರಿಸು
ಅದ್ರಿ ಧರಿಸಿ ಗೋಕುಲ ಕಾಯ್ದ ಕರುಣಾಸ
ಮುದ್ರ ಆಪತ್ಕಾಲ ಬಾಂಧವನೆ
ಕ್ಷುದ್ರ ದೇವತೆಗಳಿಗೆ ಶಕ್ತಿ ಈ ಪರಿಯುಂಟೆ
ಛಿದ್ರ ಸಾಸಿರವಿರೆ ಕ್ಷಮಿಸಬೇಕು
ಮುದ್ರೆಧರರಪಾಲ ವಿಜಯವಿಠಲನೆ ದಾ
ರಿದ್ರ್ಯ ಭಂಜನ ಎನಗೆ ಇದೆ ಮಾತುರ ಕೊಡೊ॥

೬೭

ರೆಕ್ಕೆ ಮುರಿದ ಹಕ್ಕಿ ಬಾಯಿಬಿಟ್ಟಂತೆ ಗಗ
ನಕ್ಕೆ ಮೊಗವೆತ್ತಿ ಕೂಗುತಿಪ್ಪೆ
ಅಕ್ಕರೆ ನಿನಗಿನ್ನು ಬಾರದೆ ಎಲೊ ದೇ
ವಕ್ಕಳ ಒಡಿಯಾನೆ ತ್ರಿಜಗದಲ್ಲಿ
ರಕ್ಕಿಸಿ ಪೋದರೇನೋ ಸರ್ವ ಜೀವಿಗಳು ಯಾ
ತಕ್ಕೆ ಎನ್ನೊಬ್ಬನ ಸುತ್ತಿಸುವಿ
ಚಕ್ಕಂದವಾಗಿದೆ ನಿನಗೆ ನಾನೋರ್ವನೆ ಗತಿಯೆ
ಮುಕುತಿಯಾಗಿಪ್ಪದೆ ಸರ್ವರಿಗೆ
ಬಕ್ಕದಾಸನು ನಾನು ವಿಜಯವಿಠಲ ನಿನ್ನ
ಲೆಖ್ಖಕ್ಕೆ ನಿಪನಾವಾವನಯ್ಯಾ॥

೬೮

ಷಡುರಸಾಯನ ಹೊನ್ನ ಹರಿವಾಣದೊಳು
ಬಡಿಸಲಾದ[ರದಿ]ಂದ ಒಡನೆ ನೋಡಿ
ಎಡೆಯೊಳಗೆ ಒಂದು ನೊಣ ಕೆಡಹದಂತೆ ರುಚಿ
ಒಡಲ ತುಂಬ ಮೆದ್ದು ಸಡಗರದಲಿ
ಕಡು ತೃಪ್ತಿಯಾಗಿ ತಾ ಕಡೆಗೆದ್ದು ಪೋಗುವಾಗ

ಬಡಿದು ನೊಣನ ತಿಂದು ಹೊಡ ಮರಳಿ
ಷಡುರಸಾಯನದನ್ನ ಕುಡಿದ ನೀರನೆ ಸಹಿತ
ಪಿಡಿಯಲಾರದೆ ಕಾರಿ ಮಿಡಿಕಿದಂತೆ
ಗಡ ಮನಸೆ ಕೇಳನ್ಯರಿಗೆ ನುಡಿದುದರಿಂದ ನೀನು
ಪಡೆದಾ ಪುಣ್ಯವಮೃತ ಒಡಲೊಳಿರಲು
ತಡೆಯದೆ ಬರಿಗೈಸಿ ಕೆಡಿಸುವದು
ಪೊಡವಿಯೊಳಗೊಬ್ಬರಾ ಗೊಡವಿ ಯಾಕೆ ಬಿಡು ಬಿಡು
ಬಿಡು ಇಂಥ ನುಡಿ ನಡತೆಗಳು
ಒಡೆಯ ವಿಜಯವಿಠ್ಠಲನ ಅಡಿಗಳಲ್ಲಿಪ್ಪುದು॥

೬೯

ಸಂತೆ ನೋಡ ಬಂದವಗೆ ಶ್ರಮ ಸಾಧ್ಯವಲ್ಲದಲೆ
ಚಿಂತಾಮಣಿ ಕೈಗೆ ದೊರಕಿದಂತೆ
ಎಂತು ಪೇಳಲಿ ಎನ್ನ ಗುರುಗಳಿತ್ತ ಭಾಗ್ಯ
ಅಂತುಗಾಣೆನೊ ಎಣಿಸಿ ಗುಣಿಸಿ ನೋಡೆ
ಶ್ರಾಂತನಾಗಿ ಹಸಿದು ಅಂಬಲಿಯ ಕೇಳಿದರೆ
ಇಂತು ಪರಮಾನ್ನ ಗೋಘೃತ ಶರ್ಕರಾ
ಮುಂತೆ ಪೊಂಬಡಿವಾಣದೊಳಗೆ ತಂದಿಟ್ಟಂತೆ
ಎಂತು ಫಲಿಸಿತೊ ನೋಡು ಮನವೆ ನೀನು
ಚಿಂತಿಸಿ ಸಂಸಾರಕ್ಕೆ ದ್ರವ್ಯಗೋಸುಗ ಬರಲು
ಅಂತರಾವೇದಿ ಮಿಕ್ಕ ಕ್ಷೇತ್ರ
ಸಂತಜನರೊಡನೆ ಸಾಧ್ಯವಾಯಿತು ಸಿರಿಯಾತ್ರಿ
ಕಾಂತನ ತುತಿಸುವರ ಕರುಣದಿಂದ
ಮಂತ್ರ ತಂತ್ರಗಳರಿಯೆ ವಿಜಯವಿಠಲರೇಯ
ಎಂತು ಮಾಡಿದ ನೋಡು ಮನವೆ ಹಾ ಹಾ ಹಾ

೭೦

ಸ್ನಾನ ಮಾಡಿದರಿನ್ನೇನು ಫಲವೊ
ಮೌನ ಮಾಡಿದರಿನ್ನೇನು ಫಲವೊ
ದಾನ ಮಾಡಿದರಿನ್ನೇನು ಫಲವೊ
ಸ್ನಾನ ಮೌನ ದಾನ ನಾನಾ ಕರ್ಮವೆಲ್ಲ
ಭಾನು ಉದಯದಲಿ ನೀನೆದ್ದು ಭಕುತಿಲಿ
ಶ್ರೀ ನಾರಾಯಣನೆಂಬೊ ನಾಮ
ಆನಂದವಾಗಿ ಒಮ್ಮೆ ಕೊನೆ ನಾಲಿಗೆಯಿಂದ
ನೀ ನೆನೆಯೊ ನೆನೆಯೊ ಮನವೆ
ಜ್ಞಾನ ಗೋಚರ ವಿಜಯವಿಠ್ಠಲನ್ನ
ಧ್ಯಾನದಲ್ಲಿ ಒಮ್ಮೆ ನೆನೆದರೆ ಸಾಕು
ಸ್ನಾನ ಮಾಡಿದರಿನ್ನೇನುಂಟು॥

೭೧

ಸಮರ್ಥನಾದೊಡೆ ಕೆಣಕಿನೋಡೆಲೊ, ನಿನ್ನ
ನಿರ್ಣಯ ಮಾಡುವೆನು ಭೂಮಿಯೊಳಗೆ
ಕಾಮಿಸದಿರು ಎನ್ನ ಕೂಡ ಸ್ನೇಹವ ಇಂದು
ತಾಮಸಕ್ಕೆ ಸೂರ್ಯಗೆ ಗೆಳೆತನನೇ
ಗ್ರಾಮದ ಹೊರಗೆ ಗೋಮಯ ಬಿದ್ದಿರೆ ಅರಸಿ
ಕಾಮಿನಿಯು ಬಯಸಿದಂತಾಯಿತಲ್ಲೋ
ಈ ಮಾತು ಇನ್ನೊಮ್ಮೆ ಅನ್ನದಿರು ಆಡದಿರು
ಹೋಮದೊಳಗಿನ ಘೃತ ಮಾರ್ಕ ನೆಕ್ಕುವುದೆ ಬೆಕ್ಕು
ಶ್ರೀಮನೋಹರ ನಮ್ಮ ವಿಜಯವಿಠ್ಠಲ ದುರಿತ
ಸ್ತೋಮ ಕಾನನಕೆ ಪಾವಕನಂತೆ ಇಪ್ಪ

೭೨

ಸಲಹುವುದು ಎನ್ನ ಸಲಗಿಯ ದೈವವೆ
ಸಲಹದಿದ್ದರೆ ಬಿರುದು ಸಲ್ವುದೇನೋ
ಸಲಗೀಯ ನೀನಿತ್ತು ಸಲೀಜನ ಮನೋಬಯಕೆ
ಸಲಿಸಿ ರಣಾಗ್ರದಲಿ ಸಲಹಲಿಲ್ಲವೆ ದೇವ
ಸುಲಲಿತಾ ಮನ್ನಾರನಿಲಯ ವಿಜಯವಿಠಲ
ಸಲೆಯನ್ನು ನಿನ್ನ ನಾಮ ನೆನಸಲಾಗನಿದನೆಂದು (?)
ನಿನ್ನ ಮನ್ನಿಸಲಾಗನಿವನೆಂದು (?)

೭೩

ಸುಡು ಸುಡು ಯಾಚಕನ ಜನ್ಮ ವ್ಯರ್ಥ ವ್ಯರ್ಥ
ಕೊಡುವೆನೆಂದರೆ ಬಹು ದಿವಸ ಕಾಯ್ದು
ಅಡಿಗೆ ಬಿದ್ದು ಅವನ ಮನಸ್ಸು ತನ್ನ ಕಡಿಗೆ
ಮಾಡಿಕೊಂಡು ಯೋಚಿಸುತ
ಗಡಗಿಯೊಳಗಿನ ನೊಣದಂತೆ ಸುತ್ತುತ ಆಸೆ
ಬಿಡಲಾರದೆ ಹಿಡಿಯಲಾರದೆ ಮಿಡುಕುತ
ಕಡುಮೂರ್ಖನಂತೆ ನಾನಾದೆನು ಪ್ರಾಣೇಶ
ಕಡು ಸಂಪೂರ್ಣ ವಿಜಯವಿಠ್ಠಲರೇಯ
ಕೊಡುಗೈ ದಾತನಿಗೆ ಇನಿತು ಪರರಾಶೆ॥

೭೪

ಸಿರಿರಮಣ ನಿನ್ನಯ ಚರಣ ಯುಗ್ಮಗಳಿಗೆ
ಶಿರಬಾಗಿ ನಾ ನಿನಗೆ ಬಿನ್ನೈಸುವೆ
ಶರಣರಿಗೆ ಬಂದ ಆಪತ್ತು ಪರಿಹರಿಸೆಂದು
ಕರುಣವಾರಿಧೆ ನಿನ್ನ ಪ್ರಾರ್ಥಿಸುವೆನೊ
ಸ್ಥಿರ ಮಾಡು ವಚನವನು ದೂರ ನೋಡದೆ ಈಗ

ಕರಿ ಮೃಕುಂಡಜ ಮುಖರ ಪೊರೆದ ಕರುಣಿ
ಇರಲಿ ಈ ನರನೋರ್ವ ಧರಿಯೊಳಗೆ ಕೆಲವು ದಿನ
ಸರಿದಿಹುದು ಆಯುಷ್ಯವಿಲ್ಲವೆಂಬ್ಯಾ
ಎರಡು ವರುಷ ಎನ್ನಾಯು ಎರದೆ ಧಾರೆಯ ಇವಗೆ
ವರ ಸಂತತಿ ಇವರಿಗಿರುವುದೆಂದು
ಅರಿದು ಪ್ರಾರ್ಥಿಪೆ ಭಕುತರಿಗೆ ಸಂಜೀವನೆ
ಶರಣ ವತ್ಸಲನೆಂಬ ಬಿರಿದೊಳ ಹಾಕೊ
ಕರುಣಾಕರ ನಮ್ಮ ಸಿರಿ ವಿಜಯವಿಠಲ ನಿನ್ನ
ಕರ ಮುಗಿದು ಪ್ರಾರ್ಥಿಸುವೆ ಕರುಣಿಸವನ॥

೭೫

ಹರಿ ಭಕುತಿಯಿಲ್ಲದವನೊಬ್ಬ ಕೋಣ
ಪರಿ ಪರಿ ಎಸಗಿದ್ದ ಸುಕೃತ ಕ್ಷೀಣ
ಧರೆಯೊಳಗವನೆ ಜೀರ್ಣಪದ ಕಾಣ
ಕೊರಳಲಿ ಹಾಕಿದ ಹಾರವ ಕಾಣ
ಸುರ ನರೋರಗ ಮಧ್ಯ ಇಲ್ಲ ಅವಗೆ ಠಾಣ
ಸಿರಿ ವಿಜಯವಿಠಲ ಪೊರೆಯನು ಪ್ರಾಣ॥

೭೬

ಹಾಗ ಕಾಸ ವೀಸ ಹಂಚಿಕೊಡು ಎಂದು
ಭಾಗಾದಿಯಾಗಿ ನಾ ಬೇಡಲಿಲ್ಲ
ಕೂಗಿ ಬೆಟ್ಟಕ್ಕೆ ಪಿರಿದಾಗಿ ಸೌಭಾಗ್ಯವಿತ್ತು
ಪೋಗಗೊಡದೆ ನಿನ್ನ ತಡೆಯಲಿಲ್ಲ
ಬಾಗುವೆ ನಿನ್ನ ಭಕ್ತರ ಮನೆ ಬಾಗಿಲು ಕಾಯ್ದಂತೆ
ಯೋಗಿ ಹೃದಯ ಶ್ರೀ ವಿಜಯವಿಠಲರೇಯ
ನೀ ಗರ್ವಿಸಿದರೆ ರೇಗದೆ ಒಡಲೊಳು॥

೭೭

ಹರಿದಾಸನಾಗಿ ಸಂಚರಿಸು ಸಂತೋಷದಲಿ
ಗುರುಹಿರಿಯರ ಪಾದಕೆರಗು ಬಿಡದೆ
ಮೂರೊಂದು ಯುಗದಲ್ಲಿ, ಮೂರೊಂದು ವರ್ಣದ
ಮೂರೊಂದು ಕಡೆ ಬಿಂಬ, ಮೂರೊಂದು ಆಗಿ ಭಜಿಸು
ಮೂರೊಂದು ಪುರುಷಾರ್ಥ, ಮೂರೊಂದ್ವಾದಿ ಬೇಡು
ಮೂರೊಂದು ಮೊಗನಯ್ಯ, ವಿಜಯವಿಠಲರೇಯ
ಮೂರೊಂದುಪಾಯದಲಿ ಮೂರೊಂದು ಪ್ರಳಯ ಮಾಳ್ಪ ಎನ್ನ॥

ಘಸಣಿ – ಕೋಟಲೆ
ಚಂದ್ರಮೌಳಿ – ತಲೆಯಲ್ಲಿ ಚಂದ್ರನನ್ನು ಧರಿಸಿದ–ಶಿವ
ಜಗತ್ರಯ – ಮೂರುಲೋಕ
ಜಗದಪ್ಪ – ಲೋಕ ರಕ್ಷಕ
ಜತ್ತಾಗಿ – ಎಚ್ಚರಿಕೆಯಿಂದ
ಜಯ ವಿಜಯ– ವೈಕುಂಠದ ದ್ವಾರಪಾಲಕರು
ಜೀರ್ಣಮಲಿನ– ವಸ್ತ್ರ ಹರಿದು ಕೊಳೆಯಾದ ಬಟ್ಟೆ
ತಂತ್ರಸಾರ – ಒಂದು ಶಾಸ್ತ್ರ ಗ್ರಂಥ
ತಮಸು – ಕತ್ತಲೆ
ತರುಣಿಸು – ದಾಟಿಸು
ತಾಮಸ – ಅಜ್ಞಾನ
ತಾರಕ್ಷ್ಯರಂಗ – ಹುಲಿಯನ್ನೇ ವಾಹನ ಮಾಡಿಕೊಂಡವನು
ತಿರ್ಮಲನ – ತಿರುಮಲೇಶನ
ತುತಿಪನ್ನ – ಹೊಗಳಲ್ಪಟ್ಟವನ
ತುತಿಸಿ – ಸ್ತುತಿ ಮಾಡಿ
ತೆತ್ತಿಸ ಕೋಟಿ – ಮುವ್ವತ್ತ ಮೂರು ಕೋಟಿ
ದಧ್ಯನ್ನ – ಮೊಸರನ್ನ
ಧಮನುನಾ – ನಾನು ನಿನ್ನ ಭಕ್ತ
ನಿಶಿತದಲ್ಲಿ – ರಾತ್ರಿಯಲ್ಲಿ
ನೀರೇರು – ನಾರಿಯರು
ನೊಸಲ ನಯನ – ಹಣೆಗಣ್ಣ–ಶಿವ

ಪಂಕಜನೇತ್ರೆ – ಲಕ್ಷ್ಮಿ
ಪಂಚವದನ – ಶಿವ
ಪನ್ನಗಧರ – ಶಿವ
ಪರಮ – ಕರುಣ
ನಿರ್ಘೃಣ ರಹಿತನಾದ
ಪುರ – ತ್ರಿಪುರ
ಪುರಂದರಾಲಯ ಘಟ್ಟ – ಪುರಂದರ ಗಡ
ಪ್ರಹರ – ಪೆಟ್ಟು
ಪ್ರಾಪ್ತಿ – ಸಿದ್ಧಿ
ಬೆಡಗುಗೊಳಿಸು – ಬೆರಗುಗೊಳಿಸು
ಬೊಮ್ಮ – ಬ್ರಹ್ಮ
ಬೋರೆಮರದ– ಡಿಯಲಿರು ವವಗೆ – ಬದರೀ ವೃಕ್ಷದ ಕೆಳಗೆ ವೇದವ್ಯಾಸರ ಬಳಿ ಕುಳಿತ ಮಧ್ವರು
ಭವ – ಸಂಸಾರ ಬಂಧನ
ಭಾರತಿ – ವಾಯುದೇವರ ಪತ್ನಿ
ಮಂಡೆಬೋಳಾಗಿ– ಸಂನ್ಯಾಸಿ ಆದ
ಮಂತ್ರಕಲಪ – ಮಂತ್ರೋಚ್ಚಾರಣೆ (ವೇದ ಪಠಣ)
ಮಂದ ಮತಿ – ಅಜ್ಞಾನಿ
ಮಂದಾಕಿನೀಧರ – ಭಾಗೀರಥಿಯನ್ನು ಧರಿಸಿದವನು
ಮನ್ಮಥಪಿತ – ಶ್ರೀಹರಿ
ಮಾವಾರಿ – ಸೋದರಮಾವ ನಾದ ಕಂಸನಿಗೆ ಶತ್ರುವಾದ ಶ್ರೀ ಕೃಷ್ಣ
ಮೂಡಲ ದಿಕ್ಕು – ಪೂರ್ವದಿಕ್ಕು
ಮೃಗಲಾಂಛನ – ಏಣಾಂಕ

ರಜತ ಪರ್ವತ	–	ಕೈಲಾಸ
ರಮ್ಯೆಥರಣೀ ದೇವಿ	–	ಶ್ರೀದೇವಿ, ಭೂದೇವಿ
ರವಿಯುಂಗುರ	–	ಉದಯರವಿಯಂತೆ ದುಂಡಗಿರುವ ಉಂಗುರ
ರಾಕೇಂದು	–	ಹುಣ್ಣಿಮೆ ಚಂದ್ರ
ವಾನರರೊಳಗೆ ಅತಿ ಶ್ರೇಷ್ಠ	–	ಹನುಮಂತ
ವಿಡ್ದೂರ	–	ಕಷ್ಟ
ವಿನಶ	–	ನಾಶವಿಲ್ಲದ
ವೇದವತಿ	–	ಪದ್ಮಾವತಿಯಾಗಿ ಶ್ರೀನಿವಾಸನನ್ನು ವರಿಸಿದವಳು
ವ್ಯಾಪುತ	–	ಸರ್ವವ್ಯಾಪ್ತ
ಶಿಲೆಯ ನಾರಿಯ ಮಾಡಿದಾತ	–	ಅಹಲ್ಯೆಯ ಉದ್ಧಾರ ಮಾಡಿದ ಶ್ರೀರಾಮ
ಶ್ರೀಧರಾ ದುರ್ಗ	–	ಶ್ರೀ ಭೂದುರ್ಗಾ ರೂಪಳಾದ
ಸಂಚಿತ	–	ಈ ಜನ್ಮದಲ್ಲಿ ಮಾಡಿದ ಕರ್ಮಗಳು
ಸಂಸ್ಕೃತಿಯ ಗರ್ತ	–	ಸಂಸಾರದ ಸುಳಿ
ಸಟೆ	–	ಸುಳ್ಳು
ಸತ್ಯವತಿ ವರಸೂನು	–	ಸತ್ಯವತಿಯ ವರಪುತ್ರ
ಸದನ	–	ಮನೆ
ಸದಾಚಾರಸ್ಮೃತಿ	–	ಮಧ್ವಾಚಾರ್ಯರಿಂದ ರಚಿತವಾದ ಒಂದು ಗ್ರಂಥ
ಸಚ್ಚಿದಾನಂದೈಕ್ಯ	–	ಸತ್–ಇರುವಿಕೆ, ಚಿತ್–ಜ್ಞಾನ, ಆನಂದ–ಸಂತಸ– ಈ ಮೂರೂ ಹೊಂದಿದ ಶ್ರೀ ಹರಿ
ಸಾಯಕ	–	ಬಾಣ
ಸರ್ವೋತ್ತುಂಗ	–	ಇಂದ್ರಾದಿ ದೇವತರಗಳಿಗಿಂತ ಶ್ರೇಷ್ಠನು
ಸರ್ಭರ	–	ಸರ್ವರ

ಅನುಬಂಧ-೧ (ಆ)

ಕಠಿಣ ಶಬ್ದಗಳ ಅರ್ಥ

(ಸಂಖ್ಯೆಗಳು ಉಗಾಭೋಗದ ಕ್ರಮಸಂಖ್ಯೆಯನ್ನು ತಿಳಿಸುತ್ತದೆ)

ಅ

ಅಂಘ್ರಿ = ಪಾದ ೧
ಅಟವಿ = ಅಡವಿ ೨೦
ಅದ್ರಿ = ಗೋವರ್ಧನಗಿರಿ ೫೨
ಅನಲದೇವ = ಅಗ್ನಿ ೨
ಅನ್ನಂತ = ಅನಂತ ೪
ಅನ್ಯದೇವತೆ = ಕ್ಷುದ್ರದೇವತೆ ೫
ಅಪಹಾಸ = ತಿರಸ್ಕಾರದ ಹಾಸ್ಯ ೧೨
ಅಬ್ಜನಾಭ = ವಿಷ್ಣು ೧೮

ಆ

ಆಪತ್ತು = ಅಪಾಯ ೧೫
ಆರ್ತಿ = ದುಃಖ ೭

ಉ

ಉಪದ್ರ = ತೊಂದರೆ ೧೫
ಉರಗ = ಹಾವು ೪೫

ಊ

ಊಚನೀಚ = ಮೇಲುಕೀಳು ೫೬
ಊರ್ಬಿ = ಉರ್ವಿ, ಜಗತ್ತು ೧೮
ಊಳಿಗ = ಜೀತಸೇವೆ ೨೧

ಒ

ಒಂದೆಂಟು
ಬಾಗಿಲು = ನವದ್ವಾರಗಳು
ಒಮ್ಮಿ = ಒಮ್ಮೆ=ಒಂದುಸಲ ೭೭

ಕ

ಕಂಟಕ = ಮುಳ್ಳು ೧೩
ಕಂದರ್ಪ = ಮನ್ಮಥ ೧೫
ಕಪಟ = ಮೋಸ ೧೨
ಕರ = ಹಸ್ತ ೧೦
ಕಳತ್ರ = ಹೆಂಡತಿ ೭
ಕಾನನ = ಕಾಡು ೨೮
ಕಾಲನಿಯಾಮಕ=ವಿಷ್ಣು ಮತ್ತು ಲಕ್ಷ್ಮಿ ೨೨
ಕಾಸ = ತಾಮ್ರದ ಒಂದು ಸಣ್ಣನಾಣ್ಯ ೬
ಕಾಸಿ = ಕಸೆ ೫೫
ಕುಂಟಣಗಿತ್ತಿ = (ಕುಂಟಲಗಿತ್ತಿ) ೨೩ ತಲೆಹಿಡುಕ ವೃತ್ತಿಯವಳು
ಕುಂಭಿಣಿ = ಭೂಮಿ ೪೭
ಕುಚೇಲಪಾಲ = ಶ್ರೀ ಕೃಷ್ಣ ೫೬

ಕುಟ್ಟು = ನಾಶಮಾಡು ೨೩
ಕುಪಿತ = ಕೋಪಗೊಂಡವನು
ಕುಬುಜಿಯ
ತಿದ್ದಿದ = ಶ್ರೀ ಕೃಷ್ಣ ೬
ಕುಲಿಶ = ವಜ್ರಾಯುಧ ೨೪
ಕೈವಲ್ಯ = ಮೋಕ್ಷ ೧೩
ಕೋಣ = ದಡ್ಡ
ಕೋವಿದರಾಯ = ಜ್ಞಾನಿಗಳೊಡೆಯ
ಕ್ಷಿತಿಸುರ = ಬ್ರಾಹ್ಮಣ
ಕ್ಷೀರವಾರಿಧಿ = ಹಾಲಿನ ಸಮುದ್ರ

ಖ

ಖದ್ಯೋತ = ಮಿಂಚುಹುಳ ೪೯
ಖರ್ವ = ೧೩ನೇ ಸ್ಥಾನದ ಸಂಖ್ಯೆಗೆ
ಹೆಸರು = ೧ ಲಕ್ಷಕೋಟಿ ೧೦,೦೦,೦೦,೦೦,೦೦,೦೦೦

ಗ

ಗನ್ನ = ಘನ್ನ = ಘನ ೫
ಗನ್ನಘಾತಕ = ಘೋರಪಾಪ ೫
ಗಿದ್ದನ = ಗಿದ್ನ = ಭತ್ತ ಅಳೆಯುವ ಮಾನಗಳಲಿ ಒಂದು ಸೊಲಿಗೆಯು ೧/೪ ಭಾಗ
ಗುರುನಂದನ = ಅಶ್ವತ್ಥಾಮ ೪೮
ಗೋಘೃತ = ಹಸುವಿನ ತುಪ್ಪ ೪೮
ಗೋಮಯ = ಸೆಗಣಿ ೫೧

ಘ

ಘನ್ನತೆ = ಘನತೆ ೪

ಚ

ಚಾಲ್ವರಿದು = ನಂಬಿ ಶ್ರದ್ಧೆಯಿಡು ೫೭
ಚಿಣ್ಣ = ಚಿಕ್ಕವನು ೧
ಚಿತ್ತಜನಯ್ಯ = ವಿಷ್ಣು ೧

ಜ

ಜಲಧಿ = ಸಾಗರ ೨೪
ಜಗಜಟ್ಟಿ
ದಾಸರು = ಪುರಂದರದಾಸರು ೧೯
ಜಟ್ಟಿಗ = ಕುಸ್ತಿಯಾಡುವವನು ೨೩
ಜಾಲಗಾರ = ಬೆಸ್ತ
ಜಾಲಿಸು = ಶೋಧಿಸು
ಜಾಳಿಗ = ಬೆಸ್ತ
ಜೀಯ = ಒಡೆಯ ೨೫
ಜೀವೇಶ = ವಾಯುದೇವರು ೩೪

ತ

ತಮಸು = ಅಜ್ಞಾನ ೨೮
ತಾಮಸ = ಕತ್ತಲೆ ೬೧
ತ್ರಿವಿಧರು = ಸಾತ್ತ್ವಿಕ, ರಾಜಸ, ತಾಮಸ ೪೩

ದ

ದಾಹಕ = ದಹಿಸುವ ಶಕ್ತಿಯುಳ್ಳವನು ೨

ದಿವಾ = ಹಗಲು ೧೫
ದುರಿತ = ಪಾಪ ೨೪
ದುರ್ಯೋನಿ = ಹೀನಜನ್ಮ ೩೭
ದ್ವಂದ್ವ = ಎರಡು ೧೦

ಧ

ಧಾರುಣಿ = ಭೂಮಿ ೩೩

ನ

ನಿಚ್ಚಟ = ಪರಿಶುದ್ಧ ೨೦
ನಿಟಿಲ = ಹಣೆ ೨೭
ನಿಬ್ಬಡಿ = ನಿರ್ಭಿಡೆ ೧೮
ನಿರಯಣ = ನಿರ್ಯಾಣ ೫೨
ನಿರೋಗ = ಆರೋಗ್ಯ ೨೨
ನಿರ್ವಚನ = ೩೫
ನಿರ್ಬುದ = ೧೨ನೇ ಸ್ಥಾನದ ಸಂಖ್ಯೆಯಾದ

೧೧,೦೦೦,೦೦,೦೦,೦೦೦

ಪ

ಪಂಚಾಸ್ಯ = ಐದು ಮುಖ ೪೩
ಪಡಿದೊತ್ತು = ಸೇವಕ ೪೫
ಪತಿತ = ಪಾಪಿ, ಬಿದ್ದವನು ೪೨
ಪತಿತಪಾವನ = ಪಾಪಿಗಳ ಉದ್ಧಾರಿ ೪೨
ಪದ್ಮ = ೧೫ನೇ ಸ್ಥಾನದ ಸಂಖ್ಯೆಗೆ ಹೆಸರು

೧೦೦೦೦,೦೦೦,೦೦,೦೦,೦೦೦

ಪನ್ನಗಾರಿ = ಗರುಡ ೫
ಪರಮೇಷ್ಠಿ = ಬ್ರಹ್ಮ ೪೦
ಪಾವಕ = ಕಾಳ್ಗಿಚ್ಚು ೬೧
ಪ್ರಣಾಮ = ನಮಸ್ಕಾರ ೧೩
ಪಾಲಸಾಗರಶಾಯಿ = ವಿಷ್ಣು ೨೧
ಪ್ರಾಜ್ಞ = ಚೆನ್ನಾಗಿ ತಿಳಿದವನು ೩೫
ಪೊಡವಿ = ಭೂಮಿ ೧

ಫ

ಫಣಿಶಾಯಿ = ಆದಿಶೇಷ ೨

ಬ

ಬಕ್ಕದಾಸ = ಬರಿಯದಾಸ, ಬಡಪಾಯಿ ೫೮
ಬಧಿರ = ಕಿವುಡ ೩೩
ಬರಲೀಸನು = ಬರಗೊಡುವುದಿಲ್ಲ ೧೫
ಬ್ರಹ್ಮಭೋಜನ= ಬ್ರಾಹ್ಮಣರಿಗೆ ಮಾಡಿಸುವ ಭೋಜನ ೩೪
ಬ್ರಹ್ಮಹತ್ಯ = ಬ್ರಾಹ್ಮಣರನ್ನು ಕೊಂದರೆ ಬರುವ ಪಾಪ ೩೪
ಬಾಕುಳಿಗ = ಅತ್ಯಾಸೆಯುಳ್ಳವ ೭
ಬಾರಾಸನ = ಹೊಡೆಯುವ ಭಂಗಿ ೧೫
ಬಾಹದಲ್ಲ = ಬರುವುದಿಲ್ಲ ೧೯
ಬಿಂಬ = ಆಯಾ ಜೀವಾಂತರ್ಗತ ಪರಮಾತ್ಮ ೪೭
೧೬ನೇ ಸ್ಥಾನದ ಸಂಖ್ಯೆಗೆ ಹೆಸರು

೧೦೦೦೦೦೦೦೦೦೦೦೦೦೦೦

ಮಾರುತಿಮತ = ದ್ವೈತ ಸಿದ್ಧಾಂತ ೩೬
ಮಾರ್ಕ = ? ೬೧
ಮಿಥ್ಯಾಮತ = ಅದ್ವೈತ ವೇದಾಂತ ೮
ಮೀಸಿ = ಮೀಸೆ ೫೫
ಮುಷ್ಟಿ = ಮುಚ್ಚಿದ ಅಂಗೈ ೨೩
ಮೃತ್ಯುಮಾರಿ = ಯಮ ಮತ್ತು ಕ್ಷುದ್ರ ದೇವತೆ ೧೩
ಮೆಟ್ಟಿಕೆ = ಮೆಟ್ಟಿಲು ೧೯
ಮೋಟಿ = ದೋಟಿ ೨೬

ರ

ರಧಿಸುವ = ಧ್ವನಿಸುವ ೪೬
ರನ್ನದಂದಣ = ರತ್ನದ ತೇರು ೫

ಲ

ಲಬ್ಧವಾಗು = ದೊರಕಲಿ ೧೮

ವ

ವಟಪತ್ರಶಾಯಿ =ವಿಷ್ಣು ೨೦
ವನಧಿ = ಸಮುದ್ರ ೭
ವಸನ = ಬಟ್ಟೆ ೭
ವಾಚಾಳ = ಮಾತುಗಾರ ೫೬
ವಾತ = ವಾಯುದೇವರು ೫೬
ವಿಬುಧೇಶ = ದೇವತೆಗಳ ಒಡೆಯ ೬
ವೀಸ = ೧ ಹಾಗ (೧ ಗುಂಜಿತೂಕ) ೧ ನಾಣ್ಯ=೪ ಕಾಣಿ (೧ ಚಿಕ್ಕನಾಣ್ಯ) ೫೬

ಶ

ಶಬರಿಗೊಲಿದವ = ಶ್ರೀ ರಾಮ ೬
ಶೈಲ = ಬೆಟ್ಟ ೨೪
ಶ್ವಾನ = ನಾಯಿ ೩೭
ಶ್ರೀ ಕಳತ್ರ = ಸಿರಿಸತಿ=ಲಕ್ಷ್ಮಿ ೭
ಶ್ರೀ ಮನೋಹರ = ವಿಷ್ಣು ೬೧

ಷ

ಷಡುರಸಾಯನ = ಮಧುರ ಆಮ್ಲ ತಿಕ್ತ, ಕಟು ಕಷಾಯ ಲವಣ ರಸಗಳಿಂದ ಕೂಡಿದ್ದು ೫೯

ಸ

ಸಲೀಜ = ಭೀಷ್ಮ ೬೨
ಸುಕೃತಕ್ಷೀಣ = ಪುಣ್ಯಹೀನ ೬೬
ಸೂಕರ = ಹಂದಿ ೩೭
ಸೊಲ್ಲು = ಮೊರೆ ೩೩

ಹ

ಹವಣ = ರೀತಿ ೪೮
ಹಲಗೆ = ಗುರಾಣಿ ೧೫
ಹಾಗ = ಹಣವೆಂಬ ನಾಣ್ಯದ ೧/೪ ಭಾಗ ೬೭
ಹಾಟಕಾಂಬರ= ವಿಷ್ಣು ೨೬
ಹಿಂಗಳೆ = ನಾಶವಾಗು ೪೫

ಅನುಬಂಧ–೨ (ಅ)

ಟಿಪ್ಪಣಿಗಳು

ಕೀ. ೩೧೩

ಜಯರಾಯರ ನೋಡಿರೋ ಸಜ್ಜನರೆಲ್ಲ : ಜಯರಾಯರು ಎಂದರೆ ಶ್ರೀ ಮಧ್ವಾಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನ ಬರೆದು ಟೀಕಾಚಾರ್ಯರೆಂದೇ ಪ್ರಸಿದ್ಧರಾದವರು (ಕಾಲ ೧೧೫೨). ಶ್ರೀ ಮಧ್ವಾಚಾರ್ಯರಲ್ಲಿ ಹಿಂದಿನ ಜನ್ಮದಲ್ಲಿ ಶ್ರೀ ಜಯತೀರ್ಥರು ಎತ್ತಾಗಿ ಅವರ ಬಳಿಯಿದ್ದು ಶಾಸ್ತ್ರ ಪ್ರವಚನಾದಿಗಳ ಶ್ರವಣ ಮಾಡಿ ಸುಸಂಸ್ಕೃತರಾಗಿ ಪುನಃ ಜನ್ಮತಳೆದು ಶ್ರೀ ಮಧ್ವಾಚಾರ್ಯರ ಗ್ರಂಥಗಳಲ್ಲಿ ಅಡಗಿದ್ದ ನಿಗೂಢ ತತ್ತ್ವ ಪ್ರಮೇಯಗಳನ್ನು ತಮ್ಮ ಅಮೋಘ ಟೀಕೆಗಳಿಂದ ವಿಸ್ತರಿಸಿದರು ಎಂದು ಪ್ರತೀತಿ. ವ್ಯಾಸರಾಯರ ಮಠದ ಸ್ಥಾಪಕರಾದ ಶ್ರೀ ವಿದ್ಯಾಧಿರಾಜರ ಗುರುಗಳು (೧೧೯೦)

ಅಕ್ಷೋಭ್ಯತೀರ್ಥರ ಕರದಿಂದ ಜನಿಸಿ ಮೋಕ್ಷಕೆ ಜಯಪತ್ರಿಕೆ ಕೊಡಿಸಿ : ಶ್ರೀ ಜಯತೀರ್ಥರಿಗೆ ಆಶ್ರಯ ನೀಡಿದವರು ಶ್ರೀ ಅಕ್ಷೋಭ್ಯತೀರ್ಥ ಶ್ರೀಪಾದಂಗಳವರು (ಕ್ರಿ. ಶ. ೧೩೫೦–೧೩೬೫). ಮಳಖೇಡದಲ್ಲಿ ವೃಂದಾವನಸ್ಥರಾದರು. ಶ್ರೀಮದಾನಂದತೀರ್ಥರ ಶಿಷ್ಯರಲ್ಲಿ ಒಬ್ಬರು. ಇವರ ಶಿಷ್ಯರೇ ಜಯತೀರ್ಥರು. ಇವರು ಜಯತೀರ್ಥರನ್ನು ಕುರಿತು ತಮ್ಮ ಶಿಷ್ಯರಿಗೆ ಹೇಳಿದ ಮಾತಿದು " ಇವರು ಸಾಮಾನ್ಯದವರಲ್ಲ, ನಮ್ಮ ಗುರುಗಳಾದ ಶ್ರೀ ಮಧ್ವಮುನಿಗಳ ಪರಮಾಪ್ತ ಜೀವರು. ಇವರ ಉಪದೇಶವೆಂದರೆ ಮಧ್ವರ ಉಪದೇಶವಿದ್ದಂತೆಯೇ. ಇವರ ಅಪ್ಪಣೆಯಂತೆ ನಡೆದರೆ ಮುಕ್ತಿ ನಿಮಗೆ ಕರತಲಾಮಲಕ ಎಂದರು. ಈ ಮಾತನ್ನೇ ಇಲ್ಲಿ ಮೋಕ್ಷಕೆ ಜಯಪತ್ರಿಕೆ ಕೊಡಿಸಿ" ಎಂದು ತಿಳಿಸಿದ್ದಾರೆ.

ಕೀ. ೩೧೫

ಸಾರಿ ಭಜಿಸಿರೋ ಟೀಕಾರಾಯರಂಘ್ರಿಯಾ : (ವಿವರಗಳಿಗೆ ಜಯರಾಯರ ನೋಡಿರೊ . . . ಕೀರ್ತನೆ ಗಮನಿಸಿ) ಶ್ರೀ ಮಧ್ವರ ಗ್ರಂಥಗಳಿಗೆ ಟೀಕೆ ಬರೆದಿದ್ದರಿಂದ ಇವರನ್ನು ಶ್ರೀ ವಿಜಯದಾಸರು ಭಾಷ್ಯ ತತ್ವವ ವಿಶೇಷಮಾಳ್ಪರ ಎಂದಿದ್ದಾರೆ.

ಮೋಕ್ಷದಾತರ ಅಕ್ಷೋಭ್ಯತೀರ್ಥರ : ಎಂದರೆ ಅಕ್ಷೋಭ್ಯತೀರ್ಥರಿಗೆ ಹೇಳಿದರೆ ಮೋಕ್ಷ ಪಡೆಯಲು ಬೇಕಾದ ಸಕಲಸಾಧನ ಸಂಪತ್ತಿನಲ್ಲಿ ಒದಗಿಸುತ್ತಾರೆ ಎಂದರ್ಥ. ಹಾಗಲ್ಲದೆ ಶ್ರೀಹರಿಯಂತೆ, ಆತನ ಅನುಜ್ಞೆಯಂತೆ ಸುಜೀವರನ್ನು ತಾವೇ ಮುಕ್ತರಾಗಿಸುತ್ತಾರೆ ಎಂದರ್ಥವಲ್ಲ.

ಕೀ. ೩೧೬

ವ್ಯಾಸರಾಯರ ಸ್ಮರಿಸಿರೊ : ವ್ಯಾಸರಾಯರು (ಕ್ರಿ. ಶ. ೧೪೭೬-೧೫೩೯) ಶ್ರೀ ವ್ಯಾಸರಾಜರು ಅಬ್ಬೂರಿನ ಶ್ರೀ ಬ್ರಹ್ಮಣ್ಯತೀರ್ಥರಿಂದ ಆಶ್ರಮ ಸ್ವೀಕರಿಸಿದರು. ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿದ್ದವರು, ರಾಜಗುರುಗಳಾದವರು. ಕನಕ-ಪುರುಂದರರು ಇವರ ಶಿಷ್ಯರು. ಪೂರ್ವಾಶ್ರಮದ ಹೆಸರು ಯತಿರಾಜ. ೭೩೨ ಮುಖ್ಯಪ್ರಾಣರ ಪ್ರತಿಷ್ಠಾಪನೆ ಮಾಡಿದ್ದಾರೆ. ಶ್ರೀ ಕೃಷ್ಣದೇವರಾಯರಿಂದ ರತ್ನಾಭಿಷೇಕ ಹೊಂದಿದವರು. ವ್ಯಾಸ-ದಾಸ ಕೂಟಗಳ ಮುಖ್ಯಸ್ಥರಾದವರು. ತರ್ಕತಾಂಡವ, ನ್ಯಾಯಾಮೃತ, ಚಂದ್ರಿಕಾ ಮುಂತಾದ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀ ಕೃಷ್ಣ ಅಂಕಿತದಿಂದ ಕೀರ್ತನೆಗಳನ್ನು ರಚಿಸಿದ್ದಾರೆ. ೬೨ ವರುಷ ತುಂಬು ಜೀವನ ನಡೆಸಿದರು.

ಕೀ. ೩೧೮

ವ್ಯಾಸಾಬದರಿನಿವಾಸ . . . . : ಶ್ರೀ ವಿಜಯದಾಸರು ವ್ಯಾಸಕಾಶಿಗೆ ಬಂದಾಗ ಅಲ್ಲಿರುವ ವೇದವ್ಯಾಸಾಶ್ರಮದಲ್ಲಿ ವ್ಯಾಸರನ್ನು ದರ್ಶಿಸಿದಾಗ ಮನದುಂಬಿ ಹಾಡಿದ ಕೀರ್ತನೆಯಿದು.

ವ್ಯಾಸಕಾಶಿ : ಹಿಂದಿನ ಕಾಶೀ ಮಹಾರಾಜರುಗಳು ವೇದವ್ಯಾಸ ದರ್ಶನಕ್ಕೆ (ಹನುಮಾನ್ ಘಾಟಿನ ಬಳಿಯಿರುವ ಬಡಾ ವೇದವ್ಯಾಸ್ ಎಂದು ಈಗ ಕರೆಯುವ ಜಾಗದಲ್ಲಿರುವ ದೇವಾಲಯಕ್ಕೆ) ಪ್ರತಿ ನಿತ್ಯ ಹೋಗುತ್ತಿದ್ದರು. ಹಾಗೆ ಹೋಗಲಾದ ಸಂದರ್ಭದಲ್ಲಿ ವ್ಯಾಸದರ್ಶನಕ್ಕೆ ತಮ್ಮ ಅರಮನೆಯ ಪಕ್ಕದಲ್ಲೇ ಲಿಂಗಾಕಾರವಾದ ವೇದವ್ಯಾಸ ದೇವರನ್ನು ಪ್ರತಿಷ್ಠಾಪನೆ ಮಾಡಿದರಂತೆ. ಇದನ್ನೇ ಈಗ ವ್ಯಾಸ ಕಾಶಿ ಎಂದು ತೋರಿಸುತ್ತಾರೆ.

ಕೀ. ೩೧೯

ಗುರು ವಾದಿರಾಜ ಯತಿಯಾ ನೆನೆಸುವುದು : ಶ್ರೀ ವಾದಿರಾಜರು (ಕ್ರಿ. ಶ. ೧೪೮೦ - ೧೬೦೦) ಮಾಧ್ವಮಠಗಳಲ್ಲಿ ಬಹು ಮುಖ್ಯವ್ಯಕ್ತಿತ್ವ ವಾದಿರಾಜರದು. ಉಡುಪಿಯ ಅಷ್ಟಮಠಗಳಿಗೆ ನಿಶ್ಚಿತ ರೂಪ ಕೊಟ್ಟವರು. ಹೂವಿನ ಕೆರೆ ಜನ್ಮಸ್ಥಳ. ರಾಮಾಚಾರ್ಯ-ಗೌರಿ ದಂಪತಿಗಳ ಪುತ್ರ. ಪೂರ್ವಾಶ್ರಮದ ಹೆಸರು ವರಾಹಾಚಾರ್ಯ. ವಾಗೀಶತೀರ್ಥರಿಂದ ಸನ್ಯಾಸಾಶ್ರಮ ಸ್ವೀಕರಿಸಿದವರು. ವಾದಿರಾಜರು ೧೨೦ ವರ್ಷ ಬಾಳಿದರು. ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದರು. ಕನ್ನಡದಲ್ಲಿ ನೂರಾರು ಕೀರ್ತನೆಗಳನ್ನು ಸಂಸ್ಕೃತದಲ್ಲಿ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು ಬರೆದಿದ್ದಾರೆ. ಯುಕ್ತಿ ಮಲ್ಲಿಕಾ ಪ್ರಮುಖ ಕೃತಿ.

ಕೀ. ೩೨೩

ದುರಿತ ಜೀಮೂತರ್ವತ ಪೊರೆಯಯ್ಯ : ಶ್ರೀ ರಾಘವೇಂದ್ರತೀರ್ಥರು (ಕ್ರಿ.ಶ. ೧೬೨೩ - ೧೬೭೧) ಕಲಿಯುಗ ಕಾಮಧೇನು ಕಲ್ಪವೃಕ್ಷವೆನಿಸಿದ ಗುರುಸಾರ್ವಭೌಮರು ಶ್ರೀ ರಾಘವೇಂದ್ರತೀರ್ಥರು. ಎಲ್ಲ ಕುಲ ಕೋಮುಗಳ ಜನರ ಪ್ರೀತ್ಯಾದರಗಳಿಗೆ ಪಾತ್ರರಾದವರು. ಪೂರ್ವಾಶ್ರಮದಲ್ಲಿ ವೀಣೆ ವೆಂಕಣ್ಣಭಟ್ಟರೆನಿಸಿದ ಇವರು ಅದ್ವಿತೀಯ ವಿದ್ವಾಂಸರು. ಪರಿಮಳ, ತಂತ್ರ ದೀಪಿಕಾ, ಗೀತಾ ನಿವೃತ್ತಿ, ಪ್ರಾತಃ ಸಂಕಲ್ಪ ಗದ್ಯ ಇತ್ಯಾದಿ ಅನೇಕ ಕೃತಿಗಳನ್ನು ರಚಿಸಿದ್ದಾರೆ. ನಾಡಿನ ಅನೇಕ ಕಡೆ ಇವರ ಮೃತ್ತಿಕಾ ಬೃಂದಾವನಗಳಿವೆ. ಇವರನ್ನು ಕುರಿತು ಅಪಾರ ಗ್ರಂಥಗಳು ಕೀರ್ತನೆಗಳು ಪ್ರಕಟವಾಗಿವೆ.

ಕೀ. ೩೨೪

ನೋಡಿದೆ ಗುರುಗಳ ನೋಡಿದೆ

ಕ್ಷಿತಿಯೊಳಗೆ ಮಂಚಾಲೆ ಗ್ರಾಮಕೆ : ಮಂಚಾಲಮ್ಮ ಎಂಬ ಗ್ರಾಮದೇವತೆಯ ಅಧಿಷ್ಠಾನವಾದುದರಿಂದ ಈ ಗ್ರಾಮಕ್ಕೆ ಮಂಚಾಲೆ ಎಂದು ಹೆಸರು ಬಂದಿದೆ. ಶ್ರೀ ರಾಘವೇಂದ್ರ ಸ್ವಾಮಿಗಳು ವೆಂಕಣ್ಣನೆಂಬ ಬಡ ಬ್ರಾಹ್ಮಣನಿಗೆ ತೋರಿದ ಅನುಗ್ರಹದಿಂದ ಆತನು ಕಾಲಕ್ರಮದಲ್ಲಿ ಆದವಾನಿಯ ದಿವಾನನಾದಾಗ ಅವನಿಂದ ಶ್ರೀ ರಾಘವೇಂದ್ರ ಮಹಿಮೆ ಕೇಳಿದ ನವಾಬನು ಶ್ರೀಗಳವರನ್ನು ಪ್ರತ್ಯಕ್ಷ ಕಂಡು ಅವರು ಅಪೇಕ್ಷಿಸಿದ ಮಂಚಾಲೆ ಗ್ರಾಮವನ್ನು ದಾನವಾಗಿತ್ತನು. ದುರ್ಗಾದೇವಿಯೇ ಮಂಚಾಲೆಯ ಕ್ಷೇತ್ರ ದೇವಿಯಾಗಿ ಮಂಚಾಲಮ್ಮ ಆಗಿದ್ದಾಳೆಂದು ಪ್ರತೀತಿ. ಹಿಂದೆ ಶ್ರೀ ಪ್ರಹ್ಲಾದ ರಾಜರಾಗಿ ಶ್ರೀಗಳೇ ಯಾಗ ನಡೆಸಿದ ಯಾಗಭೂಮಿ ಮಂಚಾಲೆ ಎನ್ನುತ್ತಾರೆ.

ಕೀ. ೩೩೦

ರಾಘವೇಂದ್ರಂ ಭಜೇಹಂ : ಈ ಕೀರ್ತನೆಯನ್ನು ದೊರಕಿಸಿಕೊಟ್ಟವರು ಉಡುಪಿಯ ಸಂಗೀತವಿಶಾರದ ಬಿ. ಕೃಷ್ಣಮೂರ್ತಿ ಉಪಾಧ್ಯ ಅವರು. ತಮ್ಮ ಗುರುಗಳಾದ ಹಿಂದೂಪುರದ ಶ್ರೀ ರಾಘವೇಂದ್ರ ಮಠದ ಅರ್ಚಕರಾದ ಶ್ರೀನಿವಾಸಾಚಾರ್ ಅವರಿಗೆ ವಿಜಯದಾಸರು ರಚಿಸಿದ ನಾಲ್ಕು ಕೀರ್ತನೆಗಳು (ಸಂಸ್ಕೃತ ರಚನೆಗಳು) ತಿಳಿದಿತ್ತು. ಆ ಪೈಕಿ ಈ ಒಂದನ್ನು ನಾನು ಕಲಿತೆ ಎಂದು ತಿಳಿಸಿದರು. ಈಗ ಅಚ್ಚಾಗಿರುವ ಯಾವ ಕೀರ್ತನ ಸಂಗ್ರಹದಲ್ಲೂ ಈ ಕೀರ್ತನೆ ನನಗೆ ಕಂಡು ಬಂದಿಲ್ಲ.

ಕೀ. ೩೩೧

ಮುನಿಯ ನೋಡಿರೊ ವಂದನೆಯ ಮಾಡಿರೊ : ಶ್ರೀ ಸತ್ಯಾಭಿನವತೀರ್ಥರು (ಕ್ರಿ. ಶ. ೧೬೭೩-೧೭೦೬) ಶ್ರೀ ಸತ್ಯಾಭಿನವತೀರ್ಥರ ಪೂರ್ವಾಶ್ರಮದ ಹೆಸರು ಕೇಶವಾಚಾರ್ಯ.

ಸತ್ಯನಿಧಿತೀರ್ಥರು ವೃಂದಾವನಸ್ಥರಾರುವ ಮುಂಚೆ ಕೇಶವಾಚಾರ್ಯರಿಗೆ ಆಶ್ರಮ ಕೊಟ್ಟು ಸತ್ಯಾಭಿನವತೀರ್ಥರೆಂದು ಹೆಸರಿಟ್ಟು ಮತ ಪ್ರಚಾರಕ್ಕಾಗಿ ಪೂರ್ವರಾಜ್ಯಗಳಿಗೆ ಕಳಿಸಿದರು. ಉತ್ತರಾದಿಮಠವನ್ನು ಒಳಗೂ ಹೊರಗೂ ಸಾಕಷ್ಟು ಸುವ್ಯವಸ್ಥೆಗೊಳಿಸಿದರು. ಶ್ರೀ ಸತ್ಯಾಭಿನವತೀರ್ಥರು ೧೭೦೬ರಲ್ಲಿ ಕುಂಭಕೋಣದಿಂದ ೧೦ ಕಿ.ಮೀ. ದೂರದಲ್ಲಿರುವ ನಾಚಾರ ಗುಡಿಯಲ್ಲಿ ವೃಂದಾವನಸ್ಥರಾದರು. ಔರಂಗಜೇಬನಿಂದ ಮಠಕ್ಕೆ ಮರ್ಯಾದೆ ಸಂದಿತ್ತು. ಕೆಳದಿ ಚೆನ್ನಮ್ಮಾಜಿ ಜತೆ ಪತ್ರ ವ್ಯವಹಾರವಿತ್ತು.

ಕೀ. ೩೩೨

ಭಜಿಸಿರೋ ಬಿಡದೆ ವಿರಾಜಮಾನಸರಾಗಿ : ಶ್ರೀ ಸತ್ಯಪೂರ್ಣರು (ಕ್ರಿ.ಶ. ೧೭೦೬ – ೧೭೨೫) ಇವರ ಪೂರ್ವಾಶ್ರಮದ ಹೆಸರು ಕೃಷ್ಣಾಚಾರ್ಯ. ೭೦ ವರ್ಷ ಸತ್ಯಪೂರ್ಣರಾಗಿ ಸಂಸ್ಥಾನ ಆಳಿದರು. ಕಂಚಿಯಲ್ಲಿ ಮಹಾನವಮಿ ಮಂಟಪ ಕಟ್ಟಿಸಿದರು. ವೃದ್ಧಾಪ್ಯದಲ್ಲೂ ಕಾಲ್ನಡಿಗೆಯಿಂದಲೇ ತಿರುಪತಿ ಯಾತ್ರೆ ಮಾಡಿದರು. ಗಾರ್ಲಪಾಡ ರಾಮಾಚಾರ್ಯರಿಗೆ ಸತ್ಯವರ್ಯ ತೀರ್ಥರೆಂದು ಕರೆದು ಶಿಷ್ಯತ್ವ ನೀಡಿದರು. ಆದರೆ ಅಂತ್ಯಕಾಲದಲ್ಲಿ ಅವರು ಹತ್ತಿರದಲ್ಲಿಲ್ಲದ್ದರಿಂದ ಬಾಬಾಚಾರ್ಯ ಎಂಬುವರಿಗೆ ಸತ್ಯ ವಿಜಯತೀರ್ಥರೆಂದು ಕರೆದು ಆಶ್ರಮವಿತ್ತರು. ಅವರ ಅನಂತರ ಸತ್ಯವರ್ಯತೀರ್ಥರಿಗೆ ಆಶ್ರಮ ಕೊಡಲು ವಚನ ಪಡೆದರು.

ಕೀ. ೩೩೩

ನೋಡಿ ನೋಡಿ ಸತ್ಯಪ್ರಿಯರ ನೀವಿಂದು : ಶ್ರೀ ಸತ್ಯಪ್ರಿಯರು (ಕ್ರಿ.ಶ. ೧೭೩೯ – ೧೭೪೪) ಶ್ರೀ ಸತ್ಯವಿಜಯತೀರ್ಥರು ವೃಂದಾವನಸ್ಥರಾದ ಮೇಲೆ ಸತ್ಯಪ್ರಿಯತೀರ್ಥರು ಸಂಸ್ಥಾನವನ್ನು ವಹಿಸಿಕೊಂಡರು. ಇವರ ಕಾಲದಲ್ಲಿ ಮಠ ಸಂಪದ್ಭರಿತವಾಯಿತು. ಬಾಜಿರಾಯ, ಫತೇಸಿಂಗ ಸರದಾರ ಮೊದಲಾದವರು ಗ್ರಾಮಗಳನ್ನು ಉಂಬಳಿ ಬಿಟ್ಟರು. ಕ್ರಿ.ಶ. ೧೭೪೪ರಲ್ಲಿ ವೇದವತೀ ನದೀ ತೀರದ ಮಾನಾ ಮಧುರೆಯಲ್ಲಿ ವೃಂದಾವನಸ್ಥರಾದರು.

ಕೀ. ೩೩೪

ನುತಿಸಿ ಬೇಡುವೆ ಕರವ ಮುಗಿದು : ಶ್ರೀ ಸತ್ಯಬೋಧತೀರ್ಥರು ಉತ್ತರಾಧಿಮಠದ ಪೀಠಾಧಿಪತಿಗಳಲ್ಲಿ ಬಹಳ ಪ್ರಸಿದ್ಧರು. ರಾಮಾಚಾರ್ಯರು ಇವರ ಪೂರ್ವಾಶ್ರಮದ ಹೆಸರು. ಇವರಿಂದ ಉತ್ತರಾದಿ ಮಠಕ್ಕೆ ಶ್ರೀ ಸತ್ಯಬೋಧ ಮಠವೆಂದೇ ಪರ್ಯಾಯ ನಾಮವಾಗಿತ್ತು.

ಸತ್ಯಬೋಧರ ಸಮಕಾಲೀನರಾದ ಕಂಚಿ ಕೃಷ್ಣಾಚಾರ್ಯರು ಶ್ರೀ ಸತ್ಯಬೋಧ ವಿಜಯ ಮತ್ತು ಶ್ರೀ ಗುರುವಂಶಾವಳಿ ಎಂಬ ಎರಡು ಕಾವ್ಯಗಳನ್ನು ರಚಿಸಿದ್ದಾರೆ. ದೈವಜ್ಞ ಭೀಮಾಚಾರ್ಯರು ಶ್ರೀಪೂರ್ಣ ಬೋಧಗುರುವಂಶ, ಕಥಾಕಲ್ಪತರು ಎಂಬ ಎರಡು ಕಾವ್ಯ ರಚಿಸಿದ್ದಾರೆ.

ಕೀ. ೩೩೭

ಕಂಡೆ ಕಂಡೆನೋ ಭೂಮಂಡಲದೊಳು ಮೆರೆವ : ಶ್ರೀ ವಾದೀಂದ್ರತೀರ್ಥರು (ಕ್ರಿ.ಶ. ೧೭೨೮–೧೭೫೦) ಪೂರ್ವಾಶ್ರಮದಲ್ಲಿ ಶ್ರೀನಿವಾಸಾಚಾರ್ಯರೆಂದು ಹೆಸರಾದವರು ಶ್ರೀ ಉಪೇಂದ್ರತೀರ್ಥರಿಂದ ಆಶ್ರಮ ಪಡೆದು ಶ್ರೀ ವಾದೀಂದ್ರತೀರ್ಥರಾದರು. ವ್ಯವಹಾರ ಕುಶಲರಾದ ಇವರು ಮಠದ ದಾನ ದತ್ತಿಗನ್ನು ಮತ್ತಷ್ಟು ಹೆಚ್ಚಿಸಿದರು. ತತ್ತ್ವ ಪ್ರಕಾಶಿಕಾ ಟಿಪ್ಪಣಿ, ಗುರುಗುಣಸ್ತವನ, ಭೂಗೋಳ ವಿವರ ಇತ್ಯಾದಿ ಗ್ರಂಥಗಳನ್ನು ರಚಿಸಿದ್ದಾರೆ. ಮಂತ್ರಾಲಯದಲ್ಲಿ ವೃಂದಾವನಸ್ಥರಾದರು.

ಕೀ. ೩೩೮

ಅಡಿಗಳಿಗೊಂದಿಪೆ ಪುರಂದರ ಗುರುವೆ : ಪುರಂದರ ದಾಸರು (ಕ್ರಿ. ಶ. ೧೪೮೦–೧೫೬೫) ವ್ಯಾಸರಾಯರ ಶಿಷ್ಯರು, ಕನಕ, ವಾದಿರಾಜರ ಸಮಕಾಲೀನರು. ಪೂರ್ವಾಶ್ರಮದಲ್ಲಿ ಆಗರ್ಭ ಶ್ರೀಮಂತರಾಗಿದ್ದು ಮೂಗುತಿ ಪ್ರಸಂಗದಿಂದ ವೈರಾಗ್ಯ ತಾಳಿ ಪುರಂದರದಾಸರಾದರು. ಪುರಂದರದಾಸರಿಗೆ ಮಕ್ಕಳಿದ್ದು ಅವರು ಕೀರ್ತನೆಗಳನ್ನು ರಚಿಸಿದ್ದಾರೆ ಎಂದು ತಿಳಿದು ಬರುತ್ತದೆ. ಕರ್ನಾಟಕ ಸಂಗೀತ ಪಿತಾಮಹ ಎಂಬ ಹೆಸರಿದೆ ಇವರಿಗೆ. ಕರ್ನಾಟಕ ಸಂಗೀತಕ್ಕೆ ಇವರು ನೀಡಿದ ಕೊಡುಗೆ ಅಪಾರ. ದಾಸ ಸಾಹಿತ್ಯದ ಶ್ರೇಷ್ಠರಲ್ಲಿ ಅಗ್ರಗಣ್ಯರಾಗಿದ್ದಾರೆ. ವಿಜಯದಾಸರಿಗೆ ಸ್ವಪ್ನಾಂಕಿತ ನೀಡಿದರು. ಇವರ ಕೀರ್ತನೆಗಳು ಅತ್ಯಂತ ಜನಪ್ರಿಯವಾಗಿವೆ.

ಅಡಿಗಳಿಗೊಂದಿಪೆ ಪುರಂದರ ಗುರುವೆ ಕೀರ್ತನೆಯ ಹಿನ್ನಲೆಯನ್ನು ಹರಿದಾಸ ವಿದ್ವಾಂಸರೊಬ್ಬರು ಹೀಗೆ ಬಣ್ಣಿಸಿದ್ದಾರೆ. " ನವಕೋಟಿ ನಾರಾಯಣನು ಸಕಲವನ್ನು ತ್ಯಾಗಮಾಡಿ ಪುರಂದರ ದಾಸರಾಗಿ ವ್ಯಾಸರಾಯರ ದಿವ್ಯ ಸಾನ್ನಿಧ್ಯದಲ್ಲಿ, ಪುರಂದರವಿಠಲನ ಅಂಕಿತದಲ್ಲಿ ತಮ್ಮ ಗುರುಗಳ ಶಾಸ್ತ್ರ ಪ್ರಮೇಯಗಳನ್ನೆಲ್ಲಾ ಕನ್ನಡದಲ್ಲಿ ಬರೆದು, ವ್ಯಾಸರಾಯರ ಅನುಗ್ರಹಕ್ಕೆ ಪಾತ್ರರಾಗಿದ್ದರು. ಒಂದು ದಿನ ಕೃಷ್ಣದೇವರಾಯನು ವ್ಯಾಸರಾಯರ ಬಳಿಯಿದ್ದ ಪುರಂದರದಾಸರನ್ನು ಕಂಡು, ಅವರಿಗೆ ತಾನು ಏನಾದರೂ ಕಾಣಿಕೆಯನ್ನು ನೀಡಬೇಕೆಂಬ ತನ್ನ ಅಭಿಲಾಷೆಯನ್ನು ವ್ಯಕ್ತಪಡಿಸಿದನು. ಹೀಗೆ ತಾನಾಗಿಯೇ ಕಾಣಿಕೆ ಕೊಡಲು ಇಚ್ಛಿಸಿದ ರಾಜನ ಬೇಡಿಕೆಯನ್ನು ತಾವು ಈಡೇರಿಸಿ ಕೊಡಬೇಕು ಎಂಬ ವ್ಯಾಸರಾಯರ ಸಲಹೆಯಂತೆ ಪುರಂದರದಾಸರು ನದಿಯ ದಡದಲ್ಲಿ ಕುಳಿತು ಧ್ಯಾನಮಾಡಲು ತಮಗೆ ಏಕಾಂತವನ್ನು ಕಲ್ಪಿಸಿಕೊಡುವ ಒಂದು ಸಣ್ಣ ಮಂಟಪವನ್ನು ನಿರ್ಮಿಸಿಕೊಡಲು ಕೇಳುತ್ತಾರೆ.

ಹಾಗೆ ಕೃಷ್ಣದೇವರಾಯನು ನಿರ್ಮಿಸಿ ಕೊಟ್ಟ ಕಂಬಕ್ಕೆ ಒರಗಿಕೊಂಡು ಧ್ಯಾನ ಮಾಡುತ್ತಿದ್ದ ಸ್ಥಳವನ್ನು, ಮತ್ತೆ ಗುಡಿಯ ಹೊರಗೆ ಶ್ರೀ ಪುರಂದರ ದಾಸರ ದೇಹ ಸಂಸ್ಕಾರವಾದ ಸ್ಥಳವನ್ನು ಆನಂದ ದಾಸರಿಗೆ ವಿಜಯದಾಸರು ತೋರಿಸಿ ಆ ಸ್ಥಳದ ಮಹಾತ್ಮೆ

ಕುರಿತ ವಿವರಗಳನ್ನು ಹೇಳಿ, ಭಕ್ತಿ ಭಾವ ಪರವಶರಾಗಿ ಪುರಂದರದಾಸರನ್ನು ಕುರಿತು ಹಾಡಿದ ಕೀರ್ತನೆಯೇ " ಅಡಿಗಳಿಗೊಂದಿಪೆ ಪುರಂದರ ಗುರುವೆ" ಎಂಬ ಕೀರ್ತನೆ ". (ಹರಿದಾಸರತ್ನಂ ಗೋಪಾಲದಾಸರು)

ಕೀ. ೩೪೧

ನಾರದರೆ ಈ ರೂಪದಲಿ ಚಾರುದರುಶನ ತೋರಿದ : ಪುರಂದರದಾಸರನ್ನು ನಾರಾದಾಂಶ ಸಂಭೂತರೆಂದು ತಿಳಿಯುತ್ತಾರೆ.

ಪರಮ ಪುರುಷನು ವಿಪ್ರನಂದದಿ ಕರವ ನೀಡಿ ಯಾಚಿಸೆ : ಈ ಕೀರ್ತನೆಯಲ್ಲಿ ಸೂಚ್ಯವಾಗಿ ಪುರಂದರದಾಸರ ಲೌಕಿಕ ಜೀವನಚರಿತ್ರೆಯನ್ನು ದಾಸರು ಸೂಚಿಸಿದ್ದಾರೆ. ಪ್ರಸಿದ್ಧವಾದ ಮೂಗುತಿ ಪ್ರಸಂಗವನ್ನು ಈ ಮಾತಿನಲ್ಲಿ ದಾಖಲಿಸಿದ್ದಾರೆ.

ಅರಿತು ಮನದೊಳು ಹರಿದು ಭವಗಳ ತರುಣಿ ಸಹಿತಾ ಹೊರಟನೆ : ಮೂಗುತಿ ಪ್ರಸಂಗದಿಂದ ವೈರಾಗ್ಯ ತಾಳಿದ ದಾಸರು ಸಮಸ್ತ ಐಶ್ವರ್ಯವನ್ನು ದಾನ ಮಾಡಿ ಪತ್ನಿಯೊಡನೆ ತೀರ್ಥಯಾತ್ರೆ ಹೊರಟ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ.

ಒಟ್ಟಿನಲ್ಲಿ ಈ ಕೀರ್ತನೆಯಲ್ಲಿ ದಾಸರ ಜೀವನದ ಮುಖ್ಯ ಘಟ್ಟಗಳನ್ನು ಚಿತ್ರಿಸಿರುವುದನ್ನು ಕಾಣಬಹುದು.

ಕೀ. ೩೪೬

ಬೇಸರದೆ ಭಜಿಸಿರೊ ಪುರಂದರ ದಾಸರಾಯರ

ನಿಮ್ಮುದಶೀನ ಮಾಡದೆ : ನಿಮ್ಮನ್ನು ಉದಾಸೀನ ಮಾಡದೆಯೆ ಪ್ರಾಸಭಂಗ, ಯತಿಭಂಗಗಳಾಗದಿರಲು ಪದ್ಯ ರಚನೆಯಲ್ಲಿ ಹ್ರಸ್ವ ರೂಪಗಳನ್ನು ಬಳಸುವುದು ಸಾಮಾನ್ಯ ಉದಶೀನ = ಉದಾಸೀನ.

ಕುಮಾರವ್ಯಾಸ ನಾರಾಯಣ ಎಂಬುದನ್ನು ನಾರಯಣ ಎಂದು ಬಳಸಿರುವುದನ್ನು ಗಮನಿಸಬಹುದು.

ತಿರಿಪಾದ ಕೊರತೆ ಲಕ್ಷವೈದು ಪದವ ಪೇಳುತ್ತ : ಮೂರು ಪಾದ ಕಮ್ಮಿ ೫ ಲಕ್ಷ ಪದ ಪದ್ಯ ಸುಳಾದಿಗಳನ್ನು ರಚಿಸಿದರು ಎಂದರೆ ೪ ಲಕ್ಷ ೨೫ ಸಾವಿರ ರಚಿಸಿದರು. ತಿರಿಪಾದ ಕೊರತೆ = ಮೂರು ಪಾದ ಕೊರತೆ ಎಂದರೆ ೭೫೦೦೦ ಕಮ್ಮಿ. ಪುರಂದರದಾಸರಿಂದ ರಚಿಸಿದ್ದು ೪ ಲಕ್ಷ ೨೫,೦೦೦ ಎಂಬುದನ್ನು ವಿಜಯದಾಸರು ತಮ್ಮ ಸುಳಾದಿಯೊಂದರಲ್ಲಿ ಬೇರೆ ಮಾತುಗಳಲ್ಲಿ ಹೇಳಿದ್ದಾರೆ.

ಸೃಷ್ಟಿಯೊಳಗೆ ಎಲ್ಲ ಗಣಿತ ಮಾಡಲಾಗಿ

ಮೆಟ್ಟಿಕೆ ತ್ರಿಪಾದ ಕಡಿಮೆ ಐದು ಲಕ್ಷ ....

ಕೀ. ೩೪೮

ಶರಣು ಶ್ರೀ ವ್ಯಾಸಮುನಿ ಚರಣಾಬ್ಜ ಭೃಂಗ ಜಯ : ಗುರು ಪುರಂದರರ ಮುಂಚೆ ಅವರ ಗುರು ವ್ಯಾಸರನ್ನು ವಿಜಯದಾಸರು ಇಲ್ಲಿ ನೆನೆದಿದ್ದಾರೆ.

ಚಿನಿವಾರ ವರದಪ್ಪನಾ ಕುಮಾರನಾಗಿ ಜನಿಸಿ : ಶ್ರೀ ವಿಜಯದಾಸರು ಮತ್ತು ಶ್ರೀ ಜಗನ್ನಾಥ ದಾಸರು ಶ್ರೀ ಪುರಂದರ ದಾಸರ ತಂದೆಯವರ ಹೆಸರನ್ನು ವರದಪ್ಪ ಎಂದು ಹೇಳಿರುವುದು ಗಮನಿಸಬೇಕಾದ ವಿಷಯ. ಶ್ರೀ ಗುರು ಪುರಂದರವಿಠಲ ಅಂಕಿತದ ದಾಸರು (ಪುರಂದರದಾಸರ ಮಕ್ಕಳಲ್ಲಿ ಒಬ್ಬರು) ರಚಿಸಿದ ಜೀವನ ಚರಿತ್ರೆಯಲ್ಲೂ ಗರುಡ ಪುರಾಣದಲ್ಲೂ . ಪುರಂದರ ಎಂಬ ಮಾತನ್ನು ಹೇಳಲಾಗಿದೆ. ಪುರಂದರದಾಸರಿಗೆ ಸೀನಪ್ಪ ನಾಯಕನೆಂಬ ಹೆಸರು ಪೂರ್ವಾಶ್ರಮದಲ್ಲಿ ಇತ್ತೆಂದು ಹೇಳುತ್ತಾರೆ. 'ಹರಿಜನಪದ್ಧತಿ' ಗ್ರಂಥದಲ್ಲಿ ಪುರಂದರದಾಸರಿಗೆ ಪುಂಡಲೀಕ ವರದ ಎಂಬ ಹೆಸರಿತ್ತು. ಅಷ್ಟು ದೊಡ್ಡ ಹೆಸರು ಬರು ಬರುತ್ತಾ ವರದ ವರದ ಎಂದು ಜನರ ಬಾಯಲ್ಲಿ ರೂಢಿಯಾಗಿ ವಿಜಯರಾಯರು ಮೊದಲಾದವರು ರೂಢಿನಾಮವನ್ನು ಅನುಸರಿಸಿ ವರದಪ್ಪ ಎಂದು ಹೇಳಿದ್ದಾರೆ ಎಂದು ತಿಳಿಸಿದೆ.

ಪ್ರಾಕೃತದ ಗೀತಕೊಲಿ ಕೊಂಡಾಡಿ : ಕನ್ನಡದ ಭಾಷೆ (ಪ್ರಾಕೃತ) ಯಲ್ಲಿ ಸ್ತುತಿಸಿದರು. ಹರಿದಾಸರೆಲ್ಲ ದೇವಭಾಷೆ ಸಂಸ್ಕೃತದ ಪದಗಳನ್ನು, ಕನ್ನಡದ ಪದಗಳನ್ನು ಬಳಸಿ ಕನ್ನಡವನ್ನೇ ದೇವರನಾಮಗಳಲ್ಲಿ ಬಳಸಿ ಕನ್ನಡದ ಸಿರಿಯನ್ನು ಹೆಚ್ಚಿಸಿದ್ದಾರೆ. ಈ ದೃಷ್ಟಿಯಲ್ಲಿ ಹರಿದಾಸರೂ ಕನ್ನಡ ಚಳಿವಳಿಗಾರರೆಂದೇ ಹೇಳಬಹುದು.

ವರತನಯ ನಾಲ್ವರನು ಪಡೆದು : ೧. ವರದ ಪುರಂದರವಿಠಲಾಂಕಿತ ಚಂದ್ರಾಂಶ ಸಂಭೂತ (ವರದಪ್ಪನೇ ಸೋಮ) ೨. ಗುರು ಪುರಂದರವಿಠಲಾಂಕಿತ ಸೂರ್ಯಾಂಶ ಸಂಭೂತ (ಗುರುರಾಯ ದಿನಕರನು) ೩. ಗುರು ಮಧ್ವಪತಿವಿಠಲಾಂಕಿತ ಭೃಗು ಋಷಿ ಅಂಶ ಸಂಭೂತ (ಗುರು ಮಧ್ವಪತಿಯೇ ಭೃಗು) ೪. ಅಭಿನವ ಪುರಂದರವಿಠಲಾಂಕಿತ ಬೃಹಸ್ಪತಾಚಾರ್ಯರಂಶದಿಂದ (ಅಭಿನವನೆ ಜೀವ) ಆದ ನಾಲ್ವರು ಮಕ್ಕಳು ಪುರಂದರದಾಸರಿಗೆ ಎನ್ನುತ್ತಾರೆ ವಿಜಯದಾಸರು.

ಘೃತದ ಬಿಂದಿಗೆ ತಂದ ಪ್ರಸಂಗ : ಒಮ್ಮೆ ಪುರಂದರದಾಸರು ಉತ್ಥಾನ ದ್ವಾದಶಿ ಭೋಜನಕ್ಕೆ ಹೇಳಿ ಬ್ರಾಹ್ಮಣ ಸುವಾಸಿನಿಯರು ಬಂದ ವೇಳೆಗೆ ಧ್ಯಾನಮಗ್ನರಾಗಿಬಿಟ್ಟಿದ್ದರು. ಆಗ ಶ್ರೀಹರಿ ಲಕ್ಷ್ಮೀ ಸರಸ್ವತ್ಯಾದಿಗಳಿಂದ ಅಡಿಗೆ ಮಾಡಿಸಿ ಬಡಿಸಿದರಂತೆ. ಆ ಸಂದರ್ಭದಲ್ಲಿ

ಶ್ರೀಹರಿ ತಾನೇ ಅಪ್ಪಣ್ಣ ಭಾಗವತ ರೂಪದಿಂದ (ಪುರಂದರದಾಸರ ಹಿರಿಯ ಮಗ ವರದ ಪುರಂದರ ವಿಠಲರನ್ನು 'ಅಪ್ಪಣ್ಣ' ನೆಂದು ಕರೆಯುತ್ತಿದ್ದರು) ಅಡಿಗೆಗೆ ಮತ್ತು ಭೋಜನಕ್ಕೆ ತುಪ್ಪ ತಂದಿಟ್ಟು ದಾಸರ ಮಾನ ಕಾಪಾಡಿದನೆಂದು ಪ್ರತೀತಿ.

ಅತಿಥಿಯ ಓಗರ ಉಂಡ : ಒಮ್ಮೆ ಪುರಂದರ ದಾಸರು ಶ್ರೀ ಪಾದರಾಜರನ್ನೂ, ವ್ಯಾಸರಾಯರನ್ನೂ . ಶ್ರಾದ್ಧದ ದಿನದ ಭಿಕ್ಷೆಗೆ ತಮ್ಮ ಮನೆಗೆ ಆಹ್ವಾನಿಸಿದಾಗ ಶ್ರೀಹರಿ ರುಕ್ಮಿಣಿ ಸತ್ಯಭಾಮಾ ಸಮೇತನಾಗಿ ಪ್ರತ್ಯಕ್ಷನಾಗಿ ಶ್ರೀ ದಾಸರು ಸಂಕಲ್ಪಿಸಿ ನೀಡಿದ ಆಹಾರವನ್ನು ಸ್ವೀಕರಿಸಿದನಂತೆ.

ಸುತನಾಗಿ ನೀರ ನಿಶಿತದಲ್ಲಿ ತಂದ : ದಾಸರು ತಿರುಪತಿಯಲ್ಲಿದ್ದಾಗ ಗುಡಿಯಲ್ಲಿ ಮಲಗುತ್ತಿದ್ದರು. ಒಮ್ಮೆ ನಡುರಾತ್ರಿ ಬಹಳ ನೀರಡಿಕೆಯಾಯಿತು. ಬಳಿಯಿದ್ದ ಮಗನನ್ನು ನೀರು ತರಲು ಕರೆದರು ಎಚ್ಚರವಿಲ್ಲದೆ ಆತನು ಮಲಗಿರಲು ಶ್ರೀಹರಿಯು ಮಗನ ರೂಪದಲ್ಲಿ ಬಂದು ನೀರನ್ನು ದಾಸರಿಗೆ ನೀಡಿದನು.

ಅರ್ಜುನಾಗ್ರಜ ಒಲಿದು ಸಾಧಿಸುವ ಕರುಣದಲಿ ಅಬ್ಜಭವನೊಡನೆ ಗತಿಗೆ : ಭೀಮ (ಶ್ರೀ ವಾಯುದೇವರು) ಶ್ರೀ ದಾಸರಾಯರ ಕರುಣಾ ಕಟಾಕ್ಷಕ್ಕೆ ಒಳಗಾದವರಿಗೆ ತಾವೂ ಅನುಗ್ರಹ ಮಾಡಿ ಶ್ರೀ ಚತುರ್ಮುಖ ಬ್ರಹ್ಮನೊಡನೆ ವಿರಜಾ ನದಿಯ ಮಜ್ಜನಕ್ಕೆ ಕಳಿಸಿ ಉದ್ಧರಿಸುತ್ತಾರೆ. (ಆಕರ : ಹರಿಭಜನ ಮಾಹಿತಿ ಗ್ರಂಥ).

ಕೀ. ೩೮೩

ಗೋಪಾಲವಿಠ್ಠಲ ನಿನ್ನ ಪೂಜೆಯ ಮಾಡುವೆನು : ಇದೊಂದು ಅಂಕಿತ ಪ್ರದಾನ ಕೀರ್ತನೆ. ಶ್ರೀ ವಿಜಯದಾಸರು ಶಿಷ್ಯರಾದ ಗೋಪಾಲದಾಸರಿಗೆ ಅಂಕಿತವನ್ನು ನೀಡುವಾಗ ರಚಿಸಿದ ಅಂಕಿತಪದ ಇದು.

ಸಾಮಾನ್ಯವಾಗಿ ಗುರುಗಳು ಶಿಷ್ಯನ ಯೋಗ್ಯತೆಯನ್ನು ಅರಿತು ಅವನ ಸ್ವರೂಪವನ್ನು ತಿಳಿದು ಅವನಲ್ಲಿರುವ ಬಿಂಬರೂಪಿ ಶ್ರೀಹರಿಯ ರೂಪವನ್ನೇ ಅವನಿಗೆ ಅಂಕಿತವಾಗಿ ಉಪದೇಶಿಸುತ್ತಾರೆ. ಹೀಗೆ ಅಂಕಿತ ಕೊಡುವಾಗ ತಾವು ಶಿಷ್ಯನಿಗೆ ಕೊಡುವ ಅಂಕಿತವನ್ನು ಅಂಕಿತ ಕೀರ್ತನೆಯಲ್ಲಿ ಮೊದಲಿಗೆ ಹಾಕಿ ಅನಂತರ ಕೊನೆಯಲ್ಲಿ ತಮ್ಮ ಅಂಕಿತವನ್ನು ಸೇರಿಸುವುದು ಸಂಪ್ರದಾಯ.

ಎಲ್ಲ ದಾಸರಿಗೂ ಗುರೂಪದೇಶದಿಂದಲೇ ನೇರವಾಗಿ ಅಂಕಿತ ದೊರೆತಿಲ್ಲ. ಕೆಲವು ಹರಿದಾಸರು 'ಸ್ವಪ್ನಾಂಕಿತರೂ' ಹೌದು. ಎಂದರೆ ಸ್ವಪ್ನದಲ್ಲಿ ಗುರುಗಳು ಕಾಣಿಸಿಕೊಂಡು ಅಂಕಿತವನ್ನು ನೀಡಿರುತ್ತಾರೆ. ಉದಾಹರಣೆಗೆ ವಿಜಯದಾಸರಿಗೆ ಪುರಂದರದಾಸರು ಸ್ವಪ್ನದಲ್ಲಿ ಕಾಣಿಸಿಕೊಂಡು 'ವಿಜಯವಿಠಲ'ನೆಂದು ಅಂಕಿತ ಪ್ರದಾನ ಮಾಡಿದ ವಿಷಯ ಎಲ್ಲರಿಗೂ

ತಿಳಿದಿದ್ದೇ ಆಗಿದೆ. ಮತ್ತೆ ಕೆಲವು ಹರಿದಾಸರು (ವ್ಯಾಸರಾಯರು, ವಾದಿರಾಜರು, ಕನಕದಾಸರು) ತಮ್ಮ ಇಷ್ಟ ದೈವದ ಹೆಸರನ್ನೇ ಅಂಕಿತವನ್ನಾಗಿ ಬಳಸಿದ್ದಾರೆ. ವಚನಕಾರರೂ ತಮ್ಮ ಇಷ್ಟ ದೈವವನ್ನು ಅಂಕಿತವನ್ನಾಗಿ ತಮ್ಮ ವಚನಗಳಲ್ಲಿ ಬಳಸುವ ಸಂಪ್ರದಾಯ ಗಮನಿಸುವಂಥದ್ದು.

ಗೋಪಾಲದಾಸರು (ಕ್ರಿ.ಶ. ೧೭೨೨-೧೭೬೨) ಹುಟ್ಟಿದ್ದು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಮೊಸರುಕಲ್ಲಿನಲ್ಲಿ. ಬಾಲ್ಯದ ಹೆಸರು ಭಾಗಣ್ಣ. ತಂದೆ ಮುರಾರಿ. ಹತ್ತಾರು ಕೀರ್ತನೆ, ಸುಳಾದಿಗಳನ್ನು ರಚಿಸಿದ್ದಾರೆ. ಜಗನ್ನಾಥ ದಾಸರಿಗೆ ತಮ್ಮ ಆಯುಷ್ಯದಲ್ಲಿ ೪೦ ವರ್ಷಗಳನ್ನು ನೀಡಿದರೆಂದು ಪ್ರತೀತಿ. ಶ್ರೀ ವಿಜಯದಾಸರ ಅಗ್ರಗಣ್ಯ ಶಿಷ್ಯರಲ್ಲಿ ಒಬ್ಬರು. ಭಕ್ತಿಯಲ್ಲಿ ಭಾಗಣ್ಣ ಎಂದು ಇವರನ್ನು ಗುರುತಿಸುತ್ತಾರೆ.

ಕೀ. ೪೦೪

ನಿನ್ನ ಒಲುಮೆಯಿಂದ ನಿಖಿಳ ಜನರು ಬಂದು : ವಿಜಯದಾಸರಿಗೆ ಶ್ರೀಹರಿಯ ಅನುಗ್ರಹವಾಗುವ ಮುಂಚೆ ಅವರು ಪಟ್ಟ ಕಷ್ಟಗಳ ಹಿನ್ನೆಲೆಯಲ್ಲಿ ಈ ಕೀರ್ತನೆ ರಚಿತವಾಗಿದೆ. ಇದೇ ಬಗೆಯ ಭಾವವನ್ನು ವ್ಯಾಕುಲ ಪರಿಹಾರ ಸುಳಾದಿಯಲ್ಲೂ ಕಾಣಬಹುದು (ವ್ಯಾಕುಲವೇಕೋ ಮನವೆ ಯಾಕೆ ನಿನಗೆ ನಿತ್ಯ . . . .) ಕೂಸೀ ಮಗದಾಸನೆಂದು ಅವಹೇಳನಕ್ಕೆ ಒಳಗಾಗಿ ಬಾಲ್ಯದಲ್ಲಿ ಸಂಜೆತನಕ ಇದ್ದು ಸಣ್ಣ ಸೌಟು ತುಂಬ ಗಂಜಿಗಾಣದೆ ಬಳಲಿದ ಪ್ರಸಂಗವನ್ನು ನೆನಪಿಸಿಕೊಂಡು ಅಂಥವನು ಇಂದು ಶ್ರೀ ಹರಿಯ ದಯೆಯಿಂದ ವ್ಯಂಜನ ನಾನಾ ಸುಭಕ್ಷ್ಯ, ಭೋಜ್ಯಗಳ ಭುಂಜಿಸುವೆನು ಇಂದು ಎಲ್ಲರೂ ನನ್ನನ್ನು ಓಲೈಸುತ್ತಾರೆ ಎಂದು ಶ್ರೀ ಹರಿಯ ಮಹಿಮೆಯನ್ನು ಹೊಗಳಿದ್ದಾರೆ. ದಾಸರ ಬಾಲ್ಯದ ಬಡತನದ ಮೇಲೆ ಬೆಳಕು ಚೆಲ್ಲುವ ಕೀರ್ತನೆ ಇದು.

ಕೀ. ೪೨೨

ಭಕುತಿಯ ಪಾಲಿಸು ಜೀಯ್ಯಾ ಮುಂದೆ :

ತತ್ವಮತದೊಳಗಿರಿಸು : ಶ್ರೀ ಮಧ್ವ ಮತದ ಅನುಯಾಯಿಗಳಲ್ಲಿ ಜನ್ಮಗಳನ್ನು ಕೊಡು.

ಪುಸಿಯುತ್ತರಮತವೆಂಬ ಮಾರ್ಗವ ಮರೆಸು : ಜೀವಜಡದಿ ಜಗತ್ತು ಸುಳ್ಳೆಂಬ ಮಿಥ್ಯಾ ಉತ್ತರದ ಮಾಯಾಪಾದ ಮತದ ದಾರಿಯನ್ನು ತಪ್ಪಿಸು.

ಭವ ಒತ್ತುವ ನಿನ್ನ ನಾಮಾಮೃತ ಸುರಿಸು = ಜನ್ಮಾಂತರಗಳನ್ನು ದೂರ ಮಾಡುವ ನಿನ್ನ ನಾಮಸ್ಮರಣೆ ನೀಡು.

ತ್ರೈಭುನೇಶ : ತ್ರಿಲೋಕಸ್ವಾಮಿ ಭೂಭುವಃ ಸುವಃ ಎಂಬುದು ಮೂರು ಲೋಕಗಳೆಂದು ಪ್ರಸಿದ್ಧ. ಆದರೆ ಸ್ವರ್ಗ, ಮರ್ತ್ಯ, ಪಾತಾಳ ಲೋಕಗಳು ತ್ರಿಲೋಕಗಳು ಎಂಬುದು ರೂಢಿಯಾಗಿದೆ.

ಕೀ. ೪೫೨

ಏಕಾದಶಿ ವ್ರತ ಶೋಧಿಸಿ ಸಾಧಿಸಿ : ದಶಮಿ ದಿನದಂದು ಏಕಭುಕ್ತ ಏಕಾದಶಿಯ ದಿನ ಉಪವಾಸ. ದ್ವಾದಶಿಯ ದಿನ ಪಾರಣೆ ಮಾಡುವ ದಿನತ್ರಯವ್ರತ ಇದು. ಏಕಾದಶಿಯ ದಿನ ಉಪವಾಸ ಇದ್ದಿದ್ದೇ ಆದರೆ ಅಪಾರ ಪುಣ್ಯ ಫಲ ಪ್ರಾಪ್ತಿ ಎಂದು ಅನೇಕ ಹರಿದಾಸರು ಸಾರಿದ್ದಾರೆ. ಏಕಾದಶಿಯಂದು ಉಪವಾಸದಷ್ಟೇ ರಾತ್ರಿಯ ಜಾಗರಣೆಯೂ ಮುಖ್ಯವಾದುದು.

ವಸುಧೆಯೊಳಗೆ ಮಹಾವ್ರತವೆಂದು ತಿಳಿದು : ಏಕಾದಶಿ ವ್ರತದ ಹಿರಿಮೆಯನ್ನು ಈ ಕೀರ್ತನೆಯಲ್ಲಿ ದಾಸರು ಬಣ್ಣಿಸಿದ್ದಾರೆ. ಏಕಾದಶಿ ವ್ರತವನ್ನು ಸಾಧಿಸಬೇಕೆಂದು ಹೇಳುತ್ತಾರೆ. ಅರ್ಚನ ಭಕ್ತಿಯ ಕೀರ್ತನೆ ಇದು. ಇದನ್ನು ಮಹಾವ್ರತವೆಂದು ಕರೆದಿದ್ದಾರೆ. ಏಕೆಂದರೆ ದಶಮಿ, ಏಕಾದಶಿ, ದ್ವಾದಶಿ ಈ ಮೂರು ತಿಥಿಗಳನ್ನು ದಿನತ್ರಯ ಎನ್ನುತ್ತಾರೆ. ದಶಮಿ, ದ್ವಾದಶಿಗಳಲ್ಲಿ ಏಕಭುಕ್ತ, ಹಗಲು ನಿದ್ರೆ ಇತ್ಯಾದಿ ತ್ಯಾಗ, ಇವುಗಳಿಂದ ಏಕಾದಶಿ ನ್ಯಾಚರಿಸುವುದು ದಿನತ್ರಯ ಆಚರಣೆ. ಈ ದಿನತ್ರಯಗಳಿಗೆ ಶ್ರೀ ಹರಿಯೇ ನಿಯಾಮಕನೂ, ಫಲಪ್ರದನೂ ಆಗಿರುವುದರಿಂದ ಇದನ್ನು ಮಹಾವ್ರತ ಎಂದು ಕರೆದಿದ್ದಾರೆ.

ಕೀ. ೪೯೮

ಅಂತರಂಗದ ಕದವು ತೆರೆಯಿತು ... : ವಿಜಯದಾಸರು ಭಕ್ತಿ ಸಾಧನೆಯಿಂದ ಗಳಿಸಿದ ದಿವ್ಯಾನುಭವವನ್ನು ಇಲ್ಲಿ ರೂಪಕಾಲಂಕಾರದಿಂದ ನಿರೂಪಿಸಿದ್ದಾರೆ. ದಾಸರ ಶ್ರೇಷ್ಠ ಕೀರ್ತನೆಗಳಲ್ಲಿ ಒಂದು.

ಹೊರಗೆ ದ್ವಾರವು ನಾಲ್ಕು ಒಳಗೈದು ದ್ವಾರಗಳು : ಈ ಮಾತು ಶರೀರ, ವೈಕುಂಠ ಎರಡಕ್ಕೂ ಅನ್ವಯಿಯುತ್ತದೆ. ಶರೀರ ಮತ್ತು ವೈಕುಂಠಗಳಿಗೆರಡಕ್ಕೂ ಬಾಗಿಲುಗಳು ಒಂಬತ್ತು. ಈ ದ್ವಾರಗಳನ್ನು ದಾಟಿದ ಮೇಲೆ ಶ್ರೀ ಹರಿಯ ದರ್ಶನ ಸಾಧ್ಯವೆಂದು ಬಲ್ಲವರ ಅಭಿಮತ.

ಸ್ವಮೂರ್ತಿಗಣಮಧ್ಯ ಸಚ್ಚಿದಾನಂದೈಕ್ಯ : ತನ್ನಂತೆಯೇ ಕಾಣುವ ಅನುಚರರ ನಡುವೆ ಇರುವವನು ವೈಕುಂಠದಲ್ಲಿ ಇರುವ ಪುರುಷರೆಲ್ಲರೂ ವಿಷ್ಣು ರೂಪವನ್ನೇ ಹೊಂದಿರುತ್ತಾರೆ ಎಂದು ಭಾಗವತದಲ್ಲಿ ಹೇಳಿದೆ.

ಕೀ. ೫೦೧

ಕಲ್ಲು ಕಡಲ ಕಡೆಯೆ ಅಮೃತವೆ ಪುಟ್ಟಿತು : ಅಮೃತ ಮಂಥನದಲ್ಲಿ ಮಂದರ ಪರ್ವತವನ್ನು ಅಮೃತಕ್ಕಾಗಿ ಕಡೆದಿದ್ದು ಎಲ್ಲರಿಗೂ ತಿಳಿದ ವಿಷಯವೇ ಆ ಪರ್ವತ ಕಲ್ಲುಗಳಿಂದ ಕೂಡಿತ್ತಲ್ಲವೇ ಆದ್ದರಿಂದ ಅದು ಶ್ರೇಷ್ಠವೆನಿಸಿತು.

ಕಲ್ಲು ಗೋವರ್ಧನ ಮಳೆಯಿಂದ ಕಾಯಿತು : ಶ್ರೀಕೃಷ್ಣ ಗೋವರ್ಧನ ಗಿರಿಯನ್ನು ಕಾದಪ್ರಸಂಗ ಇಲ್ಲಿದೆ.

ಕಲ್ಲು ರಾಮರ ಪಾದ ಸೋಕಿ ಹೆಣ್ಣಾಯಿತು ಎಂಬಲ್ಲಿ ಗೌತಮರ ಶಾಪದಿಂದ ಅಹಲ್ಯೆ ಕಲ್ಲಾಗಿದ್ದ ಸಂಗತಿಯನ್ನು ಕಲ್ಲು ಲಂಕೆಗೆ ಮಾರ್ಗ ತಾನಾಯಿತು ಎಂಬಲ್ಲಿ ಲಂಕೆಗೆ ನಿರ್ಮಾಣ ಮಾಡಿದ ಕಲ್ಲು ಸೇತುವೆಯನ್ನು ಕುರಿತು ದಾಸರು ಪ್ರಸ್ತಾಪಿಸಿದ್ದಾರೆ.

ವಿಗ್ರಹ ಕಲ್ಲಾಗಿರುವುದಕ್ಕಿಂತ ಮನಸು ಕಲ್ಲಾಗಬಾರದು ಎನ್ನುವ ದಾಸರು "ಕಲ್ಲು ಮನಸು ಬಿಟ್ಟು ಪೂಜೆಯ ಮಾಡಿರೋ" ಎಂಬಲ್ಲಿ ಅರ್ಚನ ಭಕ್ತಿಯನ್ನು ಅಂತರಂಗ ಶುದ್ಧಿ ಇರಬೇಕು ಎಂಬ ಅಂಶವನ್ನು ಸೂಚ್ಯವಾಗಿ ತಿಳಿಸಿದ್ದಾರೆ.

ಕೀ. ೫೧೭

ಧ್ಯಾನವನೆ ಮಾಡೊ ಬಿಂಬ ಮೂರುತಿಯ : ಸ್ಮರಣ ಭಕ್ತಿಗೆ ಸಂಬಂಧಿಸಿದ ಕೀರ್ತನೆ. ಸ್ಮರಣೆಯೆಂಬುದು ಧ್ಯಾನ ಎಂದು ಹೇಳಿ ಈ ಬಗೆಗೆ ಬೇಲೂರು ದಾಸರು ನೀಡಿರುವ ವಿವರಣೆ ಈ ಕೀರ್ತನೆಗೆ ಅನ್ವಯವಾಗುತ್ತದೆ. " ಧ್ಯೇಯ ವಸ್ತುವನ್ನು ಸ್ಮರಿಸುವುದಕ್ಕೆ ಧ್ಯಾನವೆಂದು ಹೆಸರು. ಸ್ಮರಣೆಗೆ ವಿಷಯವಾಗಬೇಕಾದರೆ ಧ್ಯೇಯ ವಸ್ತುವಿಗೆ ನಾಮವಿರಬೇಕು. ನಾಮದ ಜೊತೆಯಲ್ಲಿ ರೂಪವಿರಬೇಕು. ತಕ್ಕಂತೆ ಗುಣ ಕ್ರಿಯೆಗಳಿರಬೇಕು. ನಾಮ ರೂಪ ಗುಣ ಕ್ರಿಯೆಗಳಿಲ್ಲದ ವಸ್ತುವಿದೆಯೆಂದಾಗಲಿ, ಅದು ಧ್ಯಾನಕ್ಕೆ ವಿಷಯವಾಗುವುದೆಂದಾಗಲಿ ಹೇಳಿದರೆ ಅದು ಅನುಭವಕ್ಕೆ ಮಾತ್ರ ಬರುವುದಿಲ್ಲ. ಆದುದರಿಂದ ಯಾವ ಮತದ ಉಪಾಸಕರಾಗಲಿ ಉಪಾಸನೆಗೆ ವಿಷಯವಾಗಿರುವುದೆಂದು ವೇದಕಾಲದಿಂದ ಬಂದಿರುವ ಪಂಚಾಕ್ಷರಿ, ಅಷ್ಟಾಕ್ಷರಿ, ದ್ವಾದಶಾಕ್ಷರಿ ಮೊದಲಾದ ಮಂತ್ರಗಳನ್ನು ಪಾಸಿಸಿ ಇಷ್ಟಾರ್ಥಗಳನ್ನು ಪಡೆಯುತ್ತಿರುವವರು. ಧ್ಯಾನವೆಂದ ಕೂಡಲೆ ಅದಕ್ಕೆ ತಕ್ಕ ನಿಯಮಗಳಿವೆ. ನಿಯಮಗಳು ಸಂಪ್ರದಾಯವನ್ನು ಅನುಸರಿಸಿರುವುದರಿಂದ ಯಾರಾದರೂ ಅದಕ್ಕೆ ಗೌರವ ಕೊಡಲೇಬೇಕು". ಈ ಕೀರ್ತನೆಯಲ್ಲಿ ಧ್ಯಾನದ ಶಾಸ್ತ್ರಾರ್ಥಗಳೆಲ್ಲ ಅಡಗಿವೆ. ಈ ದೇವರ ನಾಮದಲ್ಲಿ ಹೇಳಿರುವ ವಿಷಯಕ್ಕೆ ವ್ಯಾಖ್ಯಾನ ರೂಪವಾಗಿ ೧೭ ತಾಳಗಳುಳ್ಳ ವಿಸ್ತಾರ ರೂಪದಲ್ಲಿ ಕಂಕಣಾಕಾರ ಸುಳಾದಿಯನ್ನು ವಿಜಯದಾಸರು ರಚಿಸಿದ್ದಾರೆ. (ಪುಟ ೧೪೦–೧೪೧ ಹರಿದಾಸ ಸಾಹಿತ್ಯ, ಬೇಲೂರು ಕೇಶವದಾಸರು).

ಕೀ. ೫೩೪

ನಾರಿ ಗೌರಿ ಕುಮಾರಿ : ಕನ್ಯಾಕುಮಾರಿಯನ್ನು ಸಂದರ್ಶನ ಮಾಡಿದಾಗ ರಚಿಸಿದ ಕೀರ್ತನೆ. ಕನ್ಯಾಕುಮಾರಿ ಕೆಲವರ ಕಣ್ಣಿಗೆ (ಎಂಟು ವರ್ಷದ ಹುಡುಗಿ) ಗೌರಿಯಂತೆಯೂ

ಮತ್ತೆ ಕೆಲವರಿಗೆ (ಹತ್ತು ವರ್ಷದ ಹುಡುಗಿಯಂತೆ) ಕನ್ಯೆಯಂತೆಯೂ (ಹನ್ನೆರಡು ವರ್ಷದ ಹುಡುಗಿಯಂತೆ) ಕುಮಾರಿಯಂತೆಯೂ ಕಾಣಿಸುತ್ತಾಳಂತೆ. ಅದಕ್ಕಾಗಿ ದಾಸರು ನಾರಿ ಗೌರಿ ಕುಮಾರಿ ಎಂದು ವರ್ಣಿಸಿದ್ದಾರೆ.

ಕೀ. ೫೩೫

ಜಯಮಂಗಳಂ ನಿತ್ಯ ಶುಭ ಮಂಗಳಂ : ತಿರುಪತಿ ದೇವಸ್ಥಾನದಲ್ಲಿ ದೇವರ ದರುಶನಕ್ಕೆ ಹೋದಾಗ ದರುಶನ ಸಾಧ್ಯವಾಗದೆ ಗುಡಿಯ ಪೊಕ್ಕ ಜನರಿಗೆಲ್ಲ ಹೊನ್ನು ಹಣಗಳ ಕೊಂಡು ತನ್ನ ದರುಶನ ಕೊಡದೆ ಇರುವುದರ ಜತೆಗೆ ಕೋಲುಕಾರರು ಜನರನ್ನು ತಳ್ಳಿ ದೂಡುವ ದೃಶ್ಯ ಕಂಡು ದಾಸರು "ಬೆನ್ನೊಡೆ ಹೊಯಿಸುವ ಅನ್ಯಾಯಕಾರಿ ತಿಮ್ಮಪ್ಪ ಎಂದು ದೂಷಿಸುತ್ತಲೇ" ಜಯಮಂಗಳಂ ನಿತ್ಯ ಶುಭಮಂಗಳಂ ಎಂದು ಸ್ತುತಿಸುತ್ತಾರೆ.

ದಾಸರ ಸ್ವಂತ ಅನುಭವದ ಹಿನ್ನೆಲೆ ಈ ಕೀರ್ತನೆಯಲ್ಲಿ ಕಂಡುಬರುತ್ತದೆ.

ಗಿಡ್ಡದಾನವನಾಗಿ ಬಡ್ಡಿ ದಾನವ ಬೇಡಿ : ದಾಸರು ವಾಮನಾವತಾರದ ಕಥೆಯನ್ನು ಇಲ್ಲಿ ನೆನಪಿಸುತ್ತಾರೆ.

ಅನುಬಂಧ-೨ (ಆ)

ಟಿಪ್ಪಣಿಗಳು

ಉ. ೫

ಅನ್ನಂತ ಕಲ್ಪಕ್ಕೆ ನಿನ್ನ ಮೊರೆ .... : ಈ ಉಗಾಭೋಗವನ್ನು ವಿಜಯದಾಸರು ತಮ್ಮ ಮಗ ಶೇಷಗಿರಿದಾಸ ವ್ಯಾಧಿಗೆ ಒಳಗಾದಾಗ ವ್ಯಾಧಿಯ ಪರಿಹಾರಕ್ಕಾಗಿ ರಚಿಸಿದರು "(ಗೋರ‍್ಬಾಳ ಹನುಮಂತರಾವ್) ಈ ಹಿನ್ನೆಲೆಯಲ್ಲಿ ಇಲ್ಲಿ ಪ್ರಹ್ಲಾದ, ಧ್ರುವ ಮೊದಲಾದ ಬಾಲಕ ಭಕ್ತರ ನಿದರ್ಶನಗಳನ್ನು ಉಲ್ಲೇಖಿಸಿದ್ದಾರೆ.

'ಸಿರಿರಮಣ ನಿನ್ನಯ ಚರಣಯುಗ್ಮಗಳಿಗೆ' ಎಂಬ ಉಗಾಭೋಗವನ್ನೂ ಇದೇ ಸಂದರ್ಭದಲ್ಲಿ ರಚಿಸಿದರು" (ಹರಿದಾಸರತ್ನಂ ಗೋಪಾಲದಾಸರು) ಹೇಳುತ್ತಾರೆ.

ಉ. ೬

ಅಬಲೆಯ ಮಾತಿಗೆ ಮನಸು ಕರಗಿತು .... : "ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನ 'ಚಾಗಿ' ಎಂಬ ಹಳ್ಳಿಯಲ್ಲಿದ್ದ ಕೇಶವರಾಯನನ್ನು ಬದುಕಿಸಲು ವಿಜಯದಾಸರು ಆ ಸಂದರ್ಭದಲ್ಲಿ ಹಲವಾರು ಉಗಾಭೋಗಗಳನ್ನು ಹಾಡಿದರೆಂದು ಪ್ರತೀತಿ. ಆ ಪೈಕಿ ಇದೊಂದು. ಇದೇ ರೀತಿ ಒಟ್ಟು ೧೫ ಉಗಾಭೋಗಗಳನ್ನು ರಚಿಸಿದರು ಎನ್ನುತ್ತಾರೆ. ಈ ಸಂದರ್ಭವನ್ನು ಡಾ.ಕೆ.ಗೋಕುಲನಾಥರು ಹೀಗೆ ವಿವರಿಸಿದ್ದಾರೆ. ಸಾಯುವ ಪ್ರಾಣಿಯ ಜೀವ ಉಳಿಸಿದರೆ ಕಾಶೀಯಾತ್ರೆ ಮಾಡಿದಷ್ಟು ಅದಕ್ಕಿಂತ ಹೆಚ್ಚು ಪುಣ್ಯ ಬರುತ್ತದೆ ಎಂಬುದು ವಿಜಯದಾಸರ ಕಾಲಕ್ಕೆ ಇದ್ದ ಒಂದು ನಂಬಿಕೆ. ಚಾಗಿ ಕೇಶವರಾಯನನ್ನು ಬದುಕಿಸಲು ಆತನ ಹೆಂಡತಿ ಪ್ರಾರ್ಥಿಸಿದಾಗ ವಿಜಯದಾಸರು ಸಾಯುತ್ತಿದ್ದ ಕತ್ತೆಗೆ ಒಮ್ಮೆ ಜೀವ ಉಳಿಸಿದ್ದರಿಂದ ತಮಗೆ ಬಂದಿದ್ದ ಪುಣ್ಯವನ್ನು ಧಾರೆಯೆರೆದು ಚಾಗಿ ಕೇಶವರಾಯನನ್ನು ಬದುಕಿಸಿದರು ಆ ಸಂದರ್ಭದಲ್ಲಿ ಈ ಉಗಾಭೋಗ ಹಾಡಿದರು".

ಉ. ೬

ಶಬರಿಗೆ ಒಲಿದವನೆ ಸತ್ಯಮೂರ್ತಿ .... : ಆನೆಗೊಂದಿಯಲ್ಲಿದ್ದ ಒಬ್ಬ ಬೇಡಿತಿ. ಇಲ್ಲಿ ತುಂಗಭದ್ರೆಯ ಎರಡು ಸೀಳುಗಳ ನಡುವೆ ವೈಷ್ಣವರ ಒಂಬತ್ತು ಮಂದಿ ಸ್ವಾಮಿಗಳ ವೃಂದಾವನಗಳಿವೆ. ಇದಕ್ಕೆ ನವವೃಂದಾವನವೆನ್ನುತ್ತಾರೆ. ಇದರ ಸಮೀಪದಲ್ಲೇ ಶಬರಿಯ

ಆಶ್ರಮವಿದೆ. ವಾಲ್ಮೀಕಿ ರಾಮಾಯಣದಲ್ಲಿ ಈಕೆ ರಾಮನನ್ನು ಅರ್ಘ್ಯ ಪಾದ್ಯಗಳಿಂದುಪಚರಿಸಿ ಪಂಪಾತೀರದಲ್ಲಿ ಬೆಳೆಸಿದ ಬಗೆಬಗೆಯ ಪದಾರ್ಥಗಳನ್ನು ಆತನ ಮುಂದೆ ತಂದಿಟ್ಟಳೆಂದಿದೆ. ಪದ್ಮಪುರಾಣದಲ್ಲಿ ತಾನು ಹಣ್ಣುಗಳನ್ನು ರುಚಿನೋಡಿ ಆಮೇಲೆ ಶ್ರೀರಾಮನ ಬಾಯಿಗೆ ಹಾಕಿದಳೆಂದಿದೆ. ಶ್ರೀ ರಾಮಭಕ್ತಿಯಿಂದ ಈಕೆ ಸೀತೆಯನ್ನು ಹುಡುಕುತ್ತ ಬಂದ ಶ್ರೀ ರಾಮನನ್ನು ಉಪಚರಿಸಿ ಅವನ ಮುಂದೆಯೇ ಅಗ್ನಿ ಪ್ರವೇಶ ಮಾಡಿ ಸ್ವರ್ಗಸ್ಥಳಾದಳು. ಮತಂಗ ಮುನಿಯ ಶಿಷ್ಯೆ ಈಕೆ ಐದು ನೂರು ವರ್ಷದ ಅಜ್ಜಿ. ಶ್ರೀರಾಮನ ಪರಮಭಕ್ತೆ (ರಾಮಾ ಅರಣ್ಯಕಾಂಡ). ಆಕರ: ಪುಭಾಕೋ (ಪು.೬೦೨).

ಉ. ೬

ಕುಬುಜೆಯ ತಿದ್ದಿದ .... : ಕಂಸನಿಗೆ ಪರಿಮಳ ಭರಿತವಾದ ಚಂದನವನ್ನು ತರುತ್ತಿದ್ದ ದಾಸಿ. ಈಕೆಗೆ ಕುಬ್ಜಿ ಎಂದೂ (ತ್ರಿವಕಾ/ತ್ರಿವಕ್ರೆ ಎಂದೂ) ಹೆಸರಿತ್ತು. ಮುಷ್ಟಿಕ, ಚಾಣೂರರನ್ನು ಕೊಲ್ಲಲು ಹೊರಟ ಶ್ರೀ ಕೃಷ್ಣನು ದಾರಿಯಲ್ಲಿ ಈಕೆಯನ್ನು ಸಂಧಿಸಿ, ಅವಳ ಹತ್ತಿರ ಇದ್ದ ಪರಿಮಳ ದ್ರವ್ಯಗಳನ್ನು ಬಲಾತ್ಕಾರದಿಂದ ಕಿತ್ತುಕೊಂಡು ತನ್ನ ಮೈಗೆ ಚೆನ್ನಾಗಿ ಪೂಸಿಕೊಂಡು ಆಕೆಯ ಗೂನು ಬೆನ್ನನ್ನು ಸರಿಪಡಿಸಿ, ಸುಂದರ ತರುಣಿಯನ್ನಾಗಿ ಮಾಡಿದನು. ಆಗ ಅವಳು ಮಂದಹಾಸವನ್ನು ಬೀರುತ್ತಾ ಶ್ರೀ ಕೃಷ್ಣನನ್ನು ತನ್ನ ಮನೆಗೆ ಆಮಂತ್ರಿಸಿದಳು. ಅವನು ಕಂಸನ ವಧೆಯ ಅನಂತರ ಬರುತ್ತೇನೆಂದು ಆಕೆಗೆ ಭರವಸೆಯಿತ್ತನು. (ಪುಭಾಕೋ ಪುಟ ೨೫೯).

ಉ. ೧೫

ಒಂದು ಕೈಯಲಿ ಖಡ್ಗ ಒಂದು ಕೈಯಲಿ ಹಲಗೆ .... : ವಿಜಯದಾಸರು ಗೋಪಾಲದಾಸರಿಗೆ ಅಂಕಿತೋಪದೇಶ ಮಾಡಿದಮೇಲೆ ಗೋಪಾಲದಾಸರು ಉಡುಪಿಗೆ ಹೋಗಲು ವಿಜಯದಾಸರ ಅನುಮತಿಯನ್ನು ಕೇಳಿದರು. ಆಗ ದಾಸರು ದಾರಿಯಲ್ಲಿ ಮಂಡಗದ್ದೆ ಎಂಬ ಹಳ್ಳಿಯಲ್ಲಿ ಶಿವಮೊಗ್ಗ ಜಿಲ್ಲೆಯ ಭೀಮನೆಂಬ ಠಕ್ಕ ಬ್ರಾಹ್ಮಣನಿದ್ದಾನೆ ಅವನು ಊರಿಗೆ ಬಂದ ಯಾತ್ರಾರ್ಥಿಗಳನ್ನು ಸತ್ಕರಿಸಿ ಅವರಲ್ಲಿರುವ ಒಡವೆ ವಸ್ತ್ರಗಳನ್ನು ಅವರು ಕಾಲ್ನಡಿಗೆಯಲ್ಲಿ ಮುಂದಿನ ಊರಿಗೆ ಹೋಗುತ್ತಿರುವಾಗ ದಾರಿಯಲ್ಲಿ ಶಸ್ತ್ರಧಾರಿಗಳೊಂದಿಗೆ ಭೀಮ ಸುಲಿಗೆ ಮಾಡುತ್ತಾನೆ. ಆ ಸಂದರ್ಭದಲ್ಲಿ ಧಾಳಿಯಿಂದ ಪಾರಾಗಲು ಪಠಿಸುವುದಕ್ಕಾಗಿ ವಿಜಯದಾಸರು ಈ ಉಗಾಭೋಗವನ್ನು ರಚಿಸಿ ಉಪದೇಶಿಸಿದರೆಂದು ಪ್ರತೀತಿ. ಈ ಘಟನೆಯನ್ನು ಶ್ರೀ ತಂದೆ ಗೋಪಾಲವಿಠಲರು ತಮ್ಮದೊಂದು ಕೃತಿಯಲ್ಲಿ ಸ್ಮರಿಸಿದ್ದಾರೆ.

ಉ. ೧೬

ಒಂದೆರಡು ಮೂರು ನಾಲ್ಕೈದಾರು ಏಳು ಒಂದೇಳು ಒಂಭತ್ತು ಹತ್ತು ಸಾರಿ ವಂದಿಸಿ ಸ್ತೋತ್ರ ಮಾಡಿದುದಕೆ .... : ಇಲ್ಲಿ ಈ ಸಂಖ್ಯೆಗಳ ಮೂಲಕ ದಾಸರು ದಶಾವತಾರಗಳನ್ನು ಸೂಚಿಸಿರಬಹುದೇ?

ಉ–೧೭

(ಮುಂಡಿಗೆಯ ಸ್ವರೂಪದ ಉಗಾಭೋಗ ಇದು)

ಒಂದೆಂಟು ಬಾಗಿಲುಗಳುಳ್ಳ ಪಟ್ಟಣ : ಒಂಭತ್ತು ರಂಧ್ರಗಳ ದೇಹ (ನವದ್ವಾರಗಳು: ೨ ಕಣ್ಣುಗಳು, ೨ ಕಿವಿಗಳು, ಮೂಗಿನ ೨ ಹೊಳ್ಳೆ, ಬಾಯಿ, ಮೂತ್ರದ್ವಾರ, ಮಲದ್ವಾರ)

ಇಪ್ಪತ್ತನಾಲ್ಕು ಮನೆ : ದೇಹದಲ್ಲಿರುವ ಇಪ್ಪತ್ತನಾಲ್ಕು ತತ್ವಗಳು ಎಂದರೆ ಪಂಚಭೂತಗಳು, ಪಂಚತನ್ಮಾತ್ರಗಳು, ಮನಸ್ಸು ಮಹಾ ಅವ್ಯಕ್ತ ತತ್ವ, ಪಂಚ ಅಹಂಕಾರ ತತ್ವ, ದಶೇಂದ್ರಿಯಗಳು.

ಬಂಧನ : ಮಾನವ ಜನ್ಮದಲ್ಲಿ ಅಜ್ಞಾನ ಮತ್ತೆ ಮತ್ತೆ ಎಂಥ ಜ್ಞಾನಿಗಳಿಗಾದರೂ ಆವರಿಸುವ ಅವಕಾಶವಿರುವುದರಿಂದ ಈ ಮಾನವಜನ್ಮವನ್ನು ದಾಸರು 'ಬಂಧನ' ಎಂದು ಕರೆದಿದ್ದಾರೆ.

ಉ. ೧೮

ಒಬ್ಬಸತಿ, ಪತಿಗಾಗಿ ಮುನಿಯ ಶಾಪವ ಧರಿಸಿ ಅಬ್ಜಬಾಂಧವನ ನಿಲಿಸಿದಳು ನೋಡಾ .... : ಚಾಗಿ ಕೇಶವರಾಯನನ್ನು ಬದುಕಿಸುವುದಕ್ಕಾಗಿ ವಿಜಯದಾಸರು ಇಟ್ಟ 'ಮೊರೆ' ಈ ಉಗಾಭೋಗ. ಪತಿಯನ್ನು ಉಳಿಸಿಕೊಂಡ ಪತಿವ್ರತೆಯರ ವಿಚಾರವನ್ನು ದಾಸರು ಇಲ್ಲಿ ಪ್ರಸ್ತಾಪಿಸಿದ್ದಾರೆ. ವಾಯುಪುರಾಣದಲ್ಲಿ ಬರುವ ಮಾಘಮಾಸ ಮಹಾತ್ಮೆಯ ಪ್ರಸಂಗವು ಇಲ್ಲಿ ಉಲ್ಲೇಖಿತವಾಗಿದೆ (ಅಧ್ಯಾಯ ೧೬).

"ಕೌಶಿಕನೆಂಬ ಬ್ರಾಹ್ಮಣನು ವೇಶ್ಯಾ ಸ್ತ್ರೀಯರ ಸಂಪರ್ಕವಿಟ್ಟುಕೊಂಡ ಕಾರಣ ರೋಗಗಳಿಗೆ ತುತ್ತಾಗಿ ನಿತ್ರಾಣನಾದನು. ಆದರೂ ಆತನಿಗೆ ವೇಶ್ಯೆಯರ ಬಯಕೆ ತೀರಲಿಲ್ಲ. ಸಾಧ್ವಿಯಾದ ತನ್ನ ಹೆಂಡತಿಗೆ ತನ್ನನ್ನು ವೇಶ್ಯೆಯ ಮನೆಗೆ ಕರೆದೊಯ್ಯಬೇಕೆಂದು ಕೇಳಿದಾಗ ಆಕೆ ಪತಿಯನ್ನು ವೇಶ್ಯೆಯ ಮನೆಗೆ ಕರೆದೊಯ್ಯುತ್ತಿರುವಾಗ ದಾರಿಯಲ್ಲಿ ಮಾಂಡವ್ಯ ಋಷಿಗಳನ್ನು ಕತ್ತಲಿನಲ್ಲಿ ಕಾಣದೆ ಎಡವಿದಳು. ಕುಪಿತನಾದ ಮಾಂಡವ್ಯ ಋಷಿಯು

"ಮಾರನೆಯ ದಿನ ಸೂರ್ಯೋದಯದ ಹೊತ್ತಿಗೆ ವೈಧವ್ಯವನ್ನು ಹೊಂದು" ಎಂದು ಶಪಿಸಿದರು. ಆಗ ಕೌಶಿಕನ ಪತ್ನಿ ಮರುದಿನ ಸೂರ್ಯೋದಯವಾಗದಿರಲಿ ಎಂದಳು. ಪತಿಭಕ್ತಿಯ ಪ್ರಭಾವದಿಂದ ಅವಳ ಮಾತು ನಿಜವಾಯಿತು". (ಶ್ರೀ ವಿಜಯದಾಸರ ಉಗಾಭೋಗಗಳು ಡಾ.ಕೆ.ಗೋಕುಲನಾಥ್ ಪುಟ೩೯)

ಒಬ್ಬ ಸತಿ, ಪತಿಗಾಗಿ ಧರ್ಮನ ಸಭೆಯ ನಾರಿ, ನಿಬ್ಬರದಿ ಪ್ರಾಣವನು ಪಡೆದಳು ನೋಡಾ : ಸಾವಿತ್ರಿ ಸತ್ಯವಾನನನ್ನು ಯಮನೊಡನೆ ವಾದಿಸಿ ಬದುಕಿಸಿಕೊಂಡ ಕಥೆಯ ಹಿನ್ನೆಲೆಯ ಪ್ರಸಂಗವನ್ನು ದಾಸರು ಇಲ್ಲಿ ಪ್ರಸ್ತಾಪಿಸಿದ್ದಾರೆ.

ಒಬ್ಬ ಸತಿ, ಪತಿಗಾಗಿ ಚಿತ್ರಗುಪ್ತರಾಡಿದಾ ಶಬ್ದಲಾಲಿಸಿ ಐದೆತನ ಪಡೆದಳು : ಬ್ರಹ್ಮ ಶರ್ಮನೆಂಬ ಬ್ರಾಹ್ಮಣ ಒಂದು ದಿನ ಊಟ ಮಾಡುತ್ತಿದ್ದಾಗ ರುಚಿಸಿದ ಪದಾರ್ಥವೊಂದನ್ನು ಮೆಚ್ಚಿ ಅದನ್ನು ತಿಂದ ಮೇಲೆ ಅದನ್ನು ರಾತ್ರಿಗೂ ಇಡಬೇಕೆಂದು ತನ್ನ ಹೆಂಡತಿಗೆ ಹೇಳಿದನು. ಆಗ ಮನೆಯಲ್ಲಿ ಯಾರೋ ಗಹಗಹಿಸಿ ನಕ್ಕಂತಾಯಿತು. ಆ ನಗು ಬ್ರಹ್ಮಶರ್ಮನ ಪತ್ನಿ ಸುಶೀಲಳಿಗೆ ಕೇಳಿಸಿತು. ಆಗ ಅವಳು ಕುಪಿತಳಾಗಿ ನಕ್ಕವರು ಯಾರು? ಎಂದು ಕೂಗಿ, ನಕ್ಕವರು ತನ್ನೆದುರಿಗೆ ಕಾಣಿಸಿಕೊಳ್ಳದಿದ್ದರೆ ಶಪಿಸುವುದಾಗಿ ಸಾರಿದಳು. ಆಗ ನಕ್ಕ ಚಿತ್ರಗುಪ್ತರು ಕಾಣಿಸಿಕೊಂಡರು. ನಗಲು ಕಾರಣವೇನೆಂದು ಆಕೆ ಪ್ರಶ್ನಿಸಿದಳು "ಬ್ರಹ್ಮಶರ್ಮನಿಗೆ ಆಯುಸ್ಸು ಸಂಜೆಗೆ ಮುಗಿಯುವುದಾಗಿದ್ದರೂ ತಿಳಿಯದೆ ರಾತ್ರಿಯ ಊಟದ ಯೋಚನೆ ಮಾಡುತ್ತಿದ್ದುದರಿಂದ ನಗು ಬಂದಿತು ಎಂದರು ಚಿತ್ರಗುಪ್ತರು. ಆಗ ಸುಶೀಲ ಚಿತ್ರಗುಪ್ತರಿಗೆ ನಮಸ್ಕರಿಸಿ ಪತಿಯನ್ನು ಉಳಿಸಿಕೊಡಬೇಕೆಂದು ಕೋರಿದಳು. ಅವಳ ಪ್ರಾರ್ಥನೆಯನ್ನು ಚಿತ್ರಗುಪ್ತರು ಮನ್ನಿಸಿದರು. (ಶ್ರೀ ವಿಜಯದಾಸರ ಉಗಾಭೋಗಗಳು, ಟಿಪ್ಪಣಿ ಪುಟ.೪೧)

ಉ. ೧೯

ಋಷಿಗಳ ಋಣ ಪೂರ್ವಾಶ್ರಮದಿಂದ ಪರಿಹಾರ .... : ದೇವ ಋಣ, ಋಷಿಋಣ, ಆತ್ಮಋಣ, ಪಿತೃಋಣ, ದೇಹಋಣ ಇವೇ ಪಂಚಋಣಗಳು ಇವುಗಳನ್ನು ತೀರಿಸುವುದಕ್ಕಾಗಿ ಗೃಹಸ್ಥರು ಕೈಗೊಳ್ಳುವ ಕಾರ್ಯಗಳಾದ ದೇವಪೂಜೆ, ಋಷಿಸತ್ಕಾರ, ಪಿತೃ ಆರಾಧನೆ ಅತಿಥಿಪೂಜೆ, ಪ್ರಾಣಿಸೇವೆ ಇವೇ ಪಂಚ ಮಹಾಯಜ್ಞಗಳು.

ಬ್ರಹ್ಮಚರ್ಯೆಯಿಂದ ಋಷಿಋಣ, ಯಜ್ಞಯಾಗಾದಿಗಳಿಂದ ದೇವಋಣ, ಗೃಹಸ್ಥಾಶ್ರಮದಿಂದ ಪಿತೃಋಣ, ದೇಹಾರೋಗ್ಯಗಳನ್ನು ಕಾಪಾಡಿ ಕೊಳ್ಳುವುದರಿಂದ ದೇಹಋಣ ಸಮಸ್ತ ಪ್ರಾಣಿ ಮರಗಿಡಬಳ್ಳಿ ಪಾಲನೆಯಿಂದ ಭೂತಋಣ, ಪರಮಾತ್ಮನಲ್ಲಿ ಭಕ್ತಿ ಜ್ಞಾನಾದಿಗಳನ್ನು ಇಡುವುದರಿಂದ ಪ್ರೇಮದಋಣ ಇವು ಪರಿಹಾರವಾಗತಕ್ಕವು. ಆದರೆ ಧನಋಣ ಮಾತ್ರ ಇರಬಾರದು. ಧನಋಣ ಇದ್ದರೆ ಯಾರಿಂದ ಸಾಲ ಪಡೆದಿರುತ್ತೇವೋ ಅಂಥವರಲ್ಲಿ ಹುಟ್ಟಿಸುತ್ತಾರೆ. ಆಗ ಋಣ ತೀರಿಸಬೇಕಾಗುತ್ತದೆ ಎಂದು ವಿಜಯದಾಸರು ಸಾರಿದ್ದಾರೆ.

ಸಾಲವನ್ನು ಕೊಡದಿರುವುದು ಮನ್ನಾಮಾಡಿ ಎನ್ನುವುದು ಪಾಪಕರ ಎಂದು ವಿಜಯದಾಸರು ಇಲ್ಲಿ ತಿಳಿಸಿದ್ದಾರೆ.

ಉ. ೨೦

ದಿಟ್ಟವಾದ ಕವನ ಎನ್ನಿಂದ ಬಾಹದಲ್ಲಿ .... : ಸ್ವಪ್ನಾಂಕಿತ ಗುರುಗಳಾದ ಪುರಂದರದಾಸರನ್ನು ನೆನೆಸುತ್ತ ವಿಜಯದಾಸರು ತಮಗೆ ಕೀರ್ತನ ರಚನಾ ಶಕ್ತಿ ಬಂದಿದ್ದು ಪುರಂದರದಾಸರ ಅನುಗ್ರಹವೆಂದೂ ತಾವು ಜನ್ಮತಃ ಮಂದಮತಿಗಳೆಂದೂ ವಿನಯದಿಂದ ಹೇಳಿಕೊಂಡಿದ್ದಾರೆ. ಪುರಂದರರು ಭವಸಾಗರವನ್ನು ಭಕ್ತಿಯ ಮೆಟ್ಟಿಕೆಯಿಂದ ದಾಟಿದವರು ಎಂದಿದ್ದಾರೆ.

ಉ. ೨೩

ನಿನ್ನಯ ಭೀತಿ .... ದುರ್ಗಾಳಿಗೆ : ಕಾಲವನ್ನು ಮೀರಿದವರು ಪ್ರಪಂಚದಲ್ಲಿ ವಿಷ್ಣು ಮತ್ತು ಲಕ್ಷ್ಮೀ ಆದರೆ ಈ ದುರ್ಗಾ ರೂಪಳಾದ ಲಕ್ಷ್ಮಿಯೂ ಭಗವಂತನ ಅಧೀನಳೇ. ರುದ್ರನು ಲಯಕರ್ತನಾದರೂ ಪರಮಾತ್ಮ ಮತ್ತು ದುರ್ಗೆಯ ಆಜ್ಞೆಗಳನ್ನು ಮೀರುವಂತಿಲ್ಲ.

ಚಾಗಿ ಕೇಶವರಾಯನನ್ನು ಬದುಕಿಸಲು ದಾಸರು ಹಾಡಿದ ಉಗಾಭೋಗ ಇದು.

ಉ. ೨೬

ಚಾಗಿ ಕೇಶವರಾಯನು ಬದುಕಲು ಹಾಡಿದ ಉಗಾಭೋಗ.

ಉ. ~~೩೭~~ ೨_೨

ತತ್ವಾಭಿಮಾನಿಗಳಿರಾ ಉತ್ತರವ ಪಾಲಿಪುದು . . . . . . : ಮಧ್ವಶಾಸ್ತ್ರಾನುಸಾರ ಮಾನವನ ಶರೀರದಲ್ಲಿ ೨೪ ತತ್ವಾಭಿಮಾನಿ ದೇವತೆಗಳಿದ್ದಾರೆ.

ಉ. ೩೩

ತನ್ನಂತರ್ಯಾಮಿ ಒಳಗಿದ್ದ ಬಿಂಬ .... : ಜೀವರು ಸಾಧನೆ ಮಾಡಿದ ಮೇಲೆ ಅವರವರಿಗೆ ಹೃದಯಾಕಾಶದಲ್ಲಿ ತೋರುವ ಶ್ರೀ ಹರಿಯ ರೂಪ. ಈ ರೂಪದ ಗಾತ್ರ, ಕಾಂತಿ ಮೊದಲಾದವು ಜೀವರ ಯೋಗ್ಯತೆಯನ್ನು ಅನುಸರಿಸಿ ಭಿನ್ನವಾಗಿರುತ್ತದೆ. ಮುಕ್ತಿಯಾಗಲು ಜೀವನು ತನ್ನ ಬಿಂಬರೂಪದ ಸಾಕ್ಷಾತ್ಕಾರವನ್ನು ಹೊಂದಬೇಕು. ಅಪರೋಕ್ಷ ಜ್ಞಾನಕ್ಕೆ ಕಾರಣವಾದುದೇ ಬಿಂಬವು (ಮಾಧ್ವನಿಘಂಟು ಪು.೨೯೭).

ಮುನ್ನ ದ್ವಿವಿಧ ಕರ್ಮ ತೋರಿಸಲಾಗಿ .... : ಹರಿಗೆ ಪ್ರೀತಿಯಾಗಲಿ ಎಂದು ಮಾಡಲ್ಪಡತಕ್ಕದ್ದು ವಿಹಿತಕರ್ಮ. ವೇದನಿಷಿದ್ಧ ಕರ್ಮವು ವಿಕರ್ಮವೆನಿಸುವುದು. ಅರ್ಥಾತ್ ಪುಣ್ಯ ಮತ್ತು ಪಾಪಗಳನ್ನು ಸಂಚಯಿಸುವ ಕಾರ್ಯ. (ಮಾಧ್ವ ನಿಘಂಟು ಪುಟ ೧೩೮)

ಉ. ೩೭

ಮೂವರುಷ ಎನ್ನಾಯುಷ್ಯದೊಳಿತ್ತು ಕಾವುದು .... : ಚಾಗಿ ಕೇಶವರಾಯನನ್ನು ಬದುಕಿಸಲು ವಿಜಯದಾಸರು ಹಾಡಿದ ಉಗಾಭೋಗ. ಕೇಶವರಾಯನ ಆಯುಷ್ಯ ಮುಗಿದಿರುವುದರಿಂದ ಅವನಿಗೆ ಜೀವದಾನವಾದರೆ ಅವನಿಗೆ ಆಯುಷ್ಯ ರೇಖೆ ಇರಬೇಕಲ್ಲ. ಅದಕ್ಕಾಗಿ ದಾಸರು ತಮ್ಮ ಆಯುಷ್ಯದಲ್ಲಿನ ಮೂರು ವರುಷಕೊಟ್ಟಿದ್ದಾರೆ. "ಶ್ರೀ ವಿಜಯದಾಸರು ಶ್ರೀ ಜಗನ್ನಾಥದಾಸರಿಗೆ ಶ್ರೀ ಗೋಪಾಲದಾಸರ ಮೂಲಕ ೪೦ ವರ್ಷಗಳ ಆಯುರ್ದಾನ ಮಾಡಿಸಿದ ಕಥೆ ಜಗಜ್ಜನಿತವಾಗಿದೆ". ಆದರೆ ಈ ಮೂರು ವರುಷದ ಆಯುರ್ದಾನದ ಕಥೆ ಅಷ್ಟು ಪ್ರಸಿದ್ಧವಾಗಿಲ್ಲ. (ಕೆ.ಗೋಕುಲನಾಥ್, ಶ್ರೀ ವಿಜಯದಾಸರ ಉಗಾಭೋಗಗಳು ಪು.೪೪)

ಉ. ೩೮

ಸಾರುವೆನು ಕರನೆಗಹಿ ಉರಗಹಾರವಧರಿಸಿ .... : ವಿಷ್ಣು ಸರ್ವೋತ್ತಮತ್ವವನ್ನು ಸಾರಲು ಸವಾಲಾಗಿ ಸರ್ಪದ ಹಾರವನ್ನು ಕೊರಳಿಗೆ ಹಾಕಿಕೊಂಡು ಕೈ ಎತ್ತಿ ಲೋಕಕ್ಕೆ ಸಾರುವೆನು ಎಂಬ ಮಾತು ಒಂದು ಬಗೆಯಲ್ಲಿ 'ದಿವ್ಯ' ಎನ್ನಬಹುದಾಗಿದೆ.

ಉ. ೪೨

ದ್ವಾದಶಿ ತಿಥಿಗೆ ಸಮವುಂಟೆ? .... : ದ್ವಾದಶಿ ತಿಥಿಗೆ ಮಾಧ್ವರಲ್ಲಿ ವಿಶೇಷ ಮಹತ್ವವಿದೆ ಪರಮಾತ್ಮನ ಪೂಜೆಯನ್ನು ದ್ವಾದಶಿ ತಿಥಿಯಲ್ಲಿ ವಿಧಿ ವಿಹಿತವಾಗಿ ಆಚರಿಸುವುದು ಅತಿ ಪುಣ್ಯತಮ ಕಾರ್ಯವಾಗಿದೆ. ಅನ್ನದಾನಕ್ಕೆ ಸಮಾನವಾದ ಪುಣ್ಯಕಾರ್ಯವಾಗಿದೆ.

ಉ. ೪೭

ಎನ್ನೊಳಗೆ ಇನ್ನಿತು ಪ್ರೇರಿಸಿ ನೀನೇ ನುಡಿಸಿದ್ದು .... : ಚಾಗಿ ಕೇಶವರಾಯನ ಪತ್ನಿಗೆ "ದೀರ್ಘ ಸುಮಂಗಲೀಭವ" ಎಂದು ಆಶೀರ್ವದಿಸಿದದುದು ವಿಜಯವಿಠಲನ ಪ್ರೇರಣೆಯಿಂದಲೇ ಎಂದು ಭಾವಿಸಿ ಕೇಶವರಾಯನನ್ನು ಬದುಕಿಸಬೇಕೆಂದು ಪ್ರಾರ್ಥಿಸಿದ್ದಾರೆ. ಈ ಉಗಾಭೋಗದಲ್ಲಿ ಬಿಂಬದಂತೆ ಪ್ರತಿಬಿಂಬ ಎಂಬ ತತ್ವ ಇಲ್ಲಿ ನಿರೂಪಿತವಾಗಿದೆ.

ಉ. ೪೯

ಶಿರದಶ ತೋಳೆರಡು ಪದವೆರಡು ಧರಿಸುತ್ತ ..... : ಜೀವರ ದೇಹದಲ್ಲಿ ಪರಮಾತ್ಮ ದೇವತೆಗಳ ಮೂಲಕ ಪ್ರೇರಣೆ ನೀಡಿ ಹೇಗೆ ಶುಭಾಶುಭ ಕಾರ್ಯಗಳನ್ನು ಮಾಡಿಸುವನೆಂದು ಇಲ್ಲಿ ಹೇಳಿದೆ. " ಶ್ರೀಹರಿ ಸಕಲರ ಬಿಂಬ ಮೂರ್ತಿ ಆದ ಅವನು ಹತ್ತು ಮುಖ, ಎರಡು ಪಾದ, ಎರಡು ತೋಳು ಧರಿಸಿ ತ್ರಿವಿಧ ಜೀವರ ದೇಹದ ಬಲಭಾಗದಲ್ಲಿರುವ ದೇವತೆಗಳಿಗೆ ತನ್ನ ಬಲಭಾಗದ ಐದುಮುಖಗಳಿಂದಲೂ ಸಾಧನೆಯನ್ನು ಮಾಡಿಸುವ ಕ್ರಮವನ್ನು ಪ್ರೇರಿಸುತ್ತಾನೆ" (ಶ್ರೀ ವಿಜಯದಾಸರ ಉಗಾಭೋಗಗಳು – ಕೆ.ಗೋಕುಲನಾಥ್ ಪು.೪೭)

ಉ. ೫೦

ಪಾಮರ ಮನುಜರು ದಾಸವೇಷವ ಧರಿಸಿ .... : ಬೇಲೂರು ಕೇಶವದಾಸರು ತಮ್ಮ "ಹರಿದಾಸಸಾಹಿತ್ಯ" ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅಂಕಿತ ಇರುವ ಸಾಲು ಒಂದು ಇಲ್ಲಿ ಬಿಟ್ಟು ಹೋಗಿದೆ. ಆದಕಾರಣ ಇದು ಅಪೂರ್ಣ ಉಗಾಭೋಗವಾಗಿದೆ. ಇದನ್ನು ಉಲ್ಲೇಖಿಸುವಾಗ "ಎಂದು ಮೊದಲಾಗಿ ಒಂದು ಉಗಾಭೋಗದಲ್ಲಿ ಹೇಳಿದ್ದಾರೆ" ಎಂದು ತಿಳಿಸಿರುವುದರಿಂದ ಪೂರ್ತಿ ಉಗಾಭೋಗವನ್ನು ಅವರು ಉದ್ಧರಿಸಿಲ್ಲ ಎಂಬುದು ಸ್ಪಷ್ಟ. ಆದರೆ ಈ ಉಗಾಭೋಗದ ಮೊದಲಿಗೆ ಅವರು ..... ಹೀಗಿರದೆ ದಾಸವೇಷ ಧರಿಸಿದರೆ ಅವನನ್ನು ಈಶ ಒಪ್ಪುವುದಿಲ್ಲ. ಆ ಮಾತನ್ನು ಸಹ ವಿಜಯದಾಸರೂ ಹೇಳಿರುವರು ಎಂದಿರುವುದರಿಂದ ಇದು ವಿಜಯದಾಸರದೇ ಎಂದು ತಿಳಿಯುತ್ತದೆ.

ದಾಸನಿಗೆ ವೇಷ ಮುಖ್ಯವಲ್ಲ ಹರಿ ನಾಮಸುಧಾನುಭವಿ ಆಗಿರುವುದು ಮುಖ್ಯ ಎಂಬಂಶವನ್ನು ಈ ಉಗಾಭೋಗದಲ್ಲಿ ವಿಜಯದಾಸರು ಒತ್ತಿ ಹೇಳಿದ್ದಾರೆ.

ಉ. ೫೧

ಪ್ರಮೋದ ಸಂವತ್ಸರದಲೆನ್ನವರಿಗೆ ರೋಮಕೊಂಕದು .... : ಚಾಗಿ ಕೇಶವರಾಯನಿಗೆ ಅಪಮೃತ್ಯು ಬಂದ ವರ್ಷ ಈ ಉಗಾಭೋಗದಿಂದ ತಿಳಿಯುತ್ತದೆ. ಕ್ರಿ.ಶ. ೧೮ನೇ ಶತಮಾನದಲ್ಲಿ ಪ್ರಮೋದ ಸಂವತ್ಸರವು ಕ್ರಿ.ಶ.೧೭೫೦ರಲ್ಲಿ ಬರುತ್ತದೆ. ಆದಕಾರಣ ಕೇಶವರಾಯನ ಪ್ರಸಂಗ ನಡೆದಿದ್ದು, ಕ್ರಿ.ಶ.೧೭೫೦ರಲ್ಲಿ ಎನ್ನಬಹುದು.

(ಆಕರ: ಹರಿದಾಸ ಸಾಹಿತ್ಯ ಒಂದು ಅವಲೋಕನ (ಪು.೧೫೦–೫೧: ಬೇಲೂರು ಕೇಶವದಾಸರು:೧೯೮೦ (ದ್ವಿ.ಮು.) ಗೀತಾಬುಕ್ ಹೌಸ್, ಮೈಸೂರು)

ಉ. ೫೨

ಭೂಪತಿಗೆ ಬಂದ ದುಸ್ತರವಾದ ಕುಹುಯೋಗ ಬಿಡಿಸಿದರು : "ಕುಹುಯೋಗವೆಂದರೆ ಯಾವ ರಾಜನ ಜಾತಕದಲ್ಲಿ ಲಗ್ನದಿಂದ ೧೨ನೆಯ ಸ್ಥಾನದಲ್ಲಿ ರವಿ, ಶನಿ, ಕುಜರು ರಾಹುವಿನಿಂದ ಸಂಗತರಾಗಿ ಚಂಡಾಲತ್ವವನ್ನು ಹೊಂದುವರೋ ಆ ರಾಜನು ನಿಶ್ಚಯವಾಗಿಯೂ ನಾಶವನ್ನು ಹೊಂದುವನು" ಹೀಗೆ ಉಕ್ತಗ್ರಹಗಳು ಸೇರುವಿಕೆಗೆ ಕುಹುಯೋಗವೆಂದು ಹೆಸರು. (ಜ್ಯೋತಿಸ್ಸಾರ ಸಂಗ್ರಹದಿಂದ)

ಶ್ರೀ ಕೃಷ್ಣದೇವರಾಯನಿಗೆ ಈ ಕುಹುಯೋಗವು ವಿಕ್ರಮ ಸಂವತ್ಸರ ಮಾಘ ಬಹುಳ ಅಮಾವಾಸ್ಯೆ (ಕ್ರಿ.ಶ.೧೫೨೧)ಯಂದು ಬಂದಿತು. ಕೃಷ್ಣದೇವರಾಯನು ಮರಣ ಭಯದಿಂದ ವ್ಯಾಸರಾಜರಲ್ಲಿ ಶರಣಾದನು. ...... ರಾಜ್ಯತ್ಯಾಗದಿಂದ ವಿಪತ್ತು ಪರಿಹಾರವಾಗುವುದು ಎಂದು ತಿಳಿದು ಕುಹುಯೋಗ ಸಾಧಿಸಿದ ಮುಹೂರ್ತದಲ್ಲಿ ತನ್ನ ರಾಜ್ಯವನ್ನು ವ್ಯಾಸರಾಜರಿಗೆ ಒಪ್ಪಿಸಿದನು. ಕುಹುಯೋಗ ಕಳೆದ ನಂತರ ವ್ಯಾಸರಾಜರು ರಾಜ್ಯವನ್ನು ಕೃಷ್ಣದೇವರಾಯನಿಗೇ ತಾವಾಗಿ ಒಪ್ಪಿಸಿದರು. (ಶ್ರೀ ವ್ಯಾಸರಾಜ ಸಾರ್ವಭೌಮರು ಪು.೧೯೫-೧೯೬ - ಲೇ. ಟಿ.ಕೆ.ವೇಣುಗೋಪಾಲದಾಸರು)

ಉ. ೫೩

ಯೋಗಿ ವ್ಯಾಸಮುನಿಗೆ ಬಂದ ಉರಗಭಾಧೆಯ ಕಳೆದು ಪಾಲಿಸಿದರು . . . : ಶ್ರೀಪಾದರಾಜರ ಬಳಿ ವ್ಯಾಸರಾಯರು ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ಒಮ್ಮೆ ವ್ಯಾಸರಾಯರು ಅಸಂಪ್ರಜ್ಞಾತ ಸಮಾಧಿಯಲ್ಲಿ ಕುಳಿತಾಗ ದೊಡ್ಡ ಘಟಸರ್ಪ ಬಂದು ಅವರ ದೇಹವನ್ನು ಸುತ್ತಿಕೊಂಡಿತು. ಅದನ್ನು ಕಂಡು ಶ್ರೀಪಾದರಾಜರು ಆ ಸರ್ಪವು ಶೇಷದೇವರೆಂದೇ ನಿಶ್ಚಯಿಸಿ ಸರ್ಪಭಾಷೆಯಿಂದ ಮಾತನಾಡಿಸಿದಾಗ ಅದು ಈ ವ್ಯಾಸರಾಜರು ಮುಂದೆ ಶ್ರೀ ಮಧ್ವಶಾಸ್ತ್ರವನ್ನು ವ್ಯಾಖ್ಯಾನಮಾಡುವುದರಿಂದ ತಾವು ಆ ಶೇಷರೂಪದಿಂದ ಅವರಲ್ಲಿ ತಾವು ಇರುವುದಾಗಿ ತಿಳಿಸಿ ಕಣ್ಮರೆಯಾದರು. ಈ ಪ್ರಸಂಗವನ್ನು ಗೋಪಾಲದಾಸರು ತಮ್ಮ ವ್ಯಾಸರಾಯರ ದಿವ್ಯ ಪಾದ ಕಮಲವನು ಸೇವಿಸುವ ಭಕುತರಿಗೆ" ಎಂಬ ಕೀರ್ತನೆಯಲ್ಲಿ ಪ್ರಸ್ತಾಪಿಸಿದ್ದಾರೆ. (ಶ್ರೀ ವ್ಯಾಸರಾಜ ಸಾರ್ವಭೌಮ - ಟಿ.ಕೆ.ವೇಣುಗೋಪಾಲದಾಸರು ಪು.೫೦-೫೧)

ಸ್ನಾನವನು ಮಾಡಿ ಅಸಂಪ್ರಜ್ಞಾತ ಸಮಾಧಿಯಲಿ
ಧ್ಯಾನಕ್ಕೆ ಕುಳಿತಿರಲು

ಶ್ರೀನಿವಾಸನ ಪ್ರೇರಣೆಂದ ಸರ್ಪವು ಬಂದು
ನಾನಾ ಅಂಗಕೆ ಸುತ್ತಲು
ಜ್ಞಾನನಿಧಿ ಶ್ರೀಪಾದರಾಯ ಇದನು ತಿಳಿದು

ತಾನು ಮತ್ತಲ್ಲಿ ಬಂದು
ಜ್ಞಾನಪೂರ್ವಕವಿ ಅಹಿಯೊಡನೆ ಮಾತಾಡಿ ಮಾರ–
ವನು ಮಾಡಿ ನೋಡಿ ನೀನು ಮನುಜನಲ್ಲೆಂದು.

[ಶ್ರೀ ಗೋಪಾಲದಾಸರ ಕೃತಿಗಳು ಪೂ ೨೨/–೨೨೨)
ಸಂ: ಡಾ. ಟಿ ಎನ್ ನಾಗರತ್ನ.]

ಉ. ೫೧

ಪುರಂದರ ದಾಸರು ವೈಶ್ಯ ಮಾದಮ್ಮನ ವರಕುಮಾರಕನ ಬದುಕಿಸಿದರು ಗಡ . . . . : ಈ ಪ್ರಸಂಗವನ್ನು ವಿಜಯದಾಸರು ಬಹುಶ: ತಮ್ಮ ಕಾಲದಲ್ಲಿ ಪ್ರಚಲಿತವಾದ ಸಂಗತಿಯನ್ನು ಆಧರಿಸಿ ಬರೆದಿರಬಹುದು. ಆದರೆ ಖಚಿತವಾಗಿ ಯಾವ ಮೂಲದಿಂದ ಈ ಸಂಗತಿಯನ್ನು ಪಡೆದರು, ಪ್ರಸಂಗದ ವಿವರಗಳೇನು? ಮತ್ತು ಇತರ ಹರಿದಾಸರು ಪುರಂದರ ದಾಸರನ್ನು ಕುರಿತು ಹಾಡಿದಾಗ ಈ ಪ್ರಸಂಗವನ್ನು ಉಲ್ಲೇಖಿಸಿದ್ದಾರೆಯೇ? ಎಂಬುದು ತಿಳಿಯದು. [ಸಂ]

ಉ. ೫೨

ಒಂದೇ ಮೂರುತಿ ಎರಡೊಂದೆನಿಸಿ . . . . : ಬ್ರಹ್ಮನು ಸೃಷ್ಟಿಕರ್ತ, ವಿಷ್ಣು ಸ್ಥಿತಿಕರ್ತ, ಈಶ್ವರ ಲಯಕರ್ತ ಎಂದು ದ್ವೈತಸಿದ್ಧಾಂತ ತಿಳಿಸುವುದಾದರೂ ಬ್ರಹ್ಮ ಮತ್ತು ಈಶ್ವರರಿಗೆ ಅವರವರ ಕರ್ತವ್ಯಗಳನ್ನು ನಿರ್ವಹಿಸಲು ವಿಷ್ಣು ಶಕ್ತಿಯನ್ನು ಕೊಟ್ಟರೆ ಮಾತ್ರ ಸಾಧ್ಯವಾಗುವುದೆಂದು ಹೇಳಲಾಗಿದೆ. ಎರಡೊಂದು ಎಂದರೆ ಮೂರು ಎಂದರ್ಥ ಮೂರು ಎಂದರೆ ಬ್ರಹ್ಮವಿಷ್ಣುಮಹೇಶ್ವರ ತ್ರಿಮೂರ್ತಿಗಳು.

ಉ. ೫೩

ಒಂದಕೊಂದಾನಂತ ಅನಂತ ಒಂದೋ .... : ಅನಾದಿ ನಿತ್ಯನಾಗಿರುವ ಪರಮಾತ್ಮ ಅನಂತರೂಪಗಳನ್ನು ಧರಿಸಬಲ್ಲನಾದರೂ ಆ ರೂಪಗಳಿಗೆ ಗುಣಶಕ್ತಿಗಳಲ್ಲಿ ಭೇದವಿಲ್ಲವೆಂಬುದನ್ನು ಹೇಳುತ್ತದೆ. (ಕೆ.ಗೋಕುಲನಾಥ್: ಶ್ರೀ ವಿಜಯದಾಸರ ಉಗಾಭೋಗಗಳು ಟಿಪ್ಪಣಿ ಪುಟ ೪೮–೪೯)

ಉ. ೫೪

ಕರ್ಮವೆಂಬುದ ತೊರೆದು ಜ್ಞಾನಾಂಬುಧಿಯೊಳಗಿರು ..... ; "ಕರ್ಮಗಳಾಚರಣೆಯಿಂದ ಜ್ಞಾನ ಲಭ್ಯವೆನ್ನುವುದಾದರೂ ಜ್ಞಾನಕ್ಕೆ ಸಾಧಕವಾಗದ ಕರ್ಮದಿಂದ ಪ್ರಯೋಜನವಿಲ್ಲವೆಂದು ಹರಿದಾಸರು ಹೇಳುತ್ತಾರೆ. ಸತ್ಕರ್ಮಾಚರಣೆಯಲ್ಲಿಯೂ ಶ್ರೀ ಹರಿಯ ಪ್ರೇರಣೆ, ಕರ್ತೃತ್ವವನ್ನು

ಚಿಂತಿಸಬೇಕು. ಹೃದಯ ಕಮಲದಲ್ಲಿ ಬಿಂಬ ಮೂರುತಿಯ ದರ್ಶನ ಉಂಟಾಗುತ್ತಿರುವಾಗ ಜಡಕರ್ಮಕ್ಕಾಗಿ ಹಾತೊರೆಯಬೇಕಾಗಿಲ್ಲ". (ಶ್ರೀ ವಿ.ಉ.ಕೆ.ಗೋ. ಪು.೪೮)

ಉ. ೫೮

ಗುರುನಂದನನಾಗಿ ಶರವನು ಎಸೆದು ಬೆಂಡಾಗಿನಿಂದ . . . : ಕುರುಕ್ಷೇತ್ರದಲ್ಲಿ ಯುದ್ಧದಲ್ಲಿ ಶಿವನ ಅವತಾರವೆನಿಸಿದ ಅಶ್ವತ್ಥಾಮ ಕೃಷ್ಣನನ್ನು ಸೋಲಿಸಲಾಗದ ಪ್ರಸಂಗ ಮತ್ತು ಉತ್ತರೆಯ ಗರ್ಭದ ಮೇಲೆ ಅಶ್ವತ್ಥಾಮ 'ನಿಷ್ಪಾಂಡವಾಸ್ತು' ಎಂಬ ಬಾಣ ಪ್ರಯೋಗಿಸಿದಾಗ ಅದನ್ನು ಕೃಷ್ಣ ವ್ಯರ್ಥಗೊಳಿಸಿದ ಪ್ರಸಂಗಗಳನ್ನು ದಾಸರು ಇಲ್ಲಿ ಉಲ್ಲೇಖಿಸಿದ್ದಾರೆ. ಆ ಮೂಲಕ ವಿಷ್ಣು ಪಾರಮ್ಯವನ್ನು ಪ್ರತಿಪಾದಿಸಿದ್ದಾರೆ. ಶೈವಕೃತಿಗಳಲ್ಲಿ ಶಿವಪಾರಮ್ಯವನ್ನೂ, ವೈಷ್ಣವ ಕೃತಿಗಳಲ್ಲಿ ವಿಷ್ಣು ಪಾರಮ್ಯವನ್ನೂ ಎತ್ತಿ ಹಿಡಿಯುವ ಪ್ರಸಂಗಗಳನ್ನು ನಿರೂಪಿಸುವುದು ಭಾರತಿಯ ಪೌರಾಣಿಕ ಸಾಹಿತ್ಯದಲ್ಲಿ ನಡೆದು ಬಂದ ಪರಂಪರೆಯಾಗಿದೆ. (ಕೆ.ಗೋ–ಶ್ರೀ ವಿ.ಉ.ಪು.೪೮)

ಉ. ೫೯

ನಿರಯಣ ಸಮಯಕ್ಕೆ ನಿನ್ನ ನಾಮಗಳು ಉಚ್ಚರಣೆಯಾಗುವಂತೆ ಪ್ರೇರಿಸಬೇಕು . . . : ಮರಣ ಕಾಲದಲ್ಲಿ ಪರಮಾತ್ಮನ ಸ್ಮರಣೆ ಆಗುವುದು ಮುಖ್ಯ. ಜೀವಿತಾವಧಿಯ ಉಳಿದ ಕಾಲಗಳಲ್ಲೂ ಅಗತ್ಯವೇ. ಎಷ್ಟೋ ಸಲ ಸದಾ ಹರಿಸ್ಮರಣೆ ಮಾಡುತ್ತಿದ್ದರೂ ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡರು ಎಂಬಂತೆ ಮರಣ ಕಾಲದಲ್ಲಿ ಸಾಧ್ಯವಾಗದಿರಬಹುದು. ಏಕೆಂದರೆ ಆ ಕಾಲದಲ್ಲಿ ಪ್ರಾಣದಾಸೆಯಿಂದಲೋ ಸಾವಿನ ಭಯದಿಂದಲೇ ದೇಹಬಾಧೆಯಿಂದಲೋ ಕರಣಗಳ ದೋಷದಿಂದಲೋ ಹರಿಸ್ಮರಣೆ ತಪ್ಪುವ ಸಂಭವವೇ ಹೆಚ್ಚು. ಅದಕ್ಕಾಗಿ ವಿಜಯದಾಸರು ಈ ಉಗಾಭೋಗದಲ್ಲಿ ಅಂತ್ಯಕಾಲದಲ್ಲಿ ಹರಿಸ್ಮರಣೆಯನ್ನು ಮಾಡುವ ಭಾಗ್ಯವನ್ನು ಕರುಣಿಸೊ ತಂದೆ ಎಂದು ಕೋರಿದ್ದಾರೆ.

ಉ. ೬೦

ಚಾಗಿ ಕೇಶವರಾಯನನ್ನು ಬದುಕಿಸಲು ಆತನ ಸತಿ ದಾಸರಲ್ಲಿ ಮೊರೆ ಇಟ್ಟಾಗ ದಾಸರು ಮಾಡಿದ ಪ್ರಾರ್ಥನೆ. ಸುಮಾರು ೧೫ ಉಗಾಭೋಗಗಳು ಚಾಗಿ ಕೇಶವರಾಯನನ್ನು ಬದುಕಿಸಿದ ಪ್ರಸಂಗಕ್ಕೆ ಸಂಬಂಧಿಸಿದಂತೆ ವಿಜಯದಾಸರು ರಚನೆ ಮಾಡಿದ್ದಾರೆ. (ಉಗಾಭೋಗ ಸಂಖ್ಯೆ ನೋಡಿ–೬, ೧೬, ೧೮, ೨೨, ೨೫, ೩೩, ೩೪, ೪೧, ೪೪, ೪೫, ೫೨, ೫೩, ೫೫, ೫೭, ೬೦)

ಉ–೫೩ ಮತ್ತು ೫೪ ಮತ್ತು ೫೫ ಮತ್ತು ೫೬

ವಿವರಣೆಗೆ ಉ–೫೨ ನೋಡಿ.

ಉ-೬೩ ಮತ್ತು ೬೪

ಅನ್ಯಮತ ಖಂಡನೆ ಎಂಬುದು ದ್ವೈತಿ ಅದ್ವೈತಿಗಳಲ್ಲಿ ಕಂಡುಬರುವ ಒಂದು ಸಂಗತಿ. ಹತ್ತಾರು ಗ್ರಂಥಗಳೇ ಇದಕ್ಕಾಗಿ ರಚಿತವಾಗಿವೆ. ಸಿದ್ಧಾಂತದ ಪ್ರತಿಪಾದನೆಗಾಗಿ ಸ್ವಧರ್ಮ ಹಿರಿಮೆ ಎತ್ತಿ ಹೇಳುವ ಆಶಯದಿಂದ ಈ ರೀತಿಯ ರಚನೆಗಳು ರಚಿತವಾಗಿರುವುದನ್ನು ಕಾಣಬಹುದು. ಇಂಥ ಕೃತಿಗಳಲ್ಲಿ ವಾಚ್ಯಾರ್ಥ ಗ್ರಹಿಸಬಾರದು. ಆಶಯಕ್ಕೆ ತಕ್ಕಂತೆ ತಾರ್ಕಿಕತೆ, ಪಾಂಡಿತ್ಯ ಸ್ವಧರ್ಮ ಶ್ರದ್ಧೆ ಇವುಗಳನ್ನು ಗುರುತಿಸಬೇಕು. ಅದ್ವೈತವನ್ನು ಮಾಯಾವಾದವೆಂದು ಹೇಳಿ ಖಂಡಿಸಿದೆ. ಹರಿದಾಸರ ಕೃತಿಗಳಲ್ಲಿ ಕಂಡುಬರುವ ಭಿನ್ನ ದೃಷ್ಟಿಕೋನ ಇಲ್ಲಿದೆ.

ಉ. ೭೪

ಎರಡು ವರುಷ ಎನ್ನಾಯು ಎರೆದೆ ಧಾರೆಯ ಇವಗೆ ...... : "ಮಗ ಶೇಷಗಿರಿದಾಸನ ಆಪತ್ಪರಿಹಾರಕ್ಕಾಗಿ ರಚಿಸಿದ ಉಗಾಭೋಗ ಎಂದು ಹರಿದಾಸರತ್ನಂ ಗೋಪಾಲದಾಸರು ಹೇಳಿದರೆ ಡಾ.ಕೆ.ಗೋಕುಲನಾಥ್ ಅವರು ಈ ಉಗಾಭೋಗ ಯಾರಿಗಾಗಿ ರಚಿತವಾದುದು ಎಂಬುದು ತಿಳಿದು ಬರುವುದಿಲ್ಲ. ಈ ಉಗಾಭೋಗ ಶೇಷಗಿರಿದಾಸರಿಗಾಗಿ ರಚಿತವಾದದು ಅಲ್ಲ ಏಕೆಂದರೆ ಶೇಷಗಿರಿದಾಸರಿಗೆ ಮಕ್ಕಳಾದುದಕೆ ದಾಖಲೆ ಇಲ್ಲ – ಐತಿಹ್ಯವೂ ಇಲ್ಲ" ಎನ್ನುತ್ತಾರೆ. (ವಿವರಗಳಿಗೆ ನೋಡಿ ಶ್ರೀ ವಿಜಯದಾಸರ ಉಗಾಭೋಗಗಳು. ಟಿಪ್ಪಣಿ ಪುಟ ೫೩. ಶ್ರೀ ವಿಜಯದಾಸರ ಜೀವನಚರಿತ್ರೆ – ಗೋಪಾಲದಾಸರು)

ಇದೊಂದು ಮುಂಡಿಗೆ. ಮುಂಡಿಗೆ ಎಂದರೆ "ಒಗಟಿನಂಥ ಹಾಡು. ಬೆಡಗಿನ ಪದ ಎಂಬುದು ಅದರ ನಿರ್ದಿಷ್ಟ ಹಾಗೂ ಉದ್ದಿಷ್ಟಾರ್ಥ" (ಕನಕಕಿರಣ ಪು.೧೯೨ ಎನ್.ಎಸ್.ತಾರಾನಾಥ್) ಬೆಡಗಿನ ವಚನಗಳು ಇದ್ದಂತೆ ಇಲ್ಲಿಯ ಭಾಷೆ ಸರಳವಾದರೂ ಸಂಕೇತಗಳಿಂದ ಕೂಡಿ ತತ್ತ್ವವನ್ನು ತಿಳಿಸುವಂಥ ರಚನೆಗಳು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ಬಳಸುವ ಸಾಂಕೇತಿಕ ಭಾಷೆಯ ರಚನೆಗಳು ಎನ್ನಬಹುದು. ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳಲ್ಲಿ ವಿಶೇಷವಾಗಿ ಸಿಗುತ್ತವೆ. ಸಾಮಾನ್ಯವಾಗಿ ವಚನ ಸಾಹಿತ್ಯದಲ್ಲಿ ಇಂಥ ರಚನೆಗಳನ್ನು ಬೆಡಗಿನ ವಚನಗಳೆಂದೂ ಹರಿದಾಸ ಸಾಹಿತ್ಯದಲ್ಲಿ ಮುಂಡಿಗೆಗಳೆಂದು ಕರೆಯುತ್ತಾರೆ. ವಿಜಯದಾಸರ ರಚನೆಗಳು ಹಲವಾರು ಈ ಬಗೆಯವು

ಮೂರೊಂದು ಪುರುಷಾರ್ಥ = ನಾಲ್ಕು (ಧರ್ಮ ಅರ್ಥ ಕಾಮ ಮೋಕ್ಷ) ಪುರುಷಾರ್ಥಗಳಲ್ಲಿ

ಮೂರೊಂದ್ವಾದಿ ಬೇಡು = (ಸಾಯುಜ್ಯ, ಸಾರೂಪ್ಯ,ಸಾಲೋಕ್ಯ ಸಾಮೀಪ್ಯ) ನಾಲ್ಕು ಬಗೆ ಮೋಕ್ಷಗಳು

ಮೂರೊಂದು ಮೊಗನಯ್ಯ = (ಬ್ರಹ್ಮನ ೪ ಮುಖಗಳು)

ಮೂರೊಂದುಪಾಯ = ಸಾಮ, ಭೇದ, ದಾನ, ದಂಡ

ಮೂರೊಂದು ಪ್ರಳಯಮಾಳ ಎನ್ನ= ದಿನ ಪ್ರಳಯ, ಯುಗ ಪ್ರಳಯ, ಮನು ಪ್ರಳಯ ಮಹಾ ಪ್ರಳಯರಚನೆಗಳಾಗಿವೆ.

ಭಾಷಾಸಿದ್ಧಿಯ ಜೊತೆಗೆ ಆಧ್ಯಾತ್ಮಿಕ ಸಿದ್ಧಿಯೂ ಅಗತ್ಯ ಇಂಥ ಮುಂಡಿಗೆಗಳನ್ನು ಬಿಡಿಸಲು. ಆ ಪೈಕಿ ಇದೊಂದು.

ಮೂರೊಂದು ಯುಗದಲ್ಲಿ = ನಾಲ್ಕು (ಕೃತ, ತ್ರೇತಾ, ದ್ವಾಪರ, ಕಲಿಯುಗ) ಯುಗಗಳಲ್ಲಿ

ಮೂರೊಂದು ವರ್ಣದ = ನಾಲ್ಕು (ಬಿಳುಪು ಕೆಂಪು ಪೀತ ನೀಲವರ್ಣ) ವರ್ಣಗಳಲ್ಲಿ

ಮೂರೊಂದು ಕಡೆ ಬಿಂಬ = ನಾಲ್ಕು (ಸ್ವರೂಪ, ಲಿಂಗ, ಅನಿರುದ್ಧ)

ಮೂರೊಂದು ಆಗಿ ಭಜಿಸು = ನಾಲ್ಕನ್ನು (ಸತ್, ಚಿತ್, ಆನಂದ, ಆತ್ಮ) ಭಜಿಸು

ಮೂರೊಂದು ಯುಗದಲ್ಲಿ = ನಾಲ್ಕು (ಕೃತ, ತ್ರೇತಾ, ದ್ವಾಪರ, ಕಲಿಯುಗ) ಯುಗಗಳಲ್ಲಿ

ಮೂರೊಂದು ವರ್ಣದ = ನಾಲ್ಕು (ಬಿಳುಪು ಕೆಂಪು ಪೀತ ನೀಲವರ್ಣ) ವರ್ಣಗಳಲ್ಲಿ

ಮೂರೊಂದು ಕಡೆ ಬಿಂಬ = ನಾಲ್ಕು (ಸ್ವರೂಪ, ಲಿಂಗ, ಅನಿರುದ್ಧ)

ಮೂರೊಂದು ಆಗಿ ಭಜಿಸು = ನಾಲ್ಕನ್ನು (ಸತ್, ಚಿತ್, ಆನಂದ, ಆತ್ಮ) ಭಜಿಸು

ಆಕರ: ದಾಸಸಾಹಿತ್ಯ ವಾಹಿನಿ ಪುಟ.೭೦–ಅರಳು ಮಲ್ಲಿಗೆ ಪಾರ್ಥಸಾರಥಿ.

ಅನುಬಂಧ – ೩ (ಅ)

ಅಂಕಿತನಾಮಸೂಚಿ (ಕೀರ್ತನೆಗಳು)

ಖ

ಗ

ದ

ಧ

ಶ

ಅನುಬಂಧ – ೩ (ಆ)

ಅಂಕಿತನಾಮಸೂಚಿ (ಉಗಾಭೋಗಗಳು)

ಅನುಬಂಧ–೪ (ಅ)

ಕೀರ್ತನೆಗಳ ಅಕಾರಾದಿ

ಅನುಬಂಧ–೪ (ಆ)

ಉಗಾಭೋಗಗಳ ಅಕಾರಾದಿ

ಸೂಚನೆ

ಉಗಾಭೋಗಗಳ ಅಕಾರಾದಿಗೆ ಉಗಾಭೋಗಗಳ ಕ್ರಮಸೂಚಿ ನೋಡುವುದು

ಅನುಬಂಧ-೫ (ಅ)

ಸಹಾಯಕ ಸಾಹಿತ್ಯ (ಕೀರ್ತನೆಗಳು)

೧ ಶ್ರೀ ವಿಜಯದಾಸರ ಪದಗಳು (ಭಾಗ-೧) (೧೯೫೩. ಪ್ರ,ಮು)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರ

೨ ಶ್ರೀ ವಿಜಯದಾಸರ ಪದಗಳು (ಭಾಗ-೨) (೧೯೫೩. ಪ್ರ,ಮು)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರ

೩ ವಿಜಯದಾಸರ ಹಾಡುಗಳು(೧೯೯೪. ತೃ. ಮು)
ಸಂ: ಕಾವ್ಯಪ್ರೇಮಿ
ಸಹ ಸಂಪಾದಕರು: ಚಿದಂಬರ ಇನಾಂದರ, ವಿ.ಅರ್ರ ಬೇಗೂರ
ಪ್ರ: ಸಮಾಜ ಪುಸ್ತಕಾಲಯ, ಧಾರವಾಡ.

೪ ಶ್ರೀ ವಿಜಯದಾಸರ ಕೀರ್ತನೆಗಳು (೧೯೬೮, ದ್ವಿ.ಮು)
ಸಂ: ಸುಬೋಧ ಎಂ ರಾಮರಾವ್
ಪ್ರ: ಸುಬೋಧ ಪ್ರಕಟನಾಲಯ, ಚಾಮರಾಜಪೇಟೆ, ಬೆಂಗಳೂರು

೫ ವಿಜಯದಾಸರ ಕೀರ್ತನೆ(ಭಾಗ-೧, ೧೯೨೨, ಪ್ರ.ಮು)
ಸಂ: ಪಾವಂಜೆ ಗುರುರಾವ್
ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ

೬ ವಿಜಯದಾಸರ ಕೀರ್ತನೆ(ಭಾಗ-೧, ೧೯೨೯, ದ್ವಿ.ಮು ಪರಿಷ್ಕೃತ)
ಸಂ: ಪಾವಂಜೆ ಗುರುರಾವ್
ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ

೭ ವಿಜಯದಾಸರ ಕೀರ್ತನೆ (ಭಾಗ-೨, ೧೯೨೯ ವಿಸ್ತೃತ ಮುದ್ರಣ)
ಸಂ: ಪಾವಂಜೆ ಗುರುರಾವ್
ಪ್ರ: ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯ, ಉಡುಪಿ

೮ ಶ್ರೀ ವಿಜಯದಾಸರ ಕೀರ್ತನೆಗಳು (೧೯೯೬)
ಸಂ: ನಾರಾಯಣಾಚಾರ್ಯ
ಪ್ರ: ಶ್ರೀ ವಾರಿಧಿ ಪ್ರಕಟನ ಮಂದಿರ, ಬಸವನಗುಡಿ, ಬೆಂಗಳೂರು.

೯ ಭಜನಮಂಜರಿ (೧೯೮೬)
ಸಂ: ಕೆ.ಎಲ್.ಪುಷ್ಕರಾಚಾರ್ಯ ಮತ್ತು ದಿ॥ಜೆ.ಹೆಚ್,ಬಿ ಆಚಾರ್ಯ
ಪ್ರ: ನಾರಾಯಣಾಚಾರ್ ಪೂಜಾ ಭಂಡಾರ್ರ, ಮಾಡೆರ್ಲ ಹೌಸ್ ಬೀದಿ,
ಬಸವನಗುಡಿ, ಬೆಂಗಳೂರು–೪

೧೦ ಶ್ರೀ ಗುರುಸಾರ್ವಭೌಮ ರಾಘವೇಂದ್ರ ತೀರ್ಥರು (೧೯೮೩ ಪ್ರ.ಮು)
ಸಂ: ಎಚ್.ಎಸ್, ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠಲ ಪ್ರಕಾಶನ, ೫ನೇ ಕ್ರಾಸ್,
ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೧೯

೧೧ ಭಜನ ಕೌಸ್ತುಭ (ಸಂಪುಟ–೧, ಪ್ರ.ಮು ೧೯೯೩)
ಸಂ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠಲ ಪ್ರಕಾಶನ, ೫ನೇ ಕ್ರಾಸ್,
ನರಸಿಂಹರಾಜಕಾಲೋನಿ, ಬೆಂಗಳೂರು–೫೬೦೦೧೯.

೧೨ ಭಜನ ಕೌಸ್ತುಭ (ಸಂಪುಟ–೨, ಪ್ರ.ಮು ೧೯೯೩)
ಸಂ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಹೆಚ್.ಎಸ್. ಶ್ರೀನಿವಾಸಮೂರ್ತಿ, ಶ್ರೀ ಹರಿದಾಸ ಸಾಹಿತ್ಯ
ಪ್ರಚಾರಮಾಲೆ, ಬೆಂಗಳೂರು.

೧೩ ಭಜನ ಕೌಸ್ತುಭ (ಸಂಪುಟ–೩, ಪ್ರ.ಮು ೧೯೯೪)
ಸಂ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠಲ ಪ್ರಕಾಶನ, ೫ನೇ ಕ್ರಾಸ್,
ನರಸಿಂಹರಾಜಕಾಲೋನಿ, ಬೆಂಗಳೂರು–೫೬೦೦೧೯.

೧೪ ಶ್ರೀ ಹರಿಗುರು ಭಜನ ಚಂದ್ರಕಾ (೧೯೯೬, ಹನ್ನೆರಡನೇ ಮುದ್ರಣ)
ಸಂ: ಕೃಷ್ಣದಾಸ ಮುರಗೋಡ, ಬೆಂಗಳೂರು
ಪ್ರ: ಕೃಷ್ಣದಾಸ ಮುರಗೋಡ, ಬೆಂಗಳೂರು

೧೫ ಶ್ರೀ ವರಮಹಾಲಕ್ಷ್ಮೀ ಹಾಡುಗಳು (ದ್ವಿ.ಮು. ೧೯೮೭)
ಸಂ: ಅ.ರಾ. ಪಂಚಮುಖಿ
ಪ್ರ: ಶ್ರೀ ರಾಘವೇಂದ್ರ ತೀರ್ಥ ಪ್ರತಿಷ್ಠಾಪನಾ. ಪವಮಾನ ಸದನ
ಧಾರವಾಡ-೭

೧೬ ತಾರತಮ್ಯೋಕ್ತ ಶ್ರೀ ಹರಿ ಭಜನಾಮೃತಕಲಶ (೧೯೯೫. ದ್ವಿ. ಮು)
ಸಂ: ಪ್ರಹ್ಲಾದಾಚಾರ್ಯ. ಕೃ.ಜೋಷಿ, ಕುಷ್ಟಗಿ, ರಾಯಚೂರು
ಪ್ರ: ಶ್ರೀ ಆನಂದತೀರ್ಥ ಪ್ರತಿಷ್ಠಾನ, ಪೇಜಾವರ ಮಠ, ಉಡುಪಿ.

೧೭ ಹರಿದಾಸ ಕೀರ್ತನ ಮಂಜರಿ (೧೯೮೫. ಪ್ರ.ಮು)
ಸಂ: ಪ್ರೊ. ವಿ.ಎ. ಜೋಶಿ.
ಪ್ರ: ಸಮಾಜ ಪುಸ್ತಕಾಲಯ, ಧಾರವಾಡ

೧೮ ಶ್ರೀ ಹರಿಗುರು ಭಜನಾಮಂಜರೀ (೧೯೯೧)
ಸಂ: ಹೆಚ್.ಪಿ. ನಾಗರಾಜರಾವ್
ಪ್ರ: ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನ ಟ್ರಸ್ಟ್ (ರಿ)
ಕಡೂರು-೫೭೭೫೪೮.

೧೯ ಶ್ರೀ ಹರಿಭಜನ ಪದ್ಧತಿ (ಭಾಗ-೧, ಪ್ರ.ಮು ೧೯೮೧)
ಸಂ: ಹರಿದಾಸರತ್ನಂ ಗೋಪಾಲದಾಸರು,
ಪ್ರ: ಹರಿದಾಸರತ್ನಂ ಗೋಪಾಲದಾಸರು,
ನಂ ೧೪೨, ಗವಿಪುರಂಗುಟ್ಟಹಳ್ಳಿ, ಬೆಂಗಳೂರು-೫೬೦೦೦೯

೨೦ ಶ್ರೀ ಹರಿಭಜನ ಪದ್ದತಿ (ಭಾಗ-೨, ಪ್ರ.ಮು ೧೯೮೫)
ಸಂ: ಹರಿದಾಸರತ್ನಂ ಗೋಪಾಲದಾಸರು,
ಪ್ರ: ಹರಿದಾಸರತ್ನಂ ಗೋಪಾಲದಾಸರು,
ನಂ ೧೪೨, ಗವೀಪುರ

೨೧ ಹರಿದಾಸರ ಜನಪ್ರಿಯ ಹಾಡುಗಳು (ಮೊ.ಮು ೧೯೯೬)
ಸಂ: ಡಾ.ಬಿ.ಎನ್.ನಾಗರತ್ನ, ಡಾ.ಮಂದಾಕಿನಿ
ಪ್ರ: ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೨೨ ಹರಿಭಕ್ತಿವಾಹಿನಿ (೧೯೮೩)
ಸಂ: ಡಾ.ಜಿ ವರದರಾಜರಾವ್
ಪ್ರ: ವಿಶ್ವ ಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು.

೨೩ ಭಕ್ತಿ ಸುಮನಾಂಜಲಿ (೧೯೫೦)
ಸಂ: ಮ. ಶ್ರೀ.ದೇಶಪಾಂಡೆ
ಪ್ರ: ಬುರ್ಲಿ ಬಿಂದು ಮಾಧವ, ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ

೨೪ ಹರಿದಾಸ ಭಕ್ತಿಸಾಧನೆ ಅರ್ಥಾತ್ ತಾರತಮ್ಯ ಗೀತಾವಳಿ (೧೯೬೫)
ಸಂ: ಬುರ್ಲಿ ಬಿಂದು ಮಾಧವ
ಪ್ರ: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ

೨೫ ಕನ್ನಡ ಪರಮಾರ್ಥ ಸೋಪಾನ (೧೯೬೯)
ಸಂ: ಡಾ.ರಾ.ದ. ರಾನಡೆ + ಮ.ಶ್ರೀ ದೇಶಪಾಂಡೆ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨೬ ಶ್ರೀ ವಿಜಯದಾಸರ ಜೀವನ ಚರಿತ್ರೆ (ಪ್ರ.ಮು. ೧೯೯೫)
ಲೇ: ಹರಿದಾಸರತ್ನಂ ಗೋಪಾಲದಾಸರು
ಪ್ರ: ವಿಜಯಮಂದಿರ, ಮಾರುತಿನಗರ, ಯಲಹಂಕ, ಬೆಂ–೭೪

೨೭ ಶ್ರೀ ವಿಜಯದಾಸರು (೧೯೭೮ ಪ್ರ.ಮು)
ಲೇ: ಡಾ.ಕೆ. ಗೋಕುಲನಾಥ್
ಪ್ರ: ಸಿಂಧುಶಯನ ಪ್ರಕಾಶನ, ೫ನೇ ಬ್ಲಾಕ್, ರಾಜಾಜಿನಗರ, ಬೆಂ–೧೦

೨೮ ಶ್ರೀ ಕರ್ನಾಟಕ ಭಕ್ತ ವಿಜಯ (೧೯೮೩ ಮೂರನೇ ಮುದ್ರಣ)
ಲೇ: ಬೇಲೂರು ಕೇಶವದಾಸರು
ಪ್ರ: ಉಷಾ ಸಾಹಿತ್ಯಮಾಲೆ, ಮೈಸೂರು

೨೯ ಹರಿದಾಸ ಸಾಹಿತ್ಯ ವೈಭವ (೧೯೮೨)
ಲೇ: ಅರುಳು ಮಲ್ಲಿಗೆ ಪಾರ್ಥಸಾರಥಿ
ಪ್ರ: ಶ್ರೀಪಾದರಾಜ ಮಠ, ಮುಳಬಾಗಿಲು

೩೦ ದಾಸ ಸಾಹಿತ್ಯವಾಹಿನಿ (೧೯೯೭)
ಲೇ: ಅರುಳು ಮಲ್ಲಿಗೆ ಪಾರ್ಥಸಾರಥಿ
ಪ್ರ: ಶೃಂಗಾರ್ ನಾಗರಾಜ್ ಹಾಗೂ ರಾಘವೇಂದ್ರ ಪ್ರಕಾಶನ

೩೧ ಶ್ರೀ ವಿಜಯದಾಸರು (೧೯೭೫)
ಲೇ: ಶ್ರೀ ಕೃಷ್ಣ ಕೊಲ್ಹಾರ ಕುಲಕುರ್ಣಿ
ಪ್ರ: ಐ.ಬಿ.ಹೆಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು

೩೨ ಶ್ರೀ ಕನಕದಾಸರು ಮತ್ತು ಪುರಂದರದಾಸರು (೧೯೭೬)
ಲೇ: ಎಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಉರಗಾದ್ರಿ ವಿಠಲ ಪ್ರಕಾಶನ, ನರಸಿಂಹರಾಜ ಕಾಲೋನಿ
ಬೆಂಗಳೂರು-೧೯

೩೩ ಭಕ್ತಿಯೋಗಿ ಶ್ರೀ ವಿಜಯದಾಸರು (೧೯೯೫)
ಲೇ: ಡಾ. ಶ್ರೀಮತಿ ಮಂದಾಕಿನಿ
ಪ್ರ: ದಾಸ ಸಾಹಿತ್ಯ ಅಧ್ಯಯನ ಕೇಂದ್ರ, ಜವಾಹರ ನಗರ,
ರಾಯುಚೂರು-೧೦೧

೩೪ ಶ್ರೀ ವಿಜಯದಾಸರ ಸ್ತೋತ್ರಗಳು (೧೯೫೪)
ಸಂ: ಹನುಮಂತರಾವ ವೆಂಕಟರಾವ್ ಕುಲಕರ್ಣಿ ಗೊರಗಾಳ
ಪ್ರ: ಸಂಪಾದಕರು, ಲುಂಗಸೂಗೂರ, ರಾಯಚೂರು ಜಿಲ್ಲೆ

೩೫ ಶ್ರೀ ವಿಜಯದಾಸರು(ಅವರನ್ನು ಕುರಿತ ಕೀರ್ತನೆಗಳು) ೧೯೭೮
ಸಂ: ಹೆಚ್.ಎಸ್. ಶ್ರೀನಿವಾಸಮೂರ್ತಿ
ಪ್ರ: ಶ್ರೀ ಉರಗಾದ್ರಿವಾಸ ವಿಠ್ಠಲ ಪ್ರಕಾಶನ
ನರಸಿಂಹರಾಜ ಕಾಲೋನಿ, ಬೆಂಗಳೂರು-೧೯

೩೬ ಹರಿದಾಸರ ನಿಂದಾಸ್ತುತಿಗಳು (೧೯೮೭)
ಸಂ: ಡಾ.ಕೆ ಗೋಕುಲನಾಥ್
ಪ್ರ: ಸಿಂಧುಶಯನ ಪ್ರಕಾಶನ, ಬೆಂಗಳೂರು

೩೭ ಶ್ರೀ ವಿಜಯದಾಸರ ಉಗಾಭೋಗಗಳು (೧೯೮೩)
ಸಂ: ಡಾ.ಕೆ ಗೋಕುಲನಾಥ,
ಪ್ರ: ಸಿಂಧುಶಯನ ಪ್ರಕಾಶನ, ಬೆಂಗಳೂರು

೩೮ ಉಡುಪಿ ಶ್ರೀ ಕೃಷ್ಣಕೃತಿಮಂಜರೀ (೧೯೮೯)
ಸಂ: ಹೆಚ್.ಎಸ್. ನಾಗರಾಜರಾವ್, ಡಾ.ಕೆ ಗೋಕುಲನಾಥ್
ಪ್ರ: ಶ್ರೀ ರಾಘವೇಂದ್ರ ಮಠ, ಕಡೂರು.

೩೯ ಹರಿದಾಸರು ಕಂಡ ಶ್ರೀ ಗುರುಸಾರ್ವಭೌಮರು (೧೯೮೫)
ಸಂ: ರಾಜಾ ಎರ್ಸ ಪವಮಾನಾಚಾರ್ಯ, ಲಿಂಗಸೂಗೂರು ಶ್ರೀನಿವಾಸದಾಸ
ಪ್ರ: ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ, ಮಂತ್ರಾಲಯ

೪೦ ಶ್ರೀ ವಿಜಯದಾಸರ್ಯರ ಚರಿತೆ (೧೯೯೩)
ಲೇ: ಪ್ರಸನ್ನ ಶ್ರೀನಿವಾಸದಾಸರ್ಯ
ಪ್ರ: ಶ್ರೀ ಪ್ರಸನ್ನ ಶ್ರೀನಿವಾಸದಾಸಾರ್ಯರ ಭಕ್ತವೃಂದ
೪೫, ರಾಘವೇಂದ್ರ ಕಾಲೋನಿ, ಬೆಂಗಳೂರು-೧೮

೪೧ ವಿಜಯದಾಸರ ಸುಳಾದಿಗಳು (ಉಪಾಸನಾ ವಿಭಾಗ, ೧೯೬೨)
ಸಂ: ಗೊರಬಾಳ ಹನುಮಂತರಾವ್
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು

೪೨ ವಿಜಯದಾಸರ ಸುಳಾದಿಗಳು (ಪ್ರಮೇಯ ಭಾಗ, ೧೯೫೧)
ಸಂ: ಗೊರಬಾಳ ಹನಮಂತರಾವ್
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು

೪೩ ವಿಜಯದಾಸರ ಸುಳಾದಿಗಳು(ಸೃಷ್ಟಿಪ್ರಕರಣ, ೧೯೯೪)
ಸಂ: ಗೊರಬಾಳ ಹನುಮಂತರಾವ್
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು

೪೪ ವಿಜಯದಾಸರ ಸುಳಾದಿಗಳು (ಭಾಗ-೧, ಸಾಧನಾಭಾಗ, ೧೯೫೦)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಸಾಹಿತ್ಯ ಮಂಡಲ, ಲಿಂಗೂಸೂರು

೪೫ ಶ್ರೀ ವಿಜಯದಾಸರ ಕಂಕಣಾಕಾರ ಸುಳಾದಿ(೧೯೫೭)
ಸಂ: ಹನುಮಂತರಾವ್ ಗೊರಬಾಳ
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗೂಸೂರ

೪೬ ಗಮಕ ಮತ್ತು ಹರಿದಾಸರು (೧೯೮೩)
ಸಂ: ಗಮಕಿ ಎಂ ರಾಘವೇಂದ್ರರಾವ್
ಪ್ರ: ಪೂರ್ಣಿಮಾ ಎಂಟರಪ್ರೈಸಸ್, ಮೈಸೂರು

೪೭ ಶ್ರೀ ಹರಿದಾಸ ಸಾಹಿತ್ಯ (೧೯೮೦)
ಬೇಲೂರು ಕೇಶವದಾಸರು
ಪ್ರ: ಗೀತಾ ಬುಕ್ ಹೌಸ್, ಮೈಸೂರು.

೪೮ ಕನ್ನಡದ ಹರಿದಾಸರು (೧೯೯೬)
ಲೇ: ಕಮಲದಾನಿ ಗುರುರಾಯ
ಪ್ರ: ಶೀಕಾಂತ ಕುಲಕುರ್ಣಿ, ಬುಕ್‌ಸೆಲ್ಲರ್, ಹರಿಹರ

೪೯ ಹರಿದಾಸ ವಾಙ್ಮಯ (೧೯೮೫)
ಸಂ: ಟಿ.ಎನ್ ನಾಗರತ್ನ
ಪ್ರ: ಗಾನಭಾರತಿ, ಕುವೆಂಪು ನಗರ, ಬೆಂಗಳೂರು

೫೦ ಹರಿದಾಸ ಸಾಹಿತ್ಯ ಸಾರ(೧೯೮೭)
ಜಿ.ವರದರಾಜರಾವ್
ಕನ್ನಡ ಅಧ್ಯಯನ ಸಂಸ್ಥೆ , ಮೈ .ವಿ. ವಿ

೫೧ ಶ್ರೀ ವ್ಯಾಸರಾಜ ಗುರುಸಾರ್ವಭೌಮರು(೧೯೯೬. ಎ.ಮು) (ಜೀವನ ಚರಿತ್ರೆ)
ಲೇ: ಟಿ.ಕೆ ವೇಣುಗೋಪಾಲದಾಸರು
ಪ್ರ: ಗುರುರಾಜ ಪ್ರಕಾಶನ, ೩೫, ರಾಮಚಂದ್ರ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು–೧೮

೫೨ ಕನ್ನಡ ಸಂತರ ಪರಮಾರ್ಥಪದ (೧೯೬೨ ಪ್ರ.ಮು ಕೀರ್ತನೆಗಳು)
ಲೇ: ಡಾ.ಅರ್.ಡಿ ರಾನಡೆ ಅನು: ಎಂ.ಎಸ್ ದೇಶಪಾಂಡೆ
ಪ್ರ: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫೩ ಶ್ರೀ ಪುರಂದರ ದಾಸರು (ಜೀವನ ಚರಿತ್ರೆ, ೧೯೯೭ ಎ.ಮು)
ಲೇ: ಟಿ.ಕೆ ವೇಣುಗೋಪಾಲದಾಸರು.
ಪ್ರ: ಗುರುರಾಜ ಪ್ರಕಾಶನ, ಚಾಮರಾಜಪೇಟೆ, ಬೆಂ–೧೮.

ಅನುಬಂಧ–೫ (ಆ)

ಸಹಾಯಕ ಸಾಹಿತ್ಯ (ಉಗಾಭೋಗಗಳು)

೧ ಶ್ರೀ ಜಗನ್ನಾಥದಾಸರು (೧೯೫೬)
ಲೇ: ಡಾ।ಕೆ.ಎಂ.ಕೃಷ್ಣರಾವ್
ಪ್ರ: ಉಷಾ ಸಾಹಿತ್ಯಮಾಲೆ, ಮೈಸೂರು.

೨. ಸಂಶೋಧನ ತರಂಗ (೧೯೬೬)
ಲೇ: ಎಂ.ಚಿದಾನಂದಮೂರ್ತಿ
ಪ್ರ: ಸರಸ ಸಾಹಿತ್ಯ ಪ್ರಕಾಶನ, ಮೈಸೂರು.

೩. ಶ್ರೀ ಹರಿದಾಸರ ಉಗಾಭೋಗಗಳು (೧೯೬೫)
ಸಂ: ಹರಿದಾಸರತ್ನ
ಶ್ರೀ ಗೋಪಾಲದಾಸರು ಪ್ರ: ವಿಜಯಮಂದಿರ, ಮಾರುತಿನಗರ,
ಯಲಹಂಕ, ಬೆಂಗಳೂರು – ೬೪.

೪. ಶ್ರೀ ವಿಜಯದಾಸರ ಸ್ತೋತ್ರಭಾಗ ಸುಳಾದಿಗಳು (೧೯೫೨)
ಸಂ: ಶ್ರೀ ಗೋರಬಾಳ ಹನುಮಂತರಾವ್
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರು.

೫. ಶ್ರೀ ವಿಜಯದಾಸರು: ಜೀವನ ಮತ್ತು ಕೃತಿಗಳ ಸಮೀಕ್ಷೆ (೧೯೭೮)
ಲೇ: ಡಾ। ಕೆ.ಗೋಕುಲನಾಥ್
ಪ್ರ : ಸಿಂಧೂಶಯನ ಪ್ರಕಾಶನ, ರಾಜಾಜಿನಗರ, ಬೆಂಗಳೂರು

೬. ಶ್ರೀ ಪುರಂದರ ಸಾಹಿತ್ಯ–೪ (೧೯೬೫)
ಸಂ: ಬೆಂಗೇರಿ ಹುಚ್ಚೂರಾಯರು ಮತ್ತು ಶ್ರೀ ಕೃಷ್ಣಶರ್ಮ ಬೆಟಗೇರಿ.
ಪ್ರ: ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ.

೭. ಹರಿದಾಸ ಹೃದಯ (೧೯೬೭)
ಲೇ: ಡಾ। ಜಿ.ವರದರಾಜರಾವ್
ಪ್ರ: ಶಾರದಾಮಂದಿರ, ಮೈಸೂರು.

೮. ಶ್ರೀ ವಿಜಯದಾಸರ ಉಗಾಭೋಗಗಳು (೧೯೮೩)
ಸಂ : ಡಾ॥ ಕೆ.ಗೋಕುಲನಾಥ್
ಪ್ರ: ಸಿಂಧುಶಯನ ಪ್ರಕಾಶನ, ಬೆಂಗಳೂರು.

೯. ಶ್ರೀ ವಿಜಯದಾಸರ ಜೀವನಚರಿತ್ರೆ(೧೯೯೫)
ಲೇ: ಹರಿದಾಸರತ್ನಂ ಗೋಪಾಲದಾಸರು
ಪ್ರ: ವಿಜಯ ಮಂದಿರ, ಮಾರುತಿನಿಲಯ, ಯಲಹಂಕ,
ಬೆಂಗಳೂರು –೬೪.

೧೦. ಶ್ರೀ ಭಾಗಣ್ಣದಾಸರ ಸಂಕ್ಷಿಪ್ತ ಜೀವನ ಚರಿತ್ರೆ (೧೯೯೨)
ಲೇ: ಹರಿದಾಸರತ್ನಂ ಗೋಪಾಲದಾಸರು
ಪ್ರ: ವಿಜಯ ಮಂದಿರ, ಮಾರುತಿನಿಲಯ, ಯಲಹಂಕ,
ಬೆಂಗಳೂರು –೬೪.

೧೧. ಕರ್ಣಾಟಕ ಸಂಗೀತವೂ ದಾಸಕೂಟವೂ ಅರ್ಥಾತ್
ಭಾರತೀಯ ಆರ್ಯ ಸಂಗೀತದ ಇತಿಹಾಸವು (೧೯೫೧)
ಲೇ: ಹುಲಗೂರು ಕೃಷ್ಣಾಚಾರ್ಯರು
ಪ್ರ: ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ.

೧೨. ಹರಿದಾಸ ಸಾಹಿತ್ಯಸಾರ (೧೯೮೭)
ಡಾ। ಜಿ.ವರದರಾಜರಾವ್
ಪ್ರ: ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೧೩. ಶ್ರೀ ವಿಜಯದಾಸರ ಪದಗಳು ಭಾಗ–೨
ಸಂ: ಗೋರಬಾಳ ಹನುಮಂತರಾವ್
ಪ್ರ: ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲ, ಲಿಂಗಸೂಗೂರು.

೧೪. ದಾಸ ಸಾಹಿತ್ಯದಲ್ಲಿ ಜಾನಪದ ಅಂಶಗಳು, ಒಂದು ಅಧ್ಯಯನ (೧೯೯೪)
ಲೇ: ಡಾ। ಆರ್.ಸುನಂದಮ್ಮ
ಪ್ರ: ಡಾ। ಆರ್.ಸುನಂದಮ್ಮ, ಸಂಶೋಧನಾ ಸಹಾಯಕಿ,
ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

೧೫. ದಾಸಸಾಹಿತ್ಯ–ಒಂದು ಸೈದ್ಧಾಂತಿಕ ಅಧ್ಯಯನ (೧೯೯೪)
ಲೇ : ಡಾ। ಆರ್.ಜಿ.ಗುಡಿ
ಪ್ರ : ಶ್ರೀನಿಧಿ ಪ್ರಕಾಶನ, ವಿದ್ಯಾನಗರ, ಅಥಣಿ.

೧೬. ಅಲ್ಲಮ್ಮನ ವಚನ ಚಂದ್ರಿಕೆ (೧೯೬೦)
ಸಂ: ಡಾ। ಎಲ್.ಬಸವರಾಜು
ಪ್ರ: ನಳಿನೀ ಶಂಕರ ಪ್ರಕಾಶನ, ಮೈಸೂರು.

೧೭. ಸಂಶೋಧನ ಪಂಚದಶಿ (೧೯೭೪)
ಲೇ: ಭೀಮರಾವ್ ಚಿಟಗುಪ್ಪಿ
ಪ್ರ: ಉಷಾ ಸಾಹಿತ್ಯ ಮಾಲೆ, ಮೈಸೂರು.

೧೮. ಶ್ರೀ ಪುರಂದರದಾಸರ ಕೃತಿಗಳು (ಭಾಗ ೧) (೧೯೪೭)
ಸಂ: ಯಂ.ರಾಮರಾವ್
ಪ್ರ: ಸುಬೋಧ ಪ್ರಕಟನಾಲಯ ಬೆಂಗಳೂರು.

೧೯. ದಾಸ ಸಾಹಿತ್ಯ (೧೯೮೭) (ಕವಿಕಾವ್ಯ ಪರಂಪರೆ–೨೦)
ಸಂ: ಎನ್.ಕೆ.ಕುಲಕರ್ಣಿ, ಪ್ರೊ. ಎಸ್.ಕೆ.ರಾಮಚಂದ್ರರಾವ್,
ಪ್ರೊ.ಸಂಪದ್ಗಿರಿರಾವ್
ಪ್ರ: ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨೦. ಹರಿದಾಸರ ಭಕ್ತಿ ಸ್ವರೂಪ (೧೯೮೬)
ಲೇ: ಡಾ। ಟಿ.ಎನ್.ನಾಗರತ್ನ
ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

ಕನ್ನಡ ಸಾಹಿತ್ಯದ ಇತಿಹಾಸದಲ್ಲಿ
ಹರಿದಾಸ ಸಾಹಿತ್ಯ ಒಂದು ಪ್ರಮುಖ ಮಜಲು.
ಹರಿದಾಸರು ರಚಿಸಿರುವ ವಿಪುಲ ಕೀರ್ತನೆಗಳು
ಕರ್ನಾಟಕ ಸಾಂಸ್ಕೃತಿಕ ತವನಿಧಿಗಳಾಗಿವೆ.
ದಾಸ ಸಾಹಿತ್ಯದಲ್ಲಿ ಕಂಡುಬರುವ
ಭಾಷಿಕ ಹಾಗೂ ಸಾಹಿತ್ಯಕ ಸೊಬಗು,
ಆಧ್ಯಾತ್ಮಿಕ ಬೆಡಗು, ಸಂಗೀತದ ಮೆರುಗು ಅನನ್ಯ.
ದಾಸ ಸಾಹಿತ್ಯವು ಜ್ಞಾನ, ಮನೋಲ್ಲಾಸ
ಮತ್ತು ಜೀವ ಸಂಸ್ಕಾರಗಳ ತ್ರಿವೇಣಿ ಸಂಗಮ.
ಇಂಥ ದಾಸ ಸಾಹಿತ್ಯವನ್ನು
ಸಮಗ್ರವಾಗಿ ಸಂಗ್ರಹಿಸಿ, ಸಂಪಾದಿಸಿ,
ಬಹುಮಾಧ್ಯಮದಲ್ಲಿ ಹಾಗೂ ಸುಲಭ ಬೆಲೆಯಲ್ಲಿ
ಕನ್ನಡ ಜನತೆಗೆ ನೀಡುವ ಮಹತ್ವದ ಆಶಯವೇ
ಸಮಗ್ರ ದಾಸ ಸಾಹಿತ್ಯ ಯೋಜನೆ

ಕರ್ನಾಟಕ ಸರ್ಕಾರ
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು